# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

## *ಕೋರ್ಸ್ - 503*

## *ಪೂರ್ವಪ್ರಾಥಮಿಕ ಹಂತದ ಭಾಷೆಯ ಕಲಿಕೆ*

### ವಿಭಾಗ – 1

### ಭಾಷೆಯನ್ನು ಅರ್ಥಮಾಡಿಕೊಳ್ಳುವುದು


ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ

ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,
ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309

ಜಾಲತಾಣ : www.nios.ac.in

| ಪರಿಣಿತರ ಸಮಿತಿ | | |
|---|---|---|
| ಡಾ॥ ಸಿತಾಂಶು ಎಸ್.ಜೆನಾ<br>ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ<br>ಶ್ರೀ ಬಿ.ಕೆ. ತ್ರಿಪಾಠಿ<br>ಭಾ.ಆ.ಸೆ. ಪ್ರಮುಖ ಸಚಿವರು,<br>ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,<br>ಝಾರ್ಖಂಡ್ ಸರ್ಕಾರ, ರಾಂಚಿ<br>ಪ್ರೋ ಎ.ಕೆ. ಶರ್ಮಾ<br>ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ<br>ನವದೆಹಲಿ<br>ಪ್ರೋ.ಎಸ್.ವಿ.ಎಸ್.ಚೌಧರಿ<br>ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.<br>ನವದೆಹಲಿ<br>ಪ್ರೋ.ಸಿ.ಬಿ.ಶರ್ಮಾ<br>ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ<br>ಮುಕ್ತ ವಿಶ್ವವಿದ್ಯಾಲಯ, ನವದೆಹಲಿ<br>ಪ್ರೋ. ಎಸ್.ಸಿ. ಅಗರ್‌ಕರ್<br>ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ<br>ಕೇಂದ್ರ, ಮುಂಬಯಿ | ಪ್ರೋ.ಸಿ.ಎಸ್. ನಾಗರಾಜು<br>ಭೂತಪೂರ್ವಪ್ರಾಚಾರ್ಯರು<br>ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ದೊರೈಸ್ವಾಮಿ<br>ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು<br>ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ<br>ಪ್ರೊ. ಬಿ. ಫಾಲಚಂದ್ರ<br>ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,<br>ಹಾಗೂ ಭೋಧನಾ ವಿಭಾಗದ ವರಿಷ್ಟರು ಆರ್‌ಇಐ<br>(ಎನ್‌ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ಕೆ. ವಸಿಷ್ಠ<br>ಭೂತಪೂರ್ವ ಮುಖ್ಯಸ್ಥರು, ಡಿಇಇ,<br>ಎನ್‌ಸಿಇಜರ್‌ಟಿ, ನವದೆಹಲಿ<br>ಪ್ರೊ. ವಸುಧಾ ಕಾಮತ್<br>ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ<br>ವಿಶ್ವವಿದ್ಯಾಲಯ, ಮುಂಬಯಿ | ಡಾ. ಹೂಮ ಮಸೂದ್<br>ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ<br>ಪ್ರೊ॥ ಪವನ್ ಸುಧೀರ್<br>ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ<br>ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ<br>ಶ್ರೀ ಬಿನಯ ಪಟ್ನಾಯಕ್<br>ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,<br>ರಾಂಚಿ<br>ಡಾ. ಕುಲದೀಪ್ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,<br>ನೊಯಿಡಾ<br>ಪ್ರೋ. ಎಸ್.ಸಿ. ಪಾಂಡಾ<br>ವರಿಷ್ಠ ಸಮಾಲೋಚಕರು (ಶೈಕ್ಷಣಿಕ)<br>ಡಾ॥ ಕುಜನ್ ಬಲಾ<br>ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ. |

| ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು |
|---|
| ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ |

| ಪಠ್ಯಲೇಖರು | | |
|---|---|---|
| ಡಾ॥ ಮೊಹಿತ್ ಮೋಹನ್ ಮೊಹಂತಿ<br>ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ<br>ಒಡಿಶಾ<br>ಡಾ॥ ಪರಶುರಾಮ್ ರಾಯಸಿಂಗ್<br>ನಿವೃತ್ತ ರೀಡರ್ (ಶಿಕ್ಷಣ)<br>ಎನ್.ಡಿ.ಡ್ಲ್ಯೂ. ಅಧ್ಯಾಪಕ ಶಿಕ್ಷಣ<br>ಮಹಾವಿದ್ಯಾಲಯ, ಭುವನೇಶ್ವರ<br>ಶ್ರೀ ಸುದರ್ಶನ ಸಂತಾರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ<br>ಶ್ರೀ ತಪಸ್ ಕುಮಾರ್ ನಾಯಕ್<br>ವರಿಷ್ಟ ಅಧ್ಯಾಪಕರ ಶಿಕ್ಷಕರು<br>ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು<br>ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ<br>ಶ್ರೀಮತಿ. ಸುಚಪ್ರವಾ ಮೊಹಾಪಾತ್ರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ.ಟಿ. ಕಟಕ್ ನರಸಿಂಗಪುರ್ | ಡಾ॥ ಜೆ.ಸಿ. ನಂದಾ<br>ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ<br>ಮಹಾವಿದ್ಯಾಲಯ ಭುವನೇಶ್ವರ<br>ಶ್ರೀ ಕಾರ್ತಿಕೇಶ್ವರ ಜೆಹರಾ<br>ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇ.ಟಿ ಕೊರಾಪುಟ್ ಜೆಪುರ್<br>ಶ್ರೀಮತಿ. ಲಿಪಿಕಾ ಸಾಹು<br>ವರಿಸ್ಠ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ. ಟಿ. ನಯಾಘರ್ ರಜಸುನಖಾಲ<br>ಶ್ರೀ ಪೂರ್ಣಚಂದ್ರಬ್ರಹ್ಮ<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ<br>ಡಾ॥ ರಾಜೇಂದ್ರ ಕುಮಾರ ನಾಯಕ್<br>ಉಪನ್ಯಾಸಕರು ಶಿಕ್ಷಣ ವಿಭಾಗ<br>ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್ | ಶ್ರೀಮತಿ ಚಂದ್ರಿಕಾ ನಾಯಕ್<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇಟಿ. ನವಘರ್ ರಾಜಸುಂಬಾಲ<br>ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ<br>ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್<br>ಥೆಂಡಿಪಾಡ<br>ಶ್ರೀ ಪ್ರಶಾಂತಕುಮಾರ ರಥ್<br>ಪ್ರಾಂಶುಪಾಲರು ಡಿ.ಐ.ಇಟಿ. ಪುರಿ<br>ಡಾ॥ ದುರ್ಗಾಚರಣ ರಾಣಾ<br>ನಿವೃತ್ತರೀಡರ್ (ಶಿಕ್ಷಣ)<br>ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್<br>ಶ್ರೀ ಅನಂತ ಕಿಶೋರ ಸ್ವಾರ್ಯಿ<br>ಯೋಜನ ಪ್ರಬಂಧಕರು ಯುವ ಮತ್ತು<br>ಸಾಮಾಜಿಕ ಅಭಿವೃದ್ಧಿ<br>ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ |

| ವಿಷಯ ಸಂಪಾದಕರು | ಭಾಷಾ ಸಂಪಾದಕರು |
|---|---|
| ಡಾ॥ ಸುಶ್ಮಿತಾ ಮಿತ್ರ<br>ಭೂತಪೂರ್ವ ನಿರ್ದೇಶಕರು<br>ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ. | ಡಾ. ಎ.ಡಿ. ತಿವಾರಿ<br>ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ<br>ಎನ್‌ಸಿಇಆರ್‌ಟಿ ನವದೆಹಲಿ |

| ಕಾರ್ಯಕ್ರಮ ಸಂಯೋಜಕರು | | |
|---|---|---|
| ಡಾ॥ ಕುಲದೀಪ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ | ಪ್ರೋ॥ ಎಸ್.ಪಿ. ಪಾಂಡ<br>ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ | ಡಾ॥ ಕಂರ್ಚ್ ಬಾಲಾ<br>ಕಾರ್ಯಪಾಲಕ ಅಧಿಕಾರಿ (ಆಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ |
| **ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ** | **ಬೆರಳಚ್ಚು** | **ಕಛೇರಿ ಸಹಾಯಕರು** |
| ಶ್ರೀ. ಖ.ಎನ್. ಉಪ್ರೇತಿ.<br>ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.<br>ನೊಯಿಡಾ<br>ಶ್ರೀ ಧರ್ಮಾನಂದ ಜೋಶಿ<br>ಕಾರ್ಯಪಾಲಕ ಸಹಾಯಕರು, ಮುದ್ರಣ<br>ಎನ್.ಐ.ಓ.ಎಸ್. ನೊಯಿಡಾ | ಶಿವಂ ಗ್ರಾಫಿಕ್ಸ್<br>431, ರಿಶಿನಗರ್, ದೆಹಲಿ–34 | ಶ್ರೀಮತಿ. ಸುಷ್ಮಾ<br>ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,<br>ಎನ್.ಐ.ಓ.ಎಸ್. ನೊಯಿಡಾ. |

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾದ್ಯಮಿಕ ಮತ್ತು ಉಚ್ಚಮಾದ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ-ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

# ವಿಭಾಗ – 1

# ಭಾಷೆಯನ್ನು ಅರ್ಥಮಾಡಿಕೊಳ್ಳುವುದು

**ವಿಭಾಗ ಪಠ್ಯಭಾಗ**

*ಪಠ್ಯಭಾಗ 1 : ಭಾಷೆ ಎಂದರೇನು?*

*ಪಠ್ಯಭಾಗ 2 : ಭಾರತೀಯ ಭಾಷೆಗಳು*

*ಪಠ್ಯಭಾಗ 3 : ಭಾಷಾ ಕಲಿಕೆ ಮತ್ತು ಬೋಧನೆ*

# ವಿಭಾಗ ಪರಿಚಯ

ಭಾಷೆಯ ವಿವಿಧ ಅಂಶಗಳ ಬಗ್ಗೆ ನಿಮಗೆ ತಿಳುವಳಿಕೆ ನೀಡಲು ಈ ಕೋರ್ಸ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಈ ಕೋರ್ಸ್ ಸಂಪೂರ್ಣಗೊಳಿಸಿದ ನಂತರ ಭಾಷೆಯ ಬಗ್ಗೆ ನಿಮ್ಮ ಸೂಕ್ಷ್ಮತೆ ಹೆಚ್ಚುವ್ಯದೆಂದು ನಾವು ಭರವಸೆಯನ್ನು ಹೊಂದಿದ್ದೇವೆ. ನೀವು ಈ ಮೂಲಕ ಇನ್ನು ಹೆಚ್ಚು ಸೂಕ್ಷ್ಮತೆಯುಳ್ಳ ಕಲಿಕಾರ್ಥಿಗಳಾಗುವಿರಿ ಮತ್ತು ಭಾಷೆಯ ತರಗತಿಗಳನ್ನು ಹೆಚ್ಚು ಆಹ್ಲಾದಕರ ಮತ್ತು ದಕ್ಷತೆಯಿಂದ ಭಾಷೆಯ ತರಗತಿಗಳನ್ನು ಬೋಧನೆ ಮಾಡುವಿರಿ. ಘಟಕ – 1 ರಲ್ಲಿ ಭಾಷೆಯ ಸ್ವಭಾವ, ಭಾಷೆಯ ಬಳಕೆ ಮತ್ತು ಭಾಷೆಗೆ ಸಂಬಂಧಿಸಿದ ಮನೋ ಸಾಮಾಜಿಕ ಅಂಶಗಳನ್ನು ಒಳಗೊಂಡಿದೆ. ಘಟಕ – 2 ರಲ್ಲಿ ನಾವು ನಿಮಗೆ ಭಾರತದ ಬಹುಭಾಷೆಯ ಗುಣಲಕ್ಷಣ ಮತ್ತು ಒಂದು ರಾಷ್ಟ್ರ ಹಲವಾರು ಭಾಷೆಗಳನ್ನು ಹೊಂದಿದರೂ ಸಹ ಒಚಿದೇ ಭಾಷಾ ಪ್ರದೇಶವಾಗಲು ಹೀಗೆ ಸಾಧ್ಯ ಎಂಬುದನ್ನು ಚ್ಚರ್ಚಿಸುತ್ತೇವೆ. ಘಟಕ – 3 ಭಾಷಾ ಕಲಿಕೆ ಮತ್ತು ಭಾಷಾ ಬೋಧನೆಯ ವಿಧಾನಗಳಿಗೆ ಸಂಬಂಧಿಸಿದೆ. ಪ್ರತಿ ಮಗುವೂ ಕೂಡ ಭಾಷಾ ಕಲಿಕೆಗೆ ಸಂಬಂಧಿಸಿದ ಅನಂತ ಸಾಮರ್ಥ್ಯಗಳನ್ನು ಹುಟ್ಟುವಾಗಲೇ ಪಡೆದಿರುತ್ತದೆ. 3 ರಿಂದ 4 ವರ್ಷ ವಾಗುವಷ್ಟರಲ್ಲಿ, ಅವರು ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಪ್ರಾಂಭಿಸುತ್ತಾರೆ. ಕೆಲವೇ ಸಮಯದಲ್ಲಿ ಹೊಸ ಹೊಸ ವಾಕ್ಯಗಳನ್ನು ಅರ್ಥೈಸಿಕೊಳ್ಳಲು ಮತ್ತು ರಚಿಸಲು ಪ್ರಾಂಭಿಸುವವರ ಮೂಲಕ ಭಾಷೆಯ ರಚನೆಯನ್ನು ಅವರು ಅಂತರ್ಗತಗೊಳಿಸಿ ಕೊಂಡಿರುವುದು ನಮಗೆ ಗೋಚರವಾಗುತ್ತದೆ. ಈ ರೀತಿ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ಕ್ಲಿಷ್ಟಕರ ವ್ಯಾಕರಣದ ರಚನೆಯನ್ನು ಅರ್ಥೈಸಿಕೊಳ್ಳುವುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಇವರೇನಾದರೂ ಸಂಪೂರ್ಣ ವ್ಯಾಕರಣವನ್ನು ತಲೆಯಲ್ಲಿ ಹೊಂದಿಯೇ ಹುಟ್ಟಿರುತ್ತಾರಯೇ? ಇದನ್ನು ವಿವರವಾಗಿ ಚರ್ಚಿಸೋಣ ಭಾಷಾ ಬೋಧನೆಯಲ್ಲಿ ವ್ಯಾಕರಣ ಬೋಧನೆಯ ಪಾತ್ರವೇನು ಎಂಬುದನ್ನು ನಾವು ಚರ್ಚಿಸೋಣ. ಭಾಷಾ ಬೋಧನೆಯ ವಿವಿಧ ವಿಧಾನಗಳಾದ ವ್ಯಾಕರಣ ಅನುವಾದ ವಿಧಾನ, ನೇರ ವಿಧಾನ, ಶ್ರವಣ–ಭಾಷಾ ವಿಧಾನ, ಸಂವಹನ ವಿಧಾನ ಮುಂತಾದವುಗಳ ಅನುಕೂಲ ಮತ್ತು ಅನಾನುಕೂಲಗಳನ್ನು ತಿಳಿಯೋಂ. ಘಟಕ – 4 ರಲ್ಲಿ ಶ್ರವಣ–ಭಾಷಾ ವಿಧಾನದ ತಂತ್ರಗಳನ್ನು ವಿವರಿಸಲಾಗಿದೆ.

# ಪರಿವಿಡಿ


| ಕ್ರ.ಸಂ. | ಪಠ್ಯಭಾಗ | ಪುಟಸಂಖ್ಯೆ |
|---|---|---|
| 1 | ಪಠ್ಯಭಾಗ–1: ಭಾಷೆ ಎಂದರೇನು? | 01 |
| 2 | ಪಠ್ಯಭಾಗ–2: ಭಾರತೀಯ ಭಾಷೆಗಳು | 17 |
| 3 | ಪಠ್ಯಭಾಗ–3: ಭಾಷಾ ಕಲಿಕೆ ಮತ್ತು ಬೋಧನೆ | 37 |

# ಪಠ್ಯಭಾಗ 1 ಭಾಷೆ ಎಂದರೇನು?

Notes

## ಸ್ವರೂಪ

*1.0 ಪೀಠಿಕೆ*

*1.1 ಕಲಿಯುವ ಉದ್ದೇಶಗಳು*

*1.2 ಪ್ರಯೋಜನ*

*1.3 ಭಾಷೆ ಮತ್ತು ವ್ಯಾಕರಣ*

*1.3.1 ಭಾಷಾ ಧ್ವನಿ ವ್ಯವಸ್ಥೆ*

*1.3.2 ಶಬ್ದ ರಚನೆ*

*1.3.3 ವಾಕ್ಯ ರಚನೆ*

*1.3.4 ಬೋಧನಾ ಸ್ವರೂಪ*

*1.4 ಉತ್ತಮ ಭಾಷೆ*

*1.5 ಭಾಷೆಯ ಮನೋವೈಜ್ಞಾನಿಕ ಅಂಶ*

*1.6 ಭಾಷೆಯ ಸಾಮಾಜಿಕ ಅಂಶ*

*1.7 ಭಾಷೆ ಮತ್ತು ಸಾಹಿತ್ಯ*

*1.8 ಭಾಷಾ ಪ್ರಾವೀಣ್ಯತೆ*

*1.9 ಕ್ರೋಢೀಕರಣ*

*1.10 ಹೆಚ್ಚಿನ ಓದು ಮತ್ತು ಉಲ್ಲೇಖಗಳಿಗೆ ಸಲಹೆ*

*1.11 ಘಟಕದ ಕೊನೆಯ ಅಭ್ಯಾಸಗಳು*

## 1.0 ಪೀಠಿಕೆ

ಈ ಘಟಕದಲ್ಲಿ ಭಾಷೆ ಎಂದರೇನು? ಎಂಬುದನ್ನು ನಾವು ವಿವರಿಸುತ್ತೇವೆ. ಭಾಷೆಯ ವ್ಯಾಖ್ಯೆ ಮತ್ತು ಅನುಕೂಲತೆಗಳು ಏನು? ಭಾಷೆಯಲ್ಲಿ ವ್ಯಾಕರಣದ ಪಾತ್ರ ಏನು? ಧ್ವನಿ ವ್ಯವಸ್ಥೆಯನ್ನು ಹೇಗೆ ನಾವು ಪಡೆಯುತ್ತೇವೆ? ಪದರಚನೆ, ವಾಕ್ಯರಚನೆ ಮತ್ತು ಮಾಹಿತಿಗಳ ಹಂಚಿಕೆ ಭಾಷೆಯಲ್ಲಿ ಹೇಗೆ ಹಾಗುತ್ತದೆ? ಭಾಷೆಯ ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಅಂಶಗಳನ್ನು ನಾವು ಚರ್ಚಿಸುತ್ತೇವೆ. ಭಾಷಾ ಪ್ರಾವೀಣ್ಯತೆಯ ಮಹತ್ವವೇನು? ಮತ್ತು ವೈವಿಧ್ಯಮಯ ಭಾಷಾ ಮೌಲ್ಯಮಾಪನ ಮತ್ತು ಮೌಲ್ಯಾಂಕನ ತಂತ್ರಗಳು ಹೇಗೆ ಕಾರ್ಯನಿರ್ವಹಿಸುತ್ತವೆ? ಎಂಬುದನ್ನು ಸ್ಥೂಲವಾಗಿ ಚರ್ಚಿಸುತ್ತೇವೆ. ಅಲ್ಲದೆ ಭಾಷೆ ಮತ್ತು ಸಾಹಿತ್ಯಗಳ ಸಂಬಂಧವನ್ನೂ ನಾವು ಚರ್ಚಿಸುತ್ತೇವೆ.

## 1.1 ಕಲಿಕಾ ಉದ್ದೇಶಗಳು

ಈ ಘಟಕವು ಭಾಷಾ ಸ್ವರೂಪ ಮತ್ತು ಗುಣಗಳ ಬಗೆಗೆ ವಿಸ್ತಾರವಾಗಿ ಚರ್ಚಿಸುತ್ತದೆ. ಈ ಘಟಕದ ಓದು ಮುಗಿದ ಬಳಿಕ, ಈ ಕೆಳಕಂಡ ವಿಷಯಗಳ ಬಗ್ಗೆ ಪ್ರತಿಕ್ರಿಯಿಸಲು ನೀವು ಶಕ್ತರಾಗಿರುತ್ತೀರಿ.





- ಭಾಷೆ ಒಂದು ವಿಸ್ತುವಿಷಯವಾಗಿ
- ಭಾಷೆ ಮತ್ತು ಸಮಾಜದ ಸಂಬಂಧ.
- ಮಾನವನ ಸಹಜ ಭಾಷಾ ಸಾಮರ್ಥ್ಯ
- ಭಾಷಾ ಸ್ವರೂಪ ಮತ್ತು ಗುಣ
- ಭಾಷೆಯ ಉಪಯೋಗ ಹೇಗೆ?
- ಭಾಷಾ ಕಲಿಕಾ ವಿಧಾನದ ತಂತ್ರಗಳು
- ಭಾಷಾ ಪ್ರಾವೀಣ್ಯತೆಯ ತತ್ವ
- ಔಪಚಾರಿಕ ಮತ್ತು ಅನೌಪಚಾರಿಕ ಸಂವಹನದಲ್ಲಿನ ವ್ಯತ್ಯಾಸಗಳು

## 1.2 ಭಾಷಾ ಮಹತ್ವ ಮತ್ತು ಪ್ರಯೋಜನ

ಭಾಷೆಯನ್ನು ಎರಡು ರೂಪಗಳಲ್ಲಿ ಗ್ರಹಿಸಬಹುದು. ಸಾಮಾನ್ಯ ಮನುಷ್ಯರು ಭಾಷೆಯನ್ನು ಕೇವಲ ಒಂದು ಸಂಪರ್ಕ ಸಾಧನ ಎಂದು ಭಾವಿಸುತ್ತಾರೆ. ಭಾಷಾ ಶಾಸ್ತ್ರಜ್ಞರು ಭಾಷೆಯನ್ನು ವ್ಯಾಕರಣ ಮತ್ತು ಅರ್ಥಗಳ ಮೂಲಕ ಗ್ರಹಿಸುತ್ತಾರೆ. ಈ ಎರಡು ರೂಪಗಳ ಭಾಷಾ ಗ್ರಹಿಕೆಯು ಭಾಷಾ ಬಹುಮುಖತೆ ಮತ್ತು ಪ್ರಯೋಗವನ್ನು ನಿರ್ದೇಶಿಸುತ್ತದೆ. ಈ ದೃಷ್ಟಿಕೋನಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ, ಒಂದು ಭಾಷೆಯ ಮಾತುಗಾರನಿಗಿಂತ ಆ ಭಾಷೆಯ ಶಬ್ದಕೋಶ ಮತ್ತು ವ್ಯಾಕರಣಗಳ ಅಸ್ತಿತ್ವ ಮಹತ್ವವೆನಿಸುತ್ತದೆ. ಒಟ್ಟಿನಲ್ಲಿ ಶ್ರೀಸಾಮಾನ್ಯ ಮತ್ತು ಭಾಷಾತಜ್ಞ ಯಾರೇ ಇರಲಿ, ಈ ಅಂಶವನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಅದೇನೆಂದರೆ, ಮಾತುಗಾರರಿಲ್ಲದೇ ಯಾವುದೇ ಭಾಷೆ ಇಲ್ಲ ಎಂಬುದು. ಭಾಷಿಗರಿಲ್ಲದೆ ಶಬ್ದಕೋಶ ಮತ್ತು ವ್ಯಾಕರಣ ನಿರ್ಮಿತಿ ಸಾಧ್ಯವಿಲ್ಲ. ಭಾಷಾತಜ್ಞರೊಡನೆ ಚರ್ಚಿಸಲೇ ಆಗಲೀ ಹಾಗೂ ಶಬ್ದಕೋಶ ಮತ್ತು ವ್ಯಾಕರಣಗಳನ್ನು ರಚಿಸಲೇ ಆಗಲೀ ಭಾಷಿಗರು ಅಗತ್ಯ. ಮಾತನಾಡುವ ವರ್ಗವೇ ಭಾಷೆಯ ಅತ್ಯಗತ್ಯ ಅಂಗ ಮತ್ತು ಅದರ ಪ್ರಯೋಗ. ಒಂದು ಭಾಷೆಗೆ ಉತ್ತಮ ರೂಪವನ್ನು ಆ ಭಾಷೆಯನ್ನು ಪ್ರಯೋಗಿಸುವ ಮೂಲಕ ನೀಡಬಲ್ಲ ಜನರಿಂದ ಮಾತನಾಡುವ ವರ್ಗ ರೂಪುಗೊಳ್ಳುತ್ತದೆ. ಮನವನ ಬಳವಣಿಗೆಯ ಹಂತ ಹೇಗೆ ಅನುಕ್ರಮವಾಗಿ ನಡೆಯಿತೋ ಹಾಗೇ ಒಂದು ನಿರ್ದಿಷ್ಟ ಭಾಷೆಯು ಅನೇಕ ಹಂತಗಳನ್ನು ಹಾದು ಅನಂತರ ರೂಪುಗೊಳ್ಳುತ್ತದೆ. ಭಾಷೆಯ ಉಗಮದ ಮುನ್ನ ನಿರ್ದಿಷ್ಟ ಸಮಾಜ, ಭಾಷಾವರ್ಗ, ಶಬ್ದಕೋಶ, ವ್ಯಾಕರಣ ಯಾವುದರ ಅಸ್ತಿತ್ವಕ್ಕೂ ಮೌಲ್ಯವೇ ಇರುವುದಿಲ್ಲ. ಹೀಗಾಗಿ ಭಾಷೆಯನ್ನು ಸಮರ್ಪಕವಾಗಿ ಅರ್ಥೈಸಬೇಕಾದರೆ, ಭಾಷೆಯ ವಿಕಸನದೊಡನೆ ಅದರ ವಿವಿಧ ಅಂಶಗಳ ಬಗೆಗೆ ತಿಳಿದಿರಬೇಕಾಗುತ್ತದೆ.

ಮೊದಲಿಗೆ, ಭಾಷೆಯು ವ್ಯಕ್ತಿಯ ಗುರುತಿಗೆ ಸಂಬಂಧಿಸಿದುದು. ಒಬ್ಬ ವ್ಯಕ್ತಿ ತಾನು ಗೊಂಡಿ ಭಾಷೆಯನ್ನು ಮಾತನಾಡುತ್ತೇನೆ ಎಂದಾಗ ಆತ ಕೇವಲ ಭಾಷೆಯನ್ನು ಮಾತನಾಡುವುದಿಲ್ಲ. ಅದರೊಟ್ಟಿಗೆ ತನ್ನ ಸಮಾಜ, ಆಚರಣೆ, ಪದ್ಧತಿಗಳ ಬಗೆಗೂ ಆತ ತಿಳಿಸುತ್ತಾನೆ. ಆತ ತಾನಿರುವ ಜನರ ವರ್ಗ ಎಂಥದು ಎಂಬುದನ್ನು ಭಾಷೆಯ ಮೂಲಕ ಸೂಚಿಸುತ್ತಾನೆ. ಎರಡನೆಯದಾಗಿ ಒಂದು ಭಾಷೆಯನ್ನು ಮಾತನಾಡುವವನು ತನ್ನ ಬದುಕಿನ ಎಲ್ಲ ಅಂಶಗಳನ್ನೂ ತನ್ನ ಮಾತಿನಲ್ಲಿ ಭಾಷೆಯಲ್ಲಿ ಅಳವಡಿಸುತ್ತಾನೆ. ಯಾರು ಗೌರವಕ್ಕೆ ಅರ್ಹರು, ಯಾರು ಪ್ರೀತಿಗೆ ಅರ್ಹರು, ಯಾರನ್ನು ದ್ವೇಷಿಸಬೇಕು, ಯಾರು ಸಣ್ಣವರು ಇತ್ಯಾದಿ ಎಲ್ಲ ಮಾಹಿತಿಗಳು ಅವರಾಡುವ ಮಾತುಗಳಿಂದಲೇ ವ್ಯಕ್ತವಾಗುತ್ತದೆ. ಭಾಷೆಯು ಸಮಾಜದ ಜೊತೆಗೆ ಒಂದು ವಿಶಿಷ್ಟ ಸಂಬಂಧ ಹೊಂದಿದೆ. ಭಾಷೆಯು ಅಂತಸ್ತು, ಮೇಲ್ದರ್ಜೆಯನ್ನು ನಿರ್ವಹಿಸುವ ಮಾಧ್ಯಮವಾಗಿದೆ.

ಭಾಷೆಯ ಮನೋವೈಜ್ಞಾನಿಕ ಅಂಶವೂ ಸಹ ಭಾಷೆಯಲ್ಲಿ ಬಹುಮುಖ್ಯವಾದುದು. ವಿಶ್ವದ ಯಾವುದೇ ಭಾಗದಲ್ಲಿರುವ ಮಕ್ಕಳು ಸಹ ಹಿರಿಯರ ಹಾಗೆ ಬಹಳ ಗತ್ತಿನಿಂದ ಮಾತನಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ ಎಂಬುದು ನಿಜಕ್ಕೂ ಆಶ್ಚರ್ಯಕರ ಅಂಶ.

Notes

## ಭಾಷೆ ಎಂದರೇನು?

ಒಂದು ಭಾಷೆಯ ಸಮರ್ಪಕ ಪದಗಳನ್ನು ಸರಿಯಾದ ವ್ಯಾಕರಣ ಕ್ರಮಗಳಿಂದ ಬಳಸುವುದನ್ನು ಕೇವಲ ಒಂದು ಮಗು ನಾಲ್ಕು ವರ್ಷಕ್ಕೆ ಬರುವಷ್ಟರಲ್ಲಿ ಕಲಿತುಕೊಳ್ಳಬಹುದು. ಆ ನಾಲ್ಕು ವರ್ಷದ ಮಗುವಿಗೆ ಪ್ರತಿದಿನ ಕಥೆ ಹೇಳುವುದನ್ನು ಮತ್ತು ಆ ಮಗುವಿನಿಂದ ಅದೇ ಕಥೆಯನ್ನು ಕೇಳುವುದಕ್ಕೆ ನಾವೇನೂ ಕಷ್ಟಪಡಬೇಕಾಗಿಲ್ಲ.

ಭಾಷೆಯ ಮತ್ತೊಂದು ಮುಖ್ಯ ಅಂಶವಿದೆ. ಭಾಷೆಯು ಅಂತರವನ್ನು ನಿವಾರಿಸುವ ಸಾಧನ. ಸಾವಿರಾರು ಮೈಲುಗಳ ಆಚೆ ಇರುವ ನಿಮ್ಮ ಸ್ನೇಹಿತ ಫೋನಿನಲ್ಲಿ ಮಾತನಾಡುತ್ತಾ ನಿಮ್ಮ ಮೇಲೆ ಕೋಪಗೊಳ್ಳಬಹುದು. ಆದರೆ ನೀವು ಅದೇ ಫೋನಿನ ಮುಖಾಂತರ ನಿಮ್ಮ ಮಾತುಗಳಿಂದ ಆತನ ಕೋಪ ಕಡಿಮೆ ಮಾಡಬಹುದು. ಇದು ಹೇಗಾಗುತ್ತದೆ? ಕೇವಲ ಸೂಕ್ತ ಭಾಷೆಯನ್ನು ಬಳಸುವುದರಿಂದ.

ಭಾಷೆಯನ್ನು ಮಕ್ಕಳು ತಮ್ಮ ನೆರೆಯವರು, ಗೆಳೆಯರು, ಕುಟುಂಬದವರು ಹಾಗೂ ಸುತ್ತಣ ಪರಿಸರದ ಮೂಲಕವೂ ಕಲಿಯುವಂಥದ್ದು ಸರ್ವೆಸಾಮಾನ್ಯ. ಭಾಷಾ ಕಲಿಕೆಯ ಸಾಮರ್ಥ್ಯ ಇದೆ ಎಂದರೆ ಕೇವಲ ಒಂದೇ ಭಾಷೆಯ ಕಲಿಕೆಗಲ್ಲ ಪ್ರತಿಯೊಬ್ಬರೂ ಹಲವು ಅಂಶಗಳಲ್ಲಿ, ಹಲವು ಹಂತಗಳಲ್ಲಿ ಅನೇಕ ಭಾಷೆಗಳ ಕಲಿಕೆ ಸಾಧ್ಯ. ನಿಜಕ್ಕೂ ಬಹುಭಾಷಿಕತೆಯು ಮಾನವನ ಸಂರಚನೆಯಲ್ಲಿದೆ.

ಭಾಷೆಯ ಸ್ವರೂಪ ಎಂಬುದು ನಾವು ತಿಳಿಯಬೇಕಾದ ಮತ್ತೊಂದು ಮಹತ್ತರ ಅಂಶ. ಈ ಬಗೆಗೆ ಮುಂದಿನ ಘಟಕದಲ್ಲಿ ಚರ್ಚಿಸೋಣ. ಒಟ್ಟಾರೆ ಭಾಷಾ ತತ್ವವೇನೆಂದರೆ ಪ್ರತಿ ಭಾಷೆಯು ಕೆಲವು ಮುಖ್ಯ ಗುಣಲಕ್ಷಣಗಳನ್ನು, ಧ್ವನಿ, ಶಬ್ದ, ವ್ಯಾಕರಣ ಮತ್ತು ಪ್ರಯೋಗಗಳ ಹಂತಗಳಲ್ಲಿ ಹೊಂದಿರುತ್ತದೆ. ನಾವು ಸುಮ್ಮನೆ ಭಾಷೆಯ ಧ್ವನಿಗಳನ್ನು ನಮಗೆ ಇಷ್ಟಬಂದಂತೆ ಪ್ರಯೋಗಿಸಲು ಸಾಧ್ಯವಿಲ್ಲ. ಪ್ರತಿ ಭಾಷೆಯೂ ನಿರ್ದಿಷ್ಟ ಕ್ರಮಗಳನ್ನು ಬಹಳ ಕಟ್ಟುನಿಟ್ಟಾಗಿ ಹೊಂದಿರುತ್ತದೆ ಒಂದು ಭಾಷೆಯು ಹೊಂದಿರುವ ಸಂರಚನೆಗೆ ವಿರುದ್ಧವಾದ ವ್ಯಾಕರಣಾಂಶಗಳನ್ನು ಹೇರಲು ಸಾಧ್ಯವಿಲ್ಲ. ಭಾಷೆಯಲ್ಲಿನ ವಾಕ್ಯಗಳನ್ನು ಮನಬಂದಂತೆ ಕ್ರಮ ಬದಲಿಸಿ ಹೇಳುವ ಹಾಗೂ ಇಲ್ಲ. ಏಕೆಂದರೆ, ಭಾಷಾರಚನೆ, ಸಂಭಾಷಣಾ ವಿವರಗಳು ಅರ್ಥವನಿಸಬೇಕಾದರೆ ಅಲ್ಲಿ ಶಿಸ್ತು ಅಗತ್ಯ.

ಇದರ ಜೊತೆಗೆ ಭಾಷೆಯ ಮತ್ತೊಂದು ಗುಣ ಏನೆಂದರೆ, ಅದು ಸದಾ ಬದಲಾವಣೆಯನ್ನು ಬಯಸುತ್ತದೆ. ಕೆಲವೊಮ್ಮೆ ಮಕ್ಕಳ ಭಾಷೆಯನ್ನೇ ನಾವೂ ಆಡುತ್ತಿದ್ದೇವೆ ಎಂದು ತಂದೆ–ತಾಯಿಗಳಿಗೆ ಅನಿಸಬಹುದು. ಆದರೆ ಮೊಮ್ಮಕ್ಕಳ ಭಾಷೆಗೂ ಅಜ್ಜಿ–ತಾತಂದಿರ ಭಾಷೆಗೂ ಇರುವುದ ಅಷ್ಟೇ ಸತ್ಯ.

### ನಿಮ್ಮ ಪ್ರಗತಿ–1 ನ್ನು ಪರೀಕ್ಷಿಸಿ

*1. ಭಾಷಾತಜ್ಞರಿಗೆ ಬಹುಮುಖ್ಯವಾದದ್ದೇನು?*

*ಅ) ಪದಗಳು ಮತ್ತು ವಾಕ್ಯಗಳು.* *ಆ) ಧ್ವನಿವ್ಯವಸ್ಥೆ ಮತ್ತು ವಾಕ್ಯಗಳು*

*ಇ) ಶಬ್ದಕೋಶ ಮತ್ತು ವ್ಯಾಕರಣ* *ಈ) ಧ್ವನಿವ್ಯವಸ್ಥೆ & ವ್ಯಾಕರಣ*

*2. ಹೇಗೆ ಪರಿಸರವು ಮಕ್ಕಳಿಗೆ ಭಾಷೆಯನ್ನು ಕಲಿಯಲು ಸಹಕರಿಸುತ್ತದೆ?*

..........................................................................................................................

..........................................................................................................................

..........................................................................................................................

*3. ಭಾಷೆಯು ಒಬ್ಬ ವ್ಯಕ್ತಿಯನ್ನು ಗುರುತಿಸಲು ನೆರವಾಗುವ ಸಾಧನ ಹೇಗೆ? ವಿವರಿಸಿ.*

..........................................................................................................................

..........................................................................................................................

..........................................................................................................................

Notes

## 1.3. ಭಾಷೆ ಮತ್ತು ವ್ಯಾಕರಣ

ಜನರು ಮಾತನಾಡುವ ಭಾಷೆಯಲ್ಲಿ ಆಗಾಗ ಭಿನ್ನತೆಗಳು ಇರುವುದನ್ನು ಕಾಣಬಹುದು. ಸಾಮಾನ್ಯವಾಗಿ ನಿಮ್ಮ ಭಾಷೆಯನ್ನು ಮಾತನಾಡುವಾಗ ನೀವು ತಪ್ಪು ಮಾಡುವುದೇ ಇಲ್ಲ. ಹಾಗೆಯೇ ಎಂದಾದರೂ ತಪ್ಪು ಮಾಡಿದಲ್ಲಿ ಅದನ್ನು ತಕ್ಷಣವೇ ತಿದ್ದಿಕೊಳ್ಳುವಿರಿ. ಭಾಷಾ ಅಶುದ್ಧಿ ಎನ್ನುವುದು ಯಾವಾಗಲೂ ನಾವು ಇತರ ಭಾಷೆಗಳನ್ನು ಬಳಸಿದಾಗ ಕಾಣಬಹುದು. ಇದು ಕೆಲವೊಮ್ಮೆ ನಾವು ಭಾಷಾಕಲಿಕೆಯ ಸಂದರ್ಭದಲ್ಲೂ ಕಾಣಬಹುದು. ಹುಟ್ಟಿದ ಮಕ್ಕಳು ತಮ್ಮ ಪರಿಸರದಲ್ಲಿ ಅನೇಕ ಭಾಷೆಗಳನ್ನು ಗ್ರಹಿಸಬಹುದು. ಆದರೆ ಅವುಗಳಲ್ಲಿಯೇ ಸ್ವಲ್ಪ ಉತ್ಕೃಷ್ಟವಾದ ಭಾಷೆಯ ಕಲಿಕೆ ಸಂದರ್ಭದಲ್ಲಿ ತೊಡಕುಂಟಾಗಬಹುದು. ( ಈ ವಿಷಯದ ಬಗ್ಗೆ ಅನಂತರ ಚರ್ಚಿಸೋಣ).

ಭಾಷೆಯಾಗಲಿ, ಉಪಭಾಷೆಯಾಗಲಿ ತನ್ನದೇ ಆದ ಒಂದು ವ್ಯಾಕರಣವನ್ನು ಹೊಂದಿರುತ್ತದೆ. ಆ ಭಾಷೆಯದೇ ಆದ ಧ್ವನಿವ್ಯವಸ್ಥೆ, ವ್ಯಾಕರಣ ನಿಯಮಗಳು ಮತ್ತು ಎಲ್ಲ ಹಂತದ ಭಾಷಾ ಸಂರಚನೆ ಸ್ಪಷ್ಟವಾಗಿರುತ್ತದೆ. ಇವುಗಳನ್ನು ಉದಾಹರಣೆಯ ಸಹಿತವಾಗಿ ಅರ್ಥಮಾಡಿಕೊಳ್ಳಬಹುದು.

### 1.3.1 ಧ್ವನಿವ್ಯವಸ್ಥೆಯ ಸ್ವರೂಪ

ಪ್ರತಿಯೊಂದು ಭಾಷೆಯೂ ತನ್ನದೇ ಆದ ಧ್ವನಿ ವ್ಯವಸ್ಥೆಯನ್ನು ಹೊಂದಿದೆ. ಆದರೆ ಈ ಧ್ವನಿವ್ಯವಸ್ಥೆಯು ಪ್ರತಿಭಾಷೆಯ ಒಂದು ಸೀಮಿತ ವ್ಯವಸ್ಥೆಯಾಗಿದ್ದು ವಿಶ್ವದ ಧ್ವನಿ ವ್ಯವಸ್ಥೆಯಲ್ಲಿ ಸೀಮಿತತೆಯನ್ನು ಹೊಂದಿರುತ್ತದೆ. ಉದಾಹರಣೆಗೆ, ಪ್ರತಿ ಭಾಷೆಯೂ ಸ್ವರ ಮತ್ತು ವ್ಯಂಜನಗಳನ್ನು ಹೊಂದಿದೆ. ಅವುಗಳ ಸಂಖ್ಯೆ ಹೆಚ್ಚಿರಬಹುದು ಅಥವಾ ಕಡಿಮೆ ಇರಬಹುದು. 3 ಸ್ವರಗಳಿಗಿಂತ ಕಡಿಮೆ ಸ್ವರಗಳಿರುವ ಭಾಷೆಗಳು ಕೆಲವೇ ಕೆಲವು. ಕೆಲವು ಭಾಷೆಗಳಲ್ಲಿ 20 ಸ್ವರಗಳಿವೆ. ವ್ಯಂಜನಗಳು 8 ರಿಂದ 10 ಅಥವಾ 40 ರಿಂದ 50ರ ಸಂಖ್ಯೆಯಲ್ಲಿ ಇರಬಹುದು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಭಿನ್ನತೆಗಳು ಹೀಗಿವೆ:

| | *ಸ್ವರಗಳು* | *ವ್ಯಂಜನಗಳು* | *ಒಟ್ಟು* |
|---|---|---|---|
| ಇಂಗ್ಲಿಷ್ | 20 | 24 | 44 |
| ಹಿಂದಿ | 10 | 33 | 43 |

ಈ ಧ್ವನಿಗಳು ವರ್ಣಮಾಲೆಯ ವ್ಯವಸ್ಥೆಯಲ್ಲಿ ಸೇರಿಸಲಾಗಿಲ್ಲ. ಇವು ಇಂಗ್ಲಿಷ್ ಮತ್ತು ಹಿಂದಿಯ ವ್ಯವಹರಿಸುವ ಧ್ವನಿಗಳು. ಇವು ನಿರ್ದಿಷ್ಟ ಮಹತ್ತ್ವವನ್ನು ಭಾಷೆಯಲ್ಲಿ ಹೊಂದಿದ್ದರೂ ಭಾಷೆಯಲ್ಲಿನ ಅರ್ಥಗಳನ್ನು ಬದಲಿಸಬಲ್ಲ ಅರ್ಥರಹಿತ ಭಾಷಾ ಧ್ವನಿಗಳಾಗಿವೆ. ಉದಾಹರಣೆಗೆ,

| | | |
|---|---|---|
| ಇಂಗ್ಲಿಷ್ | kil | ‘kill’ |
| | pil | ‘pill’ |
| ಹಿಂದಿ | kal | ‘tomorrow’ |
| | pal | ‘moment’ |

ಈ ಉದಾಹರಣೆಗಳು ಈ ಎರಡೂ ಭಾಷೆಗಳಲ್ಲಿ ಠಿ ಮತ್ತು ಏ ಪಡೆದಿರುವ ಮಹತ್ತ್ವವನ್ನು ತಿಳಿಸುತ್ತವೆ.

ಆದರೆ ನಾವು ಈ ಎರಡು ಭಾಷೆಗಳ 43/44 ಧ್ವನಿಗಳನ್ನು ಸಮಾನವಾದವು ಎನ್ನಲಾದೀತೆ? ಈ ಎರಡು ಭಾಷೆಗಳ ಧ್ವನಿಗಳು ಒಂದೇ ಬಗೆಯಲ್ಲಿ ಒಂದರಂತೆ ಇನ್ನೊಂದು ಇದೆಯೇ? ಒಂದು ಪ್ರದೇಶದ ಭಾಷಿಗ ಅಥವಾ ಕಲಿಯುವವ ತನ್ನ ಭಾಷೆಯ ವರ್ಣಮಾಲೆಯನ್ನು ಒಂದು ನಿರ್ದಿಷ್ಟ ಗತಿಯಲ್ಲಿ ತನ್ನ 4 ಅಥವಾ 5 ವಯಸ್ಸಿನಲ್ಲಿಯೇ ಕಲಿಯುವನೇ?

## ಭಾಷೆ ಎಂದರೇನು?

ನಾವು ಹಿಂದಿ ಭಾಷೆಯಲ್ಲಿ ವ್ಯಂಜನ ಗುಂಪಿನಲ್ಲಿ ವರ್ಣಮಾಲೆ /p/ ಅನ್ನು ಹಾಕುವುದನ್ನು ಊಹಿಸೋಣ. ಅಂತಹ ಒಂದು ಸಂಭಾಷಣೆಯಲ್ಲಿ, ಹಿಂದಿಯ ಯಾವುದೇ ವ್ಯಂಜನವು ಹಿಂದಿ /p/ ಅಕ್ಷರದೊಂದಿಗೆ ಸೇರಿಸಬಹುದು ಎಂದು ನೀವು ಯೋಚಿಸುತ್ತೀರಾ? ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ.

| | | | | | |
|---|---|---|---|---|---|
| *pkav | *pkhil | *pgel | *pchav | *pchil | *pchel |
| *ptav | *ptil | *pthel | *ptav | *ptil | *pthel |

ಈ ಸಂಭವನೀಯ ಪದಗಳು ಹಿಂದಿ ಭಾಷೆಯಲ್ಲಿವೆಯೇ? ಇಲ್ಲದಿದ್ದರೆ, ಹಿಂದಿಯಲ್ಲಿ ಯಾವ ನಿಯಮವಿದೆ?

ಹಿಂದಿಯಲ್ಲಿನ ನಿಯಮಗಳನ್ನು ನೋಡಿ.

ನಿಯಮ–1: ಪದವು ವ್ಯಂಜನಗಳ ಗುಂಪು ಮತ್ತು ಮೊದಲ ವ್ಯಂಜನದಿಂದ ಆರಂಭಗೊಂಡರೆ /p/ ಆಗಿದ್ದರೆ /p/ /y/, /r/, /l/ ಮತ್ತು /v/ ಜೊತೆಗೆ ಮಾತ್ರ ಸೇರಿಸುವಂತಾಗುತ್ತದೆ ಮತ್ತು ಬೇರೆ ಯಾವುದರ ಜೊತೆ ಅಲ್ಲ.

ಈ ಧ್ವನಿವಿಜ್ಞಾನ ನಿಯಮವನ್ನು ಅನುಸರಿಸಿ,
ನೀವು ಯಾವುದೇ ಪದವನ್ನು ಮಾಡಬಹುದು ಅಥವಾ ನಿಘಂಟಿನಲ್ಲಿ ಇಂತಹ ಗುಂಪು ಹೊಂದಿರುವ ಪದವನ್ನು ಹುಡುಕಬಹುದು.

ಮತ್ತೊಂದು ಧ್ವನಿವಿಜ್ಞಾನ ನಿಯಮವನ್ನು ನೋಡೋಣ. ಸ್ವರದ ಧ್ವನಿಯು ಕಾಣಿಸಿಕೊಳ್ಳುವ ಮೊದಲು ಒಮ್ಮೊಮ್ಮೆ ವ್ಯಂಜನ ಶಬ್ದಗಳು (ಅಕ್ಷರಗಳು ಅಲ್ಲ) ಕಾಣಿಸಿಕೊಳ್ಳಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಇಂಗ್ಲಿಷ್ ಅನ್ನು ಒಳಗೊಂಡಂತೆ ಯಾವುದೇ ಭಾರತೀಯ ಭಾಷೆಯು ಪದದ ಆರಂಭದಲ್ಲಿ ನಾಲ್ಕು ವ್ಯಂಜನ ಶಬ್ದಗಳನ್ನು ಹೊಂದಲು ಅನುಮತಿಸುತ್ತದೆ ಎಂದು ನೀವು ಗಮನಿಸಬಹುದು. ಆಂಗ್ಲ ಭಾಷೆಯಲ್ಲಿ ಸೈಕಾಲಜಿ (ಆರಂಭದಲ್ಲಿ 5 ವ್ಯಂಜನಗಳನ್ನು ನೀವು ಎಲ್ಲಿ ನೋಡುವಿರಿ) ಎಂಬ ಪದದಲ್ಲಿ ನೋಡಿದರೆ, ಕೇವಲ ಒಂದು ವ್ಯಂಜನ ಇಲ್ಲಿದೆ. ಮನೋವಿಜ್ಞಾನ ಪದವನ್ನು ವಾಸ್ತವವಾಗಿ 'ಸೈಕಾಲಜಿ' ಎಂದು ಉಚ್ಚರಿಸುತ್ತಾರೆ. ಆದರೂ ಇಂಗ್ಲಿಷ್ ನ stress ಎಂಬ ಪದವು ಆರಂಭದಲ್ಲಿ /s/, /t/, /r/ ವ್ಯಂಜನಗಳನ್ನು ಹೊಂದಿದೆ. 'street' ಎಂಬ ಪದವೂ ಅದೇ ರೀತಿಯಲ್ಲಿದೆ. ನಾವು ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ಕೆಲವು ಗುಂಪುಗಳನ್ನು ನೋಡೋಣ.

| | | |
|---|---|---|
| Hindi – | 'smriti' | memory |
| | 'Skru' | screw |
| English – | spray, street, scratch, splash, squash etc. | |

4 ಅಥವಾ ಹೆಚ್ಚಿನ ಶಬ್ದಗಳ ವ್ಯಂಜನಗಳ ಗುಂಪಿನಿಂದ ಪ್ರಾರಂಭಿಸಬಹುದಾದ ಯಾವುದೇ ಪದವನ್ನ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾಡಬಹುದೇ? ನಿಮಗೆ ತಿಳಿದಿರುವ ಭಾಷೆಗಳಲ್ಲಿ ಅಂತಹ ಗುಂಪು ಇದೆ ಎಂಬುದನ್ನು ನೆನಪಿಸಿಕೊಳ್ಳಿ. ಈಗ ನಾವು ಹಿಂದಿ ಧ್ವನಿವ್ಯವಸ್ಥೆಯ 2ನೇ ನಿಯಮವನ್ನು ಮಾಡೋಣ.

ನಿಯಮ – 2 :

1. ನಾಲ್ಕಕ್ಕೂ ಹೆಚ್ಚು ವ್ಯಂಜನಗಳು initial ಎಂಬ ಪದದಲ್ಲಿ ಸ್ವರದ ಮುಂದಿವೆ.
2. ಒಂದು ಗುಂಪಿನಲ್ಲಿ 3 ವ್ಯಂಜನಗಳು ಇದ್ದರೆ ಒಂದೇ ಸಾಲಿನಲ್ಲಿ ಜೋಡಿಸಿ ಸಿ1, ಸಿ2,ಸಿ3 ಎಂದು ಗುರುತಿಸೋಣ.
   ಸಿ1. ಕೇವಲ ಧ್ವನಿ, ಮಾತ್ರ ಆಗಿರಬಹುದು.
   ಸಿ2. ಕೇವಲ ಧ್ವನಿ /p/ , /t/ ಮತ್ತು /k/ ಆಗಿರಬಹುದು.

Notes

Notes

ಸಿ3. ಕೇವಲ ಧ್ವನಿ y, r, l ಮತ್ತು v ಆಗಿರಬಹುದು.

### 1.3.2 ಪದ ರಚನೆ

ಪದಗಳ ಮಟ್ಟದಲ್ಲಿ ಭಾಷೆ ವ್ಯವಸ್ಥಿತವಾಗಿ ಸಂಘಟಿತವಾಗಿದೆ. ಏಕವಚನವನ್ನು ಬಹುವಚನ ಅಥವಾ ಗುಣವಾಚಕಕ್ಕೆ ನಾಮಪದವಾಗಿ ಹೇಗೆ ಪರಿವರ್ತಿಸಬಹುದು ಎಂಬುದರ ಕುರಿತು ಸ್ಥಿರ ನಿಯಮಗಳಿವೆ. ಈ ನಿಯಮಗಳು ತುಂಬ ವ್ಯವಸ್ಥಿತವಾಗಿವೆ. ಅವು ಸ್ವರ ಅಂತ್ಯದ ಪದಗಳಿಂದ ವ್ಯಂಜನ ಅಂತ್ಯದ ಪದಗಳನ್ನು ಮತ್ತು ವಿಭಿನ್ನ ಸ್ವರ, ಶಬ್ದಗಳೊಂದಿಗೆ ಕೊನೆಗೊಳ್ಳುವ ಪದಗಳನ್ನು ಸ್ಪಷ್ಟವಾಗಿ ಭಿನ್ನವಾಗಿಸುತ್ತವೆ.

ಹಿಂದಿಯ ಘರ್ ಎಂದರೆ 'ಮನೆ', ಲಡಕಾ ಎಂದರೆ 'ಹುಡುಗ' – ಇವೆರಡೂ ಪುಲ್ಲಿಂಗ ಪದಗಳು.ಮತ್ತು ಏಕವಚನದಲ್ಲಿವೆ. ಈ ಎರಡು ಪದಗಳ ಬಹುವಚನ ಯಾವುದು? ಸಹಜವಾಗಿ ನಾವು ಅದರ ಬಗ್ಗೆ ತಿಳಿದಿರುತ್ತೇವೆ. ಆದರೆ ಹಿಂದಿ ಭಾಷೆಯನ್ನು ಕಲಿಯುವ ಮಕ್ಕಳು ಅದನ್ನು ವಿವರವಾಗಿ ತಿಳಿದುಕೊಂಡು ಚರ್ಚಿಸುವ ವ್ಯವಸ್ಥಿತ ನಿಯಮಗಳೇನು ಎಂಬುದನ್ನು ತಿಳಿಯಬೇಕು. ಈಗ ಲಡಕಾ ಪದದ ಏಕವಚನ ಮತ್ತು ಬಹುವಚನ ರೂಪದ ವಾಕ್ಯಗಳನ್ನು ನೋಡೋಣ.

1. ಲಡಕೇ ಪುಟ್ಬಾಲ್ ಖೇಲ್ ರಹೇ ಹೈ
2. ಲಡಕೇ ನೆ ಖಾನಾ ಖಾಯಾ
3. ಮೋಹನ್ ಕೆ ಪಾಸ್ ಘರ್ ಹೈ
4. ಯಹ್ ಘರ್ ಬಹುತ್ ಸುಂದರ್ ಹೈ

ಲಡಕೇ ಮತ್ತು ಘರ್ ಬಹುವಚನ ಎಂದು ವಾಕ್ಯ 1 ಮತ್ತು 3 ಸ್ಪಷ್ಟಪಡಿಸುತ್ತವೆ. ಏಕೆಂದರೆ ಎರಡೂ ಸಂದರ್ಭಗಳಲ್ಲಿ ಬಹುವಚನ ಹೈ ಕ್ರಿಯಾಪದದಲ್ಲಿ ಬಳಸಲಾಗಿದೆ. ಆದರೆ ವಾಕ್ಯ 2 ಮತ್ತು 4ರಲ್ಲಿ ಅದೇ ಪದ ಲಡಕೇ ಏಕವಚನ ಎಂದು ಗಮನಿಸಿ.

ಈಗ ನಾವು ಈ ನಿಯಮವನ್ನು ವಿವರವಾಗಿ ತನಿಖೆ ಮಾಡೋಣ. ಏಕೆಂದರೆ ಇಂಗ್ಲಿಷ್ ಮತ್ತು ಪ್ರಪಂಚದ ಇತರ ಭಾಷೆಗಳಲ್ಲಿ ಬಹುವಚನದಲ್ಲಿ ಸಂಬಂಧಿಸಿದ ಪದಕ್ಕೆ ಒಂದೇ ಪದವಿದೆ. ಹಾಗಾಗಿ ಹಿಂದಿ ಕೂಡ ಖಂಡಿತವಾಗಿಯೂ ಅದರ ಪದಗಳಿಗೆ ಒಂದು ಬಹುವಚನ ಸಂಖ್ಯೆಯನ್ನು ಹೊಂದಿರುತ್ತದೆ ಎಂದು ನಾವು ಊಹಿಸೋಣ. ಆದರೆ ಇದು ಹೇಗಾದರೂ ಈಗ ಹಿಂದಿ ನಿಯಮವಾಗಿದೆ. ಸಂಸ್ಕೃತ ಏಕವಚನ, ದ್ವಂದ್ವ ಮತ್ತು ಬಹುವಚನವನ್ನು ಮಾತ್ರ ಹೊಂದಿಲ್ಲ. ಆದರೆ ಇದು 15/16 ವಿವಿಧ ರೂಪಗಳನ್ನು ಹೊಂದಿದೆ. ಹಿಂದಿ ಭಾಷೆಯಲ್ಲಿ 2 ಅಥವಾ 3 ಮತ್ತು ಪ್ರತಿ ನಾಮಪದಕ್ಕಾಗಿ ಬಹುವಚನ ಸಂಕೇತಗಳು ಇವೆ. ಹಾಗೂ ಇವೆಲ್ಲವೂ ನಿಯಮಿತವಾಗಿರುತ್ತವೆ. ಹೆಚ್ಚಿನ ಸಂದರ್ಭಗಳಲ್ಲಿ ಏಕೈಕ ಸಂಖ್ಯೆಯ ವ್ಯವಸ್ಥೆಯು ಒಂದೇ ಪದಕ್ಕೆ ಏಕವಚನದಲ್ಲಿ ಅಥವಾ ಬಹುವಚನದಲ್ಲಿ ಇರುತ್ತದೆ. ಕೆಳಗಿನ ಕೋಷ್ಟಕವನ್ನು ಪರಿಗಣಿಸಿ ಮತ್ತು ಲಡಕೆ ಮತ್ತು ಘರ್ ಪದಗಳಲ್ಲಿ ಇಂತಹ ವ್ಯವಸ್ಥೆಯು ಹೇಗೆ ಉದಾಹರಣೆಯಾಗಿದೆ ಎಂಬುದನ್ನು ನೋಡಿ.

ಘರ್ ' ಹೌಸ್ '

| *ಕಾರ್ಯ* | *ಏಕವಚನ* | *ಬಹುವಚನ* |
|---|---|---|
| ಕರ್ತಾ ಕಾರಕ ( ನಾಮಿನೇಟಿವ್) | ಘರ್ | ಘರ್ |
| ವಿಭಕ್ತಿ ಪೂರ್ವ (ಬೇರೆ ಕಡೆ ) | ಘರ್ | ಘರೋಂ |
| ಸಂಬೋಧನಾ ( ವೊಕೇಟಿವ್) | ಘರ್! | ಘರೋಂ! |

ಭಾಷೆ ಎಂದರೇನು?

ಲಡಕಾ – ಬಾಯ್

| *ಕಾರ್ಯ* | *ಏಕವಚನ* | *ಬಹುವಚನ* |
|---|---|---|
| ಕರ್ತಾ ಕಾರಕ ( ನಾಮಿನೇಟಿವ್) | ಲಡಕಾ | ಲಡಕೇ |
| ವಿಭಕ್ತಿ ಪೂರ್ವ (ಬೇರೆ ಕಡೆ ) | ಲಡಕೇ | ಲಡಕೋಂ |
| ಸಂಬೋಧನಾ ( ವೊಕೇಟಿವ್) | ಲಡಕೇ! | ಲಡಕೋಂ! |

ನಾವು ರೂಪವನ್ನು ಪರಿಗಣಿಸಿ ಮತ್ತು ಒಟ್ಟಾಗಿ ಕಾರ್ಯನಿರ್ವಹಿಸುವುದಾದರೆ ಹಿಂದಿ ಭಾಷೆಯಲ್ಲಿ ಪ್ರತಿ ನಾಮಪದವೂ ತತ್ತ್ವದಲ್ಲಿ ಆರು ರೂಪಗಳನ್ನು ಹೊಂದಿರುತ್ತದೆ. ಅನೇಕ ರೂಪಗಳು ಒಂದೇ ರೀತಿ ಕಾಣುತ್ತವೆ. ಆದರೆ ವಿಭಿನ್ನ ಸಂದರ್ಭಗಳಲ್ಲಿ ವಿವಿಧ ಕಾರ್ಯಗಳನ್ನು ಹೊಂದಿರುತ್ತವೆ. ಆದ್ದರಿಂದ ಲಡಕೇ – ಹುಡುಗರು ಏಕವಚನ ಮತ್ತು ಬಹುವಚನವಾಗಿರಬಹುದು. ನಾಮಾಂಕಿತ ವಿಷಯದ ಸ್ಥಾನದಲ್ಲಿ ಲಡಕೇ ಬಹುವಚನವಾಗಿದೆ. 'ನೆ' ಬಂದಾಗ ಏಕವಚನ. ಘರ್ – ಪದವು ಘರೋ, ಘರೋಂನಂತಹ ಮೂರು ರೂಪಗಳನ್ನು ಹೊಂದಿದೆ ಎಂದು ನೀವು ಗಮನಿಸಬಹುದು. ಲಡಕಾ ಪದವು ನಾಲ್ಕು ರೂಪಗಳನ್ನು ಹೊಂದಿದೆ. ಲಡಕಾ ,ಲಡಕೆ , ಲಡಕೇ,ಲಡಕೋಂ, – ಆದರೆ ಬಳಕೆಯ ಮಟ್ಟದಲ್ಲಿ ಅವು ಆರು ರೂಪಗಳು ಅಥವಾ ಕೇಸ್ ಆಧಾರಿತ ಸ್ಥಾನಗಳನ್ನು ಹೊಂದಿವೆ. ಆ ಆರು ಪ್ರಕರಣದ ಸ್ಥಾನಗಳಲ್ಲಿ ಲಡಕಾ – ಎಂಬ ಪದವು ಈ ಕೆಳಗಿನಂತೆ ಕಾಣುತ್ತದೆ:

5. ಲಡಕಾ ಖೇಲ್ ರಹಾ ಹೈ
6. ಲಡಕೇ ಖೇಲ್ ರಹೇ ಹೈ
7. ಲಡಕೇ ಖಾನಾ ಖಾಯಾ
8. ಲಡಕೋ ನೆ ಖಾನಾ ಖಾಯಾ
9. ಓ ಲಡಕೇ ಇಧರ್ ಆವೋ
10. ಓ ಲಡಕೋಂ ಇಧರ್ ಆವೋ!

ವಾಕ್ಯ 5ರಲ್ಲಿ ಲಡಕಾ – ಏಕವಚನ, ವಾಕ್ಯ 6ರಲ್ಲಿ ಲಡಕೇ – ಬಹುವಚನ, ವಾಕ್ಯ 7ರಲ್ಲಿ ಲಡಕೇ– ಏಕವಚನ ಏಕೆಂದರೆ ಇದರ ಅನಂತರ 'ನೆ' ಪ್ರಯೋಗವಾಗಿದೆ. ವಾಕ್ಯ 8 ರಲ್ಲಿ ಲಡಕೋಂ – ಬಹುವಚನ. ಇದು ವಾಸ್ತವವಾಗಿ ವಾಕ್ಯ 7 ರ ಬಹುವಚನವಾಗಿದೆ. ವಾಕ್ಯ 9 ರಲ್ಲಿ ಲಡಕೇ – ಏಕವಚನ, ವಾಕ್ಯ 10ರಲ್ಲಿ ಲಡಕೋ – ಬಹುವಚನವಾಗಿದೆ.

ಪದ ರಚನೆಯ ನಿಯಮಗಳ ಪ್ರಪಂಚದಿಂದ ನಾವು ಇನ್ನೊಂದು ಉದಾಹರಣೆಯನ್ನು ನೋಡೋಣ. ಹಿಂದಿಯಲ್ಲಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಹಲವು ನಿಯಮಗಳಿವೆ. ನಾಮಪದವನ್ನು ನಾಮವಾಚಕವಾಗಿ ಪರಿವರ್ತಿಸುತ್ತದೆ. ಉದಾಹರಣೆಗೆ rain, fun, sun, fish, cloud ಈ ನಾಮಪದಗಳಿಗೆ y ಸೇರಿಸುವುದರಿಂದ rainy, funny, sunny, fishy, cloudy ಎಂಬ ಗುಣವಾಚಕಗಳಾಗಿ ಪರಿವರ್ತಿಸಬಹುದು. ಹಿಂದಿ ಭಾಷೆಯಲ್ಲಿ ನಾಮಸೂಚಕ ಪದಗಳು ' i' ಧ್ವನಿಯನ್ನು ಸೇರಿಸುವ ಮೂಲಕ ಗುಣವಾಚಕವಾಗುತ್ತದೆ. ಉದಾಹರಣೆಗೆ, ಸರ್ಕಾರ್ , ಬಾಜಾರ್, ಬೇಗಾನ್, ಅಪರಾಧ್ ಇತ್ಯಾದಿಗಳು ಸರ್ಕಾರಿ, ಬಾಜಾರಿ, ಬೇಗಾನಿ, ಅಪರಾಧಿ ಎಂದಾಗುತ್ತವೆ.

## 1.3.3 ವಾಕ್ಯ ನಿರ್ಮಾಣ

ಕೆಳಗಿನ ವಾಕ್ಯಗಳೊಂದಿಗೆ 5ರಿಂದ 10ರ ವಾಕ್ಯಗಳನ್ನು ಹೋಲಿಕೆ ಮಾಡಿ.

11. ಲಡಕೀ ಖೇಲ್ ರಹೀ ಥಿ

Notes

Notes

12. ಲಡಕಿಯಾಂ ಖೇಲ್ ರಹೇ ಹೈ

13. ಲಡಕೀ ನೆ ಖಾನಾ ಖಾಯಾ

14. ಲಡಕೀಯೋ ನೆ ಖಾನಾ ಖಾಯಾ

15. ಲಡಕೇ ನೆ ಲಡಕೀ ಕೋ ಮಾರಾ

16. ಲಡಕೀ ನೆ ಲಡಕೋಂ ಕೊ ಮಾರಾ

17. ಲಡಕೇ ರೋಟಿ ಖಾಯಿ

18. ಲಡಕೀ ನೆ ರೋಟಿ ಖಾಯಿ

ವಾಕ್ಯ 5 ರಿಂದ 18ರವರೆಗಿನ ವಾಕ್ಯಗಳ ಅವಲೋಕನದಿಂದ ಭಾಷೆಗಳು ವಾಕ್ಯಗಳ ಹಂತದಲ್ಲಿ ಹೆಚ್ಚು ನಿಯಮಬದ್ಧವಾಗಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಪದಗಳನ್ನು ಹಾಗೆಯೇ ಜೋಡಿಸಿದ ಮಾತ್ರಕ್ಕೆ ವಾಕ್ಯವಾಗುವುದಿಲ್ಲ. ವಾಸ್ತವವಾಗಿ ಪದಗಳ ಮಟ್ಟದಲ್ಲಿ ಹೋಲಿಸುವುದಾದರೆ,ಭಾಷೆಯು ವಾಕ್ಯಗಳ ರಚನೆಯ ಹಂತದಲ್ಲಿ ಹೆಚ್ಚು ಕ್ರಮಬದ್ಧವಾಗಿ ಏರ್ಪಟ್ಟಿರುತ್ತದೆ. 5,6,9,10,11,12 ನೇ ವಾಕ್ಯಗಳು ಹಿಂದಿ ಭಾಷೆಯಲ್ಲಿ ಕರ್ತೃ ಮತ್ತು ಕ್ರಿಯಾ ಪದಗಳಲ್ಲಿನ ಮಹತ್ವವನ್ನು ಸ್ಪಷ್ಟಪಡಿಸುತ್ತವೆ. ಲಿಂಗ, ವ್ಯಕ್ತಿ ಮತ್ತು ವಿಷಯದ ನಾಮಪದಗಳ ಸಂಖ್ಯೆಗೆ ಅನುಗುಣವಾಗಿ ಕ್ರಿಯಾಪದವು ಏರ್ಪಡುವುದು ಮುಖ್ಯವಾಗಿದೆ. ಈ ಕೆಳಗಿನ ವಾಕ್ಯಗಳು ಇದನ್ನು ಸ್ಪಷ್ಟ ಮಾಡುತ್ತವೆ.

- ರಾಮ್ ಖಾನಾ ಖಾತಾ ಹೈ
- ಸೀತಾ ಖಾನಾ ಖಾತೀ ಹೈ
- ತು ಖಾನಾ ಖಾತಾ ಹೈ
- ತುಮ್ ಖಾನಾ ಖಾತೇ ಹೊ
- ತುಮ್ ಖಾನಾ ಖಾತೀ ಹೊ
- ಆಪ್ ಖಾನಾ ಖಾತೇ ಹೈ
- ಆಪ್ ಖಾನಾ ಖಾತೀ ಹೈ
- ಮೈ ಖಾನಾ ಖಾತಾ ಹೂಂ
- ಮೈ ಖಾನಾ ಖಾತೀ ಹೂಂ
- ಹಮ್ ಖಾನಾ ಖಾತೇ ಹೈ
- ಹಮ್ ಖಾನಾ ಖಾತೀ ಹೈ

5 ರಿಂದ 18ರವರೆಗಿನ ವಾಕ್ಯಗಳನ್ನು ಗಮನಿಸೋಣ. ಕರ್ತೃ ಮತ್ತು ಕ್ರಿಯಾಪದಗಳ ನಡುವೆ ವಾಕ್ಯ 5,6,9,10,11,12 ರ ರೀತಿಯ ಸಮಾನತೆಗಳು ವಾಕ್ಯ 7,8,13,14,15,16,17,18ರಲ್ಲಿಯೂ ಕಂಡುಬರುವುದನ್ನು ಗಮನಿಸೋಣ. ವಾಕ್ಯ 7 ಮತ್ತು 8ರಲ್ಲಿ ಕ್ರಿಯಾಪದವು ವಸ್ತುವಿಗೆ ತಕ್ಕಂತೆ ಬದಲಾಗುತ್ತದೆ. ಕರ್ತೃವಿಗೆ ತಕ್ಕಂತೆ ಅಲ್ಲ. 7, 8ರಲ್ಲಿಯೂ ಪುರುಷವಾಚಕ ಸರ್ವನಾಮಕ್ಕೆ ತಕ್ಕಂತೆ ಪುರುಷವಾಚಕ ಕ್ರಿಯಾಪದವು ಇರುವುದು. 17 , 18 ವಾಕ್ಯಗಳಲ್ಲಿ ವಸ್ತು ಮತ್ತು ಕ್ರಿಯಾಪದಗಳೆರಡೂ ಸ್ತ್ರೀವಾಚಕವಾಗಿರುವುದು. ಕ್ರಿಯಾಪದವು ಪುರುಷವಾಚಕ ಅಥವಾ ಸ್ತ್ರೀವಾಚಕವಾಗಿರಬಹುದು.

ಕ್ರಿಯಾಪದವು ಪುಲ್ಲಿಂಗ ಅಥವಾ ಸ್ತ್ರೀಲಿಂಗವಾಗಿದೆಯೆ ಎಂಬುದು ಮುಖ್ಯವಲ್ಲ. ವಿಷಯವು ಒಂದು ಎರ್ಗೇಟಿವ್ ಕೇಸ್ ನಂತಹ ಪ್ರಕರಣವನ್ನು ತೆಗೆದುಕೊಳ್ಳುತ್ತಿದ್ದರೆ ಆಗ ಕ್ರಿಯಾಪದವು ವಸ್ತುಗಳೊಂದಿಗೆ ಒಪ್ಪಿಕೊಳ್ಳುತ್ತದೆ. 13 ಮತ್ತು 14ರಲ್ಲಿ ವಸ್ತುವು ಸ್ತ್ರೀಲಿಂಗವಾಗಿದೆ. ವಾಕ್ಯ 15 ಮತ್ತು 16ರ ಸಂದರ್ಭದಲ್ಲಿ ಏನಾಗುತ್ತದೆ ಮತ್ತು ಅಲ್ಲಿ ಕ್ರಿಯಾಪದವು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ನೋಡೋಣ. ಈ ಎರಡು ವಾಕ್ಯಗಳಲ್ಲಿ ವಿಷಯ ಮತ್ತು ವಸ್ತುವನ್ನು ಅನುಸರಿಸುವುದು 'ನೆ' ಮತ್ತು 'ಕೊ' ಮುಂತಾದ ಪ್ರತ್ಯಯಗಳ ನಂತರದ ಸಂದರ್ಭಗಳಲ್ಲಿ, ಕ್ರಿಯಾಪದವು ಯಾವಾಗಲೂ ಹಿಂದೆ ತಟಸ್ಥವಾಗಿರುತ್ತದೆ.

## 1.3.4 ಪ್ರವಚನ ರಚನೆ

ಶಬ್ದ ವ್ಯವಸ್ಥೆ, ಶಬ್ದ ರಚನೆ ಮತ್ತು ವಾಕ್ಯ ರಚನೆಯು ಸಂಪೂರ್ಣವಾಗಿ ನಿಯಮಬದ್ಧವಾಗಿರುತ್ತವೆ. ಅದೇ ರೀತಿಯಲ್ಲಿ ಸಾಮಾಜಿಕ ಸಂವಹನವು ನಿಯಮಬದ್ಧವಾಗಿದೆ. ಮತ್ತು ನಾವು ಸಂವಹನ ಕ್ರಮಗಳ ನಿಯಮಗಳನ್ನು ದಾಟಲು ಸಾಧ್ಯವಿಲ್ಲ. ಉದಾಹರಣೆಗೆ, ಮೂರನೆಯ ವ್ಯಕ್ತಿಯಂತೆ ನೀವು ಸಂಭಾಷಣೆಯ ನಡುವೆ ಎಂದಿಗೂ ಮಾತನಾಡಬಾರದು ಎಂಬ ಮೂಲ ನಿಯಮವಿದೆ. ಕೆಲವೊಮ್ಮೆ, ನಾವು ಸಂವಹನದಲ್ಲಿ ಪ್ರಮಾದವನ್ನು ಮಾಡುತ್ತೇವೆ ಏಕೆಂದರೆ ಇತರ ವ್ಯಕ್ತಿಯ ಮಾತುಕತೆಯನ್ನು ಎಚ್ಚರಿಕೆಯಿಂದ ಕೇಳುವುದಿಲ್ಲ. ಕೆಲವೊಮ್ಮೆ, ಕೇಳುಗನು ಒಂದು ಮಾತುಕತೆಯ ಮಧ್ಯದಲ್ಲಿ ತುಂಬ ಅಸಮಾಧಾನಗೊಂಡಿದ್ದಾಗ ಮತ್ತು ಚರ್ಚೆ ಅಂತ್ಯಗೊಳ್ಳುವ ಹೊತ್ತಿಗೆ ಅದರಲ್ಲಿ ಪಾಲ್ಗೊಳ್ಳಲು ಸಮರ್ಥನಿರುವುದಿಲ್ಲ. ಯಾವುದೇ ಸಂವಹನವನ್ನು ಅರ್ಥೈಸಿಕೊಳ್ಳುವುದರಲ್ಲಿ ಭಾಷೆಯ ಪಾತ್ರ ಮಹತ್ವದ್ದು. ಉದಾಹರಣೆಗೆ ಹಿಂದಿ ಭಾಷೆಯಲ್ಲಿ ಇಸ್ ಲಿಯೆ, ಉಸ್ ನೆ, ಪಾರ್, ಔರ್ ಇತ್ಯಾದಿಗಳು ತುಂಬ ಮುಖ್ಯವಾಗಿದ್ದು ಈ ಮಾತುಗಳಿಗೆ ನೀವು ಪ್ರಾಮುಖ್ಯತೆ ನೀಡದ ಹೊರತು ಸಂವಹನವನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯು , ' ಮುಜೆ ಇಸ್ ಲಿಯೆ ದೇರ್ ಹೋ ಗಯಿ ಕ್ಯೊಂಕಿ ರಾಸ್ತೇ ಮೆ ಟ್ರಾಫಿಕ್ ಬಹುತ್ ಥಾ' – ನನಗೆ ವಿಳಂಬವಾಯಿತು ಏಕೆಂದರೆ ರಸ್ತೆಯ ಮೇಲೆ ಭಾರಿ ದಟ್ಟಣೆ ಇತ್ತು. ನಾವು ಇಸ್ ಲಿಯೆ, ಅಥವಾ ಏಕೆಂದರೆ ಪದಗಳನ್ನು ತೆಗೆದು ಹಾಕಿದರೆ, ಆ ವಾಕ್ಯ ಅರ್ಥಹೀನವಾಗುತ್ತದೆ. ಪರಿಣಾಮಕಾರಿ ತಿಳಿವಳಿಕೆ ಮಟ್ಟದಲ್ಲಿ ಪರಿಣಾಮಕಾರಿ ಅನುಕ್ರಮದಲ್ಲಿ ಪರಿಣಾಮಕಾರಿ ಪದಗಳನ್ನು ಬಳಸಿದಾಗ ವಾಕ್ಯವು ಅರ್ಥಪೂರ್ಣವಾಗುತ್ತದೆ. ಆ ಪದಗಳ ಕ್ರಮವು ವಾಕ್ಯವನ್ನು ಅರ್ಥೈಸಿದಾಗ ವಾಕ್ಯದ ಅರ್ಥವು ಬದಲಾಗುತ್ತದೆ.

### ನಿಮ್ಮ ಬೆಳವಣಿಗೆ–2ನ್ನು ಗಮನಿಸಿ

*1. ಹಿಂದಿ ಭಾಷೆಯಲ್ಲಿ ಎಷ್ಟು ರೂಪದ ನಾಮಪದಗಳಿರಬಹುದು?*

*ಅ) 5 ಆ) 3*

*ಇ) 2 ಈ) 6*

*2. ಒಂದು ಪದವು 3 ವ್ಯಂಜನಗಳಿಂದ ಪ್ರಾರಂಭವಾಗುತ್ತಿದ್ದರೆ,*

- *ಮೊದಲನೆ ವ್ಯಂಜನವು* / s /
- *ಎರಡನೆ ವ್ಯಂಜನವು* p, t *ಅಥವಾ* k
- *ಮೂರನೆಯ ವ್ಯಂಜನವು* y, r, l *ಅಥವಾ* v

*ನಿಮ್ಮ ಉತ್ತರವನ್ನು ಸಮರ್ಥಿಸಲು ಉದಾಹರಣೆ ನೀಡಿ.*

*3. ರಾಮ್ ಖಾನಾ ಖಾತಾ ಹೈ*
*ಸೀತಾ ಖಾನಾ ಖಾತೀ ಹೈ*

Notes

*ಕರ್ತೃ ಮತ್ತು ಕ್ರಿಯಾಪದದ ಸಂಬಂಧವನ್ನು ಈ ಉದಾಹರಣೆಗಳಿಂದ ವಿವರಿಸಿ.*

.............................................................................................................................................

.............................................................................................................................................

.............................................................................................................................................

## 1.4. ಪ್ರಮಾಣಿತ ಭಾಷೆ

ಭಾಷಾ ಪ್ರಮಾಣೀಕರಣ ಕೆಲವು ಕ್ರಮಗಳನ್ನು ಅನುಸರಿಸುತ್ತದೆ. ಒಂದು ಪ್ರಮಾಣಿತ ಭಾಷೆಯೆಂದು ಕರೆಯಲ್ಪಡುವ ಭಾಷೆ ಆ ಭಾಷಾ ಶಾಸ್ತ್ರದ ಪ್ರದೇಶ ಅಥವಾ ಸಮಾಜದ ಇತರ ಅಸ್ತಿತ್ವದಲ್ಲಿರುವ ಭಾಷೆಗಳಿಂದ ಪರಿಗಣಿಸಲ್ಪಟ್ಟಿರುತ್ತದೆ. ಭಾಷೆಗೆ ಸಮಾಜದಲ್ಲಿ ಕೆಲವು ಸ್ಥಾನಮಾನಗಳಿವೆ. ಬ್ರಾಹ್ಮಣ ಸಮಾಜದಲ್ಲಿ ಸಂಸ್ಕೃತವು ಪ್ರಮಾಣಿತ ಭಾಷೆಯಾಗಿತ್ತು. ಅರಬ್ಬರು ಆಳಿಕೆ ನಡೆಸಿದಾಗ, ಅರೇಬಿಕ್ ಪ್ರಮಾಣಿತ ಭಾಷೆಯಾಯಿತು.ಮತ್ತು ಇರಾನಿಯನ್ನರು ಆಳುತ್ತಿದ್ದರೆ, ಪರ್ಷಿಯನ್ ಪ್ರಮಾಣಿತ ಭಾಷೆಯಾಗಿರುತ್ತದೆ. ಬ್ರಿಟಿಷ್ ಆಡಳಿತ ಬಂದಾಗ ಆ ಸಮಯದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ನೂರಾರು ಭಾಷೆಗಳನ್ನು ನಿರ್ಲಕ್ಷಿಸಿ ಇಂಗ್ಲಿಷ್ ಪ್ರಮಾಣಿತ ಭಾಷೆಯಾಯಿತು. ಈಗ ಹಿಂದಿ ಮತ್ತು ಇಂಗ್ಲಿಷ್ ಎರಡೂ ಅಧಿಕೃತ ಭಾಷೆ ಅಥವಾ ಪ್ರಮಾಣಿತ ಭಾಷೆ. ಈಗ ನಾವು ಇಂಗ್ಲಿಷ್ ಮಾತನಾಡುವಾಗ, ಆಕ್ಸ್‌ಫರ್ಡ್ ನಿಘಂಟಿನಲ್ಲಿ ಕಂಡುಬರುವ ಅಥವಾ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಗಳಲ್ಲಿ ಮಾತನಾಡುವ ಗುಣಮಟ್ಟದ ಇಂಗ್ಲಿಷನ್ನು ಮಾತನಾಡುತ್ತೇವೆ. ನಾವು ಹಿಂದಿ ಭಾಷೆ ಮಾತನಾಡುವಾಗ ಖಡೀಬೋಲಿ, ಬ್ರಜ್, ಅವಧ್ ಮೊದಲಾದ ಉಪಭಾಷೆಗಳನ್ನು ಬಳಸಬಹುದು. ಮೂರನೆ ಹಂತದಲ್ಲಿ, ನಾವು ಬಳಸುವ ಭಾಷೆಯು ನಿರ್ದಿಷ್ಟ ವ್ಯಾಕರಣ ನಿಯಮಗಳನ್ನು ಹೊಂದಿರುತ್ತದೆ. ಅಲ್ಲದೆ ವಿವಿಧ ರೀತಿಯ ನಿಘಂಟುಗಳು,ಮಾಧ್ಯಮಗಳು, ಆಡಳಿತ, ನ್ಯಾಯಾಂಗ ಮತ್ತು ಔಪಚಾರಿಕ ಶಿಕ್ಷಣದ ಭಾಷೆಯಾಗಿ ಹಲವು ಚರ್ಚೆಗಳು ಮತ್ತು ರಚನಾತ್ಮಕ ಮತ್ತು ವಿಶ್ಲೇಷಣಾತ್ಮಕ ಪುಸ್ತಕಗಳು ಬರೆಯಲ್ಪಡುತ್ತವೆ. ಈ ರೀತಿಯಲ್ಲಿ ಒಂದು ಭಾಷಾ ಪಠ್ಯಪುಸ್ತಕಗಳು ಸಿದ್ಧವಾಗಿ ಬೋಧಿಸಲ್ಪಡುತ್ತದೆ. ಹಿಂದಿ ಅಥವಾ ಯಾವುದೇ ಪ್ರಮಾಣಿತಭಾಷೆಯ ನಾಲ್ಕನೇ ಅಥವಾ ಕೊನೆಯ ಹಂತವೆಂದರೆ ಅದು ಸಿನಿಮಾ,ಸಾಹಿತ್ಯ, ಸಂಗೀತ ಮತ್ತು ಇನ್ನಿತರ ರೀತಿಯಲ್ಲಿ ಅಭಿವೃದ್ಧಿಗೊಳ್ಳುವ ಅವಕಾಶವನ್ನು ಪಡೆಯುತ್ತದೆ.

ಪ್ರಮಾಣೀಕರಣ ಪ್ರಕ್ರಿಯೆಯು ಸಾಮಾಜಿಕ ಶೋಷಣೆಯ ಪ್ರಕ್ರಿಯೆಗೆ ಹೆಚ್ಚು ಸಂಬಂಧಿಸಿದೆ. ಆ ಪ್ರದೇಶದಲ್ಲಿ ಮಾತನಾಡುವ ಅನೇಕ ಇತರ ಭಾಷೆಗಳ ಪ್ರಮಾಣಿತಭಾಷೆಯಾಗಿ ಆಯ್ಕೆಯಾಗುವ ಭಾಷೆಯು ರಾಜಕೀಯ ಶಕ್ತಿ, ಸಾಂಸ್ಥಿಕ ಶಕ್ತಿ ಮತ್ತು ಇತರ ಅಗತ್ಯ ಅಧಿಕಾರ ಹೊಂದಿರುವ ಭಾಷೆಯಾಗಿದೆ.

### ನಿಮ್ಮ ಬೆಳವಣಿಗೆ 3ನ್ನು ಗಮನಿಸಿ

1. ಒಂದು ಪ್ರಮಾಣಿತ ಭಾಷೆಯು ಸಾಮಾನ್ಯವಾಗಿ ______________ ಹೊಂದಿರುವ ಸಾಮಾಜಿಕ ಗುಂಪಿಗೆ ಸೇರಿರುತ್ತದೆ.

2. ಪ್ರಮಾಣೀಕರಣ ಪ್ರಕ್ರಿಯೆಯು ಸಾಮಾಜಿಕ ಶೋಷಣೆಯ ಪ್ರಕ್ರಿಯೆಗೆ ಹೇಗೆ ಸಂಬಂಧಿಸಿದೆ?

ಭಾಷೆ ಎಂದರೇನು?

..................................................................................................................................................

..................................................................................................................................................

..................................................................................................................................................

3. ಗುಣಲಕ್ಷಣದ ದೃಷ್ಟಿಯಿಂದ ಭಾಷೆಯು ನಿರಂತರ ಬದಲಾಗುತ್ತಿರುತ್ತದೆ. ಹೀಗಾಗಿ ಒಂದು ಭಾಷೆಯ ಪ್ರಮಾಣೀಕರಣ ಎಷ್ಟರ ಮಟ್ಟಿಗೆ ಕಾರ್ಯಸಾಧ್ಯ? ಈ ಬಗೆಗೆ ನಿಮ್ಮ ಕಾರಣಗಳನ್ನು ನೀಡಿ.

..................................................................................................................................................

..................................................................................................................................................

..................................................................................................................................................

Notes

## 1.5 ಭಾಷೆಯ ಮನೋವೈಜ್ಞಾನಿಕ ಅಂಶಗಳು

ಮಾನವನ ಮೆದುಳಿನಲ್ಲಿ ಭಾಷೆಯು ಬಹಳ ಆಳವಾಗಿ ಕುಳಿತಿರುವುದು ಖಚಿತವಾಗಿದೆ. ತಲೆಯ ಕೆಲವು ಭಾಗಗಳನ್ನು ಹೊಡೆದಾಗ, ಭಾಷೆಯ ಅಸಮತೋಲನ ಫಲಿತಾಂಶಗಳು ಉಂಟಾಗುತ್ತವೆ. ಅಲ್ಲದೆ ಬಾಧಿತ ವ್ಯಕ್ತಿಯು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ. ಜೊತೆಗೆ ಅವನು ಮಾತನಾಡುವ ಸಾಮರ್ಥ್ಯವನ್ನು ಸಹ ಕಳೆದುಕೊಳ್ಳುತ್ತಾನೆ. ಇದರಿಂದಾಗಿ ಕೆಲವೊಮ್ಮೆ ಮಾಡುವ ಪದರಚನೆ ಮತ್ತು ವಾಕ್ಯನಿರ್ಮಾಣಗಳೂ ವಿಕೃತತೆಯನ್ನು ಪಡೆಯುತ್ತವೆ.

ಗಮನಿಸಬೇಕಾದ ಎರಡನೆಯ ಅಂಶವೆಂದರೆ, ಬಹುಶ: ಪ್ರತಿ ಮಗುವೂ ಒಂದು ಸಾರ್ವತ್ರಿಕ ವ್ಯಾಕರಣದಿಂದ ಜನಿಸಿದೆ. ನಾವು ಮಾತನಾಡುವ, ನಡೆಯುವ, ಕುಳಿತುಕೊಳ್ಳುವ, ನಿದ್ರಿಸುವ ಎಲ್ಲವೂ ಭಾಷೆಯಲ್ಲಿ ಚಿತ್ರಿತವಾಗಿದೆ. ಪ್ರತಿ ಭಾಷೆಯಲ್ಲಿರುವ ನಾಮಪದಗಳು, ಕ್ರಿಯಾಪದಗಳು, ಗುಣವಾಚಕಗಳು, ಕ್ರಿಯಾವಿಶೇಷಣಗಳು, ವಿರಾಮ ಚಿಹ್ನೆಗಳು, ವಸ್ತು– ವಿಷಯಗಳ ಬಗೆಗೆ ಪ್ರತಿ ಮಗುವಿನ ಮನಸ್ಸಿನಲ್ಲಿ ಒಂದು ಖಚಿತತೆ ಇರುತ್ತದೆ. ಈ ಸಾಮರ್ಥ್ಯದಿಂದಾಗಿ ಒಂದು ಮಗು ತನ್ನ ಸಮುದಾಯದಲ್ಲಿ ಮಾತನಾಡುವ ಭಾಷೆಗಳನ್ನು ತನ್ನ ಮೂರು ಅಥವಾ ನಾಲ್ಕನೇ ವರ್ಷದೊಳಗೆ ಕಲಿಯುತ್ತದೆ. 1.4ರಲ್ಲಿ ನಾವು ಭಾಷಾ ರಚನೆಯು ಪ್ರತಿ ಹಂತದಲ್ಲಿ ಹೇಗೆ ನಿಯಮಬದ್ಧವಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಚರ್ಚಿಸಿದ್ದೇವೆ. ಸಾರ್ವತ್ರಿಕ ವ್ಯಾಕರಣದ ಕಲ್ಪನೆಯನ್ನು ತಿಳಿಸದಿದ್ದಲ್ಲಿ 3,4 ರ ವಯಸ್ಸಿನ ಮಗುವಿಗೆ ಯಾವುದೇ ಕಲಿಕೆ ಇಲ್ಲದೆ ಹೇಗೆ ವೈಜ್ಞಾನಿಕ ಮತ್ತು ಖಚಿತವಾದ ಭಾಷಾ ಸಿದ್ಧಿ ಸಾಧ್ಯ ಎಂಬುದನ್ನು ತಿಳಿಯಲು ನಾವು ಅಸಮರ್ಥರಾಗುತ್ತಿದ್ದೆವು. ಯಾರೂ ತಮ್ಮ ಭಾಷೆಯಲ್ಲಿ ಯಾವುದೇ ಮೂಲಭೂತ ವ್ಯಾಕರಣದ ತಪ್ಪು ಅಥವಾ ಶಬ್ದದ ಮಟ್ಟದ ತಪ್ಪುಗಳನ್ನು ಮಾಡುವುದಿಲ್ಲ. ಮತ್ತು ಅವನು ಆಕಸ್ಮಿಕವಾಗಿ ಮಾಡಿದರೆ, ತಕ್ಷಣವೇ ಅವುಗಳನ್ನು ಸರಿಪಡಿಸುತ್ತಾನೆ ಎಂಬುದನ್ನು ನೀವು ಗಮನಿಸಿದ್ದೀರಿ. ಆ ವಯಸ್ಸಿನ ಮಕ್ಕಳು ಹೆಚ್ಚೆಂದರೆ ಉಚ್ಚರಿಸುವ ಕ್ರಮದಲ್ಲಿ ತೊದಲು ಮಾತನಾಡಬಹುದು. ಉದಾಹರಣೆಗೆ, ಸ್ಕೂಟರ್ ಅನ್ನು ಕೂಟರ್ ಎನ್ನಬಹುದು. ಮಕ್ಕಳಿಗೆ ಸಂಕೀರ್ಣವಾದ ವ್ಯಾಕರಣವನ್ನು ಕಲಿಯಲು ಪ್ರಾರಂಭದಲ್ಲಿ ಕಷ್ಟವಾಗಬಹುದು. ಹೀಗಾಗಿ ಸುಲಭವಾಗಿ ತಾವು ಉಚ್ಚಾರ ಮಾಡಬಲ್ಲ ಪದಗಳನ್ನು ಹೆಚ್ಚು ಬಳಸುತ್ತಾರೆ. ಕಷ್ಟಕರವಾದ ಮತ್ತು ಸಂಕೀರ್ಣವಾದ ಪದಗಳನ್ನು ಬಳಸುವುದಿಲ್ಲ. ಹಿಂದಿ ಮಾತನಾಡುವ ಮಗು, ‘ ಆಜ್ ಮುಜೆ ಸ್ಕೂಲ್ ಜಾನಾ ಹೈ ‘ – ಎಂಬ ಪೂರ್ಣ ವಾಕ್ಯ ನುಡಿಯುವ ಬದಲು ‘ಕೂಲ್ ಜಾನಾ ‘ ಎನ್ನಬಹುದು.

ಒಟ್ಟಾರೆಯಾಗಿ, ಮಕ್ಕಳು ಒಂದು ಸಾರ್ವತ್ರಿಕ ವ್ಯಾಕರಣದೊಂದಿಗೆ ಬೆಳೆಯುತ್ತಾರೆ. ಅವರು ಭಾಷಾ ಪ್ರಭುತ್ವದ ಬಗ್ಗೆ ಒಂದು ಮಾನಸಿಕ ಸಿದ್ಧತೆಯನ್ನು ಮಾಡಿಕೊಂಡಿರುತ್ತಾರೆ. ಈ ಸಿದ್ಧತೆಯು ಪರಿಸರದ ಪ್ರಭಾವದಿಂದಾಗಿ ಪೂರ್ಣಗೊಳ್ಳುತ್ತದೆ. ಇದು ಅತ್ಯಂತ ಸಹಜ ಹಾಗೂ ಅನಪೇಕ್ಷಿತ ಪ್ರಕ್ರಿಯೆಯಾಗಿದೆ. ಜೊತೆಗೆ ಯಾವುದೇ ಕಲಿಕೆ ಇಲ್ಲದೆ ಸಿದ್ಧಿಸುವ ಅಂಶವಾಗಿದೆ. ಅಲ್ಲದೆ ಈ ಭಾಷಾ ಗಳಿಕೆಯ ಪ್ರಯಾಣವು ಶಾಲೆಗೆ ಹೋಗಿ ಶಿಕ್ಷಕರಿಂದ ಶಿಕ್ಷಣ ಪಡೆಯುವುದರೊಂದಿಗೆ ಮುಂದುವರಿಯುತ್ತದೆ.

Notes

**ನಿಮ್ಮ ಬೆಳವಣಿಗೆ – 4ನ್ನು ಗಮನಿಸಿ**

1. 1. ಮಕ್ಕಳಿಗೆ ಭಾಷಾ ಗಳಿಕೆಯ ----------- ಸಾಮರ್ಥ್ಯ ಇರುತ್ತದೆ.
   2. ಭಾಷಾ ಗಳಿಕೆಯ ------------- ಸಾಮರ್ಥ್ಯದಿಂದ ಪ್ರತಿ ಮಗು ಜನಿಸುತ್ತದೆ.
2. ಮೆದುಳಿನ ಒಂದು ಭಾಗಕ್ಕೆ ಏನಾದರೂ ಪೆಟ್ಟಾದರೆ, ಯಾವ ಬಗೆಯ ಭಾಷಾ ವಿಕೃತತೆ ಉಂಟಾಗಬಹುದು?

   ..........................................................................................................................

   ..........................................................................................................................

   ..........................................................................................................................
3. ಮಾತನಾಡುವ ಸಾಮರ್ಥ್ಯದೊಂದಿಗೆ ಮಕ್ಕಳು ಹುಟ್ಟುತ್ತಾರೆ. ಆದರೆ ಇದರಿಂದ ನೀವು ಒಂದು ಮಗುವನ್ನು ಕಾಡಿನಲ್ಲಿ ಬಿಟ್ಟು ಬಂದರೂ ಅದು ಮಾತನಾಡಬಲ್ಲುದು ಎನ್ನಲು ಸಾಧ್ಯವೇ? ಹಾಗಾದರೆ ಭಾಷಾ ಕಲಿಕೆಗೆ ಮಗುವಿನ ಹುಟ್ಟಿನಿಂದ ಬಂದ ಸಾಮರ್ಥ್ಯದ ಜೊತೆಗೆ ಇನ್ನೇನು ಅಗತ್ಯವಾಗಿದೆ?

   ..........................................................................................................................

   ..........................................................................................................................

   ..........................................................................................................................
4. ಕಲಿಕೆಯ ಭಾಷೆಗೂ ಸಹಜ ಗಳಿಕೆಯ ಭಾಷೆಗೂ ಇರುವ ವ್ಯತ್ಯಾಸಗಳೇನು?

   ..........................................................................................................................

   ..........................................................................................................................

   ..........................................................................................................................

## 1.6 ಭಾಷೆಯ ಸಾಮಾಜಿಕ ಅಂಶಗಳು

ನಾವು ಭಾಷೆ ಮತ್ತು ಸಮಾಜದ ಬಗ್ಗೆ ಮಾತನಾಡಿದ್ದೇವೆ. ಮಕ್ಕಳು ಭಾಷೆ ಕಲಿಯುವಾಗ ಅವರು ಅದರ ಸರಿಯಾದ ರೂಪದಲ್ಲಿ ಕಲಿಯುವುದು ಮಾತ್ರವಲ್ಲ, ಸಮಾಜದಲ್ಲಿ ಒಂದು ನಿರ್ದಿಷ್ಟ ಭಾಷೆ ಬಳಸುತ್ತಿರುವ ಕ್ರಮದಲ್ಲಿಯೇ ಕಲಿಯುವರು. ಹೀಗಾಗಿ ಮಕ್ಕಳಿಗೆ ಭಾಷೆಯು ಬಹು ಬೇಗನೆ ಮತ್ತು ಭಾಷಾ ಶಾಸ್ತ್ರದ ಅನುಸಾರವಾಗಿಯೇ ಸಿದ್ಧಿಸುತ್ತದೆ. ಹೀಗೆ ಮಕ್ಕಳು ತಮ್ಮ ಭಾಷೆಯ ಜನರು, ಸ್ಥಳಗಳು, ಸಂದರ್ಭಗಳು , ಸ್ವರೂಪಗಳು ಮತ್ತು ಭಾಷಾ ಬಳಕೆಯ ಕ್ರಮಗಳನ್ನು ಕಲಿಯುತ್ತಾರೆ.

ಸಾರ್ವತ್ರಿಕ ವ್ಯಾಕರಣವನ್ನು ಹೊಂದಿದ್ದರೂ, ಮಗುವು ತನ್ನ ಪರಿಸರದಿಂದ ಕೇಳುವ ಭಾಷೆಯನ್ನು ಕಲಿಯುತ್ತದೆ. ವಾಸ್ತವವಾಗಿ ನಮ್ಮ ಆಯ್ಕೆಯ ಪದಗಳು, ವಾಕ್ಯಗಳು ಇವೆಲ್ಲ ನಾವು ಮಾತನಾಡುವ ಸಂದರ್ಭ, ವ್ಯಕ್ತಿ, ಮಾತನಾಡುವ ಸ್ಥಳ ಮತ್ತು ವಿಷಯಗಳನ್ನು ಅವಲಂಬಿಸಿರುತ್ತದೆ. ನಿಮ್ಮ ತಾಯಿಯ ಜೊತೆಯಲ್ಲಿ ಆಹಾರದ ಬಗೆಗೆ ಮಾತನಾಡುವಂತೆ, ತಂದೆಯ ಜೊತೆಗೆ ಶಾಲಾ ಕಾರ್ಯಗಳ ಬಗ್ಗೆ ಮಾತನಾಡುವುದಿಲ್ಲ. ನಿಮ್ಮ ಸ್ನೇಹಿತರೊಂದಿಗೆ ಬಳಸುವ ಭಾಷೆಯನ್ನೇ ನಿಮ್ಮ ಶಿಕ್ಷಕರೊಡನೆ ಬಳಸಲಾಗುವುದಿಲ್ಲ.

**ಭಾಷೆ ಎಂದರೇನು?**

ನಮ್ಮ ಭಾಷಾ ಬಳಕೆಯ ರೀತಿಯಲ್ಲಿ ಸಾಮಾಜಿಕ ವ್ಯತ್ಯಾಸಗಳು ಮತ್ತು ಶ್ರೇಣೀಕರಣಗಳು ಮುಖ್ಯವಾಗಿ ಗಮನಿಸಲ್ಪಡುತ್ತವೆ. ಕೆಲವೊಮ್ಮೆ ವಿವಿಧ ಜಾತಿಗಳ ಜನರು ಒಂದೇ ಭಾಷೆಯ ವಿವಿಧ ಶೈಲಿಗಳನ್ನು ಬಳಸುತ್ತಾರೆ. ಪ್ರತಿ 15ರಿಂದ 20 ಕಿಲೋಮೀಟರುಗಳ ಅಂತರದಲ್ಲಿ ಭಾಷಾ ವಿಭಿನ್ನತೆಗಳನ್ನು ಕಾಣಬಹುದು. ಇದು ಹೇಗೆ ವಾಕ್ಯಗಳು ರಚನೆಯಾಗುತ್ತವೆ, ಪದಗಳು ರೂಪುಗೊಳ್ಳುತ್ತವೆ ಮತ್ತು ಅವುಗಳನ್ನು ಹೇಗೆ ಉಚ್ಚರಿಸಲಾಗುತ್ತವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತವೆ. ನೀವು ಬಾಯಿ ತೆರೆದ ಕೂಡಲೇ ನಿಮ್ಮ ವ್ಯಕ್ತಿತ್ವದ ಗುರುತು ತಿಳಿಯುವುದು. ನೀವು ಎಲ್ಲಿಯವರು, ನೀವು ಯಾವ ಕುಟುಂಬದವರು, ನಿಮ್ಮ ಸ್ನೇಹಿತ ವಲಯ ಹೇಗಿದೆ ಮುಂತಾದವುಗಳನ್ನು ನೀವು ಹೇಳುವ ಒಂದೇ ಒಂದು ಸಣ್ಣ ಪದ 'ಹಲೊ" ಎಂಬುದರ ಮೂಲಕ ಗುರುತಿಸಬಹುದಾಗಿದೆ.

ದೆಹಲಿಯಲ್ಲಿ ಕೆಲವು ಜನರು 'ಮಜ್ಜ' ಮತ್ತು ಕೆಲವರು 'ಮಝಾ' ಎಂದು ಹೇಳುತ್ತಾರೆ. ಕೆಲವರು 'ಜಾಫರ್; ಮತ್ತೆ ಕೆಲವರು' ಝಾಫರ್' ಎಂದು ಹೇಳುತ್ತಾರೆ. ಒಬ್ಬ ವ್ಯಕ್ತಿಯು ಶಿಕ್ಷಿತನೋ ಅಶಿಕ್ಷಿತನೋ ಎಂಬುದನ್ನು ಆತನ ಮಾತುಗಳಿಂದಲೇ ತಿಳಿಯಬಹುದು. ಶ್ರೀಮಂತನೋ ಬಡವನೋ? ದೆಹಲಿಯವನೋ ಹೊರಗಿನವನೋ ಇತ್ಯಾದಿ. ನಿಮ್ಮ ಶಾಲೆಯನ್ನು ನೀವು 'ಸ್ಕಲ್' ಅಥವಾ 'ಸುಕೂಲ್' ಎಂದು ಕರೆದರೆ ಅದರಿಂದಲೂ ಸಾಕಷ್ಟು ವ್ಯತ್ಯಾಸವುಂಟಾಗುತ್ತದೆ. ಈ ರೀತಿಯಾಗಿ ಭಾಷಾ ಗುರುತಿಸುವಿಕೆಯು ಸಾಮಾಜಿಕ ಗುರುತನ್ನು ನೇರವಾಗಿ ಸಂಬಂಧಿಸಿದೆ.

ಮುಂದಿನ ಘಟಕದಲ್ಲಿ ನಾವು ಭಾರತದ ಬಹುಭಾಷಾ ಪಾತ್ರವನ್ನು ಚರ್ಚಿಸುತ್ತೇವೆ. ಅದೇ ವ್ಯಕ್ತಿ ವಿವಿಧ ಭಾಷೆಗಳಲ್ಲಿ ಅಥವಾ ವಿವಿಧ ಸಾಮಾಜಿಕ ಮತ್ತು ವೃತ್ತಿಪರ ವಲಯಗಳಲ್ಲಿ ವಿವಿಧ ಭಾಷೆಗಳಲ್ಲಿ ಒಂದೇ ಭಾಷೆಯನ್ನು ಮಾತನಾಡುತ್ತಾರೆ. ಭಾರತೀಯ ಸಮಾಜದ ಅತ್ಯಂತ ಸಾಮಾನ್ಯ ಲಕ್ಷಣವೆಂದರೆ ಕಾಲೇಜಿಗೆ ಹೋಗುವ ಹುಡುಗಿಯೊಬ್ಬಳು ಮಾರ್ವಾಡಿ ಭಾಷೆಯನ್ನು ಮನೆಯಲ್ಲಿ ಮಾತನಾಡುತ್ತಾಳೆ, ಹಿಂದಿ ಮತ್ತು ಇಂಗ್ಲಿಷ್ ಕಾಲೇಜಿನಲ್ಲಿ ಮತ್ತು ಸ್ನೇಹಿತರೊಡನೆ ಮಾತನಾಡುತ್ತಾಳೆ. ಮತ್ತು ಮನೆ , ದೇವಸ್ಥಾನಗಳಲ್ಲಿ ಸಂಸ್ಕೃತದಲ್ಲಿ ಪ್ರಾರ್ಥನೆ ಮಾಡುತ್ತಾಳೆ. ಬಹುಭಾಷಾ ರಾಷ್ಟ್ರಗಳಲ್ಲಿ ಈ ರೀತಿಯ ಭಾಷಾ ವರ್ತನೆಯು ಸಾಮಾನ್ಯವಾಗಿ ಕಂಡುಬರುತ್ತದೆ. ಎಲ್ಲ ಬಹುಭಾಷಾ ದೇಶಗಳಲ್ಲಿ ಜನರು ಯಾವ ಭಾಷೆಯನ್ನು ಬಳಸಬೇಕು ಮತ್ತು ಅವರು ಸಂವಹನ ನಡೆಸುತ್ತಿರುವ , ಸ್ಥಳವನ್ನು ಆಧರಿಸಿ ಆ ಭಾಷೆಯನ್ನು ಹೇಗೆ ಬಳಸುತ್ತಾರೆ ಎಂಬುದನ್ನು ಜನರು ನಿರ್ಧರಿಸುತ್ತಾರೆ. ಉದಾಹರಣೆಗೆ, ಅಮೇರಿಕಾದ ರಸ್ತೆ ಬದಿಯಲ್ಲಿ ಮಾತನಾಡುವ ಇಂಗ್ಲಿಷ್ ಗೂ, ವಿಶ್ವವಿದ್ಯಾಲಯಗಳಲ್ಲಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾತನಾಡುವ ಇಂಗ್ಲಿಷ್ ಭಾಷೆಗೂ ಸಾಕಷ್ಟು ವ್ಯತ್ಯಾಸವಿದೆ.

---

**ನಿಮ್ಮ ಬೆಳವಣಿಗೆ – 5 ನ್ನು ಗಮನಿಸಿ**

ಈ ಕೆಳಗಿನ ಯಾವ ಕ್ಷೇತ್ರಗಳಲ್ಲಿ ಭಾಷೆಯು ಪ್ರತಿ 15–20 ಕಿಲೋಮೀಟರ್ ಗಳಿಗೆ ಬದಲಾಗುತ್ತದೆ?

1. ವಾಕ್ಯ ರಚನೆಯ ಹಂತದಲ್ಲಿ
2. ಪದ ರಚನೆಯ ಹಂತದಲ್ಲಿ
3. ಧ್ವನಿ ರಚನೆಯ ಹಂತದಲ್ಲಿ
4. ಸಂವಹನಾ ಶೈಲಿಯ ಹಂತದಲ್ಲಿ

---

## 1.7. ಭಾಷೆ ಮತ್ತು ಸಾಹಿತ್ಯ

ಭಾಷೆಯು ತನ್ನ ಶೈಲಿಗಳಲ್ಲಿ ಪರಿಪೂರ್ಣವಾಗಿದೆ. ಬೇರೆಯವರ ಭಾಷಣವನ್ನು ಕೇಳುವ ಮೂಲಕ ಅದನ್ನು ಅರ್ಥೈಸಿಕೊಳ್ಳುವುದು, ಒಬ್ಬರ ಮಾತನ್ನು ಅರ್ಥಮಾಡಿಕೊಳ್ಳುವುದು ಮತ್ತು ಏನನ್ನಾದರೂ ಓದುವ ಮೂಲಕ ಅರ್ಥಮಾಡಿಕೊಳ್ಳುವುದು. ಅದರ ಸಾಹಿತ್ಯದಿಂದ ನಮಗೆ ಬರುವ ಭಾಷಾ–ಶೈಲಿ ನಿಜವಾಗಿಯೂ ಆಕರ್ಷಕವಾಗಿರುತ್ತದೆ. ಒಂದು ಕವಿತೆ, ಕಥೆ, ನಾಟಕ ಅಥವಾ ಕಾದಂಬರಿಗಳಲ್ಲಿ ಬಳಸುವ ನಿರ್ದಿಷ್ಟ ಶೈಲಿಯನ್ನು ವಿಶ್ಲೇಷಿಸಲು ಸಾಧ್ಯವಾಗುವಂತಹ ಭಾಷಾ ಶಾಸ್ತ್ರಜ್ಞರಿಗೆ ಇದು ಯಾವಾಗಲೂ ಒಂದು ಸವಾಲು.

Notes

ಶಬ್ದದ ಮಟ್ಟದಲ್ಲಿ ಭಾಷೆಯ ಪರಿಣಾಮಕಾರಿ ವಿಶ್ಲೇಷಣೆ, ಶಬ್ದ ರಚನೆ, ವಾಕ್ಯ ರಚನೆಯು ವಿವಿಧ ಶೈಲಿಗಳಲ್ಲಿ ಸಾಹಿತ್ಯದಲ್ಲಿ ಬಳಕೆಯಾಗುವುದರ ಮೂಲಕ ಸಾಮಾನ್ಯ ಭಾಷೆಗೂ ಸಾಹಿತ್ಯದ ಭಾಷೆಗೂ ಭಿನ್ನತೆಯನ್ನು ಕಾಣಬಹುದಾಗಿದೆ. ಸರಳವಾದ ಗದ್ಯದಲ್ಲಿ ಕೆಳಗಿನವುಗಳನ್ನು ಪರಿವರ್ತಿಸಿ:

'ಕರತ್ ಕರತ್ ಅಭ್ಯಾಸ್ ಕೆ ಜಡಮತಿ ಹೋತ್ ಸುಜಾನ್' – ಇಲ್ಲಿನ ಪದಗಳ ಜೋಡಣೆ ವಿಭಿನ್ನವಾಗಿದೆ ಎಂದು ನೀವು ಗಮನಿಸಬಹುದು.

ಸಾಮಾನ್ಯ ಬಳಕೆಯ ಭಾಷೆ ಮತ್ತು ಸಾಹಿತ್ಯದ ಭಾಷೆಯ ನಡುವಿನ ವ್ಯತ್ಯಾಸಗಳನ್ನು ರೂಪಕ, ಮೆಚ್ಚುಗೆ, ಸಮಾನಾರ್ಥಕ, ಮತ್ತು ವಿಡಂಬನೆಗಳಲ್ಲಿ ಕಾಣಬಹುದು.

**ನಿಮ್ಮ ಬೆಳವಣಿಗೆ – 6 ನ್ನು ಗಮನಿಸಿ**

*1. ನಿಮಗೆ ಇಷ್ಟವಾಗುವ ಪದ್ಯವನ್ನು ಆರಿಸಿ. ಅದನ್ನು ಸರಳ ಗದ್ಯಕ್ಕೆ ಪರಿವರ್ತಿಸಿ. ಯಾವ ಬಗೆಯ ವ್ಯತ್ಯಾಸಗಳನ್ನು ನೀವು ಗಮನಿಸುವಿರಿ?*

........................................................................................................................

........................................................................................................................

........................................................................................................................

*2. ಉಪಮೆ ಮತ್ತು ರೂಪಕಗಳಿಗಿರುವ ವ್ಯತ್ಯಾಸವೇನು?*

........................................................................................................................

........................................................................................................................

........................................................................................................................

*3. ಹಿಂದಿಯಲ್ಲಿ ನೀವು ಫರ್–ಫರ್ ಎಂದು, ಹಾಗೆಯೇ ಫರ್–ವರ್ ಎಂದು ಸೂಚಿಸಬಹುದು. ಆದರೆ ಹಾಗೆಯೇ ಇಂಗ್ಲಿಷಿನಲ್ಲಿ ಹೇಳಲಾಗದು. ಫರ್–ಫರ್ ಎಂಬುದಕ್ಕೂ ಫರ್– ವರ್ ಎಂಬುದಕ್ಕೂ ಇರುವ ವ್ಯತ್ಯಾಸಗಳೇನು?*

........................................................................................................................

........................................................................................................................

........................................................................................................................

## 1.8 ಭಾಷಾ ಪ್ರಾವೀಣ್ಯತೆ

ಒಬ್ಬ ವ್ಯಕ್ತಿಯು ತನ್ನ ಭಾಷೆಯಲ್ಲಿ ಸಂಪೂರ್ಣವಾಗಿ ಪರಿಣತಿಯನ್ನು ಹೊಂದಿದ್ದಾನೆ ಎಂದು ನಾವು ಯಾವಾಗ ಹೇಳಬಹುದು? ಈ ಪ್ರಶ್ನೆಗೆ ಎರಡು ಅಂಶಗಳಿವೆ. ಒಂದು, ನಾವು ಈಗಾಗಲೇ 4 ವರ್ಷ ವಯಸ್ಸಿನ ಮಗುವು ಭಾಷೆಯಲ್ಲಿ ಸಂಪೂರ್ಣವಾಗಿ ಪ್ರವೀಣವಾಗಿದ್ದು, ಮೂಲಭೂತ ವ್ಯಾಕರಣ ಮತ್ತು ಪದಕೋಶ ಮತ್ತು ಧ್ವನಿಗಳನ್ನು ಪದಗಳಾಗಿ, ಪದಗಳನ್ನು ವಾಕ್ಯಗಳನ್ನಾಗಿ ಮಾಡುವ ನಿಯಮಗಳನ್ನು ತಿಳಿದಿದೆ ಎಂದು ತೋರಿಸಿದ್ದೇವೆ. ಮತ್ತೊಂದೆಡೆ, ನೀವು ಯಾವುದೇ ಭಾಷೆಯಲ್ಲಿ ಸಂಪೂರ್ಣವಾಗಿ ಪ್ರಬುದ್ಧರಾಗಿರುವುದಿಲ್ಲ ಏಕೆಂದರೆ, ಕಲಿಯಲು ಯಾವಾಗಲೂ ಹೊಸ ಪದಗಳು, ಹೊಸ ಅಭಿವ್ಯಕ್ತಿಗಳು ಇತ್ಯಾದಿ ಇರುವ ಸನ್ನಿವೇಶದಲ್ಲಿ , ನಿರ್ದಿಷ್ಟ ಭಾಷೆಯ ಕಲಿಕೆಯ ಸಂದರ್ಭದಲ್ಲಿ ಆಗುತ್ತಿರುವ ಸ್ವಭಾವವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ವಿಸ್ತಾರವಾಗಿ ಹೇಳುವುದಾದರೆ, ಇಲ್ಲಿ ಎರಡು ಸಂದರ್ಭಗಳಿರಬಹುದು.

**ಭಾಷೆ ಎಂದರೇನು?**

ಒಂದು ಔಪಚಾರಿಕ ಮತ್ತೊಂದು ಅನೌಪಚಾರಿಕ. ಅನೌಪಚಾರಿಕ ಸಂದರ್ಭವೆಂದರೆ ಕುಟುಂಬ, ಸ್ನೇಹಿತರು ಮತ್ತು ನೆರೆಹೊರೆಯವರ ನೈಸರ್ಗಿಕ ಸನ್ನಿವೇಶವಾಗಿದೆ. ಇದರಲ್ಲಿ ಎಲ್ಲ ಮಕ್ಕಳು ಸಾಮಾನ್ಯವಾಗಿ ತಮ್ಮ ಭಾಷೆಗಳನ್ನು ಕಲಿಯುತ್ತಾರೆ. ಈ ಸಂದರ್ಭಗಳಲ್ಲಿ ಪೋಷಕರು ಮತ್ತು ಸಂಬಂಧಿಕರಿಂದ ಯಾವುದೇ ಔಪಚಾರಿಕ ಹಸ್ತಕ್ಷೇಪವಿಲ್ಲ. ಪಾಲಕರು ಸಾಮಾನ್ಯವಾಗಿ ತಮ್ಮ ಮಕ್ಕಳ ತಪ್ಪುಗಳನ್ನು ವಾತ್ಸಲ್ಯ ಮತ್ತು ಸಂತೋಷದಿಂದ ಕಡೆಗಣಿಸುತ್ತಾರೆ. ವಿಚಿತ್ರ ವಿಷಯವೆಂದರೆ ಮಕ್ಕಳು ಶ್ರೀಮಂತತೆ ಮತ್ತು ಸಂಕೀರ್ಣತೆಯ ಸಂದರ್ಭಗಳಲ್ಲಿಯೂ ಭಾಷೆಯನ್ನು ಕಲಿಯುತ್ತಾರೆ. ಔಪಚಾರಿಕ ಸನ್ನಿವೇಶದಲ್ಲಿ ನಾವು ಶಾಲೆಗಳು, ಶಿಕ್ಷಕರು,ಸಾಮಗ್ರಿಗಳು, ಹೊಸ ತಂತ್ರಜ್ಞಾನದ ವಿಧಾನಗಳು, ರೇಡಿಯೋ, ಟಿವಿ, ಸಿಡಿ ಪ್ಲೇಯರ್ ಮತ್ತು ಭಾಷಾ ಪ್ರಯೋಗಾಲಯ ಸೇರಿದಂತೆ ಎಲ್ಲ ರೀತಿಯ ಪೂರಕ ವ್ಯವಸ್ಥೆಯನ್ನು ಪಡೆದುಕೊಳ್ಳುತ್ತೇವೆ. ಆದರೂ ಗಮನಾರ್ಹ ವಿಷಯವೆಂದರೆ, ಆಗಲೂ ಈ ಮಕ್ಕಳು ಭಾಷೆಯನ್ನು ಕಲಿಯಲು ವಿಫಲರಾಗುತ್ತಾರೆ. ನೈಸರ್ಗಿಕ ಪರಿಸರದಲ್ಲಿ ಕಿರಿಯ ವಯಸ್ಸಿನಲ್ಲಿ ಮಕ್ಕಳನ್ನು ಅನೇಕ ಭಾಷೆಗಳಿಗೆ ಒಳಪಡಿಸಿದರೆ, ಯಾವುದೇ ಪೂರಕ ವ್ಯವಸ್ಥೆಗಳಿಲ್ಲದಿದ್ದರೂ ಸುಲಭವಾಗಿ ಎಲ್ಲ ಭಾಷೆಗಳನ್ನೂ ಕಲಿಯುತ್ತಾರೆ. ನಾವು ಈ ಸಮಸ್ಯೆಗಳಿಗೆ ಘಟಕ 3ರಲ್ಲಿ ಹೆಚ್ಚಿನ ವಿವರಗಳನ್ನು ಪಡೆಯುತ್ತೇವೆ.

ಇಲ್ಲಿಯವರೆಗಿನ ವಿಷಯವು ಭಾಷಾ ಪ್ರಾವೀಣ್ಯತೆಯ ಮಾಪನಕ್ಕೆ ಸಂಬಂಧಿಸಿದುದಾಗಿದೆ. ನಾವು ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯ (ಎಲ್,ಎಸ್,ಆರ್,ಡಬ್ಲ್ಯೂ) ಕೌಶಲ್ಯಗಳನ್ನು ದೀರ್ಘಾವಧಿಯಿಂದ ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡಿದ್ದೇವೆ. ಭಾಷಾ ಪ್ರಾವೀಣ್ಯತೆಯನ್ನು ಸಂಪೂರ್ಣವಾಗಿ ಕಲಿಯುವುದರಿಂದ ಪಡೆಯಬಹುದೇ ಹೊರತು ವಿಭಿನ್ನ ಕೌಶಲಗಳಿಂದಲ್ಲ ಎಂಬುದನ್ನು ಮನಗಂಡಿದ್ದೇವೆ. ಉದಾಹರಣೆಗೆ, ನೀವು ಕೆಲವು ಸಮಸ್ಯೆಗಳೊಂದಿಗೆ ವೈದ್ಯರನ್ನು ಕರೆದರೆ ಮತ್ತು ತುರ್ತಾಗಿ ಕೆಲವು ವೈದ್ಯಕೀಯ ಸಲಹೆ ಬೇಕಾದರೆ, ನೀವು ನಿಮ್ಮ ಸಮಸ್ಯೆಯನ್ನು ವಿವರಿಸುತ್ತೀರಿ, ನೀವು ಅವರ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳುತ್ತೀರಿ ಮತ್ತು ಅವರು ಹೇಳುವ ಔಷಧಗಳ ಹೆಸರುಗಳನ್ನು ಬರೆದುಕೊಳ್ಳುತ್ತೀರಿ, ಅವುಗಳನ್ನು ಮತ್ತೊಮ್ಮೆ ಓದಿ ಹೇಳಿ ಸ್ಪಷ್ಟಪಡಿಸಿಕೊಳ್ಳುತ್ತೀರಿ. ಆದ್ದರಿಂದ ಗ್ರಹಿಕೆಯೊಂದಿಗೆ ಎಲ್ಲ ಕೌಶಲಗಳು ಮತ್ತು ಭಾಷಾ ಸಂಸ್ಕರಣೆಗಳನ್ನು ಏಕಕಾಲದಲ್ಲಿ ಬಳಸಲಾಗುತ್ತದೆ. ಈ ಬಗೆಗೆ ಘಟಕ 10ರಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಈ ಮೂಲಕ ಹೇಳುವುದೇನೆಂದರೆ, ಎಲ್ಲ ಮಕ್ಕಳು ಶಾಲೆಗೆ ಬರುವ ಮುಂಚಿತವಾಗಿಯೇ ತಮ್ಮ ಸ್ವಂತ ಭಾಷೆಗಳಲ್ಲಿ ಹೆಚ್ಚು ಸಮರ್ಥರಾಗಿರುತ್ತಾರೆ. ಶಿಕ್ಷಕರು ಮತ್ತು ಶಿಕ್ಷಣ ವ್ಯವಸ್ಥೆಯು ಮಕ್ಕಳ ಈ ಅಗಾಧ ಸಾಮರ್ಥ್ಯವನ್ನು ಪರಿಗಣಿಸುವುದು ಅತ್ಯಂತ ಮಹತ್ವದ್ದಾಗಿದೆ.

ನಿಮ್ಮ ಬೆಳವಣಿಗೆ – 7ನ್ನು ಗಮನಿಸಿ

*1. ಶಾಲೆಯ ಔಪಚಾರಿಕ ಪರಿಸರದಲ್ಲಿ ಯಾವ ಕೊರತೆ ಇದೆ?*

*1. ಶಿಕ್ಷಕರು, 2. ಪುಸ್ತಕಗಳು, 3. ಭಾಷಾ ಪ್ರಯೋಗಾಲಯ, 4.ಮನೆಯ ವಾತಾವರಣ*

*2. ಮನೆಯ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಮಗು ಹೇಗೆ ಪಡೆಯುತ್ತದೆ?*

..............................................................................................................

..............................................................................................................

..............................................................................................................

*3. ಭಾಷಾ ಪ್ರಾವೀಣ್ಯತೆಯನ್ನು ಹೇಗೆ ನಾವು ಮೌಲ್ಯಮಾಪನ ಮಾಡಬೇಕು?*

..............................................................................................................

..............................................................................................................

..............................................................................................................

Notes

Notes

## 1.9 ಕ್ರೋಡೀಕರಣ

- ಭಾಷೆಯು ಕೇವಲ ವ್ಯಾಕರಣ ಮತ್ತು ನಿಘಂಟಿನ ಜೋಡಣೆ ಅಲ್ಲ ಅಥವಾ ಕೇವಲ ಸಂವಹನ ಮಾಧ್ಯಮವಲ್ಲ. ಅದಕ್ಕಿಂತಲೂ ಹೆಚ್ಚು.
- ಭಾಷೆಯು ಮಾನವನ ರಚನಾತ್ಮಕ ಗುಣ. ಇದು ಮಾತನಾಡುವವನ ಅರ್ಹತೆಯ ಮಾನದಂಡ.
- ಭಾಷೆಯು ಸಮಾಜದ ಸದಸ್ಯರ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸುತ್ತದೆ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ಸಂಕೇತಿಸುತ್ತದೆ.
- ಜಗತ್ತಿನ ಯಾವುದೇ ಸಮಾಜದ ಒಂದು ಸಾಮಾನ್ಯ ಮಗು ನಾಲ್ಕನೇ ವಯಸ್ಸಿನಲ್ಲಿಯೇ ಭಾಷೆಯನ್ನು ತನ್ನದಾಗಿಸಿಕೊಳ್ಳುತ್ತದೆ. ತನ್ನ ಸುತ್ತಲಿನ ಭಾಷೆಗಳ ಮೂಲ ಶಬ್ದಕೋಶ ಮತ್ತು ಸ್ವರೂಪವನ್ನು ತಿಳಿದುಕೊಂಡು ನಿಖರವಾಗಿ ಅದು ಬಳಸುತ್ತದೆ.
- ಪ್ರತಿಯೊಂದು ಭಾಷೆಯು ತನ್ನದೇ ಆದ ವ್ಯಾಕರಣವನ್ನು ಹೊಂದಿದೆ ಮತ್ತು ನಿಯಮಬದ್ಧ ಧ್ವನಿಗಳು, ಪದಗಳು, ವಾಕ್ಯಗಳು, ಮತ್ತು ಸಂಭಾಷಣೆಯ ವ್ಯವಸ್ಥೆಯನ್ನು ಹೊಂದಿದೆ.
- ಭಾಷೆಯು ನಿರಂತರ ಬದಲಾವಣೆ ಹಾಗೂ ಚಲನಶೀಲತೆಯನ್ನು ಹೊಂದಿದೆ. ಹೀಗಾಗಿ ಅಜ್ಜಿಯ ಭಾಷೆಗೂ ಮೊಮ್ಮಕ್ಕಳ ಭಾಷೆಗೂ ವ್ಯತ್ಯಾಸವನ್ನು ಕಾಣಬಹುದು.
- ಪ್ರತಿ ಭಾಷೆಗೆ ತನ್ನದೇ ಆದ ವ್ಯಾಕರಣ ರಚನೆ ಇದೆ. ಭಾಷೆಗಳಲ್ಲಿ ಸ್ವರಗಳು, ವ್ಯಂಜನಗಳು, ನಾಮಪದಗಳು, ಕ್ರಿಯಾಪದಗಳು ಮತ್ತು ಗುಣವಾಚಕಗಳು ಇರುತ್ತವೆ. ಧ್ವನಿಗಳನ್ನು ಹೇಗೆಂದರೆ ಹಾಗೆ ಜೋಡಿಸಲಾಗುವುದಿಲ್ಲ. ಅವುಗಳ ಸಂಯೋಜನೆಯನ್ನು ವ್ಯಾಖ್ಯಾನಿಸುವ ನಿಯಮಗಳಿವೆ. ಹಾಗೆಯೇ ಪದಗಳನ್ನು ಹೇಗೆಂದರೆ ಹಾಗೆ ಒಟ್ಟಾಗಿ ಸೇರಿಸಲಾಗುವುದಿಲ್ಲ.
- ಭಾಷಾ ಪ್ರಮಾಣೀಕರಣ ಪ್ರಕ್ರಿಯೆಯು ಶೋಷಣೆಯ ಪ್ರಕ್ರಿಯೆಗಳೊಂದಿಗೆ ನಿಕಟವಾಗಿ ಸಂಬಂಧಿಸಿದೆ; ಅಧಿಕಾರ ಹೊಂದಿರುವವರು ಎಲ್ಲ ನಿರ್ಧಾರಗಳನ್ನು ಮಾಡುತ್ತಾರೆ.
- ಎಲ್ಲ ಮಕ್ಕಳು ಸಹಜ ಅಂತರ್ಗತ ಭಾಷಾ ಗ್ರಹಣ ಶಕ್ತಿಯೊಂದಿಗೆ, ಒಂದು ಸಮಷ್ಟಿ ವ್ಯಾಕರಣ ಶಕ್ತಿಯೊಂದಿಗೆ ಜನಿಸುತ್ತಾರೆ. ಯಾವುದೇ ಔಪಚಾರಿಕ ಬೋಧನೆಗಳಿಲ್ಲದೆಯೂ ಅವರು ಭಾಷೆಗಳನ್ನು ಕಲಿತುಕೊಳ್ಳುತ್ತಾರೆ. ಅವರಿಗೆ ಕೇವಲ ಭಾಷೆಗಳು ಮತ್ತು ಪೋಷಕ ವಾತಾವರಣದ ಅಥವಾ ಕಾಳಜಿಯ ಪರಿಸರದ ಅಗತ್ಯವಿದೆ.
- ಒಂದು ಮಗುವು ಕೇವಲ ಭಾಷಾ ಗ್ರಹಿಕೆಯ ಸಾಮರ್ಥ್ಯ ಮಾತ್ರವಲ್ಲ ಅದರ ಜೊತೆಗೆ ಸಂವಹನ ಸಾಮರ್ಥ್ಯ ಮತ್ತು ಭಾಷೆಯನ್ನು ವಿವಿಧ ಸಂದರ್ಭಗಳಲ್ಲಿ ಹೇಗೆ ಸೂಕ್ತವಾಗಿ ಬಳಸಬೇಕೆನ್ನುವ ಸಾಮರ್ಥ್ಯವನ್ನು ಪಡೆಯುತ್ತದೆ.
- ಸಾಹಿತ್ಯದ ಭಾಷೆಯು ದಿನನಿತ್ಯದ ಸಂವಹನ ಭಾಷೆಗಿಂತ ಭಿನ್ನವಾದುದು.
- ಭಾಷಾ ನಿಯೋಜನೆಯು ಸಮಗ್ರತೆಯಿಂದ ಕೂಡಿರಬೇಕೇ ಹೊರತು ಕೇವಲ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯ (ಎಲ್,ಎಸ್,ಆರ್,ಡಬ್ಲ್ಯೂ) ಕೌಶಲ್ಯಗಳ ಪ್ರತ್ಯೇಕತೆಯನ್ನು ಹೊಂದಿರಬಾರದು.

### 1.10 ಓದುವಿಕೆ ಮತ್ತು ಉಲ್ಲೇಖಗಳಿಗೆ ಸಲಹೆಗಳು


– Agnihotri, R.K. (2007) Hindi: An Essential Grammar : London: Routledge

– Aitchison,J. (1979), The Articulate Mammal: An Introduction to Psycholinguistics. London: Hutchinson & Co.

– Aitchison,J. (2003) Teach Yourself Linguistics. London: Hodder & Stoughton Ltd.,

- Pinker .S (1994) The Language Instinct. London : Allen Lane.
- Srivastava R.N (1983), Bhashaashaashatra ke sutradhaar. Delhi: National Publishing House.
- Vandopadhyay .P and Agnihotri. R.K. (2000) Bhashaa: bahubhashitaa aur Hindi. Delhi : Shilalekh
- Yule. G (2006) The Study of Language. Delhi : Cambridge University Press.




## 1.11 ಘಟಕದ ಕೊನೆಯ ಅಭ್ಯಾಸಗಳು

- ಭಾಷೆ ಮತ್ತು ಸಮಾಜ ಪರಸ್ಪರ ಪ್ರಭಾವ ಬೀರುತ್ತವೆಯೇ? ವಿವರಿಸಿ
- ಬಹುಭಾಷಿಕತೆ ಎಂದರೇನು? ನೀವು ದ್ವಿ/ಬಹುಭಾಷಿಕರೇ?
- ಭಾಷೆಯು ಧ್ವನಿ, ಪದ ಮತ್ತು ವಾಕ್ಯವ್ಯವಸ್ಥೆಯಲ್ಲಿ ಹೇಗೆ ನಿಯಮಬದ್ಧವಾಗಿದೆ? ವಿವರಿಸಿ
- ಹಿಂದಿಯಲ್ಲಿ ಕೆಲವು ನಾಮಪದಗಳಿಗೆ 'ಇ' ಸೇರಿಸುವುದರಿಂದ ಅವು ಗುಣವಾಚಕಗಳಾಗುತ್ತವೆ. ಉದಾಹರಣೆಗೆ ಸರ್ಕಾರ–ಸರ್ಕಾರಿ, ಅಪರಾಧ– ಅಪರಾಧಿ. ಹೀಗೆ ನಾಮಪದಗಳು ಗುಣವಾಚಕಗಳಾಗುವ ಇತರ ಕ್ರಮಗಳನ್ನು ವಿವರಿಸಿ.
- ಭಾಷಾ ಪ್ರಮಾಣೀಕರಣದ ಪ್ರಕ್ರಿಯೆಯಲ್ಲಿನ ಹಂತಗಳನ್ನು ವಿವರಿಸಿ.
- ಭಾಷೆಯು ಹೇಗೆ ವ್ಯಕ್ತಿ, ಸ್ಥಳ ಮತ್ತು ವಿಷಯಗಳಿಗೆ ತಕ್ಕಂತೆ ಭಿನ್ನವಾಗಿರುತ್ತದೆ ? ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.
- ಸಾಹಿತ್ಯಕ ಭಾಷೆಗೂ ದಿನನಿತ್ಯದ ಭಾಷೆಗೂ ಇರುವ ಪ್ರಮುಖ ವ್ಯತ್ಯಾಸಗಳೇನು?
- ಭಾಷಾ ಗ್ರಹಿಕೆಯ ಸಂದರ್ಭದಲ್ಲಿ ಪರಿಸರದ ಪಾತ್ರವೇನು?

## ಚಟುವಟಿಕೆ

- ಶಾಲೆಯಲ್ಲಿ ಮಕ್ಕಳು ಆಗಾಗ ತೊಂದರೆಗಳನ್ನು ಅನುಭವಿಸುತ್ತಾರೆ. ಏಕೆಂದರೆ ಅವರ ಶಿಕ್ಷಣದ ಭಾಷೆಯು ಮನೆಯ ಭಾಷೆಗಿಂತ ಭಿನ್ನವಾಗಿರುತ್ತದೆ. ಕೆಲವು ತರಗತಿಗಳಲ್ಲಿ ಗಮನಿಸಿ, ಆ ಬಗೆಯ ತೊಂದರೆಗಳನ್ನು ಪಟ್ಟಿ ಮಾಡಿ.
- ಮಕ್ಕಳು ತಮ್ಮ ನೆರೆಯ ಭಾಷೆಗಳಲ್ಲಿಯೇ ಶಿಕ್ಷಣ ಪಡೆದರೆ, ಇದೇ ಬಗೆಯ ತೊಂದರೆಗಳಾಗುವುದೇ? ಶಾಲೆಯಲ್ಲಿ ಇದನ್ನು ಗಮನಿಸಿ.
- ನಾಲ್ಕು ವರ್ಷದ ಮಗುವಿನ ಜೊತೆಗಿನ ನಿಮ್ಮ ಸಂಭಾಷಣೆಯನ್ನು ಸಂಗ್ರಹಿಸಿ/ಧ್ವನಿ ಮುದ್ರಿಸಿ. ಅದು ಹೇಗೆ ಭಾಷಾ ನಿಯಮಗಳನ್ನು, ವ್ಯಾಕರಣವನ್ನು ಪಾಲಿಸಿದೆ ಎಂಬುದನ್ನು ತೋರಿಸಿ.

Notes

# ಘಟಕ 2 ಭಾರತೀಯ ಭಾಷೆಗಳು

## ಸ್ವರೂಪ

*2.0 ಪೀಠಿಕೆ*

*2.1 ಉದ್ದೇಶಗಳ ಕಲಿಕೆ*

*2.2 ಭಾರತದಲ್ಲಿನ ಭಾಷಾವೈವಿಧ್ಯ*

*2.2.1 ಭಾರತದಲ್ಲಿನ ಭಾಷಾ ವೈವಿಧ್ಯದ ಚಿತ್ರ*

*2.2.2 ಭಾರತದ ಭಾಷಾ ಕುಟುಂಬಗಳು ಮತ್ತು ಬಹುಭಾಷಾ ಪ್ರದೇಶವಾಗಿ ಭಾರತ*

*2.3 ಭಾಷೆಯ ಬಗ್ಗೆ ಭಾರತದ ಸಂವಿಧಾನ ಏನು ಹೇಳುತ್ತದೆ*

*2.4 ಭಾರತದಲ್ಲಿ ಭಾಷೆಗಳ ವರ್ಗೀಕರಣ*

*2.4.1 ಭಾಷೆಗಳ ಪಟ್ಟಿ*

*2.4.2 ಪ್ರಾದೇಶಿಕ ಭಾಷೆಗಳು ಮತ್ತು ಮಾತೃಭಾಷೆಗಳು*

*2.4.3 ಶಾಸ್ತ್ರೀಯ ಭಾಷೆಗಳು*

*2.4.4 ಭಾಷೆ ಮತ್ತು ಉಪಭಾಷೆಯ ನಡುವೆ ವ್ಯತ್ಯಾಸವಿದೆಯೇ?*

*2.5 ಭಾರತದಲ್ಲಿ ಹಿಂದಿನ ಸ್ಥಾನಮಾನ*

*2.6 ಭಾರತದಲ್ಲಿ ಇಂಗ್ಲಿಷ್‌ನ ಸ್ಥಾನಮಾನ*

*2.7 ಭಾರತದಲ್ಲಿ ಭಾಷಾ ಶಿಕ್ಷಣ ನೀತಿ*

*ವಿವಿಧ ಸಮಿತಿ ಮತ್ತು ಕಮಿಷನ್‌ಗಳು*

*ತ್ರಿಭಾಷಾ ಸೂತ್ರ*

*ರಾಷ್ಟ್ರೀಯ ಶಿಕ್ಷಣ ರೂಪುರೇಷೆ–2005*

*2.8 ಸಾರಾಂಶ*

*2.9 ಓದಬೇಕಾದ ಪುಸ್ತಕಗಳ ಸೂಚನೆ*

*2.10 ಘಟಕದ ಕೊನೆಯ ಚಟುವಟಿಕೆಗಳು*

## 2.0 ಪೀಠಿಕೆ

ಈ ಹಾಡನ್ನು ನೀವೆಲ್ಲರೂ ಕೇಳಿರುತ್ತೀರಿ.

ಅಂಗ್ರೇಜಿ ಮೆ ಕೆಹತೆ ಹೈ– I love you
ಗುಜರಾತಿ ಮೇ ಚೋಲೆ– ತನ್ ಪ್ರೇಮ್ ಕರು ಚೂನ್

ಬೆಂಗಾಲಿ ಮೇ ಕಹತೇ ಹಿ–ಮೀ ತುಮ್‌ಕೆ ಭಾಲೋ ಭಾಷಿಯೋ
ಔರ್ ಪಂಜಾಬಿ ಮೇ ಕಹತೆ ಹೀ–ತೆರೆ ಬಿನ್ ಮರ್ ಜಾಂವಾಂ, ಮಿ ತೆನ್ನು ಪ್ಯಾರ್ ಕರ್‍ನಾ, ತೆರೆಜೈಯೋ ನಯ್ಯೋ ಲಬ್ನಾ

ಈ ತರಹದ ಹಾಡುಗಳು ವೈವಿಧ್ಯತೆಯ ಪ್ರದರ್ಶನ ಮತ್ತು ಭಾರತದ ಭಾಷಾ ಪ್ರವಾಹ. ಒಂದೇ ಪ್ರದೇಶದಲ್ಲಿ ಒಂದೇವೇಳೆಯಲ್ಲಿ ಹೆಚ್ಚುಹೆಚ್ಚು ಭಾಷೆ ಮಾತನಾಡುವವರನ್ನು ನಾವು ನೋಡಿರುತ್ತೇವೆ. ತೆಲುಗು ಕುಟುಂಬವೊಂದರ ಮದುವೆ ದೆಹಲಿಯಲ್ಲಿ ನಡೆಯುತ್ತಿದೆ ಎಂದು ಭಾವಿಸಿ, ಈ ಸಂದರ್ಭದಲ್ಲಿ ಹಿಂದಿ, ಉರ್ದು, ತೆಲುಗು, ಇಂಗ್ಲಿಷ್, ಸಂಸ್ಕೃತ ಭಾಷೆಗಳಷ್ಟನ್ನೂ ಮಾತನಾಡುವವರಿರುತ್ತಾರೆ.

ಭಾರತದಲ್ಲಿ ಎಷ್ಟು ಭಾಷೆಗಳನ್ನು ಮಾತನಾಡುತ್ತಾರೆ? ಕಡೆಯಪಕ್ಷ ನಿಮ್ಮ ಮನಸ್ಸಿನಲ್ಲಿ 15–20 ಭಾಷೆಗಳ ಹೆಸರುಗಳು ಮೂಡುವುದು. ಪಟ್ಟಿ ದೊಡ್ಡದಿದ್ದು ಅದರಲ್ಲಿನ ಪುಟ್ಟಪಟ್ಟಿ ಮಾತ್ರ ನೆನಪಿಗೆ ಬರುವುದು. 5000 ಭಾಷೆಗಳನ್ನು ಪ್ರಪಂಚದಲ್ಲಿ ಮಾತನಾಡುತ್ತಾರೆಂಬ ಕಲ್ಪನೆ ಇದೆ. ಅದರಲ್ಲಿ ಮೂರನೆ ಒಂದರಷ್ಟು ಭಾಷೆಗಳನ್ನು ಭಾರತದಲ್ಲೇ ಮಾತನಾಡುತ್ತಾರೆ. ಅಂದರೆ ಸುಮಾರು 1600 ಭಾಷೆಗಳನ್ನು ಭಾರತದಲ್ಲಿ ಮಾತನಾಡುತ್ತಾರೆ. ನಾವು ವೈವಿಧ್ಯಪೂರ್ಣ ಭಾಷಾ ಪರಂಪರೆಯನ್ನು ಕುರಿತಾಗಿ ಈ ಘಟಕದಲ್ಲಿ ಕಲಿಯುತ್ತೇವೆ.

ಸುಮಾರು 20ನೆಯ ಶತಮಾನದವರೆಗೆ, ಭಾಷಾ ವೈವಿಧ್ಯವನ್ನು ಒಂದು ಸಮಸ್ಯೆ ಎಂದು ಪರಿಗಣಿಸಿದ್ದು, ಈ ಸಮಸ್ಯೆಯ ಪರಿಹಾರಕ್ಕಾಗಿ ಹಲವು ಪ್ರಯತ್ನಗಳು ನಡೆದುವು. ಆದರೆ, ಕೆಲವು ವರ್ಷಗಳಿಂದ ಈ ಭಾಷಾ ವೈವಿಧ್ಯವನ್ನು ಭಾಷಾ ಪರಂಪರೆ ಎಂದು ಕರೆದು, ಈ ಪರಂಪರೆಯನ್ನು ಬಳಸಿಕೊಳ್ಳುವುದರ ಪ್ರಯತ್ನದಲ್ಲಿ ಸಮಾಜ ಮತ್ತು ಸ್ವತಃ ಭಾಷೆಯ ಅಭಿವೃದ್ಧಿಯು ಸಾಧ್ಯವಾಗುವುದೆಂದು ಮನಗಾಣಲಾಗಿದೆ. ಈ ವಿಷಯವಾಗಿ ದೊಡ್ಡದಾಗಿ ವಿವರವಾಗಿ ಕಲಿಯೋಣ. ಇದರೊಂದಿಗೆ ಭಾಷಾ ಶಿಕ್ಷಣ ನೀತಿಯನ್ನು ಮತ್ತು ಭಾಷೆಯ ಬಗೆಗೆ ಸಾಂವಿಧಾನಿಕ ಅಂಶಗಳನ್ನು ತಿಳಿಯೋಣ.

ಭಾರತ ಬಹುಭಾಷೆಗಳ ರಾಷ್ಟ್ರ. ಈ ಪ್ರದೇಶದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳು ಪ್ರಾಮುಖ್ಯತೆ ಪಡೆದಿವೆ. ಈ ಭಾಷೆಗಳ ಐತಿಹಾಸಿಕ ಮತ್ತು ಸಾಮಕಾಲಿಕ ಗ್ರಹಿಕೆಯ ಬಗ್ಗೆ ಅರ್ಥಮಾಡಿಕೊಳ್ಳುವುದು ಮುಖ್ಯ.

## 2.1 ಉದ್ದೇಶಗಳ ಕಲಿಕೆ

ಈ ಘಟಕದ ಓದಿನ ನಂತರ ನೀವು ಈ ಸಾಮರ್ಥ್ಯ ಹೊಂದಿರುತ್ತೀರಿ:

- ಭಾರತದಲ್ಲಿನ ಭಾಷಾ ವೈವಿದ್ಯ ಮತ್ತು ಸಂಸ್ಕೃತತೆಯನ್ನು ಅರ್ಥಮಾಡಿಕೊಳ್ಳುವುದು–
- ಭಾರತದ ಭಾಷಾ ವೈವಿಧ್ಯದ ವಿಶ್ಲೇಷಣೆ
- ಭಾರತವನ್ನು ಭಾಷಿಕ ಪ್ರದೇಶವಾಗಿ ಗುರುತಿಸುವುದು
- ಭಾರತದಲ್ಲಿನ ಭಾಷೆಗಳ ವಿಂಗಡಣೆ–ಭಾಷೆಗಳ ಪಟ್ಟಿ, ಮಾತೃಭಾಷೆಗಳು, ಶಾಸ್ತ್ರೀಯ ಭಾಷೆಗಳು, ಉಪಭಾಷೆಗಳು ಮುಂತಾದವು.
- ಭಾರತದಲ್ಲಿ ತೆಗೆದುಕೊಂಡಿರುವ ವಿವಿಧ ಭಾಷಾ ನೀತಿಗಳು
- ಇಂಗ್ಲಿಷ್ ಮತ್ತು ಹಿಂದಿಯ ಚಾರಿತ್ರಿಕ ಮತ್ತು ಸಮಕಾಲೀನ ಸ್ಥಿತಿ.

Notes

## 2.2 ಭಾಷಾ ವೈವಿಧ್ಯ

### 2.2.1 ಭಾರತದಲ್ಲಿ ಭಾಷಾ ವೈವಿಧ್ಯದ ಚಿತ್ರಣ

ನಾವು ಹಲವು ಸಾರಿ 'ವಿವಿಧತೆಯಲ್ಲಿ ಏಕತೆ' ಎಂಬ ಮಾತು ಕೇಳಿದ್ದೇವೆ. ಭಾರತದಲ್ಲಿ ಈ ಭಾವೈಕ್ಯತೆ ಸತ್ಯವಾದುದು. ಭಾರತದಲ್ಲಿ ವೈವಿಧ್ಯತೆಯ ರೀತಿಗಳನ್ನು ನೋಡಬಹುದು. ಉದಾ: ಆಹಾರ ಅಭ್ಯಾಸಗಳು ವೇಷ ಮತ್ತು ಭೂಷಣಗಳು, ಧರ್ಮ ಸಂಪ್ರದಾಯ ಮುಂತಾದುವು. ಈ ರೀತಿಯ ಹಲವು ವೈವಿಧ್ಯತೆಗಳು ಸಾಮಾನ್ಯವಾಗಿ ಪ್ರಪಂಚದ ಹಲವು ಪ್ರದೇಶಗಳಲ್ಲಿ ನೋಡಬಹುದು. ಆದರೆ, ಭಾಷಾ ವೈವಿಧ್ಯ ಭಾರತದಲ್ಲಿ ಬಿಟ್ಟರೆ ಪ್ರಪಂಚದ ಬೇರೆಡೆ ಕಾಣಲು ಸಾಧ್ಯವಿಲ್ಲ.

ಭಾರತದಲ್ಲಿ 1600 ಕ್ಕೂ ಹೆಚ್ಚು ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ಈ ಭಾಷೆಗಳು ನಾಲ್ಕು ಮುಖ್ಯ ಭಾಷಾ ಕುಟುಂಬಕ್ಕೆ ಸೇರಿದವು. ಈ ಭಾಷಾ ವೈವಿಧ್ಯತೆಯ ಕಾರಣದಿಂದಾಗಿ ಭಾರತವನ್ನು ಬಹುಭಾಷೀಯದೇಶ ಎನ್ನುವುದು. ಬಹುಭಾಷೀಯತೆ ಭಾರತದ ಮನಃಸ್ಥಿತಿಯ ಒಂದು ಅಂಗ. 1961ರ ಭಾರತದ ಭಾಷಾ ಸೆನ್ಸಸ್‌ನಿಂದ ಭಾರತದ ಬಹುಭಾಷೀಯತೆಯ ಸಂಕೀರ್ಣ ಚಿತ್ರವನ್ನು ಪಡೆಯಬಹುದು. 1652 ಮಾತೃಭಾಷೆಗಳನ್ನು ಈ ಸೆನ್ಸಸ್‌ನಲ್ಲಿ ಗುರುತಿಸಲಾಯಿತು. ಅವುಗಳನ್ನು 193 ಭಾಷಾ ಗುಂಪುಗಳಾಗಿ ವರ್ಗೀಕರಿಸಲಾಯಿತು. ಬಹುಭಾಷೀಯತೆಯು ಭಾರತದಲ್ಲಿ ಬಹುಆಯಾಮಗಳನ್ನು ಹೊಂದಿದೆ. ನಮ್ಮ ಸಂವಿಧಾನದ 8ನೆಯ ಪಟ್ಟಿಯಲ್ಲಿ 22 ಭಾಷಾ ಹೆಸರುಗಳ ಪಟ್ಟಿ ಇವೆ. ಇವು ಭಾರತದ ಪ್ರಮುಖ ಭಾಷೆಗಳೇ ಸರಿ. ಭಾರತ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಕೇವಲ 14 ಭಾಷೆಗಳ ಪಟ್ಟಿ ಇದ್ದು, 14 ರಿಂದ 22 ಕ್ಕೆ ಏರಿರುವುದು ನಮ್ಮ ಭಾಷಾ ವೈವಿಧ್ಯ ತೋರಿಸುವುದು. ಪತ್ರಿಕೆಗಳು, ಸಿನಿಮಾಗಳು, ಪುಸ್ತಕಗಳು, ಟಿ.ವಿ. ರೇಡಿಯೋ, ಶಾಲೆ, ಕಛೇರಿ ಕೋರ್ಟ್ ಮುಂತಾದುವು ಭಾಷಾ ವೈವಿಧ್ಯಕ್ಕೆ ಸಾಕ್ಷಿಯಾಗಿವೆ.

ಏಕಭಾಷಾ ಪರಿಣಿತಿ ಎಂಬುದು ಮನುಷ್ಯಕೃತ ಮತ್ತು ಬಹುಭಾಷಿಕತೆ ಸಮಸ್ಯೆ ಎಂದು ಕೆಲವರು ಭಾವಿಸುತ್ತಾರೆ. ಇದು ನಮ್ಮ ಸಂಕುಚಿತತೆಯನ್ನು ಸೂಚಿಸುತ್ತದೆ. ವೈಯಕ್ತಿಕ ಹಾಗೂ ಸಾಮಾಜಿಕ ಮಟ್ಟದಲ್ಲಿ ಬಹುಭಾಷಿತ್ವ ಭಾರತದಲ್ಲಿ ಸಮಸ್ಯೆಯೇನೂ ಇಲ್ಲ. ಅದೊಂದು ಸಂಪನ್ಮೂಲ ಮತ್ತು ಸಾಂಸ್ಕೃತಿಕ ಸಂಪದದ ಅಭಿವ್ಯಕ್ತಿ ಬಹುಭಾಷಿಕತೆ ಎಂಬುದು ಸಂಪನ್ಮೂಲ ಹೇಗೆಂದರೆ, ಒಂದು ಭಾಷೆಗಿಂತ ಹೆಚ್ಚು ಭಾಷೆ ಗೊತ್ತಿದ್ದರೆ ಅವರು ಸಮಾಜದ ಬಗ್ಗೆ ಸೂಕ್ಷ್ಮವಾಗಿ ಗಮನಿಸಿರುತ್ತಾರೆ. 'ಬಹುಭಾಷಿಕತೆಯು ಭಾಷೆಯ ಪ್ರಾವೀಣ್ಯತೆಯ ಜೊತೆಗೆ ಹತ್ತಿರದ ಸಂಬಂಧಹೊಂದಿದ್ದು, ಪಾಂಡಿತ್ಯದ ಸಾಧನೆ, ತಿಳುವಳಿಕೆ ಮತ್ತು ಸಾಮಾಜಿಕ ಸಹಿಷ್ಣುತೆಯನ್ನು ಹೊಂದಿರುತ್ತದೆ'. (ಅಗ್ನಿಹೋತ್ರಿ 2007, ಪು –4)

ಬಹುಭಾಷಿಕತೆಯು ಸಮಸ್ಯೆಯಲ್ಲ ಅದೊಂದು ಭಾರತದ ಬಲ. 'ಬಹುಭಾಷೆಯನ್ನು ಒಪ್ಪಿಕೊಳ್ಳುವುದು ಮನುಷ್ಯ ಸಹಜ ಮತ್ತು ಸಮುದಾಯಕ್ಕೆ ಒಪ್ಪಿತವಾದುದು ಮತ್ತು ಕೋಲು–ಕೊಡು ನೀತಿಯು ರಾಷ್ಟ್ರೀಯ, ಅಂತರಾಷ್ಟ್ರೀಯ ನೆಲೆಯಲ್ಲಿ ಒಪ್ಪಿತವಾದುದು. ತನ್ನ ತಂದೆ–ತಾಯಿಗಳ ಜೊತೆ ಭೋಜಪುರಿಯಲ್ಲಿ, ಸ್ನೇಹಿತರ ಜೊತೆ ಹಿಂದಿಯಲ್ಲಿ, ಕಾಲೇಜು ಸ್ನೇಹಿತರ ಜೊತೆ ಹಿಂದಿ ಅಥವಾ ಇಂಗ್ಲಿಷಿನಲ್ಲಿ ವ್ಯವಹರಿಸುವ ಹುಡುಗರನ್ನು ನೋಡಿರುತ್ತೇವೆ. ಹೀಗೆ ಹಲವು ಸಂದರ್ಭಗಳಲ್ಲಿ ಎರಡು ಅಥವಾ ಹೆಚ್ಚು ಭಾಷೆಗಳನ್ನು ಪರಸ್ಪರ ನಾವೆಲ್ಲರೂ ಹಂಚಿಕೊಳ್ಳುತ್ತೇವೆ. ಹೀಗಾಗಿ ಭಾಷಾ ಪ್ರಕ್ರಿಯೆಯು ಸಂಪದ್ಭರಿತವಾಗುವುದು". (ಅಗ್ನಿಹೋತ್ರಿ 2000, ಪು–36).

ಈ ವಿಷಯವಾಗಿ ಸುಬ್ಬಾರಾವ್ ಅವರು "ಭಾರತೀಯ ಭಾಷೆಗಳ ಶ್ರೇಷ್ಠ ಮುಖವು ಒಂದು ಭಾಷೆಗಿಂತ ಮತ್ತೊಂದಕ್ಕೆ ಬದಲಾಗುವುದು ಹಾಗೂ ಬಹುಹೋಲಿಕೆಗಳನ್ನು ಹಂಚುವುದು. ಪಾಶ್ಚಿಮಾತ್ಯ ರಾಷ್ಟ್ರಗಳು ಸಾಮಾನ್ಯವಾಗಿ ಏಕಭಾಷೆಯನ್ನು ಹೊಂದಿರುವುದು. ಹಲವು ಪಾಶ್ಚಿಮಾತ್ಯ ರಾಷ್ಟ್ರಗಳು ಸಾಮಾನ್ಯವಾಗಿ ಏಕಭಾಷೆಯನ್ನು ಹೊಂದಿರುವುದು. ಹಲವು ಪಾಶ್ಚಾತ್ಯ ಭಾಷಾತಜ್ಞರು ಬಹುಭಾಷೆಗಳನ್ನು ಮಾತನಾಡಿದಾಗ ಒಂದೇ ಪ್ರದೇಶದ ಜನರಲ್ಲಿ ಪರಸ್ಪರರನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುವುದು ಎಂದು ಭಾವಿಸುತ್ತಾರೆ.

Notes

ಆದರೆ, ಅಂತಹ ಸಮಸ್ಯೆ ಏನೂ ಉಂಟಾಗದು. ಪ್ರತಿ ಭಾರತೀಯ ವಿದ್ಯಾವಂತ ತನ್ನ ಮಾತೃಭಾಷೆಯ ಜೊತೆಗೆ ಒಂದು ಅಥವಾ ಎರಡು ಭಾಷೆಗಳನ್ನು ಬಲ್ಲವನಾಗಿರುತ್ತಾನೆ. ಅವನು/ಅವಳು ತನ್ನ ದೈನಂದಿನ ವ್ಯವಹಾರದಲ್ಲಿ ಬಹುಭಾಷೆಗಳನ್ನು ಬಳಸುವರು. ದೆಹಲಿ, ಕಲ್ಕತ್ತಾ, ಮುಂಬೈ ನಗರ ಪ್ರದೇಶಗಳಲ್ಲೂ ಭಾಷಾ ಭೇದಗಳನ್ನು ನಾವು ಕಾಣುವುದಿಲ್ಲ. ಕೂಲಿಯಾಗಿರಬಹುದು, ವ್ಯಾಪಾರಿಯಾಗಿರಬಹುದು, ಕಾರಖಾನ ಅಥವಾ ಅಧಿಕಾರಿ ಯಾರ ಕೆಲಸವು ಭಾಷೆಯ ಕಾರಣದಿಂದ ನಿಲ್ಲುವುದಿಲ್ಲ". (ಸುಬ್ಬಾರಾವ್, 2000, ಪು – 41)

ಈ ಎರಡೂ ಉದಾಹರಣೆಗಳಿಂದ ಭಾಷಾ ವೈವಿಧ್ಯತೆಯಿಂದ ಸಮಸ್ಯೆಯಾಗಲೀ, ಹಿಂಜರಿತವಾಗಲೀ ಆಗುವುದಿಲ್ಲ. ಅದು ನಮ್ಮ ಸಂಪದ್ಭರಿತತೆಯ ದ್ಯೋತಕವೆಂದು ಅಂಶವು ಸ್ಪಷ್ಟವಾಗಿದೆ.

ಬಹುಭಾಷಿಕತೆ ಅಥವಾ ಏಕಭಾಷಯು ಇರುವ ಯಾವುದೇ ದೇಶದಲ್ಲಿ ಸಂಸ್ಕೃತಿ ಮತ್ತು ಆಚರಣೆ ಭಾಷಾ ವೈವಿಧ್ಯತೆಯ್ಲಿ ಮುಖ್ಯಪಾತ್ರ ವಹಿಸುವುದು. ಬೇರೆಬೇರೆ ಖಂಡಗಳಿಂದ ಬಂದು ನೆಲೆಯೂರಿ ಅಮೇರಿಕಾ ದೇಶ ರೂಪುಗೊಂಡಿದ್ದರೂ ಅಲ್ಲಿ ಒಂದೇ ಭಾಷೆಯನ್ನಾಡುವರು. ಅಮೇರಿಕಾದ ಸಂವಿಧಾನವು ಇಂಗ್ಲಿಷ್ ಭಾಷೆ ಬರುವ ಪ್ರತಿಯೊಬ್ಬ ವ್ಯಕ್ತಿಯು ಅಮೇರಿಕಾದ ನಾಗರೀಕನಾಗಲು ಯೋಗ್ಯ ಎನ್ನುವುದು. ಇಂಗ್ಲಿಷ್ ಬಿಟ್ಟು ಮಾತನಾಡುವ ಮಕ್ಕಳಿಗೆ ಇಲ್ಲಿ ಸೌಲಭ್ಯಗಳು ಕಡಿಮೆ. ಏಕೆಂದರೆ ಅಮೇರಿಕಾದ ಮೂರನೆಯ ಪೀಳಿಗೆಗೆ ತನ್ನ ಯಾವುದೇ ಮಾತೃಭಾಷೆಯ ಅರಿವು ಇರುವುದಿಲ್ಲ. ಆದರೆ ಅಮೇರಿಕಾಕ್ಕಿಂತ ಬೇರೆಯದೇ ಆದ ಪರಿಸ್ಥಿತಿ ಭಾರತದ್ದು. ಭಾರತದ ವಿಭಜನೆಯಾದ ಮೇಲೆ ಸಿಂಧಿ ಮಾತನಾಡುವ ಜನತೆ ಭಾರತದಲ್ಲಿ ಉಳಿದರು. 2001 ರ ಸೆನ್ಸಸ್ ಪ್ರಕಾರ ಭಾರತದಲ್ಲಿ ಇಂದು 2,535,485 ಜನರು ಸಿಂಧಿ ಮಾತನಾಡುತ್ತಾರೆ. ಹಾಗೆಯೇ 77,395 ಭಾರತೀಯ ನಾಗರೀಕರು ಟಿಬೇಟಿಯನ್ ಭಾಷೆಯನ್ನು, 10,504 ಭಾರತೀಯರು ಪಾರ್ಸಿ, 1106 ಜನರು ಪಾಸ್ತೋ ಮತ್ತು 51728 ಜನರು ಅರೇಬಿಕ್ ಮಾತನಾಡುತ್ತಾರೆ. 2,593 ಪಾಂಡಿಚೆರಿ ಭಾರತೀಯರು ಫ್ರೆಂಚ್ ಮಾತನಾಡುತ್ತಾರೆ. ಬರ್ಮಾ, ಹೀಬ್ರೂ, ಲ್ಯಾಟಿನ್ ಮುಂತಾದ ಭಾಷೆಗಳನ್ನಾಡುವ ಭಾರತೀಯರೂ ಇದ್ದಾರೆ. ಪ್ರತಿಯೊಬ್ಬರೂ ಕಡೆಯಪಕ್ಷ ಎರಡು ಭಾಷೆಗಳನ್ನಾಡುವವರು ಎಂಬುದನ್ನು ಮುಖ್ಯವಾಗಿ ಗಮನಿಸಬೇಕು (ಸಿನ್ಹಾ, 2000, ಪು–64)

ವಿವಿಧ ಭಾಷೆಗಳ ಬಗೆಗಿನ ನಮ್ಮ ಮನಸ್ಥಿತಿಯು ಬಹುಭಾಷಿಕತೆ ಅಥವಾ ಭಾಷಾ ವೈವಿಧ್ಯತೆಯ ಮೇಲೆ ಪರಿಣಾಮ ಬೀರುವುದು. ಬಹುಭಾಷಿಕತೆಯ ಮೇಲೆ ಆಶಾಭಾವನೆ ಇದ್ದಾಗ ಅಂತಹ ಪರಿಸರದಲ್ಲಿರುವ ಎಲ್ಲಾ ಭಾಷೆಗಳ ಅಸ್ತಿತ್ವ ಹಾಗೂ ಬೆಳವಣಿಗೆ ಸಾಧ್ಯ. ಅದಕ್ಕೆ ಬದಲಾಗಿ ಅಸಹಿಷ್ಣುತೆ, ಸಂಕುಚಿತ ಆಲೋಚನೆಗಳಿದ್ದರೆ ಭಾಷೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುವುದು.

ಉದಾ: ಭಾರತದಲ್ಲಿ ಬಹುಭಾಷಿಕತೆ ಬಗ್ಗೆ ಆಶಾಭಾವನೆ ಹಾಗೂ ನಿರಾಶಾದಾಯಕ ಆಲೋಚನೆಗಳೆರಡನ್ನು ಕಾಣಬಹುದು.ಉದಾ: 21 ಉಪಜಾತಿಗಳಿರುವ ನಾಗ ಸಮುದಾಯದಲ್ಲಿ ಅಷ್ಟೇ ಪ್ರಮಾಣದ ಭಾಷೆಗಳನ್ನಾಡುತ್ತಾರೆ. ಈ ಉಪಗುಂಪುಗಳು ತನ್ನ ಗುಂಪಿನ ಸದಸ್ಯರ ಜೊತೆ ಸಂವಹನ ನಡೆಸುವಾಗ ತಮ್ಮದೇ ಆದ ಮಾತೃಭಾಷೆ ಬಳಸುತ್ತಾರೆ. ಒಂದು ಉಪಗುಂಪು ಇನ್ನೊಂದು ಉಪಗುಂಪಿನ ಜೊತೆ ಸಂವಹನ ನಡೆಸುವಾಗ ಅವರು ನಾಗಮೀಜ್ ಭಾಷೆ ಬಳಸುತ್ತಾರೆ. ಅಂದರೆ, ತಮ್ಮ ಸಮುದಾಯದಿಂದ ಆಚೆಗೆ ಮಾತನಾಡುವಾಗ (ಅಂದರೆ ನಾಗಾಲ್ಯಾಂಡ್ ಮತ್ತು ಮಣಿಪುರ ಬಿಟ್ಟು ಹೊರಗಿನ) ಹಿಂದಿ, ಇಂಗ್ಲಿಷ್ ಬಳಸುತ್ತಾರೆ. ಇದು ನಾಗ ಜನತೆಯ ಭಾಷಾ ವೈವಿಧ್ಯದ ಬಗೆಗಿನ ಆಶಾವಾದವನ್ನು ಹೇಳುತ್ತದೆ ಮತ್ತು ಹೀಗಾಗಿ ಅವರು ಬಹುಭಾಷಿಗಳು. ಗೋವಾದ ವಾಸಿಗಳು ಮರಾಠಿ ಮತ್ತು ಕೊಂಕಣಿಯ ಅಸ್ತಿತ್ವಕ್ಕಾಗಿ ಬಡಿದಾಡುವರು, ಹಾಗೆಯೇ ಬೆಳಗಾವಿಯವರು ಕನ್ನಡ ಮತ್ತು ಮರಾಠಿಯ ಅಸ್ತಿತ್ವಕ್ಕೆ ಹೋರಾಡುವರು. (ಸಿನ್ಹಾ, 2000 ಪು–65–66)

Notes

ಕೊನೆಯದಾಗಿ ಹೇಳುವುದೇನೆಂದರೆ, ಭಾರತವು ಬಹುಭಾಷಾ ವೈವಿಧ್ಯವಿರುವ ಮತ್ತು ಆ ಬಹುಭಾಷೆಯನ್ನು ಸಮಸ್ಯೆ ಎಂದು ಪರಿಗಣಿಸದೆ ಒಂದು ಶಕ್ತಿ ಸಂಚಯ ಎಂದು ಭಾವಿಸಿದೆ. ಆ ಶಕ್ತಿಯನ್ನು ಊರ್ಜಿತಗೊಳಿಸಿಕೊಳ್ಳಲು ಮುಕ್ತ ಮನೋಸ್ಥಿತಿ ಬೇಕು. ಸಂಕುಚಿತ ಮನಃಸ್ಥಿತಿ ಅಪಾಯ ತರುವುದು. ಹಾಗಾಗಿ ನಾವು ಆರೋಗ್ಯಕರ ಹಾಗೂ ಆಶಾದಾಯಕ ಮನಃಸ್ಥಿತಿಯನ್ನು ಭಷೆಯನ್ನು ಕುರಿತಾಗಿ ಹೊಂದಿದ್ದೇವೆ.

## 2.2.2 ಭಾರತದ ಭಾಷಾ ಕುಟುಂಬಗಳು ಮತ್ತು ಭಾಷಾ ಪ್ರದೇಶವಾಗಿ ಭಾರತ

ಭಾರತದಲ್ಲಿ ವೈವಿಧ್ಯಪೂರ್ಣ ಭಾಷೆಗಳಿರುವುದನ್ನು ನೋಡಿದ್ದೇವೆ. ಇಲ್ಲಿ ಕೆಲವು ಭಾಷೆಗಳಲ್ಲಿ ಸಾಮಾನ್ಯ ಲಕ್ಷಣಗಳಿದ್ದು ಕೆಲವು ಭಿನ್ನತೆ ಹೊಂದಿವೆ. ಸಾಮಾನ್ಯವಾಗಿ ಸಾಮಾನ್ಯ ಲಕ್ಷಣಗಳಿರುವ ಭಾಷೆಗಳನ್ನು ಸೇರಿಸಿ ಭಾಷಾ ಕುಟುಂಬ ಎಂದು ಪರಿಗಣಿಸುವುದು.

ಭಾರತವು ಬಹುಭಾಷೆಗಳನ್ನು ಹೊಂದಿರುವುದಲ್ಲದೆ, ಬಹುಭಾಷಾ ಕುಟುಂಬಗಳನ್ನೂ ಹೊಂದಿದೆ. ಭಾರತದಲ್ಲಿ ನಾಲ್ಕು ಭಾಷಾ ಕುಟುಂಬಗಳಿವೆ–

1. ಇಂಡೋ ಆರ್ಯನ್
2. ದ್ರಾವಿಡಿಯನ್
3. ಟಿಬೇಟೊ –ಬರ್ಮನ್
4. ಆಸ್ಟ್ರೋ ಏಷಿಯನ್/ ಮುಂಡಾ

ಈ ಪ್ರತಿಯೊಂದು ಭಾಷಾ ಕುಟುಂಬದ ಭಾಷಾ ಲಕ್ಷಣಗಳನ್ನು ಹೀಗೆ ಕೊಡಲಾಗಿದೆ.

ಇಂಡೋ ಆರ್ಯನ್: ಹಿಂದಿ, ಉರ್ದು, ಬಂಗಾಲಿ, ಅಸ್ಸಾಮಿ, ಸಂಸ್ಕೃತ, ಪಂಜಾಬಿ, ಗುಜರಾತ್, ಮರಾಠಿ, ಕೊಂಕಣಿ, ನೇಪಾಳಿ, ಒರಿಯಾ, ಕಾಶ್ಮೀರಿ ಮುಂತಾದವು.

ದ್ರವಿಡಿಯನ್: ತಮಿಳು, ತೆಲುಗು, ಕನ್ನಡ, ಮಲಯಾಳಂ ಮುಂತಾದವು

ಟಿಬೆಟೋ–ಬರ್ಮನ್: ಮಣಿಪುರಿ, ಅಂಗಾಮಿ, ಜೋಡೋ, ಗರೋ, ತ್ರಿಪುರಿ, ತಾಂಗ್ಸ್, ಮಿಜೋ.

ಮಂಡಾ: ಮುಂಡಾ, ಮುಂಡಾರಿ, ಹೋ, ಸಂತಾಲಿ, ಸವಾರ ಮುಂತಾದವು.

ಇಷ್ಟೆಲ್ಲಾ ಭಾಷಾ ವೈವಿದ್ಯ ಮತ್ತು ಭಾಷಾ ಕುಟುಂಬ ವೈವಿಧ್ಯ ಹೊಂದಿದ್ದೂ ಕೂಡ ಭಾರತವು ಒಂದು ಭಾಷಾ ಪ್ರಾಂತವೆಂದೇ ಪರಿಗಣಿತವಾಗಿದೆ. ಈ ನಾಲ್ಕೂ ಭಾಷಾ ಕುಟುಂಬಗಳ ಭಾಷೆಗಳನ್ನು ಮಾತನಾಡುವ ಜನರು ಸಾವಿರಾರು ವರ್ಷಗಳಿಂದ ಭಾರತದಲ್ಲಿ ಒಟ್ಟಾಗಿ ಬಾಳುತ್ತಿದ್ದಾರೆ ಎಂಬುದು ಒಂದು ಪ್ರಶಂಸಾರ್ಹ ವಿಷಯ. ಹೀಗೆ ಭಾಷೆಯ ಕೊಳು–ಕೊಡು ನಡೆದು ಬರುತ್ತಿದೆ. ಆ ಕಾರಣದಿಂದ ಭಾಷೆಯಲ್ಲಿ ರಚನಾತ್ಮಕ ಬೆಳವಣಿಗೆಯು ಕಾಲದಿಂದ ಕಾಲಕ್ಕೆ ನಡೆಯುತ್ತಲೇ ಬಂದಿದೆ. ಭಾರತೀಯ ಭಾಷೆಗಳ ಬಗ್ಗೆ ಮಾತನಾಡುತ್ತಾ ಸುಬ್ಬರಾವ್ ಅವರು "ಹಲವು ಭಾಷಾ ಕುಟುಂಬಗಳ ಭಾಷೆಗಳನ್ನಾಡುವ ಮಂದಿ ಒಂದೆಡೆ ಸಾವಿರಾರು ವರ್ಷಗಳಿಂದ ಒಟ್ಟಾಗಿ ಜೀವಿಸುತ್ತಿದ್ದಾರೆಂದರೆ, ಒಂದು ಭಾಷೆಯ ಮೇಲೆ ಇನ್ನೊಂದರ ಪ್ರಭಾವ ಮತ್ತು ಕೊಳು–ಕೊಡೆಗಳು ಸಾವಿರಾಗು ವರ್ಷಗಳಿಂದ ನಡೆಯುತ್ತಲೇ ಬಂದಿದೆ. ಈ ಪರಸ್ಪರರ ನಡುವಣ ಹಂಚಿಕೆಯು ಒಂದು ಹೊಸ ರಚನಾತ್ಮಕ ಲಕ್ಷಣವುಳ್ಳ ಭಾಷಿಕತೆ ಅನುವು ಮಾಡಿಕೊಡುತ್ತದೆ" ಎನ್ನುತ್ತಾರೆ. ಆ ರೀತಿಯ ಕವಲವು ಉದಾ:

Notes

1) ಎಕೋವರ್ಡ್ಸ್: ಈತರಹದ ಶಬ್ದಗಳು ಎಲ್ಲಾ ಭಾರತೀಯ ಭಾಷೆಗಳಲ್ಲೂ ಇವೆ. ಎರಡನೇ ಶಬ್ದ ಜಥಣಡಿಚ ತಿಂಡಿಜ ಮತ್ತು ಅದಕ್ಕೆ ಅರ್ಥವಿಲ್ಲ. ಉದಾ: ಹಿಂದಿಯ ಅಚಿಚಿಥಿ–ಗಿಚಿಚಿಥಿ–ಗಿಚಿಚಿಥಿ ಎನ್ನುವ ಎರಡನೆಯ ಶಬ್ದಕ್ಕೆ ಅರ್ಥವಿಲ್ಲ. ಆದರೆ ಚಹಾದ ಜೊತೆ ಸೇವಿಸುವ ಇನ್ನೊಂದು ವಸ್ತು ಎಂದರ್ಥ.

| *Hindi* | *Oriya* | *Telugu* |
|---|---|---|
| khaanaa-vaanaa | baagho-faago | duulii-gilli |
| paanii-vaanii | cobulai-faabulai | daag-vaagh |
| caay-vaay | caaval-vaaval | any-giny |

2) Reduplicated words: ನಾಮಪದ, ವಿಶೇಷಣ, ಕ್ರಿಯಾ ವಿಶೇಷಣ ಮುಂತಾದವು. ಎಲ್ಲಾ ಭಾರತೀಯ ಭಾಷೆಗಳಲ್ಲಿವೆ. ನಾಮಪದಗಳು ಮತ್ತೆಮತ್ತೆ ಪುನರಾವರ್ತಿತ ವಾಗುತ್ತವೆ. ಉದಾ: ghar-ghar in Hindi means 'every house'.

**Nouns:**

| *Hindi* | *Telugu* | *Oriya* |
|---|---|---|
| ghar-ghar | dhaure-dhaure | ishTi-ishTi |
| pannaa-pannaa | prishThaa-prishThaa | peji-peji |

**Adjectives:**

| | | |
|---|---|---|
| dhiire-dhiire | dhiire-dhire | nemdi-nemdi ga |
| aahiste-aahiste | aaste-aaste | mella-mellaga |

**Pronouns:**

| | | |
|---|---|---|
| apnaa-apnaa | nijau-nijau | tanaa-tanaa |

3) ಎಲ್ಲಾ ಭಾರತೀಯ ಭಾಷೆಗಳಲ್ಲಿ ನಾಮಪದಗಳ ಮುಂದೆ ಸರ್ವನಾಮಗಳು ಬರುತ್ತವೆ. ಉದಾ: On the table, ಬದಲಿಗೆ, ಹಿಂದಿಯಲ್ಲಿ ಮೆಜ್‌ಪರ್ ಎಂದಾಗುತ್ತದೆ. ಉದಾಹರಣೆಗಳು:

Hindi: raam kaa,

ghar meN

Tamil: raamod (raam kaa)

Raamkku (raam ko)

Mundari: HoRaa re (ghar me)

Notes

4) ಶಾಬ್ದಿಕ ಮಟ್ಟದಲ್ಲಿ ಹಿಂದಕ್ಕೆ ತಿರುಗಿದಂತಹ ಶಬ್ದಗಳು: (Retroflex sounds) ಟ ವರ್ಗದ ಟಠಡಢ ಮುಂತಾದವು. ಏಟಿರ ಪದದಲ್ಲಿ ಬರುವ ಅನುನಾಸಿಕ ಅಕ್ಷರದ ಶಬ್ದ ಹೊರಡುವುದಿಲ್ಲ.

ಮೇಲೆ ಕೊಟ್ಟಿರುವ ಭಾಷೆಗಳ ಪಟ್ಟಿಯಲ್ಲಿ, ಹಿಂದಿ ಮತ್ತು ಉರ್ದು ಭಾಷೆಗಳನ್ನು ಪ್ರತ್ಯೇಕವಾಗಿ ಹೆಸರಿಸಿದ್ದರೂ, ಹಿಂದಿಯನ್ನು ದೇವನಾಗಿರಿ ಲಿಪಿಯಲ್ಲಿಯೂ, ಉರ್ದುವನ್ನು ಪರ್ಷಿಯಾ–ಅರೇಬಿಯ ಲಿಪಿಯಲ್ಲಿಯೂ ಬರೆಯಲಾಗುವುದು. ಆದರೂ ಕೂಡ ಅವೆರಡೂ ಒಚಿದೇ ಭಾಷಾ ರಚನೆಯನ್ನು ಹೊಂದಿವೆ ಮತ್ತು ಭಾರತ ಇಬ್ಭಾಗವಾಗುವುದಕ್ಕೆ ಮುಂಚೆ ಎರಡನ್ನೂ ಹಿಂದುಸ್ತಾನದ ಭಾಷೆ ಎನ್ನಲಾಗುತ್ತಿತ್ತು.

**ನಿಮ್ಮ ಪ್ರಗತಿ ಗಮನಿಸಿ – 1**

1. ಭಾರತದಲ್ಲಿ ಎಷ್ಟು ಭಾಷಾ ಕುಟುಂಬಗಳಿವೆ?

   ಅ) 3 ಆ) 4

   ಇ) 5 ಈ) 6

2. ಪರಸ್ಪರ ಭಾಷಾ ಕುಟುಂಬಗಳ ನಡುವೆ ನಡೆಯುವ ಕೊಳುಕೊಡೆಯಿಂದ ಆಗಿರುವ ಭಾಷಾತ್ಮಕ ಲಕ್ಷಣಗಳಲ್ಲಿನ ಬದಲಾವಣೆಗಳನ್ನು ಗುರುತಿಸಿ.

   ........................................................................................................................

   ........................................................................................................................

   ........................................................................................................................

3. ಕೆಲವು ದಿನಗಳ ಹಿಂದ ಯಾವುದೋ ರಾಜಕೀಯ ಪಕ್ಷ ಮರಾಠಿ ಮಾತನಾಡದ ವ್ಯಕ್ತಿಯನ್ನು, ಮಹಾರಾಷ್ಟ್ರದಲ್ಲಿ ಕೊಂದಿತು. ಈ ಸಂದರ್ಭದಲ್ಲಿ ನೀವು ಎಂತ ಭಾಷಾ ವೈವಿಧ್ಯತೆಯನ್ನು ಗುರುತಿಸುತ್ತೀರಿ? ಇದು ನಮ್ಮ ಭಾಷಾ ಸಂಪತ್ತಿನ ಮೇಲೆ ಆತಂಕಕಾರಿ ನಡೆಯಲ್ಲವೇ? ನಿಮ್ಮ ಅಭಿಪ್ರಾಯ ತಿಳಿಸಿ.

   ........................................................................................................................

   ........................................................................................................................

   ........................................................................................................................

4. ಹಿಂದೂಸ್ಥಾನಿ, ಹಿಂದಿ, ಉರ್ದು ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

   ........................................................................................................................

   ........................................................................................................................

   ........................................................................................................................

## 2.3 ಭಾರತೀಯ ಸಂವಿಧಾನವು ಭಾಷೆಯ ಬಗ್ಗೆ ಏನು ಹೇಳುತ್ತದೆ

ದೇಶಕ್ಕೆ ಭಾಷಾ ವಿಷಯವು ತುಂಬಾ ಮುಖ್ಯ ಎಂಬ ಅಭಿಪ್ರಾಯವನ್ನು ಸಂವಿಧಾನವು ಇಟ್ಟುಕೊಂಡಿದ್ದು, ಸಂವಿಧಾನದ ಪರಿಚ್ಛೇದ 17 ರಲ್ಲಿ ಭಾಷೆಗೆ ಹಲವು ಸವಲತ್ತುಗಳನ್ನು ಹಲವು ಚರ್ಚೆಗಳ ಸಮಾಲೋಚನೆಗಳ ನಂತರ ನೀಡಿದೆ.

ಭಾರತದ ಬಹುಭಾಷಿಕತೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಸಂವಿಧಾನದಲ್ಲಿ ಒಂದು ಅಥವಾ ಎರಡು ಭಾಷೆಗೆ ಮಾತ್ರ ಮಾನ್ಯತೆ ಕೊಡದೆ, ಬಹಳ ಭಾಷೆಗೆ ಮಾನ್ಯತೆ ಕೊಡಲಾಗಿದೆ.

ಸಂವಿಧಾನದ ಪರಿಚ್ಛೇದ 343 ರ ಪ್ರಕಾರ ಹಿಂದಿಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಲು, ಆಡಳಿತಾತ್ಮಕ ಭಾಷೆ ಎಂದು ಅದಕ್ಕೆ ಸಹಕಾರಿಯಾಗುವಂತೆ ಇಂಗ್ಲಿಷ್‌ನ್ನು ನಿರ್ಧರಿಸಿದೆ. ಮೊದಲಿಗೆ ಇಂಗ್ಲಿಷಿಗೆ ಈ ಒಂದು ಸ್ಥಾನ ನೀಡಲಾಗಿತ್ತು. ಆದರೆ, 1963 ರಲ್ಲಿ ಶಾಶ್ವತವಾಗಿ ಆಡಳಿತಾತ್ಮಕ ಭಾಷಾ ಕಾಯ್ದೆಯಂತೆ ಸಹಕಾರಿ ಭಾಷೆಯಾಗಿ ತೀರ್ಮಾನಿಸಲಾಯಿತು. ಪರಿಚ್ಛೇದ 345 ಪ್ರತಿರಾಜ್ಯಕ್ಕೂ ಕಾನೂನುಬದ್ಧವಾಗಿ ಹಿಂದಿಯನ್ನು ಆಡಳಿತ ಭಾಷೆಯಾಗಿ ಸ್ವೀಕರಿಸುವುದರ ಜೊತೆಗೆ ಒಂದು ಅಥವಾ ಎರಡು ಪ್ರಾದೇಶಿಕ ಭಾಷೆಗಳನ್ನು ಸ್ವೀಕರಿಸುವುಂತೆ ಹೇಳಿತು. ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ, ರಾಜಸ್ಥಾನ, ಹರ್ಯಾಣ, ಹಿಮಾಚಲಪ್ರದೇಶ, ದೆಹಲಿಯ ಆಡಳಿತ ಭಾಷೆಯಾಗಿ ಹಿಂದಿಯನ್ನು ಅಧಿಕೃತವೆಂದು ಘೋಷಿಸಲಾಯಿತು. ಪಂಜಾಬಿನಲ್ಲಿ ಪಂಜಾಬಿ, ಮಹಾರಾಷ್ಟ್ರದಲ್ಲಿ ಮರಾಠಿ ಮತ್ತು ಗುಜರಾತಿ ಹಾಗೂ ಹಿಂದಿಯು ಗುಜರಾತಿನಲ್ಲಿ, ತಮಿಳು, ತೆಲುಗು, ಕನ್ನಡ, ಮಲಯಾಳಂ, ಒರಿಯಾ, ಅಸ್ಸಾಮಿ, ಬೆಂಗಾಲಿ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಕೇರಳ, ಒರಿಸ್ಸಾ, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಕ್ರಮವಾಗಿ ಅಧಿಕೃತ ಭಾಷೆಯೆಂದು ಘೋಷಿಸಿತು. ಸಿಕ್ಕಿಂ, ನೇಪಾಳಿ, ನೆಪ್ಪಾ, ಬೂತಿಯ ಎಂದಿತು. ನಾಗಾಲ್ಯಾಂಡಿನಲ್ಲಿ ಇಂಗ್ಲಿಷ್ ಎಂದು ಘೋಷಿಸಲಾಯಿತು. ಅರುಣಾಚಲಪ್ರದೇಶ, ಮಿಜೋರಾಂ, ಮೇಘಾಲಯ ಯಾವುದೇ ಪ್ರಾದೇಶಿಕ ಭಾಷೆಯನ್ನು ತೆಗೆದುಕೊಳ್ಳದೆ ಇಂಗ್ಲಿಷ್‌ನ್ನೇ ಅಧಿಕೃತ ಭಾಷೆಯೆಂದು ಸ್ವೀಕರಿಸಿತು. ಕೇಂದ್ರಸ್ಥಾನಗಳಾದ ಚಂಢೀಗಡ, ಅಂಡಮಾನ್ ನಿಕೋಬಾರ್ ದ್ವೀಪ, ಡಿಯು–ಡಾಮನ್, ಪಾಂಡಿಚೆರಿ ತಮಿಳನ್ನು ಅಧಿಕೃತ ಭಾಷೆಯಾಗಿಸಿಕೊಂಡಿತು.

ರಾಷ್ಟ್ರೀಯ ಭಾಷೆಯ ಸಮಸ್ಯೆ ಬಹುಮುಖ್ಯವಾದುದು. ಹಿಂದಿಯುನನು ರಾಷ್ಟ್ರ ಭಾಷೆಯೆಂದು ಹಲವರು ಯೋಚಿಸುತ್ತಾರೆ. ಆದರೆ, ಭಾರತೀಯ ಸಂವಿಧಾನವು ಮಾತ್ರ ಯಾವುದೇ ರಾಷ್ಟ್ರ ಭಾಷೆಯ ಅಸ್ತಿತ್ವಕ್ಕೆ ಪ್ರಾಮುಖ್ಯತೆ ನೀಡಿಲ್ಲ. ಪರಿಚ್ಛೇದ 351 ರ ಪ್ರಕಾರ, ರಾಜ್ಯ ಒಕ್ಕೂಟ ಹಿಂದಿಯನ್ನು ಪ್ರಚಾರ ಮತ್ತು ಹಿಂದಿ ಅಭಿವ್ಯಕ್ತಿ ಮಾಧ್ಯವಾಗಬೇಕು ಎಂದು ಬಯಸುತ್ತದೆ.

### ನಿಮ್ಮ ಪ್ರಗತಿಯನ್ನು ಗಮನಿಸಿ – 2

1. ಸಂವಿಧಾನದ ಯಾವ ಭಾಗವು ಭಾಷೆಗೆ ಸಂಬಂಧಿಸಿದಂತೆ ಪ್ರಾಂತೀಯತೆ ಬಗ್ಗೆ ಹೇಳುತ್ತದೆ?

   ಅ) 17 ಆ) 18
   ಇ) 19 ಈ) 20

2. ಯಾವ ಕಾಯ್ದೆಯ ಪ್ರಕಾರ ಇಂಗ್ಲಿಷ್‌ನ್ನು ಸಹಕಾರಿ ಅಧಿಕೃತ ಭಾಷೆ ಎನ್ನುವುದು?

   ..............................................................................................

   ..............................................................................................

   ..............................................................................................

Notes

## 2.4 ಭಾರತೀಯ ಭಾಷೆಯ ವರ್ಗೀಕರಣ

### 2.4.1 ವರ್ಗೀಕೃತ ಭಾಷೆಗಳು

ಭಾರತೀಯ ಸಂವಿಧಾನದ 8ನೆಯ ಪಟ್ಟಿಯಲ್ಲಿನ ಭಾಷೆಗಳನ್ನು ವರ್ಗೀಕೃತ ಭಾಷೆಗಳೆಂದು ಕರೆಯುತ್ತಾರೆ. 1950ರ ಈ ಪಟ್ಟಿಯಲ್ಲಿ 14 ಭಾಷೆಗಳಿವೆ. ಅವು ಅಸ್ಸಾಮಿ, ಬಂಗಾಲಿ, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಮಲಯಾಲಂ, ಮರಾಠಿ, ಒರಿಯಾ, ಪಂಜಾಬಿ, ಸಂಸ್ಕೃತ, ತಮಿಳು ಮತ್ತು ತೆಲುಗು, ಉರ್ದು. 1967ರ 21ನೆಯ ಅನುಚ್ಛೇದದಲ್ಲಿ ಸಿಂಧಿಯನ್ನು ಸೇರಿಸಲಾಯಿತು. ಕೊಂಕಣಿ, ಮಣಿಪುರಿ, ನೇಪಾಳಿ 1992 ರಲ್ಲಿ 71ನೆಯ ಪರಿಚ್ಛೇದದಲ್ಲಿ ಜೋಡೋ, ಸಂತಾಲಿ, ಮೈಥಿಲಿ, ಡೊಗ್ರಿ, 2003 ರಲ್ಲಿ 92ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿ. ಈಗ ಸದ್ಯದಲ್ಲಿ 22 ಪಟ್ಟೀಕೃತ ಭಾಷೆಗಳಿವೆ ಮತ್ತೆ ಕೆಲವು ಸಂವಿಧಾನಕ್ಕೆ ಸೇರ್ಪಡೆಗೊಳ್ಳಲು ಕಾಯುತ್ತಿವೆ. ವರ್ಗೀಕೃತ ಪಟ್ಟಿಯಲ್ಲಿ ಭಾಷೆ ಒಮ್ಮೆ ಕಾಣಿಸಿಕೊಂಡರೆ, ಅದರ ಹೆಸರು, ಸ್ಥಾನಮಾನ ಗುರುತಿಸುವಿಕೆ ಎಲ್ಲವೂ ಆಧುನಿಕ ಭಾರತೀಯ, ಭಾಷೆ ಅಥವಾ ವರ್ಗೀಕೃತ ಭಾಷೆ ಎನ್ನಿಸುವುದು. (ಮಲ್ಲಿಕಾರ್ಜುನ್, 2004)

### 2.4.2 ಪ್ರಾದೇಶಿಕ ಭಾಷೆಗಳು ಮತ್ತು ಮಾತೃಭಾಷೆಗಳು

ಭಾರತೀಯ ಭಾಷೆಗಳನ್ನು ಪ್ರಾದೇಶಿಕ ಹಾಗೂ ಮಾತೃಭಾಷೆಗಳೆಂದು ವರ್ಗೀಕರಣ ಮಾಡಬಹುದು. 100 ಪ್ರಾದೇಶಿಕ ಭಾಷೆಗಳನ್ನು 2001 ರಲ್ಲಿ ಜನಗಣತಿಯಲ್ಲಿ ಪಟ್ಟಿಮಾಡಲಾಯಿತು ಮತ್ತು ಅದರೊಳಗೆ ಬಹಳಷ್ಟು ಭಾಷೆಗಳು ಮಾತೃಭಾಷೆಗಳೂ, ಉಪಭಾಷೆಗಳು ಇವೆ. 1961ರ ಭಾಷಾ ಗಣತಿಯು 1652 ಮಾತೃಭಾಷೆಗಳನ್ನು ಗುರುತಿಸಿತು. ಮನೆಯಲ್ಲಿ ಮಾತನಾಡುವ ಭಾಷೆಯು ಮಾತೃಭಾಷೆ ಎನ್ನಿಸುವುದು. 2001 ರ ಜನಗಣತಿಯ ಸಂದರ್ಭದಲ್ಲಿ ಸೆನ್ಸಸ್ ವಿಭಾಗವು ಮಾತೃಭಾಷೆಯನ್ನು ಹೀಗೆ ವ್ಯಾಖ್ಯಾನಿಸಿತು.

"ವ್ಯಕ್ತಿಯ ತಾಯಿಯು ಬಾಲ್ಯದಲ್ಲಿ ಆಡಿದ ಮಾತು ಮಾತೃಭಾಷೆ, ತಾಯಿಂದಿಲ್ಲದಿದ್ದರೆ ಮನೆಯಲ್ಲಿ ಮಾತನಾಡುವ ಭಾಷೆ ಎಂದು ಅರ್ಥೈಸಬಹುದು" (ಮಲ್ಲಿಕಾರ್ಜುನ ಪುಟ –8)

ಒಂದೇ ಮನೆಯಲ್ಲಿ ವಾಸ ಮಾಡುವ ಇಬ್ಬರು ವ್ಯಕ್ತಿಗಳ ಮಾತೃಭಾಷೆಗಳು ಬೇರೆ ಇರಬಹುದು. ಉದಾ: ಗಂಡ ಹೆಂಡತಿಯರು ಬೇರೆ ಸಮುದಾಯ, ಧರ್ಮದಿಂದ ಬಂದವರಾಗಿರಬಹುದು. ಹೀಗಾಗಿ ಮಗು ಒಂದಕ್ಕಿಂತ ಹೆಚ್ಚಿನ ಮಾತೃಭಾಷೆಗಳನ್ನು ಪಡೆಯುತ್ತದೆ.

### 2.4.3 ಶಾಸ್ತ್ರೀಯ ಭಾಷೆಗಳು

ಪ್ರಾಚೀನ ಇತಿಹಾಸವಿದ್ದು, ಅದರ ವ್ಯಾಕರಣ ಮತ್ತು ಸಾಹಿತ್ಯವು ಆಳವಾದ ಅಧ್ಯಯನಕ್ಕೊಳಪಟ್ಟಂತಹ ಭಾಷೆಗಳು ಶಾಸ್ತ್ರೀಯ ಭಾಷೆಗಳೆನಿಸುವುವು.

ಭಾರತ ಸರ್ಕಾರ ಶಾಸ್ತ್ರೀಯ ಭಾಷೆಯೆಂದು ಪರಿಗಣಿಸಲು ಮುಂದಿನ ನಿಯಮಗಳನ್ನು ಹಾಕಿದೆ:

1. 1500 ರಿಂದ 2000 ವರ್ಷಗಳ ಇತಹಾಸ ಹಾಗೂ ಬರಹರೂಪದ ಸಾಹಿತ್ಯ ಇರಬೇಕು.

ಪ್ರಾಚೀನ ಸಾಹಿತ್ಯ /ಕಾವ್ಯವು ಆ ಭಾಷೆಯಲ್ಲಿ ರಚಿತವಾಗಿದ್ದು ಆ ಭಾಷೆಯನ್ನು ಮಾತನಾಡುವವರು ಆ ಸಾಹಿತ್ಯ/ಕಾವ್ಯವನ್ನು ಮೌಲ್ಯಯುತ ಸಂಪತ್ತು ಎನ್ನುವರು.
ಅಂತಹ ಭಾಷೆಯು ತನ್ನದೇ ಆದ ಮೂಲ ಅಕ್ಷರ ಪರಂಪರೆ ಹೊಂದಿದ್ದು, ಬೇರೆ ಯಾವುದೇ ಭಾಷೆಯಿಂದ ತೆಗೆದುಕೊಂಡಿದ್ದಾಗಿರಬಾರದು.

2004 ಜೂನ್‌ನಲ್ಲಿ ತಮಿಳನ್ನು ಶಾಸ್ತ್ರೀಯ ಭಾಷೆಯೆಂದು 2005 ರಲ್ಲಿ ಸಂಸ್ಕೃತವನ್ನು ಕನ್ನಡ ಮತ್ತು ತೆಲುಗಿಗೆ 2008ರಲ್ಲಿ ಆ ಸ್ಥಾನ ಸಿಕ್ಕಿದೆ.

## 2.4.4 ಭಾಷೆ ಮತ್ತು ಉಪಭಾಷೆಯ ನಡುವೆ ವ್ಯತ್ಯಾಸಗಳಿವೆಯೇ?

ಜನರು ಭಾಷೆ ಮತ್ತು ಉಪಭಾಷೆಗಳನ್ನು ಪ್ರತ್ಯೇಕ ಎಂದು ಭಾವಿಸುತ್ತಾರೆ. ಅದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾರೆ. ಭಾಷೆಯನ್ನು ಹೆಚ್ಚು ಜನರು ಮಾತನಾಡುತ್ತಾರೆ. ಉಪಭಾಷೆಗಳನ್ನು ಕಡಿಮೆ ಮಂದಿ ಮಾತನಾಡುತ್ತಾರೆ. ಭಾಷೆಗೆ ಸಾಹಿತ್ಯವಿದ್ದರೆ, ಉಪಭಾಷೆಗೆ ಸಾಹಿತ್ಯವಿರುವುದಿಲ್ಲ. ಭಾಷೆಗೆ ಲಿಪಿ ಇದ್ದರೆ ಉಪಭಾಷೆಗೆ ಇರುವುದಿಲ್ಲ.

ಆದರೆ, ವಾಸ್ತವವಾಗಿ ಈ ಯಾವ ಕಾರಣವು ಸರಿಯಲ್ಲ. ಭಾಷಾಶಾಸ್ತ್ರದ ಪ್ರಕಾರ ಭಾಷೆ ಹಾಗೂ ಉಪಭಾಷೆಯ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಎರಡಕ್ಕೂ ವ್ಯಾಕರಣವಿದೆ. ಅವಧಿ, ಬ್ರಜ್, ಭೋಜಪುರಿಗೂ ಹಿಂದಿಯ ಹಾಗೆ ವ್ಯಾಕರಣವಿದೆ. ಹಾಗೆಯೇ ಸಾಹಿತ್ಯವೂ ಕೂಡ. ಲಿಪಿಗೆ ಸಂಬಂಧಿಸಿದಂತೆ ಯಾವುದೇ ಲಿಪಿಯಲ್ಲಿ ಭಷೆ ಬರೆಯುಬಹುದು.

ಉದಾ: श्याम ख़ाता है ದೇವನಾಗರಿ ಸ್ಕ್ರಿಪ್ಟ್

ಕಾಮ್ ಖಾತಾ ಹೈ (ರೋಮನ್ ಸ್ಕ್ರಿಪ್ಟ್)

ಲಿಪಿ, ಸಾಹಿತ್ಯ, ವ್ಯಾಕರಣ ಕಾರಣದಿಂದ ಭಾಷೆ ಮತ್ತು ಉಪಭಾಷೆಗೆ ವ್ಯತ್ಯಾಸವಿಲ್ಲ ಎಂಬುದು ಸ್ಪಷ್ಟ. ಯಾವುದು ಭಾಷೆ, ಯಾವುದು ಉಪಭಾಷೆ ಎಂಬುದು ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆ. ರಮಾಕಾಂತ್, ಅಗ್ನಿಹೋತ್ರಿ ಹೇಳುವಂತೆ– ಶಕ್ತಿವಂತ ಮತ್ತು ಸಿರವಂತ ಜನರು ಆಡುವುದು ಭಾಷೆ. ವ್ಯಾಕರಣ ಮತ್ತು ಶಬ್ದಕೋಶ ಈ ಭಾಷೆಯಲ್ಲಿ ರೂಪಿತವಾಗಿರುವುದು. ಸಾಹಿತ್ಯವು ಶಿಕ್ಷಣ ಮಾಧ್ಯಮವು ಈ ಭಾಷೆಯಲ್ಲಿ ರೂಪಿತವಾಗುವುದು ಮತ್ತು ಮಾನ್ಯತಾ ಭಾಷೆ ಎನಿಸುವುದು. ಅದಕ್ಕೆ ಹತ್ತಿರದವು ಉಪಭಾಷೆ ಎನಿಸುವುದು. ಭಾಷೆಯ ಸ್ಥಾನವು ಶಕ್ತಿಕೇಂದ್ರಿತವಾಗಿದ್ದು ಬದಲಾಗುವುದು. ಕನೋಜ್ (ರಾಜಕೀಯ ಕೇಂದ್ರವಾಗಿದ್ದಾಗ ಅಲ್ಲಿಯ ಭಷಾಸಾಹಿತ್ಯ ಅಪಭ್ರಂಶ ಆಗಿದ್ದು, ಖಡಿಬೋಲಿ, ಬ್ರಜ್, ಅವಧಿ ಉಪಭಾಷೆಗಳಾದವು. ಹಾಗೆಯೇ ಬ್ರಜ್ ರಾಜಕೀಯ ಅಧಿಕಾರ ಪಡೆದಾಗ ದೆಹಲಿ ಮೀರತ್‌ನಲ್ಲಿ ಬ್ರಜ್ ಸಾಹಿತ್ಯ ರಚಿತವಾದುವು. ಖಡಿಬೋಲಿ ಉಪಭಾಷೆಯಾಯಿತು.

ಹಾಗಾಗಿ ಭಾಷೆ ಮತ್ತು ಅಧಿಕಾರದ ನಡುವೆ ಇರುವ ಸಂಬಂಧವು ಭಾಷೆ ಮತ್ತು ಉಪಭಾಷೆಯನ್ನು ಅರ್ಥೈಸುವುದು.

Notes

**ನಿಮ್ಮ ಪ್ರಗತಿ ಗಮನಿಸಿ – 3**

1. ಸಂವಿಧಾನದ 8ನೆಯ ಷೆಡ್ಯೂಲ್‌ಲ್ಲಿ ಎಷ್ಟು ಭಾಷೆಗಳನ್ನು ಹೇಳಲಾಗಿದೆ?
   ಅ) 14 ಆ) 18
   ಇ) 20 ಈ) 22

2. 'ಮಾತೃಭಾಷೆ'ಯ ಅರ್ಥವೇನು?
   ......................................................................................................
   ......................................................................................................
   ......................................................................................................

3. ಶಾಸ್ತ್ರೀಯ ಭಾಷೆಯೆಂದು ವರ್ಗೀಕರಿಸುವಾಗ ವರ್ಗೀಕರಣಕ್ಕೆ ಬೇಕಾದ ನಿಯಮಗಳೇನು?
   ......................................................................................................
   ......................................................................................................
   ......................................................................................................

4. ಭಾಷೆ ಮತ್ತು ಉಪಭ್ಹಾಎಯ ನಡುವೆ ವ್ಯತ್ಯಾಸವಿದೆಯೇ?
   ......................................................................................................
   ......................................................................................................
   ......................................................................................................

## 2.5 ಭಾರತದಲ್ಲಿ ಹಿಂದಿನ ಸ್ಥಾನಮಾನ

ಹಿಂದ್ ಅಥವಾ ಭಾರತದಲ್ಲಿ ಆಡುವ ಭಾಷೆಯೇ ಹಿಂದಿ. ಅದರ ಪ್ರಾಚೀನ ಹೆಸರು ಊಟಿಜಣು– ಹಿಂದೆ, hindvi –ಹಿಂದ್ವಿ ಎಂದು ಆದರೆ ವಿಶೇಷತೆ ಏನೂ ಇಲ್ಲ.

ಹಿಂದಿ–ಹಿಂದಿಯು ಯಾವುದೇ ಭಾಷೆಯಿಂದ ಪ್ರಭಾವಿತವಾಗಿಲ್ಲ. ಸಂಸ್ಕೃತ, ಅರೇಬಿಕ್, ಪಾರ್ಸಿ ಪದಗಳು ಇದರಲ್ಲಿಲ್ಲ.

ಖರಿಬೋಲಿ– ಇದನ್ನು ಉತ್ತಮ ಮಟ್ಟದ ಹಿಂದಿ. ಇಂದು ಬ್ರಜ್ ಮತ್ತು ರೇಖತಾಗಿಂತ ಭಿನ್ನ. ಇದು ಸಾಮಾನ್ಯರ ಭಾಷೆ, ದಿನನಿತ್ಯದ ಭಾಷೆಯೂ ಹೌದು ಸಾಹಿತ್ಯವೂ ಸಾಧ್ಯ.

ನಾಗರಿಹಿಂದಿ–ಇದು ಸಾಹಿತ್ಯ ಯೋಗ್ಯ ಭಾಷೆ.

ಹಿಂದೂಸ್ಥಾನಿ– ಹಿಂದಿ ಮತ್ತು ಉರ್ದು ಹಿಂದಿಯ ಭಾಗಗಳಾಗಿದ್ದು, ಒಂದರೊಡನೊಂದು ಬೆರೆತಿದೆ.

Notes

ಮಾನ್ಯತಾ/ಪ್ರಮಾಣಿತ ಭಾಷೆ: ಹಲವು ಉಪಭಾಷೆಗಳ ನಡುವೆ ಪ್ರತಿಷ್ಠಿತ: ವಿದ್ಯಾವಂತ ಜನಾಂಗ ಬಳಸುವ ಭಾಷೆ ಇದು. ಬೇರೆ ಭಾಷೆಯಂತೆ ಇದು ಶುದ್ಧವೇನೂ ಅಲ್ಲ. ಎಲ್ಲಾ ಭಾಷೆಗಳು ಒಂದೇ ರೀತಿಯಲ್ಲಿ ಸಂಘಟಿತವಾಗುವುದು. ಪ್ರಮಾಣಿತ ಹಿಂದಿ ರೂಪವು ಮೀರತ್, ಡೆಲ್ಲಿ, ಆಗ್ರ ಕೇಂದ್ರಗಳ ಭಾಷೆಗಳ ಮುಪ್ಪುರಿ.

ಹಿಂದಿ ಉಪಭಾಷೆಗಳ ವರ್ಗೀಕರಣ.

| | | |
|---|---|---|
| ಪೌರ್ವಾತ್ಯ ಪ್ರದೇಶ | ಪೌರ್ವಾತ್ಯ ಹಿಂದಿ | ಅವಧಿ<br>ಬಂದೇಲಿ<br>ಚತ್ತೀಸ್ ಗರಿ |
| | ಬಿಹಾರಿ ಹಿಂದಿ | ಬೋಜಪುರಿ<br>ಮಾಗಿ<br>ಮೈಥಿಲಿ |
| ಪಾಶ್ಚಾತ್ಯ ಹಿಂದಿ | ಅಕಾರ್ ಬಹುಳ | ಕೌರ್‌ಬಿ<br>ಹರಿಯಾನ್ವಿ<br>ಧಖನಿ |
| | ಒಕಾರ್ ಬಹುಳ | ಬ್ರಜ್<br>ಬುಂಡೇಲಿ<br>ಕನೌಜಿ |
| ರಾಜಸ್ಥಾನಿ ಹಿಂದಿ | ಮಾರ್ವಾಡಿ<br>ಜೈಪುರಿ<br>ಮೇವಾತಿ<br>ಮಾಲ್ವಿ | |
| ಪಹರಿ | ಕುಮಾಯುನಿ<br>ಗಾರ್ವಲಿ | |

ಪಹರಿ, ನಿಮಾರಿ, ಹರೋಟಿ, ದೌಧರಿ, ಅಹಿರತಿಗಳೂ ಕೂಡ ಹಿಂದಿಯ ಉಪಭಾಷೆಗಳಿವೆ. ಈ ಉಪಭಾಷೆಗಳು ಮುಖ್ಯ ಭಾಷೆಯಾಗಿ ಒಂದು ಕಾಲದಲ್ಲಿದ್ದು ಇಂದು ಉಪಭಾಷಾ ಸ್ಥಾನ ಪಡೆದಿವೆ.

ರಾಜಕೀಯ, ಆರ್ಥಿಕ ಕಾರಣಗಳಿಂದ ಖಡಿಬೋಲಿಯು ಮುಖ್ಯಸ್ಥಾನದಲ್ಲಿದ್ದು, ಇತರ ಉಪಭಾಷೆಗಳು ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ಡಾ॥ರವೀಂದ್ರನಾಥ್ ಶ್ರೀವಾಸ್ತವ್ ಅವರು ಉಪಭಾಷೆಗಳು ಸಾಮಾನ್ಯ ಜನರ ಗುರುತಾಗಿ ಉಳಿಯಿತು. ಇಂದು ಖಡಿಬೋಲಿಯು ಹಿಂದಿ ಸಮಾನಾಂತರವಾಗಿ ಸ್ಥಾನ ಪಡೆದು ಬ್ರಜ್ ಅವಧಿ ಬೌಲಾಜ್‌ಪುರ ಕೇವಲ ಉಪಭಾಷೆಗಳಾಗಿ ಉಳಿದವು.

Notes

ಹಿಂದಿಯು ಸಾಹಿತ್ಯದ ಭಾಷೆಯಾಗಿ

ಬ್ರಜ್, ಮೈಥಿಲಿ, ಅವಧಿಯು ಮುಖ್ಯ ಭಾಷೆಯಾಗಿದ್ದು ಸಂಪದ್ಭರಿತ ಸಾಹಿತ್ಯ ಹೊಂದಿದ್ದು ಹಿಂದಿಯ ಪರಂಪರೆ ಎಂದು ಪರಿಗಣಿಸಲಾಗುವುದು. 20ನೆಯ ಶತಮಾನದ ಮೊದಲಲ್ಲಿ ಬ್ರಜ್ ಭಾಷೆಯಲ್ಲಿ ಹೆಚ್ಚು ಸಾಹಿತ್ಯ ರೂಪಿತವಾಯಿತು. ಇವತ್ತಿಗೂ ಕೂಡ ದೊಡ್ಡ ಪ್ರದೇಶದಲ್ಲಿ ಈ ಭಾಷೆಯನ್ನು ಮಾತನಾಡುತ್ತಾರೆ. ಸೂರದಾಸ, ಮೀರಾಬಾಯಿ, ಕೇಶವದಾ ರಹೀಮ್, ರಸ್‌ಖಾನ್, ಬಿಹಾರಿ, ದೇವ್, ದಾನುದ್, ಸೋನಾಪತಿ, ಭೂಷಣ್, ಪದ್ಮಾಕರ್, ರತ್ನಾಕರ್ ಮುಂತಾದ ಕವಿಗಳು ಮಧ್ಯಕಾಲೀನ ಯುಗದ ಸಾಹಿತ್ಯವನ್ನು ಸಂಪದ್ಭರಿತಗೊಳಿಸಿದರು.

ಜೈಸಿ, ತುಲೀಸದಾರ್ ಅವಧಿ ಭಾಷೆಯ ಪ್ರಕಾಂಡ ಕವಿಗಳು. ಜಯಸಿಯ ಪದ್ಮಾವತಿಯು ಅವಧಿ ಭಾಷೆಯ ಕಾವ್ಯ ತುಲಸೀದಾಸ್ ಬರೆದಿರುವ 12 ಕೃತಿಗಳಲ್ಲಿ ರಾಮಚರಿತ ಮಾನಸ, ಕವಿತಾವಲಿ, ಗೀತಾವಳಿ, ವಿನಯಪತ್ರಿಕಾ ಮುಂತಾದವು. ಗೀತಾವಲಿ, ವಿನಯಪತ್ರಿಕಾ, ಕವಿತಾವಳಿಗಳು ಬ್ರಜ್ ಭಾಷೆಯಲ್ಲಿವೆ. ತುಲಸೀದಾಸರು ಬ್ರಜ್ ಮತ್ತು ಅವಧಿಯಲ್ಲಿ ಸಮಾನವಾಗಿ ಬರೆದಿದ್ದಾರೆ.

ಕಬೀರ್, ದಾದು, ರೇದಾಸ್, ಗುರುನಾನಕ್ ಮುಂತಾದವರು ಸೂಫಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಆಧುನಿಕ ಕಾಲದಲ್ಲಿ ಭರತೇಂದು, ಮಹಾವೀರ, ಪ್ರಸಾದ್ ದ್ವಿವೇದಿ, ಬಾಲಕೃಷ್ಣಭಟ್, ಪ್ರಸಾದ್, ಪಂತ್, ನಿರಾಲ, ಮಹಾದೇವಿ, ಅಗ್ಯಾಯ, ರಘುವೀರ್ ಸಹಾಯ್ ಮುಂತಾದ ಬರಹಗಾರರು ಹಿಂದಿ ಸಾಹಿತ್ಯಕ್ಕೆ ಹೊಸ ರೂಪಶಕ್ತಿ ತಂದಿದೆ. ಪದ್ಯಗಳು, ಕಥೆಗಳು, ನಾಟಕಗಳು, ಐತಿಹಾಸಿಕ ಘಟನೆಗಳು, ವಿಮರ್ಶೆಗಳು, ಪ್ರವಾಸ ಕಥನಗಳು, ಪ್ರಬಂಧಗಳು, ವರದಿಗಳು ಹೆಚ್ಚಾಗಿ ರಚಿತವಾಗಿ ಹಿಂದಿಯ ಬೆಳವಣಿಗೆಗೆ ಕಾರಣವಾಗಿದೆ.

ಹಿಂದಿಯ ಸ್ಥಾನ ಕಾಪಾಡಲು ಪತ್ರಿಕೆ ಮತ್ತು ಮ್ಯಾಗಜಿನ್‌ಗಳ ಪ್ರಕಟಣೆಯು ಕಾರಣವಾಗಿದೆ. ಉದಂತ್ ಮಾತ್ರಂಡ್ ಎಂಬುದು ಹಿಂದಿಯ ಮೊದಲ ಪತ್ರಿಕೆಯಾಗಿದ್ದು, ಇದರ ಕೊಡುಗೆ ಮಹತ್ವದ್ದು, ಎರಡನೆಯ ಸಮಾಚಾರ ಪತ್ರಿಕೆ ಬಂಗ್‌ದೂತ್ ಕಲ್ಕತ್ತಾದಲ್ಲಿ 1826 ರಲ್ಲಿ ಪ್ರಕಟವಾಯಿತು.

ಆಡಳಿತ ಭಾಷೆಯಾಗಿ ಹಿಂದಿಯ ಬೆಳವಣಿಗೆ

1949 ಸೆಪ್ಟೆಂಬರ್ 14 ರ ಇಂಡಿಯನ್ ಯೂನಿಯನ್ ಅಧಿಕಾರ ಅಧಿಕೃತ ಸಭೆಯು ಹಿಂದಿಯನ್ನು ಅಧಿಕೃತ ಭಾಗ ಎಂದು ಸ್ವೀಕರಿಸಿತು. ಅಂದರೆ, ಈ ಹಿಂದೆ ಹಿಂದಿಯು ಪ್ರಾದೇಶಿಕ ಭಾಷೆಯಾಗಿ ಬೆಳವಣಿಗೆ ಹೊಂದಿರಲಿಲ್ಲವೆಂದಲ್ಲ. ಗ್ವಾಲಿಯರ್, ಜೈಪುರದಂತಹ ರಾಜವಂಶಗಳು ತಮ್ಮ ಆಡಳಿತ ಭಾಷೆಯಾಗಿ ಹಿಂದಿಯನ್ನು ಪೂರ್ಣವಾಗ ಬಳಸಿರುವುದು 1800 ರಲ್ಲಿ ಪೋರ್ಟ್ ವಿಲಿಯಂ ಕಾಲೇಜಿನಲ್ಲಿ ಇಂಡಿಯನ್ ಸರ್ಕಾರದಲ್ಲಿ ಇಂಗ್ಲಿಷ್ ಭಾಷೆ ಆಡಳಿತ ಭಾಷೆಯಾಗಿದ್ದರೂ ಬ್ರಿಟಿಷರು ಹಿಂದಿಯನ್ನು ಕಲಿಯಬೇಕಿತ್ತು. 1878–79 ರಲ್ಲಿ ಇಂಗ್ಲೆಂಡಿನಿಂದ ಬರುವ ಪ್ರತಿಯೊಬ್ಬರೂ ಹಿಂದಿ ಮತ್ತು ಹಿಂದೂಸ್ಥಾನಿ ಬಲ್ಲವರಾಗಿರಬೇಕು. 1925ರ ಕಾಂಗ್ರೆಸ್ ಗಾಂಧಿಯ ಪ್ರಯತ್ನದಿಂದ ದೈನಂದಿನ ಭಾಷೆಯಾಗಿ ಹಿಂದಿ ಬಳಸಬೇಕು ಎಂದು ಘೋಷಿಸಿತು.

Notes

ಇಂದಿನ ಸ್ಥಿತಿ: ಹಿಂದಿಯು ಕೇಂದ್ರ ಹಾಗೂ ರಾಜ್ಯಗಳ ಆಡಳಿತ ಭಾಷೆ ಎಂದು ಅಧಿಕೃತವಾಗಿ ಒಪ್ಪಿದೆ. ಮಧ್ಯಪ್ರದೇಶ, ಉತ್ತರಪ್ರದೇಶ, ಬಿಹಾರ್, ರಾಜಸ್ಥಾನಗಳ ಹೈಕೋರ್ಟ್‌ಗಳು ಹಿಂದಿ ಮಾಧ್ಯಮದಲ್ಲೇ ವಿಜ್ಞಾನ, ಕಲಾ, ನ್ಯಾಯ, ಕಂಪ್ಯೂಟರ್ ಕಲಿಸಬೇಕು. ಕಚೇರಿಗಳಲ್ಲಿ ಕಂಪ್ಯೂಟರ್ ಕೆಲಸ ಹಿಂದಿಯಲ್ಲೇ ಆಗಬೇಕು. ಇಂಗ್ಲಿಷ್ ಕಡ್ಡಾಯ ಪತ್ರಿಕೆಯ ಜೊತೆಗೆ ಬೇರೆಬೇರೆ ಕಚೇರಿ, ಸಂಸ್ಥೆ ಬ್ಯಾಂಕ್‌ಗಳ ಪರೀಕ್ಷೆಯೂ ಹಿಂದಿಯಲ್ಲೇ ಆಗುತ್ತಿದೆ. ಕೊನೆಗೆ ಹಿಂದಿಯು ಹೆಚ್ಚು ಜನರು ಮಾತನಾಡುವ ಭಾಷೆಯಾಗಿದೆ.

ನಿಮ್ಮ ಪ್ರಗತಿ ಗಮನಿಸಿ – 4

*1. ಯಾವ ಭಾಷೆಯಲ್ಲಿ ಜಾಯ್ಸಿ ಅವರ ಪದ್ಮಾವತಿ ಕೃತಿ ರಚಿತವಾಗಿದೆ?*

*ಅ) ಬ್ರಜ್*      *ಆ) ಅವಧಿ*

*ಇ) ಮೈಥಿಲಿ*      *ಈ) ಹಿಂದಿ*

*2. ಹಿಂದೂಸ್ಥಾನಿ ಎಂದರೆ ಯಾವ ಎರಡು ಭಾಷೆಗಳನ್ನು ಕುರಿತಾಗಿ ಹೇಳಲಾಗಿದೆ?*

..........................................................................................................

..........................................................................................................

..........................................................................................................

*3. ಹಿಂದಿಯು ಕೇಂದ್ರ ಹಾಗೂ ಹಲವು ರಾಜ್ಯಗಳ ಆಡಳಿತ ಭಾಷೆಯಾಗಿದೆ. ಆ ರಾಜ್ಯಗಳ ಹೆಸರುಗಳೇನು?*

..........................................................................................................

..........................................................................................................

..........................................................................................................

*4. ಭಾಷಾ ಸಾಹಿತ್ಯವಾಗಿ ಹಿಂದಿಯ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ತಿಳಿಸಿ?*

..........................................................................................................

..........................................................................................................

..........................................................................................................

Notes

## 2.6 ಭಾರತದಲ್ಲಿ ಇಂಗ್ಲಿಷಿನ ಸ್ಥಿತಿ

1813ರಲ್ಲಿ ಬ್ರಿಟನ್‌ನಿಂದ ಕ್ರಿಶ್ಚಿಯನ್ ಮಿಶನರಿಗಳು ಬಂದುವು ಮತ್ತು ಬೇರೆಬೇರೆ ಕಡೆ ಪ್ರಾಥಮಿಕ ಶಾಲೆಗಳನ್ನು ಶುರು ಮಾಡಿ ಪ್ರಾಂತೀಯ ಭಾಷೆ ಮಾಧ್ಯಮದಲ್ಲಿ ಶಿಕ್ಷಣ ನೀಡಿದರು. ಮುಂದೆ ಇಂಗ್ಲಿಷ್ ಪ್ರೌಢಶಾಲೆಗಳನ್ನು ತೆರೆದರು. 1857 ರ ನಂತರ ಬ್ರಿಟಿಷ್ ಆಡಳಿತಗಾರರು ವಿಶ್ವವಿದ್ಯಾನಿಲಯಗಳನ್ನು ಶುರುಮಾಡಿದರು ಮತ್ತು ಭಾರತೀಯ ಶಿಕ್ಷಣದಲ್ಲಿ ಇಂಗ್ಲಿಷನ್ನು ಮೊದಲ ಭಾಷೆಯಾಗಿ ಮಾಡಿದರು. ಇಂಗ್ಲಿಷ್ ಎಲ್ಲ ಜನರು ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಪಡೆದರು. ಹಲವು ಇಂಗ್ಲಿಷ್ ಶಾಲೆಗಳು ತೆರೆದವು. ವಿಶ್ವವಿದ್ಯಾನಿಲಯದಲ್ಲೂ ಇಂಗ್ಲಿಷ್‌ನ್ನು ಮಾಧ್ಯಮವಾಗಿ ಸ್ವೀಕರಿಸಿ, ಇಂಗ್ಲಿಷ್‌ಗೆ ಮಾನ್ಯತೆ ನೀಡಲಾಯಿತು. ಇಂಗ್ಲಿಷ್ ಸ್ವಾತಂತ್ರ್ಯ ನಂತರವೂ ಮುಖ್ಯ ಭಾಷೆಯಾಗಿ ಮುಂದುವರಿಯಿತು. ಸರ್ಕಾರದ ಮಟ್ಟದಲ್ಲಿ ಆಡಳಿತಕ್ಕ ಸಹಕಾರಿಯಾಗುವ ಭಾಷೆಯಾಗಿ ಅಂಗೀಕೃತವಾಯಿತು. ಈಗಲೂ ಇಂಗ್ಲಿಷ್‌ಗೆ ಪ್ರಾಮುಖ್ಯವಿರುವ ಶಾಲೆಗಳನ್ನು ಉತ್ತಮ ಶಾಲೆಗಳೆಂದು ಪರಿಗಣಿಸುತ್ತಾರೆ. ವಿಶ್ವವಿದ್ಯಾಲಯದ ಮಟ್ಟದಲ್ಲೂ ಇದು ನಿಜ.

1970 ಮತ್ತು 1980ರ ನಡುವೆ 3ನೆಯ ಒಂದರಷ್ಟು ಶಾಲೆಗಳು ಇಂಗ್ಲಿಷ್ ಮೀಡಿಯಮ್ ಕಲಿಸುತ್ತಿದ್ದವು. ಈಗಲೂ ಇಂಗ್ಲಿಷ್ ಮುಖ್ಯ ಪಾತ್ರವಹಿಸುತ್ತಿದೆ. ಅದಕ್ಕೆ ಕಾರಣಗಳು ಇವೆ.

ಇಂಗ್ಲಿಷ್ ವಾಣಿಜ್ಯದ ಭಾಷೆ:

ಇಂಗ್ಲಿಷ್ ಪರಿಣಿತರನ್ನು ಪ್ರತಿಷ್ಠಿತರು ಎಂದು ಪರಿಗಣಿಸಲಾಗಿದೆ. ಶಿಕ್ಷಣ ಮಾಧ್ಯಮವು ಇಂಗ್ಲಿಷ್ ಆಗಿದೆ. ವಿಜ್ಞಾನ, ತಂತ್ರಜ್ಞಾನ, ಕೃಷಿ ವ್ಯಾಪಾರದಲ್ಲಿ ಪ್ರಪಂಚದಾದ್ಯಂತ ಇಂಗ್ಲಿಷನ್ನು ಮಾಧ್ಯಮವಾಗಿ ಬಳಸುವರು. ಅಂತರಾಷ್ಟ್ರೀಯ ಮಟ್ಟದಲ್ಲಿ ಇಂಗ್ಲಿಷನ್ನು ಮಹತ್ವದ ಸ್ಥಾನದಿಂದ ನೋಡುತ್ತಾರೆ. ಹಲವು ರಾಷ್ಟ್ರಗಳಲ್ಲಿ ಇಂಗ್ಲಿಷ್ ಮಾತನಾಡುತ್ತಾರೆ ಅರ್ಥಮಾಡಿಕೊಳ್ಳುತ್ತಾರೆ.
ಸರ್ಕಾರದ ಮಟ್ಟದಲ್ಲಿ ಇಂಗ್ಲಿಷಿಗೆ ಉತ್ತಮ ಸ್ಥಾನವಿದೆ. ಪ್ರಾಂತೀಯ ಕಾರಣಕ್ಕಾಗಿ ಅಧಿಕೃತವಾಗಿ ಪ್ರಾಂತೀಯ ಭಾಷೆ ಬಳಸಿದರೂ, ಇಂಗ್ಲಿಷ್ ಪರಸ್ಪರರ ಸಂವಹನಕ್ಕೆ ನೆರವಾಗಿದ. ಇಂಗ್ಲಿಷ್ ಶಿಕ್ಷಣ ಪದ್ಧತಿಯಲ್ಲಿ ಉತ್ತಮ ಸ್ಥಾನ ಪಡೆದಿದೆ.

ಸೆಕೆಂಡರಿ ಎಜುಕೇಷನ್ ಕಮೀಷನ್ (1952–53) ಇಂಗ್ಲಿಷಿಗೆ ಮಹತ್ವಕೊಟ್ಟಿದೆ. ಅದಕ್ಕೆ ಶಿಕ್ಷಣ ಕಮೀಷನ್ (1964–66) ಕೂಡ ಒಪ್ಪಿಗೆ ನೀಡಿದೆ. 10ನೆಯ ತರಗತಿವರೆಗೆ ತ್ರಿಭಾಷಾ ಸೂತ್ರವನ್ನು ಸೂಚಿಸಿದೆ. ಶಾಲೆಗಳಲ್ಲಿ ಮೊದಲು ಎರಡು ಮತ್ತು ಮೂರನೆಯ ಭಾಷೆಯಾಗಿದೆ.

ಮೊದಲ ಭಾಷೆ:

ಮೊದಲ ಭಾಷೆಯಾಗಿ ಮಾತೃಭಾಷೆ ಅಥವಾ ಪ್ರಾಂತೀಯ ಭಾಷೆಯನ್ನು ಕಲಿಸಬೇಕು.

Notes

**ಎರಡನೇಯ ಭಾಷೆ**

ಭಾಷೆ ಅಥವಾ ಇಂಗ್ಲಿಷ್ ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಹಿಂದಿ ಅಥವಾ ಇಂಗ್ಲಿಷ್–ಹಿಂದಿಯೇತರ ಭಾಷೆಗಳನ್ನಾಡುವ ರಾಜ್ಯಗಳಲ್ಲಿ.

**ಮೂರನೆಯ ಭಾಷೆ**

ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಇಂಗ್ಲಿಷ್ ಅಥವಾ ಯಾವುದೇ ಆಧುನಿಕ ಭಾರತೀಯ ಭಾಷೆಯನ್ನು ಎರಡನೆಯ ಭಾಷೆಯಾಗಿ ಕಲಿಸುವುದಿಲ್ಲ.

2005ರ ರಾಷ್ಟ್ರೀಯ ಶೈಕ್ಷಣಿಕ ರೂಪುರೇಖೆಯ ಪ್ರಕಾರ ಇಂಗ್ಲಿಷ್ ಭಾರತದಂತಹ ಬಹುಭಾಷಿಕ ರಾಷ್ಟ್ರದಲ್ಲಿ ವಿಶ್ವಾತ್ಮಕ ಭಾಷೆಯಾಗಿದೆ. ಬಹುಭಾಷಿಕರಾದ ನಮ್ಮನ್ನು ಶ್ರೀಮಂತಗೊಳಿಸುವುದೇ ಇಂಗ್ಲಿಷ್ ಕಲಿಕೆಯ ಮೂಲ ಉದ್ದೇಶ.. ಬೇರೆಬೇರೆ ರಾಜ್ಯಗಳಲ್ಲಿ ಇಂಗ್ಲಿಷ್‌ಗೆ ಸರಿಯಾದ ಸ್ಥಾನ ಸಿಕ್ಕಬೇಕು. ಮಕ್ಕಳ ಬೇರೆ ಭಾಷೆಗಳು ಗಟ್ಟಿಗೊಳ್ಳಲು ಇಂಗ್ಲಿಷ್, ಶಿಕ್ಷಣ ಮತ್ತು ಕಲಿಕೆ ಬೇಕು ಮತ್ತು ಇಂಗ್ಲಿಷ್ ಕಲಿಸುವ ಶಿಕ್ಷಕರು ಭಾಷಾ ಪರಿಣಿತರಿರಬೇಕು. ಹತ್ತನೆಯ ತರಗತಿಯಲ್ಲಿ ಫೇಲಾಗಲು ಇಂಗ್ಲಿಷ್ ಮುಖ್ಯಕಾರಣ. ವಿದ್ಯಾರ್ಥಿಗೆ ಇಂಗ್ಲಿಷಿನಲ್ಲಿ ಪಾಸಾಗಿದಿದ್ದರೂ ಮುಂದಿನ ತರಗತಿಗೆ ಪ್ರವೇಶ ಕೊಡಬೇಕು.

ನಿಮ್ಮ ಪ್ರಗತಿ ಗಮನಿಸಿ – 5

*1. 1813 ರಲ್ಲಿ ಭಾರತಕ್ಕೆ ಬ್ರಿಟಿಷರು ಬಂದಾಗ, ಪ್ರಾಥಮಿಕ ಶಾಲೆಗಳನ್ನು ತೆರೆದು ಯಾವ ಮಾಧ್ಯಮದಲ್ಲಿ ಕಲಿಸಿದರು?*

*ಅ) ಇಂಗ್ಲಿಷ್ ಆ) ಹಿಂದಿ*

*ಇ) ಹಿಂದೂಸ್ಥಾನಿ ಈ) ರೀಜನಲ್ ಲ್ಯಾಂಗ್ವೇಜ್ (ಪ್ರಾಂತೀಯ ಭಾಷೆ)*

*2. ಉತ್ತಮ ಶಿಕ್ಷಣವಾಗಿ ಇಂಗ್ಲಿಷ್ ಕಲಿಯುವುದು ಮುಖ್ಯ:ಸಂಸ್ಕೃತಿಯಲ್ಲಿ ಶ್ರೀಮಂತಿಕೆ, ಬುದ್ಧಿವಂತಿಕೆಯ ಎತ್ತರ: ಈ ಹೇಳಿಕೆ ಒಪ್ಪಿವಿರಾ? ಕಾರಣ ನೀಡಿ.*

..........................................................................................................

..........................................................................................................

..........................................................................................................

*3. ಸ್ವಾತಂತ್ರ್ಯ ನಂತರವೂ ಇಂಗ್ಲಿಷ್ ಮುಖ್ಯಪಾತ್ರ ವಹಿಸುತ್ತಿದೆ ಏಕೆ?*

..........................................................................................................

..........................................................................................................

..........................................................................................................

Notes

## 2.7 ಭಾರತದಲ್ಲಿ ಭಾಷಾ ಶಿಕ್ಷಣ ನೀತಿ

ಸ್ವಾತಂತ್ರ್ಯ ಬಂದ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭಾರತದಲ್ಲಿ ಶಿಕ್ಷಣಕ್ಕೆ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿವೆ. ದೇಶದ ಪ್ರಗತಿ ಹಾಗೂ ರಕ್ಷಣೆಗಾಗಿ ಭಾರತದಲ್ಲಿ ಭಾಷಾ ಶಿಕ್ಷಣ ನೀತಿಯನ್ನು ಅರ್ಥಮಾಡಿಕೊಳ್ಳಲು ಹಲವು ಕಮೀಷನ್‌ಗಳು, ಸಮಿತಿಗಳು ನೀಡಿರುವ ಸಲಹೆ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು ತೀರಾಮುಖ್ಯ.

1968ರಲ್ಲಿ ಒಪ್ಪಿತವಾದ ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತದ ಶಿಕ್ಷಣದ ಸ್ಥಿತಿ, ಸಂಸ್ಕೃತಿಯ ಪ್ರಗತಿ, ಜನತೆಯ ಸೃಜನಶೀಲತೆಗೆ ಭಾರತೀಯ ಭಾಷೆಗಳು ಹಾಗೂ ಸಾಹಿತ್ಯ ಮುಖ್ಯ ಕಾರಣ ಎಂದಿತು.

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಪ್ರಾಂತೀಯ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಬೇಕೆಂದು ಹಲವು ವರ್ಷಗಳಿಂದ ಪ್ರೋತ್ಸಾಹಿಸಲಾಯಿತು. ರಾಜ್ಯ ಸರ್ಕಾರಗಳು ತ್ರಿಭಾಷಾ ನೀತಿಯನ್ನು ಮಾಧ್ಯಮಿಕ ಶಾಲಾ ಹಂತದಲ್ಲಿ ಅನುಸರಿಸಬೇಕು.

ಭಾಷಾ ಬೆಳವಣಿಗೆ, 1986, 1968 ರಾಷ್ಟ್ರೀಯ ಶಿಕ್ಷಣ ನೀತಿಗಳನ್ನು ಬಹಳ ಅರ್ಥಪೂರ್ಣವಾಗಿ ವೇಗವಾಗಿ ಜಾರಿಗೆ ತರಬೇಕು. 1986 ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿಮರ್ಶಿಸಿ 1990 ರಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲಿಷ್‌ನ ಕಾರಣದಿಂದ ಶಿಕ್ಷಣ ಪಡೆಯಲಾಗುತ್ತಿಲ್ಲ. ಆ ಕಾರಣದಿಂದ ಎಲ್ಲಾ ಮಟ್ಟದಲ್ಲೂ ಪ್ರಾಂತೀಯ ಭಾಷಾ ಮಾಧ್ಯಮದಲ್ಲೇ ಶಿಕ್ಷಣ ಸಿಗಬೇಕು.

ಎನ್.ಸಿ.ಎಫ್. 2005 ರ ಪ್ರಕಾರ ಮಕ್ಕಳು ತಮ್ಮ ಹುಟ್ಟಿನಿಂದ ಭಾಷಾ ತಿಳುವಳಿಕೆ ಹೊಂದಿರುತ್ತಾರೆ. ಶಾಲೆಗೆ ಹೋಗುವ ಮೊದಲೇ ಮಕ್ಕಳಿಗೆ ಸಂಕೀರ್ಣತೆ ಮತ್ತು ನಿಯಮಾವಳಿಗಳ ಜ್ಞಾನ ಇದ್ದು ಶಾಲೆಗೆ ಹೋದ ನಂತರ 2–3 ಭಾಷೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮಾತನಾಡುತ್ತಾರೆ.

ಶೈಕ್ಷಣಿಕ ರೂಪುರೇಖೆಯು ತ್ರಿಭಾಷಾಸೂತ್ರ ಜಾರಿಗೆ ಒತ್ತಾಯಿಸಿದೆ. ಮಾತೃಭಾಷೆಗಳು ಬುಡಕಟ್ಟು ಜನಾಂಗೀಯ ಭಾಷಾ ಮಾಧ್ಯಮದಲ್ಲಿ ಕಲಿಸಲು ಇಂದು ಒತ್ತು ನೀಡಲಾಗಿದೆ. ಭಾರತೀಯ ಬಹುಭಾಷಿಕತೆಯು ಮಕ್ಕಳಿಗೆ ಬಹುಭಾಷಾ ಪರಿಣತಿ (ಇಂಗ್ಲಿಷ್ ಕೂಡ ಸೇರಿ) ಪಡೆಯಲು ಸಾಧ್ಯವಾಗಿದೆ. ಮಾತೃಭಾಷೆಯನ್ನು ಬಳಸಿ ಭಾಷಾ ಬೋಧನೆಯು ಉತ್ತಮವಾಗಿ ಸಾಧ್ಯವಾಗುವುದು.

ದ್ವಿಭಾಷೆ ಆದ ಬಹುಭ್ಞಾಇಕತೆಯು ಬಹಳವಾದ ಅನುಕೂಲತೆಗಳನ್ನು ಒಳಗೊಂಡಿದೆ. ತ್ರಿಭಾಷಾ ಸೂತ್ರವು ನಮ್ಮ ಭಾಷಿಕ ಸವಾಲು ಮತ್ತು ಅವಕಾಶಗಳನ್ನು ಬಳಸಿಕೊಳ್ಳಲು ಸಹಕಾರಿಯಾಗಿದೆ. ವಿವಿಧ ಭಾಷೆಗಳನ್ನು ಕಲಿಯಲು ಇದು ಒಂದು ಉತ್ತಮ ಸೂತ್ರ.



Notes

**ನಿಮ್ಮ ಪ್ರಗತಿ ಗಮನಿಸಿ – 6**

1. *ಯಾವ ವರ್ಷಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಬಿಡುಗಡೆಯಾಯಿತು?*
   *ಅ) 1968 ಆ) 1986*
   *ಇ) 1990 ಈ) 1992*

2. *ತ್ರಿಭಾಷಾಸೂತ್ರ ರಾಜ್ಯ ಎಂದರೇನು?*
   ..........................................................................................................
   ..........................................................................................................
   ..........................................................................................................

3. *ರಾಷ್ಟ್ರೀಯ ಶಿಕ್ಷಣ ನೀತಿಯ ಅನುಕೂಲಗಳೇನು? ಇದರಿಂದ 1968ರ ಭಾರತೀಯ ಭಾಷೆಗಳ ಮತ್ತು ಸಾಹಿತ್ಯಕ ಪ್ರಗತಿ ಸಾಧಿತವಾಗಿದೆಯೇ?*
   ..........................................................................................................
   ..........................................................................................................
   ..........................................................................................................

## 2.8 ಸಾರಾಂಶ

ಬಹುಭಾಷಿಕತೆಯು ಭಾರತೀಯ ಭಾಷಿಕ ಪರಂಪರೆಯೊಂದಿಗೆ ಸೇರಿ ಹೋಗಿರುವ ಭಾಗವಾಗಿದೆ. ಭಾರತವು ಬಹುಭಾಷಿಕ ರಾಷ್ಟ್ರವಾಗಿರುವುದು ಸಮಸ್ಯೆಯೇನಲ್ಲ. ಅದು ಸಂಪನ್ಮೂಲ ಮತ್ತು ಸಾಂಸ್ಕೃತಿಕ ಸಿರಿತನದ ಧ್ಯೋತಕ.

ಏಕಭಾಷೆ ಅಥವಾ ಬಹುಭಾಷಿಕತೆಯು ದೇಶದ ಸಂಸ್ಕೃತಿ ಮತ್ತು ನಡೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ವೈವಿಧ್ಯತೆಯಲ್ಲಿ ನಾವು ಮುಕ್ತ ನೀತಿಯವರಾದರೆ, ಪರಿಸರದಲ್ಲಿರುವ ಎಲ್ಲಾ ಭಾಷೆಗಳ ಅಸ್ತಿತ್ವ ಮತ್ತು ಸಂಕುಚಿತ ಆಲೋಚನೆ ಭಾಷೆಯು ಕುಗ್ಗಲು ಕಾರಣವಾಗುವುದು.

ಭಾರತದಲ್ಲಿ ಭಾಷೆಗಳು ಮುಖ್ಯವಾಗಿ ನಾಲ್ಕು ಭಾಷಾ ಕುಟುಂಬಗಳಿಂದ ಬಂದವು, ಆದರೂ ನಾವೆಲ್ಲರೂ ಒಂದೇ ಭಾಷಿಕ ಪ್ರದೇಶದವರು. ಭಾಷಾ ವಿಜ್ಞಾನದ ಪ್ರಕಾರ ಭಾಷೆ ಮತ್ತು ಉಪಭಾಷೆಯ ನಡುವೆ ಯಾವುದೇ ವ್ಯತ್ಯಾಸವಿಲ್ಲ

ಹಿಂದಿಯ ಬೆಳವಣಿಗೆ, ಕತೆಗಳು, ನಾಟಕ, ವಿಮರ್ಶೆ, ಆತ್ಮಚರಿತ್ರೆ, ಪ್ರವಾಸ ಕಥನ ಪ್ರಬಂಧಗಳು ಕಾರಣವಾಗಿವೆ. ಕಾನ್ಸಿಟಿಟುಂಟ್ ಅಸೆಂಬ್ಲಿಯಲ್ಲಿ 14 ಸೆಪ್ಟೆಂಬರ್ 1949 ರಂದು ಇಂಡಿಯನ್ ಯೂನಿಯನ್ ಹಿಂದಿಯನ್ನು ಆಡಳಿತ ಭಾಷೆ, ಇಂಗ್ಲಿಷ್ ಅದಕ್ಕೆ ಸಹಕಾರಿಯಾ ಭಾಷೆಯೆಂದು ಘೋಷಿಸಿತು.

ಇಂಗ್ಲಿಷ್ ವಿಶ್ವಾತ್ಮಕ ಭಾಷೆಯೆಂದು ಬಹುಭಾಷಿಕ ದೇಶದಲ್ಲಿ ಗುರುತಿಸಲಾಗಿದೆ. ತ್ರಿಭಾಷಾ ಸೂತ್ರಗಳು ಹಲವು ಭಾಷೆಗಳನ್ನು ಕಲಿಯಲು ಇರುವ ಉತ್ತಮ ಸೂತ್ರ.

Notes

## 2.9 ಆಧಾರ ಗ್ರಂಥಗಳು


ಅಗ್ನಿಹೋತ್ರಿ, ಆರ್.ಕೆ.2007, ಹಿಂದಿ ಎನ್ ಎಸೆನ್ಷಿಯನ್ ಗ್ರಾಮರ್, ಲಂಡನ್: ರೂಟ್‌ಲೆಡ್ಜ್

ಅಗ್ನಿಹೋತ್ರಿ, ಆರ್.ಕೆ.2007 Towards a pedagogical paradigm Rooted in Multilinguality. International Multilingual Research Journal, Vol.(2), 1-10

Agnihotri, R.K. and Vandyapadhyay, P.K 2000(ed) Bha:sha: Babubha:Shita:our Hindi. New Delhi: Shilalekh

Agnihotri R.K and Kumar, Sanjay, 2001. Bha:sha, Boli aur Samaj: Ek Antah Samvaad. New Delhi: DEshkaal

Agrawal J.C. 2006. Rashtriiya Shikshaa Niiti. New Delhi: Prabhat Bhatia, Kailash Chandra, 1989 Bhartiiya Bhashayen, New Delhi: Prabhat National curriculum Framework (NCF) 2005, New Delhi: NCERT

www.languageinindia.com/april2004/katmandupaper1.html accessed on November 2011.


## 2.10 ಚಟುವಟಿಕೆ

1. ನಿಮ್ಮ ಮಾತುಗಳಲ್ಲಿ ಭಾರತದ ಭಾಷಾವೈವಿಧ್ಯತೆಯನ್ನು ಕುರಿತಾಗಿ ಬರೆಯಿರಿ.
2. ಬಹುಭಾಷಿಕತೆ ಭಾರತದ ಸಮಸ್ಯೆಯಲ್ಲ: ಅದು ಸಂಪನ್ಮೂಲ ವಿವರಿಸಿ.
3. ಭಾರತದಲ್ಲಿ ಯಾವ ಭಾಷಾ ಪರಿಸರ ಹೇಗೆ ವಿವರಿಸಿ.
4. ಭಾರತ ಒಚಿದೇ ಭಾಷಾ ಪ್ರದೇಶ ಹೀಗೆ ಎಚಿದು ವಿವರಿಸಿ.
5. ಒಂದು ಭಾಷೆಯನ್ನು ಶಾಸ್ತ್ರೀಯ ಭಾಷೆಯೆಂದು ಪರಿಗಣಿಸಲು ಇರುವ ಮಾನದಂಡಗಳು ಯಾವುವು?
6. ಬ್ರಜ್, ಮೈಥಿಲಿ, ಅವಧಿ ಭಾಷೆಗಳು ಹಿಂದಿ ಭಾಷೆ ಮತ್ತು ಸಾಹಿತ್ಯ ಪ್ರಗತಿಗೆ ಕೊಡುಗೆಗಳನ್ನು ಕೊಟ್ಟಿದೆ. ಇದರ ಪರ ಮತ್ತು ವಿರೋಧದ ಮಾತುಗಳನ್ನು ಸಂಗ್ರಹಿಸಿ.
7. ಹಿಂದಿ ಸಾಹಿತ್ಯದ ಬೆಳವಣಿಗೆಗೆ ವಿಮರ್ಶೆ, ಆತ್ಮಚರಿತ್ರೆ, ಜೀವನ ಚರಿತ್ರೆ, ವರದಿ ಪ್ರವಾಸ ಕಥನ ನಾಟಕಗಳು ಸಹಕಾರಿಯಾಗಿವೆ. ಈ ಹೇಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

8. ಎನ್‌ಸಿಎಫ್–2005 ಯು ಬಹುಭಾಷಿಕತೆಯ ಬಗ್ಗೆ ಏನು ಹೇಳುತ್ತದೆ? ಈ ನೀತಿ ಬಗ್ಗೆ ನಿಮ್ಮ ಅಭಿಪ್ರಾಯವೇನು?
9. ಭಾರತೀಯ ಸಂವಿಧಾನದ 8ನೆಯ ಪಟ್ಟಿಯಲ್ಲಿ ಎಷ್ಟು ಭಾಷೆಗಳಿವೆ ಹೆಸರಿಸಿ.
10. ನಾಗ ಸಮುದಾಯವು ಭಾಷಾ ವೈವಿಧ್ಯತೆಯ ಬಗ್ಗೆ ಸಕಾರಾತ್ಮಕವಾಗಿದ್ದು ಅದು ಬಹುಭಾಷಿಕತೆಯನ್ನು ಹೇಳುವುದು. ನಾಗ ಸಮುದಾಯ ಇದಕ್ಕೆ ಹೇಗೆ ಕಾರಣ ಮಾಡಿದೆ.

## ಚಟುವಟಿಕೆ

1. ಒಂದೆರಡು ಹಳ್ಳಿಗಳನ್ನು ಸುತ್ತಾಡಿ ಅಲ್ಲಿ ಬಹುಭಾಷಿಕತೆ ಇದೆಯೇ? ನೋಡಿ ಆ ಭಾಷೆಗಳು ಯಾವುವು?
2. ಶಾಲೆಯಲ್ಲಿ ಹಿಂದಿಯ ಬಗ್ಗೆ ಆಸಕ್ತಿ ಕುದುರಿಸಲು ಹಿಂದಿ ದಿನದಂದು ಯಾವ ಚಟುವಟಿಕೆ ಮಾಡುವಿರಿ.
3. ನಿಮ್ಮ ಹತ್ತಿರದ ಶಾಲೆಗಳಲ್ಲಿ ತ್ರಿಭಾಷಾ ಸೂತ್ರದನ್ವಯ ಯಾವ ಭಾಷೆಗಳನ್ನು ಕಲಿಸುತ್ತಿದ್ದಾರೆ?

Notes

# ಘಟಕ 3 ಭಾಷಾ ಕಲಿಕೆ ಮತ್ತು ಬೋಧನೆ

## ಸ್ವರೂಪ

*3.0* ಪೀಠಿಕೆ

*3.1* ಕಲಿಕೆಯ ಉದ್ದೇಶಗಳು

*3.2* ಮೊದಲ ಭಾಷಾ ಗಳಿಕೆ/ ಸಂಪಾದನ

*3.2.1* ಭೌತಿಕ ಅಳವಡಿಕೆ–ಮನುಷ್ಯ

*3.2.2* ಪರಿಸರದ ಪಾತ್ರ

*3.2.3* ಭಾಷಾ ಗಳಿಕೆಯ ಹಂತಗಳು

*3.3* ಎರಡನೆಯ ಭಾಷೆಯ ಗಳಿಕೆ/ಕಲಿಕೆ

*3.3.1* ಎರಡನೆಯ ಭಾಷೆಯನ್ನು ಮೊದಲ ಭಾಷೆಯು ಹಾಗೆ ಕಲಿಯಬಹುದೇ?

*3.3.2* ಮಕ್ಕಳಿಗೆ ಎರಡನೆಯ ಭಾಷಯನ್ನು ಕಲಿಯಲು ನಾವು ಹೇಗೆ ಸಹಕರಿಸುತ್ತೇವೆ.

*3.3.3* ಶಾಲೆಯಲ್ಲಿ ಎರಡನೆಯ ಭಾಷೆಯ ಪ್ರಾವೀಣ್ಯ ಪಡೆಯಲು ಕಲಿಸುವ ಪಾತ್ರ ಎಂತಹುದು

*3.3.4* ಎರಡನೆಯ ಭಾಷಾ ಕಲಿಕೆಯಲ್ಲಿ ಮೊದಲನೆಯ ಭಾಷೆಯು ನೆರವಿಗೆ ಬರುತ್ತದೆಯೇ?

*3.4* ಭಾಷಾ ಬೋಧನಾ ವಿಧಾನಗಳು

*3.4.1* ವ್ಯಾಕರಣ ಅನುವಾದ ವಿಧಾನ

*3.4.2* ನೇರ ವಿಧಾನ

*3.4.3* ಭಾಷೆ ಕೇಳುವ ವಿಧಾನ

*3.4.4* ಸಂವಾದದ ವಿಧಾನ

*3.5* ಸಾರಾಂಶ

*3.6* ಆಧಾರ ಗ್ರಂಥಗಳು

*3.7* ಘಟಕದ ಕೊನೆಯ ಚಟುವಟಿಕೆಗಳು

## 3.0 ಪೀಠಿಕೆ

ಮನೆಯ ಪರಿಸರದಲ್ಲಿ ಭಾಷೆಯ ಸಂಪಾದನೆಯ / ಕಲಿಕೆಯ ಪ್ರಕ್ರಿಯೆಯನ್ನು ಅಧ್ಯಯನ ಮಾಡಿದರೆ, ತರಗತಿಯಲ್ಲಿ ಭಾಷೆಯನ್ನು ಹೇಗೆ ಕಲಿಸಬಹುದೆಂದು ಅರಿಯಲು ಸಾಕಷ್ಟು ನೆರವಾಗುವುದು. ಈ ಘಟಕದಲ್ಲಿ ಭಾಷಾ ಕಲಿಕೆ–ಭಾಷಾ ಬೋಧನೆಯ ನಡುವಣ ಸಂಬಂಧವನ್ನು ವಿವರವಾಗಿ ಚರ್ಚಿಸಲಾಗಿದೆ.

Notes

ಈ ಘಟಕವು ಒಂದು ಮೂಲ ಪ್ರಶ್ನೆಯನ್ನು ಕೇಳುವುದರೊಂದಿಗೆ ಪ್ರಾರಂಭವಾಗಿದೆ. ಮಕ್ಕಳು ಹೇಗೆ ಭಾಷೆಯನ್ನು ಗಳಿಸುತ್ತಾರೆ/ ಕಲಿಯುತ್ತಾರೆ? ಅವರು ಮನೆಯಲ್ಲಿ ಮೊದಲ ಭಾಷೆಯನ್ನು ಹೇಗೆ ಕಲಿಯುತ್ತಾರೆ? ನಂತರ ಎರಡನೆಯ ಭಾಷೆಯನ್ನು ಕಲಿಯಲು ಶಾಲೆಯಲ್ಲಿ ಇರುವ ಪ್ರಕ್ರಿಯೆನ್ನು ತಿಳಿಸಲಾಗಿದೆ. ಎರಡನೆಯ ಭಾಷೆಯಲ್ಲಿ ಆಗುವ ತಪ್ಪುಗಳಿಗೆ ಕಾರಣ ಅವರ ಮೊದಲ ಭಾಷೆಯು ಮಧ್ಯದಲ್ಲಿ ಮೂಗು ತೂರಿಸುವುದರಿಂದ ಎರಡನೆಯ ಭಾಷೆ ಕಲಿಸಲು ಇರುವ ವಿವಿಧ ಮಾರ್ಗ ಹಾಗೂ ವಿಧಾನಗಳನ್ನು ಕುರಿತಾಗಿ ಹೇಳುತ್ತಾ ಮಗು ಕಲಿಯುವ ಸಹಜ ಪ್ರಕ್ರಿಯೆಯನ್ನು ಈ ಘಟಕದ ಕೊನೆಯಲ್ಲಿ ಹೇಳಲಾಗಿದೆ.

## 3.1 ಉದ್ದೇಶಗಳ ಕಲಿಕೆ

ಮಕ್ಕಳು ತಮ್ಮ ಮೊದಲ ಭಾಷೆ(ಗಳು) ಯನ್ನು ಹೇಗೆ ಸಂಪಾದಿಸುತ್ತಾರೆ?

1. ಮೊದಲ ಭಾಷೆಯ ಸಂಪಾದನೆ ಮತ್ತು ಎರಡನೆಯ ಭಾಷೆಯ ಕಲಿಯುವಿಕೆಯ ಸಂಬಂಧ ಏನು ತಿಳಿಸಿ?

2. ತರಗತಿಯಲ್ಲಿ ಭಾಷೆಯನ್ನು ಹೇಗೆ ಕಲಿಸಬೇಕು?

## 3.2 ಮೊದಲ ಭಾಷೆಯ ಸಂಪಾದನೆ

1970 ರಲ್ಲಿ ಕ್ಯಾಲಿಫೋರ್ನಿಯಾದ ಮಕ್ಕಳ ಆಸ್ಪತ್ರೆಗೆ ಜೆನಿ ಎಂಬ ಹುಡುಗಿ ಸೇರಿದಳು. ತಾನು 20ನೆಯ ತಿಂಗಳಿನವಳಾಗಿದ್ದಾಗಿನಿಂದ, ಈಗ ಅವಳಿಗೆ 13 ವರ್ಷವಾಗಿದೆ. ಅದೇ ಕೋಣೆಯ ಕುರ್ಚಿಯಲ್ಲಿ ಅಥವಾ ಹಾಸಿಗೆಯಲ್ಲಿ ಕಟ್ಟಿರುತ್ತಿದ್ದರು. ಅವಳಿಗೆ ಟಿವಿ ನೋಡುವ ಅಥವಾ ರೇಡಿಯೋ ಕೇಳುವ ಅವಕಾಶ ಇರಲಿಲ್ಲ. ಅವಳಿಗೆ ಊಟ ತರುತ್ತಿದ್ದ ತಾಯಿಯ ಸಂಪರ್ಕ ಮಾತ್ರ ಇತ್ತು. ಅವಳು ಮಾಡಿದ ಗಲಾಟೆಯನ್ನು ಸಹಿಸದ ತಂದೆ ಈ ರೀತಿ ಅವಳನ್ನು ಬಂಧಿಸಿದ್ದರು. ಜೆನಿಯನ್ನು ಭೇಟಿಯಾದಾಗ ಅವಳು ಮಾತನಾಡುತ್ತಿರಲಿಲ್ಲ ಹಾಗೂ ಕೆಲವಾರು ವರ್ಷಗಳು ಭಾಷಾ ಸಂಪರ್ಕ ಸಿಕ್ಕರೂ ಅವಳಿಗೆ ವ್ಯಾಕರಣಬದ್ಧ ವಾಕ್ಯಗಳನ್ನು ಆಡಲಾಗುತ್ತಿರಲಿಲ್ಲ.

ಸಂಧ್ಯಾ ತನ್ನ 20ನೆಯ ವಯಸ್ಸಿನಲ್ಲಿ ಕಾರು ಅಪಘಾತಕ್ಕೆ ಒಳಗಾದಳು. ಅವಳ ತಲೆಗೆ ಪೆಟ್ಟಾಗಿ, ಅವಳ ಎಡಮೆದುಳು ಜರ್ಜರಿತವಾಗಿತ್ತು ಅದರಿಂದಾಗಿ ಅವಳ ಮಾತುಗಾರಿಕೆಯ ಮೇಲೆ ಅದು ಪ್ರಭಾವ ಬೀರಿತು. ತಿಂಡಿ ಏನು ತಿಂದೆ ಎಂದು ಕೇಳಿದರೆ ಅವಳು ಒಜುಟಿ ಕಝುಚಿ ಝುಚಿಚಿ ಚಿಣಡಿ ಡಿು ಜಠಠಜು ಎನ್ನುತ್ತಿದ್ದಳು.

Notes

ಹೋಮ್ನಾ ನನ್ನ ಸ್ನೇಹಿತೆಯ 4 ೀ ವರ್ಷದ ಮೊಮ್ಮಗಳು. ಅವಳು ದೆಹಲಿಯಲ್ಲಿ ಹುಟ್ಟಿದ್ದಳು. ಅವಳಿಗೆ ಹಿಂದೆ, ಇಂಗ್ಲಿಷ್, ಪಂಜಾಬಿ, ಮಂಡ್ಯಾಲಿ ಹಿಮಾಚಲ ಪ್ರದೇಶದಲ್ಲಿ ಮಾತನಾಡುವ ಭಾಷೆ ಈ ಎಲ್ಲಾ ಭಾಷೆಗಳನ್ನು ಅರ್ಥಮಾಡಿಕೊಂಡು ಮಾತನಾಡುತ್ತಿದ್ದಳು. ಅವಳಿಗೆ ಎರಡೂವರೆ ವರ್ಷವಾದಾಗ ದಕ್ಷಿಣ ಕರ್ನಾಟಕದ ಬೆಂಗಳೂರಿಗೆ ಬಂದಲೂ. ಅದರಿಂದ ಕನ್ನಡ ತಮಿಳು ಕೇಳಿಸಿಕೊಂಡಳು. ತನ್ನ ಮನೆಗೆಲಸದಾಕೆಯ ಜೊತೆ ತಮಿಳಿನಲ್ಲಿ ಇಂದು ಮಾತನಾಡುತ್ತಾಳೆ. ತನ್ನ ಸ್ನೇಹಿತೆಯರ ಜೊತೆ ಕನ್ನಡ ತಮಿಳು ಹಾಡುಗಳನ್ನು ಹಾಡುತ್ತಾಳೆ. ಜೊತೆಗೆ ಹಿಂದಿ ಇಂಗ್ಲಿಷ್‌ನಲ್ಲಿ ಅರಳು ಹುರಿದಂತೆ ಮಾತನಾಡುತ್ತಾಳೆ. ಭಾಷಾ ಗಳಿಕೆಯ ಸಂಬಂಧದಲ್ಲಿ ಈ ನಿಜ ಜೀವನದ ಪರಿಸ್ಥಿತಿ ಏನು ಹೇಳುತ್ತದೆ? ಕೇಳಿಸಿಕೊಳ್ಳುವುದರಿಂದ ನೇರವಾಗಿ ಭಾಷೆ ಕಲಿಯಬಹುದೇ ಅಥವಾ ಭೌತಿಕತೆ ಏನಾದರೂ ಪ್ರಭಾವ ಬೀರುವುದೇ? ಈ ಎರಡಕ್ಕೂ ಸಂಧ್ಯಾ, ಜೆನ್ನಿ, ಹೋಮ್ನಾ ಅವರುಗಳು ಸಾಕ್ಷಿಯಾಗುತ್ತಾರೆ. ಸಂಧ್ಯಾಳಿಗೆ ಮಾತುಗಾರಿಕೆಯ ಮೇಲೆ ಅವಳ ಅಪಘಾತ ಕಾರಣ ಮಾಡಿದರೆ, ಜೆನ್ನಿಗೆ ಮಾತೇ ಬರಲಿಲ್ಲ. ಹೋಮ್ನಾ ಹಲವು ಭಾಷೆಗಳನ್ನು ಒಟ್ಟಿಗೆ ಕಲಿತಿದ್ದಾಳೆ. ಭೌತಿಕವಾಗಿ ಭಾಷಾ ಸಂಪಾದನೆಯಲ್ಲಿ ಪರಿಸರವು ಕಾರಣವಾಗಿದೆ. ಹಾಗೆ ನೋಡಿದಾಗ ಭಾಷೆ ಜನ್ಮಸಿದ್ಧವಾದದು ಎಂಬುದು ಸುಳ್ಳು. ಭಾಷಾ ಕಲಿಕೆಯಲ್ಲಿ ಸಹಜತೆ ಮತ್ತು ಪೋಷಣೆ ಎರಡು ಪಾತ್ರವೂ ಇದೆ.

## ನಿಮ್ಮ ಪ್ರಗತಿ ಗಮನಿಸಿ

1. *ಮಗು ಏಕೆ ಒಜುಟಿ ಕಝುಚಿ ಝುಚಿಚಿ ಚಿಣಡಿ ಡಿು ಜಿಡಿಡಿಜು ಎನ್ನುತ್ತಿತ್ತು?*

   *ಅ) ಎಡಮೆದುಳಿಕೆ ಪೆಟ್ಟಾಗಿದೆ*
   *ಆ) ಶ್ರೀಮಂತ್ ಭಾಷಾ ಪರಿಸರ ಸಿಕ್ಕಿಲ್ಲ*
   *ಸಿ) ಮಾತನಾಡಲು ಅಭ್ಯಾಸ ಮಾಡಿಕೊಂಡಿಲ್ಲ*
   *ಡಿ) ಭಾಷೆ ಗಳಿಸಲು ಅವಳಿಗೆ ಅವಕಾಶವಾಗಿಲ್ಲ.*

2. *ಮನೆಯ ಪರಿಸರದಲ್ಲಿ ಎಷ್ಟು ಭಾಷೆಗಳನ್ನು ಕಲಿಯಬಹುದು?*

   ..................................................................................................................................

   ..................................................................................................................................

   ..................................................................................................................................

Notes

3. ನಿಮ್ಮ ಶಾಲೆಯ ಮಕ್ಕಳು ಮನೆಯ ಪರಿಸರದಲ್ಲಿ ಎಷ್ಟು ಭಾಷೆಗಳನ್ನಾಡುವರು?

   ..........................................................................................................

   ..........................................................................................................

   ..........................................................................................................

4. ಭಾಷೆಯನ್ನು ಕಲಿಸುವ ಸಂದರ್ಭದಲ್ಲಿ ಎಂತಹ ಪರಿಸರ ನೀಡಬೇಕೆಂಬ ಸಂದರ್ಭದಲ್ಲಿ ಯಾವೆರಡು ಅಂಶಗಳನ್ನು ಗಮನದಲ್ಲಿಡಬೇಕು?

   ..........................................................................................................

   ..........................................................................................................

   ..........................................................................................................

5. ನಾಲ್ಕು ವರ್ಷದ ಮಗುವಿನೊಂದಿಗೆ ಮಾತನಾಡಿ, 20 ವಾಕ್ಯಗಳನ್ನು ಬರೆಯಿರಿ. ಮಗುವಿಗೆ ಏನು ಬೇಕೆಂದು ತಿಳಿಸಬಲ್ಲುದೆ? ತನಗೆ ಯಾವುದು ಬೇಡವೆಂದು ತಿಳಿಸಬಲ್ಲುದೆ? ಆಕೆಯ ಬೇಕು ಮತ್ತು ಬೇಡಗಳನ್ನು ತಿಳಿಸಬಲ್ಲುದೆ? ಪ್ರಶ್ನೆಗಳನ್ನು ಹಾಕಬಲ್ಲದೆ? ತನಗೆ ಬೇಕಾದುದನ್ನು ಮಗು ಕೇಳುತ್ತದೆಯೇ?

   ..........................................................................................................

   ..........................................................................................................

   ..........................................................................................................

## 3.2.1 ಜೀವನಶಾಸ್ತ್ರಕ್ಕೆ ರೂಪಾಂತರಿಸಲು ಆಂಗಿಕವನ್ನು ಭಾಷೆಯ ಪ್ರಯೋಗಕ್ಕಾಗಿ ಬಳಸುತ್ತಾರೆ

ನಾವುಗಳು ಜೀವನಶಾಸ್ತ್ರವನ್ನು ತಿಳಿಸಲು ಭಾಷೆಯನ್ನು ಬಳಸುತ್ತೇವೆ. ಮನುಷ್ಯರು ಶಬ್ದವನ್ನು ಮಾಡುತ್ತಾರೆ ಆ ಶಬ್ದಕ್ಕೆ ಅರ್ಥ ಹಚ್ಚಿಕೊಂಡು ಕೇಳಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ನಮ್ಮ ದೇಹದ ವಿವಿಧ ಅಂಗಗಳನ್ನು ಈ ಪ್ರಕ್ರಿಯೆಯಲ್ಲಿ ಹೊಂದಿಸಿಕೊಳ್ಳುತ್ತೇವೆ.

**ಚರ್ಚೆ/ ಮಾತುಗಾರಿಕೆ:**

ನಾವು ಮಾತನಾಡುವಾಗ ಗಾಳಿಯನ್ನು ಶ್ವಾಸಕೋಶದಿಂದ ಹೊರಹಾಕುತ್ತೇವೆ. ಅದು ಶ್ವಾಸನಾಳದ ಮೂಲಕ ಸ್ವರ ಪೆಟ್ಟಿಗೆಯ ವಿವಿಧ ಭಾಗಗಳಿಗೆ ಚಲಿಸಿ ಬಾಯಿಯಿಂದ ವಿವಿಧ ಶಬ್ದಗಳು ಹೊರಡುತ್ತವೆ; ಕೆಲವು ಸಾರಿ ಗಾಳಿಯು ನಾಸಿಕದ ಮೂಲಕ ಹೊರಹೋಗುವುದು. ಮಾತನ್ನು ಹೊರಡಿಸುವಲ್ಲಿ ಈ ಎಲ್ಲಾ ಅಂಗಗಳ ಕಾರ್ಯವೂ ಮುಖ್ಯ. ನಾಲಗೆ ರುಚಿಗೆ, ಹಲ್ಲುಗಳು ಅಗಿಯಲು, ತುಟಿಯು ಹೀರಲು, ಶ್ವಾಸಕೋಶ, ಶ್ವಾಸನಾಳ, ಬಾಯಿ, ನಾಲಗೆಯು ಉಸಿರಾಟಕ್ಕೆ ನೆರವಾಗುವುದು. ಮಾತನಾಡುವಾಗ ಶ್ವಾಸಕೋಶಗಳು ನಮ್ಮ ಉಸಿರಾಟದ ತಾಳವನ್ನು ಸಂಭಾಳಿಸಿಕೊಂಡು ಮಾತನಾಡಲು ನೆರವಾಗುವುದು.

Notes

ಉಸಿರಾಟದ ಸಂಖ್ಯೆ ನಿಮಿಷಕ್ಕೆ ಕಡಿಮೆಯಾಗುವುದು ನಮ್ಮ ತುಟಿಯ ಮಾಂಸಖಂಡಗಳು ಬಹಳ ಚೆನ್ನಾಗಿ ಬೆಳವಣಿಗೆ ಹೊಂದಿದ್ದು, ಎರಡು ಪರಸ್ಪರ ಒಂದರ ಹತ್ತಿರ ಇನ್ನೊಂದು ಚಲಿಸುವುದು, ಗಟ್ಟಿಯಾಗಿ ಮುಚ್ಚಿಕೊಳ್ಳುವುದು. ಪ್ರತ್ಯೇಕವಾಗುವುದು, ಹಿಂದಕ್ಕೆ ಮುಂದಕ್ಕೆ ಗುಂಡಾದ ಆಕಾರಕ್ಕೆ ಬರುವುದು. ನಾಲಕಗೆಯು ಮನುಷ್ಯನದ್ದು ದಪ್ಪಗಿದ್ದು ಉದ್ದಕ್ಕೆ ತೆರೆಯಲಾಗದು, ಕೋತಿಯ ನಾಲಗೆ ತೆಳ್ಳಗಿದ್ದು ದವಡೆ, ನಾಲಗೆ ಚಲಿಸುವುದು. ಇವೆಲ್ಲವೂ ಬೇರೆಬೇರೆ ಶಬ್ದಗಳನ್ನು ಹೊರಡಿಸಲು ನೆರವಾಗಿವೆ.

## ಗ್ರಹಿಕೆ

ಎಲ್ಲಾ ಪ್ರಾಣಿಗಳಂತೆ ಮಾನವನ ಮೆದುಳನ್ನು ಕೆಳಗಿನ ಭಾಗ ಮೆದುಳಿನ ನರತಂತು, ಮೇಲ್ಭಾಗ ಸೆರಬ್ರಮ್, ಮೆದುಳಿನ ನರತಂತು ಬೆನ್ನುಮೂಳೆ ಸೇರಿಕೊಂಡಿದ್ದು, ದೇಹವನ್ನು ಜೀವಂತವಾಗಿಡಲು ಉಸಿರಾಟದ, ಹೃದಯ ಬಡಿತದ ಹಿಡಿದ ಕಾಪಾಡುವುದು. ಸೆರಬ್ರಮ್ ನಮ್ಮ ಪ್ರಾಣಕ್ಕೆ ತುಂಬಾ ಮುಖ್ಯವಾಗಿದ್ದು ನಮ್ಮ ಅಂಗಾಂಶವನ್ನು ಪರಿಸರದೊಡನೆ ಸಮಾವೇಶಿಸಲು ಕಾರಣವಾಗಿದೆ. ಸೆರಬ್ರಮ್‌ನ್ನು ಎರಡು ಗೋಳಗಳಾಗಿ ಎಡಗೋಳ, ಬಲಗೋಳ ಎಂದು ವರ್ಗೀಕರಿಸಬಹುದು. ಎರಡು ಗೋಳಗಳು ಒಂದಕ್ಕೊಂದು ಸೇರಿವೆ.

ಬಲಗೋಲದಲ್ಲಿ ಅನುಭವಕ್ಕೆ ಬಂದದ್ದು ಎಡಭಾಗದಲ್ಲಿ ಕ್ರಿಯಾತ್ಮಕವಾಗುತ್ತದೆ. ಹಾಗೆಯೇ ಎಡಭಾಗದ್ದು ಬಲಭಾಗದಲ್ಲ ನಮ್ಮ ಸಾಮರ್ಥ್ಯ ಮತ್ತು ಮಾತು ಹೊರಡುವಿಕೆ 90% ಭಾಗದಷ್ಟು ಬಲಭಾಗದಲ್ಲಿ 70% ಎಡಭಾಗದಲ್ಲಿ ಉತ್ಪನ್ನವಾಗುವುದೆಂದು ಸಂಶೋಧನೆ ತಿಳಿಸಿದೆ.

ಈ ಗೋಲಗಳ ಮಾತಿನ ಮೇಲೆ ಹಿಡಿತವನ್ನು ಸರಳವಾಗಿ ಟೆಸ್ಟ್ ಮಾಡಲು ಇತ್ತೀಚೆಗೆ ಡಿಕೋಟಿಕ್ ಲಿಸನಿಂಗ್ ಟೆಸ್ಟ್‌ನ್ನು ಕಂಡುಹಿಡಿದಿದ್ದಾರೆ. ಎರಡು ಬೇರೆ ನರಗಳನ್ನು ಒಂದೊಂದು ಕಿವಿಯಲ್ಲಿ ಹೇಳಲಾಗುತ್ತದೆ. ಉದಾ: ಒಂದು ಕಿವಿಯಲ್ಲಿ ಎಂದು ಎಂದರೆ ಮತ್ತೊಂದು ಕಿವಿಯಲ್ಲಿ ಎಂದು, ಎಂದರೆ ಮತ್ತೊಂದು ಕಿವಿಯಲ್ಲಿ ನಾಲ್ಕು ಎಂದು, ಎಡ ಕಿವಿಯಲ್ಲಿ ಕೇಳಿಸಿಕೊಂಡಿದ್ದು, ಬಹಳ ಉದ್ದವಾದ ಪ್ರಕ್ರಿಯೆಯಾಗಿದ್ದು ಬಲಗೋಲಕ್ಕೆ ಕಳಿಸಿ ಮೊದಲಿಗೆ ನಂತರದಲ್ಲಿ ಎಡಗೋಳಕ್ಕೆ ಭಾಷೆಯನ್ನು ಕಳಿಸಲಾಗುವುದು. ಪದದ ಗ್ರಹಿಕೆ ಮತ್ತು ಉತ್ಪಾದಿಸಲು ಬಹಳ ಹೊತ್ತು ತೆಗೆದುಕೊಳ್ಳಲಾಗುತ್ತದೆ.

ಭಾಷೆಗೆ ಸಂಬಂಧಿಸಿದ ಎಡ ಗೋಲದಲ್ಲಿ ಬ್ರೋಕಾ ಏರಿಯಾ (ಕಿವಿಯ ಮೇಲಿನ ಮುಂದಿನ ಭಾಗ) Wernicke's ಚಡಿಜಚಿಎಡ ಕಿವಿಯ ಕೆಳ ಮತ್ತು ಸುತ್ತಲ ಪ್ರದೇಶ ಬ್ರೋಕಾ ಏರಿಯಾಕ್ಕೆ ಅಪಾಯವಾದರೆ ಮಾತನಾಡಲು ಸಮಸ್ಯೆ ರೆಂಕೀಸ್ ಏರಿಯಾಗೆ ಅಪಾಯವಾದರೆ ಮಾತು ಗ್ರಹಿಕೆಗೆ ತೊಂದರೆ. ರೋಗಿಗಳಿಗೆ ಕೆಲವು ಸಾರಿ ಪೆಟ್ಟಾದರೂ ತೊಂದರೆ ಆಗದಿರಬಹುದು. ಗಾತ್ರದಲ್ಲಿರುವ ಬದಲಾವಣೆ ಇದಕ್ಕೆ ಕಾರಣ ಎಂದು ಸಂಶೋಧನೆ ತಿಳಿಸಿದೆ. ಹೀಗೆ ಮಾನವನ ದೇಹವು ಮಾತಿನ ಸಾಮರ್ಥ್ಯ, ಮತ್ತು ಗ್ರಹಿಕೆಯ ಮೇಲೆ ಪಾತ್ರವಹಿಸುವುದು.

Notes

## ನಿಮ್ಮ ಪ್ರಗತಿ ಗಮನಿಸಿ–2

1. *ಮಾನವನ ಮೆದುಳಿನಲ್ಲಿ ಎಷ್ಟು ಗೋಲಗಳಿವೆ?*

   *ಎ) 1* *ಬಿ) 2*

   *ಸಿ) 3* *ಡಿ) 4*

2. *ಮೆದುಳಿನ ಯಾವ ಗೋಲವು ಭಾಷೆಗೆ ಸಂಬಂಧಿಸಿದ್ದು?*

   ........................................................................................................................

   ........................................................................................................................

   ........................................................................................................................

3. *ಡಿಕೋಟಿಕ್ ಲಿಸನಿಂಗ್ ಟೆಸ್ಟ್ ಎಂದರೇನು? ವಿವರಿಸಿ. ಅದು ಏನನ್ನು ತೋರಿಸಿದೆ.*

   ........................................................................................................................

   ........................................................................................................................

   ........................................................................................................................

### 3.2.2 ಪರಿಸರದ ಪಾತ್ರ

ಮಗುವಿಗೆ 4 ವರ್ಷವಾದಾಗ ತನ್ನ ಮನೆಯ ಭಾಷೆಯನ್ನು ಸರಾಗವಾಗಿ ಆಡುತ್ತದೆ. ಮಗು ತನ್ನ ದೈನಂದಿನ ಪರಿಸ್ಥಿತಿಗಳನ್ನು ಹೆಚ್ಚುಹೆಚ್ಚಾಗಿ ನೋಡಿರುವುದರಿಂದ ಅದನ್ನು ಕಲಿಯುತ್ತದೆ. ಜೆನ್ನಿ ಮತ್ತು ಹೋಮ್ನಾ ಅವರ ಉದಾಹರಣೆಗಳಿಂದ ಮಗುವಿಗೆ ಹಲವು ವಿಷಯಗಳಿಗೆ ಪರಿಸರದಲ್ಲಿ ತೆರೆದುಕೊಳ್ಳುವುದರ ಮೂಲಕ ಮಗುವಿನ ಮಾತು ಶುರುವಾಗುತ್ತದೆ. ಜೆನ್ನಿಗೆ ಮಾತು ಬರಲಿಲ್ಲ ಏಕೆಂದರೆ ಯಾವುದೇ ಭಾಷೆ ಆಕೆ ಕೇಳಿರಲಿಲ್ಲ. ಹೋಮ್ನಾ ಹಲವು ಭಾಷೆಗಳನ್ನು ಪರಿಸರದಿಂದ ಪಡೆದಿದ್ದಳು. ಹೀಗೆ ಪರಿಸರದಿಂದ ಕೇಳಿದ, ನೋಡಿದ, ಸಂವಾದ ಮಾಡಿದ್ದರಿಂದ ಪುಸ್ತಕ ಹಾಡು, ಸಂಗೀತ, ಟಿ.ವಿ. ಮುಂತಾದವುಗಳಿಂದ ಮಗು ಭಾಷೆಗಳನ್ನು ಪಡೆಯುವುದು.

Notes

ಇಷ್ಬೆಲ್ಲಾ ಉದಾಹರಣೆಯಿಂದಲೂ ಇದು ಸಾಬೀತಾಗಿದೆ. ಇಷ್ಬೆಲ್ಲಾ ಕಿವುಡ, ಮೂಕ ಮಗು ತನ್ನ ಕತ್ತಲೆಕೋಣೆಯಲ್ಲಿ ಜೀವನ ಕಳೆದಿದ್ದರಿಂದ ಯಾವಾಗ ಆಕೆ ತನ್ನ ಹೊರಪ್ರಪಂಚಕ್ಕೆ ತೆರೆದುಕೊಂಡಳೋ ಆಗ ಆಕೆ ಭಾಷೆ ಮಾತನಾಡ ತೊಡಗಿದಳು.

ಭಾಷಿಕವಾಗಿ ಶ್ರೀಮಂತಿಕೆ ಇದ್ದರೆ ಭಾಷಾ ಗ್ರಹಿಕೆ ಚೆನ್ನಾಗಿರುತ್ತದೆ. 2–14 ರ ವಯಸ್ಸಿನಲ್ಲಿ ಮಕ್ಕಳಿಗೆ ಅಪ್ರಯತ್ನ ಪೂರ್ವಕವಾಗಿ ಭಾಷಾ ಗ್ರಹಿಕೆ ಸಾಧ್ಯ. ಇದು ಜೆನ್ನಿ, ಇಷ್ಬೆಲ್ಲಾರ ಅನುಭವಳು. ಪರಸ್ಪರ ವಿಭಿನ್ನವಾದವು ಜೆನ್ನಿ 13ನೇ ವಯಸ್ಸಿನಲ್ಲಿ ಭಾಷೆಗೆ ತೆರೆದುಕೊಂಡು ವರ್ಷಗಳು ಕಳೆದರೂ ವ್ಯಾಕರಣಬದ್ಧವಾಗಿ ಮಾತನಾಡಲಾಗಲಿಲ್ಲ. ಇಷ್ಬೆಲ್ಲಾ ಎರಡೇ ವರ್ಷದಲ್ಲಿ ಹಲವು ಭಾಷೆ ಕಲಿತಳು.

ಅನಾಥಾಶ್ರಮದಂತಹ ಸ್ಥಳಗಳಲ್ಲಿ ಬೆಳೆದ ಮಕ್ಕಳು ತಮ್ಮೊಡನೆ ಮಾತನಾಡುವವರು ಯಾರು ಇಲ್ಲದೆ ಅಥವಾ ಮಾತನಾಡುವವರು ಯಾರೂ ಸಾಕಷ್ಟು ಸಮಯ ಅವರಿಗೆ ಕೊಡದ ಕಾರಣ, ತಮ್ಮ ವಯಸ್ಸಿನ ಬೇರೆ ಮಕ್ಕಳಿಗಿಂತ ಕಡಿಮೆ ಮಾತುಗಾರಿಕೆ ಹೊಂದಿರುತ್ತಾರೆ. ಕಿವುಡ ಮಕ್ಕಳು ತೊದಲುತ್ತಾ ಮಾತು ಶುರು ಮಾಡುತ್ತಾರೆ. ಇಯರ್ ಏಡ್ ಇಲ್ಲದೇ ಮಾತು ಕಲಿಯದೇ ಹೋಗುತ್ತಾರೆ. ಅವರೆಲ್ಲರೂ ಸನ್ನೆ ಭಾಷೆ ಬಳಸುತ್ತಾರೆ. ಅದೂ ಕೂಡ ಮೌಖಿಕ ಭಾಷೆಯಂತೆ ಬಹಳ ಅಚ್ಚುಕಟ್ಟಾದ ಭಾಷೆ. ಹಾಗಾಗಿ ಮಕ್ಕಳು ಹೇಳಿಸಿಕೊಳ್ಳಲು ಬಂದರೆ ಚೆನ್ನಾಗಿ ಮಾತನಾಡುವರು. ಒಂದು ವಾಸ್ತವ ಸಂಗತಿ– ಕಿವುಡ ತಂದೆ–ತಾಯಿಗಳ ಮಗ ಟಿ.ವಿ. ರೇಡಿಯೋ ಕೇಳಿಸಿಕೊಂಡರೂ ಆತನಿಗೆ ಮಾತುಬರಲಿಲ್ಲ. ತಂದೆತಾಯಿಗಳ ಜೊತೆ ಸನ್ನೆ ಭಾಷೆ ಕಲಿತ ಹಾಗಾಗಿ ಮಕ್ಕಳೊಂದಿಗೆ ಸಂವಾದ ಮಾಡುವ ಅವಕಾಶವು ಮಗುವಿಗೆ ಸಿಗಬೇಕು.

ಬೇರೆ ದೇಶದಿಂದ ಹೋದ ಮಕ್ಕಳು ಮನೆಯ ಭಾಷೆಯ ಜೊತೆಗೆ ಪರದೇಶದ ಭಾಷೆಯನ್ನು ಅಪ್ರಯತ್ನಪೂರ್ವಕವಾಗಿ ಪ್ರಯಾಸವಿಲ್ಲದೆ ಕಲಿಯುತ್ತಾರೆ. ಆದರೆ ಅವರ ತಂದೆತಾಯಿಗಳಿಗೆ ಈ ಪರದೇಶದ ಭಾಷೆ ಕಲಿಯುವುದು ಬಹಳ ಪ್ರಯಾಸಕರ ಕೆಲಸ.

ಪರಿಸರದ ಪಾತ್ರ ಇಲ್ಲಿ ಏನು?

ತಮ್ಮ ತಂದೆತಾಯಿಗಳನ್ನು ಅನುಕರಿಸುತ್ತಾ ಮನೆಯ ಭಾಷೆ ಕಲಿಯುತ್ತಾರಾ?

ತಂದೆತಾಯಿಗಳ ಅನುಕರಣೆಯಲ್ಲಿ ತಿದ್ದುಪಡಿ ತಂದೆತಾಯಿಗಳಿಂದಲೇ ಮಕ್ಕಳಿಗೆ ಆಗುತ್ತದೆ. ಇದು ಒಳ್ಳೆಯ ಪ್ರಭಾವ. ಅಂತಹ ತಿದ್ದುಪಡಿಗಳು ಇಲ್ಲಿವೆ. ಒಬ್ಬ ತಂದೆಯ ತಿದ್ದುವಿಕೆ ನೋಡಿ–

ತಂದೆ – ಪಾಪಾ
ಮಗು – ಹಾಪಾ
ತಂದೆ – ಪಾಪಾ
ಮಗು – ಹಾಪಾ

(ಮತ್ತೆರಡು ಸಾರಿ ಪುನರಾವರ್ತನೆ)

ಅಪ್ಪ – ಪಾಪಾ
ಮಗು – ಅಪ್ಪ

ಮುಂದಿನ ಉದಾಹರಣೆ:

'ಪಾಪಾ ಆಯಾ' ಎನ್ನುವುದನ್ನು ಕಲಿಸುತ್ತಿದ್ದಾರೆ –
ಮಗು – ಪಾಪಾ ಆಯಾ
ಅಪ್ಪ – ಇಲ್ಲ ಪಪ್ಪಾ ಆಯಾ
ಮಗು – ಪಾಪಾ ಆಯೀ
ಅಪ್ಪ – ಹೇಳು, ಪಾಪಾ ಆಯಾ
ಮಗು – ಪಪ್ಪಾ ಆಯೀ

ಮಗು ನೋಡುತ್ತೆ ಆದರೆ ಪ್ರತಿಕ್ರಿಯಿಸುವುದಿಲ್ಲ.

ಎರಡೂ ಪ್ರತ್ಯೇಕ ಮಕ್ಕಳು ಉದಯಪುರದಲ್ಲಿ ತಂದೆತಾಯಿಗಳ ಜೊತೆ ವಾಸಿಸುತ್ತಿರುವುದನ್ನು ಉದಾಹರಣೆಯಾಗಿ ನೋಡಿ–

ಮೇಲಿನ ಉದಾಹರಣೆಯಲ್ಲಿ ಭಾಷೆಯನ್ನು ಪುನರಾವರ್ತಿಸಿ ಕಲಿಸುವುದರಿಂದ ಮಗು ಕಲಿಯುವುದಿಲ್ಲ. ಮಕ್ಕಳ ಮಾತಿನಲ್ಲಿ ತಂದೆತಾಯಿಗಳು ಕೆಲವಾರು ತಪ್ಪುಗಳನ್ನು ತಿದ್ದಬಹುದಷ್ಟೆ ಎಂದು ಸಂಶೋಧನೆ ಹೇಳುತ್ತದೆ. ಮಗು ತಾನೇ ದಿನಕಳೆದಂತೆ ತಿದ್ದಿಕೊಳ್ಳುತ್ತದೆ, ತಂದೆತಾಯಿಗಳು ಮಕ್ಕಳಿಗೆ ಕಲಿಸಲು ಮುಂದುವರೆಸಿದರೆ ಮಕ್ಕಳು ಅದನ್ನು ಇಷ್ಟಪಡುವುದಿಲ್ಲ ಅಂದಮೇಲೆ ಮಗು ಕಲಿಕೆ ಸಿದ್ಧವಿದ್ದರೆ ಮಾತ್ರ ನಾವು ಕಲಿಸಲು ಸಾಧ್ಯ.

Notes

**ನಿಮ್ಮ ಪ್ರಗತಿ ಗಮನಿಸಿ 3**

1. ಯಾವ ತರಹದ ತಪ್ಪುಗಳನ್ನು ತಂದೆತಾಯಿಗಳು ತಿದ್ದುತ್ತಾರೆ?
   ಎ) ವ್ಯಾಕರಣದ ತಪ್ಪುಗಳು  ಬಿ) ವಾಕ್ಯ ಸಂಬಂಧಿತ ತಪ್ಪುಗಳು
   ಸಿ) ವಿಷಯಕ್ಕೆ ಸಂಬಂಧಿಸಿದ ತಪ್ಪುಗಳು ಡಿ) ಅನುಕರಣೆಯಲ್ಲಾದ ತಪ್ಪುಗಳು

2. ಕೆಳಗಿನ ಸಂದರ್ಭಗಳನ್ನು ಎಚ್ಚರಿಕೆಯಿಂದ ಓದಿ
   ಮಗು-- ಇನ್ನೊಂದು ಚಮಚ ಬೇಕು
   ಅಪ್ಪ -- ಅಂದರೆ ಇನ್ನೊಂದು ಚಮಚ ಬೇಕಾ
   ಮಗು-- ಹೌದು ದಯವಿಟ್ಟು ಇನ್ನೊಂದು ಚಮಚ ಕೊಡಿ
   ತಂದೆ- ಮತ್ತೊಂದು ಚಮಚ ಎಂದು ಹೇಳು
   ಮಗು – ಮತ್ತೆ ------- ಒಂದು ---- ಚಮಚ
   ಅಪ್ಪ – ಹೇಳು ಮತ್ತೊಂದು
   ಮಗು – ಮತ್ತೊಂದು
   ಅಪ್ಪ – ಚಮಚ
   ಮಗು –ಚಮಚ
   ಅಪ್ಪ – ಮತ್ತೊಂದು ಚಮಚ
   ಮಗು – ಮತ್ತೊಂದು ---- ಚಮಚ
   ಈಗ ಮತ್ತೊಂದು ಚಮಚ ಕೊಡಿ

   (ಎ) ತಂದೆ ಮಗುವಿಗೆ ಏನು ಕಲಿಸಲು ಪ್ರಯತ್ನಿಸುತ್ತಿದ್ದಾರೆ?
   (ಬಿ) ಅವರು ಯಶಸ್ವಿಗೊಂಡರೆ? ಹೇಗೆ
   (ಐ) ಈ ಉದಾಹರಣೆಯಿಂದ ಮಗು ಹೇಗೆ ಕಲಿಯುತ್ತಿದೆ ಎಂಬುದನ್ನು ಗುರ್ತಿಸಿ?

3. ಈ ಯಾವುದು ಮಗು ಭಾಷೆ ಗ್ರಹಿಸಲು ಸಹಕಾರಿ–
   ಎ) ಮಾತನಾಡಲು ಬಿಡದ ಮನೆಯ ವಾತಾವರಣ
   ಬಿ) ಇತರ ಮಕ್ಕಳೊಡನೆ ಆಡ
   ಸಿ) ದೊಡ್ಡವರ ಮಾತು ಕೇಳಿಸಿಕೊಂಡು
   ಡಿ) ಸರಿಯಾದ ವಾಕ್ಯ ಮಾತನಾಡಲು ಹೇಳುವ ಮೂಲಕ
   ಇ) ಮತ್ತೆ ಮತ್ತೆ ಹೇಳಿಸುವುದು.

ತಂದೆ ತಾಯಿಗಳು ಪುನರಾವರ್ತಿಸುವುದರಿಂದ ಮಗು ಕಲಿಯುವುದಿಲ್ಲ, ಮಕ್ಕಳು ಕಾಲಕಳೆದಂತೆ ತಪ್ಪುಗಳನ್ನು ಮಾಡುತ್ತಲೇ ಸರಿಯಾದ ಭಾಷೆಯನ್ನು ಕಲಿಯುತ್ತಾ ಸಾಗುತ್ತಾರೆ ಎಂಬುದು ಇಲ್ಲಿ ಗೊತ್ತಾಗುತ್ತದೆ.

Notes

### 3.2.3 ಭಾಷಾ ಗಳಿಕೆಯ ಹಂತಗಳು

ಭಾಷೆಯನ್ನು ಗಳಿಸುವಲ್ಲಿ ಮಕ್ಕಳು ಹೆಚ್ಚು ಅಥವಾ ಕಡಿಮೆ ಸ್ಥಿರವಾದ 'ಹಂತಗಳ', ಸರಣಿಯನ್ನು ಹಾದು ಹೋಗುತ್ತಾರೆ. ವಿವಿಧ ಮಕ್ಕಳು ಪ್ರತಿ ಹಂತವನ್ನು ತಲುಪುವ ವಯಸ್ಸು ಗಣನೀಯವಾಗಿ ಬದಲಾಗಬಹುದು, ಆದಾಗ್ಯೂ 'ಹಂತಗಳ' ಕ್ರಮವು ಒಂದೇ ಆಗಿರುತ್ತದೆ.

ಕುಂಯ್/ಗುಂಯ್‌ಗುಡುವುದು (**Cooing/Gooing**)

ಸುಮಾರು 6 ವಾರಗಳಲ್ಲಿ ಮಗುವು ಕುಂಯ್/ಗುಂಯ್‌ಗುಡುವುದನ್ನು ಪ್ರಾರಂಭಿಸುತ್ತದೆ. ಆರಂಭದಲ್ಲಿ ಈ ಶಬ್ದಗಳು ಹೆಚ್ಚಾಗಿ ಸ್ವರಗಳ ಒಂದು ದಾರ(ನೂಲು)ದಂತೆ – ಊಊಊಊ (**uuuu**), ಈಈಈಈ (**iiii**) ಹಾಗೆ ಕಂಡುಬರುತ್ತದೆ. ಸಾಮಾನ್ಯವಾಗಿ ಕೇಳುವಂತಹವುಗಳೆಂದರೆ 'ಕೂ,ಗೂ' (**cuuu,guuu**).

ಬಡಬಡಿಸುವುದು (**Babbling**)

ಸಾಮಾನ್ಯವಾಗಿ ಕುಳಿತುಕೊಂಡಿರುವಾಗ, ಮಕ್ಕಳು ಬಡಬಡಿಸಲು ಮುಂದುವರೆಯುತ್ತಾರೆ. ಇಲ್ಲಿ ಅವರು ಹೆಚ್ಚಾಗಿ ಏಕ ವ್ಯಂಜನ ರೂಪದಲ್ಲಿರುವಂತಹ ಉದಾಹರಣೆಗೆ, *'ಗೀ–ಗೀ–ಗೀ', 'ಕಾ–ಕಾ–ಕಾ', 'ಮಾ–ಮಾ–ಮಾ', 'ಪಾ–ಪಾ–ಪಾ', 'ಮೀ–ಮೀ–ಮೀ'* ಇತ್ಯಾದಿ, ರೀತಿಯ ವ್ಯಾಪಕ ವೈವಿಧ್ಯಮಯ ಸ್ವರಗಳು ಮತ್ತು ವ್ಯಂಜನಗಳನ್ನು ಉತ್ಪಾದಿಸಲು ಪ್ರಾರಂಭಿಸುತ್ತಾರೆ. 9 ರಿಂದ 10 ತಿಂಗಳುಗಳಲ್ಲಿ *'ಬಾ–ಬಾ–ಗಾ–ಗಾ'* ನಂತಹ ಸಂಯೋಜನೆಯಲ್ಲಿ ವ್ಯತ್ಯಾಸವಾಗಿದ್ದು, ಮುಂದಿನ ಕೆಲವು ತಿಂಗಳುಗಳಲ್ಲಿ *'ಮಿಮ್–ಮಿಮ್–ಮ್ಯೆ–ಯಾ'* ನಂತಹ ಸಂಕೀರ್ಣವನ್ನು ಒಳಗೊಂಡಿರುತ್ತದೆ.ಇವು ಭಾವನೆಗಳು ಮತ್ತು ಮಹತ್ವ ಹಾಗೂ ಪ್ರಯತ್ನದ ಅನುಕರಣೆಗಳನ್ನು ತಿಳಿಯಪಡಿಸುತ್ತದೆ. ಇದು ಪೋಷಕರಿಗೆ ಮಕ್ಕಳು ಅವರೊಂದಿಗೆ ಮಾತನಾಡುತ್ತಿದೆ ಎಂದು ತೋರುತ್ತದೆ ಮತ್ತು ಅದಕ್ಕೆ ಅವರು ಆಗಾಗ್ಗೆ ಪ್ರತಿಕ್ರಿಯಿಸುತ್ತಾರೆ. ಕಿದು ಮಕ್ಕಳಿಗೆ ಭಾಷೆಯ ಸಂವಾದಾತ್ಮಕ ಪಾತ್ರದ ಬಗ್ಗೆ ಕೆಲವು ಅನುಭವಗಳನ್ನು ಒದಗಿಸುತ್ತದೆ.

ಏಕ ಪದ/ ಒಂದು ಪದ ಹಂತ

ಸುಮಾರು ಒಂದು ವರ್ಷ ವಯಸ್ಸಿನ ಮಕ್ಕಳು ತಮ್ಮ ಮೊದಲ ಗುರುತಿಸಬಹುದಾದ ಪದಗಳನ್ನು ಗಳಿಸು(ಸಂಪಾದಿಸು)ತ್ತಾರೆ. ಈ ರೀತಿಯ ಅನೇಕ ಪದಗಳು ಅವರು ತಮ್ಮ ಸುತ್ತಲೂ ನೋಡಿದ ಜನರು ಮತ್ತು ವಸ್ತುಗಳ ಹೆಸರುಗಳಾಗಿರುತ್ತವೆ. ಉದಾಹರಣೆಗೆ *ಮಾಮಾ (ತಾಯಿ), ಪಾಪಾ(ಅಪ್ಪ), ಬೈಯಾ(ಸಹೋದರ), ದೀದೀ(ಸಹೋದರಿ), ಸಿರಿಯಾ(ಪಕ್ಷಿ), ಗುರಿಯಾ(ಗೊಂಬೆ).* ಈ ಹಂತದಲ್ಲೂ ಸಹ ಸಾಮಾನ್ಯವಾಗಿ *ನಾ (ನಕಾರಾತ್ಮಕತೆ), ಖತಮ್(ಏನಾದರೂ ಮುಗಿದಿದೆ)* ಮತ್ತು *ದೇದೋ/ಕೊಟ್ಟು ಬಿಡಿ(ಯಾವುದನ್ನಾದರೂ ಕೇಳುವುದು).* ಈ ಹಂತವನ್ನು ಹೆಚ್ಚಾಗಿ ಹಾಲೋಫ್ರಾಸ್ಟಿಕ್ ಹಂತ (ಇದರರ್ಥ ಒಂದು ನುಡಿಗಟ್ಟು–ಠಿಡಿಛಿಜ ಅಥವಾ ವಾಕ್ಯವಾಗಿ ಕಾರ್ಯನಿರ್ವಹಿಸುವ ಒಂದೇ ಒಂದು ಪದ) ಎಂದು ಉಲ್ಲೇಖಿಸಲಾಗುತ್ತದೆ. ಉದಾಹರಣೆಗೆ ಒಂದು ಮಗುವು *'ನನಗೆ ನೀರು ಬೇಕು'* ಎಂದು ಹೇಳುವ ಬದಲು ಸರಳವಾಗಿ 'ಮಮ್ ಮಮ್'(ನೀರು) ಎಂದು ಹೇಳಬಹುದು. ವಾಸ್ತವಾಗಿ ವಿವಿಧ ರೀತಿಯ ಅಭಿವ್ಯಕ್ತಿಗಳಿಗೆ ಅವರು ಕೇವಲ ' ಮಮ್ ಮಮ್' ಎಂದು ಮಾತ್ರ ಬಳಸಬಹುದು ಮತ್ತು ಈ ರೀತಿಯ ಸಂದರ್ಭಗಳಿಂದ ಪೋಷಕರು ಅಂದಾಜು ಲೆಕ್ಕಾಚಾರದಿಂದ ಇಂತಹ ಉಚ್ಚಾರಣೆಗಳ ಅರ್ಥವನ್ನು ಊಹಿಸುತ್ತಾರೆ.

ಈ ಹಂತದಲ್ಲಿ ಪದಗಳ ಅರ್ಥಕ್ಕೆ ಸಂಬಂಧಿಸಿದಂತೆ ವಯಸ್ಕ ಅರ್ಥವನ್ನು ಹೋಲಿಸಿದಾಗ ಮಕ್ಕಳು ಅತಿ ಹೆಚ್ಚು ಸಾಮಾನ್ಯೀಕರಣ ಮತ್ತು ಕಡಿಮೆ ಸಾಮಾನ್ಯೀಕರಣದ ಕಾರಣದಿಂದ ತಪ್ಪುಗಳನ್ನು ಮಾಡುತ್ತಾರೆ. ಉದಾಹರಣೆಗೆ, ಒಂದು ಮಗು *' ಡಾಗೀ–ನಾಯಿಮರಿ' (ಜಠಂರುಜ)* ಎಂಬ ಪದವನ್ನು ಅತಿ ಹೆಚ್ಚು ಸಾಮಾನ್ಯೀಕರಿಸುತ್ತದೆ ಮತ್ತು ಎಲ್ಲ ನಾಲ್ಕು ಕಾಲಿನ ಪ್ರಾಣಿಗಳಿಗೆ ಜಠಂರುಜ–ನಾಯಿಮರಿ ಎಂದು ಕರೆಯುತ್ತದೆ. ಮತ್ತೊಂದೆಡೆ ಒಂದು ಮಗು ತನ್ನ *'ಆಟಿಕೆ ಡಕ್–ಬಾತುಕೋಳಿ'(ಜಣಛಿಇ)* ಅನ್ನು ಮಾತ್ರ *'ಬಾತುಕೋಳಿ'* ಎಂದು ಬಳಸಿದರೆ ಅದು ಕಡಿಮೆ ಸಾಮಾನ್ಯೀಕರಣವಾಗುತ್ತದೆ.

Notes

ದ್ವಿ / ಎರಡು ಪದ ಹಂತ

ಸುಮಾರು ಒಂದೂವರೆ ವರ್ಷ ವಯಸ್ಸಿನ ಮಗುವಿಗೆ ಸಾಮಾನ್ಯವಾಗಿ ಸುಮಾರು 50 ಪದಗಳ ಕ್ರಿಯಾತ್ಮಕ ಶಬ್ದಕೋಶವಿರುತ್ತದೆ ಮತ್ತು ಎರಡು ಪದಗಳ ಉಚ್ಚಾರಣೆಯಾಗಿ ಪದಗಳನ್ನು ಒಟ್ಟುಗೂಡಿಸಲು ಪ್ರಾರಂಭಿಸುತ್ತದೆ. ಮೊದಲ ಎರಡು ಪದಗಳ ಉಚ್ಚಾರಣೆಗಳೂ ಸಹ ಏಕ/ಒಂದು ಪದ ಹಂತದ ಹಾಗೆಯೇ ಒಂದೇ ರೀತಿಯ ಅರ್ಥವನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ, *ಹಾಲು ಇಲ್ಲ(ದೂಧ್ ನಹೀ ), ಊಟ ಇಲ್ಲ(ಖಾನಾ ನಹೀ–ನಿರಾಕರಣೆ), ಹಾಲು ಖಾಲಿ(ದೂಧ್ ಖತಮ್–ಯಾವುದಾದರೂ ಮುಗಿದಿದೆ),* ಮತ್ತು *ಚೆಂಡು ಕೊಟ್ಟುಬಿಡು(ಬಾಲ್ ದೇದೋ).* ಈ ಹಂತದ ಕೊನೆಯಲ್ಲಿ ಪದಗಳು ನೀಡುವ ಹೊಸ ರೀತಿಯ ಅರ್ಥಗಳು ಪ್ರಾರಂಭವಾಗುತ್ತದೆ. ಉದಾಹರಣೆಗೆ *ಅಮ್ಮ ರೊಟ್ಟಿ (ಮಮ್ಮೀ ಖಾನಾ), ಅಕ್ಕ ಹೊಡೆದರು (ಜೀಜೀ ಮಾರಾ), ಹೊರಗೆ ಹೋಗಬೇಕು ( ಘೂಮಿ ಜಾನಾ), ಅಪ್ಪ ಫೋನ್ (ಪಾಪಾ ಫೋನ್), ನನಗೆ ಹಾಲು (ದೂದ್ ಪೀನಾ).*

ಈ ಹಂತದಲ್ಲಿ ಮಕ್ಕಳ ಉಚ್ಚಾರಣೆಗಳು ಅವರ ಸುತ್ತಲೂ ಬಳಸಿದ ಭಾಷೆಗಳಲ್ಲಿನ ವಾಕ್ಯಗಳ ರಚನೆಗಳನ್ನು ಹೋಲುವುದಕ್ಕೆ ಪ್ರಾರಂಭಿಸುತ್ತವೆ. ಈ ಭಾಷಣ(ಮಾತು)ವನ್ನು 'ಟೆಲಿಗ್ರಾಫಿಕ್ ಭಾಷಣ' ಎಂದು ಕರೆಯಲಾಗುತ್ತದೆ. ಏಕೆಂದರೆ ಇದು ವಿಷಯ ಸಂಬಂಧಿ ಪದಗಳಿರುವ ಟೆಲಿಗ್ರಾಫ್ ಸಂದೇಶಗಳನ್ನು ಹೋಲುತ್ತದೆ. ಉದಾಹರಣೆಗೆ *ಹಾಲು (ದೂದ್), ಅಮ್ಮ (ಮಮ್ಮೀ), ಊಟ(ಖಾನಾ, ಫುಡ್), ಅಪ್ಪಾ(ಪಾಪಾ), ಹೊಡೆದ(ಮಾರಾ), ಫೋನ್* ಇತ್ಯಾದಿ. ಇವು ಅರ್ಥವನ್ನು ಹೊಂದಿರುತ್ತವೆ ಮತ್ತು ಚಿಕ್ಕ ಪದಗಳಾದ *ಅ(ನೆ), ಗೆ(ಕೊ), ಇದೆ(ಹೈ), ಆದರೆ(ಪರ್)* ಇತ್ಯಾದಿ ಮತ್ತು ಬಹುವಚನದಲ್ಲಿ ಬಳಸುವ ಪ್ರತ್ಯಯಗಳಾದ *ಗಳು, ಅಂದಿರು, ಅರು* ಅಥವಾ ಕ್ರಿಯೆ ನಡೆಯುತ್ತಿರುವ ಕಾಲದಲ್ಲಿ ಬಳಸುವ *'ಉತ್ತ'* – ಇವುಗಳನ್ನು ಬಳಸುವುದಿಲ್ಲ. ಹಂತದಲ್ಲಿ ಮಕ್ಕಳು ಅನುಕರಣೆ ಮಾಡಲು ವಯಸ್ಕರು ಹೇಳಿದ ವಾಕ್ಯಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಉಚ್ಚರಿಸುತ್ತಾರೆ. ಉದಾಹರಣೆಗೆ ಅಪ್ಪ ಹೋಗುತ್ತಿದ್ದಾರೆ ಎಂಬುದಕ್ಕೆ *'ಅಪ್ಪ ಹೋಗು'* ಮತ್ತು ಹೊರಗೆ ನಾವು ಸುತ್ತಾಡುತ್ತಾ ಇದ್ದೇವೆ ಎಂಬುದಕ್ಕೆ *'ಹೊರಗೆ ಸುತ್ತು'* ಎಂದು ಹೇಳುತ್ತದೆ.

ದೀರ್ಘ ಕಾಲ ಉಚ್ಚಾರಣೆ

ಸಮಯ ಕಳೆದಂತೆ ಮಕ್ಕಳು ಬಳಸುವ ವಾಕ್ಯಗಳಲ್ಲಿನ ಪದಗಳ ಉದ್ದವು ಹೆಚ್ಚಾಗುತ್ತದೆ ಮತ್ತು 2 ರಿಂದ 4 ವರ್ಷ ವಯಸ್ಸಿನಲ್ಲಿ ಅವರು ವಿವಿಧ ವ್ಯಾಕರಣ ರೂಪಗಳನ್ನು ಪಡೆದುಕೊಳ್ಳುತ್ತಾರೆ. ಆಸಕ್ತಿದಾಯಕವಾದ ವಿಷಯವೆಂದರೆ ಬಹುತೇಕ ಮಕ್ಕಳು ಒಂದೇ ಕ್ರಮದಲ್ಲಿ ಈ ರೂಪಗಳನ್ನು ಪಡೆದುಕೊಳ್ಳುತ್ತಾರೆ. ಬ್ರೌನ್ (ಃಡಿಅತಿಟ –1973) ಮತ್ತು ಡೆ ವಿಲ್ಲಿಯರ್ಸ್(ಜಜ ಗಿಟಟಟುಜಡಿ) ಅವರು ಕೈಗೊಂಡ ಸಂಶೋಧನೆಯಲ್ಲಿ ಡೆ ವಿಲ್ಲಿಯರ್ಸ್‌ರವರು ಇಂಗ್ಲೀಷ್/ಆಂಗ್ಲ ಭಾಷೆಯು ಮನೆಭಾಷೆಯಾಗಿರುವ ಮಕ್ಕಳನ್ನು ಅಧ್ಯಯನ ಮಾಡಿದರು. ಇದರಿಂದ ಮಕ್ಕಳು ಕೆಲವು ವ್ಯಾಕರಣಾಂಶಗಳನ್ನು ಮೊದಲು ಹಾಗೂ ಕೆಲವನ್ನು ನಂತರ ಪಡೆದು/ತಿಳಿದುಕೊಳ್ಳುತ್ತಾರೆ ಎಂದು ಸೂಚಿಸಿದ್ದಾರೆ. *'ನಾನು ಹಾಡುತ್ತಿದ್ದೇನೆ' (ಋ ಚಿಟ ,ಽಟಿಂ ಽಟಿಂ)* ಇದರಲ್ಲಿರುವಂತಹ *'ಽಟಿಂ–ತ್ತಿದ್ದೇನೆ'* ರೂಪವನ್ನು ಮತ್ತು *'ನೀಲಿ ಬೂಟುಗಳು, ಕೆಟ್ಟ ನಾಯಿಗಳು'(ಛಟಣಜ ,ಽಂಞ, ಛಚಿಜ ಜಠಿಠ)* ಇದರಲ್ಲಿರುವಂತಹ *'ಗಳು-'"* ಬಹುವಚನ–ರಿಟಣಡಿಚಿಟ ರೂಪವನ್ನು, *'ಅಪ್ಪನ ಕಾರು' (ಜಚಿಜಜಥಿ ,' ಛಿಚಿಡಿ)* ಇದರಲ್ಲಿರುವಂತಹ *'ನ-'* ಮತ್ತು *'ಅವನಿಗೆ ಒಂದು ಸೇಬು ಬೇಕಂತೆ' ಽಜ ತಿಚಿಟಣ' ಚಿಟ ಚಿರಿರಿಟಜ'* ಇದರಲ್ಲಿರುವಂತಹ ಪ್ರಥಮ ಪುರುಷದಲ್ಲಿ ಏಕವಚನ *'ಗೆ-'* ಬಳಸುವುದಕ್ಕಿಂತ ಮೊದಲೇ ತಿಳಿದುಕೊಂಡಿರುತ್ತಾರೆ. ಅವರು *'ಬಂದನು/ಳು/ರು, ಹೋದನು/ಳು/ರು, ನೋಡಿದನು/ಳು/ರು'–* ರೀತಿಯ ಅನಿಯಮಿತ ಭೂತಕಾಲ ಕ್ರಿಯಾ ಪದಗಳನ್ನು *'ಪ್ರೀತಿಸಿದನು/ಳು/ರು, ಆಡಿದನು/ಳು/ರು,* ಮತ್ತು *ಕೆಲಸ ಮಾಡಿದನು/ಳು/ರು–*ಈ ರೀತಿಯ ನಿಯಮಿತ ಭೂತಕಾಲ ಕ್ರಿಯಾ ಪದಗಳಿಗಿಂತ ಮೊದಲೇ ತಿಳಿದುಕೊಂಡಿರುತ್ತಾರೆ. ನಾವು ಭೂತಕಾಲದ ಸಂಪಾದನೆ/ಗಳಿಕೆಯನ್ನು ಬಹಳ ಜಾಗರೂಕತೆಯಿಂದ ಅಧ್ಯಯನ ಮಾಡಿದರೆ, ನಾವು 'ನಿಯಮಿತ ಭೂತ ಕಾಲರೂಪಗಳ ಗಳಿಕೆಯು ಸರಿಯಾದ ಅನಿಯಮಿತ ರೂಪಗಳನ್ನು ಹೆಚ್ಚು ಸಾಮಾನ್ಯೀಕೃತ ರೂಪಗಳಿಂದ ಬದಲಾಯಿಸುವುದನ್ನು ಕಾಣುತ್ತೇವೆ. ಉದಾಹರಣೆಗೆ *'ಬಂತು','ಹೋಯ್ತು', 'comed','goed',* ಇತ್ಯಾದಿ ಮತ್ತು ಇವು ಅಂತಿಮವಾಗಿ ಸರಿಯಾದ ರೂಪಗಳಾದ *'ಬಂದನು/ಳು/ರು'* ಮತ್ತು *'ಹೋದನು/ಳು/ರು' (came,went)* ಆಗಿ ಬದಲಾಯಿಸಲ್ಪಡುತ್ತದೆ ಎಂಬುದನ್ನು ಕಂಡುಹಿಡಿಯುತ್ತೇವೆ.

ಈ ಸ್ಪಷ್ಟ ಹಿಂಜರಿಕೆ ಮತ್ತು ಭಾಷೆಯನ್ನು ಗಳಿಸಲು ಮಕ್ಕಳು ಹಾದು ಹೋಗುವ ಹಂತಗಳಲ್ಲಿನ ಸಾಮ್ಯತೆಯ ಪ್ರಾಮುಖ್ಯತೆಯು ಬಹಳ ಮಹತ್ವದ್ದಾಗಿದೆ. ಇದರರ್ಥ ಭಾಷಾ ಗಳಿಕೆಯು ಪರಿಪೂರ್ಣತೆಯನ್ನು ತರುವ ಅಭ್ಯಾಸ ಅಥವಾ ಸರಳ ಅನುಕರಣೆಯ ನೇರ ವಿಷಯವಲ್ಲ. ಹಾಗೇನಾದರೂ ಇದ್ದರೆ, ಎಲ್ಲಾ ಮಕ್ಕಳು ಭಾಷೆಯನ್ನು ಗಳಿಸಲು ಸಾಮ್ಯತೆ ಇರುವ ಹಂತಗಳನ್ನು ಅನುಸರಿಸುತ್ತಿರಲಿಲ್ಲ ಮತ್ತು ಅವರಲ್ಲಿ ಕಂಡು ಬಂದ ತಪ್ಪಾದ ರೂಪಗಳಾದ *'ಬಂತು', 'ಹೋಯ್ತು' ( comed, goed)* ಎಂಬುದನ್ನು ಅವರು ಯಾವಾಗಲೂ ಕೇಳುವ *'ಬಂದನು/ಳು/ರು'* ಮತ್ತು *'ಹೋದನು/ ಳು/ರು' (came,went)* –ರೀತಿ ಸಾಮಾನ್ಯ ರೂಪಗಳೊಂದಿಗೆ ಬದಲಾಯಿಸುತ್ತಿರಲಿಲ್ಲ.

ಒಟ್ಟಿನಲ್ಲಿ ಹೇಳಬೇಕೆಂದರೆ, ಮಕ್ಕಳು ಮಾತನಾಡಲು ಪ್ರಾರಂಭಿಸಿದ ಕ್ಷಣದಿಂದ, ಅವರಿಗೆ ತಾವು ಮಾತನಾಡುವ ಭಾಷೆ(ಗಳು) ಕೆಲವು ನಿಯಮಗಳನ್ನು ಒಳಗೊಂಡಿದೆ ಎಂಬುದನ್ನು ತಿಳಿದಿರುತ್ತಾರೆ ಎಂದು ತೋರುತ್ತದೆ. ಮಕ್ಕಳು ಸರಿಯಾಗಿ ಮಾತನಾಡಲು ಕಲಲಿಯುವಾಗ ಅವರು ಮಾಡುವ ತಪ್ಪುಗಳು ಈ ನಿಯಮಗಳನ್ನು ಗಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದಕ್ಕೆ ಪುರಾವೆಗಳಾಗಿವೆ. ಅವರ ಭಾಷೆಯು ಯಾವುದೇ ಸಮಯದಲ್ಲಾದರೂ ಅದು ಪದಗಳ ಕಲಬೆರಕೆ ಸಂಗ್ರಹವಲ್ಲ. ಆದರೆ ಅದು ವಯಸ್ಕರ ಭಾಷೆಗಿಂತ ಭಿನ್ನವಾಗಿದ್ದರೂ, ಅದೂ ಸಹ ನಿಯಮಬದ್ಧವಾಗಿದೆ. ಇಲ್ಲಿ ಮುಖ್ಯವಾಗಿ ತಿಳಿಸಲೇಬೇಕಾದುದು ಏನೆಂದರೆ, ಯಾವ ಮಗು ಒಂದನೇ ದಿನದಿಂದ ಅನೇಕ ಭಾಷೆಗಳಿಗೆ ತೆರೆದುಕೊಳ್ಳುತ್ತದೆಯೋ ಆ ಮಗು ಪ್ರತಿಯೊಂದರಲ್ಲೂ, ಸಂಕೀರ್ಣ ರಚನೆಗಳ ಹೋಲಿಸಬಹುದಾದ ರೂಪಗಳನ್ನು ಗಳಿಸು(ಸಂಪಾದಿಸು)ತ್ತದೆ. ಭಾಷೆಗಳು ಮಿಶ್ರಣವಾಗಿದ್ದರೂ ಅವರು ನಿಯಮಗಳನ್ನು ಅನುಸರಿಸುತ್ತಾರೆ.

ಪ್ರಶ್ನೆಗಳನ್ನು ಪರಿಶೀಲಿಸಿ

*1. ಯಾವ ಹಂತದಲ್ಲಿ ಮಕ್ಕಳು ಅತಿ ಹೆಚ್ಚು ಸಾಮಾನ್ಯೀಕರಿಸುತ್ತಾರೆ ?*

*a) ಕುಂಯ್‌ಗುಡುವುದು(Cooing/Gooing)* *b) ಬಡಬಡಿಸುವುದು (Babbling)*

*c) ಏಕ/ಒಂದು ಪದ ಹಂತ* *d) ದ್ವಿ/ಎರಡು ಪದ ಹಂತ*

*2. ಟೆಲಿಗ್ರಾಫಿಕ್ (ತಂತಿ ಟಪಾಲು)ಭಾಷಣ ಎಂದರೇನು ?*

..........................................................................................................................................

..........................................................................................................................................

..........................................................................................................................................

*3. ನಿಮ್ಮ ಅನುಭವದ ಮೂಲಕ ಮಕ್ಕಳು ಏಕ/ಒಂದು ಪದ ಹಂತದಲ್ಲಿ ಮಾತನಾಡುವ ಪದಗಳ ಬಗ್ಗೆ ಆಲೋಚಿಸಿ.*

..........................................................................................................................................

..........................................................................................................................................

..........................................................................................................................................

*4. ನಿಮ್ಮ ಅನುಭವದ ಮೂಲಕ 3 ವರ್ಷ ವಯಸ್ಸಿನ ಮಗು ಪದಗಳನ್ನು (ಶಬ್ದ) ಕಲಿಯುವಾಗ ಅತಿ ಹೆಚ್ಚು ಸಾಮಾನ್ಯೀಕರಿಸುವ ಒಂದು ಉದಾಹರಣೆಯನ್ನು ಆಲೋಚಿಸಿ.*

..........................................................................................................................................

..........................................................................................................................................

..........................................................................................................................................

*5. ಒಂದು ಮಗುವಿನ ಮನೆ ಭಾಷೆ(ಇಂಗ್ಲೀಷ್) ಆಗಿದ್ದು, ಬಹುವಚನವನ್ನು ತನ್ನದಾಗಿಸಿಕೊಳ್ಳುವಾಗ ಈ ಕೆಳಕಂಡ ಹಂತಗಳ ಮೂಲಕ ಹಾದುಹೋಗುತ್ತದೆ :*

- *ಮೊದಲು ಕಾಲು–ಕಾಲುಗಳು (foot-feet), ಮನುಷ್ಯ–ಮನುಷ್ಯರು(man-men) ಇತ್ಯಾದಿ ರೂಪದ ಅನಿಯಮಿತ ಬಹುವಚನಗಳನ್ನು ತನ್ನದಾಗಿಸಿಕೊಳ್ಳುತ್ತದೆ.*

Notes

- *ನಂತರ ಬೆಕ್ಕುಗಳು (cats) ಮತ್ತು ಚೀಲಗಳು (bags) ರೀತಿಯ ನಿಯಮಿತ ಬಹುವಚನ ರೂಪಗಳನ್ನು ತನ್ನದಾಗಿಸಿಕೊಳ್ಳುತ್ತದೆ.*
- *'ಕಾಲು' ಮತ್ತು 'ಮನುಷ್ಯ' ಎಂಬುದಕ್ಕೆ 'ಕಾಲುಗಳು' ಮತ್ತು 'ಮನುಷ್ಯರು' ಎಂದು ಬಹುವಚನ ರೂಪಗಳನ್ನು ಮಾಡಲು ಮೇಲಿನ ನಿಯಮವನ್ನು ಹೆಚ್ಚು ಸಾಮಾನ್ಯೀಕರಿಸುತ್ತದೆ.*
- *ಅಂತಿಮವಾಗಿ ಹೆಚ್ಚಿ ಸಾಮಾನ್ಯೀಕರಿಸದ ಬಹುವಚನಗಳನ್ನು ಸರಿಪಡಿಸಲಾಗುತ್ತದೆ ಮತ್ತು ಮಗುವು ಕಾಲು ಮತ್ತು ಮನುಷ್ಯ – ಪದಗಳ ಬಹುವಚನ ರೂಪಗಳಾದ ಕಾಲುಗಳು ಮತ್ತು ಮನುಷ್ಯರು ಎಂದು ಮಾಡುವಾಗ ಮಗು ಮತ್ತೆ ಹಿಂದಿನದಕ್ಕೆ ಹೋಗುತ್ತದೆ.*

## 3.3 ದ್ವಿತೀಯ ಭಾಷಾ ಗಳಿಕೆಯ ಕಲಿಕೆ

ಮಕ್ಕಳು ಶಾಲೆಗೆ ಬರುವ ಹೊತ್ತಿಗೆ ಅವರು ತಮ್ಮ ಮನೆ ಭಾಷೆ(ಗಳು)ಯ ಬಗ್ಗೆ ನಿರರ್ಗಳವಾಗಿ ಮಾತನಾಡುವವರಾಗಿರುತ್ತಾರೆ. ಕೆಲವರಿಗೆ ಶಾಲೆಯ ಬೋಧನಾ ಮಾಧ್ಯಮವು ಅವರ ಮನೆಯಲ್ಲಿ ಮಾತನಾಡುವ ಭಾಷೆಯಾಗಿರುತ್ತದೆ. ಆದರೆ ಹೆಚ್ಚಿನ ಇತರ ಮಕ್ಕಳಿಗೆ ಬೋಧನಾ ಮಾಧ್ಯಮವು ಹೊಸದಾಗಿರುತ್ತದೆ. ಉದಾಹರಣೆಗೆ, ಬಿಹಾರದ ಒಂದು ಮಗು ಮನೆಯಲ್ಲಿ 'ಭೋಜ್ಪುರಿ ಅಥವಾ ಮೈಥಿಲಿ ಭಾಷೆಯನ್ನು ಮಾತನಾಡುತ್ತಿರಬಹುದು. ಆದರೆ ಹಿಂದಿ–ಬೋಧನಾ ಮಾಧ್ಯಮವಿರುವ ಶಾಲೆಗೆ ಹೋಗುತ್ತಿರಬಹುದು ಅಥವಾ ಬಂಗಾಳಿಯ ಒಂದು ಮಗು ಸಂತಾಳಿ ಅಥವಾ ನೇಪಾಳಿ ಭಾಷೆಯನ್ನು ಮನೆಯಲ್ಲಿ ಮಾತನಾಡುತ್ತಿದ್ದರೆ, ಆ ಮಗು ಶಾಲೆಯಲ್ಲಿ ಬೆಂಗಾಳಿ ಭಾಷೆಯನ್ನು ಎದುರಿಸಬಹುದು. ಮೇಲಿನ ಎರಡೂ ಸನ್ನಿವೇಶಗಳಲ್ಲಿ ಒಂದು ಮಗು ಶಾಲೆಯಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಆಂಗ್ಲ ಭಾಷೆಯನ್ನೂ ಸಹ ಕಲಿಯುವುದು ಅಗತ್ಯವಾಗಬಹುದು. ಈ ಮಕ್ಕಳಿಗೆ ಹಿಂದಿ, ಬೆಂಗಾಳಿ ಮತ್ತು ಆಂಗ್ಲಭಾಷೆಗಳೆಲ್ಲವೂ ದ್ವಿತೀಯ ಭಾಷೆಗಳಾಗಿರುತ್ತವೆ.

ಈ ಮೇಲಿನ ಸನ್ನಿವೇಶಗಳಲ್ಲಿ ದ್ವಿತೀಯ ಭಾಷೆಗಳನ್ನು ಗಳಿಸುವುದು ಸವಾಲಾಗಿರುತ್ತದೆ. ಏಕೆಂದರೆ ಮಕ್ಕಳು ತಮ್ಮ ಮನೆ ಪರಿಸರದಲ್ಲಿ ಈ ಭಾಷೆಯನ್ನು ಎದುರಿಸುವುದಿಲ್ಲ ಅಥವಾ ಎದುರಿಸಿದರೂ ತುಂಬಾ ಸೀಮಿತ ವ್ಯಾಪ್ತಿಯಾಗಿರುತ್ತದೆ. ಶಾಲಾ ಸಮಯದಲ್ಲಿ ಮಕ್ಕಳಿಗೆ ಕೂಡಾ ದ್ವಿತೀಯ ಭಾಷೆಗೆ ತೆರೆದುಕೊಳ್ಳಲು ಕೆಲವೇ ಗಂಟೆಗಳು ಮಾತ್ರ ಸಿಗುತ್ತವೆ ಮತ್ತು ಇಂಗ್ಲೀಷ್‌ನಂತಹ ಭಾಷೆಗಳಿಗೆ ಇದು ಹೆಚ್ಚಾಗಿರುತ್ತದೆ. ಈ ವಿಭಾಗದಲ್ಲಿ ನಾವು ಮಕ್ಕಳು ತಮ್ಮ ದ್ವಿತೀಯ ಭಾಷೆಯಗಳನ್ನು ತಮ್ಮ ಪ್ರಥಮ ಭಾಷೆಯಂತೆ ಗಳಿಸಲು ಸಾಧ್ಯವೇ ? ಎಂಬುದನ್ನು ಚರ್ಚಿಸಲಿದ್ದೇವೆ. ಹೀಗೆ ಮಾಡುವಾಗ ವರ್ಗಕೋಣೆಯಲ್ಲಿ ದ್ವಿತೀಯ ಭಾಷೆಗಳ ಗಳಿಕೆಯ ಮೇಲೆ ಪರಿಣಾಮ ಬೀರುವ ವಿವಿಧ ಅಂಶಗಳನ್ನು ಚರ್ಚಿಸಲಿದ್ದೇವೆ. ನಾವು ದ್ವಿತೀಯ ಭಾಷೆಗಳಲ್ಲಿ 'ಕಲಿಕೆ'ಯ ಪಾತ್ರವನ್ನು ಚರ್ಚಿಸಲಿದ್ದೇವೆ. ಮಗು ಈಗಾಗಲೇ ಕಲಿತಿರುವ ಭಾಷೆಯು ತಮ್ಮ ದ್ವಿತೀಯ ಭಾಷೆಗಳ ಕಲಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತವೆ ಎಂಬ ಸಾಮಾನ್ಯ ನಂಬಿಕೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಮೂಲಕ ನಾವು ತೀರ್ಮಾನ ತೆಗೆದುಕೊಳ್ಳಬಹುದಾಗಿದೆ.

### 3.3.1 ಪ್ರಥಮ ಭಾಷೆಗಳ ಹಾಗೆಯೇ ದ್ವಿತೀಯ ಭಾಷೆಗಳನ್ನು ಗಳಿಸ(ಸಂಪಾದಿಸ)ಬಹುದೇ?

ಈ ಪ್ರಶ್ನೆಗೆ ಉತ್ತರಿಸುವ ಮೊದಲು 'ಭಾಷಾ ಗಳಿಕೆ' ಮತ್ತು 'ಭಾಷಾ ಕಲಿಕೆ' – ಈ ಪದಗಳ ನಡುವಿನ ವ್ಯತ್ಯಾಸವನ್ನು ಚರ್ಚಿಸೋಣ.

ನಮ್ಮ ಮನೆಗಳಲ್ಲಿ ಮತ್ತು ನೆರೆಹೊರೆಯಲ್ಲಿ ನಾವು ಕೇಳುವ ಮೂಲಕ ಭಾಷೆಗಳನ್ನು ಕಲಿಯುವಾಗ ಲಭ್ಯವಿರುವ ಸ್ವಾಭಾವಿಕ ಸಂವಹನ ಸಂದರ್ಭಗಳಲ್ಲಿ ಬಳಸುವ ಮೂಲಕ ಭಾಷೆಯಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದನ್ನು 'ಭಾಷಾ ಗಳಿಕೆ'ಯು ಸೂಚಿಸುತ್ತದೆ. ಮತ್ತೊಂದೆಡೆ 'ಭಾಷಾ ಕಲಿಕೆ'ಯು ವರ್ಗಕೋಣೆ ವ್ಯವಸ್ಥೆಯಲ್ಲಿ ಸ್ಪಷ್ಟ ಬೋಧನೆಯ ಮೂಲಕ ಭಾಷೆಯ ನಿಯಮಗಳು ಮತ್ತು ಶಬ್ದಕೋಶವನ್ನು ಕಲಿಯುವ ಮೂಲಕ ಭಾಷೆಯಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದನ್ನು ಸೂಚಿಸುತ್ತದೆ.

ಕ್ರೇಶನ್‌ರವರು ಈ ಎರಡನ್ನು ದ್ವಿತೀಯ ಭಾಷೆಗಳಲಿ ಸಾಮರ್ಥ್ಯವನ್ನು ಬೆಳೆಸುವ ಮಾರ್ಗಗಳಾಗಿ ತಿಳಿಸಿದ್ದಾರೆ ಮತ್ತು ಹೀಗೆ ಹೇಳಿದ್ದಾರೆ, *"..... ಭಾಷಾ ಗಳಿಕೆಯು ಅದೇ ರೀತಿಯ ತದ್ರೂಪ/ಅನನ್ಯವಲ್ಲದ ಪ್ರಕ್ರಿಯೆಯಾಗಿದ್ದು, ಮಕ್ಕಳು ತಮ್ಮ ಪ್ರಥಮ ಭಾಷೆಯಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ಮಾರ್ಗವಾಗಿದೆ. ಭಾಷಾ ಗಳಿಕೆಯು ಒಂದು ಉಪ ಪ್ರಜ್ಞಾ (ಅರ್ಧ ಸ್ಮೃತಿ) ಪ್ರಕ್ರಿಯೆಯಾಗಿದೆ : ಭಾಷಾ ಗಳಿಕೆದಾರರಿಗೆ ಸಾಮಾನ್ಯವಾಗಿ ತಾವು ಭಾಷೆಯನ್ನು ಗಳಿಸುತ್ತಿದ್ದೇವೆ ಎಂಬ ಅಂಶದ ಬಗ್ಗೆ ತಿಳಿದಿರುವುದಿಲ್ಲ, ಆದರೆ ಸಂವಹನಕ್ಕಾಗಿ ಭಾಷೆಯನ್ನು ತಾವು ಬಳಸುತ್ತಿದ್ದೇವೆ ಎಂಬ ಅಂಶ ಮಾತ್ರ ಅವರಿಗೆ ತಿಳಿದಿರುತ್ತದೆ..... ( ಈ ಪ್ರಕ್ರಿಯೆಯಲ್ಲಿ) ಸಾಮಾನ್ಯವಾಗಿ ನಾವು ಗಳಿಸಿದ ಭಾಷೆಗಳ ನಿಯಮಗಳ ಬಗ್ಗೆ ಪ್ರಜ್ಞಾ ಪೂರ್ವಕವಾಗಿ ತಿಳಿದಿರುವುದಿಲ್ಲ. ಬದಲಾಗಿ ನಮಗೆ ಸರಿರೂಪದ 'ಅನುಭವ'ವಿರುತ್ತದೆ. ಯಾವ ನಿಯಮವನ್ನು ಉಲ್ಲಂಘಿಸಿದ್ದೇವೆ ಎಂಬುದನ್ನು ನಾವು ಪ್ರಜ್ಞಾಪೂರ್ವಕವಾಗಿ ತಿಳಿದುಕೊಳ್ಳದಿದ್ದರೂ ವ್ಯಾಕರಣ ಬದ್ಧ ವಾಕ್ಯಗಳು ಸರಿ ಎನಿಸುತ್ತವೆ ಅಥವಾ ಸರಿ ಎಂಬ ಅನುಭವವಾಗುತ್ತದೆ ಮತ್ತು ದೋಷಗಳು ತಪ್ಪು ಎಂದು ಅನುಭವವಾಗುತ್ತದೆ. ಗಳಿಕೆಯನ್ನು ವಿವರಿಸುವ ಇತರ ವಿಧಾನಗಳೆಂದರೆ, ಧ್ವನಿತ/ಸೂಚಿತ ಕಲಿಕೆ, ಅನೌಪಚಾರಿಕ ಕಲಿಕೆ ಮತ್ತು ಸ್ವಾಭಾವಿಕ ಕಲಿಕೆ. ತಾಂತ್ರಿಕವಲ್ಲದ ಭಾಷೆಯಲ್ಲಿ ಹೇಳಬೇಕೆಂದರೆ ಗಳಿಸುವುದು ಎಂದರೆ ಭಾಷೆಯನ್ನು 'ಎತ್ತಿಕೊಳ್ಳು'ವುದಾಗಿದೆ.*
*ದ್ವಿತೀಯ ಭಾಷೆಯಲ್ಲಿ ಸಾಮರ್ಥ್ಯವನ್ನು ಬೆಳೆಸಲು ಎರಡನೇ ಮಾರ್ಗವೆಂದರೆ ಭಾಷಾ ಕಲಿಕೆ. ದ್ವಿತೀಯ ಭಾಷೆಯ ಪ್ರಜ್ಞಾಪೂರ್ವಕ ಜ್ಞಾನ, ನಿಯಮಗಳನ್ನು ತಿಳಿದುಕೊಳ್ಳುವುದು, ಅವುಗಳ ಇರುವಿಕೆಯ ಬಗ್ಗೆ ತಿಳಿಯುವುದು ಮತ್ತು ಅವುಗಳ ಬಗ್ಗೆ ಮಾತನಾಡಲು ಸಾಧ್ಯವಾಗುವುದನ್ನು ಸೂಚಿಸಲು 'ಕಲಿಕೆ' ಪದವನ್ನು ನಾವು ಬಳಸುತ್ತೇವೆ. ತಾಂತ್ರಿಕವಲ್ಲದ ಪದಗಳಲ್ಲಿ ಕಲಿಕೆ ಎಂದರೆ ಎಲ್ಲರಿಗೂ ಗೊತ್ತಿರುವಂತೆ ಭಾಷೆಯ ಬಗ್ಗೆ ತಿಳಿಯುವುದು ಅಂದರೆ 'ವ್ಯಾಕರಣ' ಅಥವಾ 'ನಿಯಮಗಳು'. ಕೆಲವು ಸಮನಾರ್ಥಕಗಳೆಂದರೆ ಭಾಷೆಯ ಔಪಚಾರಿಕ ಜ್ಞಾನ ಅಥವಾ ಸ್ಪಷ್ಟವಾದ ಕಲಿಕೆಯನ್ನು ಒಳಗೊಂಡಿರುತ್ತದೆ'.* (ಕ್ರೇಶನ್, 1982 : 10)

ಮೊದಲ ವಿಭಾಗದಲ್ಲಿ ಮಕ್ಕಳಿಗೆ ಭಾಷೆಯನ್ನು ಗಳಿಸಲು ಅಪಾಋ ಸಾಮರ್ಥ್ಯವಿರುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಹೆಚ್ಚು ಮಕ್ಕಳು ತಮ್ಮ ಬಾಲ್ಯದಲ್ಲಿ ಕನಿಷ್ಠ ಎರಡು ಭಾಷೆಗಳನ್ನು ತಮ್ಮ ಮನೆಯ ಪರಿಸರಗಳಲ್ಲಿ ಮತ್ತು ಮನೆಗಳಲ್ಲಿ ಕಲಿಯುತ್ತಾರೆ ಹಾಗೂ ಅವರ ಸ್ವಾಭಾವಿಕ ಪರಿಸರದಲ್ಲಿ ಅವರಿಗೆ ತೆರೆದುಕೊಳ್ಳಲು (ಜಥರಿಃಜಜ) ಸಾಧ್ಯವಾದರೆ ಅವರು ಹೆಚ್ಚು ಭಾಷೆಗಳನ್ನು ಕಲಿಯುತ್ತಾರೆ. ಭಾಷೆಯನ್ನು ಗಳಿಸಲು ಮಗುವಿಗಿರುವ ಈ ಅಪಾರವಾದ ಸಾಮರ್ಥ್ಯವನ್ನು ನಾವು ಪರಿಗಣಿಸಿದರೆ, ಸಾಮಾನ್ಯವಾಗಿ ಪ್ರತಿದಿನ ತೆರೆದುಕೊಳ್ಳಲು ಅವಕಾಶ ನೀಡಿದರೆ, ಹೆಚ್ಚು ತೆರೆದುಕೊಳ್ಳಲು ಅವಕಾಶ ನೀಡುವ ಪರಿಸರವನ್ನು ಒದಗಿಸಿದರೆ ದ್ವಿತೀಯ ಭಾಷೆಯನ್ನೂ ಸಹ ಗಳಿಸಬಹುದು ಎಂಬುದನ್ನು ನಾವು ಪ್ರಶಂಸಿಸಬಹುದಾಗಿದೆ.

ಇದನ್ನು ನಾವು ಸ್ಪಷ್ಟವಾಗಿ ಈ ಕೆಳಗಿನ ಉದಾಹರಣೆಯಲ್ಲಿ ನೋಡಬಹುದಾಗಿದೆ. ಕೆಲವು ಮಕ್ಕಳು ತಮ್ಮ ಕುಟುಂಬಗಳೊಂದಿಗೆ ತಮ್ಮ ತಾಯ್ನಾಡನ್ನು ಬಿಟ್ಟು, ವಿದೇಶಗಳಲ್ಲಿ ನೆಲೆಸುತ್ತಾರೆ. ಉದಾಹರಣೆಗೆ ಹಿಂದಿ ಮಾತನಾಡುವ ಮಕ್ಕಳು ಭಾರತವನ್ನು ಬಿಟ್ಟು, ಅಮೇರಿಕಾದಲ್ಲಿ ನೆಲೆಸಿದ್ದು, ಶಾಲೆಯಲ್ಲಿ ಆಂಗ್ಲಭಾಷೆಯನ್ನು ಕೇಳುವ ಮೂಲಕ ಹಾಗೂ ಸಹಪಾಠಿಗಳು ಹಾಗೂ ಶಿಕ್ಷಕರೊಂದಿಗೆ ಅಂತರ್‌ಕ್ರಿಯೆ ನಡೆಸುವ ಮೂಲಕ ಹಾಗೂ ಇತರೆ ಸ್ಥಳಗಳಾದ ಮಾರುಕಟ್ಟೆ, ಟಿವಿ/ದೂರದರ್ಶನ ಇತ್ಯಾದಿ, ಮೂಲಕ ಆಂಗ್ಲಭಾಷೆಯನ್ನು ಗಳಿಸುತ್ತಾರೆ. ಹೀಗೆ ದ್ವಿತೀಯ ಭಾಷೆಗೆ ತೆರೆದುಕೊಳ್ಳಲು ಉತ್ಕೃಷ್ಟವಾಗಿ ಅವಕಾಶ ನೀಡಿದರೆ ನಾವು ಅದನ್ನು ಗಳಿಸಲು ಇರುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

ಆದಾಗ್ಯೂ ಮಕ್ಕಳು ದ್ವಿತೀಯ ಭಾಷೆಯನ್ನು ಗಳಿಸುವಂತೆ ಸಹಾಯ ಮಾಡುವುದು ಶಿಕ್ಷಕರಿಗೆ ಒಂದು ಮುಖ್ಯವಾದ ಸವಾಲಾಗಿದೆ. ಪ್ರಥಮ ಭಾಷೆಯಲ್ಲಿ ಲಭ್ಯವಿರುವ ಭಾಷಾ ಸಮೃದ್ಧ ವಾತಾವರಣವು ಏಕ ಪ್ರಕಾರವಾಗಿ ದ್ವಿತೀಯ ಭಾಷೆಯಲ್ಲಿ ಲಭ್ಯವಿರುವುದಿಲ್ಲ ಮತ್ತು ಭಾರತದಲ್ಲಿ ಇಂಗ್ಲೀಷ್ ಎಂಬ ಭಾಷೆಯನ್ನು ತೆಗೆದುಕೊಂಡಾಗ ಶಾಲೆಯಲ್ಲಿ ದಿನಕ್ಕೆ ಕೇವಲ 30 ನಿಮಿಷಗಳಿಗೆ ಈ ಭಾಷೆಗೆ ತೆರೆದುಕೊಳ್ಳಲು ನಿರ್ಬಂಧಿಸಲಾಗಿದೆ ಅಥವಾ ಇನ್ನೂ ಕಡಿಮೆಯಾಗಿದೆ ಮತ್ತು ಶಿಕ್ಷಕರೂ ಸಹ ಆ ಭಾಷೆಯನ್ನು ನಿರರ್ಗಳವಾಗಿ ಮಾತನಾಡುವವರಾಗಿಲ್ಲದಿದ್ದಲ್ಲಿ, ಆ ಪರಿಸ್ಥಿತಿಯು ಇನ್ನೂ ಹೆಚ್ಚು ಗಂಭೀರವಾಗಿರುತ್ತದೆ.

Notes

Notes

### 3.3.2 ಮಕ್ಕಳಿಗೆ ತಮ್ಮ ದ್ವಿತೀಯ ಭಾಷೆಯನ್ನು ಗಳಿಸುವಂತೆ ಹೇಗೆ ನಾವು ಸಹಾಯಮಾಡಬಹುದು ?

ಮಕ್ಕಳಿಗೆ ತಾವು ತಮ್ಮ ಮಾತೃಭಾಷೆಗಳನ್ನು ಗಳಿಸಲು ಲಭ್ಯವಿರುವ ಭಾಷಾ ಸಮೃದ್ಧ ವಾತಾವರಣವನ್ನು ಹೋಲುವಂತಹ ವಾತಾವರಣವನ್ನು ಒದಗಿಸುವುದು ಒಂದು ಸವಾಲಾಗಿದ್ದರೂ, ಇದು ಉತ್ತರದ ಒಂದು ಪ್ರಮುಖ ಭಾಗವಾಗಿದೆ. ಕ್ರೇಶನ್‌ರವರ ಮಾತುಗಳಲ್ಲಿ, ಮಕ್ಕಳಿಗೆ ದ್ವಿತೀಯ ಭಾಷೆಯಲ್ಲಿ 'ಗ್ರಹಿಸಬಹುದಾದ ಇನ್‌ಪುಟ್' ಬೇಕಾಗಿರುತ್ತದೆ. 'ಗ್ರಹಿಸಬಹುದಾದ ಇನ್‌ಪುಟ್' ಎಂದರೆ, ಮಕ್ಕಳು ಅರ್ಥಮಾಡಿಕೊಳ್ಳಲು ಸಾದ್ಯವಿರುವಂತಹ ಜೊತೆಗೆ ಅವರಿಗೆ ಸವಾಲಾಗಿರುವ ಭಾಷೆಯನ್ನು ಬಳಸುವುದಾಗಿದೆ. ಈ ಭಾಷೆಯನ್ನು ಗ್ರಹಿಸುವಂತೆ ಮಾಡಲು ಇರುವ ಮುಖ್ಯ ಭಾಗವೆಂದರೆ ಮಕ್ಕಳಿಗೆ ಅರ್ಥಪೂರ್ಣವಾಗಿರುವಂತಹ ಸ್ವಾಭಾವಿಕ ಸಂದರ್ಭಗಳನ್ನು ಒದಗಿಸುವುದು ಮತ್ತು ಇದು ಸವಾಲನ್ನು ಪೂರೈಸಲು ಮಕ್ಕಳಿಗೆ ಸಹಾಯ ಮಾಡುತ್ತದೆ. ಉದಾಹರಣೆಗೆ ನಿಮ್ಮ ತರಗತಿಯ ಮಕ್ಕಳಿಗೆ ಇಂಗ್ಲೀಷ್‌ನ ಕೆಲವು ಪದಗಳು ಗೊತ್ತಿದ್ದರೆ, ಅವರಿಗೆ ಅರ್ಥಪೂರ್ಣವೆನಿಸುವ ವಾಕ್ಯಗಳಲ್ಲಿ ಈ ಪದಗಳನ್ನು ಬಳಸುವುದು 'ಗ್ರಹಿಸಬಹುದಾದ ಇನ್‌ಪುಟ್' ಆಗಿರುತ್ತದೆ. ಶಿಕ್ಷಕರು ಮಕ್ಕಳಿಗೆ ಈ ರೀತಿಯ ಸೂಚನೆಗಳನ್ನು ನಿ ಡಬಹುದು– ಕಪ್ಪುಹಲಗೆಯನ್ನು ಒರೆಸು, ಪೆನ್ಸಿಲ್‌ಅನ್ನು ಎತ್ತಿಕೋ, ಚಾರ್ಟನಲ್ಲಿರುವುದನ್ನು ಓದು, ಇತ್ಯಾದಿ, ಇದರಿಂದ ಆ ಸಂದರ್ಭ ಮತ್ತು ಶಿಕ್ಷಕರ ಕಾರ್ಯಗಳು/ಪ್ರದರ್ಶನವು ಮಕ್ಳಿಗೆ ಈಗಾಗಲೇ ಗೊತ್ತಿರುವ ಕಪ್ಪುಹಲಗೆ, ಪೆನ್ಸಿಲ್ ಮತ್ತು ಚಾರ್ಟಮ್ಮಿ ಬ:ಸೊ, ಅರ್ಥವನ್ನು ರಚಿಸಲು ಸಹಾಯ ಮಾಡುತ್ತವೆ. ಆದ್ದರಿಂದ ಶಿಕ್ಷಕರು ಮಗುವಿಗೆ ಪರಿಚಿತವಾದ ಪದಗಳನ್ನು ಒಳಗೊಂಡಿರುವ ಸೂಚನೆಗಳ ರೂಪದಲ್ಲಿ 'ಗ್ರಹಿಸಬಹುದಾದ ಇನ್‌ಪುಟ್'ಅನ್ನು ಇಲ್ಲಿ ಒದಗಿಸುತ್ತಾರೆ ಮತ್ತು ಅದೇ ಸಮಯದಲ್ಲಿ ಇವುಗಳನ್ನು ನೀಡಿರುವ ಸಂದರ್ಭದ ಕಾರಣದಿಂದ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿರುವ ಸವಾಲನ್ನು ಪೂರೈಸಬಹುದಾಗಿದೆ. ಸಾಂಪ್ರದಾಯಿಕವಾಗಿ ದ್ವಿತೀಯ ಭಾಷಾ ಬೋಧನಾ ವಿಧಾನ(ಚಿಠಿಠಿಡಿಠಿಂಚಿಛಿಃಜ)ಗಳಲ್ಲಿ ಮಗು ಮೊದಲು ರಚನೆ/ವ್ಯಾಕರಣ ನಿಯಮಗಳನ್ನು, ನಂತರ ಸಂವಹನದಲ್ಲಿ ಅವುಗಳನ್ನು ಅಭ್ಯಾಸ ಮಾಡವುದು ಅಗತ್ಯವಾಗಿರುತ್ತದೆ. ಇದರ ಬದಲು, ದ್ವಿತೀಯ ಭಾಷಾ ಗಳಿಕೆಗೆ 'ಅರ್ಥದಿಂದ ರಚನೆಯ ಕಡೆಗೆ ಸಾಗುವುದು' ಅಗತ್ಯವಾಗಿರುತ್ತದೆ.

ಕ್ರೇಶನ್‌ರವರು ಸ್ಪಷ್ಟವಾಗಿ ಹೇಳುವುದೇನೆಂದರೆ *' ನಿರ್ಗಳವಾಗಿ ಮಾತನಾಡುವುದನ್ನು ನೇರವಾಗಿ ಬೋಧಿಸಲಾಗುವುದಿಲ್ಲ. ಬದಲಿಗೆ ಸ್ವತಃ ಅದೇ ಕಾಲಕ್ರಮೇಣ ಹೊರಹೊಮ್ಮುತ್ತದೆ. ಈ ದೃಷ್ಟಿಕೋನದ ಪ್ರಕಾರ ಮಾತನಾಡುವುದರಲ್ಲಿ ಬೋಧಿಸಲು ಇರುವ ಅತ್ಯುತ್ತಮ ಮತ್ತು ಬಹುಶಃ ಏಕ ಮಾತ್ರ ಮಾರ್ಗವೆಂದರೆ ಸರಳವಾಗಿ ಗ್ರಹಿಸಬಹುದಾದ ಇನ್‌ಪುಟ್‌ಅನ್ನು ಒದಗಿಸುವುದಾಗಿದೆ. ಬೇಗ ಗಳಿಸುವವರು 'ತಾನು ಸಿದ್ಧ' ಎಂದು ಭಾವಿಸಿದಾಗ ಪ್ರಾರಂಭಿಕ ಭಾಷಣ ಬರುತ್ತದೆ. ವಿವಿಧ ವ್ಯಕ್ತಿಗಳಿಗೆ ವಿಬಿ ,ನ್ನ ಸಮಯಗಳಲ್ಲಿ ಈ ಸಿದ್ಧತೆಯ ಸ್ಥಿತಿ ಸಂಭವಿಸುತ್ತದೆ. ಮೇಲಾಗಿ ಪ್ರಾರಂಭಿಕ ಭಾಷಣವು ವಿಶೇಷವಾಗಿ ಹೆಚ್ಚು ಇನ್‌ಪಟ್ ಅನ್ನು ಅರ್ಥೈಸಿಕೊಳ್ಳುತ್ತಿದ್ದಂತೆ ವ್ಯಾಕರಣ ಬದ್ಧವಾಗಿ ನಿಖರವಾಗಿ ಇರುವುದಿಲ್ಲ. ಕಾಲಕ್ರಮೇಣ ಗಳಿಸುವವರು ಕೇಳಿಸಿಕೊಳ್ಳುತ್ತಿದ್ದಂತೆ ಮತ್ತು ನಿಖರತೆ ಬೆಳೆಯುತ್ತದೆ'.* (ಕ್ರೇಶನ್, 1982: 22)

'ಗ್ರಹಿಸಬಹುದಾದ ಇನ್‌ಪುಟ್' ನ ಅಗತ್ಯತೆಯ ಹೊರತಾಗಿ, ಇನ್ನೂ ಅನೇಕ ಅಂಶಗಳು ದ್ವಿತೀಯ ಭಾಷಾ ಗಳಿಕೆಯ ಮೇಲೆ ಪರಿಣಾಮ ಬೀರುತ್ತವೆ. ಗುರಿಪಡಿಸಿದ ಭಾಷೆಯನ್ನು ಕಲಿಯಲು ಮಕ್ಕಳಲ್ಲಿರುವ ಅಭಿಪ್ರೇಣೆ, ಅವರಲ್ಲಿನ ಆತ್ಮ ವಿಶ್ವಾಸ, ಸಾಮಾನ್ಯವಾಗಿ ಕಲಿಯುವುದರ ಬಗ್ಗೆ ಅವರ ಕುತೂಹಲ/ಆತಂಕ, ಮತ್ತು ಭಾಷೆಯ ಮಗ್ಗೆ ಅವರ ಮನೋವೃತ್ತಿ ಎಲ್ಲವೂ ಭಾಷಾ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಈ ಅಂಶಗಳು ದ್ವಿತೀಯ ಭಾಷಾ ಗಳಿಕೆಯನ್ನು ತಡೆಯಬಹುದು ಅಥವಾ ಪ್ರೋತ್ಸಾಹಿಸಬಹುದು.

ಅನೇಕ ಸಂಶೋಧನೆಗಳು ಜನರಿಗೆ ಗುರಿಪಡಿಸಲಾದ ಭಾಷೆಯಲ್ಲಿ 'ಗ್ರಹಿಸಬಹುದಾದ ಇನ್‌ಪುಟ್'ಅನ್ನು ಒದಗಿಸಿದರೂ, ಅವರಿಗೇನಾದರೂ ಅಭಿಪ್ರೇರಣೆ ಅಥವಾ ಆತ್ಮವಿಶ್ವಾಸ ಕಡಿಮೆ ಇದ್ದರೆ ಅಥವಾ ಕಡಿಮೆ ಮಟ್ಟದ ಕುತೂಹಲವಿದ್ದರೆ, ಅವರು ಅದನ್ನು ಗಳಿಸುವಲ್ಲಿ ವಿಫಲರಾಗುತ್ತಾರೆ ಎಂದು ಹಲವು ಸಂಶೋಧನೆಗಳು ತೋರಿಸಿಕೊಟ್ಟಿವೆ. ಸಾಮಾನ್ಯವಾಗಿ ಕಲಿಕಾರ್ಥಿಗಳು ಕಲಿಯುವಿಕೆಯ ಬಗ್ಗೆ ಹೆಚ್ಚಿನ ಮಟ್ಟದ ಆತಂಕವನ್ನು ಹೊಂದಿದ್ದರೂ ಭಾಷಾ ಕಲಿಕೆಯ ಪ್ರಕ್ರಿಯೆಯು ನಿಧಾನವಾಗಬಹುದು.



Notes

ಶಿಕ್ಷಕರಿಗೆ ವಿದ್ಯಾರ್ಥಿಯ ಅಭಿಪ್ರೇರಣೆ, ಆತ್ಮವಿಶ್ವಾಸ ಮತ್ತು ಮನೋವೃತ್ತಿಯ ಮೇಲೆ ಹೆಚ್ಚಿನ ನಿಯಂತ್ರಣವಿಲ್ಲದಿದ್ದರೂ ಅವರು 'ಗ್ರಹಿಸಬಹುದಾದ ಇನ್‌ಪುಟ್'ಅನ್ನು ಒದಗಿಸಬೇಕಾಗುತ್ತದೆ ಮತ್ತು ಮಕ್ಕಳು ಯಾವುದೇ ಆತಂಕ ಅಥವಾ ಹಿಂಜರಿಕೆ ಇಲ್ಲದೆ ಕಲಿಯುವಂತಹ ವಾತಾವರಣವನ್ನು ವರ್ಗಕೋಣೆಯಲ್ಲಿ ಸೃಷ್ಟಿಸಬೇಕಾಗುತ್ತದೆ. ಕ್ರೇಶನ್‌ರವರ ಪ್ರಕಾರ, *' ಯಾರು ಇನ್‌ಪುಟ್'ಅನ್ನು ಒದಗಿಸುತ್ತಾರೋ ಮತ್ತು ಕಡಿಮೆ ಆತಂಕ ಸನ್ನಿವೇಶದಲ್ಲಿ ಅದನ್ನು ಗ್ರಹಿಸಲು ಸಹಾಯ ಮಾಡುತ್ತಾರೋ ಅವರೇ ಪರಿಣಾಮಕಾರಿ ಭಾಷಾ ಶಿಕ್ಷಕರು'* ಎಂದು ಹೇಳಿದ್ದಾರೆ. (ಕ್ರೇಶನ್, 1982:32)

### 3.3.3 ದ್ವಿತೀಯ ಭಾಷೆಯಲ್ಲಿ ಸಾಮರ್ಥ್ಯವನ್ನು ಬೆಳೆಸುವಲ್ಲಿ ಕಲಿಕೆಗೆ ಯಾವ ಪಾತ್ರವಿದೆ ?

ಭಾಷೆಯ ನಿಯಮಗಳನ್ನು ಕಲಿಯುವುದು ಆ ಭಾಷೆಯಲ್ಲಿ ಮಕ್ಕಳನ್ನು ನಿರರ್ಗಳವಾಗಿ ಮಾತನಾಡುವವರನ್ನಾಗಿ ಸಹಾಯ ಮಾಡುವ ಭಾಷಾ ಗಳಿಕೆಯ ಪ್ರಕ್ರಿಯೆಯ ಬದಲಾಗಿ (ಡಿಜಊಟಚಿಛಿಜಟಜಟಣ) ಬರುವುದಲ್ಲ. ಆದಾಗ್ಯೂ, ಮಕ್ಕಳು ತಮ್ಮ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಿ ತಾವು ಬಂದಿರುವುದು ಅಥವಾ ಮಾತನಾಡಿದುದು ಸರಿಯಾಗಿದೆಯೇ ಅಥವಾ ತಪ್ಪೇ ಎಂದು ನೋಡಲು ಇದು ಸಹಾಯ ಮಾಡಬಹುದು. ಕ್ರೇಶನ್‌ರವರ ಪ್ರಕಾರ, *'ಸಾಮಾನ್ಯವಾಗಿ, ಗಳಿಕೆಯು ದ್ವಿತೀಯ ಭಾಷೆಯಲ್ಲಿ ನಮ್ಮ ಮಾತುಗಳಿಂದ "ಆರಂಭಿಸು"ತ್ತದೆ ಮತ್ತು ನಮ್ಮ ನಿರರ್ಗಳತೆಗೆ ಇದು ಕಾರಣವಾಗಿದೆ.*
*ಕಲಿಯುವಿಕೆಗೆ ಮೇಲ್ವಿಚಾರಕನಾಗಿ ಅಥವಾ ಸಂಪಾದಕನಾಗಿ ಒಂದೇ ಒಂದು ಕಾರ್ಯವಿದೆ. ಗಳಿಸಿಕೊಂಡ ವ್ಯವಸ್ಥೆಯಿಂದ ಉತ್ಪಾದನೆಯಾದ ನಂತರ, ನಮ್ಮ ಮಾತಿನ ರೂಪದಲ್ಲಿ ಬದಲಾವಣೆಗಳನ್ನು ಮಾಡಲು ಕಲಿಯುವಿಕೆಯು ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ಇದು ನಾವು ನಾತನಾಡುವ ಅಥವಾ ಬರೆಯುವ ಮೊದಲು ಅಥವಾ ನಂತರ (ಸ್ವಯಂ ತಿದ್ದುಪಡಿ/ಸರಿಪಡಿಸುವಿಕೆ) ಸಂಭವಿಸಬಹುದು'.* ಕ್ರೇಶನ್, 1982:15)

ಒಬ್ಬ ವ್ಯಕ್ತಿಯು ವ್ಯಾಕರಣ ನಿಯಮಗಳ ಬಗ್ಗೆ ಯೋಚಿಸಲು ಮತ್ತು ತನ್ನನ್ನು ಸರಿಪಡಿಸಲು ಈ ನಿಯಮಗಳನ್ನು ಬಳಸಲು ಹಾಗೂ ತಾನು ಏನನ್ನು ಹೇಳುತ್ತಿರುವೆನೋ ಅದರ ನಿಖರತೆಯ ಬಗ್ಗೆ ನಿರಂತರವಾಗಿ ಕೇಂದ್ರೀಕರಿಸಲು ಸಾಕಷ್ಟು ಸಮಯವಿದ್ದಾಗಿ ಮಾತ್ರ ವ್ಯಾಕರಣ ನಿಯಮಗಳ ಪ್ರಜ್ಞಾಪೂರ್ವ ಕಲಿಕೆಯ ಮೇಲ್ವಿಚಾರಕನಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳುವುದು ಅನವಶ್ಯಕ. ಸಾಮಾನ್ಯವಾಗಿ, ಇಬ್ಬರು ಸಂಭಾಷಣೆಯಲ್ಲಿದ್ದಾಗ ನಿಖರತೆಗಿಂತ ನಿರರ್ಗಳತೆಯು ತುಂಬಾ ಮುಖ್ಯವಾಗಿರುತ್ತದೆ. ವಾಸ್ತವವಾಗಿ, ಒಬ್ಬ ವ್ಯಕ್ತಿಯು ತನ್ನ ಮಾತನ್ನು ಹಿಂಜರಿಕೆಯಿಂದಿರುತ್ತದೆ ಮತ್ತು ಗಮನ ಸೆಳೆಯುವಂತಿರುವುದಿಲ್ಲ. ಆದಾಗ್ಯೂ ನಾವು ಬರೆಯುವಾಗ ಮತ್ತು ನಾವು ಬರೆದಿರುವುದರ ನಿಖರತೆಯ ಬಗ್ಗೆ ಯೋಚಿಸಲು ಸಮಯವಿದ್ದಾಗ, ಮೇಲ್ವಿಚಾರಣೆಯು ಉಪಯುಕ್ತವಾಗಿದೆ.

ನಿಮ್ಮ ಪ್ರಗತಿಯನ್ನು ಪರಿಶೀಲಿಸಿ – 5

*1. ಸಾಮಾನ್ಯವಾಗಿ ಹೇಳುವುದಾದರೆ, ದ್ವಿತೀಯ ಭಾಷಾ ಗಳಿಕೆ ___________ಯಿಂದ ಪ್ರಾರಂಭವಾಗುತ್ತದೆ.*

*a) ಅಭಿವ್ಯಕ್ತಿ* *b) ಗ್ರಹಿಕೆ*

*c) ಸ್ವ ವಿಶ್ಲೇಷಣೆ* *d) ಸರಿ/ತಪ್ಪು ವಿಶ್ಲೇಷಣೆ*

*2. ನೀವು ನಿಮ್ಮ ದ್ವಿತೀಯ ಭಾಷೆ(ಗಳು) ಎಂದು ಯಾವ ಭಾಷೆಯನ್ನು ಪರಿಗಣಿಸುತ್ತೀರಿ ?*

.....................................................................................................

.....................................................................................................

.....................................................................................................

Notes

*3. ನಿಮ್ಮ ಶಾಲೆಗೆ ಬರುವ ಮಕ್ಕಳ ದ್ವಿತೀಯ ಭಾಷೆಗಳು ಯಾವುವು ?*

..............................................................................................................................

..............................................................................................................................

..............................................................................................................................

*4. ಮಕ್ಕಳು ತಮ್ಮ ದ್ವಿತೀಯ ಭಾಷೆಗಳನ್ನು ಗಳಿಸಲು ಯಾವ ಅಂಶಗಳು ಪ್ರಮುಖವಾಗಿವೆ ?*

..............................................................................................................................

..............................................................................................................................

..............................................................................................................................

**3.3.4 ನಮ್ಮ ಪ್ರಥಮ ಭಾಷೆಯು ನಮ್ಮ ದ್ವಿತೀಯ ಭಾಷಾ ಕಲಿಕೆಯ ನಡುವೆ ಬರುತ್ತದೆಯೇ (ತಲೆ ಹಾಕುತ್ತದೆಯೇ /ಅಡ್ಡಿಯಾಗುತ್ತದೆಯೇ/ಹಸ್ತಕ್ಷೇಪ ಮಾಡುತ್ತದೆಯೇ) ?**

ಸ್ವಲ್ಪ ಸಮಯದವರೆಗೆ ಈಗ ಈ ರೀತಿ ಭಾವಿಸಲಾಗಿತ್ತು : ಮಕ್ಕಳು ತಮ್ಮ ದ್ವಿತೀಯ ಭಾಷೆಯನ್ನು ಗಳಿಸುವಾಗ ಅನೇಕ ತಪ್ಪುಗಳನ್ನು ಮಾಡಲು ಕಾರಣವೆಂದರೆ ಅವರ ಪ್ರಥಮ ಭಾಷೆ–ಅದರ ವ್ಯಾಕರಣ, ಶಬ್ದಕೋಶ ಮತ್ತು ಧ್ವನಿವಿಜ್ಞಾನ(ಧ್ವನಿಗಳು). ನಾವು ಕನ್ನಡವನ್ನು (ಹಿಂದಿಯನ್ನು) ಪ್ರಥಮ ಭಾಷೆಯಾಗಿ ಮತ್ತು ಇಂಗ್ಲೀಷನ್ನು ದ್ವಿತೀಯ ಭಾಷೆಯಾಗಿರುವ ಸಂದರ್ಭವನ್ನು ತೆಗೆದುಕೊಂಡು ಇದನ್ನು ಚರ್ಚಿಸೋಣ.

ವ್ಯಾಕರಣ

ಬಹುಶಃ ಕನ್ನಡ (ಹಿಂದಿ) ಮತ್ತು ಇಂಗ್ಲೀಷ್ ವಾಕ್ಯಗಳ ನಡುವಿನ ಸ್ಪಷ್ಟ ವ್ಯತ್ಯಾಸವೆಂದರೆ ಕನ್ನಡ (ಹಿಂದಿ) ಭಾಷೆಯಲ್ಲಿ ಕ್ರಿಯಾಪದವನ್ನು ವಾಕ್ಯದ ಕೊನೆಯಲ್ಲಿ ಇರಿಸಲಾಗುತ್ತದೆ ಮತ್ತು ಇಂಗ್ಲೀಷ್‌ನಲ್ಲಿ ಇದು ವಾಕ್ಯದ ಮಧ್ಯದಲ್ಲಿ ಇರುತ್ತದೆ. ಉದಾಹರಣೆಗೆ :

ನಾನು ಸೇಬನ್ನು ತಿನ್ನುತ್ತಿದ್ದೇನೆ. (ಮೆ ಸೇಬ್ ಖಾ ರಹಾ ಹ್ಞೂ )

I am eating an apple.

ಆದಾಗ್ಯೂ, ಇದು ಸ್ಥಳೀಯ ಕನ್ನಡ (ಹಿಂದಿ) ಮಾತನಾಡುವವರಿಗೆ ಇಂಗ್ಲೀಷ್‌ಅನ್ನು ಕಲಿಯಲು ಸಮಸ್ಯೆಯನ್ನು ಉಂಟುಮಾಡುವುದಿಲ್ಲ. ಕನ್ನಡ (ಹಿಂದಿ) ಭಾಷೆಯನ್ನಾಡುವ ಒಬ್ಬ ಸ್ಥಳೀಯ 'ಖ ಚಿಟಿ ಜಚಿಣuಟಿರ ಚಿಟ ಚಿಠಿಠಿಟಜ' ಎಂದು ಹೇಳಿರುವುದನ್ನು ನಾವು ಕೇಳಿರುವುದಿಲ್ಲ. ಕನ್ನಡದಲ್ಲಿರುವಂತೆ ವಾಕ್ಯದ ಕೊನೆಯಲ್ಲಿ ಕ್ರಿಯಾಪದವನ್ನು ಇರಿಸಲಾಗಿದೆ.

ದ್ವಿತೀಯ ಭಾಷೆಯನ್ನು ಕಲಿಯುವಾಗ ಮಕ್ಕಳು ಮಾಡುವ ಅನೇಕ 'ತಪ್ಪುಗಳು' ಅವರ ಪ್ರಥಮ ಭಾಷೆಯ ಮಧ್ಯ ಪ್ರವೇಶದಿಂದ ಉಂಟಾಗಿರುವುದಲ್ಲ ಎಂದು ಅನೇಕ ಸಂಶೋಧನೆಗಳಲ್ಲಿ ಕಂಡುಬಂದಿದೆ. ಮಕ್ಕಳು ಮತ್ತು ವಯಸ್ಕರೂ ಸಹ ತಮ್ಮ ಪ್ರಥಮ ಭಾಷೆ ಯಾವುದಾದರೂ ಆಗಿರಲಿ, ದ್ವಿತೀಯ ಭಾಷಾ ನಿಯಮಗಳನ್ನು ಗಳಿಸಲು ಸ್ವಾಭಾವಿಕ ಕ್ರಮವನ್ನು ಅನುಸರಿಸುತ್ತಾರೆ. ಅವರು ತಮ್ಮ ಪ್ರಥಮ ಭಾಷೆಯನ್ನೂ ಸಹ ಗಳಿಸಲು ಈ ಕ್ರಮವನ್ನು ಹೋಲುವ ಕ್ರಮವನ್ನೇ ಅನುಸರಿಸುತ್ತಾರೆ. ಹೀಗಾಗಿ ಬೇರೆ ಬೇರೆ ಪ್ರಥಮ ಭಾಷೆಯನ್ನಾಡುವ ಸ್ಥಳೀಯರು ಇಂಗ್ಲೀಷ್‌ಅನ್ನು ಗಳಿಸುವಾಗ, ಪ್ರಥಮ ಪುರುಷದ (3rd person) ಏಕವಚನ ಮತ್ತು ಸ್ವಾಮ್ಯಸೂಚಕಕ್ಕಿಂತ ಮೊದಲು ನಿರಂತರವಾದ 'ing' (ತ್ತಿದ್ದಾನೆ/ಳೆ/ರೆ) ರೂಪವನ್ನು ಮತ್ತು ಬಹುವಚನ '.'(ಗಳು, ಅರು, ಅಂದಿರು)ವನ್ನು ಗಳಿಸುತ್ತಾರೆ. ಇವುಗಳಲ್ಲಿ ದುಲೇ ಮತ್ತು ಬರ್ಟ್ (Dulay and Burt-1974) ರವರು ಚೀನಾ ಮತ್ತು ಸ್ಪಾನಿಷ್ ಮೂಲದ ಮಕ್ಕಳೊಂದಿಗೆ ಮಾಡಿದ ಅಧ್ಯಯನ ಪ್ರಮುಖವಾಗಿದೆ.

ರಚನೆಯನ್ನು ಗಳಿಸುವಾಗ ಮಕ್ಕಳು ಮಾಡುವ ತಪ್ಪುಗಳಲ್ಲಿ ಸ್ವಾಭಾವಿಕ ಕ್ರಮ ಕಂಡುಬರುತ್ತದೆ. ಉದಾಹರಣೆಗೆ 'ನಿರಾಕರಣೆ'ಯನ್ನು ಗಳಿಸುವಾಗ ಅನೇಕ ವಿದ್ಯಾರ್ಥಿಗಳು ವಾಕ್ಯದ ಮೊದಲು/ಮುಂದೆ ನಕಾರಾತ್ಮಕತೆಯನ್ನು ಹಾಕುತ್ತಾರೆ :

ಇಲ್ಲ ಇಷ್ಟ ಇದು ಈಗ ರಾವೆಮ್ (1974)

Not like it now. Ravem (1974)

ನಂತರದ ಹಂತದಲ್ಲಿ ಕ್ರಿಯಾಪದದ ಮೊದಲು/ಮುಂದೆ ನಕಾರಾತ್ಮಕತೆಯನ್ನು ಹಾಕುತ್ತಾರೆ.

ನಾನು ಇಷ್ಟ ಇಲ್ಲ ಇದನ್ನು ಕ್ಯಾನ್ಸಿನೋ ಎಟ್ ಅಲ್ (1975)

I no like this one Cancino et al. (1975)

ಹೇಗೆಂದರೆ ನಾವೆಲ್ಲರೂ ಭಾಷಾ ಗಳಿಕೆಯ ಸ್ವಾಭಾವಿಕ ಪ್ರಕ್ರಿಯೆಗೆ ಒಳಗಾಗುತ್ತೇವೆ ಮತ್ತು ಈ ತಪ್ಪುಗಳು ಪ್ರಥಮ ಭಾಷೆಯ ಹಸ್ತಕ್ಷೇಪದ ಪ್ರಕರಣವಲ್ಲ ಎಂದು ಪ್ರಥಮ ಭಾಷೆ ತಿಳಿಸುತ್ತದೆ. ಆದ್ದರಿಂದ ಸಾಮಾನ್ಯ ದ್ವಿತೀಯ ಭಾಷೆಯನ್ನು ಗಳಿಸುವಾಗ ವಿವಿಧ ಸ್ಥಳೀಯ ಭಾಷೆಗಳ ಮಕ್ಕಳು ಒಳಗಾಗುವ ಹಂತಗಳಲ್ಲಿ ಏಕರೂಪತೆ ಇದೆ ಮತ್ತು ವಾಸ್ತವಾಗಿ ಭಾಷೆಯನ್ನು ಗಳಿಸುವಾಗ ಈ ಹಂತಗಳಲ್ಲಿ ಹೋಲಿಕೆ/ಸಾಮ್ಯತೆ ಇದೆ.

ಶಬ್ದಕೋಶ

ಯಾವುದೇ ಭಾಷೆಯ ಶಬ್ದಕೋಶವ ಅದು ಆಡುವ ಸಾಮಾಜಿಕ ಸಾಂಸ್ಕೃತಿಕ ಪರಿಸರದಿಂದ ಪ್ರಭಾವಿತವಾಗಿರುತ್ತದೆ. ಉದಾಹರಣೆಗೆ ಭಾರತೀಯ ಇಂಗ್ಲೀಷ್‌ನ ಬಳಕೆದಾರರು ಪ್ರಮುಖವಾಗಿ ಭಾರತೀಯ ಸಂದರ್ಭಗಳಲ್ಲಿ ಇತರ ಭಾರತೀಯ ಬಳಕೆದಾರರೊಂದಿಗೆ ಸಂವಹನ ನಡೆಸಲು ಇಂಗ್ಲೀಷ್‌ಅನ್ನು ಬಳಸಬೇಕಾಗುತ್ತದೆ. ಉದಾಹರಣೆಗೆ :

- ದೀಪಾವಳಿಯಂದು ಒಬ್ಬ ವ್ಯಕ್ತಿ ದೇವಾಲಯಕ್ಕೆ ಹೋಗುತ್ತಾನೆ ಮತ್ತು ಪೂಜಾರಿ ಅವನಿಗೆ ಪ್ರಸಾದವನ್ನು ನೀಡುತ್ತಾನೆ. ಅವನು ತನಗಾಗಿ ಒಂದು ಹೊಸ ಕುರ್ತಾ(ಜುಬ್ಬಾ) ಪೈಜಾಮವನ್ನು ಮತ್ತು ತನ್ನ ಪತ್ನಿಗಾಗಿ ಹೊಸ ಸೀರೆಯನ್ನು ಖರೀದಿಸುತ್ತಾನೆ. ಅವರು ತಮ್ಮ ಮನೆಯ ಸುತ್ತಾಲೂ ದೀಪಗಳನ್ನು ಬೆಳಗಿಸುತ್ತಾರೆ ಮತ್ತು ವಿವಿಧ ಸಿಹಿತಿಂಡಿಗಳಾದ ಜಿಲೇಬಿ, ರಸಗುಲ್ಲಾ, ಇತ್ಯಾದಿಗಳನ್ನು ತಿನ್ನುತ್ತಾರೆ.
- ವಾರ್ತಾಪತ್ರಿಕೆಯಲ್ಲಿ ಭಾರತದಾದ್ಯಂತ ಸಂಘಟಿಸಿದ ಧರಣೆಗಳು ಮತ್ತು ಬಂದ್‌ಗಳ ಬಗ್ಗೆ ಪೂರ್ತಿ ವರದಿಗಳಿವೆ.
- ಮದುವೆಗಾಗಿ ಶಾಮಿಯಾನವನ್ನು ಸುಂದರವಾಗಿ ಅಲಂಕರಿಸಲಾಗಿದೆ.
- ರಾತ್ರಿ ಒಂದರ ನಂತರ ಸಪ್ತಪದಿ ಮತ್ತು ಕನ್ಯಾದಾನ ನಡೆಯಿತು.

(Deepawali–ಹಿಂದೂಗಳ ದೀಪಗಳ ಹಬ್ಬ, prasada –ಹಿಂದೂಗಳು ಆರಾಧನೆ ಮಾಡುವ ಸ್ಥಳ (ದೇವಾಲಯ)ದಲ್ಲಿ ನೀಡುವ ಪವಿತ್ರವಾದ ಸಿಹಿ ತಿಂಡಿಗಳು, ಠಿಣರಿಚಿಡಿ–ಒಬ್ಬ ಹಿಂದೂ ಪುರೋಹಿತ, kurta pajama –ಭಾರತೀಯ ಉಡುಗೆ, ,ಽಡಿಜ –ಮಹಿಳೆಯರು ಧರಿಸುವ ಭಾರತೀಯ ಉಡುಗೆ, deepagalu –ಮಣ್ಣಿನಿಂದ ಮಾಡಿದ ಚಿಕ್ಕ ದೀಪಗಳು, jalebi, ras gullagalu – ಭಾರತೀಯ ಸಿಹಿತಿಂಡಿಗಳು, dharanigalu ಮತ್ತು bandhgalu – ಮುಷ್ಕರಗಳು/ಪ್ರತಿಭಟನೆಗಳು,, hamiyaanaa ೀ–ಸಾಮಾನ್ಯವಾಗಿ ಹೆಚ್ಚು ಜನರನ್ನು ಒಟ್ಟುಗುಡಿಸಲು ಬಳಸಲಾಗುವ ದೊಡ್ಡದಾದ ಡೇರೆ,, aptapadi – ಹಿಂದೂ ವಿವಾಹದಲ್ಲಿ ವಧು ಮತ್ತು ವರ ಹೋಮದ ಸುತ್ತಲೂ ಸುತ್ತುವ ಒಂದ ಆಚರಣೆ, kanyaa daana –ಹಿಂದೂ ವಿವಾಹದಲ್ಲಿ ವಧುವಿನ ತಂದೆ ವಧುವನ್ನು ದಾನ ಮಾಡವ ಒಂದು ಆಚರಣೆ.)

ಇಟಾಲಿಯೈಸ್ಡ್ ಪದಗಳು ಕನ್ನಡ ಪದಗಳಾಗಿದ್ದು ಯಾವುದೇ ಬದಲಾವಣೆ ಇಲ್ಲದೆ ಇಂಗ್ಲೀಷ್ ವಾಕ್ಯಗಳಲ್ಲಿ ಬಳಸಲಾಗಿದೆ. ಇವು ಭಾರತೀಯ ಬಳಕೆದಾರರು ಇಂಗ್ಲೀಷ್‌ಅನ್ನು ಮಾತನಾಡುವಾಗ ಭಾರತೀಯ ಸಮಾಜ ಮತ್ತು ಸಂಸ್ಕೃತಿಯ ಪರಿಣಾಮವಾಗಿದೆ. ಈ ರೀತಿಯ ಪದಗಳು ಭಾರತೀಯ ಜೀವನ ಶೈಲಿಯನ್ನು ವ್ಯಕ್ತಪಡಿಸುತ್ತದೆ ಮತ್ತು ಇಂಗ್ಲೀಷ್‌ನ ಇತರ ವಿಧಗಳಾದ ಬ್ರಿಟೀಷರ ಇಂಗ್ಲೀಷ್, ಅಮೇರಿಕಾದ ಇಂಗ್ಲೀಷ್, ಆಸ್ಟ್ರೇಲಿಯಾದ ಇಂಗ್ಲೀಷ್, ಸಿಂಗಾಪೂರದ ಇಂಗ್ಲೀಷ್, ದಕ್ಷಿಣ ಆಫ್ರಿಕಾದ ಇಂಗ್ಲೀಷ್ ಇತ್ಯಾದಿ ಇಂಗ್ಲೀಷ್‌ಗಳಲ್ಲಿ ಇದು ಒಳಗೊಂಡಿಲ್ಲ. ಇಂಗ್ಲೀಷ್‌ನ ಪ್ರತಿ ವಿಧದ ಶಬ್ದಕೋಶದ ಕೆಲವು ಭಾಗವು ಅನಿವಾರ್ಯವಾಗಿ ಸಂಸ್ಕೃತಿಯಿಂದ ಸುತ್ತುಗಟ್ಟಿದೆ.

Notes

ಅದೇ ಸಮಯದಲ್ಲಿ ಭಾರತದಲ್ಲಿ ಇಂಗ್ಲೀಷ್‌ಅನ್ನು ಮಾತನಾಡಿದಾಗ ಕೆಲವು ಪದಗಳನ್ನು ವಿಭಿನ್ನವಾಗಿ ಬಳಸಲಾಗುತ್ತದೆ. ಇಂಗ್ಲೀಷ್‌ನ ಸ್ಥಳೀಯ ವಿಧ (ಪ್ರಭೇದಗಳಲ್ಲಿ ಅವೆಂದರೆ ಬ್ರಿಟೀಷ್, ಅಮೆರಿಕನ್ ಇತ್ಯಾದಿ), 'uncle' ಮತ್ತು 'aunt' ಎಂಬ ಪದಗಳನ್ನು ಉದಾಹರಣೆಗೆ ಮಾವ, ಚಿಕ್ಕಮ್ಮ, ಅತ್ತೆ , ಮಾವ ಇತ್ಯಾದಿ ಕೌಟುಂಬಿಕ ಸಂಬಂಧಗಳನ್ನು ಉಲ್ಲೇಖಿಸಲು ಮಾತ್ರ ಬಳಸಲಾಗುತ್ತದೆ. ಆದರೆ, ಭಾರತೀಯರು ಈ ಪದಗಳನ್ನು ಹಿರಿಯರು, ನೆರೆಯವರು, ಅಂಗಡಿಯವರು, ಪೋಷಕರ ಸ್ನೇಹಿತರು, ಬಸ್ ಚಾಲಕರು ಇತ್ಯಾದಿ– ಇವರನ್ನು ಉಲ್ಲೇಖಿಸಲು ಬಳಸುತ್ತಾರೆ. ನಾವು ಪದಗಳ ಗುಂಪನ್ನು ಕಡಿಮೆಗೊಳಿಸಿದ್ದೇವೆ. ಉದಾಹರಣೆಗೆ 'address of welcome', 'members of the family', 'bunch of keys', 'box of matches' ಅನ್ನು 'welcome address', 'familymember', 'key bunch', ಮತ್ತು 'match box' ಆಗಿ ಮಾಡಿರುವುದು. ಹಾಗೆಯೇ ಸ್ಥಳೀಯ ಇಂಗ್ಲೀಷ್ ಪ್ರಭೇದಗಳು ' postpone' ಅನ್ನು ಒಳಗೊಂಡಿದೆ. ' prepone' ಎಂಬ ಪದವು ಭಾರತೀಯ ಇಂಗ್ಲೀಷ್‌ನ ಒಂದು ಭಾಗವಾಗಿದೆ. ಆದಾಗ್ಯೂ ಇದು ಈಗ ವ್ಯಾಪಕವಾಗಿ ಅರ್ಥೈಸಿಕೊಳ್ಳಲ್ಪಟ್ಟಿದೆ ಮತ್ತು ಹೆಚ್ಚಾಗಿ ಮೆಚ್ಚುಗೆ ಪಡೆದಿದೆ. ಭಾರತೀಯ ಇಂಗ್ಲೀಷ್ ಸಹ ಅನೇಕ ನುಡಿಗಟ್ಟುಗಳನ್ನು (phrase) ಒಳಗೊಂಡಿದೆ. ಆದರೆ ಇದು ಇಂಗ್ಲೀಷ್‌ನ ಸ್ಥಳೀಯ ವಿಧಗಳಲ್ಲಿ ಕಂಡುಬಂದಿಲ್ಲ. ಉದಾಹರಣೆಗೆ ' pin-drop silence', 'change of heart', 'each and every', 'do the needful' ಇತ್ಯಾದಿ.

ಭಾರತೀಯ ಇಂಗ್ಲೀಷ್‌ನಲ್ಲಿ ಔಪಚಾರಿಕವಾಗಿ ಸಂವಹನ ಮಾಡುವಾಗ ಉನ್ನತ ಶ್ರೇಣಿಯಲ್ಲಿನ ಜನರಿಗೆ ನೀಡಲಾಗುವ ಮಹತ್ವವನ್ನು address forms (ವಿಳಾಸ ರೂಪಗಳು), signing off forms (ಸಹಿ ಮಾಡಿ ಹೊರಹೋಗುವ ರೂಪಗಳು) ಮತ್ತು phrases (ನುಡಿಗಟ್ಟುಗಳು) ಅನ್ನು ವೈವಿಧ್ಯಮಯವಾಗಿ ವ್ಯಕ್ತಪಡಿಸಲಾಗುತ್ತದೆ. ಇದು ಇಂಗ್ಲೀಷ್‌ನ ಇತರ ವಿಧಗಳ ವೈವಿಧ್ಯತೆಯ ಭಾಗವಾಗಿಲ್ಲ.

Respected sir (ಗೌರವಾನ್ವಿತರೆ/ಮಾನ್ಯರೆ)
ಆಡಿಚಿತಿ your kind attention to (ನಿಮ್ಮ ಗಮನವನ್ನು ______ ಕಡೆ ಸೆಳೆಯಲು)
To bring to your kind notice (ನಿಮ್ಮ ಗಮನಕ್ಕೆ ತರಲು)

ಹೀಗಾಗಿ, ಎರಡು ವೈವಿಧ್ಯಮಯ ಭಾಷೆಗಳು ಮತ್ತು ಸಂಸ್ಕೃತಿಗಳು ಪರಸ್ಪರ ಸಂಪರ್ಕಕ್ಕೆ ಬಂದಾಗ ವಿವಿಧ ಪರಿಕಲ್ಪನೆಗಳು/ವಸ್ತುಗಳು ಇತ್ಯಾದಿಗಳಿಗೆ ದ್ವಿತೀಯ ಭಾಷೆಯಲ್ಲಿ ಅದಕ್ಕೆ ಸಮಾನವಾದ ಯಾವುದೇ ಪದಗಳಿಲ್ಲದಿರುವಾಗ ಈಗಾಗಲೇ ಗೊತ್ತಿರುವ ಭಾಷೆಗಳಲ್ಲಿನ ಪದಗಳನ್ನು ಬಳಸುವುದು. ಭಾಷೆ ಮತನಾಡುತ್ತಿರುವ ಪರಿಸರದ ಆಧಾರದ ಮೇಲೆ ದ್ವಿತೀಯ ಬಾಷೆಯಲ್ಲಿ ಪದಗಳನ್ನು ವಿಭಿನ್ನವಾಗಿ ಬಳಸುವುದು ಮತ್ತು ಹೊಸ ಪದಗಳನ್ನು ಮತ್ತು ನುಡಿಗಟ್ಟುಗಳನ್ನು (phrases) ರಚಿಸುವುದು ಎಲ್ಲವೂ ಸ್ವಾಭಾವಿಕ ಪ್ರಕ್ರಿಯೆಗಳಾಗಿವೆ. ಇದನ್ನು ಹಸ್ತಕ್ಷೇಪ/ನಡುವೆ ಬರುವುದು/ ಅಡ್ಡಿಯಾಗುವುದು ಎಂದು ಶಬ್ದೀಕರಿಸಲಾಗುವುದಿಲ್ಲ. ಏಕೆಂದರೆ ಇದು ಪ್ರಥಮ ಭಾಷೆಯಿಂದ ದ್ವಿತೀಯ ಭಾಷೆಗೆ ನಕಾರಾತ್ಮಕ/ಋಣಾತ್ಮಕ ವರ್ಗಾವಣೆಯನ್ನು ಇದು ಸೂಚಿಸುತ್ತದೆ.

ನಿಮ್ಮ ಪ್ರಗತಿಯನ್ನು ಪರಿಶೀಲಿಸಿ – **6**

1. *'pin-drop silence', 'change of heart', 'each and every' ಈ ರೀತಿಯ ನುಡಿಗಟ್ಟುಗಳನ್ನು*

   *ನಾವು ಎಲ್ಲ ಕಾಣುತ್ತೇವೆ ?*

   *a) ಸ್ಥಳೀಯ ಇಂಗ್ಲೀಷ್*     *b) ಭಾರತೀಯ ಇಂಗ್ಲೀಷ್*

   *c) ಅಮೇರಿಕಾದ ಇಂಗ್ಲೀಷ್*     *d) ಆಸ್ಟ್ರೇಲಿಯಾದ ಇಂಗ್ಲೀಷ್*

Notes

2. ಇಂಗ್ಲೀಷ್ ಮತ್ತು ಕನ್ನಡ (ಹಿಂದಿ) ವಾಕ್ಯಗಳ ನಡುವಿನ ಪ್ರಮುಖ ವ್ಯತ್ಯಾಸವೇನು ?

........................................................................................................................................

........................................................................................................................................

........................................................................................................................................

3. 'ಭಾರತೀಯ ಇಂಗ್ಲೀಷ್‌ನಲ್ಲಿ ಭಾರತದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ' – ಈ ಮೇಲಿನ ಹೇಳಿಕೆಯನ್ನು ಸಾಬೀತುಪಡಿಸಲು ಉದಾಹರಣೆಗಳನ್ನು ನೀಡಿರಿ.

........................................................................................................................................

........................................................................................................................................

........................................................................................................................................

ಧ್ವನಿ ವಿಜ್ಞಾನ (ಧ್ವನಿಶಾಸ್ತ್ರ)

ಪ್ರಪಂಚದ ಬೇರೆಬೇರೆ ಪ್ರದೇಶಗಳಲ್ಲಿ ಇಂಗ್ಲಿಷನ್ನು ಒಂದೇ ರೀತಿ ಮಾತನಾಡುವುದಿಲ್ಲ. ಬ್ರಿಟಿಷ್ ಆಡುವ ಮಾತಿಗೆ ಅಮೇರಿಕಾದ ಆಡುಮಾತಿಗೂ ವ್ಯತ್ಯಾಸವಿರುತ್ತದೆ. ಹಾಗೆಯೇ ಆಸ್ಟ್ರೇಲಿಯನ್ ಇಂಗ್ಲಿಷ್, ಬ್ರಿಟಿಷ್ ಹಾಗೂ ಅಮೇರಿಕಾದ ಭಾಷೆಗಿಂತ ವಿಭಿನ್ನ. ಹಾಗೆಯೇ ನಮ್ಮ ದೇಶದ ಎಲ್ಲಾ ಭಾಗಗಳಲ್ಲಿ ಹಿಂದಿ ಮಾತನಾಡುವ ರೀತಿ ಬೇರೆಬೇರೆ. ಉದಾ: ಬಂಗಾಲ, ಬಿಹಾರ ಅಥವಾ ತಮಿಳುನಾಡಿನವರು ಹಿಂದಿಯನ್ನು ಮಾತನಾಡಿದರೆ ಅವರು ಯಾವ ಪ್ರದೇಶದವರೆಂದು ಗುರುತಿಸುವುದು ಕಷ್ಟವಲ್ಲ.

ಬೇರೆಬೇರೆ ಪ್ರದೇಶದ ಜನರಾಡುವ ಭಾಷೆಯ ಮಾತುಗಾರಿಕೆ ಅಥವಾ ವ್ಯಾಕರಣದಲ್ಲಿ ಬದಲಾವಣೆ ಇರುವುದಿಲ್ಲ. ಬದಲಿಗೆ ಅವರ ಉಚ್ಚಾರಣೆಯ ರೀತಿ ಬೇರೆಯಷ್ಟೆ. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಒಂದನ್ನು ನೋಡೋಣ.

ಎರಡನೆಯ ಭಾಷೆಯ ಕಲಿತ ಶಬ್ದಗಳು ನಮ್ಮ ಮೊದಲ ಭಾಷೆಯಲ್ಲಿ ಇರುವುದಿಲ್ಲ. ಉದಾ: ಮೂಲ ಇಂಗ್ಲಿಷ್ ಭಾಷಿಕ ಗಿಚಿಟಿ ಮತ್ತು ಘಾಚಿಣಝು ಎನ್ನುವ ಶಬ್ದ ಉಚ್ಛರಿಸಿದರೆ ಮೊದಲ ಅಕ್ಷರದ ಉಚ್ಚಾರಣೆಯಲ್ಲಿ ವ್ಯತ್ಯಾಸವಿರುತ್ತದೆ. ಅದೇ ಹಿಂದಿ ಭಾಷಿಕ ಉಚ್ಛರಿಸಿದರೆ ಗಿ ಉಚ್ಚಾರಣೆಯಿರುತ್ತದೆ. ಹಾಗೆಯೇ ಹಿಂದಿ ಭಾಷಿಕರು treasure, measure ಶಬ್ದಗಳನ್ನು treazure, meazure ಎನ್ನುವ ಶಬ್ದ ಹೊರಡಿಸುತ್ತಾರೆ.

ಇದೇ ತರಹ ಇಂಗ್ಲಿಷ್ ಮೂಲದವರು ಹಿಂದಿಯನ್ನು ಕಲಿಯುವ ಸಂದರ್ಭದಲ್ಲೂ ಅವರಿಗೆ ಮುಂದಿನ ಶಬ್ದಗಳನ್ನು ಉಚ್ಛರಿಸುವಾಗ ಬಹಳ ಕಷ್ಟಪಡುತ್ತಾರೆ. Khargosh (ಖರ್‌ಘೋಷ್), Ghar (ಘರ್), Chathri (ಛತ್ರೀ), Jharnaa (ಝರ್‌ನಾ), Thila (ತಿಲಾ), Phal (ಫಲ್), ಃಚಿಚಿಟಣ (ಭಾಲು), ಖ, ಘ, ಛ, ಝ, ಫ, ಭ ಎಂಬ ಶಬ್ದಗಳು ಇಂಗ್ಲಿಷ್‌ನಲ್ಲಿ ಇಲ್ಲದಿರುವುದೇ ಇದಕ್ಕೆ ಮೂಲಕಾರಣ. (Khargosh-Rabbit, ghar-house, chatri-umbrella, jharnaa-stream, thilu-bag, Phul-flower, Bhaluu-bear) ಎಂಬ ಅಕ್ಷರಗಳಿಂದ ಶುರುವಾಗುವ ಶಬ್ದಗಳು ಇಂಗ್ಲಿಷಿನಲ್ಲಿ ಇಲ್ಲ.

Notes

ಧ್ವನಿಶಾಸ್ತ್ರದಲ್ಲಿ ಮೊದಲ ಭಾಷೆಯ ಪ್ರಭಾವವನ್ನು ಕಾಣಬಹುದು. ಮತ್ತೊಂದು ಶಬ್ದ ಗ್ರಹಿಸುವವರು ವಯಸ್ಸು ಕೂಡ ಪರಿಗಣಿತವಾಗುವುದು. ವಯಸ್ಸಿಗನುಗುಣವಾದ ಮೆದುಳಿನ ಗ್ರಹಣಶಕ್ತಿ ಕಾರಣ. ಮಗುವಿನ ತೊದಲು ನುಡಿಯ ಹಂತದ್ಲೇ ಎಡ ಮೆದುಳು ಭಾಷಾ ಗ್ರಹಿಕೆಯಲ್ಲಿ ವಿಶೇಷವಾಗಿ ರೂಪುಗೊಳ್ಳುವುದು. ಭಾರತೀಯ 3–4 ವಯಸ್ಸಿನ ಮಗುವನ್ನು ಅಮೇರಿಕಾದ ಅಥವಾ ಬ್ರಿಟನ್‌ನಲ್ಲಿಟ್ಟರೆ ಇಂಗ್ಲಿಷ್ ಮಾತನಾಡುವವರ ಜೊತೆಗೆ ಅವರ ಹಾಗೆಯೇ ಮಾತನಾಡುವುದು.

## ನಿಮ್ಮ ಪ್ರಗತಿ ಗಮನಿಸಿ – 7

*1. ಮೂಲ ಇಂಗ್ಲಿಷ್ ಭಾಷಿಕ ಋಚಿಡಿಂಥು ಶಬ್ದ ಉಚ್ಚರಿಸಲು ಕಷ್ಟಪಡುವುದೇಕೆ?*

*(ಎ) ಈ ಶಬ್ದ ಇಂಗ್ಲಿಷ್‌ನಲ್ಲಿಲ್ಲ*

*(ಬಿ) ಋ ಶಬ್ದ ಇಂಗ್ಲೀಷಿನಲ್ಲಿಲ್ಲ*

*(ಸಿ) ಹಿಂದಿ ಮಾತನಾಡುವುದಿಲ್ಲ.*

*(ಡಿ) ಕಲಿಯಲು ಇಷ್ಟವಿಲ್ಲ.*

*2. ಯಾಕೆ ನಮ್ಮ ಪರಿಸರದಲ್ಲಿರುವ ಶಬ್ದಗಳನ್ನು ಆಡಲು ಒಂದು ಮನಸ್ಸಿನ ನಂತರ ಕಷ್ಟಪಡುವುದೇಕೆ?*

.............................................................................................................

.............................................................................................................

.............................................................................................................

*3. ಅಮೇರಿಕಾ, ಬ್ರಿಟನ್‌ನ ಯಾವುದಾದರೂ, ಟಿ.ವಿ. ರೇಡಿಯೋ ಚಾನಲ್‌ನ್ನು ಕೇಳಿಸಿಕೊಳ್ಳಿ, ಅದು ನಮ್ಮ ದಏಶದ ಮಾಧ್ಯಮದ ಭಾಷೆಯಂತಿರುವುದಿಲ್ಲ. ಹಾಗೆಯೇ ಹಿಂದಿಯನ್ನು ಬಂಗಾಲ, ಪಂಜಾಬದಲ್ಲಿ ಆಡುವವರ ರೀತಿಯಲ್ಲಿ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸ ಗಮನಿಸಿ.*

.............................................................................................................

.............................................................................................................

.............................................................................................................

## 3.4 ಭಾಷೆಯನ್ನು ಕಲಿಸುವ ವಿಧಾನಗಳು

Notes

ಭಾಷೆಯನ್ನು ಕಲಿಸುವ ವಿಧಾನಗಳ ಮೇಲೆ ಸಾಮಾಜಿಕ, ರಾಜಕೀಯ, ಮನಶಾಸ್ತ್ರೀಯ ಪ್ರಭಾವಗಳು ಆಗುತ್ತವೆ. ಸಮಾಜದ ಅವಶ್ಯಕತೆ, ಭಾಷೆ ಎಂದರೇನು ಎಂಬುದನ್ನು ಅರಿಯುವುದು, ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆ ಎನ್ನುವುದು ಇದಕ್ಕಿಂತ ಮುಖ್ಯ.

### 3.4.1 ವ್ಯಾಕರಣ ಅನುವಾದ ವಿಧಾನ

ಇದು ಅತ್ಯಂತ ಹಳೆಯ ಮಾದರಿಯಾಗಿದ್ದು, ಈಗಲೂ ಸಾಮಾನ್ಯವಾಗಿ ಬಳಸುತ್ತಾರೆ. ಇದರ ಮೂಲ ಉದ್ದೇಶ ಈ ಭಾಷೆಯ ಸಾಹಿತ್ಯವನ್ನು ಅರಿತುಕೊಂಡು ಬರವಣಿಗೆ ಚೆನ್ನಾಗಿ ಆಗಲಿ ಎಂಬುದು. ವಿದ್ಯಾರ್ಥಿಗಳು ವ್ಯಾಕರಣದ ನಿಯಮಗಳನ್ನು ಬಾಯಿಪಾಠ ಮಾಡಿ ಅವರಿಗೆ ಗೊತ್ತಿರುವ ಭಾಷೆಯಿಂದ ಅನುವಾದ ಮಾಡಿಕೊಂಡು ಶಿಕ್ಷಕರ ಸಹಾಯದಿಂದ ಭಾಷೆ ಕಲಿಯುತ್ತಾರೆ. ಈ ರೀತಿ ಕಲಿತ ಭಾಷೆಯನ್ನು ಆಡಲು ಮತ್ತು ಕೇಳುವಲ್ಲಿ ಮಕ್ಕಳಲ್ಲಿ ಆಸಕ್ತಿ ಇಲ್ಲದಿರುವುದು ಈ ವಿಧಾನದ ಮಿತಿ.

ಯಾವ ಭಾಷೆಯ ವಿಧಾನದಲ್ಲಿ ಭಾಷೆಯನ್ನು ಕೇಳುವ ಮತ್ತು ಆಡುವ ಅವಕಾಶಕ್ಕೆ ಮೊದಲು ಆಧ್ಯತೆ ನೀಡಬೇಕು. ಇವು – direct method –ನೇರ ವಿಧಾನ ಮತ್ತು Audio –Lingual Method–– ಶ್ರವಣ ಶ್ರೋತೃ ವಿಧಾನ. ಈ ವಿಧಾನಗಳು ಕೇಳೀಸಿಕೊಳ್ಳುವುದು ಮಾತನಾಡುವುದಕ್ಕೆ ಒತ್ತು ಕೊಡುವುದಲ್ಲದೆ, ವ್ಯಾಕರಣ ಅನುವಾದವೂ ಅಲ್ಲದೆ ಭಾಷಾ ವಿಜ್ಞಾನದ ಮೂಲ ಭಾಷಾ ರೂಪಗಳು ತಿಳಿಯಲು ಸಹಕಾರಿಯಾಗಿದೆ. ಎರಡನೆಯ ಮಹಾಯುದ್ಧವು ಅನುವಾದಕರಿಗೆ, ಗೂಢಚಾರರಿಗೆ, ಸಂಜ್ಞಾ ಭಾಷೆಗೆ ಮಹತ್ವ ನೀಡಿತು. ಅವರೆಲ್ಲರೂ ಹಲವು ಭಾಷೆಗಳ ಪರಿಣಿತರು. ಹೀಗೆ ಈ ವಿಧಾನಗಳು ಕೇಳುವುದಕ್ಕೆ ಮಾತನಾಡಲು ಒತ್ತು ಕೊಟ್ಟಿದೆ.

ಟೇಪ್ ರೆಕಾರ್ಡರ್, ಭಾಷಾ ಪ್ರಯೋಗಾಲಯಗಳು ಈ ವಿಧಾನಗಳನ್ನು ಕಂಡುಹಿಡಿದಿದೆ. ಂಣಾಜುಱ – ಖುಟಿಂಣಾಚಿಟ ವಿಧಾನದಲ್ಲಿ ಬಳಸುವ ಒಂದು ಸಂವಾದದ ಮಾದರಿ ನೀಡಲಾಗಿದೆ.

> ಕಮಲ– ನಿನ್ನ ಹೆಸರೇನು?
>
> ಗೀತಾ– ನನ್ನ ಹೆಸರು ಗೀತಾ, ನಿನ್ನ ಹೆಸರು ಏನು?
>
> ಕಮಲ– ನನ್ನ ಹೆಸರು ಕಮಲ, ನಿನ್ನ ಮನೆ ಎಲ್ಲಿ
>
> ಗೀತಾ– ನಾನು ಅಶೋಕ ವಿಹಾರದಲ್ಲಿದ್ದೇನೆ. ನೀನು ಎಲ್ಲಿದ್ದೀಯೆ?
>
> ಕಮಲ–ನಾನು ರಾಜೇಂದ್ರ ನಗರದಲ್ಲಿದ್ದೇನೆ.

ಆಧುನಿಕ ಕಲಿಕಾ ವಿಧಾನದಲ್ಲಿ ಸಂವಾದಕ್ಕೆ ಹಾಗೂ ಸಹಜತೆಗೆ ಒತ್ತು ನೀಡಲಾಗುತ್ತದೆ.

Notes

### 3.4.4 ಸಂವಾದ (ಸಂಭಾಷಣಾ ರೂಪದ ವಿಧಾನ)

ಸಂಶೋಧನೆಯು ಈ ವಿಧಾನದ ಮೇಲೆ ಬಹಳ ಪರಿಣಾಮ ಬೀರಿದೆ ಎಂದು ಭಾಷಾಶಾಸ್ತ್ರ ಹೇಳಿದೆ. ಸಾಮಾಜಿಕ ಭಾಷಾ ವಿಜ್ಞಾನವು ಭಾಷಾ ರಾಚನಿಕತೆಯ ಜೊತೆಗೆ ಯಾವ ಸಂದರ್ಭದಲ್ಲಿ ಹೇಗೆ ಬಳಸಬೇಕೆಂಬುದನ್ನು ಗಮನಿಸುವುದು. ಸಂದರ್ಭಕ್ಕೆ ತಕ್ಕಂತೆ ಸಂವಾದ ಎಂಬ ಶಿಕ್ಷಣ ವಿಧಾನ ಭಾಷಾ ಕಲಿಕೆಯ ಮೇಲೆ ಪರಿಣಾಮ ಬೀರಿದೆ.

### 3.4.5 ನೈಸರ್ಗಿಕ ವಿಧಾನ

ಭಾಷಾ ಬೋಧನೆಯಲ್ಲಿ ಹೆಚ್ಚಿನ ಗಮನ ನೀಡಬೇಕಾಗಿರುವುದು ವಿದ್ಯಾರ್ಥಿಗೇ ಹೊರತೂ ಶಿಕ್ಷಕನಿಗಾಗಲೀ ಅಥವಾ ಬೋಧನಾ-ಕಲಿಕಾ ಸಾಮಗ್ರಿಗಾಗಲೀ ಅಲ್ಲ ಎಂಬ ಸತ್ಯಕ್ಕೆ ಈ ವಿಧಾನವು ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತದೆ. ಭಾಷೆಗೆ ಸಂಬಂಧಿಸಿದ ಸಂಶೋಧನೆಗಳೂ ಕೂಡ ಇದೇ ಸತ್ಯವನ್ನು ಹೇಳುತ್ತವೆ. ತಪ್ಪುಗಳನ್ನು ಮಾಡುವುದು ಭಾಷೆಯನ್ನು ಕಲಿಯುವ ಪ್ರಕ್ರಿಯೆಯಲ್ಲಿ ಒಂದು ಹಂತವೆಂಬುದನ್ನು ಕೂಡ ಈ ಸಂಶೋದನೆಗಳು ಹೇಳುತ್ತವೆ. ಈ ತಪ್ಪುಗಳು ಮಗುವಿನ ಜ್ಞಾನ ಮತ್ತು ಕಲಿಕಾ ಪ್ರಕ್ರಿಯೆಯ ಸೂಚಕಗಳಾಗಿವೆ ಎಂಬುದನ್ನು ಗುರುತಿಸಲಾಗಿದೆ.

ಈ ಸಂಶೋಧನೆಗಳು ಮಗು ಹುಟ್ಟಿನಿಂದ ಸ್ವಯಂಭುವಾಗಿ ಭಾಷಾ ಗ್ರಹಣಶಕ್ತಿ ಹೊಂದಿವೆ ಎಂಬುದನ್ನು ತಿಳಿಸಿವೆ. ನಾಲ್ಕು ವರ್ಷದ ಮಗು ನಿಯಮಬದ್ಧ ಭಾಷೆ ಕಲಿತು ಶಾಲೆ ಪ್ರವೇಶಿಸುವುದು. ಮಗುವಿಕೆ ನಿರಾತಂಕ ವಾತಾವರಣವಿದ್ದು, ಆಸಕ್ತಿದಾಯಕತೆ ಹುಟ್ಟಿಸಬೇಕೇ ಹೊರತು, ಭಯಗಳನ್ನಲ್ಲ. ಇದು ಭಾಷಾ ಕಲಿಕೆಗಿರುವ ದೊಡ್ಡ ಸವಾಲು.

**ಪ್ರಗತಿಯನ್ನು ಗಮನಿಸಿ – 8**

1. Direct Method (ನೇರವಿಧಾನ) ದ ಉದ್ದೇಶ ಏನು?

   ..........................................................................................................

   ..........................................................................................................

   ..........................................................................................................

2. ಭಾಷಾ ಕಲಿಕೆಯ ಅತಿ ಹಳೆಯ ವಿಧಾನ ಯಾವುದು? ಹಾಗೂ ಅದರ ಮಿತಿಗಳೇನು?

   ..........................................................................................................

   ..........................................................................................................

   ..........................................................................................................

3. ಇಂದು ಯಾವ ವಿಧಾನವನ್ನು ಬಳಸಿ ಸಾಮಾನ್ಯವಾಗಿ ಕಲಿಸುತ್ತಿದ್ದಾರೆ? ಏಕೆ

   ..........................................................................................................

   ..........................................................................................................

   ..........................................................................................................

4. Audio-lingual ಮೂಲಕ ಭಾಷೆ ಕಲಿಸುವ ಆಸಕ್ತಿದಾಯಕ. ಸಂಭಾಷಣೆಯೊಂದನ್ನು ಬರೆಯಿರಿ.

..............................................................................................................

..............................................................................................................

..............................................................................................................

Notes

## 3.5 ಸಾರಾಂಶ

- ಮಕ್ಕಳು ಶಾಲೆಗೆ ಹೋಗದೆಯೇ ಯಾವುದೇ ಕ್ರಮಬದ್ಧವಾದ ಶಿಕ್ಷಣವಿಲ್ಲದೆ, ಪರಿಸರದ ಮೂಲಕ ಭಾಷೆ ಕಲಿಯುತ್ತಾರೆ.
- ಮಕ್ಕಳಿಗೆ ಭಾಷಾಗ್ರಹಿಕೆಯ ಸ್ವಸಾಮರ್ಥ್ಯವಿರುತ್ತದೆ. ಪರಿಸರದಿಂದ ಒಂದಕ್ಕಿಂತ ಹೆಚ್ಚಿನ ಭಾಷೆಗಳನ್ನು ಬಹಳ ಅಚ್ಚುಕಟ್ಟಾಗಿ ಕಲಿತಿರುತ್ತವೆ. ಆದ್ದರಿಂದ ಹಿರಿಯರನ್ನು ಅನುಕರಿಸಿ ಭಾಷೆ ಕಲಿಯುತ್ತವೆ ಎನ್ನುವುದು ಸರಿಯಲ್ಲ.
- ಮಕ್ಕಳು ತಮ್ಮ 2 ರಿಂದ 14 ರ ವಯಸ್ಸಿನ ನಡುವಿನ ವಯಸ್ಸಿನಲ್ಲಿ ಭಾಷೆಗಳನ್ನು ಗ್ರಹಿಸುತ್ತಾರೆ. ಇದಾದನಂತರ, ಭಾಷೆಯನ್ನು ಪ್ರಾದೇಶಿಕರಂತೆ ಮಾತನಾಡಲು ಕಲಿಯುವುದು ಬಲುಕಷ್ಟ, ಮುಂದೆ ತಕ್ಕುದಾದ ಅವಕಾಶ ಸಿಕ್ಕರೆ ವ್ಯಾಕರಣ ಮತ್ತು ಶಬ್ದಶಕ್ತಿ ಬೆಳೆಸಿಕೊಳ್ಳಬಹುದಷ್ಟೆ.
- ಮನುಷ್ಯನ ಎಡ ಮೆದುಳಿನ ಬ್ರೋಕಾ ಏರಿಯಾ ಮತ್ತು ರೆಂಕೀಸ್ ಏರಿಯಾದಲ್ಲಿ ಭಾಷಾ ಚಟುವಟಿಕೆಗಳು ಏರ್ಪಡುತ್ತವೆ. ಇಲ್ಲಿ ಮಾತಿನ ಉಗಮ, ಸಂಗ್ರಹವಾಗುತ್ತದೆ. ಪೆಟ್ಟಾದರೆ ಅದು ಭಾಷೆಯ ಮೇಲೆ ಪರಿಣಾಮ ಬೀಳುತ್ತದೆ.
- ಮಕ್ಕಳು ಭಾಷಾ ಕಲಿಕೆಯ ಹಂತದಲ್ಲಿ ಕೂ ಎನ್ನುವ ಹಂತ, ತೊದಲು ನುಡಿ ಹಂತ, ಒಂದು ಪದದ ಹಂತ ಎರಡು ಪದದ ಹಂತದಲ್ಲಿ ಕಲಿಯುತ್ತಾ ಸಾಗುತ್ತದೆ.
- ಎರಡನೆಯ ಭಾಷಾ ಕಲಿಕಯುವಿಕೆಯಲ್ಲಿ ಸ್ಪಷ್ಟ ಶಿಕ್ಷಣದ ಅಗತ್ಯವಿದೆ. ಪರಿಸರದಲ್ಲಿ ಮೊದಲ ಭಾಷೆಯ ಜೊತೆಗೆ ಎರಡನೆಯ ಭಾಷೆಯ ಸಾಂಗತ್ಯ ದೊರೆತರೆ ಕಲಿಯುವುದು ಸುಲಭ.
- ಸ್ಪಷ್ಟ ವಿವರಣೆ ಮತ್ತು ಸಹಜ ಮತ್ತು ಪರಿಸರ ಸ್ನೇಹಿ ಸಂವಾದ ಎಂಬುದು ಎರಡನೆಯ ಭಾಷಾ ಗ್ರಹಿಕೆಯಲ್ಲಿ ನೆರವಾಗುವುದು.
- ಎರಡನೆಯ ಭಾಷೆಯ ಬೋಧನೆಯಲ್ಲಿ ಸಂದರ್ಭ ವಶಿ ಅರ್ಥಗಳು ಮತ್ತು ವ್ಯಾಕರಣ ಸಹಾಯಕ್ಕೆ ಬರುವುದು.
- ಕಾಲಾನುವರ್ತಿಯಾಗಿ ಎರಡನೆಯ ಭಾಷೆಯನ್ನು ಸರಿಯಾಗಿ ಮತ್ತು ಸುಲಲಿತವಾಗಿ ಕಲಿಯಬಹುದು.
- ಮಕ್ಕಳಿಗೆ ಪ್ರೋತ್ಸಾಹ, ಸ್ವಂತ ನಂಬಿಕೆ, ಕುತೂಹಲ ಇವು ಕಲಿಯಲು ನೆರವಾಗುವುದು.

Notes

- ನಮ್ಮ ಮೊದಲ ಭಾಷೆಯು ಎರಡನೆ ಭಾಷೆಯ ಕಲಿಕೆಯ ಸಂದರ್ಭದಲ್ಲಿ ಅಡ್ಡಿಯಾಗದು.

## 3.6 ಓದಬೇಕಾದ ಪುಸ್ತಕ ಮತ್ತು ಗ್ರಂಥಋಣ


1. Aitchison.J (1979). The articulate manual: An introduction to psycholingustics, London, Hutchinson & Co.
2. Aitchison.J (2003) Teach yourself linguistics, United Kingdon, Hooder & Stoughton Ltd.,
3. Agnihotri, R.K. (2007) Towards & Pedagogical Paradigm rooted in Multilinguality. International Multilingual Research Journal, 1.2:1-10
4. Agnihotri.R.K & Khanna A.L (Eds 1994) Second language augistion. New Deli: Sage Publications.
5. Cook V. (2008) second language learning and language teaching. United Kingdom: Hodder education.
6. Krashen.S (1982) Principles and practice in second language acquisition pergamon press Inc.
7. McGregor.W (2009) Linguistics: An introduction, London: Continuum International Publishing Group.
8. Richards J.C & Rodgers T.S (1995). Approaches and methods in language reaching. United Kingdom: Cambridge University Press.
9. Yule.G (2006). The study of language, India: Cambridge University Press.


## 3.7 ಘಟಕದ ಕೊನೆಯ ಚಟುವಟಿಕೆಗಳು

1. ಭಾಷಾ ಕಲಿಯುವಿಕೆ ಹಾಗೂ ಗ್ರಹಿಕೆಯಲ್ಲಿನ ವ್ಯತ್ಯಾಸ ಮತ್ತು ಹೋಲಿಕೆಗಳನ್ನು ಗಮನಿಸಿ.
2. ಮೊದಲ ಭಾಷಾ ಗ್ರಹಿಕೆಯಲ್ಲಿ ಪರಿಸರದ ಶ್ರೀಮಂತಿಕೆಯ ಪಾತ್ರವನ್ನು ವಿವರಿಸಿ.
3. ಭಾಷಾ ಕಲಿಕೆಯಲ್ಲಿ ಭೌತಿಕ ಪರಿಸರದ ಕೊಡುಗೆ ಏನು
4. ಸಂಭಾಷಣೆಯೊಂದನ್ನು ಉದಾಹರಣೆಯಾಗಿ ನೀಡಿ, ಮಕ್ಕಳು ಅನುಕರಣೆಯಿಂದ ಕಲಿಯುವುದಿಲ್ಲ ಎಂಬುದನ್ನು ತಿಳಿಸಿಕೊಡಿ.
5. ಭಾಷಾ ಗ್ರಹಿಕೆಯಲ್ಲಿ ವಿಷಮ ಸಮಯದ ಪಾತ್ರವೇನು?

6. ಟೆಲಿಗ್ರಾಫಿಕ್ ಸ್ಪೀಚ್ ಮತ್ತು ಊಂಟಂಖಡಿಚಿಣುಛಿ, ಠಿಜಜಛಿ (ಒಂದು ಶಬ್ದ ಮತ್ತು ಮಾತಿನ ನಡುವಿನ ಹಂತ) ಒಂದು ಪದದ ಹಂತ ಇವುಗಳ ನಡುವಿನ ವ್ಯತ್ಯಾಸವೇನು?
7. ಸಂಪದ್ಭರಿತ ಪರಿಸರವನ್ನು ಎರಡನೆಯ ಭಾಷೆಯನ್ನು ಕಲಿಯುವ ಸಂದರ್ಭದಲ್ಲಿ ಒದಗಿಸಿದರೆ, ಮೊದಲ ಭಾಷೆಯಂತೆಯೇ ಇದನ್ನೂ ಗ್ರಹಿಸುತ್ತಾರೆಯೇ?
8. ಎರಡನೆಯ ಭಾಷೆಯನ್ನು ಕಲಿಯಲು ಇರುವ ವಿಧಾನ ಮತ್ತು ವಿಧಾನಗಳು ಯಾವುವು?
9. ಎರಡನೆಯ ಭಾಷೆಯ ಕಲಿಯುವಿಕೆಯಲ್ಲಿ ಮೊದಲ ಭಾಷೆಯು ಅಡ್ಡಿಯಾಗದು ಎಂಬುದನ್ನು ಒಪ್ಪುತ್ತೀರಾ? ಸಕಾರಣ ಕೊಡಿ.
10. ಭಾಷಾ ಚಟುವಟಿಕೆಗೆ ಸಂಬಂಧಿಸಿದ ಮೆದುಳಿನ ಪಾತ್ರವೇನು? ಬ್ರೋಕಾ ಏರಿಯಾ ಮತ್ತು ರಿಂಕೀಸ್ ಏರಿಯಾದ ಕಾರ್ಯಗಳೇನು?
11. ಭಾಷಾ ಶಿಕ್ಷಣ ವಿಧಾನಗಳ ಒಳಿತು ಮತ್ತು ಮಿತಿಗಳನ್ನು ತಿಳಿಸಿ.

Notes

# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

## *ಕೋರ್ಸ್ - 503*
## *ಪೂರ್ವಪ್ರಾಥಮಿಕ ಹಂತದ ಭಾಷೆಯ ಕಲಿಕೆ*

### ವಿಭಾಗ – 2

### ಭಾಷಾ ಕಲಿಕೆಯ ಜೊತೆಗೂಡಿದ ಕೌಶಲ್ಯಗಳು


**ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ**
ಎ–24/25, ಇನ್ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,
ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309
ಜಾಲತಾಣ : www.nios.ac.in

## ಪರಿಣಿತರ ಸಮಿತಿ

ಡಾ॥ ಸಿತಾಂಶು ಎಸ್.ಜೆನಾ
ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ
ಶ್ರೀ ಬಿ.ಕೆ. ತ್ರಿಪಾಠಿ
ಭಾ.ಆ.ಸೆ. ಪ್ರಮುಖ ಸಚಿವರು,
ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,
ಝಾರ್ಖಂಡ್ ಸರ್ಕಾರ, ರಾಂಚಿ
ಪ್ರೋ ಎ.ಕೆ. ಶರ್ಮಾ
ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ
ನವದೆಹಲಿ
ಪ್ರೋ.ಎಸ್.ವಿ.ಎಸ್.ಚೌಧರಿ
ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.
ನವದೆಹಲಿ
ಪ್ರೋ.ಸಿ.ಬಿ.ಶರ್ಮಾ
ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ
ಮುಕ್ತ ವಿಶ್ವವಿದ್ಯಾಲಯ, ನವದೆಹಲಿ
ಪ್ರೋ. ಎಸ್.ಸಿ. ಅಗರ್‌ಕರ್
ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ
ಕೇಂದ್ರ, ಮುಂಬಯಿ

ಪ್ರೋ.ಸಿ.ಎಸ್. ನಾಗರಾಜು
ಭೂತಪೂರ್ವಪ್ರಾಚಾರ್ಯರು
ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ದೊರೈಸ್ವಾಮಿ
ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು
ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ
ಪ್ರೊ. ಬಿ. ಫಾಲಚಂದ್ರ
ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,
ಹಾಗೂ ಭೋಧನಾ ವಿಭಾಗದ ವರಿಷ್ಟರು ಆರ್‌ಇಐ
(ಎನ್‌ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ಕೆ. ವಸಿಷ್ಠ
ಭೂತಪೂರ್ವ ಮುಖ್ಯಸ್ಥರು, ಡಿಇಇ,
ಎನ್‌ಸಿಇಜರ್‌ಟಿ, ನವದೆಹಲಿ
ಪ್ರೊ. ವಸುಧಾ ಕಾಮತ್
ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ
ವಿಶ್ವವಿದ್ಯಾಲಯ, ಮುಂಬಯಿ

ಡಾ. ಹೂಮ ಮಸೂದ್
ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ
ಪ್ರೊ॥ ಪವನ್ ಸುಧೀರ್
ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ
ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ
ಶ್ರೀ ಬಿನಯ ಪಟ್ನಾಯಕ್
ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,
ರಾಂಚಿ
ಡಾ. ಕುಲದೀಪ್ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,
ನೊಯಿಡಾ
ಪ್ರೋ. ಎಸ್.ಸಿ. ಪಾಂಡಾ
ವರಿಷ್ಠ ಸಮಾಲೋಚಕರು (ಶೈಕ್ಷಣಿಕ)
ಡಾ॥ ಕುಜನ್ ಬಲಾ
ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ.

## ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು

ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ

## ಪಠ್ಯಲೇಖರು

ಡಾ॥ ಮೊಹಿತ್ ಮೋಹನ್ ಮೊಹಂತಿ
ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ
ಒಡಿಶಾ
ಡಾ॥ ಪರಶುರಾಮ್ ರಾಯಸಿಂಗ್
ನಿವೃತ್ತ ರೀಡರ್ (ಶಿಕ್ಷಣ)
ಎನ್.ಡಿ.ಡ್ಲ್ಯೂ. ಅಧ್ಯಾಪಕ ಶಿಕ್ಷಣ
ಮಹಾವಿದ್ಯಾಲಯ, ಭುವನೇಶ್ವರ
ಶ್ರೀ ಸುದರ್ಶನ ಸಂತಾರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ
ಶ್ರೀ ತಪಸ್ ಕುಮಾರ್ ನಾಯಕ್
ವರಿಷ್ಟ ಅಧ್ಯಾಪಕರ ಶಿಕ್ಷಕರು
ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು
ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ
ಶ್ರೀಮತಿ. ಸುಚಪ್ರವಾ ಮೊಹಾಪಾತ್ರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಡಿ.ಐ.ಇ.ಟಿ. ಕಟಕ್ ನರಸಿಂಗಪುರ್

ಡಾ॥ ಜೆ.ಸಿ. ನಂದಾ
ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ
ಮಹಾವಿದ್ಯಾಲಯ ಭುವನೇಶ್ವರ
ಶ್ರೀ ಕಾರ್ತಿಕೇಶ್ವರ ಜೆಹರಾ
ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇ.ಟಿ ಕೊರಾಪುಟ್ ಜೆಪುರ್
ಶ್ರೀಮತಿ. ಲಿಪಿಕಾ ಸಾಹು
ವರಿಸ್ಠ ಅಧ್ಯಾಪಕ ಶಿಕ್ಷಕರು
ಡಿ.ಐ.ಇ. ಟಿ. ನಯಾಫರ್ ರಜಸುನಖಾಲ
ಶ್ರೀ ಪೂರ್ಣಚಂದ್ರಬ್ರಹ್ಮ
ವರಿಷ್ಠ ಅಧ್ಯಾಪಕರ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ
ಡಾ॥ ರಾಜೇಂದ್ರ ಕುಮಾರ ನಾಯಕ್
ಉಪನ್ಯಾಸಕರು ಶಿಕ್ಷಣ ವಿಭಾಗ
ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್

ಶ್ರೀಮತಿ ಚಂದ್ರಿಕಾ ನಾಯಕ್
ವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇಟಿ. ನವಘರ್ ರಾಜಸುಂಬಾಲ
ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ
ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್
ಥೆಂಡಿಪಾಡ
ಶ್ರೀ ಪ್ರಶಾಂತಕುಮಾರ ರಥ್
ಪ್ರಾಂಶುಪಾಲರು ಡಿ.ಐ.ಇಟಿ. ಪುರಿ
ಡಾ॥ ದುರ್ಗಾಚರಣ ರಾಣಾ
ನಿವೃತ್ತರೀಡರ್ (ಶಿಕ್ಷಣ)
ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್
ಶ್ರೀ ಅನಂತ ಕಿಶೋರ ಸ್ವಾರ್ಯಿ
ಯೋಜನ ಪ್ರಬಂಧಕರು ಯುವ ಮತ್ತು
ಸಾಮಾಜಿಕ ಅಭಿವೃದ್ಧಿ
ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ

## ವಿಷಯ ಸಂಪಾದಕರು

ಡಾ॥ ಸುಶ್ಮಿತಾ ಮಿತ್ರ
ಭೂತಪೂರ್ವ ನಿರ್ದೇಶಕರು
ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ.

## ಭಾಷಾ ಸಂಪಾದಕರು

ಡಾ. ಎ.ಡಿ. ತಿವಾರಿ
ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ
ಎನ್‌ಸಿಇಆರ್‌ಟಿ ನವದೆಹಲಿ

## ಕಾರ್ಯಕ್ರಮ ಸಂಯೋಜಕರು

ಡಾ॥ ಕುಲದೀಪ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ

ಪ್ರೋ॥ ಎಸ್.ಪಿ. ಪಾಂಡ
ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ

ಡಾ॥ ಕರ್ಚ್ ಬಾಲಾ
ಕಾರ್ಯಪಾಲಕ ಅಧಿಕಾರಿ (ಆಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ

## ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ

ಶ್ರೀ. ಖ.ಎನ್. ಉಪ್ರೇತಿ.
ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.
ನೊಯಿಡಾ
ಶ್ರೀ ಧರ್ಮಾನಂದ ಜೋಶಿ
ಕಾರ್ಯಪಾಲಕ ಸಹಾಯಕರು, ಮುದ್ರಣ
ಎನ್.ಐ.ಓ.ಎಸ್. ನೊಯಿಡಾ

## ಬೆರಳಚ್ಚು

ಶಿವಂ ಗ್ರಾಫಿಕ್ಸ್
**431, ರಿಶಿನಗರ್, ದೆಹಲಿ–34**

## ಕಛೇರಿ ಸಹಾಯಕರು

ಶ್ರೀಮತಿ. ಸುಷ್ಮಾ
ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,
ಎನ್.ಐ.ಓ.ಎಸ್. ನೊಯಿಡಾ.

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾದ್ಯಮಿಕ ಮತ್ತು ಉಚ್ಚಮಾದ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಿಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ-ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

# ವಿಭಾಗ – 2

# ಭಾಷಾ ಕಲಿಕೆಯ ಜೊತೆಗೂಡಿದ ಕೌಶಲ್ಯಗಳು

**ವಿಭಾಗ ಪಠ್ಯಭಾಗ**

***ಪಠ್ಯಭಾಗ 4 : ಆಲಿಸುವುದು ಮತ್ತು ಮಾತನಾಡುವುದು***

***ಪಠ್ಯಭಾಗ 5 : ಓದುವುದು (ಪಠಣ)***

***ಪಠ್ಯಭಾಗ 6 : ಬರೆಯುವುದು (ಲೇಖನ)***

# ವಿಭಾಗ ಪರಿಚಯ

ಪಠ್ಯಭಾಗ 4 ಮತ್ತು 5 ಗಳು, ಆಲಿಸುವುದು, ಮಾತನಾಡುವುದು ಮತ್ತು ಓದುವ ಕಲೆ (ಕೌಶಲ್ಯಗಳಿಗೆ ಸಂಬಂಧಿಸಿ ಚರ್ಚಿಸುವುವು. ಎಲ್ಲಾ ಪಠ್ಯಭಾಗಗಳಲ್ಲೂ, ನಾವು ಕಾಣುವುದೆಂದರೆ, ಮಕ್ಕಳು ಭಾಷೆಯನ್ನು ಕಲಿಯುವಾಗ, ಅನೇಕ ರೀತಿಯ ತಪ್ಪುಗಳನ್ನು ಮಾಡುತ್ತಾರೆ. ಈ ರೀತಿಯ  ತಪ್ಪುಗಳಾಗುವುದು ಸಹಜ ಮತ್ತು ಈ ರೀತಿಯಾಗುವುದು ಭಾಷಾ ಕಲಿಕೆ ಪ್ರಕ್ರಿಯೆಯು ಒಂದು ಮಹತ್ವದ ಹಂತ. ಅವರು ಮಾಡುವ ತಪ್ಪುಗಳು, ಅವರ ಜ್ಞಾನದ ಮಟ್ಟವನ್ನು ಸೂಚಿಸುವುದೇ ವಿನಹ, ಅವರ ಅಜ್ಞಾನವನ್ನಲ್ಲ ನಾವು (ಭಾಷಾ ಶಿಕ್ಷಕರು) ತಿಳಿಯಬೇಕಾದುದೇನೆಂದರೆ, ನಮ್ಮ ಕೇಂದ್ರಿಕೃತ ಗಮನವು ಭಾಷೆಯನ್ನು  ಪಡೆಯುವುದೋ? ಅಥವಾ ಬಾಷೆಯನ್ನು ಪಡೆಯಲು ಉಪಯೋಗಿಸುವ, ಪಠ್ಯ ಪುಸ್ತಕದ ವಿಷಯ ವಸ್ತುವೊ? ಎಂಬುದು.

# ಪರಿವಿಡಿ


| ಕ್ರ.ಸಂ. | ಪಠ್ಯಭಾಗ | ಪುಟಸಂಖ್ಯೆ |
|---|---|---|
| 1 | ಪಠ್ಯಭಾಗ–4: ಆಲಿಸುವುದು ಮತ್ತು ಮಾತನಾಡುವುದು | 01 |
| 2 | ಪಠ್ಯಭಾಗ–5: ಓದುವುದು (ಪಠಣ) | 24 |
| 3 | ಪಠ್ಯಭಾಗ–6: ಬರೆಯುವುದು (ಲೇಖನ) | 44 |

# ಪಠ್ಯಭಾಗ 4 ಆಲಿಸುವುದು ಮತ್ತು ಮಾತನಾಡುವುದು

## ಸ್ವರೂಪ

Notes

*4.0 ಪರಿಚಯ – ಪ್ರಸ್ತಾವನೆ*

*4.1 ಕಲಿಕಾ ಉದ್ದೇಶಗಳು*

*4.2 ಆಲಿಸುವುದು ಮತ್ತು ಮಾತನಾಡುವುದು*

*4.2.1 ಆಲಿಸುವುದು ಎಂದರೇನು?*

*4.2.2 ಮಾತಾಡುವುದೇಂದರೇನು?*

*4.3 ತರಗತಿಯಲ್ಲಿ ಸಂವಾದದ ಅವಶ್ಯಕತೆ*

*4.4 ತರಗತಿಯಲ್ಲಿ, ಆಲಿಸುವ ಮತ್ತು ಮಾತನಾಡುವ ಅವಕಾಶಗಳನ್ನು ಒದಗಿಸುವುದು ಹೇಗೆ?*

*4.4.1 ಮಕ್ಕಳ ಹಾಡುಗಳು / ಕವಿತೆಗಳು ಪದ್ಯಗಳನ್ನು ಆಲಿಸುವುದು ಮತ್ತು ಹಾಡುವುದು*

*4.4.2 ಚಿತ್ರಗಳು*

*4.4.3 ಕಥೆ ಹೇಳುವುದು*

*4.4.4 ನಾಟಕಗಳು / ರಂಗಭೂಮಿ*

*4.4.5 ಸಹ – ಪಠ್ಯ ಚಟುವಟಿಕೆಗಳು*

*4.5 ನಿಖರತೆ – ನಿರರ್ಗಳತೆ*

*4.6 ಕ್ರೋಢೀಕರಿಸೋಣ*

*4.7 ಹೆಚ್ಚಿನ ಓದಿಗೆ ಸಲಹೆಗಳು*

*4.8 ಪಠ್ಯಾಂತ ಅಭ್ಯಾಸಗಳು*

## 4.0 ಪ್ರಸ್ತಾವನೆ – ಪರಿಚಯ

ಮಕ್ಕಳು, ತಮ್ಮ ಮನೆಯ ಪರಿಸರದಲ್ಲಿ ಆಡುವ ಭಾಷೆಗಳಲ್ಲಿ, ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಸುಲಭವಾಗಿ ಕಲಿಯಬಲ್ಲರು, ಎಂಬುದನ್ನು ಹಿಂದಿನ ಪಠ್ಯಭಾಗದಲ್ಲಿ ನೋಡಿದ್ದೇವೆ. ಅವರಿಗೆ ಭಾಷೆಯನ್ನು ಮಾತನಾಡುವ ಮತ್ತು ಆಲಿಸುವ ವಿಪುಲವದ ಅವಕಾಶಗಳು ದೊರಕುವುದೆ ಇದಕ್ಕೆ ಕಾರಣವಾಗಿದೆ. ತರಗತಿಯಲ್ಲಿನ ವಿದ್ಯಾರ್ಥಿಗಳಿಗೆ ಭಾಷೆಯನ್ನು ಆಲಿಸುವ ಮತ್ತು ಮಾಡನಾಡುವ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಟ್ಟಾಗ, ಅವರು ಭಾಷೆಯನ್ನು ಕಲಿತು ಪಡೆಯುತ್ತಾರೆ ಎಂಬುದು ಸತ್ಯವಾಗಿದೆ ಎಂಬುದನ್ನು ಕಲಿತಿದ್ದೇವೆ.

ಈ ಪಠ್ಯಭಾಗದಲ್ಲಿ ಆಲಿಸುವ ಮತ್ತು ಮಾತನಾಡುವ ಕೌಶಲ್ಯಗಳ ಬಗ್ಗೆ ಚರ್ಚಿಸೋಣ. ಆಲಿಸುವುದು ಮತ್ತು ಮಾತನಾಡುವುದೆಂದರೇನು? ಈ ಕೌಶಲ್ಯಗಳನ್ನು ಪಡೆದಾಗ ಭಾಷೆಯ ಕಲಿಕೆಯಲ್ಲಿ ಹೇಗೆ ಸಹಾಯ ವಾಗುತ್ತವೆ? ಎಂಬುದನ್ನು ಅರಿಯಲು ಯತ್ನಿಸೋಣ. ಇದರ ಜೊತೆಗೆ ಭಾಷಾ ಬೋದನೆ ಮಾಡುವಾಗ ಈ ಕೌಶಲ್ಯಗಳ ಕುರಿತು ಶಿಕ್ಷಕರ ಪರಿಪೇಕ್ಷೆ ಎಂಬುದನ್ನು ಅರಿಯೋಣ.

Notes

## 4.1 ಕಲಿಕಾ ಉದ್ದೇಶಗಳು

ಈ ಪಠ್ಯ ಭಾಗದ ಅಧ್ಯಯನದ ನಂತರ ನೀವು

- ಆಲಿಸುವುದು – ಮಾತಾನಾಡುವುದ, ಇವುಗಳ ಅರ್ಥ ಅರಿಯಬಲ್ಲಿರಿ.
- ಭಾಷಾ ಬೋಧನೆ – ಕಲಿಕೆ ಪ್ರಕ್ರಿಯೆಯಲ್ಲಿ ಆಲಿಸುವುದ, ಮಾತನಾಡುವುದು ಇದರ ಪಾತ್ರವನ್ನು ಅರಿಯಬಲ್ಲಿರಿ.
- ಈ ಕೌಶಲ್ಯಗಳನ್ನು ಬೋಧಿಸುವುದರಲ್ಲಿ ಶಿಕ್ಷಕರ ಅಪೇಕ್ಷಿತ ಪಾತ್ರ ಮತ್ತು ಜವಾಬ್ದಾರಿಗಳನ್ನು ಗುರ್ತಿಸಬಲ್ಲಿರಿ.
- ಮಾತನಾಡುವ ಪ್ರಕ್ರಿಯೆಯಲ್ಲಿ ನಿಖರತೆ ಮತ್ತು ನಿರರ್ಗಳತೆಯ ಮಹತ್ ಅರಿಯಬಲ್ಲಿರಿ.

## 4.2 ಆಲಿಸುವುದು ಮತ್ತು ಮಾತನಾಡುವುದು

ಮಕ್ಕಳು ಶಾಲೆಗೆ ಹೋಗಲು ಪ್ರಾರಂಭಿಸಿದಾಗ, ಮೊದಲ 2–3 ತಿಂಗಳುಗಳು, ಅವರಿಗೆ ಆಲಿಸುವ – ಮಾತನಾಡುವ ಬಹಳವಾದ ಅಭ್ಯಾಸವನ್ನು ಕೊಡಲಾಗುತ್ತದೆ. ಈ ಅಭ್ಯಾಸವನ್ನು ಅನೇಕ ರೀತಿಯಲ್ಲಿ ಮಾಡಬಹುದು. ಆ ಮಾರ್ಗಗಳಲ್ಲಿ ಒಂದು ಎಂದರೆ ಶಿಕ್ಷಕರು ಪದ್ಯವನ್ನೋ ಹಾಡುಗಳನ್ನೋ, ಪತ್ರಗಳನ್ನೋ ಸಂಖ್ಯೆಗಳನ್ನೋ ಇತ್ಯಾದಿಗಳನ್ನು ಗಟ್ಟಿಯಾಗಿ ಓದುವುದು ಮತ್ತು ಅದನ್ನು ಮಕ್ಕಳು ಪದಶಃ ಶಿಕ್ಷಕರ ನಂತರ ಪುನುರಚ್ಚರಿಸುವುದು.
ಮಕ್ಕಳು ತಾವು ಪುರ್ನಚ್ಚಿಸುತ್ತಿರುವುದನ್ನು ಅರ್ಥಮಾಡಿಕೊಳ್ಳದಿದ್ದರೂ, ಯಾವುದನ್ನು ಪುನರಚ್ಚಿಸುತ್ತಿರುವರೆಂಬ ಅರಿವಿಲ್ಲದಿದ್ದರೂ, ಪಾಠವನ್ನು ಕಂಠಪಾಠ ಮಾಡಬೇಕೆಂದು ನಿರೀಕ್ಷಿಸುವೆವು. ಹೀಗೆ ಮಕ್ಕಳಿಗೆ ನಿರಂತರವಾಗಿ ಪುನರಚ್ಚರಣೆಯನ್ನು ಅವರಿಗೆ ನೆನಪಿನಲ್ಲಿ ಉಳಿಯುವವರೆಗೂ ಕಂಠಪಾಠ ಮಾಡಿಸಲಾಗುತ್ತದೆ.

ಈ ರೀತಿಯ ಅದೇ ಶಬ್ಧಗಳನ್ನು ಮತ್ತೆ ಮತ್ತೆ ಆಲಿಸಿ, ಮಾತನಾಡುವುದರಿಂದ, ಮಕ್ಕಳ ನೆನಪಿನಲ್ಲಿರುವಂತೆ ಮಾಡಬಹುದೆಂದು ಶಿಕ್ಷಕರು ಸ್ವಾಭಾವಿಕವಾಗಿ ನಂಬುವರು.

ಮಕ್ಕಳಿಗೆ ಯಾವುದೇ ಹೊಸ ವಾಕ್ಯ ಅಥವಾ ಪದಗಳನ್ನು ಕಲಿಯಬೇಕಾದರೆ, ಅವಾಕ್ಯವನ್ನೋ, ಪದಗಳನ್ನೋ ಮಕ್ಕಳಿಗೆ ಶಿಕ್ಷಕರು ಹೇಳಬೇಕು, ಈ ರೀತಿ ಮಾಡದೆ, ಮಕ್ಕಳು ಹೊಸ ವಾಕ್ಯಗಲನ್ನಾಗಲಿ, ಪದಗಳನ್ನಾಗಲಿ ಕಲಿಯಲಾರರು, ಎಂಬುದು ಶಿಕ್ಷಕರ ಅಚಲವಾದ ನಂಬಿಕೆ. ಅಂದರೆ ಮಕ್ಕಳು ಮೊದಲು ಕೇಳಿ (ಆಲಿಸಿ) ನಂತರ ಮಾತನಾಡುತ್ತಾರೆ.

ಆಲಿಸುವುದು (ಕೇಳುವುದು) ಮತ್ತು ಮಾತನಾಡುವುದು ಎರಡೂ ಒಂದೇ ಕಾಲದಲ್ಲಿ ನಡೆಯುವ ಪ್ರಕ್ರಿಯೆಗಳು ನೀವು ಏನನ್ನಾದರೂ ಮಾತನಾಡುತ್ತಿರುವಾಗ ಅದನ್ನು ನಿಮಗೆ ನೀವೇ ಆಲಿಸುತ್ತೀರುತ್ತೀರಿ. ಕೆಲವು ವೇಳೆ ನಾವು ಕೇವಲ ಆಲಿಸುತ್ತಿರುತ್ತೇವೆ. ಉದಾ. ರೇಡಿಯೋ ಅಥವಾ ದೂರದರ್ಶನದಲ್ಲಿನ ಸಮಾಚಾರ ಇತ್ಯಾದಿ. ನಾವು ಆಲಿಸುವ ರೀತಿ ಧ್ವನಿ ಸುಪಳಿಯ ವಾಕ್ಯಶಃ ವನ್ನು ಪುನಃ ಉಚ್ಚಸಿರುತ್ತವೆ ಅದು ಪ್ರತಿ ಶಬ್ದವನ್ನು ದಾಖಲಿಸಿಕೊಳ್ಳುತ್ತದೆ. ನಮ್ಮ ಆಲಿಸುವ ಮಾತನಾಡುವ ವ್ಯವಸ್ಥೆಯ ಪ್ರಮುಖ ಗುಣ ಲಕ್ಷಣವೆಂದರೆ, ಅರಿಯುವಿದು (ಅಂಡರ್ ಸ್ಟಾಡಿಂಗ್) ಕೇಳಿದ್ದನ್ನು ಅರ್ಥಮಾಡಿಕೊಳ್ಳದೆ ಸಂವಾದ ಮುಂದುವರೆಸಲು ಸಾಧ್ಯವಿಲ್ಲ. ನವು ದೂರವಾಣಿಯಲ್ಲಿ ಮಾತನಾಡುವುದನ್ನು ಚಿಂತನೆ ಮಾಡಿದರೆ ಇದು ಸ್ಪಷ್ಟವಾಗುತ್ತದೆ. ಮೊದಲು ಆಕಡೆ ಯಿಂದ ಮಾತನಾಡುವುದನ್ನು ಕೇಳಿಸಿ ಅರ್ಥ ಮಾಡಿಕೊಂಡ ಮೇಲೆ ನಾವು ಪ್ರತಿಯಾಗಿ ಮಾತನಾಡುತ್ತೇವೆ. ಅರಿತುಕೊಳ್ಳದೆ, ನಾವು ಪರಸ್ಪರ ಸಂವಾದವನ್ನು ಮುಂದುವರೆಸಲಾಗದು.

ಭಾಷೆಯನ್ನು ಕಲಿಯಲು ನಾವು ಈ ಕೌಶಲ್ಯಗಳನ್ನು ಬೇರೆ ಬೇರೆಯಾಗಿ ಪರಿಗಣಿಸಲಾಗುವುದಿಲ್ಲ ಕೌಶಲ್ಯಗಳು ಪರಸ್ಪರ ಅವಲಂಬಿತವಾಗಿರುವುದು ಹಾಗೂ ಚಿಂತನೆ ಮತ್ತು ಅರಿಯುವಿಕೆಗಳು ಪರಸ್ಪರ ಹೊಸೆದುಕೊಂಡಿರುವುವು.

Notes

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 1

*1. ಆಲಿಸುವ – ಮಾತನಾಡುವ ಕೌಶಲ್ಯಗಳ ಮಹತ್ವದ ಭಾಗಗಳು ಯಾವುವು ?*

*ಎ) ಆಲಿಸುವುದು ಬಿ) ಮಾತನಾಡುವುದು*

*ಸಿ) ಅರಿಯುವುದು ಡಿ) ಮಾಹಿತಿ ಪಡೆಯುವುದು.*

*2. ಆಲಿಸುವ ಮಾತನಾಡುವ ಪ್ರಕ್ರಿಯೆ ಮತ್ತು ಮಾಹಿತಿ ಪಡೆಯುವ ಪ್ರಕ್ರಿಯೆಗಳ ನಡುವಿನ ವ್ಯತ್ಯಾಸವೇನು?*

.............................................................................................................................

.............................................................................................................................

.............................................................................................................................

*3. ಶಾಲೆಯ ಮೊದಲ ತರಗತಿಗಳಲ್ಲಿ ಸಾಮಾನ್ಯವಾಗಿ ಮಕ್ಕಳಿಗೆ ಆಲಿಸುವ ಮಾತನಾಡುವ ಯಾವ ರೀತಿಯಾಗಿ ಅವಕಾಶ ನೀಡಲಾಗುತ್ತದೆ? ಈ ಅವಕಾಶಗಳು ಸಾಕಾಗುತ್ತವೆಯೆ? ನಿಮ್ಮ ಅಭಿಪ್ರಾಯ ತಿಳಿಸಿರಿ.*

.............................................................................................................................

.............................................................................................................................

.............................................................................................................................

*4. ನಿಮ್ಮ ಸ್ನೇಹಿತರು 30 ದಿನ ಬೆಳಗಿನ ವಾರ್ತೆಯನ್ನು ಆಕಾಶ ವಾಣಿಯಲ್ಲಿ ಕೇಳಲಾಗಲಿಲ್ಲ ಅವರು ನಿಮ್ಮನ್ನು ವಾರ್ತೆಗಳನ್ನು ಆಲಿಸಿ, ಅವರಿಗೆ ತಿಳಿಸುವಂತೆ ಮನವಿ ಮಾಡಿದರು. ನೀವು ಅವರಿಗೆ ಏನು ಹೇಳುವಿರಿ? ನಿಮಗೆ ಒಪ್ಪಿಸಿರುವ ಕಾರ್ಯಭಾರವನ್ನು ನಿರ್ವಹಿಸಿ ಸಾಧಿಸಲು, ನೀವು ಮಾಡಬೇಕಾಗಿದ್ದೇನು?*

.............................................................................................................................

.............................................................................................................................

.............................................................................................................................

### 4.2.1 ಆಲಿಸುವುದು ಎಂದರೇನು?

ನಾವು ದಿನನಿತ್ಯವೂ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ, ಜನರ ಯಂತ್ರಗಳ ಪ್ರಾಣಿಗಳ ಮುಂತಾದ ಅನೇಕ ರೀತಿಯ ಶಬ್ದವನ್ನು ಕೇಳುತ್ತಿರುತ್ತೇವೆ. ಏನಾದರೂ ಈ ಎಲ್ಲಾ ಶಬ್ದಗಳು ನಮಗೆ ಅರ್ಥವತ್ತಾಗಿರುವುದಿಲ್ಲ . ಉದಾಹರಣೆಗೆ ಯಂತ್ರಗಳ ಕರ್ಕಶ ಶಬ್ದ, ಅಥವಾ ಹಕ್ಕಿ ಪಕ್ಷಿಗಳ ಕಲರವ ನಮಗೆ ಅರ್ಥವಾಗದು

ಆಲಿಸುವ ಕ್ರಿಯೆಯು ಪ್ರಮುಖವಾಗಿ ಅರ್ಥವನ್ನು ಒಳಗೊಂಡಿದೆ. ಸಂವಾದ ನಡೆಸುವಾಗ ಆಲಿಸುವ ವ್ಯಕ್ತಿಯು ತಕ್ಷಣ ಸಂವಾದದ ಅರ್ಥ ತಿಳಿಯಬೇಕಾಗುವುದು ಇದು ಎರಡು ರೀತಿಯಲ್ಲಿ ಮಾಡಲಾಗುತ್ತದೆ. ಆ ರೀತಿಗಳನ್ನು ಈ ಕೆಳಗೆ ವಿವರವಾಗಿ ಚರ್ಚಿಸಲಾಗಿದೆ.

Notes

ಮೊದಲನೆಯದಾಗಿ ಆಲಿಸುವವನು ಸಂವಾದವನ್ನು ಅದರಲ್ಲಿನ ಪದಗಳ ಆಧಾರದ ಮೇಲೆ ಅರಿಯುತ್ತಾರೆ. ಇದರ ಅರ್ಥ ಪದಗಳನ್ನು ವಾಕ್ಯಭಾಗವನ್ನು , ವಾಕ್ಯಗಳನ್ನು ಮತ್ತು ಪಠ್ಯವನ್ನು ಚಿಹ್ನೆ ಬಿಡಿಸು (ಡಿಕೋಡ್) ವುದಾಗಿದೆ. ಆಲಿಸುವವ ವ್ಯಕ್ತಿಗೆ ಪದಗಳ ಅರ್ಥ. ವಾಕ್ಯಗಳಲ್ಲಿ ಆ ಪದಗಳ ಜೋಡಣೆ, ವಿನ್ಯಾಸ ಇವುಗಳ ತಿಳಿದಿರುವುದು ಅಗತ್ಯ. ಒಂದು ಉದಾಹರಣೆ ಮೂಲಕ ಇದನ್ನು ಅರಿಯೋಣ. ನಿಮ್ಮ ಸ್ನೇಹಿತರೊಬ್ಬರು, ಅವರ ಮನೆಗೆ ನಿಮ್ಮನ್ನು ಔತಣಕ್ಕೆ ಆಹ್ವಾನಿಸಿದ್ದಾರೆ. ಎಂದು ತಿಳಿಯೋಣ. ನೀವು ಅವರ ಮನೆ ನೋಡಿಲ್ಲ. ನೀವು ಅವರಿಗೆ ದೂರವಾಣಿ ಮಾಡಿದಾಗ ಅವರು ನಿಮಗೆ ಮಾರ್ಗದರ್ಶನ ಮಾಡುತ್ತಾರೆ.

ನಗರದ ಕೇಂದ್ರ (ಸಿಟಿ ಸೆಂಟರ್) ದಿಂದ ಮೂರನೇ ರಸ್ತೆಗೆ ಬಲಗಡೆ ತಿರುಗಿ, ಆ ಹಾದಿಯಲ್ಲೇ ನೇರವಾಗಿ ಮುಂದುವರೆದು ಬಾವರ್ಚಿ ಹೋಟೆಲ್ ಇರುವ, ಗಲ್ಲಿಗೆ, ಎಡಗಡೆ ತಿರುಗಿ ಆ ಗಲ್ಲಿಯಲ್ಲಿ ಮೂರನೆಯ ಮನೆ ನನ್ನದು"

ಮನೆಯ ಸ್ಥಳವನ್ನು ಕಂಡುಹಿಡಿಯಲು ಆ ಪ್ರಕ್ರಿಯೆಯಲ್ಲಿ ತೊಡಗಿರುವ ವರೆಗೂ ನೀವು ನಿಮ್ಮ ಮತ್ತು ಸ್ನೇಹಿತನ ನಡುವಿನ ಸಂಭಾಷಣೆವನ್ನು (ಪದಶಃ) ಮನಸ್ಸಿನಲ್ಲೇ ಪುನರುಚ್ಛರಿಸುತ್ತಾ ಇರುತ್ತೀರಿ. ಈ ಹುಡುಕುವ ಪ್ರಕ್ರಿಯೆಯಲ್ಲಿ ನಿಮ್ಮ ಸಂಪೂರ್ಣಗಮನ ನಿಮ್ಮಿಬ್ಬರ ನಡುವಿನ ಸಂಭಾಷಣೆಯ ಮೇಲೆ ಇರುತ್ತದೆ. ಏಕೆಂದರೆ ಸೂಚನೆಗಳನ್ನು ಕ್ರಮವಾಗಿ ಅನುಸರಿಸಬೇಕೆಂದು ನಿಮಗೆ ತಿಳಿದಿದೆ. ಈ ಪ್ರಕ್ರಿಯೆ ಯಲ್ಲಿ ಸಂಭಾಷಣೆಯನ್ನು ಅನೇಕ ಭಾಗಗಳನ್ನಾಗಿಸಿ (3ನೇ ರಸ್ತೆ, ನಗರದ ಕೇಂದ್ರ, ಬಲಕ್ಕೆ ತಿರುಗುವುದು, ನೇರವಾಗಿ ಹೋಗುವುದು, ಎಡಕ್ಕೆ ತಿರುಗಿ, ಬಾಬರ್ಚಿ ಹೋಟೆಲ್‌ಗಳಲ್ಲಿ ಮೂರನೆ ಮನೆ, ಅವುಗಳನ್ನು ಕ್ರಮವಾಗಿ ಗುರ್ತುಗಳನ್ನು ಬಿಡಿಸುತ್ತಾ, ಸಂಭಾಷಣೆಯನ್ನು ಅರಿಯುತ್ತ ಹೋಗುವುದು. ಈ ಇಡೀ ಪ್ರಕ್ರಿಯೆಯಲ್ಲಿ ಕೀಲಕವಾದ ಪದ, ಪದ ಸಮುಚ್ಛಯಗಳು ಮತ್ತು ಅವುಗಳ ನಡುವಿನ ಸಂಬಂಧಗಳು ಬಹಳ ಮಹತ್ವದ್ದಾಗಿದ್ದು, ನಿರಂತರತೆಯಿಂದ ಜರುಗುತ್ತದೆ.

ಈ ರೀತಿಯ ಹೇಳಿಕೆಗಳನ್ನು ಈ ರೀತಿ ಅರ್ಥಮಾಡಿಕೊಳ್ಳಲು, ಆಲಿಸುವ ವ್ಯಕ್ತಿಯು ಪದಕೋಶ ಮತ್ತು ವಾಕ್ಯರಚನೆಯಲ್ಲಿ ಶ್ರೀಮಂತನಾಗಿರಭೆಕು. ಈ ಪ್ರಕ್ರಿಯೆಯ ನಿರತ ಅಭ್ಯಾಸವು, ಕೆಳಕಂಡ ಕೌಶಲ್ಯಗಳನ್ನು ಗಳಿಸುವುದರಲ್ಲಿ ಸಹಾಯಕವಾಗುತ್ತದೆ.

- ಒಂದು ವಾಕ್ಯವನ್ನು ಎಚ್ಚರಿಕೆಯಿಂದ ಆಲಿಸುವುದು
- ಕೀಲಕ (ಅತಿಮುಖ್ಯ) ಪದಗಳನ್ನು ಗುರ್ತಿಸುವುದು
- ಕೀಲಕ ಶಬ್ದ (ಪದ)ಗಳು ಮತ್ತು ವಾಕ್ಯಗಳ ನಡುವಿನ ವ್ಯಾಕರಣ ಸಂಬಂಧವನ್ನು ಅರಿಯುವುದು.
- ಮಾತನಾಡುವ ವ್ಯಕ್ತಿಯು ಉಪಯೋಗಿಸುವ ಒತ್ತು ಮತ್ತು ಅಲ್ಪಾವಧಿ ವಿರಾಮಗಳ ಸುಸಂಬದ್ಧತೆಯನ್ನು (ಅನಿಸಿದರೆ ಕೀಲಕ ಪದಗಳನ್ನು) ಅರಿಯುವುದು.

ಇನ್ನು ವಾಕ್ಯವನ್ನು ಅರ್ಥಮಾಡಿಕೊಳ್ಳುವ ಎರಡನೇ ರೀತಿ ಎಂದರೆ, ಅದು ನಮ್ಮ ಪೂರ್ವ ಅನುಭವಗಳ ಆಧಾರದ ಮೇಲೆ, ಪದಗಳ ಮೇಲೆ ಆಧಾರದ ಮೇಲೆ, ಪದಗಳ ಮೇಲೆ ಆಧಾರಿತ ಅರಿಯುವ ಕ್ರಿಯೆಯು ನಮ್ಮನ್ನು ಪದಗಳಿಂದ ಅರ್ಥದೆಡೆಗೆ ಒಯ್ದರೆ, ಅರ್ಥವನ್ನು ತಿಳಿಯುವ ಪ್ರಕ್ರಿಯೆಯು ಪೂರ್ವ ಅನುಭವದ ಮೇಲೆ ಆಧಾರಿತವಾಗಿರುತ್ತದೆ. ಹಾಗೂ ನಮ್ಮನ್ನು ಅರ್ದದಿಂದ ಪದಗಡೆಗೆ ಒಯ್ಯುತ್ತದೆ. ಇದಕ್ಕೆ ಬೇಕಾದ ಪೂರ್ವಾನುಭವವು, ಯಾವುದೂ ಸಂಭಾಷಣೆ, ಓದು ಅಥವಾ ಅನುಭವದ ಮೇಲೆ ಆಧಾರವಾಗಿರುತ್ತದೆ. ಉದಾಹರಣೆಗೆ : ನಾನು ವಾರ್ತೆಯನ್ನು ಕೇಳುವಾಗ, "ಹಿಂದಿನ ರಾತ್ರಿ, ಚೈನಾದೇಶದಲ್ಲಿ ಒಂದು ಭಯಂಕರ ಭೂಕಂಪ ವಾಯ್ತು" ಇಲ್ಲಿನ "ಭೂಕಂಪ" ಪದವು ನನ್ನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳನ್ನು ಎಬ್ಬಿಸುತ್ತದೆ.

- ಭೂಕಂಪ ಎಷ್ಟು ತೀವ್ರವಾಗಿತ್ತು?
- ಎಷ್ಟು ಜನರು ಮೃತರಾದರು ಅಥವಾ ಎಷ್ಟು ಜನ ಗಾಯಗೊಂಡರು?
- ಅದು (ಭೂಕಂಪವು) ಆಸ್ತಿಪಾಸ್ತಿಗಳಿಗೆ, ಯಾವ ರೀತಿಯ ನಷ್ಟವುಂಟ ಮಾಡಿತು?
- ಯಾವ ಪರಿಹಾರ ಕಾರ್ಯ ಕೈಗೊಳ್ಳಲಾಯಿತು?

Notes

ಈ ರೀತಿಯ ಪ್ರಶ್ನೆಗಳು, ವಾರ್ತೆಯ ಹೇಳಿಕೆಯನ್ನು ಅರಿಯುವುದರಲ್ಲಿ ಸಹಾಯಕವಾಗುತ್ತವೆ. ಹೀಗೆ ನಾವು ಕನಿಷ್ಠ ಮಾಹಿತಿಯಿಂದ, ವಾಕ್ಯದ ಅರ್ಥವನ್ನು ಅರಿಯಬಲ್ಲವರಾಗುತ್ತೇವೆ. ಇದರಲ್ಲಿ ಪೂರ್ವ ಜ್ಞಾನವು ಮಹತ್ವ ಪಾತ್ರವಹಿಸುತ್ತದೆ. ಮೇಲಿನ ಹೇಳಿಕೆಯಲ್ಲಿ ಕೇವಲ, ಚೈನಾದೇಶದಲ್ಲಿ ಹಿಂದಿನ ರಾತ್ರಿ ಭೂಕಂಪವಾಯ್ತು" ಎಂಬ ವಿಷಯ ಮಾತ್ರ ಹೇಳಿದೆ. ಆದರೆ ನಮ್ಮ ಭೂಕಂಪದ ಬಗ್ಗೆ ಪೂರ್ವ ಜ್ಞಾನವು, ಹಲವು ಪ್ರಶ್ನೆಗಳಿಗೆ ಆಸ್ಪದ ಕೊಟ್ಟು ಚೈನಾ ದೇಶದ ಭೂಕಂಪದ ಬಗ್ಗೆ ಅರಿಯಲು ಎಡೆ ಮಾಡಿಕೊಟ್ಟವು. ಆಲಿಸುವ ವ್ಯಕ್ತಿಯು, ಕ್ರಿಯೆಯನ್ನು ಅರಿಯಲಾಗದಿದ್ದರೆ, ಸಂಭಾಷಣೆಯು ಅಪೂರ್ಣ ಅಥವಾ ವ್ಯಕ್ತಿ ಭೂಕಂಪದ ಬಗ್ಗೆ ಪೂರ್ವ ಜ್ಞಾನದ ಕೊರತೆ ಉಂಟಾಗುತ್ತದೆ. ಈ ರೀತಿಯ ಕಲಿಕಾ ಪ್ರಕ್ರಿಯೆಯು ನಮಗೆ ಕೆಳಗಿನ ಕೌಶ್ಯಲ್ಯಗಳನ್ನು ಕಲಿಯಲು ಸಹಾಯಕವಾಗುತ್ತದೆ.

ಕೀಲಕ ಪದಗಳ ಆಧಾರಿತವಾಗಿ, ಸಂಭಾಷಣೆಯನ್ನು ಅರ್ಥಪೂರ್ಣವಾಗಿಸಲು

- ಸನ್ನಿವೇಶದ ಬಗ್ಗೆ ಪ್ರಶ್ನೆಗಳನ್ನು ಎತ್ತಿರಿ
- ಕಾರಣ ಮತ್ತು ಪರಿಣಾಮದ ಸಂಬಂಧಗಳ ಅಂದಾಜು ಮಾಡಿ.
- ಸನ್ನಿವೇಶದ, ಹೇಳದೇ ಇರುವ ವಿವರಗಳ ಅಂದಾಜು ಮಾಡಿ.

ಈ ಎರಡೂ ಕ್ರಿಯೆಗಳು, ಆಲಿಸುವ ಸಮಯದಲ್ಲಿ ಏಕಕಾಲಕ್ಕೆ ಸಂಭವಿಸುತ್ತವೆ (ಸಮಾಸರವಾಗಿ) ಈ ಪ್ರಕ್ರಿಯೆಯನ್ನು ಉಪಯೋಗಿಸುವ ಜವಾಬ್ದಾರಿಯು, (ಪ್ರತಿ ಪ್ರಕ್ರಿಯೆಯನ್ನು) ಆಲಿಸುವ ವ್ಯಕ್ತಿಯು, ಏನು ಮಾತಾಡುತ್ತಿದ್ದಾರೆ ಎಂಬ ಬಗ್ಗೆ, ಎಷ್ಟು ಪರಿಚಿತ, ಮಾಹಿತಿಯ ಆಳ ಮಾಹಿತಿಯ ರೀತಿ ಮತ್ತು ಆಲಿಸುವವನ ಉದ್ದೇಶಗಳ ಮೇಲೆ ಆಧಾರಿತವಾಗಿರುತ್ತದೆ.

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 2

*ನಾವು ಆಲಿಸುವಾಗ, ನಾವು ಎಷ್ಟು ರೀತಿಯಲ್ಲಿ, ಆಲಿಸುತ್ತಿರುವುದನ್ನು ಅರಿಯುತ್ತವೆ?*

*ಎ) ಒಂದು* — *ಬಿ) ಮೂರು*

*ಸಿ) ಎರಡು* — *ಡಿ) ನಾಲ್ಕು*

*2. ನಾವು ಪದಗಳನ್ನು ಆಧರಿಸಿ, ಅರಿರಯುವಾಗ ಯಾವ ರೀತಿ ಅರ್ಥವನ್ನು ರಚಿಸುತ್ತೇವೆ? ಉದಾಹರಣೆಯೊಂದಿಗೆ ವಿವರಿಸಿ.*

.................................................................................................................................

.................................................................................................................................

.................................................................................................................................

*3. ಪದಗಳನ್ನು ಆಧರಿಸಿ, ಅರಿವಿನ ರಚನೆ ಮತ್ತು ಪೂರ್ವಜ್ಞಾನ ಆಧರಿಸಿ, ಅರಿವಿನ ರಚನೆ, ಈ ಎರಡು ಪ್ರಕ್ರಿಯೆಗಳ ನಡುವಿನ ವ್ಯತ್ಯಾಸವೇನು?*

.................................................................................................................................

.................................................................................................................................

.................................................................................................................................

Notes



4. ರವಿ ಹೇಳಿದ, "ನಾನು ಒಬ್ಬ ದಂತ ವೈದ್ಯನನ್ನು ನೋಡಲು ಹೋಗುತ್ತಿದ್ದೇನೆ". ಈ ಹೇಳಿಕೆಯನ್ನು ಕೇಳಿದ ಮೇಲೆ, ನಿಮ್ಮ ಮನಸ್ಸಿನಲ್ಲಿ ಉದಯವಾಗುವ ಪ್ರಶ್ನೆಗಳಾವುವು?

.................................................................................................................................

.................................................................................................................................

.................................................................................................................................

### 4.2.2 ಮಾತನಾಡುವುದು ಎಂದರೇನು?

ಮಾತನಾಡುವುದೆಂದರೆ, ಕೇವಲ ಶಬ್ದ, ಪದ ಅಥವಾ ವಾಕ್ಯಗಳನ್ನು ಉಚ್ಚರಿಸುವುದಲ್ಲ. ಜೇರ್ ಅರ್ಟ್ವಿರ್ಸ್ ಎಂಬಾಕೆ ತನ್ನ ದಿ ಆರ್ಟಿಕ್ಯುಲೇಟ್ ಮ್ಯಾಮಲ್ ಎಂಬ ಪುಸ್ತಕದಲ್ಲಿ ಮಾನವನ ಭಾಷಾ ಅರಿಯುವಿಕೆಯ ಬಗ್ಗೆ ವಿಸ್ತೃತವಾಗಿ ಹೇಳಿದ್ದಾಳೆ. ಆಕೆಯ ಪ್ರಕಾರ ನಾವು ಮಾತನಾಡುವ ಕಾಲದಲ್ಲೇ ಅನೇಕ ಪ್ರಕ್ರಿಯೆಗಳಲ್ಲಿ ತೊಡಗಿರುತ್ತೇವೆ. ಮಾತನಾಡುವ ಮುಂಚೆಯೇ ನಮ್ಮ ಮನಸ್ಸಿನಲ್ಲಿ ಏನನ್ನು ಮಾತನಾಡಬೇಕೆಂದು, ನಾವು ಹೇಳಿದ್ದು ಕೇಳುವವರಿಗೆ ಅರ್ಥವಾಗುವಂತೆ ಹೇಗೆ ಹೇಳಬೇಕೆಂದು ಯೋಜಿಸಿಕೊಳ್ಳುತ್ತೇವೆ. ನಾವು ಯಾರೊಡನೆ ಮತನಾಡುತ್ತಿದ್ದೇವೆ ಎಂಬುದರ ಆಧಾರದ ಮೇಲೆ ಏನನ್ನು ಮತ್ತು ಹೇಗೆ ಮಾತನಾಡಬೇಕೆಂದು ಮನಸ್ಸು ಮಾಡುತ್ತೇವೆ ಉದಾಹರಣೆಗೆ ನಾವು ಹೇಳುವ ಮಾತುಗಳು ನಮ್ಮ ಸ್ನೇಹಿತರೊಡನೆ ಮತ್ತು ನಮ್ಮ ಪಿತಾಮಹ (ತಾತ)ರೊಡನೆ ಹೇಳುವವಾಗ ಉಪಯೋಗಿಸುವ ಪದಗಳು ಮತ್ತು ರೀತಿಯಲ್ಲಿ ವ್ಯತ್ಯಾಸ ಹೊಂದಿರುತ್ತವೆ.

ಏನೇ ಆದರೂ, ಎರಡೂ ಸನ್ನಿವೇಶಗಳಲ್ಲಿ ಏನನ್ನು ಹೇಳಬೇಕು ಎಂಬುದನ್ನು ಮೊದಲು ಯೋಜಿಸಿಕೊಳ್ಳುತ್ತೇವೆ. ಮಾತನಾಡುವಾಗ (ಪ್ರಕ್ರಿಯೆಯಲ್ಲಿ) ನಾವು ಏನನ್ನು ಮೊದಲು ಹೇಳಬೇಕು, ನಂತರ ಏನನ್ನು ಹೇಳಬೇಕು ಎಂದು ಚಿಂತನೆ ಮಾಡುತ್ತೇವೆ. ಒಂದು ಉದಾಹರಣೆಯಿಂದ ಇನ್ನು ಅರಿಯೋಣ.

"ನಾನು ಇಂದು ಮನೆಗೆ ತಡವಾಗಿ ಹಿಂತಿರುತ್ತೇನೆ"
"ಅಮ್ಮನು ಬೇಸರಗೊಳ್ಳುತ್ತಾಳೆ"
"ನಾನು ಮನೆಯಿಂದ ಹೊರಗುಳಿಯಬೇಕಾಗುವುದು"

ಈ ಮೂರು ವಾಕ್ಯಗಳ ರಚನೆ ಸರಳವಾಗಿದೆ ಈ ಮೂರು ವಾಕ್ಯಗಳನ್ನು ಈ ಕ್ರಮದಲ್ಲಿ ಹೇಳಿದಾಗ, ಅವನ್ನು ಹೇಳಲು ಮತ್ತು ಅರ್ಥಮಾಡಿಕೊಳ್ಳಲು ಸುಲಭ, ಈಗ ಈ ಮೂರು ವಾಕ್ಯಗಳನ್ನು ಒಂದಕ್ಕೊಂದು ಸಂಬಂಧಿಸಿ, ಆಧಾರವಾಗಿರುವಂತೆ ಮಾಡಿದಾಗ, ಅವುಗಳನ್ನು ಹೇಳಲು ಮೊದಲನಿಷ್ಟೆ, ಸುಲಭವಾಗಿರುತ್ತದೆಯೆ?
"ಇಂದು ನಾನು ಮನೆಗೆ ತಡವಾಗಿ ಹಿಂದಿರುಗಿದರೆ ಅಮ್ಮ ಅದರಿಂದ ಬೇಸರಗೊಳ್ಳುತ್ತಾಳೆ ವ ುತ್ತು ನಾನು ಮನೆಯ ಹೊರಗೆ ಉಳಿಯಬೇಕಾಗುವುದು ಅಥವಾ ಬೇರೆ ಸ್ನೇಹಿತನ ಮನೆಗೆ ಹೋಗಬೇಕಾಗುವುದು.

ಈ ಮೇಲ್ಕಂಡ ವಾಕ್ಯದಲ್ಲಿ "ರೆ" ಎಂಬುದು "ರಿಂದ" (ಬೇಸರಗೊಳ್ಳುತ್ತಾರೆ) ಎಂಬುದಕ್ಕೆ ಕಾರಣ ವಾಗಿದ್ದು (ಸಂಬಂಧಿಸಿದ) ಹಾಗೆಯೇ ಉಳಿಯಬೇಕಾಗುವುದು ಮತ್ತು ಅಥವಾ ಗಳು ಸಂಬಂಧಿಸಿದ್ದು.

ಈ ಮೇಲ್ಕಂಡ ಪೂರ್ಣ ವಾಕ್ಯವನ್ನು ಆಡುವ ಮುಂಚೆಯೇ ಈ ಸಂಬಂಧಗಳು ನಮ್ಮ ಮನಸ್ಸಿನಲ್ಲಿ ಶಬ್ದ ಮತ್ತು ಅರ್ಥ ಗುಣ ಲಕ್ಷಣಗಳ ಜೊತೆಗೂಡಿ, ಮಾಡಿರುತ್ತವೆ ಇವೆಲ್ಲವೂ ಯೋಜಿತ ರೀತಿಯಲ್ಲಿ ನಡೆಯುತ್ತದೆ. (ಜೇರ್ ಐಟ್ವಿರ್ಸ್‌ರವರ ಪುಸ್ತಕ ದಿ ಆರ್ಟಿಕುಲೇಟ್ ಮ್ಯಾಮಲ್" ಆಧಾರಿತ)

ಈ ಮೇಲ್ಕಂಡ ಉದಾಹರಣೆಯಿಂದ ನಾವು ಸಂಭಾಸಿಸುವಾಗ ನಾವು ಮಾತನಾಡುವಾಗ ಚಿಂತನೆ ಮಾಡುತ್ತಿರುವುದು ಅತಿ ಅವಶ್ಯ. ಈ ಪ್ರಕ್ರಿಯೆಯು ಬಹಳ ವೇಗವಾಗಿ ಸಂಭವಿಸುವುದರಿಂದ, ನಾವು ಮಾತನಾಡುವಾಗ, ಈ ಚಿಂತನೆಯ ಇರುವಿಕೆಯು ನಮಗೆ ತಿಳಿಯುವುದೇ ಇಲ್ಲ. ನಮ್ಮ ಮಾತೃಭಾಷೆಯ ಸಂದರ್ಭದಲ್ಲಿ ಈ ಪ್ರಕ್ರಿಯೆಯು ಹೆಚ್ಚು ಸಸಂಬದ್ಧವಾಗಿರುವುದು.

Notes

ಬೇರೆ ಭಾಷೆಯನ್ನು (ಎರಡನೇ ಭಾಷೆ) ಕಲಿಯುವಾಗ ಈ ಚಿಂತನೆಯ ಪ್ರಕ್ರಿಯೆಯನ್ನು ಬಹಳ ಸಮೀಪದಲ್ಲಿ ಕಾಣಬಹುದು. ಮಾತನಾಡುವಾಗ, ಸೂಕ್ತ ಪದಗಳು ಮತ್ತು ಅವುಗಳ ವ್ಯಾಕರಣ ರಚನೆಯನ್ನು ಆಯ್ಕೆ ಮಾಡುವುದು ಬಹಳ ಮುಖ್ಯ.
ನಾವು ಮಾತನಾಡುವುದು, ನಮ್ಮ ಭಾವನೆಗಳನ್ನು ಮತ್ತು ಯೋಜನಾ ಲಹರಿಯನ್ನು ಅಭಿವ್ಯಕ್ತಿಸಬೇಕು. ಕತೃ + ಕರ್ಮ (ವಸ್ತು) + ಕ್ರಿಯಾ ಯಾಗಿದ್ದು ನಾವು ಮಾತನಾಡುವ ಮೊದಲೇ ನಮ್ಮ ಮನಸ್ಸಿನಲ್ಲಿ, ಯೋಜನೆಯ ಹಂತದಲ್ಲೇ ವಾಕ್ಯ ರಚನೆಯು, ಯಾವುದೇ ಕಸಿವಿಸಿಯಿಲ್ಲದೆ ರೂಪುಗೊಳ್ಳುತ್ತದೆ.

ನಾವು ಮಾತನಾಡುವಾಗ, ಸ್ವರದ ಏರಿಳಿತ ಅಲ್ಪಂತರ ಮತ್ತು ಲಯಗಳು ಅಭಿವ್ಯಕ್ತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಒಂದು ಉದಾಹರಣೆಯಿಂದ ಮಾತನಾಡುವಾಗ, ಅಲ್ಪಂತರದ ಮಹತ್ವವನ್ನು ತಿಳಿಯೋಣ.

ಪಕಡೋಮತ್ ಜಾನೆದೊ

ಇಲ್ಲಿ ನಾಲ್ಕು ಪದಗಳಿವೆ. ಸಕದೊ ಮತ್ ಜಾನೆ, ದೊ ಇಲ್ಲಿ ಅಲ್ಪಂಕರವನ್ನು ಮತ್ ನಂತರ ತೆಗೆದುಕೊಂಡಾಗ ವಾಕ್ಯವು. ಪಕಡೋ ಮತ್ ಜಾನೆದೊ ಅದರಿದೆ ಹಿಡಿಯಬೇಡ, ಹೋಗಲು ಬಿಡು ಎಂಬರ್ಥವಾಗುವುದು ಅದೇ ಅಲ್ಪಂತರವನ್ನು "ಪಕಡೊ" ನಂತರ ತೆಗೆದುಕೊಂಡರೆ "ಪಕಡೊ – ಮತ್‌ಜಾನೆದೊ" ಎಂದಾಗುತ್ತದೆ.
ಅಂದರೆ "(ಅವನನ್ನು) ಹಿಡಿ, ಹೋಗ ಲು ಬಿಡಬೇಡ ಎಂದಾಗುತ್ತದೆ. ನೋಡಿ, ಅಲ್ಪಂತರದ ಮಹತ್ವ ಅದರ ಸ್ಥಾನ, ವಾಕ್ಯದ ಅರ್ಥಗಳನ್ನು ತದ್ವಿರುದ್ಧ ಮಾಡಿಬಿಟ್ಟಿತು. ಈ ರೀತಿಯ ಅರಿವು, ಭಾಷಾ ಕಲಿಕೆಯನ್ನು ಅವಿಭಾಜ್ಯ ಅಂಗವಾಗಿರುತ್ತದೆ. ಇದು ಅಭ್ಯಾಸದಿಂದ ಅಭಿವೃದ್ಧಿಯಾಗುತ್ತದೆ.

ಹಾಗೆಯೇ ಮಾತನಾಡುವಾಗ ವಾಕ್ಯದಲ್ಲಿನ ಪದ(ಗಳಿಗೆ) ಕ್ಕೆ ಕೊಡುವ ಒತ್ತು ಅಥವಾ ಉಚ್ಚರಿಸುವ ರೀತಿ (ಲಯ) ಯು ಅರ್ಥದ ಮೇಲೆ ಪರಿಣಾಮ ಬೀರುತ್ತದೆ.

ಉದಾ: ಇದು ಶಾಲೆ

ಈ ಹೇಳಿಕೆಯು ಪಶ್ನೆಯಾಗಬಹುದು, ಆಶ್ಚರ್ಯ ಸೂಚಕ ವಾಕ್ಯವಾಗಿರಬಹುದು. ವ್ಯಂಗ್ಯವಾಗಬಹುದು. ಅಥವಾ ಒಂದು ಸರಳ ಹೇಳಿಕೆಯಾಗಬಹುದು. ಇದು ನಾವು ಹೇಳುವ ರೀತಿ (ರಿಥಮ್) ಯ ಮೇಲ ಅವಲಂಬಿತ ವಾಗಿದೆ.

ಇದು ಶಾಲೆ? (ಇದು ಶಾಲೆಯೇ? ಪ್ರಶ್ನಾರ್ಥಕ
ಇದು ಶಾಲೆ! (ಇದು ಶಾಲೆಯಾ!) ಆಶ್ಚರ್ಯಸೂಚಕ
ಇದು ಶಾಲೆ!! (ಇದೇನೊ ಶಾಲೆ) ವ್ಯಂಗ್ಯ
ಇದ ಶಾಲೆ ( ಇದು ಶಾಲೆಯಾಗಿದೆ)

ಅಂದರೆ ನಾವು ಶಬ್ದ (ಪದಗಳನ್ನು) ಉಚ್ಚರಿಸುವ ರೀತಿ ಕೊಡುವ ಒತ್ತು, ದೇಹಭಾಷೆ, ಅಂಗ ಅಭಿವ್ಯಕ್ತಿ, ಇವುಗಳ ಅರ್ಥದ ಮೇಲೆ ಪ್ರಭಾವ ಬೀರುತ್ತವೆ.

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿ – 3**

1. ಹಿಂದಿ ಭಾಷೆಯಲ್ಲಿ ವಾಕ್ಯಗಳ ರಚನೆ ಹೇಗೆ. (ಪದಗಳು)

   ಎ) ಕತೃ – ಕ್ರಿಯಾ – ಕರ್ಮ   ಬಿ) ಕತೃ – ಕರ್ಮ – ಕ್ರಿಯಾ

   ಸಿ) ಕ್ರಿಯಾ – ಕರ್ಮ – ಕತೃ   ಡಿ) ಗೊತ್ತಿಲ್ಲ

2. 3–4 ವರ್ಷ ವಯಸ್ಸಿನ ಮಕ್ಕಳು ಮಾತನಾಡುವ 10 ವಾಕ್ಯಗಳನ್ನು ಬರೆಯಿರಿ. ಭಾಷೆಯ ನಿಯಮಗಳ ಪರಿಪೇಕ್ಷೆಯಿಂದ, ಈ ವಾಕ್ಯಗಳನ್ನು ವಿಶ್ಲೇಷಿಸಿ. ಮಕ್ಕಳಿಗೆ ತಿಳಿದಿರುವುದೆಲ್ಲವನ್ನು ತಿಳಿಸಿರಿ.

   ..........................................................................................

   ..........................................................................................

Notes

3. ಆಂಗ್ಲ ಭಾಷೆಯಲ್ಲದ, ವ್ಯಕ್ತಿಯು ಮಾತನಾಡಿದ 5 ವಾಕ್ಯಗಳನ್ನು ಪಟ್ಟಿಮಾಡಿ. ಆ ವಾಕ್ಯಗಳನ್ನು ವಿಶ್ಲೇಷಿಸಿರಿ ಮತ್ತು ಅವರು ಎದುರಿಸುವ ಕಠಿಣತೆಗಳನ್ನು ತಿಳಿಸಿರಿ.

.......................................................................................................................

.......................................................................................................................

.......................................................................................................................

4.2 ತರಗತಿಯಲ್ಲಿ ಸಂಭಾಷನೆಯ ಮಹತ್ವ / ಅವಶ್ಯಕತೆ

ಭಾಷಾ ಕಲಿಕೆಯಲ್ಲಿ ಆಲಿಕೆ ಮತ್ತು ಮಾತನಾಡುವಿಕೆಗಳು ಮೊದಲ ಹೆಜ್ಜೆಗಳು, ಸಂಭಾಷಣೆಯ ಸಂದರ್ಭದಲ್ಲಿ ಆಲಿಕೆ ಮತ್ತು ಮಾತನಾಡುವಿಕೆ, ಎರಡೂ ಪ್ರಕ್ರಿಯೆಗಳು ಏಕಕಾಲಕ್ಕೆ ನಡೆಯುತ್ತಿರುತ್ತವೆ ಎಂಬುದು ನಿಖರವಾಗಿ ತಿಳಿದಿದೆ.

ಭಾಷಾ ತರಗತಿಗಳಲ್ಲಿ ಸಾಮಾನ್ಯವಾಗಿ ಶಿಕ್ಷಕರು ಉಪನ್ಯಾಸ ನೀಡುತ್ತಿರುತ್ತಾರೆ ಮತ್ತು ವಿದ್ಯಾರ್ಥಿಗಳು ಮೌನವಾಗಿ ಕುಳಿತು ಕೇಳುತ್ತಿರುತ್ತಾರೆ ಅಥವಾ ಶಿಕ್ಷಕರು ಕೆಲವೊಮ್ಮೆ ಪ್ರಶ್ನೆಗಳನ್ನು ಕೇಳಿದಾಗ, ವಿದ್ಯಾರ್ಥಿಗಳ ಧ್ವನಿಯು, ಕೇವಲ ಪ್ರಶ್ನೆಗಳನ್ನು ಉತ್ತರಿಸುವುದಕ್ಕೆ ಸೀಮಿತವಾಗಿರುತ್ತದೆ. ಇದನ್ನು ಸಂಭಾಷಣೆಯೆಂದು ಕರೆಯಲಾಗದು, ಏಕೆಂದರೆ ಸಂಭಾಷಣೆಯಲ್ಲಿ ವಿದ್ಯಾರ್ಥಿಗಳು, ಮುಕ್ತವಾಗಿ, ಯಾವುದೇ ಒತ್ತಡವಿಲ್ಲದೆ (ಶಿಕ್ಷಕರಿಂದ) ತಮ್ಮ ಅನಿಸಿಕೆಗಳನ್ನು, ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸಬಲ್ಲರು. ಶಿಕ್ಷಕರು , ಸಂಬಾಷಣೆಯಿಂದ ತರಗತಿಯಲ್ಲಿನ ಶಿಸ್ತು ಕೆಡುತ್ತದೆ. ಹಾಗಾಗಿ ಕಲಿಯುವಿಕೆಯು ಅಡಚಣೆಗೊಳ್ಳುತ್ತದೆ ಎಂದು ಭಾವಿಸುತ್ತಾರೆ. ಶಿಕ್ಷಕರ ಈ ರೀತಿಯ ಧೋರಣೆಯಿಂದ ಶಿಕ್ಷಕರು, ಮಕ್ಕಳ ಕಲಿಕೆಯಲ್ಲಿ ಸಂಭಾಷಣೆಯ ಮಹತ್ವವನ್ನು ಗ್ರಹಿಸಲಾರರು.

ಪ್ರಾಥಮಿಕ ಹಂತದಲ್ಲಿ, ಮಕ್ಕಳು ತಮ್ಮ ಮನೆಯ ಭಾಷೆಯಲ್ಲಿ ಸುಲಭವಾಗಿ ಸಂಭಾಷಿಸಬಲ್ಲರು ಹಾಗೂ ಅರ್ಥ ಮಾಡಿಕೊಂಡು ಅರಿಯಬಲ್ಲರುಏಕೆಂದರೆ ಅವರು ಇದುವರೆಗೂ ತಮ್ಮ ಮನೆ ಭಾಷೆಯನ್ನು ಬಳಸುತ್ತಿದ್ದರು ಶಾಲೆಗೆ ಸೇರಿದ ತಕ್ಷಣ ಒಂದು ಹೊಸ ಭಾಷೆಯು ಎದರಾಗುವುದು ಸಮಸ್ಯೆ ಬರುವುದು ಯಾವಾಗ ಎಂದರೆ, ಅವರು ಶಾಲೆಯ ಭಾಷೆಯನ್ನು ಬಲವಂತವಾಗಿ ಕಲಿತು ಉಪಯೋಗಿಸುವಾಗ ಉಂಟಾಗುವುದು. ಈ ಸಮಸ್ಯೆಯ ಪರಿಹಾರವೆಂದರೆ, ಮನೆ ಭಾಷೆ ಮತ್ತು ಶಾಲೆಯ ಭಾಷೆ ಎರಡನ್ನು ತರಗತಿಯಲ್ಲಿ ಸಮನ್ವಯಗೊಳಿಸುವುದಾಗಿದೆ. ಇದಕ್ಕಾಗಿ ಮಕ್ಕಳು ಹೆಚ್ಚು ಹೆಚ್ಚು ಸಂಬಾಷಣೆಯಲ್ಲಿ ತೊಡಗಿಸುವುದಾಗಿದೆ. ಈ ರೀತಿಯ ಸಂಭಾಷಣೆಯ ಅವಕಾಶಗಳಲ್ಲಿ, ಮಗುವಿನ ಭಾಷೆಯನ್ನು ಬಳಸಿಕೊಂಡಾಗ ಮಗುವು ತನ್ನ ಪರಿಸರದ ಬಗ್ಗೆ ಗೌರವಭಾವವನ್ನು ಪಡೆಯುವುದಲ್ಲದೆ, ಅದರ (ಮಗು) ಆತ್ಮ ವಿಶ್ವಾಸವು ಹೆಚ್ಚುವುದು. ಈ ರೀತಿಯ ಪ್ರೋತ್ಸಾಹವು ಮಗವು ಹೊಸ ಭಾಷೆಯನ್ನು ಪಡೆಯುವುದರ ಜೊತೆಗೆ ಅದರ ಉತ್ಸಾಹದ ಹೆಚ್ಚಳಕ್ಕೆ ಸಹಾಯಕವಾಗುವುದು.

ಮಕ್ಕಳು ಗುರಿಯಿಲ್ಲದ ಸಂಭಾಷಣೆಯಲ್ಲಿ ತೊಡಗುವುದೇ ಇಲ್ಲ. ಇಲ್ಲಿ ಕೊಟ್ಟಿರುವ ಇಬ್ಬರು ಮಕ್ಕಳ ನಡುವಿನ ಸಂಭಾಷಣೆಯನ್ನು ಗಮನಿಸಿದಾಗ ಅರಿವಾಗುವುದು.

ಮೇಲೆ ನೋಡಿದಂತೆ, ಮಕ್ಕಳು ಸಂಭಾಷಣೆಯಲ್ಲಿ ತೊಡಗಿರುವಾಗ ಅನೇಕ ಕಲಿಕಾ ಅವಕಾಶಗಳನ್ನು ಪಡೆಯುತ್ತಾರೆ ಬನ್ನಿ, ಇದನ್ನು ವಿಶ್ಲೇಷಿಸೋಣ.

ಬಾಲಕನ ಹೇಳಿಕೆಯನ್ನು ಕೇಳಿದ ಮೇಲೆ ಬಾಲಕಿಯು ತಾನು ಮುಂಚೆ ನೋಡಿದ್ದ ಉಂಗುರದ ನೆನಪು ಮಾಡಿಕೊಂಡು, ತನ್ನ ಈಗಿನ ಹೇಳಿಕೆಯನ್ನು ಮತ್ತೆ ಸುಧಾರಿಸಿದಳು. ಮಕ್ಕಳು ಹಳೆಯದು ಮತ್ತು ಹೊಸದರು, ಹಾಗೂ ಸಣ್ಣದು ತೆಳುವಾದದ್ದು ಎಂಬ ವ್ಯತ್ಯಾಸಗಳನ್ನು ಮಾಡಬಲ್ಲವರಾದರು.

Notes




CARTOON: **(Please make the following changes in the adjoining picture)**

Girl – Look this lady is wearing a ring today!

Boy – You hadn't seen it before?

Girl – No…. Yes, yes I had seen it before.

Boy – Oh but this is a different ring!

Girl – The lady has bought a new ring. It is smaller than the previous one.

Boy – No this one is thinner'

ಸಂಭಾಷಣೆಯ ಲಾಭವನ್ನು ಮನಗಾಣಲು ವಯಸ್ಕರು, ಮಕ್ಕಳ ಸಂಭಾಷಣೆಯನ್ನು ಗಮನವಿಟ್ಟು ಕೇಳಬೇಕು, ಆದರೆ ಅವರು (ವಯಸ್ಕರ) ಅವರ ಮಕ್ಕಳ ಸಂಭಾಷಣೆಗಳನ್ನು ಬಹುಪಾಲು ಕೇಳುವುದೇ ಇಲ್ಲ.

ಮುಕ್ತ ಸನ್ನಿವೇಶದಲ್ಲಿ ಮಕ್ಕಳ ಸಂಭಾಷಣೆಯನ್ನು ಆಲಿಸಿದಾಗ ಅವರು ನಿರಾಯಾಸವಾಗಿ, ಪುನರ್ ವಿಮರ್ಶಿಸುತ್ತ, ಹೋಲಿಸುತ್ತಾ, ಕೆಲವೊಮ್ಮೆ ಕಲ್ಪಿಸಿಕೊಳ್ಳುತ್ತ, ಭವಿಷ್ಯ ನುಡಿಯುತ್ತಾ ಅಥವಾ ತಮ್ಮ ಹೇಳಿಕೆಯನ್ನು ತರ್ಕಬದ್ಧವಾಗಿ ಪುನಃ ಪ್ರತಿಷ್ಠಾಪಿಸುತ್ತಿರುವುದು ಕಾಣಬಹುದು. ನಾವು ಸಂಭಾಷಣೆಯ ಮೂಲಕ ಮಕ್ಕಳಿಗೆ ಕಲಿಕೆಯ ಅವಕಾಶಗಳನ್ನು ಗುರ್ತಿಸಬೇಕಾಗಿದೆ.

### ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ–4

1. ಸಂಭಾಷಣೆಯ ಸಮಯದಲ್ಲಿ ಏಕಕಾಲದಲ್ಲಿ ನಡೆಯುವ ಎರಡು ಪ್ರಕ್ರಿಯೆಗಳಾವುವು?

   ಎ) ಆಲಿಸುವುದು ಮತ್ತು ನೋಡುವುದು　　ಬಿ) ಓದುವುದು ಮತ್ತು ಆಲಿಸುವುದು

   ಸಿ) ಆಲಿಸುವುದು ಮತ್ತು ಮಾತನಾಡುವುದು　　ಡಿ) ಆಲಿಸುವುದು ಮತ್ತು ನಗುವುದು

2. ತರಗತಿಯಲ್ಲಿ ಮಕ್ಕಳ ಸಂಭಾಷಣೆಯ ಬಗ್ಗೆ ಶಿಕ್ಷಕರು ಏನನ್ನು ಚಿಂತನೆ ಮಾಡುತ್ತಾರೆ?

   ..................................................................................................

   ..................................................................................................

   ..................................................................................................

Notes

3. ಮಕ್ಕಳು ತರಗತಿಯಲ್ಲಿ ಸಂಭಾಷಣೆಗೆ, ವಿಫುಲ ಅವಕಾಶಗಳನ್ನು ಪಡೆಯುವಂತೆ, ಶಿಕ್ಷಕರ ಪಾತ್ರವೇನು?

..........................................................................................................................

..........................................................................................................................

..........................................................................................................................

4. ನಿಮ್ಮ ನೆರೆಹೊರೆಯ, ಯಾವುದಾದರೂ 3–4 ವರ್ಷ ವಯಸ್ಸಿನ ಮಕ್ಕಳ ಸಂಭಾಷಣೆಯನ್ನು ಆಲಿಸಿ, ಗಮನಿಸಿ ಮತ್ತು ನಿಮ್ಮ ಅನುಭವಗಳನ್ನು ಬರೆಯಿರಿ. ನಂತರ ವಿಶ್ಲೇಷಿಸಿ (ಸಂಭಾಷಣೆ) ಹಾಗೂ ಅವರ ಸಂಭಾಷಣೆಯಲ್ಲಿ ಮೇಲಿನ ಯಾವ ಯಾವ ಕ್ರಿಯೆಗಳನ್ನು ಕಾಣಬಹುದು

..........................................................................................................................

..........................................................................................................................

..........................................................................................................................

## 4.4 ತರಗತಿಯಲ್ಲಿ, ಆಲಿಸುವ ಮತ್ತು ಮಾತನಾಡುವ ಅವಕಾಶಗಳನ್ನು ಹೇಗೆ ಒದಗಿಸಬಹುದು?

ಬೇಸಿಗೆ ರಜೆಯ ನಂತರ, ಶಾಲಾ ಪ್ರಾರಂಭವಾಗಿತ್ತು. ಮಳೆಯಿಂದಾಗಿ ಎಲ್ಲೆಲ್ಲೂ ಗುಂಡಿಗಳ ತುಂಬ ನೀರು ತುಂಬಿತ್ತು. ತರಗತಿಯಲ್ಲಿ ಶಿಕ್ಷಕರು ಭೋದಿಸುತ್ತಿರುವಾಗ ಇಬ್ಬರು ಮಕ್ಕಳು ಕೊನೆಯ ಆಸನಗಳಲ್ಲಿ ಕುಳಿತು ಏನೋ ಮಾತಾನಾಡುತ್ತಿದ್ದರು. ಅದನ್ನು ಗಮನಿಸಿದ ಶಿಕ್ಷಕರು ಅವರ ಬಳಿ ಹೋಗಿ ಪ್ರೀತಿಯಿಂದ ಕೇಳಿದರು. ಏನು ಸಮಾಚಾರ? ನನಗೆ ಹೇಳಿ ನಿವಿಬ್ಬರೂ ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ? ಬಹಳ ಆಸಕ್ತಿಕರ ವಿಷಯವಾಗಿದ್ದರೆ ತರಗತಿಯಲ್ಲಿನ ಎಲ್ಲರಿಗೂ ಸಹ ಅದನ್ನು ತಿಳಿಸಿರಿ.

ಆ ಇಬ್ಬರು ವಿದ್ಯಾರ್ಥಿಗಳು ಸ್ವಲ್ಪ ಬೆದರಿದರು ಮತ್ತು ಸುಮ್ಮನಾದರು. ಶಿಕ್ಷಕರು ಅವರಿಗೆ ಹೆದರದಂತೆ ತಿಳಿಸಿ ಅವರು ಯಾವುದರ ಬಗ್ಗೆ ಮಾತನಾಡುತ್ತಿದ್ದರೆಂದು ಕೇಳಿದರು.

ಅವರಿಬ್ಬರಲ್ಲಿ ಒಬ್ಬನು ಸ್ವಲ್ಪ ಧೈರ್ಯ ವಹಿಸಿ ಹೇಳಿದನು. ನಾವು ಮನೆಯಿಂದ ಬರುವಾಗ ಕಪ್ಪೆಗಳು ಜೋರಾಗಿ ವಟಗುಟ್ಟುತ್ತಿದ್ದನ್ನು ಕೇಳಿದವು

ಶಿಕ್ಷಕರು ಪ್ರೋತ್ಸಾಹಿಸುವ ಧ್ವನಿಯಲ್ಲಿ ಹೇಳಿದರು "ಓಹೋ ಆನಂತರದ ಏನಾಯ್ತು?"

ಮಕ್ಕಳು : ಕಪ್ಪೆಗಳು ಗುಮಡಿಗಳ ಅಂಚಿನಲ್ಲಿ ಎಗರಾಡುತ್ತಿದ್ದವು. ಆ ಕಪ್ಪೆಗಳು ಬಹಳ ದೊಡ್ಡವಾಗಿದ್ದವು.

ಶಿಕ್ಷಕರು : ನಂತರ ಏನಾಯ್ತು.

ಮಕ್ಕಳು : ನಂತರ ______ ನಂತರ ನಾವು ಅವುಗಳ ಬಳಿಗೆ ಹೋದೆವು. ಅವು ಗುಂಡಿಯಲ್ಲಿ ಧುಮುಕಿದವು.

## ಆಲಿಸುವುದು ಮತ್ತು ಮಾತನಾಡುವುದು

ಈಗ ಇಬ್ಬರು ಮಕ್ಕಳ ವಿಶ್ವಾಸ ಹೆಚ್ಚಿತು. ಅವರು ಏನನ್ನು ಮಾತನಾಡುತ್ತಿದ್ದರು. ಎಂಬುದರ ಬಗ್ಗೆ, ಅವರಿಗೆ ಬೈಗುಳ ಆಗುವುದಿಲ್ಲ ಎಂಬ ಖಾತ್ರಿಯಾಗಿ ಸಮಾಧಾನವಾಯ್ತು.

ಆ ಇಬ್ಬರು ಮಕ್ಕಳಲ್ಲಿ ಒಬ್ಬನು ಶಿಕ್ಷಕರನ್ನು ಕೇಳಿದನು
"ಮಳೆ ಆದ ನಂತರ ಕಪ್ಪೆಗಳು ಎಲ್ಲಿಗೆ ಹೋಗುತ್ತವೆ?'

ಶಿಕ್ಷಕರು ಮಾಡುತ್ತಿರುವ ಪಾಠವನ್ನು ಬದಿಗಿಟ್ಟು ಈ ವಿಷಯವನ್ನು ತೆಗೆದುಕೊಂಡರು.
ನಿಮ್ಮಲ್ಲಿ ಪ್ರತಿಯೊಬ್ಬರು ಕಪ್ಪೆಯನ್ನು ನೊಡಿದ್ದೀರಾ?
ಆ ತರಗತಿಯಲ್ಲಿ ಕಪ್ಪೆಯನ್ನು ನೋಡದಿದ್ದವರು ಯಾರು
ಶಿಕ್ಷಕರ ಪ್ರಶ್ನೆಗೆ ಉತ್ತರವಾಗಿ ಎಲ್ಲಾ ವಿದ್ಯಾರ್ಥಿಗಳು ಒಕ್ಕೊರನಿಂದ ಹೌದು ನೋಡಿದ್ದೇವೆ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಕಪ್ಪೆಗಳ ಬಗ್ಗೆ ಏನಾದರೂ ಹೇಳುವ ತವಕದಲ್ಲಿದ್ದನು. ಒಬ್ಬ ವಿದ್ಯಾರ್ಥಿ ಹೇಳಿದ ಕಪ್ಪೆಗಳು ಮಳೆ ಬಂದಾಗ ಟರ್ – ಟಕ್ ಎಂದು ಶಬ್ದ ಮಾಡುತ್ತವೆ

ಇನ್ನೊಬ್ಬನು ಹೇಳಿದ ನಮ್ಮ ಮನೆಯ ಹಿತ್ತಲಲ್ಲಿ ಅಗೆದಾಗ ಕಪ್ಪೆಗಳು ಹೊರಬಂದವು

ಒಬ್ಬ ವಿದ್ಯಾರ್ಥಿ ಹೇಳಿದ ನಾನು ಕಪ್ಪೆಗಳು ಕೀಟ, ಕ್ರಿಮಿಗಳನ್ನು ತಿನ್ನುವುದನ್ನು ನೋಡಿದ್ದೇನೆ.

ಇನ್ನೊಬ್ಬ ಹೇಳಿದ ಕಪ್ಪೆಗಳು ಮೆಟ್ಟಿಲುಗಳನ್ನು ಚೆನ್ನಾಗಿ ಜಿಗಿಯಬಲ್ಲವು.

ಇಡೀ ತರಗತಿಯ ವಾತಾವರಣ ಕಪ್ಪೆಮಯ ವಾಯಿತು ಕೆಲವರು ಕಪ್ಪೆಯಂತೆ ಶಬ್ದ ಮಾಡುತ್ತಿದ್ದರು. ಮತ್ತೆ ಕೆಲವರು ಕಪ್ಪೆಯಂತೆ ಕುಪ್ಪಳಿಸುತ್ತಿದ್ದರು.

ಶಿಕ್ಷಕರು ಮಕ್ಕಳ ಸಂಭಾಷಣೆಯನ್ನು ಎಚ್ಚರಿಕೆಯಿಂದ ಆಲಿಸುತ್ತಿದ್ದರು ಮತ್ತು ಅವರ ಚಟುವಟಿಕೆಯನ್ನು ಗಮನಿಸುತ್ತಿದ್ದರು. ಹಾಗೆಯೇ ನಡುನಡುವೆ ತರಗತಿಯ ಶಿಸ್ತನ್ನು ಕಾಪಾಡಲು ಪ್ರಯತ್ನಿಸುತ್ತಿದ್ದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳಿದರು "ನೋಡಿ, ಈಗ ಗಮನವಿಟ್ಟು ವೀಕ್ಷಿಸಿ, ನಿಮ್ಮ ಸುತ್ತಲೂ ಇರುವ ಕಪ್ಪೆಗಳು ಮಳೆಯ ನಂತರ ಎಲ್ಲಿಗೆ ಹೋಗುತ್ತವೆ ಎಂದು ಚಿಂತನೆ ಮಾಡಿರಿ.

ಕೊನೆಗೆ, ಶಿಕ್ಷಕರು, ಮಕ್ಕಳಿಗೆ, ಕಪ್ಪೆಗಳ ಕುರಿತು 5 ವಾಕ್ಯಗಳನ್ನು ಬರೆಯುವಂತೆ ಹೇಳಿದರು.

ಕಪ್ಪೆಗಳ ಬಗ್ಗೆ ಸಂಭಾಷಣೆಯಲ್ಲಿ, ಶಿಕ್ಷಕರು ಕಪ್ಪೆಗಳ ವಾಸತಾಣ, ಆಹಾರ ಅಭ್ಯಾಸಗಳು, ಬಣ್ಣ, ಗಾತ್ರ ಮತ್ತು ಅವುಗಳ ಸ್ವಭಾವಗಳ ನಡುವಿನ ಸಂಬಂಧಗಳನ್ನು ಸುಲಭವಾತಿ ಪಾಠವನ್ನು ವಿವರಿಸಲು ಸಾಧ್ಯವಾಯಿತು. ಮಕ್ಕಳಿಗೆ ಸಂಭಾಷಣೆಯಲ್ಲಿ ತೊಡಗುವ ಅವಕಾಶ ನೀಡುವುದರಿಂದ ಮಕ್ಕಳು ಕ್ರಮೇಣ ತಮ್ಮ ಅನಿಸಿಕೆ, ಅನುಭವಗಳನ್ನು ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸುವಲ್ಲಿ ಶಕ್ತರಾಗುತ್ತಾರೆ. ಇದರ ಜೊತೆಗೆ ವಿವಿಧ ವಿಷಯಗಳಲ್ಲಿ ಅರಿವನ್ನು ಹೆಚ್ಚಿಸಿಕೊಂಡು ಅಡಕವಾಗಿರುವ ಜ್ಞಾನ ಸಂಪಾದಿಸುತ್ತಾರೆ. ಶಿಕ್ಷಕರು ಸಂಭಾಷಣೆಗಾಗಿ ಅವಕಾಶಗಳನ್ನು ಹುಡುಕ ಬೇಕಾದ್ದಿಲ್ಲ. ಶಾಲಾ ಸನ್ನಿವೇಶದಲ್ಲಿಯೇ ಶಾಲಾ ಉದ್ಯಾನ ಆಟದ ಮೈದಾನ ಗಿಡ, ಮರ, ಪಕ್ಷಿ, ಚಿಟ್ಟೆ, ಹಾದಿ, ಹೂವು, ಹಣ್ಣು ಇತ್ಯಾದಿ ಸ್ಥಳ ಪರಿಸರದಲ್ಲಿ ಅವಕಾಶ ಪಡೆಯಬಹುದು.

ಇಲ್ಲಿ ಶಿಕ್ಷಕರು ಮಕ್ಕಳಿಗೆ ಸಂಭಾಷಿಸಲು ಅವಕಾಶ ಕೊಟ್ಟಿದ್ದಲ್ಲದೆ, ಸಂಭಾಷಿಸಲು ಪ್ರೋತ್ಸಾಹಿಸಿದರು. ಶಿಕ್ಷಕರು ಈ ರೀತಿ ಪ್ರೋತ್ಸಾಹಿಸದೆ ಹೋಗಿದ್ದರೆ, ಇಷ್ಟು ಆಸಕ್ತಿಕರ, ಸಂಭಾಷಣೆ ನಡೆಯಲು ತರಗತಿಯಲ್ಲಿ ಸಾಧ್ಯವಾಗುತ್ತಿರಲಿಲ್ಲ. ಈ ರೀತಿಯಲ್ಲಿ ಮಕ್ಕಳ ಜೀವನ ಮತ್ತು ಅನುಭವಗಳನ್ನು ತರಗತಿಯಲ್ಲಿ ಸಂಬಂಧಿಸುವುದರಿಂದ ಕಲಿಕೆಯು ಸ್ಪೂರ್ತಿದಾಯಕ ಹಾಗೂ ಸ್ವಾಭಾವಿಕ ವಾಗುತ್ತದೆ.

Notes

Notes

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 5

1. ಮಕ್ಕಳಿಗೆ ಸಂಭಾಷಿಸಲು ಅವಕಾಶ ಕೊಡುವುದರ ಅನುಕೂಲತೆ ಮತ್ತು ಲಾಭಗಳೇನು?

   ಎ) ಮಕ್ಕಳು ತಮ್ಮ ಆಲೋಚನೆಗಳನ್ನು, ಆನುಭವಗಳನ್ನು ಅಭಿವ್ಯಕ್ತಿ ಪಡಿಸುವ ಸಾಮರ್ಥ್ಯ ಪಡೆಯುವರು.

   ಬಿ) ಶಬ್ದಗಳನ್ನು (ಪದಗಳನ್ನು) ಕಲಿಯುತ್ತಾರೆ.

   ಸಿ) ಪ್ರಾಸಬದ್ಧ ಪದಗಳನ್ನು ಕಲಿಯುತ್ತಾರೆ.

   ಡಿ) ಓದಲು ಕಲಿಯುತ್ತಾರೆ.

2. ಶಿಕ್ಷಕರು, ಮಕ್ಕಳಿಗೆ ಸಂಭಾಷಿಸಲು, ಮಾತನಾಡಲು ಅವಕಾಶಗಳನ್ನು ಒದಗಿಸುವ ಅವಶ್ಯಕತೆ ಏನು?

   ..........................................................................................................................

   ..........................................................................................................................

   ..........................................................................................................................

3. ತರಗತಿಯಲ್ಲಿ , ನೀವು ಕಲಿಕಾ – ಭೋಧನಾ ಸಂಭಾಷಣೆಗಾಗಿ, ಮಾದ್ಯಮವಾಗಿ ಹೇಗೆ ವರ್ತಿಸುವಿರಿ?

   ..........................................................................................................................

   ..........................................................................................................................

   ..........................................................................................................................

4. ನಿಮ್ಮ ಅಭಿಪ್ರಾಯದಲ್ಲಿ, ತರಗತಿಯಲ್ಲಿ ಭೊಧನಾ ಸಮಯದಲ್ಲಿ ಯಾವ ರೀತಿಯ ವಾತಾವರಣವಿರಬೇಕು

   ..........................................................................................................................

   ..........................................................................................................................

   ..........................................................................................................................

### 4.4.1 ಕವಿತೆ, ಪದ್ಯ ಹಾಡುಗಳನ್ನು ಆಲಿಸುವುದು ಮತ್ತು ಹಾಡುವುದು ಶಿಶುಗೀತೆಗಳು, ಪದ್ಯಗಳು

ಒಂದು ಎರಡು

ಬಾಳೆಲೆ ಹರಡು

ಮೂರು ನಾಲ್ಕು

ಅನ್ನ ಹಾಕು

ಐದು ಆರು

*ಬೇಳೆ ಸಾರು*
*ಏಳು ಎಂಟು*
*ಪಲ್ಯಕ್ಕೆ ದಂಟು*
*ಒಂಬತ್ತು ಹತ್ತು*
*ಎಲೆಮುದರೆತ್ತು*
*ಒಂದರಿಂದ ಹತ್ತು ಹೀಗಿತ್ತು*
*ಸಂಖ್ಯೆಯ ಆಟ ಮುಗಿದಿತ್ತು.*

*ನಾಯಿ ಮರಿ ನಾಯಿ ಮರಿತಿಂಡಿಬೇಕೆ?*
*ತಿಂಡಿಬೇಕು, ತೀರ್ಥ ಬೇಕು ಎಲ್ಲಾಬೇಕು*
*ನಾಯಿಮರಿ ನಿನಗೆ ತಿಂಡಿ ಏಕೆಬೇಕು*
*ತಿಂಗುಗಟ್ಟಯಾಗಿ ಮನೆಯ ಕಾಯಬೇಕು*
*ನಾಯಿ ಮರಿ ಕಳ್ಳಬಂದರೆಏನು ಮಾಡುವೆ*
*ಲೊಳ್ ಲೊಳ್ ಬೌ ಬೌ ಎಂದು ಕೂಗಿ ಆಡುವೆ.*

*ನಾಗರಹಾವೇ, ಹಾವೊಳು ಹೂವೆ*
*ಬಾಗಿಲ ಬಿಲದಲಿ, ನಿನ್ನಯ ಠಾವೆ*

ಮಕ್ಕಳು, ಇತರ ಮಕ್ಕಳೊಡನೆ ಆಡುವಾಗ, ಕುಳಿತು ಮಾತನಾಡುವಾಗ ಅನೇಕ ಮೇಲಿನ ರೀತಿಯ ಶಿಶುಗೀತೆಗಳನ್ನು ಹಾಡುವುದನ್ನು ಕೇಳಿದ್ದೇವೆ. ಕೆಲವೊಮ್ಮೆ ಮಕ್ಕಳು ತಮ್ಮಲ್ಲಿಯೇ ತಾವಾಗಿ, ಶಿಶುಗೀತೆಗಳನ್ನು ಹಾಡುವುದನ್ನೂ ಕೇಳಿದ್ದೇವೆ. ಅವರು ಹಾಡುವಾಗ, ಹೆದರದೆ, ಎಗ್ಗಿಲ್ಲದೆ, ದಂಡನೆಯ ಭಯವಿಲ್ಲದೆ, ಆಡಿಕೊಂಡು ನಗುವರೆಂಬ ಸಂಕೋಚವಿಲ್ಲದೆ ಹಾಡುವರು. ಎಲ್ಲಾ ಮಕ್ಕಳಿಗೂ ಈ ಶಿಶುಗೀತೆಯಲ್ಲಿನ ಪ್ರಾಸ, ತಾಳ, ಲಯ, ಪದಗಳು ಬಹಳ ಇಷ್ಟವಾಗುತ್ತದೆ.

ಎಷ್ಟೋ ಸಲ, ಮಕ್ಕಳು, ಹಾಡನ್ನು ತಮ್ಮದೇ ಆದ ಪದಗಳನ್ನು ಪ್ರಾಸಬದ್ಧವಾಗಿ ಜೋಡಿಸುತ್ತ, ಆನಂದಪಡುತ್ತಾ ಅರ್ಥವಾಗದಿದ್ದರೂ ಹಾಡುತ್ತಿರುತ್ತಾರೆ. ಕೆಲವೊಮ್ಮೆ ಅದಕ್ಕೆ ತಕ್ಕ ಅಭಿನಯವನ್ನು ಮಾಡುತ್ತಾರೆ. ಇದರಿಂದ ಅವರ ಸೃಜನ ಶೀಲತೆಗೆ, ಶಕ್ತಿಗೆ ಉತ್ತೇಜನ ದೊರಕಿಂದಾಗುತ್ತದೆ.

ಉದಾಹರಣೆಗೆ :

*ಕ್ಕಾ ಕ್ಕಾ ಕ್ಕಾ ಕೊಗೋ ಕಾಗೆ*
*ಕೂಗೆ ಕೂಗೆ*
*ಕ್ಕೋ ಕ್ಕೋ ಕ್ಕೋ ಕೂಗೋ ಕೋಳಿ*
*ಬೇಗ ಏಳಿ*

*ಫೈ ಫೈ ಫೈ ಕುಣಿಯೋ ನವಿಲು*
*ಬಣ್ಣ ಬಯಲು*
*ಬೌ ಬೌ ಭೌ ಬೊಗಳೊ ನಾಯಿ*
*ಬಿಟ್ಟ ಬಾಯಿ*

Notes

Notes

*ಮ್ಯಾವ್ ಮ್ಯಾವ್ ಮ್ಯಾವ್ ಅನ್ನೊಬೆಕ್ಕು*
*ನಮಗೂ ಬೇಕು.*
*ಕೀಕ್ ಕೀರ್ ಕೀರ್ ಅನ್ನೊ ಕೋರಿ*
*ನಮ್ಮ ಸಂಥಿ*

ಸಾಮಾನ್ಯವಾಗಿ ಈ ರೀತಿಯ ಹಾಡುಗಳನ್ನು ಹಾಡುವಾಗ ಮಕ್ಕಳು ಕೆಲವು ವೇಳೆ ಪದಗಳನ್ನು ಜೋಡಿಸುವ ಅಥವಾ ಬಿಡುವುದನ್ನು ಮಾಡಿದರೂ, ಪ್ರಾಸ, ಲಯಕ್ಕೆ ಧಕ್ಕೆಬಾರದು.

ಪದ್ಯಗಳು ಕವನಗಳು, ಗೀತೆಗಳು, ನಮ್ಮ ಜೀವನಕ್ಕೆ ಸಂಬಂಧಿಸಿದ ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ. ಈ ಕವಿತೆಗಳನ್ನು ಹಾಡುಗಳನ್ನು ಸತತವಾಗಿ ಕೇಳುತ್ತಾ, ಮಕ್ಕಳು ಭಾಷೆಯ ಮೂಲಭೂತ ರಚನೆ, ವಿನ್ಯಾಸವನ್ನು ಮನಗಾಣುತ್ತಾರೆ. ಹೊಸ ಪದಗಳ ಅರ್ಥಗಳನ್ನು ತಿಳಿಯುತ್ತಾರೆ. ಪ್ರಾಸಗಳನ್ನು ಮಾಡುವುದು, ಪ್ರಾಸಗಳೊಡನೆ ಆಡುವುದರಿಂದ, ಪದಗಳ ಅರ್ಥಗಳು ತಿಳಿಯುತ್ತವೆ. ಇದರ ಜೊತೆಗೆ ಕವನಗಳು, ಮಕ್ಕಳನ್ನು ಅವರ ಅನುಭವಗಳೊಡನೆ ಜೋಡಿಸುತ್ತದೆ. ಇಬ್ಬರು ಮಕ್ಕಳು, ಒಂದೇ ಕವಿತೆಯನ್ನು ಓದಿದಾಗ, ಅವರು ತಮ್ಮ ತಮ್ಮ ಜೀವನ ಅನುಭವಗಳೊಡನೆ ಸಂಬಂಧಿಸಿದಂತೆ, ಅರ್ಥಮಾಡಿಕೊಳ್ಳುತ್ತಾರೆ.

ಪದ್ಯ, ಕವಿತೆಗಳ ಮೂಲಕ, ಮಕ್ಕಳು ತಮ್ಮ ಅನಿಸಿಕೆ, ಅನುಭವಗಳನ್ನು, ಭಾವನೆಗಳನ್ನು ವ್ಯಕ್ತಪಡಿಸುವ ಸೃಜನ ಶೀಲತೆಯನ್ನು ಬೆಳೆಸುವ, ವಿಧಾನವನ್ನು ತರಗತಿಗಳಲ್ಲಿ ಅಳವಡಿಸಿಕೊಳ್ಳುವುದು, ಶಿಕ್ಷಕರಿಗೆ ಬಿಟ್ಟದ್ದು.

## ನಿಮ್ಮ ಕಲಿಕೆ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿರಿ – 6

*1. ಪದ್ಯಗಳನ್ನು, ಪ್ರಾಸಗೀತೆಗಳನ್ನು ನಿರಂತರ ಕೇಳುವ ಮೂಲಕ ಮಕ್ಕಳು ಏನನ್ನು ಮಕ್ಕಳು ಏನನ್ನು ಗ್ರಹಿಸುತ್ತಾರೆ?*
*ಎ) ಪದಗಳು* *ಬಿ) ಶಬ್ದಗಳು*
*ಸಿ) ಪ್ರಾಸಗಳು* *ಡಿ) ಭಾಷೆಯ ಮೂಲ ರಚನಾ ವಿನ್ಯಾಸ.*

*2. ಮೂರನೇ ತರಗತಿಯ ಮಕ್ಕಳಿಗೆ ಕಾಡಿನ ಮೂಲಕ ಹೋಗುವಾಗ ಕವಿತೆ ರಚಿಸಲು ಹೇಳಿ ಇನ್ನು ಹೆಚ್ಚಿನ ಸಾಲುಗಳನ್ನು ಸೇರಿಸಿ ಹಾಡಲು ಹೇಳಿ. ಮಕ್ಕಳು ಸೇರಿಸಿದ ಸಾಲುಗಳನ್ನು ಏತಕ್ಕಾಗಿ ಸೇರಿಸಿದರು ಎಂದು ಕೇಳಿ ಚರ್ಚಿಸಿ*

*ಕಾಡಿನ ಮೂಲಕ ಹೋಗುವಾಗ*
*ನಾನೇನ ಕಂಡೆ?*
*ಒಂದು ಸಿಂಹವ ಕಂಡೆ*
*ಅದು ನನ್ನೆಡೆ ಘರ್ಜಿಸಿತು.*

*ಕಾಡಿನ ಮೂಲಕ ಹೋಗುವಾಗ*
*ನಾನೇನ ಕಂಡೆ?*
*ಒಂದು ಉದ್ದ ವಾದ ಸರ್ಪ*
*ಅದು ನನ್ನೆಡೆ ಭುಸುಗುಟ್ಟಿತು.*

*ಕಾಡಿನ ಮೂಲಕ ಹೋಗುವಾಗ*
*ನಾನೇನ ಕಂಡೆ?*
*ಒಂದು ಮರಿ ಕೋತಿ*
*ಅದು ನನ್ನೆಡೆ ಕೀಚ್ ಕೀಚ್ ಎಂದಿತು.*

Notes

*3. ಈ ಮೇಲ್ಕಂಡ ಕವಿತೆಯಲ್ಲಿ, ಮಕ್ಕಳುಭಾಷೆಯನ್ನು ಕಲಿಯಲು ಇರುವ ಏನೆಲ್ಲಾ ಅವಕಾಶ ಇವೆ?*

........................................................................................................................................

........................................................................................................................................

........................................................................................................................................

### 4.4.2 ಚಿತ್ರಗಳ ಮೂಲಕ ಚರ್ಚೆ

1 ರಿಂದ 8ನೇ ತರಗತಿಯ ವರೆಗೆ ಮಕ್ಕಳ ಮಧ್ಯೆ ಸಂಭಾಷಣೆ ಮತ್ತು ಚರ್ಚೆಗೆ ವಿಪುಲವಾದ ಅವಕಾಶಗಳನ್ನು ಒದಗಿಸಬಲ್ಲ ಮಾಧ್ಯಮವೆಂದರೆ, ಚಿತ್ರಗಳು ಆಗಿವೆ. ಪ್ರಾಥಮಿಕ ವರ್ಗದ ತರಗತಿಗಳಲ್ಲಿ ಚಿತ್ರಗಳೆಂದರೆ, ಮಕ್ಕಳಿಗೆ ಬಹಳ ಇಷ್ಟ. ಅವರಿಗೆ ಚಿತ್ರ ಬಿಡಿಸುವುದು ಮತ್ತು ವೀಕ್ಷಣೆಯಿಂದ ಆನಂದ ಹೊಂದುತ್ತಾರೆ. ಯಾವುದೇ ಪುಸಕ್ತದಲ್ಲಿ, ಮಕ್ಕಳ ಮೊದಲು ಗಮನ ಸೆಳೆವುದು ಚಿತ್ರಗಳೇ. ಮಕ್ಕಳೊಡನೆ ಚಿತ್ರಗಳ ಬಗ್ಗೆ ತತ್‌ಕ್ಷಣ ಮಾತನಾಡಬಹುದು. ಮಕ್ಕಳು ಚಿತ್ರಗಳನ್ನು ಬಹಳ ಆಸಕ್ತಿಯಿಂದ, ಸೂಕ್ಷ್ಮವಾಗಿ ಗಮನಿಸುವರು, ಮತ್ತು ನಮ್ಮ ಊಹೆಗೂ ನಿಲುಕದ ಬಹಳ ವಿಷಯಗಳನ್ನು ಮಾತಾಡಲು ಹಾತೊರೆಯುತ್ತಾರೆ.

ಒಂದು ಚಿತ್ರದ ಬಗ್ಗೆ 3ನೇ ತರಗತಿಯ ಮಕ್ಕಳೊಡನೆ ಚರ್ಚಿಸಿದಾಗ, ಅವರು, ಚಿತ್ರದಲ್ಲಿದ ಬೇರೆ ಬೇರೆ ವಸ್ತುಗಳ ಹೆಸರುಗಳನ್ನು ಹೇಳುವುದರ ಜೊತೆ ಅವುಗಳನ್ನು ತಮ್ಮ ಅನುಭವಗಳೊಡನೆ ಸಂಬಂಧಿಸುವಂತೆ ತರ್ಕಬದ್ಧ ಹೇಳಿಕೆಗಳನ್ನೂ ಕೊಟ್ಟರು. ಕೆಳಗೆ ಆ ರೀತಿಯ ಉದಾಹರಣೆಗಳನ್ನು ಕೊಡಲಾಗಿದೆ.

1) ಒಬ್ಬ ವ್ಯಕ್ತಿಯ ಹಸುವನ್ನು ಕೊಂಡೊಯ್ಯುತ್ತಿದ್ದಾನೆ / ಒಬ್ಬ ವ್ಯಕ್ತಿಯು ಒಮದು ಎತ್ತನ್ನು ಕಟ್ಟುತ್ತಿದ್ದಾನೆ / ಒಬ್ಬ ಹುಡುಗನು ಗುಡಿಸಿಲನ್ನು ಪ್ರವೇಶಿಸುತ್ತಿದ್ದಾನೆ.

2) ಒಮದು ಹುಡುಗಿಯು ಮರವನ್ನು ಹತ್ತುತ್ತಿದ್ದಾಳೆ. ಒಬ್ಬ ಹುಡುಗನು, ಮರವು ಬಹಳ ದೊಡ್ಡದಾದ್ದರಿಂದ, ಅವಳು ಬಿದ್ದು ಗಾಯಗೊಳ್ಳಬಹುದೆಂದು, ಅವಳನ್ನು ಹತ್ತದಂತೆ ತಡೆದನು / ಹುಡುಗಿಯು ಮರದ ಮೇಲೆ ತೂಗಾಡುತ್ತಿದ್ದಾಳೆ / ಮರವು ಅಲ್ಲಾಡುತ್ತಿದೆ/ ಬೆಟ್ಟದ ಮೇಲೆ ಅನೇಕ ಮರಗಳು ಬೆಳೆಯುತ್ತಿವೆ.

3) ಬೆಳಿಗ್ಗೆ ಸೂರ್ಯ ಉದಯಿಸುತ್ತಿದ್ದಾನೆ / ಬೆಳಿಗ್ಗೆ ಪಕ್ಷಿಗಳು ಹಾರಾಡುತ್ತಿವೆ / ಸೂರ್ಯನು ಹೊರಬರುತ್ತಿದ್ದಾನೆ. / ಈಗ ಸಂಜೆ / ಸೂರ್ಯನು ಅಸ್ತಮಿಸುತ್ತಿದ್ದಾನೆ.

4) ಗೃಹಣಿಯು ಮನೆಗೆ ಹಿಂದಿರುಗುತ್ತಿದ್ದಾಳೆ / ಮಹಿಳೆಯು ನೀರನ್ನು ಹೊತ್ತು ತರುತ್ತಿದ್ದಾಳೆ.

5) ಎರಡು ಕೊಕ್ಕರೆ ಪಕ್ಷಿಗಳು ಹಾರುತ್ತಿವೆ.

ಮೇಲಿನ ವಾಕ್ಯಗಳು ಮಕ್ಕಳು ಒಂದು ಚಿತ್ರದ ಬಗ್ಗೆ ಅನೇಕ ರೀತಿಯ ಸಂಭಾಷಣೆ ನಡೆಸಬಲ್ಲರು ಎಂಬುದನ್ನು ಸೂಚಿಸುತ್ತವೆ. ಚಿತ್ರದ ಮೇಲಿನ ಸಂಭಾಷಣೆಯು ಸೃಜನಾತ್ಮಕವಾದ ಮತ್ತು ವಿಶ್ಲೇಷಣಾತ್ಮಕ ಸಾಮರ್ಥ್ಯವನ್ನು ಮಕ್ಕಳಲ್ಲಿ ಹೊರಹೊಮ್ಮಿಸುವ ಅಂತರ್ಗತ ಶಕ್ತಿಯನ್ನು ಹೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಚಿತ್ರಗಳು ಮುದ್ರಿತವಾಗಿರಲಿ, ವಾರ್ತಾಪತ್ರಿಕೆಯದಾಗಿರಲಿ, ಜಾಹಿರಾತಾಗಿರಲಿ, ಕ್ಯಾಲೆಂಡರ್‌ನಲ್ಲಿರಲಿ, ಮತ್ತೆ ಯಾವುದೇ ಆಗಿರಲಿ ಚರ್ಚೆ, ಸಂಭಾಷಣೆಗಾಗಿ ಉಪಯೋಗಿಸಬಹುದಾಗಿದೆ. ಇವನ್ನು ಉಚ್ಚ ಪ್ರಾಥಮಿಕ ವರ್ಗಗಳಲ್ಲೂ ಉಪಯೋಗಿಸಬಹುದು.

ಮಕ್ಕಳೊಡನೆ ಕುಳಿತು, ಅವರನ್ನು ಚಿತ್ರಗಳನ್ನು ಅವರದೇ ರೀತಿಯಲ್ಲಿ ನೋಡುವಂತೆ ಹೇಳಿ, ಅವರ ಅನಿಸಿಕೆಗಳನ್ನು ಯಾವುದೇ ಅಡಚಣೆ ಇಲ್ಲದೆ ಅಭಿವ್ಯಕ್ತಿಪಡಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬಹುದಾಗಿದೆ.

Notes

ಚಿತ್ರದಲ್ಲಿ ಯಾವುದೇ ಮಕ್ಕಳ ಗಮನ ಸಳೆಯದ ವಿಷಯ / ವಸ್ತುಗಳನ್ನು ಮಕ್ಕಳ ಗಮನಕ್ಕೆ ಶಿಕ್ಷಕರು ತರಬಹುದು. ಇದಕ್ಕಾಗಿ ಪ್ರಶ್ನೆಗಳನ್ನು ಕೇಳಬಹುದು ಇದರಿಂದ ಮಕ್ಕಳಲ್ಲಿ ವಿಮರ್ಶಾತ್ಮಕ ವೀಕ್ಷಣಾ ಸಾಮರ್ಥ್ಯ ಅಭಿವೃದ್ಧಿಪಡಿಸಬಹುದು. ಚಿತ್ರ ವೀಕ್ಷಣೆ ಸಮಯದಲ್ಲಿ ಕೇಳುವ ಪ್ರಶ್ನೆಗಳಿಂದ ಕೌಶಲ್ಯವನ್ನು ಚುರುಕುಗೊಳಿಸಕೊಳ್ಳಬಹುದು ಕೇಳುವ ಪ್ರಶ್ನೆಗಳು, ಮಕ್ಕಳು ವಸ್ತುಗಳನ್ನು ಗುರ್ತಿಸುವ ತರ್ಕಬದ್ಧತೆಯನ್ನು ಅಭಿವೃದ್ಧಿಸುವಂತೆ, ಕಲ್ಪನಾ ಶಕ್ತಿಯನ್ನು ತಮ್ಮ ಅನುಭವಗಳ ಜೊತೆ ಹೊಂದಿಸುವಂತೆ ಇರಬೇಕು.
ಉದಾಹರಣೆಗೆ, ಚಿತ್ರದ ಮೇಲಿನ ಪ್ರಶ್ನೆಗಳು ಹೀಗಿದ್ದರೆ ಸಂಭಾಷಣೆ ಮುಂದುವರಿಸಬಹುದು.

ಮರದ ಅಡಿಯಲ್ಲಿ ಏನೆಲ್ಲಾ ಇಡಲಾಗಿದೆ? ಶೋಧಿಸಿರಿ

ಬಾವಿಯ ಬಳಿನಿಂತಿರುವ ಹುಡುಗಿಯು ಅಳುತ್ತಿರುವದೇಕೆ? (ತರ್ಕ ಉಪಯೋಗಿಸಿ)

ಗ್ರಾಮದ ಬಾವಿಯ ಬಳಿ ನಿಂತಿರುವ ಹೆಂಗಸರು ಏನನ್ನು ಮಾತನಾಡುತ್ತಿರಬಹುದು (ಊಹಿಸಿ)

ಈ ಹೆಂಗಸರು ಮನೆಗೆ ತಲುಪಿದ ಮೇಲೆ ಏನು ಮಾಡುವರು ? (ಭವಿಷ್ಯ ನುಡಿಯಿರಿ)

ನೀವು ಯಾವಾಗಲಾದರೂ ಗ್ರಾಮಕ್ಕೆ ಹೋಗಿದ್ದೀರಾ?

ಹೌದಾದರೆ, ಅಲ್ಲಿ ನೀವು ಏನೇನನ್ನು ನೋಡಿ ನೋಡಿದ್ದೀರಿ? (ಸಂಬಂಧಕಲ್ಪಿಸಿ)

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 7**

*1. ಚಿತ್ರವನ್ನು ತೋರಿಸಿ, ಮಕ್ಕಳನ್ನು ಮರದ ಕಳಗೆ ಇರುವ ವಸ್ತುಗಳು ಯಾವುವು? ಇದರಿಂದ ಯಾವ ಅವಕಾಶ ದೊರೆತಂತಾಯ್ತು?*

*ಎ) ಕಾರಣ ನೀಡುವಿಕೆ* *ಬಿ) ಶೋಧನೆ*
*ಸಿ) ಊಹಿಸುವಿಕೆ* *ಡಿ) ಸಂಬಂಧ ನಿರೂಪಣೆ*




*2. ಈ ಚಿತ್ರದ ಸಂದರ್ಭದಲ್ಲಿ, ಮಕ್ಕಳೊಡನೆ ಏನೇನನ್ನು ಚರ್ಚಿಸಬಹುದು? ಪ್ರಶ್ನೆಗಳನ್ನು ತಯಾರು ಮಾಡಿ, 3ನೇ ತರಗತಿ ವಿದ್ಯಾರ್ಥಿಗಳೊಡನೆ ಅಭ್ಯಾಸ ಮಾಡಿ, ನಿಮ್ಮ ಅನುಭವಗಳನ್ನು ಬರೆಯಿರಿ.*

.............................................................................................................................

.............................................................................................................................

.............................................................................................................................

Notes

### 4.4.3 ಕಥೆ ಹೇಳುವುದು / ಆಲಿಸುವುದು

ಪ್ರಾಥಮಿಕ ತರಗತಿಗಳಲ್ಲಿ ಕಥೆ ಹೇಳುವುದು ಮತ್ತು ಕೇಳುವುದರಿಂದ ಮಕ್ಕಳ ಭಾಷಾ ಕಲಿಕೆಯಲ್ಲಿ ಬಹಳ ಅನುಕೂಲವಾಗುವುದು. ಕಥೆ ಕೇಳುವುದು ಮಕ್ಕಳಿಗೆ ಆಸಕ್ತಿದಾಯಿಕ ಮತ್ತು ಅವರ ಸೃಜನ ಶೀಲತೆಯನ್ನು ಹೆಚ್ಚಿಸುವುದಾಗಿದೆ. ಮಕ್ಕಳು ತಾವು ಕೇಳಿದ ಕಥೆಗಳನ್ನು ಅದೇ ಕಥೆಯನ್ನು ಬೇರೆಯವರಿಗೆ ಹೇಳುವಾಗ ತಮ್ಮ ಇಚ್ಛೆಗನುಸಾರವಾಗಿ ರೂಪಿಸಿಕೊಳ್ಳುತ್ತಾರೆ.

ಇದರ ಮೂಲಕ ಮಕ್ಕಳ ಅನೇಕ ಪದಗಳನ್ನು ಅರ್ಥ ಮಾಡಿಕೊಳ್ಳುವರು ಮತ್ತು ಅನೇಕ ಘಟನೆಗಳನ್ನು ಅರಿತುಕೊಳ್ಳುವುದಲ್ಲದೆ ತಮ್ಮ ಕಲ್ಪನಾಶಕ್ತಿಯನ್ನು ಬೆಳೆಸಿಕೊಳ್ಳುವರು. ಕಥೆಗಳ ಮತ್ತೊಂದು ಲಾಭವೆಂದರೆ, ಮಕ್ಕಳ ಅಂದಾಜಿಸುವ ಶಕ್ತಿ ಹೆಚ್ಚುತ್ತದೆ. ಉದಾಹರಣೆಗೆ ಮಕ್ಕಳು ಕಥೆ ಕೇಳುವಾಗ ಮುಂದೆನಾಗುವುದೆಂದು ಕುತೂಹಲಭರಿತರಾಗಿದ್ದು, ಏನಾಗಬಹುದೆಂದು ಅವರ ಅರಿವಿಗೆ ತಕ್ಕಂತೆ ಊಹಿಸುತ್ತಾರೆ. ಅವರ ಊಹೆಗೆ ಅನುಗುಣವಾಗಿ ಕಥೆ ಮುಂದುವರಿದರೆ, ಅವರ ವಿಶ್ವಾಸವು ಹೆಚ್ಚಾಗಿ, ಅವರ ಅಂದಾಜು ಹೆಚ್ಚು ನಿಖರವಾಗುತ್ತದೆ. ಗಮನಿಸಬೇಕಾದ್ದು ಏನೆಂದರೆ, ಕಥೆಗಳು ಮಕ್ಕಳನ್ನು ಭವಿಷ್ಯದ ಜೀವನಕ್ಕಾಗಿ ತಯಾರು ಮಾಡುತ್ತವೆ. ಉದಾಹರಣೆಗೆ, ಮೊಲ ಮತ್ತು ಸಿಂಹದ ಕಥೆಯಿಂದ ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಮಾನಸಿಕ ಸಿದ್ಧತೆಯನ್ನು ರೂಪಿಸುತ್ತದೆ. ಕಥೆ ಹೇಳುವಾಗ, ಅವುಗಳಲ್ಲಿ ನಮ್ಮ ಜೀವನದ ಅನುಭವಗಳನ್ನು ಆಳವಡಿಸುತ್ತೇವೆ. ಕೆಲವೊಮ್ಮೆ ಕಥೆ ಹೇಳುವವರು, ಕೆಲವು ಅಂಶಗಳನ್ನು ಬಹಳ ಮಹತ್ವದ್ದೆಂದು ಭಾವಿಸಿದರೆ, ಆ ಅಂಶಗಳನ್ನು (ಕಥೆಯ) ಅತಿಶಯವಾಗಿ ಒತ್ತಿ ಹೇಳುತ್ತಾರೆ. ಹೀಗೆ ಮಾಡುವಾಗ ಜೀವನದ ಘಟನೆಗಳನ್ನು ಪತ್ರಗಳನ್ನು ಕೇಂದ್ರಬಿಂದುವಾಗಿರಿಸುತ್ತಾರೆ. ಮತ್ತು ಕೇಳುಗರ ಗಮನ ಸೆಳೆಯುತ್ತಾರೆ. ಅದು ಅಲ್ಲದೆ ಕಥೆಗಾರರ ಹೇಳುವ ಶೈಲಿಯ ಆಸಕ್ತಿಯನ್ನು ಹುಟ್ಟಿಸುತ್ತದೆ. ಅದೂ ಅಲ್ಲದೆ, ಕೆಲವು ಹೊಸ ಪದಗಳ ಅರ್ಥವನ್ನು ಮಕ್ಕಳು ಕಥೆಗಾರನ ಭಾವ ಅಭಿವ್ಯಕ್ತಿಯಿಂದ ಊಹಿಸಬಲ್ಲರು. ಇದರಿಂದ ಮಕ್ಕಳ ಶಬ್ಧ ಭಂಡಾರ, ಆಲಿಕೆ, ಅರಿವು ಮತ್ತು ಅಂದಾಜಿಸುವಿಕೆಯನ್ನು ಹೆಚ್ಚಿಸುವುದರಲ್ಲಿ ಅನುಕೂಲವಾಗುತ್ತದೆ.

ಕಥೆಯನ್ನು ಮಕ್ಕಳು ಕೇಳಿದ ನಂತರ, ಚರ್ಚಿಸುವುದು ಕಷ್ಟಕರವಾದದ್ದು, ಆದರೆ ಶಿಕ್ಷಕರು, ಉದ್ದೇಶಗಳಿಂದ ಸಿದ್ಧರಾಗಿದ್ದಾರೆ. ಈ ರೀತಿಯ ಚರ್ಚೆಯ ಉಪಯುಕ್ತ ಮಾಧ್ಯಮವಾಗಬಲ್ಲದು. ಕಥೆ ಹೇಳಿದ ನಂತರ, ಮಕ್ಕಳು ಆ ಕಥೆಯಿಂದ ಏನನ್ನು ಕಲಿತರು ಎಂದು ಪ್ರಶ್ನಿಸುವುದು ಶಿಕ್ಷಕರ ಹಕ್ಕು ಎಂದು ಅನೇಕ ಶಿಕ್ಷಕರು ಭಾವಿಸುತ್ತಾರೆ ಕಥೆಯ ಬಗ್ಗೆ ಸಂವಾದ ಪ್ರಾರಂಭಿಸಲು ಈ ಪ್ರಶ್ನೆ (ಏನು ಕಲಿತಿರಿ) ಕೇಳುವುದು ಸಮಂಜಸವಲ್ಲ.

ಮಕ್ಕಳಿಗೆ ಕಥೆ ಹೇಳುವುದು ಎಷ್ಟು ಮುಖ್ಯವೊ, ಅಷ್ಟೇ ಮುಖ್ಯವಾದದ್ದು, ಮಕ್ಕಳಿಂದ ಕಥೆ ಕೇಳುವುದಾಗಿದೆ. ಇದರಿಂದ ಮಕ್ಕಳಿಗೆ, ತಮ್ಮ ಅಭಿವ್ಯಕ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸಹಾಯಕವಾಗುವುದು. ಶಿಕ್ಷಕರು ಹೇಳಿದ ಕಥೆಯನ್ನು ಪುನರ್‌ಚ್ಚರಿಸುವಂತೆ ಮಕ್ಕಳನ್ನು ಕೇಳುವ ಬದಲಾಗಿ, ಮಕ್ಕಳು ತಮಗಿಷ್ಟವಾದ ಕಥೆಯನ್ನು ಹೇಳುವಂತೆ ತಿಳಿಸುವುದು. ಹೆಚ್ಚು ಲಾಭಕರವಾದದ್ದಾಗಿದೆ. ಮಕ್ಕಳು, ಕಥೆಯಲ್ಲಿನ ಪಾತ್ರಗಳು ಮತ್ತು ವ್ಯಕ್ತಿಗಳಿಗೆ ಪ್ರತಿಕ್ರಿಯಿಸುವಾಗ, ಅವರ ಅನುಭವಗಳನ್ನು ಪ್ರತಿಕ್ರಿಯೆಯಲ್ಲಿ ಸೇರಿಸುತ್ತಾರೆ. ತರಗತಿಯಲ್ಲಿನ ಪ್ರತಿ ವಿದ್ಯಾರ್ಥಿಗೂ ಮುಕ್ತವಾಗಿ ಕಥೆಯ ಬಗ್ಗೆ ಪ್ರತಿಕ್ರಿಯಿಸುವ ಮತ್ತು ಅವರ ಕಲ್ಪನೆಯಿಂದ ಅತಿಶಯವಾಗಿ ಹೇಳುವ ಅವಕಾಶ ಕೊಡಬೇಕು.

Notes

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 8**

1. *ಮಕ್ಕಳಿಗೆ ಕಥೆ ಹೇಳುವುದರ ಜೊತೆ ಜೊತೆಗೆ, ಇನ್ನಾವುದರ ಅವಶ್ಯಕತೆ ಇದೆ?*
   *ಎ) ಮಕ್ಕಳು ಕಥೆ ಓದುವಂತೆ ಮಾಡುವುದು*

   *ಬಿ) ಮಕ್ಕಳು ಕಥೆಯನ್ನು ಕಂಠ ಪಾಠಮಾಡುವುದು*

   *ಸಿ) ಕಥೆಯನ್ನು ಪುನರುಚ್ಚಿಸಿರುವಂತೆ ಹೇಳುವುದು*

   *ಡಿ) ಮಕ್ಕಳ ಕಥೆ ಕೇಳುವುದು*

2. *1 ಮತ್ತು 2ನೇ ತರಗತಿಯ ಮಕ್ಕಳೊಡನೆ ಮಾತನಾಡುತ್ತಾ, ಅವರು ಯಾವ ರೀತಿಯ ಕಥೆಗಳನ್ನು ಇಷ್ಟ ಪಡುತ್ತಾರೆ, ಎಂದು ಕೇಳಿರಿ ಹಾಗೆಯೆ, ಈ ಕಥೆಗಳ ಹೆಸರುಗಳನ್ನು ಕಪು ಹಲಗೆಯ ಮೇಲೆ ಒರೆಯುತ್ತಾ ಇರಿ. ನಂತರ, ಈ ಹೆಸರುಗಳನ್ನು ಉಪಯೋಗಿಸಿ, ಮಕ್ಕಳು ಕಥೆಗಳನ್ನು ರೂಪಿಸುವಂತೆ ತಿಳಿಸಿರಿ.*

   ..........................................................................................................................

   ..........................................................................................................................

   ..........................................................................................................................

3. *ಒಂದು ಕಥೆಯನ್ನು ರೂಪಿಸುವಾಗ, ಪ್ರತಿ ವಿದ್ಯಾರ್ಥಿಯೂ ಒಂದು ವಾಕ್ಯವನ್ನು ಹೇಳುವಂತೆ ತಿಳಿಸಿರಿ. ಈ ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತೀರಿ. ಈ ಕೆಳಕಂಡ ಸೂಚ್ಯಾಂಶಗಳನ್ನು ಆಧರಿಸಿ, ನಿಮ್ಮ ಅನುಭವವನ್ನು ಹಂಚಿಕೊಳ್ಳಿರಿ.*
   *1) ಕಥೆಯು ಆಧಾರಿತವಾಗಿರುವ ಪದಗಳು ಯಾವುವು*

   *2) ಮಕ್ಕಳಿಂದ ರೂಪಿತವಾದ ಕಥೆ ಏನು?*

   *3) ಈ ಚಟುವಟಿಕೆಯ ಸಮಯದಲ್ಲಿ ನಿಮ್ಮ (ಶಿಕ್ಷಕರ) ಪಾತ್ರವೇನು?*

   *4) ಚಟುವಟಿಕೆಯ ಸಮಯದಲ್ಲಿ ನೀವು ಎದುರಿಸಿದ ಕಠಿಣತೆಗಳು ಯಾವುವು?*

### 4.4.4 ನಾಟಕ, ರಂಗಭೂಮಿ, ಕಿರುನಾಟಕಗಲ ಮೂಲಕ ಭಾಷೆಯ ಅಭಿವೃದ್ಧಿ

ನಾಟಕಗಳು, ಮಕ್ಕಳಿಗೆ ಹೊಸತೇನೂ ಅಲ್ಲ. ಮಕ್ಕಳು ಸಿನಿಮಾ ಹಾಗೂ ಕಾರ್ಟೂನ್ ಪಾತ್ರಗಳನ್ನು ನಕಲು ಮಾಡುವುದನ್ನು ತಾಯಿಯಂತೆ – ತಂದೆಯಂತೆ ಗೊಂಬೆ ಮದುವೆಯಂತೆ ಶಾಲೆಯ ತರಗತಿಯ ಶಿಕ್ಷಕರಂತೆ ಕಂಡಿದ್ದೇವೆ. ಈ ರೀತಿಯಲ್ಲಿ ಮಕ್ಕಳು ನಾಟಕದಂತೆ, ಒಬ್ಬರನ್ನು ಅಣಕವಾಡುತ್ತಲೋ, ಅತಿಯಾಗಿ ಅಭಿನಿಯಸುತ್ತಲೋ ಇರುತ್ತಾರೆ. ಪ್ರತಿ ವಿದ್ಯಾರ್ಥಿಗೂ ಅಭಿನಯ ಕಲೆ ಇರುತ್ತದೆ. ಆದರೆ ತರಗತಿಯಲ್ಲಿ ದೊರಕುವುದಿಲ್ಲ ಏಕಂದರೆ, ನಾಟಕ ಕಿರುನಾಟಕ ಈ ಚಟುವಟಿಕೆಗಳನ್ನು ಶಾಲಾ ವಾರ್ಷಿಕೋತ್ಸವ, ಅಥವಾ ಇತರೆ ಸಮಾರಂಭಗಳಲ್ಲಿ ಯಾರಾದರೂ ಮುಖ್ಯ ಅಥಿತಿಗಳು ಶಾಲೆಗೆ ಭೇಟಿ ಕೊಟ್ಟಾಗ ಮಾತ್ರ ಮಾಡಲಾಗುತ್ತದೆ. ಈ ಸಂದರ್ಭಗಳಲ್ಲಿ ಸಂಭಾಷಣೆಯನ್ನು ಶಿಕ್ಷಕರೇ ಬರೆಯುತ್ತಾರೆ. ಕಾರಣವೆಂದರೆ ಅವರು ಪ್ರದರ್ಶನ ಕಾಲದಲ್ಲಿ ಯಾವುದೇ ಅಚಾತುರ್ಯ ನಡೆಯದಿರಲಿ ಎಂದು

**ಆಲಿಸುವುದು ಮತ್ತು ಮಾತನಾಡುವುದು**

Notes

ದಿನನಿತ್ಯದ ತರಗತಿ ಚಟುವಟಿಕೆಗಳಲ್ಲಿ ಅಭಿನಯ ನಾಟಕಗಳನ್ನು ಅಳವಡಿಸಿಕೊಳ್ಳುವುದು ಕಷ್ಟಕರ. ನಾಟಕವನ್ನು ಭಾಷಾ ಚಟುವಟಿಕೆಯಾಗಿ ಬಳಸಲು ,ಸ್ವಾತಂತ್ರ (ಮುಕ್ತತೆ) ಮತ್ತು ಆನಂದಕರ ಈ ಎರಡು ಗುಣಲಕ್ಷಣವನ್ನು ಒಳಪಡಿಸಿಕೊಳ್ಳಬೇಕಾಗುತ್ತದೆ. ತರಗತಿಯಲ್ಲಿ ನಾಟಕ ಚಟುವಟಿಕೆಗೆ, ಶಿಕ್ಷಕರಿಂದಾಗಲಿ, ಅಥವಾ ವಿದ್ಯಾರ್ಥಿಗಳಿಂದಾಗಲಿ ವಿಶೇಷ ಸಿದ್ಧತೆಬೇಕಾಗಿಲ್ಲ. ಶಿಕ್ಷಕರು ಮಕ್ಕಳನ್ನು ತಮ್ಮ ಅನುಭವವನ್ನು ಸ್ವಾಭಾವಿಕವಾಗಿ ಹಂಚಿಕೊಳ್ಳುವಂತೆ ಹುರಿದುಂಬಿಸದರೆ ಸಾಕಾಗುತ್ತದೆ. ಪ್ರಾಥಮಿಕ ತರಗತಿಗಳಲ್ಲಿ ಮಕ್ಕಳಿಗೆ ಪರಿಚಿತವಿರುವ ಕಾರ್ಟೂನ್, ಕಥೆಗಳನ್ನು ಅಭಿನಯಕ್ಕಾಗಿ ಆಯ್ದುಕೊಳ್ಳಬಹುದು ಉದಾಹರಣೆಗೆ ಯಾವುದಾದರೂ ಪ್ರಾಣಿ ಅದರ ಚಲನವಲನ ಕೂಗು ಇತ್ಯಾದಿ ಉಚ್ಚ ಪ್ರಾಥಮಿಕ ಹಂತದಲ್ಲಿ ಮಕ್ಕಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿಸಿ ಅವರೇ ವಿಷ (ನಾಟಕದ) ತೀರ್ಮಾನಿಸಲುಬಿಡಬಹುದು.
ಮಕ್ಕಳೇ ಸಂಭಾಷಣೆ ಬರೆದು ಅಭಿನಿಯಸಲು ಅವಕಾಶ ಕೊಡಬೇಕು. ಇದರ ಜೊತೆಗೆ ಮಕ್ಕಳು ಪಾರಂಪರಿಕ , ಪೌರಾಣಿಕ ಜಾನಪದ ನಾಟಕಗಳನ್ನು ಅಭನಿಯಿಸಲು ಪ್ರೋತ್ಸಾಹಿಸುವುದರಿಂದ ಅವರ ಸೃಜನಶೀಲತೆ ಹೆಚ್ಚುವುದಲ್ಲದೆ, ಸಾಂಸ್ಕೃತಿಕ ಪರಿಸರಕ್ಕೆ ಸಂಪರ್ಕ ಕಲ್ಪಿಸುವುದು.

## 4.4.5 ಸಹಪಾಠ್ಯ ಚಟುವಟಿಕೆಗಲು (ಕ್ರಿಯಾಕಲಾಪಗಳು)

ತರಗತಿಯಲ್ಲಿ ಮಕ್ಕಳಿಗೆ, ಆಲಿಸುವ ಮತ್ತು ಮಾತನಾಡುವ ಅವಕಾಶಗಳನ್ನು ಒದಗಿಸಲು, ಇನ್ನೂ ಅನೇಕ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಮಕ್ಕಳು ತಾವಾಗಿಯೇ ಚಿಂತನೆ ನಡೆಸಿ, ತಮ್ಮ ಚಿಂತನೆಗಳನ್ನು ತಮ್ಮದೆ ಶಬ್ದಗಳಲ್ಲಿ ತಿಳಿಸುವ ಅವಕಾಶ ಕಲ್ಪಿಸುವುದು ಬಹಳ ಮುಖ್ಯ. ಆಶು ಭಾಷಣ ಚಟುವಟಿಕೆಗಳು ಮಕ್ಕಳು ಆಕ್ಷಣದಲ್ಲಿ ಕೊಟ್ಟಿರುವ ವಿಷಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹೇಳುವುದು ಸವಾಲಾಗಿಯೂ, ಉತ್ಪತ್ತಿದಾಯಕವೂ ಆಗಿರುವುದು. ಈ ಚಟುವಟಿಕೆಗಾಗಿ ಆಸಕ್ತಿಕರ ಆನಂದದಾಯಕ, ವಿಷಯಗಳನ್ನು ಆರಿಸಿಕೊಳ್ಳುವುದರಿಂದ ಮಕ್ಕಳು ಆ ವಿಷಯಗಳ ಬಗ್ಗೆ ಮಾತನಾಡಲು ಕೇಳಲು ಬಹಳ ಸಂತೋಷಿಸುತ್ತಾರೆ. ಉದಾ ನನಗೆ ಅಲ್ಲಾದ್ದೀನ್‌ನ ಅದ್ಭುತ ದೀಪ ದೊರಕಿದರೆ, ನಾನೊಬ್ಬ ಮಾಂತ್ರಿಕನಾದರೆ ನಾನೊಬ್ಬ ವಿದೂಷಕನಾದರೆ ಇತ್ಯಾದಿ.

ಇನ್ನೊಂದು ಚುಟವಟಿಕೆ ಎಂದರೆ, ಚರ್ಚಾಸ್ಪರ್ಧೆ ಇದರಲ್ಲಿ ಮಕ್ಕಳು, ಯಾವುದೇ ವಿಷಯದ ಪರವಾಗಿ ಅಥವಾ ವಿರೋಧವಾಗಿ ಅವರ ದೃಷ್ಟಿಕೋನವನ್ನು ತಿಳಿಸುವುದಲ್ಲದೆ, ವಿರೋಧಿಯ ವಾದವನ್ನು ಬಲವಾಗಿ ಖಂಡಿಸಬೇಕು. ಹೇಗೆಂದರೆ, ಶ್ರೋತೃಗಳನ್ನು ಪೇಕ್ಷಿಕರನ್ನು ಪ್ರಭಾವ ಶಾಲಿಯಾಗಿ ಒಪ್ಪಿಸುವಂತೆ ಇರಬೇಕು ಉದಾ ಕೈಗಾರಿಕೆಗಳು ವರವೋ – ಶಾಪವೋ ದಿಢೀರ್ ಆಹಾರ – ಆರೋಗ್ ಈ ರೀತಿಯ ಚಟುವಟಿಕೆಗಳನ್ನು ಎಲ್ಲಾ ಹಂತಗಳಲ್ಲಿ ನಡೆಸಬಹುದು. ಈ ಚಟುವಟಿಕೆಗಳಿಂದ ಮಕ್ಕಳು ತಮ್ಮ ಯೋಚನೆಗಳು ಮತ್ತು ಮಾತಿನ ನಡುವೆ, ಉತ್ತಮ ಹೊಂದಾಣಿಕೆ ಮಾಡಬಲ್ಲರು. ಈ ಚಟುವಟಿಕೆಗಳು ವ್ಯವಸ್ಥಿತವಾಗಿ, ಮಕ್ಕಳಲ್ಲಿ ಅವರ ಅನುಭವಗಳಲ್ಲಿ ತರ್ಕಬದ್ದತೆಯನ್ನು ರೂಪಿಸುವುದಲ್ಲದೆ, ಅವರು ಪರಿಣಾಮಕಾರಿ ವಾಗ್ಮಿಗಳು ಸಮರ್ಥ ಕೇಳುಗರಾಗುತ್ತಾರೆ.

**ನಿಮ್ಮ ಪ್ರಗತಿ ಪರೀಕಿಷಿಕೊಳ್ಳಿರಿ – 9**

*1. ಒಂದು ಕಿರು ನಾಟಕದಲ್ಲಿ ಭಾಗವಹಿಸಿರುವ ಮಕ್ಕಳು, ನಕಲು ಮಾಡುತ್ತಾರೆ, ಅತಿಶಯವಾಗಿ ಅಭಿನಯಿಸುತ್ತಾರೆ ಮತ್ತು ನೆಪ ಹೇಳುತ್ತಾರೆ. (ಸಬೂಬು ಹೇಳುತ್ತಾರೆ) ಇದರಿಂದ ಮಕ್ಕಳಲ್ಲಿನ ಯಾವ ಕೌಶಲ್ಯಗಳು ಸಾಬೀತಾಗುತ್ತವೆ.*

*ಎ) ಮಾತನಾಡುವಿಕೆ*

*ಬಿ) ಸಂಭಾಷಿಸುವಿಕೆ*

*ಸಿ) ನೆನಪಿನ ಶಕ್ತಿ*

*ಡಿ) ಅಭಿನಯಕಲೆ*

Notes

*2. ಯಾವುದಾದರೂ ಸಮ್ಮತವಾದ ವಿಷಯ ಆರಿಸಿಕೊಂಡು 7ನೇ ತರಗತಿಯಲ್ಲಿ ಒಂದು ಆಶು ಚಟುವಟಿಕೆ ನಡೆಸಿರಿ. ತಮ್ಮ ಅನುಭವಗಳನ್ನು ಬರೆಯಿರಿ.*

..........................................................................................................................

..........................................................................................................................

..........................................................................................................................

## 4.5 ನಿರರ್ಗಳತೆ – ನಿಖರತೆ

ಭಾಷಾ ಪ್ರಾವಿಣ್ಯದಲ್ಲಿ ಒಳಗೊಂಡಿರುವ ಎರಡು ಅಂಶಗಳೆಂದರೆ ನಿಖರತೆ ಮತ್ತು ನಿರರ್ಗಳತೆ ಶಿಕ್ಷಕರಾಗಿ, ಮಕ್ಕಳು ಭಾಷೆಯನ್ನು ಕಲಿಯುವುದರಲ್ಲಿ ಈ ಎರಡು ಅಂಶಗಳ ಪಾತ್ರವೇನು? ಮಕ್ಕಳಿಗೆ ಭಾಷೆಯನ್ನು ಭೋಧಿಸುವಾಗ ಗಮನ ಕೇಂದ್ರಿಕರಿಸಬೇಕಾದದ್ದು ಏನು? ಈ ವಿಷಯ ಬಗ್ಗೆ ಚಿಂತನೆ ಬಹಳ ಮುಖ್ಯ. ಕಲಿಕಾರ್ಥಿಯು ಸೂಕ್ತ, ಸರಿಯಾದ ವ್ಯಾಕರಣ ಶುದ್ಧ, ಪದಗಳನ್ನು ಉಪಯೋಗಿಸಿಕೊಂಡು ಸ್ಪಷ್ಟ ಉಚ್ಚಾರಣೆ ಸಹಿತ ವಾಕ್ಯವನ್ನು ಹೇಳುವುದನ್ನೆ, ನಿಖರತೆ ಎನ್ನುತ್ತೇವೆ. ಒಬ್ಬ ವಯಸ್ಕನ ನಿಖರತೆ ಮತ್ತು ಪ್ರಾಥಮಿಕ ಹಂತದ ವಿದ್ಯಾರ್ಥಿಯ ನಿಖರತೆಗಳಲ್ಲಿ ವ್ಯತ್ಯಾಸವಿದೆ. ಪಠ್ಯಭಾಗ ಇದರಲ್ಲಿ ನೋಡಿರುವಂತೆ, ಮಕ್ಕಳು ಪ್ರತಿ ಹಂತದಲ್ಲೂ ತಮ್ಮ ತಪ್ಪುಗಳಿಂದಲೇ ಭಾಷೆಯನ್ನು ಕಲಿಯುತ್ತಾರೆ. ಮಕ್ಕಳ ತಪ್ಪುಗಳು ಅವರ ಭಾಷಾ ಕಲಿಕೆಗೆ ಸಹಾಯಕವಾಗುತ್ತವೆ. ಜೊತೆ ಜೊತೆಗೆ ತಪ್ಪು ಮಾಡವಾಗಲೂ ಅವರು (ಮಕ್ಕಳು) ಭಾಷಾ ನಿಯಮ ಪಾಲಿಸುತ್ತಾರೆ. ಉದಾಹರಣೆಗೆ ಮೂರು ವರ್ಷ ವಯಸ್ಸಿನ ಮಗು

*"ಮಮ್ಮಿ ಕಾರು ಬೇಕು ಇದೆ"*

*"ನೀರು ಬೇಕು ಇದೆ"*

ಎಂದಾಗ ಮಗುವಿಗೆ ಎಲ್ಲಾ ವಾಕ್ಯವು ಇದೆ ಪದದಿಂದ ಕೊನೆಗೊಳ್ಳಬೇಕು ಎಂದು ತಿಳಿದಿದೆ. ಅದಕ್ಕಾಗಿ ಬೇಕು ನಂತರ ಇದೆ ಪದವನ್ನು ಉಪಯೋಗಿಸುತ್ತದೆ.

ಕಲಿಕಾ ಪ್ರಾವಿಣ್ಯ ರೀತ್ಯಾ ನಿರರ್ಗಳತೆ ಎಂದರೆ ಮಗವು ತಂತಾನೆ, ಮಾತನಾಡುವು ಮೂಲಕ ಓದುವ ಮತ್ತು ಬರೆಯುವ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯ, ಇಲ್ಲಿ ವ್ಯಾಕರಣದ ತಪ್ಪಿಗಿಂತ ಅರ್ಥ ಮತ್ತು ಸಂದರ್ಭ ಸನ್ನಿವೇಶಗಳಿಗೆ ಒತ್ತುಕೊಡಲಾಗುತ್ತದೆ.

ಇಂದು, ಬಾಷಾ ಶಿಕ್ಷಕರು ಅತಿದೊಡ್ಡ ಗೊಂದಲದಲ್ಲಿದ್ದಾರೆ ಈ ಎರಡು ಅಂಶಗಳ (ನಿರರ್ಗಳತೆ – ನಿಖರತೆ) ಲ್ಲಿ ಯಾವುದನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಬೇಕು? ನಮ್ಮ ಮುಂದೆ ಎರಡು ಪರಿಪೇಕ್ಷೆಗಳಿವೆ. ಪಾರಂಪರಿಕ ಶಿಕ್ಷಕರು ನಿಖರತೆಗೆ ಹೆಚ್ಚು ಮಹತ್ವವನ್ನು ಭಾಷೆ ಭೋದನೆಯಲ್ಲಿ ನೀಡುತ್ತಾರೆ. ಇವರು ಮಕ್ಕಳನ್ನು ವ್ಯಾಕರಣ ಶುದ್ಧವಾದ ರೀತಿಯಲ್ಲಿ ಓದಲು, ಬರೆಯಲು ಬಲವಂತಮಾಡುತ್ತಾರೆ. ಇದಕ್ಕಾಗಿ ಇವರು ಮಕ್ಕಳಿಗೆ ಅನೇಕ ರೀತಿಯಾದ ಗುಣಮಾಪನ ಪರೀಕ್ಷೆ ನೀಡುತ್ತಾರೆ. ಬಹುತೇಕ ತರಗತಿಗಳಲ್ಲಿ ಮಕ್ಕಳು ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಸುಧಾರಿಸುವ ಅವಕಾಶ ಕೊಡಲಾಗುವುದೇ ಇಲ್ಲ. ಪರೀಕ್ಷಾ ಕೇಂದ್ರಿತ ಮಾರ್ಗೋಪಾಯವು ಈ ರೀತಿಯ ನಿಖರತೆ ಆಧಾರಿತ ಪರಿಪೇಕ್ಷೆ ಯಿಂದ ಪ್ರಭಾವಿತವಾಗಿದೆ.

Notes

ಇನ್ನೊಂದು ಗುಂಪಿನ ಶಿಕ್ಷಕರು, ಭಾಷೆಯು, ಭಾವನೆ ಮತ್ತು ಅನುಭವಗಳನ್ನು ಅಭಿವ್ಯಕ್ತಿಪಡಿಸುವ ಮಾಧ್ಯಮವೆಂದು ನಂಬುತ್ತಾರೆ ಅವರು ನಿರರ್ಗಳತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವರು. ವ್ಯಾಕರಣಕ್ಕೆ ಬದಲಾಗಿ ಅವರು, ಅರ್ಥ ಮತ್ತು ಸಂದರ್ಭವನ್ನು ಅರಿಯುವದಕ್ಕೆ ಮಹತ್ವ ಕೊಡುವರು. ಕೇಳುಗರು, ಸರಿಯಾಗಿ ಅರಿಯುವಂತೆ ಮಕ್ಕಳು ನಿರರ್ಗಳವಾಗಿ ಅಭಿವ್ಯಕ್ತಿಪಡಿಸುವುದಕ್ಕೆ ಒತ್ತು ಕೊಡುತ್ತಾರೆ. ಇವರು, ಮಕ್ಕಳು ಪ್ರಾರಂಭದಿಂದಲೇ ಭಾಷೆಯನ್ನು ಹೆಚ್ಚು ಬಳಸುವುದರಿಂದ, ಅವರ ನಿರರ್ಗಳತೆಯ ಮಟ್ಟವೂ ಹೆಚ್ಚುತ್ತದೆ ಎಂದು ನಂಬುತ್ತಾರೆ.

ಈ ಎರಡೂ ಅಂಶಗಳ ಪರಿಪೇಕ್ಷೆಯನ್ನು ನೋಡಿದ ಮೇಲೆ ಇವರೆಡೂ ತಮ್ಮ ತಮ್ಮ ರೀತಿಯಲ್ಲಿ ಸರಿ ಎಂದು ತೋರುತ್ತದೆ. ಭಾಷಾ ಕಲಿಕೆಯ ಪೂರ್ಣ ಪರಿಪೇಕ್ಷೆಯಲ್ಲಿ, ಮಕ್ಕಳು ಇವರೆಡೂ ಅಂಶಗಳಲ್ಲಿ ನಿಷ್ಣಾತರಾಗಿರಬೇಕು. 10ನೇ ತರಗತಿಯನ್ನು ತಲುಪುವ ಹೊತ್ತಿಗೆ ಮಕ್ಕಳು ಭಾಷೆಯನ್ನು ನಿರರ್ಗಳವಾಗಿ ಉಪಯೋಗಿಸಲು ಮೊದಲಾಗುತ್ತಾರೆ. ಆಗ ನಾವು ನಿಖರತೆಯ ಬಗ್ಗೆ ಒತ್ತುಕೊಟ್ಟು ಗಮನ ಹರಿಸಬೇಕು. ಏಕೆಂದರೆ ಸೂಕ್ತ ಸಮಯದಲ್ಲಿ ಸೂಕ್ತವಾದ ಸಹಾಯವು ಮಕ್ಕಳ ಭಾಷಾ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 10

1. 'ನನಗೆ ಕಾರು ಬೇಕು' ಈ ವಾಕ್ಯದಲ್ಲಿ 'ಬೇಕು' ಎನ್ನುವುದು
   ಅ) ಸಹಾಯಕ ಕ್ರಿಯಾಪದ
   
   ಆ) ವಿಶೇಷಣ
   
   ಇ) ನಾಮಪದ
   
   ಈ) ಮುಖ್ಯ ಕ್ರಿಯಾಪದ

2. ನಿಖರತೆ ಮತ್ತು ನಿರರ್ಗಳತೆಯನ್ನು ನಿಮ್ಮ ಶಬ್ದಗಳಲ್ಲಿ ವಿವರಿಸಿರಿ
   ................................................................................................................
   ................................................................................................................
   ................................................................................................................

3. ನಿಮ್ಮ ಅಭಿಪ್ರಾಯದಲ್ಲಿ ನಿಖರತೆ ಮತ್ತು ನಿರರ್ಗಳತೆಗಳಲ್ಲಿ, ಭಾಷಾ ಕಲಿಕೆಯಲ್ಲಿ, ಯಾವುದು ಹೆಚ್ಚು ಅರ್ಥಪೂರ್ಣವಾದದ್ದು.
   ................................................................................................................
   ................................................................................................................
   ................................................................................................................

Notes

## 4.6 ಕ್ರೂಢೀಕರಿಸೋಣ

ಈ ಪಠ್ಯಭಾಗದಲ್ಲಿ ಆಲಿಸುವುದು ಮತ್ತು ಮಾತನಾಡುವುದು ಕೇವಲ ಕೇಳುವ ಹೇಳುವ ಯಾಂತ್ರಿಕ ಕ್ರಿಯೆಗಳಾಗಿರದೆ, ಮಹತ್ವಪೂರ್ಣ ಪರಿಕಲ್ಪನಾ, ಪ್ರಕ್ರಿಯೆಗಳನ್ನೊಳಗೊಂಡಿವೆ. ಮಕ್ಕಳು ತಮ್ಮ ಮಾತೃ ಭಾಷೆಯಲ್ಲಿ ತಂತಾವೆ ಪರಿಣಿತರಾಗುತ್ತಾರೆ. ಆದರೆ ಶಾಲೆಯ ಭಾಷೆಯಲ್ಲಿ ಆ ರೀತಿಯ ಪರಿಣಿತಿಯ ತಲುಪಲು ವಿಶೇಷ ಪರಿಶ್ರಮ ಅಗತ್ಯ ಎಂಬುದನ್ನು ಮನಗಂಡಿದ್ದೇವೆ. ಈ ದಿಶೆಯಲ್ಲಿ, ತರಗತಿಯಲ್ಲಿ, ಮಕ್ಕಳಿಗೆ ಹೆಚ್ಚು ಮಾತನಾಡುವ ಅವಕಾಶ ಕಲ್ಪಿಸುದಾಗಿದೆ. ಈ ರೀತಿಯ ಅವಕಾಶವು ಕಲಿಕೆಗೆ ವಿಶಿಷ್ಟ ಮಾರ್ಗವಾಗಿದ್ದು, ಮಕ್ಕಳ ಮೇಲೆ ಗಹನವಾದ ಛಾಪನ್ನು, ಅವರ ಸಾಮಾಜಿಕ ನಡವಳಿಕೆ ಮತ್ತು ವ್ಯಕ್ತಿತ್ವದ ಮೇಲೆ ಮೂಡಿಸುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಅತ್ಯಂತ ಮಹತ್ವ ಪಾತ್ರವಹಿಸುವುದು ಬಹಳ ಅವಶ್ಯ. ಶಿಕ್ಷಕರು ಮಕ್ಕಳಿಗೆ ವಿಪುಲ ಅವಕಾಶ ಕಲ್ಪಿಸುವುದರಿಂದ ಮತ್ತು ಪ್ರೋತ್ಸಾಹಿಸುವುದರಿಂದ , ಮಕ್ಕಳು ನಿರ್ಭಾದಿತ ರೀತಿಯಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಈ ನಡುವೆ ಮಕ್ಕಳ ಭಾಷಾ ಕಲಿಕೆಯಲ್ಲಿ ನಿರರ್ಗಳತೆಯು, ನಿಖರತೆಗಿಂತ ಆದ್ಯತೆ ಹೊಂದಿದೆ ಎಂದು ತಿಳಿದಾಂತಾಗಿದೆ.

## 4.7 ಹೆಚ್ಚಿನ ಓದಿಗೆ ಸಲಹೆ

ಕರ್ನಸ್ಟ್ರಕ್ಷ ಆಫ್ ನಾಲೆಡ್ಜ್ , ಉದಯಪುರ್ ವಿದ್ಯಾ ಭವನ್ ಸಂಸ್ಥೆ, ಅಗ್ನಿಹೊತ್ರಿ, ಆರ್.ಕೆ ಮತ್ತು ಬಾಗ್ಗಿ ಟೀಸ್ಟಾ (2007)

ಒಚ್ಚೊಂಕಿ ಭಾಷಾ ಸೀಖನೆಕಿ ಕ್ಷಮತಾ ಭಾಗ 1–2 ಅಗ್ನಿ ಹೊತ್ರಿ ಆರ್.ಕೆ. (1999) ಶೈಕ್ಷಿಕ ಸಂದರ್ಭ ಭೂಪಾಲ್ ಏಕಲವ್ಯ .

ಕುಮಾರ್ ಕೃಷ್ಣ (1996) ಒಚ್ಜೊಂಕಿ ಭಾಷಾ ಔರ್ ಅಧ್ಯಾಪಕ್, ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ

ರಿಜಡ್ಸ್ ಜಾಕ್ ಸಿ (2008) ಟೀಚಿಂಗ್ ಲಿಸಲಿಂಗ್ ಅಂಡ್ ಸ್ಪೀಕಿಂಗ್ : ಫ್ರಮ್ ಥಿಯರಿ ಮ ಪ್ರಾಕ್ಟೀಸ್ ನ್ಯೂಯಾರ್ಕ್, ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್.

## 4.8 ಪಠ್ಯಾಂತ ಅಭ್ಯಾಸಗಳು

1. ಕಥೆಗಳಿಂದ ಮಕ್ಕಳಲ್ಲಿ ಯಾವ ದಕ್ಷತೆಗಳನ್ನು ಅಭಿವೃದ್ಧಿಪಡಿಸಬಹುದು.
2. ಮಕ್ಕಳರು ತರಗತಿಯಲ್ಲಿ ಮಾತನಾಡಲು ಪ್ರಾರಂಭಿಸಿದ ತಕ್ಷಣವೇ, ಅವರನ್ನು ತಡೆಯಲಾಗುತ್ತದೆ. ಈ ಮನೋಭಾವ (ಶಿಕ್ಷಕರ) ವನ್ನು ನೀವು ಸರಿ ಎನ್ನುವಿರಾ? ನಿಮ್ಮ ದೃಷ್ಟಿ ಕೋನವನ್ನು ಪ್ರಸ್ತುಪಡಿಸಿ.
3. ಮಕ್ಕಳ ಆಲಿಸುವ ಮತ್ತು ಹೇಳುವ ದಕ್ಷತೆಯನ್ನು ಅಭಿವೃದ್ಧಿ ಪಡಿಸುವಂತೆ ಪ್ರಚೋದಿಸುವಂತೆ, ಮಕ್ಕಳು ಹೆಚ್ಚು ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಇರುವ ಒಂದು ಕಥೆಯನ್ನು ರೂಪಿಸಿರಿ (ಬರೆಯಿರಿ)
4. ಮಕ್ಕಳು ಚರ್ಚೆಯಲ್ಲಿ ಬಾಗವಹಿಸುವಂತೆ ಪ್ರೋತ್ಸಾಹಿಸಲು ನಿಮಗೆ ಅಚ್ಚು ಮೆಚ್ಚಾದ ಮಾರ್ಗ ಯಾವುದು? ಮತ್ತು ಏಕೆ? ಉದಾಹರಣೆಯೊಂದಿಗೆ ನಿರೂಪಿಸಿ.
5. “ಆಲಿಸುವುದು” ಇದರಲ್ಲಿ ನಿಜವಾಗಿಯೂ ಅಡಕವಾಗಿರುವುದೇನು?

6. ಕೆಲವು ಮಕ್ಕಳು ತರಗತಿಯಲ್ಲಿ, ಚರ್ಚೆ, ಸಂವಾದದಲ್ಲಿ ಭಾಗವಹಿಸುವುದೇ ಇಲ್ಲ. ಆ ಮಕ್ಕಳನ್ನು, ತರಗತಿಯಲ್ಲಿ ಚರ್ಚೆಯಲ್ಲಿ, ಸಂವಾದದಲ್ಲಿ ತೊಡಗುವಂತೆ ಮಾಡಲು ನಿಮ್ಮ ಕಾರ್ಯ ತಂತ್ರಗಳೇನು? ಯಾವುದಾದರೂ ಎರಡು ತಂತ್ರಗಳನ್ನು ವಿಸ್ತಾರವಾಗಿ ತಿಳಿಸಿರಿ.

7. ಮಕ್ಕಳು ಕವಿತೆಯನ್ನು ಮುಂದುವರಿಸಿ ರಚಿಸುವಂತೆ ಆಸಾಲುಗಳ ಒಂದು ಕವಿತೆ ಕಂಡುಕೊಳ್ಳಿರಿ. ಈ ಅಭ್ಯಾಸವನ್ನು ತರಗತಿಯಲ್ಲಿ ಅಭ್ಯಾಸಕ್ಕಾಗಿ ಕೊಡಿರಿ.

8. ಮನೆ ಭಾಷೆ ಮತ್ತು ಶಾಲಾ ಭಾಷೆಗಳನ್ನು, ಕೇಳುವುದು ಮತ್ತು ಅರಿಯುವುದರ ಮಧ್ಯೆ ವ್ಯತ್ಯಾಸಗಳು ಏಕಿವೆ?

9. ತರಗತಿಯಲ್ಲಿ ಕಥೆ ಹೇಳುವಾಗ, ಮಕ್ಕಳು ಉಚ್ಛಾರಣೆಯಲ್ಲಿ ತಪ್ಪು ಅಥವಾ ತಡವರಿಸಿದರೆ, ಮಕ್ಕಳನ್ನು ಸುಧಾರಿಸಲು ನಿಮ್ಮ ಯೋಜನೆಗಳೇನು?

10. ಭಾಷಾ ಬೋಧನೆಯ ಸರಣಿಯಲ್ಲಿ, ಯಾವ ಹಂತದಲ್ಲಿ ನಿಖರತೆಗೆ ಆದ್ಯತೆ ಮತ್ತು ಯಾವ ಹಂತದಲ್ಲಿ ನಿರರ್ಗಳತೆಗೆ ಆದ್ಯತೆ ನೀಡಬೇಕು ಮತ್ತು ಏಕೆ?

## ಚುಟವಟಿಕೆ – ಕ್ರಿಯಾ ಕಲಾಪ

- ಸಂಭಾಷಣೆಯಲ್ಲಿ ತೊಡಗಿರುವ ಮಕ್ಕಳನ್ನು ಗಮನಿಸಿರಿ. ಮಕ್ಕಳು ಆದಷ್ಟೂ ಸ್ವಾಭಾವಿಕವಾಗಿ ಮಾತನಾಡಲು ಬಿಡಿ ಅವರು ಏನೇನನ್ನು ಮಾತನಾಡುವರೊ, ಗಮನಿಸಿರಿ. ಅವರ ಸಂಭಾಷಣೆಯನ್ನು ನೀವು ತರಗತಿಯಲ್ಲಿ ಹೇಗೆ ಉಪಯೋಗಿಸಿಕೊಳ್ಳುವಿರಿ?

- 3 ರಿಂದ 5ನೇ ತರಗತಿಯ ವರೆಗಿನ ಮಕ್ಕಳನ್ನು ಒಂದು ಕಥೆಯನ್ನು ಕಿರು ನಾಟಕದ ರೂಪದಲ್ಲಿ ಪ್ರಸ್ತುತ ಪಡಿಸುವಂತೆ ಮಾಡಿರಿ, ಮಕ್ಕಳೆ ಸಂಭಾಷಣೆಯನ್ನು ಬರೆಯಲು ಅನುಕೂಲ ಮಾಡಿಕೊಡಿ, ನಂತರ ಅಭಿನಯಿಸುವಂತೆ ಹೇಳಿರಿ. ನಿಮ್ಮ ಅನುಭವಗಳನ್ನು ವಿವರಿಸಿ.

Notes

# ಪಠ್ಯಭಾಗ 5 ಓದುವಿಕೆ – ಪಾಠನ ಮಾಡುವುದು ವಾಚನ ಮಾಡುವುದು

## ವಿನ್ಯಾಸ

*5.0 ಪ್ರಸ್ತಾವನೆ – ಪರಿಚಯ*

*5.1 ಕಲಿಕಾ ಉದ್ದೇಶಗಳು*

*5.2 ಓದುವುದೆಮದರೆ – ಪಠಿಸುವುದೆಂದರೆ ಏನರ್ಥ?*

*5.3 ಓದಬಲ್ಲವುದು – ಏಕೆ ಮುಖ್ಯ? ಓದಬಲ್ಲವುದು ಏಕೆ ಪ್ರಾಮುಖ್ಯವಾಗಿದೆ?*

*5.4 ಹೇಗೆ ಓದುವುದು ಎಂಬುದನ್ನು ಭೋದಿಸುವ ವಿಧಾನಗಳು ಮತ್ತು ತಂತ್ರಗಳು*

*5.4.1 ಹೇಗೆ ಓದುವುದು ಎಂಬುದನ್ನು ಭೋದಿಸುವ ಪ್ರಸ್ತುತ – ವರ್ತಮಾನ ವಿಧಾನಗಳು ಮತ್ತು ನ್ಯೂನತೆಗಳು.*

*5.4.2 ಓದುವುದನ್ನು ಕಲಿಯಲು ಅನುಕೂಲಕಾರಕಗಳು*

*5.4.3 ಓದುವುದನ್ನು ಕಲಿಸಲು ನಾವೇನು ಮಾಡಬಹುದು?*

*5.4.4 ಕೆಲವು ಚಟುವಟಿಕೆಗಳು – ಕ್ರಿಯಾ ಕಲಾಪಗಳು*

*5.5 ಓದುವುದು ಮತ್ತು ಬರೆಯುವುದು, ಇವುಗಳ ಪರಸ್ಪರ ಸಂಬಂಧಗಳು*

*5.6 ಕ್ರೂಢೀಕರಿಸೋಣ*

*5.7 ಹೆಚ್ಚಿನ ಓದಿಗೆ ಸಲಹೆಗಳು*

*5.8 ಪಠ್ಯಾಂತ ಅಭ್ಯಾಸಗಳು*

## 5.0 ಪ್ರಸ್ತಾವನೆ – ಪರಿಚಯ

ಈ ಪಠ್ಯಭಾಗದಲ್ಲಿ ನಾವು ಓದುವುದು ಎಂಬುದರ ಅರ್ಥವೇನು, ಎಂದುಅರಿಯುವ ಪ್ರಯತ್ನ ಮಾಡೋಣ. ಓದುವುದು ಹೇಗೆ ಎಂದು ಅರಿತಿರುವ ವ್ಯಕ್ತಿಯು ಪಠ್ಯವಸ್ತುವನ್ನು ಓದುವ ಪ್ರಕ್ರಿಯೆಯಲ್ಲಿ ಏನು ಮಾಡುವನು? ಎಂಬುದನ್ನು ಅರಿಯಲು ಪ್ರಯತ್ನಿಸೋಣ. ಓದುವುದರಲ್ಲಿ ಏನೇನು ಅಡಗಿದೆ? ಓದುವುದನ್ನು ಕಲಿಯುವ ಅವಶ್ಯಕತೆ ಏನು ಮತ್ತು ಓದುವ ಮತ್ತು ಬರೆಯುವುದರ ಮಧ್ಯದ ಸಂಬಂಧದ ಚಿಂತಿಸಿ ನಡೆಸೋಣ, ಚರ್ಚಿಸೋಣ, ಪ್ರಾಥಮಿಕ ಶಾಲಾ ಹಂತದಲ್ಲಿ, ಪ್ರಮುಖ ಉದ್ದೇಶವು ಮಕ್ಕಳು ಓದುವುದನ್ನು ಕಲಿಯುವುದಾದ್ದರಿಂದ, ಮಕ್ಕಳು ಓದುವ ಅವಕಾಶಗಳನ್ನು ಹೆಚ್ಚಿಸುವುದು ಪ್ರಮುಖವಾಗಿದೆ.

ಈ ಪಠ್ಯಭಾಗದಲ್ಲಿ, ಓದಲು ಕಲಿಯುವ ಪ್ರಕ್ರಿಯೆಯನ್ನು ಯಾವ ರೀತಿ ಆಸಕ್ತಕರವಾಗಿಸಬಹುದು ಮತ್ತು ಈ ದಿಶೆಯಲ್ಲಿ (ಓದುವ) ಪಠ್ಯ ವಸ್ತುಗಳ ಪಾತ್ರ ಏನು ಎಂಬುದನ್ನು ವಿಚಾರ ಮಾಡೋಣ. ಓದುವುದನ್ನು ಕಲಿಯಲು, ಕೆಲವೂ ಪೂರ್ವ ನಿರ್ಧಾರಿತ ಹಂತಗಳಿರಲು ಸಾಧ್ಯವೇ? ಎಂಬುದರ ಬಗ್ಗೆ ಪ್ರಶ್ನೆಯನ್ನು ಚರ್ಚಿಸೋಣ. ಮಕ್ಕಳು ಓದುವುದನ್ನು ರೇಖಾಂಶ (ಹಂತ ಹಂತಗಳಲ್ಲಿ) ರೀತಿಯಲ್ಲಿ ಅಥವಾ ಪೂರ್ಣಾರ್ಥ ರೀತಿ ಕಲಿಯುವರೋ?

Notes

## 5.1 ಕಲಿಕಾ ಉದ್ದೇಶಗಳು

ಈ ಪಠ್ಯಭಾಗದ ಅಧ್ಯಯನದ ನಂತರ, ನೀವು

- ಓದುವಿಕೆಯ ವಿಶಾಲ ಅರ್ಥವನ್ನು ಅರಿಯಬಲ್ಲಿರಿ
- ಮಕ್ಕಳು ಏಕೆ ಓದಲಾರರು ಎಂಬುದರ ಕಾರಣಗಳನ್ನು ಅರಿಯಬಲ್ಲಿರಿ.
- ಓದುವುದು ಹೇಗೆ ಎಂಬುದನ್ನು ಕಲಿಸುವ ವಿಧಾನಗಳ ವಿಶ್ಲೇಷಣೆ ಮಾಡಬಲ್ಲರಿ.
- ಭಾಷೆಯನ್ನು ಕಲಿಯುವುದು, ಪೂರ್ಣಾರ್ಥದಲ್ಲಿ ಸಾಧ್ಯ, ತುಣುಖು, ತುಂಡಾಗಿ ಅಲ್ಲ ಎಂದು ಅರಿಯುವಿರಿ.
- ಓದುವ ಪ್ರಕ್ರಿಯೆಗಳನ್ನು ಗುರುತಿಸಬಲ್ಲರಿ
- ತರಗತಿಯಲ್ಲಿ "ಓದುವುದನ್ನು ಹೇಗೆ ಕಲಿಸುವುದು" ಎಂಬ ಕಾರ್ಯತಂತ್ರಗಳನ್ನು ಉಪಯೋಗಿಸಬಲ್ಲರಿ.
- ಓದುವುದನ್ನು ಭೋಧಿಸಲು, ಪಠ್ಯಪುಸ್ತಕದ ಜೊತೆಗೆ ಇತರೆ ಪಾಠ್ಯ ವಸ್ತುಗಳು ಮಹತ್ವವನ್ನು ಮನಗಂಡು ಒದಗಿಸಬಲ್ಲರಿ.
- ಓದುವ ಮತ್ತು ಬರೆಯುವ ನಡುವಿನ ಅಂತರ ಸಂಬಂಧವನ್ನು ವಿಶದೀಕರಿಸಬಲ್ಲರಿ.

## 5.2 "ಓದುವುದು" ಎಂದರೆ ಏನರ್ಥ?

ಪ್ರಾಥಮಿಕ ಶಿಕ್ಷಕರು ಎದುರಿಸುವ ಬಹುದೊಡ್ಡ ಮತ್ತು ಅತ್ಯಂತ ಕ್ಲಿಷ್ಠ ಸವಾಲೆಂದರೆ ಮಕ್ಕಳಿಗೆ ಓದು ಕಲಿಸುವುದು ಇದು ಕಷ್ಟಕರವವದ್ದು ಏಕೆಂದರೆ ಓದುವ ಕೌಶಲ್ಯ ಸಾಮರ್ಥ್ಯ ಗಳಿಸುವುದು ಸುಲಭವಲ್ಲ. ಮಕ್ಕಳು ಸ್ವಾಭಾವಿಕ ಪರಿಸರದಲ್ಲಿ, ಅನಾಯಾಸವಾಗಿ ಕಲಿಯುವ (ಗಳಿಸುವ) ಮಾತನಾಡುವಿಕೆಗಿಂತ, ಓದುವುದು ಬಹಳ ಕಷ್ಟಸಾದ್ಯ. ಮಾತನಾಡುವಿಕೆಯನ್ನು ಮಕ್ಕಳು ಶಾಲೆಗೆ ಬರುವ ಮುಂಚೆಯೇ ಗಳಿಸಿರುತ್ತಾರೆ. ಓದುವುದರಲ್ಲಿ ಅನೇಕ ಉಪಕೌಸಲ್ಯಗಳು ಮತ್ತು ಬೌದ್ಧಿಕ ಸಾಮರ್ಥ್ಯಗಳು ಹೆಣೆದುಕೊಂಡಿವೆ. ಇಲ್ಲ ಬಹುಮುಖ್ಯ ವಾದ ಪ್ರಶ್ನೆಯೆಂದರೆ ಓದುವುದು ಎಂಬುದರ ಅರ್ಥವೇನು? ಸಾಮಾನ್ಯವಾಗಿ ಶಿಕ್ಷಕರು ಚಿಂತನೆ ಮಾಡುವುದೇನೆಂದರೆ, ಮಕ್ಕಳು ಪಠ್ಯಪುಸ್ತಕವನ್ನು ಗಟ್ಟಿಯಾಗಿ ಓದಲು ಸಾಧ್ಯವಾಗಬೇಕೆಂದು ಆದರೆ ಮಕ್ಕಳು ಪಠ್ಯಪುಸ್ತಕದಲ್ಲಿ ಅಥವಾ ಬೇರೆ ಪಠ್ಯವಸ್ತು ವಿನಲ್ಲ ಏನು ಬರೆದಿದೆ ಎಂಬುದನ್ನು ಅರಿಯಬಲ್ಲರೆ, ಎಂಬುದರ ಬಗ್ಗೆ ನಿಜವಾದ ಕಾಳಜಿ ಹೊಂದಿರುವುದಿಲ್ಲ.

ಓದುವಿಕೆಯು ಒಂದು ಸೃಜನಾತ್ಮಕ ವ್ಯವಹಾರ ಏಕೆಂದರೆ, ಓದುಗನು, ಬರೆದಿರುವ ಪಠ್ಯಭಾಗವನ್ನು ಕೇವಲ ಗಟ್ಟಿಯಾಗಿ ಓದುವುದಲ್ಲದೆ, ತನ್ನ ಅನುಭವದ ಆಧಾರದ ಮೇಲೆ, ಪಠ್ಯ ವಸ್ತುವಿನ ಅರ್ಥೈಸುಕೊಳ್ಳುತ್ತಾನೆ. ಓದುವಾಗ ಪಠ್ಯವಸ್ತುವಿನ ಅರ್ಥ ತಿಳಿಯುವುದು ಬಹಳ ಮುಖ್ಯ. ನಾವು ಓದುವಾಗ ನಮ್ಮ ಮನಸ್ಸು ಮತ್ತು ಕಣ್ಣುಗಳು ಪ್ರತಿಪದ, ಅದರಲ್ಲದ ಅಕ್ಷರಗಳು ಮತ್ತು ಲೇಖನ ಚಿಹ್ನೆಗಳ ವಿವರಗಳನ್ನು ನೋಡುವುದಿಲ್ಲ. ಅಂದರೆ ಈ ಪದ ಚಿಹ್ನೆ ಇತ್ಯಾದಿ ಪ್ರತಿ ಅಂಗಳಗಳ ಬಗ್ಗೆ ಬಹಳವಾಗಿ ನೋಡುವುದಿಲ್ಲ. ಹೀಗೆ ಮಾಡಿದರೆ, ಓದು, ಬೇಸರ ತರುವುದಲ್ಲದೆ ನಾವು ಓದಿದ ಪಠ್ಯ ವಸ್ತುವಿನಿಂದ ಯಾವ ಪ್ರಯೋಜವಾಗದು. ಅದೇ ಅಲ್ಲದೆ ಓದುವ ವೇಗವೂ ಕುಂಠಿತವಾಗುತ್ತದೆ. ಇದರಿಂದ ಕ್ಲಿಷ್ಠವಾದ ಹಾಗೂ ಉದ್ದದ ಪಠ್ಯವಸ್ತುಗಳಿರಲಿ, ಸಣ್ಣ ವಾರ್ತಾ ಪಠ್ಯವನ್ನು ಓದುವುದು ಬಹಳ ಕಷ್ಟಕರವಾಗುತ್ತದೆ. ಒಬ್ಬ ನಿರರ್ಗಳ ಓದುಗನು, ಅಕ್ಷರಗಳ ಗಾತ್ರ, ರೀತಿಯನ್ನಾಗಲಿ ಪದಗಳನ್ನಾಗಲಿ ಅಥವಾ ಕೆಲವು ವೇಳೆ ವಾಕ್ಯಗಳನ್ನು ನೋಡುವುದಿಲ್ಲ. ಆತನು ತನ್ನ ಕಣ್ಣನು ಪಠ್ಯಭಾಗದ ಮೇಲೆ ಹೊರಳಿಸುತ್ತಾ, ಹಿಂದಕ್ಕೂ ಮುಂದಕ್ಕೂ ಮೇಲೆ ಕೆಳಕ್ಕೂ ಸರಿಸುತ್ತಾ ಪಠ್ಯದ ತುಣಕುಗಳನ್ನು ಓದುತ್ತಾನೆ. ಓದುಗನು ಬರೆದ ಪಠ್ಯಭಾಗದ ಕೆಲಭಾಗ ನೋಡಿ, ಉಳಿದಭಾಗದ ಅರ್ಥವನ್ನು ತನ್ನ ಅನುಭವಗಳ ಆಧಾರದ ಮೇಲೆ ಮಂಚೆಯ ಗ್ರಹಿಸುತ್ತಾನೆ.

Notes

ಈ ರೀತಿಯ ನಿರೀಕ್ಷೆ ಮತ್ತು ಪೂರ್ವ ಜ್ಞಾನದಿಂದ ಮುಂದೆ ಏನಿರಬಹುದು ಎಂಬುದು, ಓದುಗನ ಅನುಭವದ ಮೇಲೆ ಆಧಾರಿತವಾಗಿರುತ್ತದೆ. ಪಠ್ಯವಸ್ತುವಿಗ, ಸ್ವಲ್ಪ ಭಾಗವನ್ನು ನೋಡಿದ ನಂತರ, ಆತನು ಅದರಲ್ಲಿ ಏನು ಬರೆದಿದೆ ಎಂಬುದನ್ನು ತಿಲಿಯುವನು, ಮುಂದಿನ ಸ್ವಲ್ಪ ಭಾಗವನ್ನು ಇಣುಕಿದಾಗ ಪೂರ್ಣ ವಿವರಗಳನ್ನು ಓದದೆ, ಅದರಲ್ಲಿ ಏನು ಇದೆ ಎಂಬುದು ತಿಳಿದುಕೊಳ್ಳಬಲ್ಲನು, ಕೆಲವೊಮ್ಮೆ ಮುಂದೆ ಬರುವುದು ತಾನು ತಿಳಿದದ್ದಕ್ಕಿಂತ ಭಿನ್ನವಾಗಿದ್ದರೆ, ಹಿಂದಕ್ಕೆ ಹೋಗಿ ಮತ್ತೆ ಪರೀಕ್ಷಿಸಬಹುದು. ಅಂದರೆ ಓದುವುದು ಎಂದರೆ ಮರು ಪರಿಶೀಲಿಸುವುದು ಆಗಿರುತ್ತದೆ.

ಓದುವುದೆಂದರೆ ಬರೆದಿರುವ ಪಠ್ಯ ವಸ್ತುವಿನ ಅರ್ಥವನ್ನು ಗ್ರಹಿಸುವುದಾಗಿದೆ.

- ವಾಚನ (ಓದು) ವೆಂದರೆ, ಪರಿಕಲ್ಪನೆಗಳನ್ನು ರೂಪಿಸಲ್ಪಡುವುದಾಗಿದ್ದು, ವಿವಿಧ ಅನಿಸಿಕೆಗಳನ್ನು ಜೋಡಿಸಿ, ಅವುಗಳನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುವುದಾಗಿದೆ.
- ಪಠ್ಯವಸ್ತುವನ್ನು ಅರಿಯುವುದು, ಅದರ ತರ್ಕ ಮತ್ತು ಸಾಂದರ್ಭಿಕತೆಯನ್ನು ತಿಳಿಸುವುದಾಗಿದೆ.
- ವಾಚನ ಮಾಡುವುದೆಂದರೆ, ಕೇವಲ ಅಕ್ಷರಗಳನ್ನು ಗುರುತಿಸುವುದು, ಪದಗಳನ್ನು ಮತ್ತು ವಾಕ್ಯಗಳನ್ನು ಗಟ್ಟಿಯಾಗಿ ಹೇಳುವುದು ಮಾತ್ರವಲ್ಲದೆ, ಅದಕ್ಕಿಂತಲೂ ಹೆಚ್ಚಿನದಾಗಿದೆ. ಉದಾಹರಣೆಗೆ ವಾಚನವೆಂದರೆ ಬರೆದಿರುವ ಪಠ್ಯ ವಸ್ತುವಿನಲ್ಲಿ ಏನು ಬರೆದಿದೆ ಎಂಬುದನ್ನು ಅರಿಯುವುದಾಗಿದೆ ಮತ್ತು ಅದನ್ನು ಉಪಯೋಗಿಸಿಕೊಂಡು ತಮ್ಮದೇ ಪರಿಪೇಕ್ಷೆಯನ್ನು ರೂಪಿಸಿಕೊಂಡು ತಿಳಿಯುವುದಾಗಿದೆ.
- ಓದುವುದೆಂದರೆ, ಶಬ್ದಗಳನ್ನು ಉಚ್ಚರಿಸುವುದಲ್ಲ, ಪಠ್ಯವಸ್ತುವಿನೊಡನೆ ಸಂಭಾಷಿಸುವುದು ತನ್ನ ಅನುಭವವಗಿ ಜೀರ್ಣಿಸಿಕೊಳ್ಳುವುದು ಮತ್ತು ಪರಿಕಲ್ಪಸಿಕೊಳ್ಳುವುದು.
- ವಾಚನವು ಒಂದು ಪೂರ್ಣತ್ವದ ಪ್ರಕ್ರಿಯೆ ಅಕ್ಷರಗಳ ರೂಪ, ಅವುಗಳೊಡನೆ ಸಂಬಂಧಿಸಿದ ಉಚ್ಚಾರಣೆ, ವಾಕ್ಯರಚನೆ, ಪದ ಮತ್ತು ವಾಕ್ಯಗಳ ಅರ್ಥ ಮತ್ತು ನಿರೀಕ್ಷಿಸುವ ಹಾಗು ಮುಂಚೆಯೇ ತಿಳಿಯುವ ಸಾಮರ್ಥ್ಯ.
- ವಾಚನದ ಪ್ರಮುಖ ಅಂಶವೆಂದರೆ, ಬರಹದಲ್ಲಿನ ಮಾಹಿತಿ ಮತ್ತು ಚಿಹ್ನೆಗಳನ್ನು ಅರ್ಥೈಸಿ ಗ್ರಹಿಸುವುದಾಗಿದೆ.

ಹೀಗಾಗಿ, ಓದುವುದು ಎಂದರೆ ಅನೇಕ ಸಾಮರ್ಥ್ಯಗಳ ಗಣ ಸಮೂಹವಾಗಿದ್ದು, ಬರೆದಿರುವ ಅಥವಾ ಮುದ್ರಿತ ವಾದ, ಭಾಷಾ ವಸ್ತುವನ್ನು ಅರ್ಥದೊಡನೆ ಜೋಡಿಸಲು ನೆರವಾಗುತ್ತದೆ. ವಾಚನ ಸಾಮರ್ಥ್ಯವೆಂದರೆ ಅರ್ಥಕ್ಕೆ ಒತ್ತು ಕೊಡುವುದಾಗಿದ್ದು, ಓದುವುದೆಂದೆ, ತಿಳಿಯುವಂತೆ ವಾಚಿಸುವುದು.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ

*1. " ಓದುವಿಕೆ" ವಾಚನ" ದ ಬಗ್ಗೆ ಅತ್ಯಂತ ಪ್ರಮುಖ ಅಂಶವನ್ನು ಗುರುತು ಮಾಡಿ*

*ಎ) ಬರೆದಿರುವ ಪಠ್ಯವಸ್ತುವಿನ ಅರ್ಥ ಗ್ರಹಿಸುವುದು*

*ಬಿ) ಪಠ್ಯವಸ್ತುವಿನಲ್ಲಿನ ಪ್ರತಿ ಪದವನ್ನು ವಾಚಿಸುವುದು*

*ಸಿ) ನಿರರ್ಗಳವಾಗಿ ಗಟ್ಟಿಯಾಗಿ ಓದುವುದು*

*ಡಿ) ರೇಖಾ ಚಿಹ್ನೆಗಳನ್ನು ಗಮನಿಸುವುದು.*

Notes

2. ವಾಚನದಲ್ಲಿ ಅಡಗಿರುವ ವಿವಿಧ ಅಂಶಗಳು ಯಾವುವು ?

..............................................................................................................................................

..............................................................................................................................................

..............................................................................................................................................

3. ಓದುವುದು ಒಂದು ಸೃಜನಾತ್ಮಕ ಕ್ರಿಯಾಕಲಾಪ ಅದು ಹೇಗೆ.

..............................................................................................................................................

..............................................................................................................................................

..............................................................................................................................................

## 5.3 ಓದುಬಲ್ಲತೆ (ವಾಜನದ) ಪ್ರಾಮುಖ್ಯತೆ – ಓದುಬಲ್ಲತೆಯು ಏಕೆ ಪ್ರಮುಖವಾದರು?

ತಾತ್ವಿಕವಾಗಿ ಜ್ಞಾನ ರನಚೆಯು ಪುಸ್ತಕಗಲ್ಲದೆಯೆ ಸಂಬಿಸಬಹುದೆಂದು ತಿಳಿದ ವಿಷಯವಾಗಿದೆ. ಮುದ್ರಣ ಹಾಗೂ ಲಿಪಿಯು ಇಲ್ಲದ ಕಾಲಘಟ್ಟದಲ್ಲಿ, ಅಂದಿನ ಸಮಾಜವು, ಜ್ಞಾನ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಓದು ಬರಹ ವಿಲ್ಲದೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈಗಿನ ದಿನಗಳಲ್ಲೂ ಕೆಲವು ಸಮಾಜಗಳಲ್ಲಿ ಮೌಖಿಕ ವಾಗಿಯೇ ಮುಂದುವರಿಯುತ್ತಿದೆ. ಏನೇ ಆದರೂ, ಜ್ಞಾನ ವಿನಿಮಯ ಹಾಗೂ ಅಭಿವೃದ್ಧಿ ಕಾರ್ಯವು ಲಿಪಿ ಹಾಗೂ ಮುದ್ರಣದಿಂದ ಹೇರಳ ರೀತಿಯಲ್ಲಿ ಹೆಚ್ಚಾಗಿದೆ. ಈಗಿನ ಜಗತ್ತಿನಲ್ಲಿ ಪುಸ್ತಕಗಳು, ಅತ್ಯಂತ ಮಹತ್ವದ ಮತ್ತು ಪ್ರಮುಖ ಸ್ಥಾನ ಪಡೆದಿರುವುದಲ್ಲದೆ, ಓದು ಬರಹಗಳು ಅತಿ ಅವಶ್ಯಕವಾಗಿದೆ. ಅರಿತು ಓದಬಲ್ಲವರಾದಾಗ, ವ್ಯಕ್ತಿತ್ವ ಬೆಳೆಯುವುದಲ್ಲದೆ ಆತ್ಮ ವಿಶ್ವಾಸವೂ ಹೆಚ್ಚುವುದು. ಓದು ಬಲ್ಲತೆಯು, ನಮ್ಮನ್ನು, ನಮ್ಮ ಸುತ್ತಲಿನ ನಿಜ ಪರಸ್ಥಿತಿಗೆ ನಿಕಟವಾಗಿರುವಂತೆ ಮಾಡುವುದಲ್ಲದೆ, ನಮ್ಮಿಂದ ದೂರ ಪ್ರದೇಶಗಳನ್ನು ತಲುಪಲು ಸಾಧ್ಯವಾಗಿಸುತ್ತದೆ. ಇದಕ್ಕೆ ಸಾಹಿತ್ಯ ಒಂದು ಉದಾಹರಣೆಯಾಗಿದೆ. ಪಂಡಿತ ಜವಾಹರಲಾಲ್ ನೆಹರೂ ರವರ ಪ್ರಕಾರ ಓದಿನಿಂದ, ಜೀವನದ, ವಿವಿಧ ಅಂಶಗಳ ಅರಿವಾಗುವುದಲ್ಲದೇ ಜೀವನದ ಬದಲಾಗುವ ಬಣ್ಣಗಳ ಬಗ್ಗೆ ಅರಿವುಂಟಾಗುವುದು ನಮ್ಮ ವೈಯಕ್ತಿಕ ಜೀವನಾನುಭವಗಳು ಸೀಮಿತವಾಗಿದ್ದು, ಓದುವಿಕೆಯಿಂದ ಅನುಭವದ ವಿಸ್ತರಣೆಯಾಗುತ್ತದೆ.

ಸಾರಾಂಶವೆಂದರೆ, ಓದು ನಮ್ಮ ಜ್ಞಾನ ವಿಸ್ತರಣೆಯಲ್ಲಿ ಸಹಾಯಕವಾಗುತ್ತದೆ. ಓದು ಓದುಗನ ಚಿಂತನಾಶೀಲತೆಯನ್ನು, ತಾರ್ಕಿಕತೆಯನ್ನು ಮತ್ತು ಮುಕ್ತ ಚಿಂತನೆಗಳನ್ನು ಬೆಳೆಯುವಂತೆ ಮಾಡುತ್ತದೆ. ಅದೂ ಅಲ್ಲದೆ ವ್ಯಕ್ತಿಯನ್ನು ವ್ಯಾಪಕವಾಗಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಮುಕ್ತ ಚಿಂತನೆಗಳಿಗೆ ಬಿಚ್ಚಿಡುತ್ತದೆ.

## 5.4 ಓದುವುದು ಹೇಗೆ – ಎಂಬುದನ್ನು ಭೋಧಿಸುವ ವಿಧಾನಗಳು ಮತ್ತು ಮಾರ್ಗಗಳು

ಸಾಮಾನ್ಯವಾಗಿ ಮಕ್ಕಳಲ್ಲಿ ಓದುವಿಕೆಯನ್ನು ಕಲಿಸುವುದು ಶಿಕ್ಷಕರಿಗೆ ಒಂದು ಕಷ್ಟಕರ ಕಾರ್ಯವಾಗಿದೆ. ಏಕೆಂದರೆ ಈ ದಿಶೆಯಲ್ಲಿ ಯಾವುದೇ ಒಂದು ಸರಳ ಮತ್ತು ಸಿದ್ಧವಾದ ವಿಧಾನವಿಲ್ಲ. ಪ್ರತಿಯೊಂದು ವಿಧಾನಕ್ಕೂ ಅವರದೇ ಆದ ಮಿತಿಗಳಿವೆ. ಯಾವ ಸಂದರ್ಭದಲ್ಲಿ ಯಾವ ವಿಧಾನವನ್ನು ಅನುಸರಿಸಬೇಕು.

Notes

ಎಂಬುದನ್ನು ನಿರ್ಧರಿಸುವುದು, ಶಿಕ್ಷಕರ ತೀರ್ಮಾನಕ್ಕೆ ಬಿಟ್ಟ ವಿಷಯ ಓದುವಿಕೆ ವಾರ್ಜ್ನ ವನ್ನು ಕರಗತಗೊಳಿಸುಕೊಳ್ಳುವುದು ಕಷ್ಟಕರವಾದರೂ, ಒಮ್ಮೆ ಕರಗತ ಗೊಳಿಸಿಕೊಂಡಾಗ (ಗಳಿಸಿಕೊಂಡಾಗ) ಇದು ಮಕ್ಕಳ ಜೀವನದ ಒಂದು ಅವಿಭಾಜ್ಯ ಅಂಗವಾಗುವುದಲ್ಲದೆ, ಒಂದು ಶಕ್ತಿಶಾಲಿ, ಅತ್ಯಂತ ಸ್ಪೂರ್ತಿದಾಯಿಯಾಗಿ, ಮಕ್ಕಳ ಜೀವನವು ಅದರ ಮೇಲೆ ಅವಲಂಬಿತವಾಗಿರುವುದು. ಒಮ್ಮೆ ನಾವು ಮಕ್ಕಳಲ್ಲಿ ಪುಸ್ತಕಗಳ ಬಗ್ಗೆ, ಓದುವ ಬಗ್ಗೆ ಸದಭಿರುಚಿಯನ್ನು ಬೆಳಸಿದ್ದೇ ಆದರೆ, ಮಕ್ಕಳ ಓದಿಗೆ, ಅಭಿವೃದ್ಧಿಗೆ ಮತ್ತು ಭೌದ್ಧಿಕ ಬೆಳವಣಿಗೆಗೆ ಸೀಮೆ ಇರುವುದಿಲ್ಲ.

ಇಲ್ಲಿ ನಿಜವಾದ ಪ್ರಶ್ನೆ ಎಂದರೆ, ಮಕ್ಕಳಲ್ಲಿ ಓದುವಿಕೆ ಯನ್ನು ಕಲಿಸುವುದು ಹೇಗೆ ನಾವು ಸುತ್ತಲಿನ ಪರಿಸರವನ್ನು ಸನ್ನಿವೇಶವನ್ನು ನೋಡಿ ವಿಶ್ಲೇಷಿಸಿದಾಗ, ನಮಗೆ ಸೋಲೇ ಕಾಣುತ್ತದೆ.ಇದಕ್ಕೆ ಕಾರಣಗಳೇನು? ಪ್ರತಿ ವರ್ಷವೂ ಅನೇಕ ಕೋಟಿ ಮಕ್ಕಳು, ಓದುವುದನ್ನು ಕಲಿಯಲು ಪ್ರಯತ್ನಿಸುತ್ತಾರೆ. ಆದರೆ ಅದರಲ್ಲಿ ಹಲವರು ಸುಖಕರವಾಗಿ ಓದಲಾರರು ಅನೇಕ ಮಕ್ಕಳು ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತಿರುತ್ತಾರೆ. ಆದರೆ ಓದುವಿಕೆಯಲ್ಲಿ ಅವರ ಅಭಿರುಚಿ ಇರುವುದಿಲ್ಲ. ಈ ರೀತಿಯ ಸೋಲಿನ ಹಿಂದೆ, ಸೂಕ್ತವಲ್ಲದ ಭೋದನಾ ವಿಧಾನಗಳು ಇವೆ.

ಮಕ್ಕಳು ಸದಭಿರುಚಿಯಿಂದ ಓದುವ ಸಾಮರ್ಥ್ಯ ಪಡೆಯುವ ಅವಶ್ಯಕತೆಯನ್ನು ಶಿಕ್ಷಕರಿಗೆ ಹೇಳಬೇಕಾದ್ದಲ್ಲಿ ಓದುವ ಸಾಮರ್ಥ್ಯ ವೆಂದರೇನು, ಎಂಬುದನ್ನು ಉತ್ತಮವಾಗಿ ಓದುವಿಕೆ ಯಲ್ಲಿ ಯಾವ ಅಂಶಗಳು ಒಳಗೊಂಡಿವೆ ಮತ್ತು ಈ ಸಾಮರ್ಥ್ಯವನ್ನು ಹೇಗೆ ಬೆಳೆಸಬಹುದು. ಎಂಬ ವಿಷಯಗಳನ್ನು ಶಿಕ್ಷಕರು ವಿವರವಾಗಿ ಹೇಳದಿದ್ದರೂ ಪ್ರತಿಯೊಬ್ಬ ಶಿಕ್ಷಕನೂ ಉತ್ತಮ ಓದುವಿಕೆ ಎಂದರೇನು ಎಂದು ಚೆನ್ನಾಗಿ ಅಂತರ್ಯದಲ್ಲಿ ಅರಿತಿರುತ್ತಾನೆ. ಎಲ್ಲಿಯವರೆಗೆ, ಮಕ್ಕಳು ತಾನು ವಾಚಿಸಿದ್ದನ್ನು ಸರಿಯಾಗಿ ಅರ್ಥೈಸಿಕೊಂಡು ಅದನ್ನು ತನ್ನ ಪೂರ್ವ ಅನುಭವಗಳೊಡನೆ ಜೊಡಿಸಿಕೊಳ್ಳುವ ಸಮರ್ಥತೆಯನ್ನು ಪಡೆಯಲು ಶಕ್ತರಾಗಲ್ಲವೊ, ಅಲ್ಲಿಯವರೆಗೆ ನಾವು ಮಕ್ಕಳನ್ನು ಓದುವಿಕೆ ಯಲ್ಲಿ ಬೆಳೆದಿದ್ದಾರೆ ಎಂದು ಹೇಳಲಾಗದು, ಈ ಸಂದರ್ಭದಲ್ಲಿ ಓದುವಿಕೆಯೆಂದರೆ ಮುದ್ರಿತ ಅಥವಾ ಹಸ್ತಲಿಖಿತ ಸಾಮಗ್ರಿಯನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆ, ಎನ್ನಬಹುದು, ಅಂದರೆ ಸಾಮಗ್ರಿಯಲ್ಲಿ ಅಡಗಿರುವ ಅಂತರಾರ್ಥವನ್ನು ಗ್ರಹಿಸುವ ಸಾಮರ್ಥ್ಯ ಎಂದರ್ಥ.

ನಾವು ಈ ಮೇಲಿನ ನಿರ್ವಚನೆಯನ್ನು, ಅಂಗೀಕರಿಸಿದರೆ, ಈಗಿನ, ಪ್ರಾಥಮಿಕ ಹಂತದಲ್ಲಿನ ಔಪಚಾರಿಕ, ಅನೌಪಚಾರಿಕ ಶಾಲಾ ವಿಧಾನಗಳು, ಸೂಕ್ತ ವಾದವುಗಳಲ್ಲಿ, ಉದಾಹರಣೆಗೆ ಈ ಹಿಂದೆ ಚರ್ಚಿಸಿದಂತೆ, ಜೋರಾಗಿ ಓದುವುದಾಗಲಿ ವರ್ಣಮಾಲೆಯ ಅಕ್ಷರಗಳನ್ನು ಕಂಠಸ್ಥ ಮಾಡುವುದಾಗಲಿ, ಕಥೆಯನ್ನು ಅರ್ಥ ಮಾಡಿಕೊಳ್ಳದೆ ಪುನರುಚ್ಚರಿಸಿ ಹೇಳುವುದಾಗಲಿ, ಅರ್ಥೈಸಿಕೊಳ್ಳದೆ ಪಠ್ಯವಸ್ತುವನ್ನು ಗಟ್ಟಿಯಾಗಿ ಓದುವುದಾಗಲಿ, ಉತ್ತಮ ಚಟುವಟಿಕೆಗಳಲ್ಲಿ ಇದರಲ್ಲಿ ನಾವು ಪಠ್ಯ ವಿಷಯವನ್ನು ಅದರ ಅರ್ಥದೊಂದಿಗೆ ಜೋಡಿಸುತ್ತಿಲ್ಲ. ಈಗಲೂ ಅನೇಕ ಶಾಲೆಗಳಲ್ಲಿ ಎ ಯನ್ನು ಅಪರ್ ಗೂ ಸಿ ಯನ್ನು ಕ್ಯಾಟ್ ಗೂ ಜೋಡಿಸಲಾಗುತ್ತದೆ. ಹೀಗಾಗಿ ಮಕ್ಕಳು ಎ ಎಂದರೆ ಆನರ್ ಎಂದೂ ಸಿ ಯನ್ನು ಕ್ಯಾಟ್ ಎಂದು ಓದುತ್ತಾರೆ. ಕಥೆಯನ್ನು ಪದಶಃ ಓದಿದಾಗ ಯಾವ ಅರ್ಥ ಕಲ್ಪಿಸಿಕೊಳ್ಳಲಾಗದು ಮತ್ತು ಕಥೆಯೊಡನೆ ಸಾಮಿಪ್ಯಬಾರದು ಅದರೊಡನೆ ಸಂಬಂಧಬಾರದು, ಈ ರೀತಿಯ ಓದುವಿಕೆಯಿಂದ ಕೊನೆಗೊಮ್ಮೆ ಅರ್ಥ ತಿಳಿಯುವುದೆಂದು ಒಪ್ಪಿದರೂ ಅದಕ್ಕಾಗಿ ಬಹಳ ಸಮಯ ಹಿಡಿಸುತ್ತದೆ ಮತ್ತು ಮಕ್ಕಳು ಅದೇ ಪಠ್ಯ ವಸ್ತುವನ್ನು ಪದೇ ಪದೇ ಓದುವ ಅವಕಾಶ ದೊರೆತಾಗ ಅರ್ಥವಾಗಬಹುದು. ಮಕ್ಕಳು ಒಂದೇ ಪಠ್ಯವಸ್ತುವನ್ನು ಪದೇ ಪದೇ, ಪುನರುಚ್ಚರಿಸಿ, ಗಟ್ಟಿಯಾಗಿ ಓದುವುದನ್ನು ನಕಲು ಮಾಡುವುದನ್ನು ಬೇಸರಿಸಿಕೊಳ್ಳುತ್ತಾರೆ ಎಂಬುದನ್ನು ನಾವು ಪರಿಗಣಿಸಬೇಕು. ಇದರಿಂದ ಅವರು ಓದುವಿಕೆಯಿಂದ ಜಾರಿಕೊಳ್ಳಬಹುದು ಅಥವಾ ಮಕ್ಕಳಲ್ಲಿ ಆಸಕ್ತಿ ಮತ್ತೆ ತರಲಾಗದ ಸ್ಥಿತಿ ಉಂಟಾಗಬಹುದು. ಈ ಕಾರಣದಿಂದ ಮೇಲೆ ಹೇಳಿದ ವಿಧಾನವು ಬಹಳ ಬೇಸರಿಕೆ ಉಂಟು ಮಾಡುವ ಮತ್ತು ಉತ್ಪಾದಕವಲ್ಲದ್ದಾಗಿದೆ. ಇದರಿಂದಾಗುವ ಇನ್ನೊಂದು ಅಪಾಯವೆಂದರೆ, ಹಲವು ಮಕ್ಕಳು ಪ್ರಾಥಮಿಕ ಹಂತದ ಶಿಕ್ಷಣ ಮುಗಿಸುವ ಮುಂಚೆಯೆ, ಶಾಲೆಯನ್ನು ಬಿಡುತ್ತಾರೆ.

Notes

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 2

1. *ಮಕ್ಕಳಲ್ಲಿ "ಓದುವಿಕೆ" ಯ ಬಗ್ಗೆ ಆಸಕ್ತಿ ವೃದ್ಧಿಸಲುವುದು ಹೇಗೆ? (ಗುರುತು ಮಾಡಿ)*
   - *(ಎ) ಪಠ್ಯಪುಸ್ತಕ ಗಳಿಂದ*
   - *(ಬಿ) ವರ್ಣ ಮಾಲೆಯ ಅಕ್ಷರಗಳನ್ನು ಕಂಠ ಮಾಡಿ*
   - *(ಸಿ) ಓದುವಿಕೆ ಯನ್ನು ಭೋಧಿಸುವ ಆಸಕ್ತಿಕರ ಪ್ರಕ್ರಿಯೆಗಳಿಂದ*
   - *(ಡಿ) ಕಥೆಗಳನ್ನು ಕಂಠಪಾಠ ಮಾಡುವುದರಿಂದ*
2. *"ಓದುವಿಕೆ" ಯ ಉತ್ತಮ ಸಾಮರ್ಥ್ಯ ಗಳಲ್ಲಿ, ನೀವು ಏನನ್ನು ಸೇರಿಸುತ್ತೀರಿ?*

   ..............................................................................................................................

   ..............................................................................................................................

   ..............................................................................................................................
3. *ಕೆಲವು ಮಕ್ಕಳು, ಪ್ರಾಥಮಿಕ ಶಿಕ್ಷಣ ಪೂರೈಸುವ ಮುನ್ನವೇ ಶಾಲೆಯನ್ನು ಬಿಡುತ್ತಾರೆ, ಏಕೆ?*

   ..............................................................................................................................

   ..............................................................................................................................

   ..............................................................................................................................

### 5.4.1 ಓದುವಿಕೆ ಯನ್ನು ಭೋದಿಸುವ ಜನಪ್ರಿಯ ವಿಧಾನಗಳು ಮತ್ತು ಅವುಗಳ ನ್ಯೂನತೆಗಳು.

ಪುಸ್ತಕದಲ್ಲಿ, ನಮ್ಮ ಶಾಲೆಗಳಲ್ಲಿ ಅನುಸರಿಸುತ್ತಿರುವ ವಿಧಾನಗಳು, ಓದುವಿಕೆಯ ಮೂಲ ತತ್ವಗಳಿಂದ ದೂರ ಸರಿಯುತ್ತಿವೆ. ಎಂದು ಕಂಡು ಬರುತ್ತಿದೆ. ಶಾಲೆಗಳಲ್ಲಿ ಸಾಮಾನ್ಯವಾಗಿ ಅನುಸರಿಸುತ್ತಿರುವ, ಕೆಲವು ವಿಧಾನಗಳನ್ನು ಈ ಕೆಳಗೆ ಚರ್ಚಿಸಿದ್ದು, ಇವುಗಳು ಹೇಗೆ, ಮಕ್ಕಳಿಗೆ ಸಹಾಯಕವಾಗುವ ಬದಲು ಅವರ ಕಷ್ಟಗಳನ್ನು ಹೆಚ್ಚುಸುತ್ತಿವೆ ಎಂದು ತಿಳಿಯೋಣ ಈ ರೀತಿಯ ಪ್ರತಿಯೊಂದು ವಿಧಾನವನ್ನು ಪ್ರಶ್ನಿಸೋಣ. ಇವು (ವಿಧಾನಗಳು) ಮಕ್ಕಳಿಗೆ ಎಷ್ಟರ ಮಟ್ಟಿಗೆ ಸಹಾಯಕ ಎಂಬುದರ ಬಗ್ಗೆ ಖಚಿತತೆ ಇಲ್ಲ.

- ಓದುವ ನಿಯಮಗಳನ್ನು ಬೇಗ ತಿಳಿಯುವುದು

  "ಓದುವಿಕೆ" ಗೆ ಯಾವ ನಿಯಮಗಳಿಲ್ಲ. ನಿಯಮಗಳನ್ನು ತಿಳಿಯುವುದು ಒಂದು ವ್ಯರ್ಥ ಕಾರ್ಯ. ಇವುಗಳನ್ನು ಸರಳವಾಗಿ ಯಾವೊಂದನ್ನು ಮಕ್ಕಳಿಗೆ ತಿಳಿಸಲಾಗುವುದಿಲ್ಲ. ಎಲ್ಲಾ ಸರಾಗವಾಗಿ ಓದುವ ವ್ಯಕ್ತಿಗಳು ಓದುವ ಅವಶ್ಯಕ ಜ್ಞಾನವನ್ನು ತಮ್ಮ ಪರಿಶ್ರಮದಿಂದಲೇ ವೃದ್ಧಿಸಿಕೊಳ್ಳುತ್ತಾರೆಯೇ ವಿನಹ ಇತರರಿಂದ ಹೇಳಲ್ಪಟ್ಟಿದ್ದರಿಂದ ಅಲ್ಲ ಇದು ಹೇಗೆಂದರೆ, ಮಗುವು ಮೊದಲು ಮಾತಾಡುವುದನ್ನು ಕಲಿತಂತೆ ಮಗುವು ಯಾವುದೇ ಔಪಚಾರಿಕ ಬೋಧನೆ ಇಲ್ಲದೆ, ಮಾತನಾಡುವುದನ್ನು ಸ್ವಪ್ರಯತ್ನದಿಂದ ಅಭ್ಯಸಿಕೊಳ್ಳುವಂತೆ, ಹಾಗೂ ನಿಯಮವನ್ನು ಸ್ವಯಂ ಅರಿಯುವಂತೆ ಮಕ್ಕಳು ಮಾತನಾಡಲು ಕಲಿಯಲು ವ್ಯಾಕರಣದ ಬೋಧನೆಯು ಸಹಾಯಕ ಎಂಬುದಕ್ಕೆ ಆಧಾರವಿಲ್ಲ. ಅದೇ ರೀತಿಯಲ್ಲಿ ಉಚ್ಚಾರಣೆಯ ಅಭ್ಯಾಸವು ಅಥವಾ ಬೇರೆ ಯಾವುದೇ ವಾಚನವಲ್ಲದ ಕಾರ್ಯವು, ಓದುವ ಸಾಮರ್ಥ್ಯ ಬೆಳೆಸುವುದಕ್ಕೆ ಸಹಾಯಕ ಎಂಬುದಕ್ಕೆ ಆಧಾರವಿಲ್ಲ.

  ಸಾಮಾನ್ಯವಾಗಿ ಓದುವ ನಿಯಮಗಳು ಎಂದು ಯಾವುದನ್ನು ಹೇಳುತ್ತೆವೆಯೋ ಅವು ಓದಲು ಪ್ರಾರಂಭಿಸುವಾಗ ಕೊಡುವ ಕೆಲವು ಸೂಚನೆಗಳಷ್ಟೆ. ಓದುವುದನ್ನು ಕಲಿಯುವುದೆಂದರೆ, ಈ ಸೂಚನೆಗಳನ್ನು ನೆನಪಿಸಿಕೊಳ್ಳುವುದೆಂದಲ್ಲ. ಮಕ್ಕಳು ಓದುವುದನ್ನು ಓದುತ್ತಲೇ ಕಲಿಯುತ್ತಾರೆ.

Notes

- ಓದಲು, ಮಕ್ಕಳು, ಉಚ್ಚಾರಣೆಯ ನಿಯಮಗಳನ್ನು ನೆನಪಿನಲ್ಲಿಟ್ಟುಕೊಂಡು, ಅನುಸರಿಸಬೇಕು.

ಬಹುಪಾಲು, ಒಪ್ಪಿಕೊಂಡಿರುವ ಅಂಶವೆಂದರೆ, ಓದುವ ಸಾಮರ್ಥ್ಯವು, ಶಬ್ಧ (ಧ್ವನಿ) ಯನ್ನು ಸಾಂಕೇತಿಕ, ಚಿಹ್ನೆಗಲೊಂದಿಗೆ ಸಮನ್ವಯಗೊಳಿಸಿ ಜೋಡಿಸುವುದಾಗಿದೆ. ಪಠ್ಯವಸ್ತುವನ್ನು ಉಚ್ಚರಿಸುವುದೇ ಓದಿಸಿ ಆದಿ ಮತ್ತು ಅಂತ್ಯ ಎಲ್ಲಾ ಎಂಬುದು ನಮಗೆ ತಿಳಿದ ವಿಷಯವೇ ಆಗಿದೆ. ಶಬ್ದ (ಪದಗಳು)ಗಳನ್ನು ಉಚ್ಛಸಿರುವ ಮೊದಲೇ ಅವುಗಳ ಅರ್ಥಗ್ರಹಿಸಿರಬೇಕು. ಪದಗಳನ್ನು ತಿಳಿಯದೇ ಮಾತನಾಡಲು ಸಾಧ್ಯವಿಲ್ಲ. ಅಕ್ಷರಗಳನ್ನು ಧ್ವನಿಗೆ ಪರಿವರ್ತಿಸುವುದು ಅನವಶ್ಯಕ ಹಾಗೂ ವ್ಯರ್ಥಶ್ರಮ ಸರಾಗವಾಗಿ ಓದುವ ವ್ಯಕ್ತಿಯು, ಅಕ್ಷರಗಳನ್ನು ಧ್ವನಿಯಾಗಿ ಪರಿವರ್ತಿಸುವುದಿಲ್ಲ ಎಂಬುದು ನಮಗೆ ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುತ್ತದೆ. ಈ ರೀತಿ ಧ್ವನಿಯಾಗಿ ಪರಿವರ್ತಿಸುವುದರಿಂದ ಅರ್ಥಸ್ಪಷ್ಟತೆ ಬರುವುದಿಲ್ಲ. ಅರ್ಥದಿಂದ ದೂರ ಸರಿಯುವ ಸಾಧ್ಯತೆಯೂ ಇದೆ. ಇದರ ಬದಲು ಪದಗಳನ್ನು ಭಾಗಶಃ ಉಚ್ಚರಿಸುವ ದಕ್ಷತೆಯನ್ನು ಬೆಳೆಸಿಕೊಳ್ಳುವರೆಂದೂ ಇಲ್ಲವಾದಲ್ಲಿ, ಮಕ್ಕಳಿಗೆ ಪರಿಚಿತವಲ್ಲದ ಹೊಸ ಪದಗಳಲ್ಲಿನ ಅಕ್ಷರಗಳನ್ನು ಆಧರಿಸಿ ಪದಗಳನ್ನು ಗುರುತಿಸಲಾರರು ಎಂದು ವಾದವಿದೆ.

- ಒಂದು ಅಕ್ಷರ ಅಥವಾ ಒಂದು ಪದದ ಭೋಧನೆಯ ಮೇಲೆ ಒತ್ತು ಕೊಡುವುದು

ಇನ್ನೊಂದು ಪ್ರಚಲಿತ ನಂಬಿಕೆಯೆಂದರೆ, ಕೆಲವು ಮಕ್ಕಳು, ವಸ್ತುಗಳ ಹೆಸರುಗಳು, ಕೆಲವು ಅಕ್ಷರಗಳು ಮತ್ತು ಕೆಲವು ಪದಗಳನ್ನು ಕಲಿಯಲು ಕಷ್ಟ ಪಡುತ್ತಾರೆ, ಎಂಬುದು ಇದಕ್ಕೆ ಪುನರಭ್ಯಾಸವೇ ಏಕೈಕ ಮಾರ್ಗ ಎಂಬ ಸಲಹೆ ಇದೆ. ಇದು ಕಲಿಕೆ ಕ್ರಮದ ತೀವ್ರ ಹಾಗೂ ತಪ್ಪಾದ ಸರಳೀಕರಣ. ಮಕ್ಕಳು ತಮ್ಮ ಜೀವನದ ಪ್ರಾರಂಭಿಕ 5–6 ವರ್ಷಗಳಲ್ಲಿ ಸುಮಾರು ಒಂದು ಸಾವಿರ ಪದಗಳನ್ನು ಪ್ರತಿದಿನ ಕಲಿಯುತ್ತಾರೆ ಇವುಗಳಲ್ಲಿ ಬಹುಪಾಲು ಹೆಸರುಗಳಾಗಿದ್ದು, ಮೊದಲ ಪ್ರಯತ್ನದಲ್ಲೆ ಸಾಮಾನ್ಯವಾಗಿ ಕಲಿಯಲಾಗುತ್ತದೆ.

ಮಕ್ಕಳು ಗುಂಪು ಅಥವಾ ಗಣವನ್ನು ವರ್ಗೀಕರಿಸುವ ಕ್ರಮವು ಸೂಚ್ಯಾಹ್ಯವಾಗಿದೆ. ಅವರು ಸಂದರ್ಭೋಚಿತವಾಗಿ, ಹೆಸರುಗಳು (ಪದಗಳು) ಎಲ್ಲಿ ಉಪಯೋಗಿಸಲಾಗಿದೆ ಎಂದು ಗಮನಿಸಿ, ಮುಂದೆ ವಿಶಿಷ್ಟತೆಗಳನ್ನು ಗುರುತಿಸಿ, ಅವುಗಳನ್ನು (ಪದಗಳನ್ನು ಉಪ ಯೋಗಿಸುವುದನ್ನು ಕಂಡುಕೊಳ್ಳುತ್ತಾರೆ. ಅವರು (ಮಕ್ಕಳು) ಅರ್ಥ (ಪರಿಕಲ್ಪನೆ) ಯನ್ನು ಗ್ರಹಿಸಿ (ಊಹಿಸಿ) ಉಪಯೋಗಿಸುತ್ತಾ, ಏರ್ಪಡಿಸಿಕೊಳ್ಳುತ್ತಾರೆ. ಮಕ್ಕಳು ಮಾಡುವ ತಪ್ಪುಗಳು, ನಮಗೆ (ಶಿಕ್ಷಕರಿಗೆ) ಓದುವ (ಮಾತನಾಡುವ) ಪ್ರಕ್ರಿಯೆಯ ಪ್ರಗತಿಯನ್ನು ಅರಿಯಲು ಸಹಾಯಕವಾಗುತ್ತವೆ. ಉದಹಾರಣೆಗೆ, ಮಕ್ಕಳು 4 ಸಾಲಿನ ಪ್ರಾಣಿಗಳನ್ನು ನಾಯಿ ಎಂದು ಕರೆದರೆ, ಮಗುವಿನ ಪರಿಕಲ್ಪನೆಯಲ್ಲಿ ನಾಯಿ ಎಂದರೆ ನಾಲ್ಕು ಕಾಲಿನ ಪ್ರಾಣಿ, ಅದಲ್ಲದೆ, ಮಗುವು ಎಲ್ಲಾ ನಾಲ್ಕು ಕಾಲಿ ಪ್ರಾಣಿಗಳನ್ನು ಮೇಜನ್ನೂ ನಾಯಿ ಎಂದರೆ ಮಗುವಿಗೆ ಜೀವಿ ಗಳ ಬಗ್ಗೆ ಪರಿಕಲ್ಪನೆ ಇಲ್ಲ ಎಂದು ಊಹಿಸಬಹುದು ಹಾಗಲ್ಲದೆ, ಅವರ ಮನೆಯ ನಾಯಿಯನ್ನು ಮಾತ್ರ ನಾಯಿ ಎಂದರೆ ಮಕ್ಕಳು ಸಾಕಷ್ಟು ಸಾಮಾನ್ಯೀಕರಿಸುತ್ತಿಲ್ಲ ಎನ್ನಬಹುದು.

ಮಕ್ಕಳು ಒಂದು ಗುಂಪಿನ ಸದಸ್ಯರನ್ನು ಗುಂಪಿಗೆ ಸೇರದ ಸದಸ್ಯರೊಡನೆ ಹೋಲಿಸಬಲ್ಲವರಾದರೆ, ಈ ರೀತಿಯ ಊಹಾ ವಾದವನ್ನು ಮಾಡಬಲ್ಲರು. ಮಕ್ಕಳು ನಾಯಿ ಯಲ್ಲದ ನಾಲ್ಕು ಪಾದಗಳ ಪ್ರಾಣಿಗಳನ್ನು ಅರಿಯುವುದು ಮುಖ್ಯ. ಮಕ್ಕಳು ತಮ್ಮ ಊಹಾವಾದವನ್ನು ಸ್ವ ಪರೀಕ್ಷೆಯಿಂದ ಅಥವಾ ಇತರರ ದೃಷ್ಠಿ ಪರಿಗಣಿಸಿ ಸುಧಾರಿಸಿಕೊಳ್ಳಬಹುದು.

ಇದೇ ರೀತಿಯ ಸಂದರ್ಭಗಳು, ಅಕ್ಷರಗಳ ಮತ್ತು ಪದಗಳನ್ನು ಕಲಿಯುವಲ್ಲಿ ಉಂಟಾಗುವುದು. ಮಕ್ಕಳಿಗೆ ಎ ಅಕ್ಷರವನ್ನು ಪ್ರತ್ಯೇಕವಾಗಿ ತೋರಿಸಿ, ಎ ಎಂದು ಪುನಃ ಪುನಃ ಹೇಳುವುದರಿಂದ ಉಪಯೋಗವಿಲ್ಲ. ಅವರು ಮತ್ತೆ ಬಿ ಯನ್ನು ಡಿ ಎಂದು ಡಿ ಯನ್ನು ಬಿ ಎಂದು ಹೇಳುತ್ತಿರುತ್ತಾರೆ. ಅದರ ಬದಲಿಗೆ ಅಕ್ಷರಗಳ ನಡುವಿನ ವ್ಯತ್ಯಾಸವನ್ನು ಅವುಗಳನ್ನು (ಅಕ್ಷರಗಳನ್ನು) ಜೊತೆಯಾಗಿ ತೋರಿಸಿ, ಮಕ್ಕಳು ಜೊತೆಯಲ್ಲಿ ನೋಡಿ (ಹೇಳಿ) ಅವುಗಳ ನಡುವಿನ ವ್ಯತ್ಯಾಸ ಅರಿಯಬಲ್ಲರು.

- ಮಕ್ಕಳು ಊಹಿಸುವುದನ್ನು ಮತ್ತು ನಿರೀಕ್ಷಿಸುವುದನ್ನು ಪ್ರೋತ್ಸಾಹಿಸಿದೆ ನಿಖರವಾಗಿ ಓದಬೇಕು.

ಸರಾಗವಾಗಿ ಓದುವ ವ್ಯಕ್ತಿಯು, ತನಗೆ ಲಭ್ಯವಿರುವ ಅತಿ ಕಡಿಮೆ ದೃಶ್ಯ ಮಾಹಿತಿಯನ್ನು ಗರಿಷ್ಠವಾಗಿ ಉಪಯೋಗಿಸಿಕೊಳ್ಳುತ್ತಾನೆ. ಮಾಹಿತಿಯ ಪ್ರತಿ ಪದವನ್ನು ಓದುವ ಬದಲಿಗೆ ಅರ್ಥಕ್ಕಾಗಿ ಓದುವುದು ಸುಲಭವಾದದ್ದು. ನಿಧಾನವಾಗಿ ಓದುವುದರ ಬದಲಿಗೆ, ವೇಗವಾಗಿ ಓದುವುದು ಸುಲಭ. ಇದರರ್ಥ ಎಚ್ಚರಿಕೆಯಿಂದ ಓದುವುದ ಸರಾಗ ಓದಲ್ಲ, ಉದ್ದೇಶವಿಲ್ಲದ ಓದು, ಓದುವುದೇ ಅಲ್ಲ ಓದುವಿಕೆ ಯು ಭಾಷಾ ಮನೊ ಊಹಾ ಕ್ರೀಡೆ ಗೇಮ್ ಆಪ್ ಸೈಕೋ – ಲಿಂಗ್ವಿಸ್ಟಿಕ್ ಸ್ಪೆಕುಲೇಷನ್ ಎಂದು ಗುಡ್‌ಮ್ಯಾನ ನಿರ್ವಚನೆಯು ಸರಿಯಾಗಿಯೇ ಇದೆ. ಓದಲು, ಅರ್ಥವನ್ನು ಊಹಾ ನಿರೀಕ್ಷಿಸುವುದು ಅಗತ್ಯವಿದೆ. ಇದೊಂದು ಕತ್ತಲೆಯಲ್ಲಿ ಬೇಟೆ ಅಲ್ಲಿ ಲಭ್ಯವಿರುವ ಮಾಹಿತಿ ಆಧಾರಿತ ಫಲಶೃತಿ. ಲಭ್ಯದತ್ತಾಂಶದ ಆಧಾರದ ಮೇಲೆ ಮಾಡುವ ಊಹಾ ನಿರೀಕ್ಷೆಯು, ಮಾಹಿತಿಯ ಉತ್ತಮ ಉಪಯೋಗ. ನಾವು ಓದುವಾಗ ಮುಂದೇನಾಗಬಹುದೆಂದು ನಿರೀಕ್ಷಿಸುವುದನ್ನು ಮುಂದುವರೆಸುತ್ತಾ, ನಮ್ಮ ನಿರೀಕ್ಷೆಯಲ್ಲಿನ ಅನಿಶ್ಚಿತೆಯು ಕಡಿಮೆಯಾಗುತ್ತಾ ಬರುವಂತೆ ಕಡಿಮೆ ದೃಶ್ಯ ಮಾಹಿತಿಯ ಉಪಯೋಗದಿಂದಲೇ ಅರ್ಥ ಅರಿಯುವಂತಾಗಬೇಕು.

ನಾವು ಯಾವುದೇ ಅಪರಿಚಿತ ಅಥವಾ ಸಂಕೀರ್ಣ ಪಠ್ಯವಸ್ತು ಕ್ಲಿಷ್ಟಕರ ಕಾದಂಬರಿ, ತಾಂತ್ರಿಕ ಪ್ರಬಂಧ ಅಥವಾ ವಿದೇಶಿ ಭಾಷೆಯಲ್ಲಿನ ಪಠ್ಯ ವಸ್ತು (ಮುದ್ರಿತ – ಲಿಖಿತ) ವನ್ನು ಓದುವಾಗ, ಅವಶ್ಯವೆನಿಸಿದರೂ, ಪದ ಮತ್ತು ವಾಕ್ಯ, ವಾಕ್ಯಗಳಂತೆ ಸಾಗುವುದು, ನಿಘಂಟನ್ನು ಅನುಸರಿಸುತ್ತಾ, ಓದುವುದು ಕಠಿಣ ಕಾರ್ಯ. ನಾವು ವೇಗ ಕಡಿಮೆ ಮಾಡಿ ನಿಧಾನವಾಗಿ ಮುಂದುವರೆಯಲು ಬಯಸಿದರೂ, ಈ ಸಂದರ್ಭದಲ್ಲಿ ಉತ್ತಮ ತಂತ್ರವೆಂದರೆ ವೇಗೋತ್ಕರ್ಷದಿಂದ ಓದನ್ನು ಮುಂದುವರೆಸುವುದಾಗಿದೆ.

ನಾವು ಈವರೆವಿಗಿನ ಚರ್ಚಿಸಿದ ಫಲವಾಗಿ ಹೊಮ್ಮುವ ಸಾಮಾನ್ಯ ತತ್ವವೆಂದರೆ, ಓದುವಿಕೆಯ ಮುಂದುವರಿಕೆಯು ಅರ್ಥವನ್ನು ಸೂಚಿಸುತ್ತದೆ. ಯಾವುದೇ ಪಠ್ಯವಸ್ತುವಿನಲ್ಲಿನ ಹೊಸ ಅಥವಾ ತಿಳಿಯದಿರುವ ಪದವನ್ನು ತಿಳಿದುಕೊಳ್ಳಲು (ಅರ್ಥೈಸಿಕೊಳ್ಳಲು) ಪಠ್ಯದ ಇತರ ಬಾಗದಿಂದ ನಿಶ್ಚಿಯಿಸಬಹುದು. ಕಠಿಣ ಪಠ್ಯವಸ್ತುವನ್ನು ಅರ್ಥಮಾಡಿಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ ಅದನ್ನು ಓದುತ್ತಾ ಇರುವುದು.

- ಪದಶಃ ಓದುವುದರ ಮೇಲಿನ ಒತ್ತು

ಪದಗಳನ್ನು ಗುರುತಿಸುವುದು ಅಥವಾ ಬಿಡಿ ಬಿಡಿಯಾಗಿ ಪದಗಳನ್ನು ಕಲಿಯುವುದು ಒಟ್ಟಾರೆ ಕಲಿಕೆಯನ್ನು ಕಠಿಣವಾಗಿಸುವುದು ಈ ಕಾರಣಕ್ಕಾಗಿ ಪದಗಳ ಗುರ್ತಿಸುವಿಕೆಯ ಮೇಲೆ ಒತ್ತು ಕೊಡಲಾಗದು. ಸರಾಗವಾಗಿ ಓದಬಲ್ಲ ವ್ಯಕ್ತಿಯು ಅನೇಕ ರೀತಿಯ ಸುಳುಹುಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಯಾವುದಾದರೂ ಪಠದಲ್ಲಿ ಅಕ್ಷರ ಬಂದಾಗ ಅಥವಾ ವಾಕ್ಯದಲ್ಲಿ (ಅರ್ಥವತ್ತಾದ) ಪದ ಬಂದಾಗ ಅದನ್ನು ಗುರ್ತಿಸುವುದು ಸುಲಭ ಪದಗಳನ್ನು ಗುರ್ತಿಸುವುದೇ ಓದುವಿಕೆಯ ಪ್ರಮುಖ ಅಂಗವಲ್ಲ ವಾಕ್ಯದಲ್ಲಿ ಪಠ್ಯ ವಸ್ತುವಿನಲ್ಲಿ ಇರುವ ಇತರ ಪದಗಳಿಂದ ಬೇರೆಯಾದ ಪದವನ್ನು ಗುರ್ತಿಸಲು ಅನೇಕ ಹೆಚ್ಚು ದೃಶ್ಯ ಸುಳಹುಗಳು ಅಗತ್ಯವಾಗುತ್ತದೆ.

Notes

ದೃಶ್ಯ ಸಂಕೇತಗಳನ್ನು ಗ್ರಹಿಸುವ ಮತ್ತು ಅವುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವ ನಮ್ಮ ಸಾಮರ್ಥ್ಯವು ಸೀಮಿತವಾಗಿದ್ದರಿಂದ, ಈ ಪ್ರಕ್ರಿಯೆಗಾಗಿ ಅನೇಕ ದೃಶ್ಯ ಮಾಹಿತಿಯ ಅಗತ್ಯತೆಯು ಓದುವಿಕೆ ಯನ್ನು ಕಷ್ಟಕರವಾಗಿಸುತ್ತದೆ. ಓದುವಿಕೆಯನ್ನು ಕಲಿಯಲು ಬೇಕಾದ ಪ್ರಮುಖ ಅಂಶವೆಂದರೆ ಬರೆದಿರುವ ವಿಷಯವನ್ನು ಅರಿಯುವುದಕ್ಕಾಗಿ ಕನಿಷ್ಠ ದೃಶ್ಯ ಮಾಹಿತಿಯನ್ನು ಗುರ್ತಿಸುವುದಾಗಿದೆ.

ಸರಾಗವಾಗಿ ಓದುವುವರು ಪದಗಳನ್ನು ಓದುವುದಿಲ್ಲ ಬದಲಿಗೆ ವಿಷಯ ವಸ್ತುವನ್ನು ಓದುತ್ತಾರೆ. ಅರ್ಥಕ್ಕಾಗಿ ಓದುವುದು ಪದಗಳನ್ನು (ವಾಕ್ಯವನ್ನು) ಓದುವುದಕ್ಕಿಂತ ಸುಲಭವಾಗಿದೆ. ಮಕ್ಕಳಿಗೆ ವಿಷಯ ಖಂಡಿತ ಗೊತ್ತಿದೆ. ಏಕೆಂದರೆ ಪ್ರತಿ ದವನ್ನು ಓದುವುದರಿಂದ ಅವರ ಮಾಹಿತಿ ಗ್ರಹಿಸುವ ದಕ್ಷತೆಯ ಮೇಲೆ ಬಹಳವಾದ ಒತ್ತಡ ಹಾಕಿದಂತಾಗುತ್ತದೆ.

- ಸರಿಯಾಗಿ (ತಪ್ಪಿಲ್ಲದೆ) ಮತ್ತು ನಿಖರತೆಯಿಂದ ಓದುವುದು ಅತ್ಯಗತ್ಯ.

ತಪ್ಪು ಮಾಡದೆ, ಯಾರೂ ಕಲಿಯಲಾರರು. ತಪ್ಪಾಗುವ ಸಂಭವವನ್ನು, ಒಪ್ಪದೆ ಹೋದರೆ, ಪ್ರಾಣಿಗಳ ವಸ್ತುಗಳ ಸಸ್ಯಗಳ ಮರಗಳ ವ್ಯಕ್ತಿಗಳ ಅಥವಾ ಅಕ್ಷರಗಳನ್ನು ಓದುವುದನ್ನು ಕಲಿಯಲಾರೆವು. ನೈಜದಲ್ಲಿ ತಪ್ಪಾಗಬಹುದೆಂಬ ಭಯವೇ ಮಕ್ಕಳು ಓದುವುದನ್ನು ಕಲಿಯಲು ಇರುವ ಬಹುದೊಡ್ಡ ತಡೆಯಾಗಿದೆ. ಈ ಭಯದಿಂದ ಮಕ್ಕಳು ಓದಲು ಶ್ರಮ ವಹಿಸುವುದೇ ಇಲ್ಲ. ಓದುವನ್ನು ಕಲಿಯುವಾಗ ಮಕ್ಕಳು ಮಾಡುವ ತಪ್ಪುಗಳು ಸಹಜವೂ ಮತ್ತು ಓದುವುದನ್ನು ಕಲಿಯುವ ಪ್ರಕ್ರಿಯೆಯ ಅಗತ್ಯ ಭಾಗವಾಗಿದೆ.

ಒಂದು ಮಗುವು ಕಲಿಯುವ ಕಾರ್ಯದಲ್ಲಿ ಪ್ರಯತ್ನಿಸುವ ಮೊದಲೇ ತನು ಸರಿ ಯಾದದನ್ನು ತಿಳಿದಿದ್ದೇನೆ ಎಂದು ತಿಳಿದಿದ್ದಾರೆ. ಪ್ರಯತ್ನಕ್ಕೆ ಅರ್ಥವಿಲ್ಲವಾಗುತ್ತದೆ. ಹಾಗಲ್ಲದೆ, ಮಗುವು ಸ್ವಲ್ಪ ಸಮಯ ತೆಗೆದುಕೊಂಡು ತಾನು ಓದಿದ್ದು, ಇದಾಗಿರಬಹುದು(ವಸ್ತುವಿನ ಹೆಸರಾಗಲಿ ವಿಷಯದ ಅರ್ಥವಾಗಲಿ) ಎಂದು ಹೇಳಿದಾಗ (ತಾನು ಉತ್ತರಿಸಿದ್ದು ತಪ್ಪು ಆಗಿರಬಹುದೆಂಬ ಅರಿವು ಇಟ್ಟುಕೊಂಡು) ಕಲಿಕೆಯ ಕಾರ್ಯಕ್ಕೆ ಅರ್ಥವಿರುತ್ತದೆ. ಮಗುವಿನ ಉತ್ತರವು ಸರಿ ಎಂದಾದರೆ ಮಗುವಿನ ಊಹಾಶಕ್ತಿಗೆ ಇಂಬು ಸಿಗುತ್ತದೆ. ಹಾಗಲ್ಲದೆ ಮಗುವಿನ ಉತ್ತರವು ತಪ್ಪೆಂದಾದರೆ ಸರಿಯಾದ ಮಾಹಿತಿ ದೊರಕಿಸಿಕೊಂಡು, ತನ್ನ ಊಹೆಯನ್ನು ಸರಿಪಡಿಸಿಕೊಳ್ಳುತ್ತದೆ.

- ತಪ್ಪು ಆದಾಗ ತಕ್ಷಣವೇ ತಪ್ಪನ್ನು ಸೂಚಿಸುವುದು.

ಮಗುವು (ಕಲಿಕಾರ್ಥಿ)ಯು ಒಂದು ಪದವನ್ನು ಓದುವಾಗ ಆಗುವ ತಪ್ಪನ್ನು ಸೂಚಿಸುವುದು (ತಕ್ಷಣವೇ) ಶಿಕ್ಷಕರಿಗೆ ಸುಲಭದ ಕೆಲಸ. ಈ ರೀತಿಯ ಸೂಚನೆಯಿಂದ ಮಗುವಿಗೆ ಯಾವ ಸಹಾಯವಾಗದು. ಮಗುವು ಪದ ಅರ್ಥಕ್ಕಾಗಿ ಓದುತ್ತಿದೆಯೇ ವಿನಹ. ಪದ ಗುರ್ತಿಸುವುದಕ್ಕಲ್ಲ. ಮಗುವು ಪದದ ಗುರ್ತಿಸುವಿಕೆಗಾಗಿ ಓದುತ್ತಿದ್ದರೆ, ಪದವು ಸರಿಯಾಗಿ ಗುರ್ತಿಸಲ್ಪಟ್ಟಿದೆಯೋ ಎಂದು ತಿಳಿಯಲು, ತಕ್ಷಣದ ಸೂಚನೆ ಉಪಯುಕ್ತವಾಗಬಹುದು. ಆದರೆ ಅರ್ಥಕ್ಕಾಗಿ ಓದುತ್ತಿದ್ದರೆ ತಕ್ಷಣದ ಸೂಚನೆಯು (ಟೀಕೆಯು) ಮಾರಕವಾಗಬಹುದು ಓದಿನ ಪ್ರಕ್ರಿಯೆಯಲ್ಲಿ ನಾವು ಏನನ್ನು ಓದಿದೆವು ಎಂಬುದನ್ನು ತಪಾಸಿಸುತ್ತಿರುತ್ತೇವೆ. ನಾವು ಅರ್ಥಕ್ಕಾಗಿ ಓದುತ್ತಿದ್ದರೆ ಅರಿಯುವುದರಲ್ಲಿ ಅಥವಾ ಪದದ ಗುರ್ತಿಸುವಿಕೆಯಲ್ಲಿ ನಮ್ಮಿಂದಾಗುವ ತಪ್ಪುಗಳನ್ನು ಪರೀಕ್ಷಿಸಿಕೊಳ್ಳುತ್ತೇವೆ.

- ಮಕ್ಕಳನ್ನು ತಾವೇ ಸ್ವಂತ ಓದಿಕೊಳ್ಳುವುದನ್ನು ಕೊಡುವ ಪ್ರೋತ್ಸಾಹದಲ್ಲಿ ಎಚ್ಚರಿಕೆ ಇರಲಿ.

ಮಕ್ಕಳು ಓದುವುದರ ಬಗ್ಗೆ ಅನೇಕ ಅಂಶಗಳು ಮಕ್ಕಳ ತಂದೆ ತಾಯಿಗಳಿಗೂ ತಿಳಿದಿರುವುದಿಲ್ಲ ಹಾಗೂ ಶಿಕ್ಷಕರಿಗೂ ತಿಳಿಯದರಿಬಹುದು ಉದಾಹರಣೆಗೆ ಇಂಗ್ಲೀಷ್ ಪದ ಬಟ್ಟ ನಲ್ಲಿಯ ಯು ಅಕ್ಷರಕ್ಕೆ ಎ ಅ ಕಾರದ ಉಚ್ಚಾರಣೆ ಇದೆ ಎಂಬುದು ಮಕ್ಕಳಿಗೆ ಯಾರೂ ಹೇಳಬೇಕಾಗಿಲ್ಲ.

ಹಾಗೆಯೇ ಕೆಲವು ಪದಗಳಲ್ಲಿ ಮಧ್ಯದಲ್ಲಿನ ಅಥವಾ ಕೊನೆಯ ಅಕ್ಷರವನ್ನು ಪದದ ಧ್ವನಿಯನ್ನು ಆಧರಿಸಿ, ಉಚ್ಚರಿಸಲಾಗುವುದಿಲ್ಲ. ಹಿಂದಿ ಭಾಷೆಯಲ್ಲಿ ಮರ್ ಶಬ್ದಲ್ಲಿ ಮ ಪೂರ್ಣ ವಾಗಿಯೂ ರಾಮ ಶಬ್ಧದಲ್ಲಿ ಮ ಅರ್ಥವಾಗಿಯೂ (ಮ್) ಎಂದೂ ಉಚ್ಚರಿಸಲಾಗುವುದು. ಹೀಗೆ ಅನೇಕ ಧ್ವನಿ ನಿಯಮಗಳನ್ನು ಮಕ್ಕಳು ತಾವೇ ಅಂತರ್ಗತಗೊಳಿಸುಕೊಳ್ಳುತ್ತಾರೆ ಈ ರೀತಿ ಮಕ್ಕಳು ಕ್ಲಿಷ್ಟವಾದ ಈ ರೀತಿಯ ನಿಯಮಗಳನ್ನು ಗುರುತಿಸಬಲ್ಲರೆಂಬುದನ್ನು ಮೆಚ್ಚಿದಾಗ ನಾವು (ಶಿಕ್ಷಕರು) ಅವರಿಗೆ ಬೋಧಿಸುವ ವಿಧಾನವು ಪೂರ್ಣ ಬದಲಾಗುತ್ತದೆ. ಆಗ ನಾವು ಮಕ್ಕಳಲ್ಲಿ ನಿಖರತೆ ಕಾಣುವ ಅಡಿಗಡಿಗೆ ತಿದ್ದುವ, ಮಡಿವಂತಿಕೆ ಕಾಣುವುದನ್ನು ಬಿಟ್ಟು ಬದಲಿಗೆ ಅವರಿಗೆ ಆಸಕ್ತಿಕರವಾದ ಸವಾಲು ಯುಕ್ತ ಹೊಸ ಓದುವ ಸಾಮಗ್ರಿ ಒದಗಿಸಲು ಮುಂದಾಗುತ್ತೇವೆ.

Notes

### ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 3

1. *ಓದುನ್ನು ಕಲಿಯುವ ಸ್ವಾಭಾವಿಕ ಮತ್ತು ಅತ್ಯವಶ್ಯ ಹಂತವೆಂದರೆ ಒಂದನ್ನು ಗುರ್ತಿಸಿ.*

   *ಎ) ಓದುವಾಗ ಮಾಡುವ ತಪ್ಪುಗಳು.*

   *ಬಿ) ತಪ್ಪು ಮಾಡದಿರುವುದು.*

   *ಸಿ) ಅಕ್ಷರಗಳನ್ನು ಕಂಠಸ್ಥ ಮಾಡುವುದು.*

   *ಡಿ) ಪದಗಳನ್ನು ಕಂಠಸ್ಥ ಮಾಡುವುದು.*

2. *ಮಗುವು ಓದನ್ನು ಕಲಿಯುತ್ತಿರುವಾಗ, ನಿಲ್ಲಿಸಿ ಮತ್ತು / ಅಥವಾ ತಪ್ಪನ್ನು ತಕ್ಷಣವೇ ತಿದ್ದುವುದು, ಉಪಯುಕ್ತವಲ್ಲ ಎಂದು ಏಕೆ ಪರಿಗಣಿತವಾಗಿದೆ?*

   ..........................................................................................................................

   ..........................................................................................................................

   ..........................................................................................................................

3. *ಓದನ್ನು ಕಲಿಯುವ ಕಾರ್ಯವೆಂದರೆ, ನಿಯಮಗಳನ್ನು ಕಂಠಪಾಠ ಮಾಡಿ, ನೆನಪಿನಲ್ಲಿಟ್ಟುಕೊಳ್ಳುವುದಲ್ಲಿ, ಏಕೆ?*

   ..........................................................................................................................

   ..........................................................................................................................

   ..........................................................................................................................

4. *ಓದುವುದನ್ನು ಕಲಿಸುವ ಮಾರ್ಗಗಳಾವುವು?*

   ..........................................................................................................................

   ..........................................................................................................................

   ..........................................................................................................................

Notes

*5. ಓದುವುದನ್ನು ಕಲಿಸುವ, ವರ್ತಮಾನ ವಿಧಾನಗಳಲ್ಲಿರುವ ನ್ಯೂನತೆಗಳಾಗುವು? ಉದಾಹರಣೆ ಸಹಿತ ವಿವರಿಸಿ.*

..............................................................................................................................

..............................................................................................................................

..............................................................................................................................

*6. ಓದುವಿಕೆಯ ಅನೇಕ ಅಂಶಗಳನ್ನು ಮಕ್ಕಳು ತಾವೇ ತಿಳಿಯುತ್ತಾರೆ. ಈ ಹೇಳಿಕೆಗೆ ಆಧಾರವೇನು.*

..............................................................................................................................

..............................................................................................................................

..............................................................................................................................

## 5.4.2 "ಓದು" ವುದನ್ನು ಕಲಿಯುವಲ್ಲಿ ಪೂರಕ ಅಂಶಗಳು

ಓದುವ(ವಾಚಿಸುವ) ಅನೇಕ ಸಂದರ್ಭ(ಅವಕಾಶ)ಗಳು

ಮಕ್ಕಳಿಗೆ "ಓದುವಿಕೆ" ಯನ್ನು ಕಲಿಸುವಾಗ ಕೆಲವು ಅಂಶಗಳನ್ನು ಮನದಲ್ಲಿ ಇರಿಸಿಕೊಳ್ಳಬೇಕಾಗುವುದು. ಮೊದಲನೆಯದಾಗಿ, ಓದಿನ ಸಾಮಗ್ರಿ ಅರ್ಥವತ್ತಾಗಿಯೂ, ಮಕ್ಕಳ ಹಂತ(ಸ್ತರ)ಕ್ಕೆ ತಕ್ಕುದಾಗಿರಬೇಕು. ಎರಡನೆಯದಾಗಿ ವಾಚನ ಸಾಮಗ್ರಿಯು, ಮಕ್ಕಳ ಪರಿಚಿತ ಭಾಷೆಯಲ್ಲಿರಬೇಕು. ಮೂರನೆಯದಾಗಿ, ಶಿಕ್ಷಕರು, ಮಕ್ಕಳಿಗೆ ವಿವಿಧ ಸಾಮಗ್ರಿಗಳನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ಗರಿಷ್ಠ ಅವಕಾಶಗಳನ್ನು ಕೊಡಬೇಕು. ಶಿಕ್ಷಕರು ಮಕ್ಕಳೊಡನೆ ಅರ್ಥಪೂರ್ಣ ಸಂವಾದ ಮಾಡುತ್ತಾ, ಮಕ್ಕಳು ಹೇಳುವುದನ್ನು ಎಚ್ಚರಿಕೆಯಿಂದ ಆಲಿಸುತ್ತಾ, ಆತ್ಮೀಯತೆಯಿಂದ ಬೇರೆ ಮಕ್ಕಳೊಡನೆ ಬೆರೆತು ಸಂವಾದಿಸುವಂತೆ ಅವಕಾಶ ಮಾಡಿಕೊಡಬೇಕು. ಓದಬೇಕಾದ ಸಾಮಗ್ರಿಯನ್ನು ಅಕ್ಷರಗಳನ್ನಾಗಿ ಪದಗಳನ್ನಾಗಿ ಧ್ವನಿ ಮಾರ್ಪಡುಗಳನ್ನಾಗಿ ಒಡೆಯಬಾರದು. ಸಣ್ಣ ತುಕಡಿಗಳಾಗಿ ಮಾಡುವುದರಿಂದ ಕಲಿಯುವುದಕ್ಕೆ ಸಹಾಯಕವಾಗುವುದಿಲ್ಲ. ಓದುವಿಕೆಯ ತುಣುಕುಗಳಲ್ಲಿ ಕಲಿಯಲಾಗದು ಅಥವಾ ಪೂರ್ವ ನಿರ್ವಜಿತ ರೀತಿಯಲ್ಲಿ ಕಲಿಯಲಾಗದು. ಓದುವುದನ್ನು ಓದುತ್ತಲೇ ಕಲಿಯಬೇಕು. ಮತ್ತು ಮಕ್ಕಳು ಅವರಿಗೆ ಆನಂದದಾಯಕವಾದ ಸಾಮಗ್ರಿಯನ್ನು ಓದುತ್ತಾ, ಓದುವುದನ್ನು ಕಲಿಯುತ್ತಾರೆ.

ಓದು ಉದ್ದೇಶಪೂರಿತವೂ ಸವಾಲಾಗಿಯೂ ಇರಬೇಕು

ಓದುವ ಸಾಮಗ್ರಿ ಓದುಗನಿಗೆ ಉಪಯುಕ್ತವಾಗಿರಬೇಕು. ಅರ್ಥಪೂರ್ಣವಾಗಿಯೂ ಮತ್ತು ಸವಾಲಯುಕ್ತವೂ ಆಗಿರಬೇಕು. ನಾವು ಏನನ್ನಾದರೂ ಓದುವಾಗ, ಒಂದು ಉದ್ದೇಶವಿಟ್ಟುಕೊಂಡು ಓದುತ್ತೇವೆ. ಅದು ಮನರಂಜನೆಗಿರಬಹುದು. ಕುತೂಹಲಕ್ಕಿರಬಹುದು. ಕಥೆಯಲ್ಲಿನ ಘಟನೆಗಳ ಶ್ರೇಣಿ ತಿಳಿಯಲು ಅಂತ್ಯ ತಿಳಿಯಲು, ನಮ್ಮ ಸುತ್ತಲಿನ ಸನ್ನಿವೇಶ ಪರಿಸರದಲ್ಲಿನ ಆಗು ಹೋಗುಗಳನ್ನು ಅರಿಯಲು ಮತ್ತು ಆ ರೀತಿಯ ಸಾಮಗ್ರಿಗಳ ಲೇಖನವಿದೆಯೋ ಇಲ್ಲವೋ ಎಂದು ತಿಳಿಯಲು ಓದುತ್ತೇವೆ. ಈ ರೀತಿಯ ಸವಾಲುಗಳು ಬಂದಾಗ, ಹೆಚ್ಚು ತಿಳಿಯಲು, ಚರ್ಚಿಸಲು, ಮತ್ತು ಅನುಭವ ಹಂಚಿಕೊಳ್ಳಲು ಹೆಚ್ಚು ವೇಗವಾಗಿ, ಶೀಘ್ರಗತಿಯಲ್ಲಿ ಓದುವುದನ್ನು ಕಲಿಯುತ್ತೇವೆ. ಒಂದು ಪಠ್ಯ ಸಾಮಗ್ರಿಯಲ್ಲಿನ ಅರ್ಥವನ್ನು ತಿಳಿಯುವುದು ಸವಾಲಾಗಿದ್ದಾಗ, ಹೆಚ್ಚು ಪರಿಶ್ರಮ ಹಾಕಲು ಸ್ಫೂರ್ತಿ ದೊರಕುತ್ತದೆ. ತರಗತಿಯಲ್ಲಿ ಹೆಚ್ಚು ಹೆಚ್ಚು ಆಸಕ್ತಿಕರ ಪಠ್ಯವಸ್ತು (ವಾಚನಸಾಮಗ್ರಿಗಳು) ಒದಗಿಸಿದಾಗ, ಕುತೂಹಲಕಾರಿ ವಾತಾವರಣವುಂಟಾಗುವುದು ಅರ್ಥಪೂರ್ಣ, ಸವಾಲುಯುಕ್ತ ವಾಚನ ಸಾಮಗ್ರಿಗಳಿದ್ದಾಗ ಮಕ್ಕಳು ಓದುವುದನ್ನು ಕಲಿಯುತ್ತಾರೆ.

## ಓದುವಿಕೆ

Notes

### ಸಾಂದರ್ಭಿಕ ವಾಚನ ಸಾಮಗ್ರಿ

ಮಕ್ಕಳು ಸಂದರ್ಭಗಳಿಂದ, ಭಾಷೆಯನ್ನು ಮತ್ತು ಓದುವುದನ್ನು ಕಲಿಯುತ್ತಾರೆ. ಕಥೆ ನಿರೂಪಿಸುವಾಗ ಹೇಳುವಾಗ ಮಧ್ಯೆ ನಿಲ್ಲಿಸಿ, ಮಕ್ಕಳನ್ನು ಕಥೆ ಪೂರ್ಣಗೊಳಿಸುವಂತೆ ಹೇಳಿದಾಗ ಏನಾಗುವುದು?ಅನೇಕ ವಿಷಯಗಲು (ಪರಿಕಲ್ಪನೆಗಳು)(ಉದಾ. ದೊಡ್ಡದಾದ ಚಿಕ್ಕದಾದ ಹತ್ತಿರ – ದೂರ , ದಪ್ಪ – ಸಣ್ಣ ಇತ್ಯಾದಿ) ಕಥೆಯ ಸ್ವಾಭಾವಿಕ ಅಂಗಗಳಾಗಿರುತ್ತವೆ. ಮಕ್ಕಳು ಈ ಪರಿಕಲ್ಪನೆಗೆಗಳನ್ನು ಕಥೆಯ ಮೂಲಕ ಇವುಗಳನ್ನು ಗಳಸಿಕೊಳ್ಳುತ್ತಾರೆ ಕಥೆಯ ವಿಷಯ ವಸ್ತುವಿನಲ್ಲಿ ಈ ಪರಿಕಲ್ಪನೆಗಳಿದ್ದು, ನಟನೆಯ ಮೂಲಕ ಸ್ಪಷ್ಟಗೊಳ್ಳುತ್ತವೆ. ಇದರ ಜೊತೆಗೆ ಮಕ್ಕಳು, ತಮ್ಮನ್ನು ವಿವಿಧ ಪಾತ್ರಗಳಿಗೆ ಕಲ್ಪನಾ ಸಂದರ್ಭಗಳಿಗೆ ಆಳವಡಿಸಿಕೊಳ್ಳುತ್ತಾರೆ. ಉದಾ ಪಾತ್ರಗಳಮತೆ ನಡೆಯುವುದು ನುಡಿಯುವುದು ಇತ್ಯಾದಿ ಇವು ಮೊಲದಂತೆ ಜಿಗಿಯುವುದು ಕುದುರೆಯಂತೆ ಕೆನೆಯುವುದು ಕೋಳಿಯಂತೆ ಕೂಗುವುದು ಇತ್ಯಾದಿ. ಈ ರೀತಿಯ ಸಂದರ್ಭಗಳು ಮಕ್ಕಳು ಓದುವುದನ್ನು ಕಲಿಯಲು ಸಹಾಯಕವಾಗುತ್ತವೆ.

### ಪರಿಚಿತ ವಾಕ್ಯ ವಿನ್ಯಾಸ ಗಳ ಬಳಕೆ

ಮಕ್ಕಳು ತಮಗೆ ತಿಳಿದಿರುವ ಭಾಷೆಯ ಆಧಾರದ ಮೇಲೆ, ತಾವು ಓದುವಾಗ, ಮುಂದೆನಾಗಬಹುದೆಂದು ನಿರೀಕ್ಷಿಸುತ್ತಾರೆ. ಓದುವ ಸಾಮಗ್ರಿಯು, ಮಕ್ಕಳ ಭಾಷೆಗೆ ಹತ್ತಿರವಿದ್ದಷ್ಟು, ಓದನ್ನು ಕಲಿಯುವುದು ಸುಲಭವಾಗುತ್ತದೆ.

ಆದ್ದರಿಂದ ಮಕ್ಕಳು ತಾವು ಈಗಾಗಲೇ ಓದಿರುವ ಆಲಿಸಿರುವ ಸಾಮಗ್ರಿಗೆ ಸಂಬಂಧಗೊಳಿಸುವುದು ಮತ್ತು ಅವನ್ನು ಉಪಯೋಗಿಸುವ ಮಾರ್ಗ ಕಂಡುಕೊಳ್ಳುವುದು ಅವಶ್ಯಕ. ಉದಾಹರಣೆಗೆ ಮನೆಯಲ್ಲೋ, ಬೇರೆಲ್ಲೋ ಕಥೆಯನ್ನು ಓದುವ ಅವಕಾಶ ದೊರಕಿದಾಗ ಓದುವುದು ಸುಲಭವಾಗುವುದು.

### ವಾಚನ ಮೂಲೆಗಳು

ತರಗತಿಯ ಒಂದು ನಿರ್ದಿಷ್ಟ ಮೂಲೆಯಲ್ಲಿ ಆಯ್ದ ಮಕ್ಕಳ ಸಾಹಿತ್ಯವನ್ನು ಮಕ್ಕಳು ಓದುವುದಕ್ಕಾಗಿ ಇರಿಸುವುದು ಮುಖ್ಯ. ಈ ಪುಸ್ತಕಗಳನ್ನು ಗಟ್ಟಿಯಾಗಿ ಓದಲೂ ಸಹ ಬಳಸಬಹುದು. ಈಗಾಗಲೇ ಓದಿರುವ ಕಥೆಯನ್ನು ಕೇಳುವುದರಿಂದ ಓದುವುದನ್ನು ಕಲಿಯುವುದರಲ್ಲಿ ಸಹಾಯಕವಾಗುತ್ತದೆ. ಪರಿಚಿತವಾಗಿರುವ ಕಥೆಯನ್ನು ಗಟ್ಟಿಯಾಗಿ ಬಹುಬಾರಿ ಓದುವುದರಿಂದ ಮಕ್ಕಳು ಕ್ರಮೇಣ ಘಟನೆಗಳ ಕ್ರಮಾನುಸಾರವನ್ನು ಗ್ರಹಿಸುತ್ತಾರೆ. ಇದರಿಂದ, ಓದುವಾಗ ಮುಂದೆ ಆಗುವುದನ್ನು (ಬರಬಹುದಾದ್ದನ್ನು) ಊಹಿಸಿಕೊಂಡು ಗ್ರಹಿಸಲು ಸಹಾಯಕವಾಗುತ್ತದೆ.

Notes

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 4**

1. *ಈ ಕೆಳಗಿನವುಗಳಲ್ಲಿ "ಓದುವಿಕೆ" ಯನ್ನು ಕಲಿಯುವಲ್ಲಿ ಪೂರಕವಾದವುಗಳು ಯಾವುವು? ನಿಮ್ಮ ಆಯ್ಕೆಯನ್ನು ಕಾರಣ ಸಹಿತ ತಿಳಿಸಿ.*

   *ಎ) ಬಹುಬೆಲೆಯ ಪುಸ್ತಕಗಳು*

   *ಬಿ) ಸಾಂದರ್ಭಿಕ ಪೂರಿತ ವಾಚನ ಸಾಮಗ್ರಿಗಳು*

   *ಸಿ) ಪರಿಚಿತ ವಕ್ಯ ವಿನ್ಯಾಸಗಳನ್ನು ಉಪಯೋಗಿಸುವುದು*

   *ಡಿ) ಓದಲು ವಿಪುಲ ಅವಕಾಶಗಳು.*

2. *ಓದುವಿಕೆಯ ಕಲಿಕೆಯಲ್ಲಿ ಸಾಂದರ್ಭಿಕ ವಾಚನ ಸಾಮಗ್ರಿಗಳ ಮಹತ್ವವೇನು?*

   ................................................................................................................................

   ................................................................................................................................

   ................................................................................................................................

3. *ತರಗತಿಯಲ್ಲಿ "ವಾಚನ ಮೂಲೆ" ಎಂದರೇನು. ಈ ವಾಚನ ಮೂಲೆಗಳನ್ನು ನೀವು ಹೇಗೆ ಉಪಯೋಗಿಸುವಿರಿ?*

   ................................................................................................................................

   ................................................................................................................................

   ................................................................................................................................

### 5.4.3 "ಓದುವಿಕೆ" ಯನ್ನು ಕಲಿಸಲು ನಾವೇನು ಮಾಡಬಹುದು?

ಇದೀಗ ನಾವು " ಓದುವಿಕೆ"ಯನ್ನು ಕಲಿಸುವ ತಂತ್ರಗಳು ಮತ್ತು ಅವುಗಳ ನ್ಯೂನತೆಗಳ ಬಗ್ಗೆ ಅಧ್ಯಯನ ಮಾಡಿದೆವು ಇದರಿಂದ, ಉದ್ಭವಿಸಿದ ಪ್ರಶ್ನೆಎಂದರೆ, ಸಾಮಾನ್ಯವಾಗಿ, ಜನಪ್ರಿಯ ವಿಧಾನಗಳನ್ನು ಉಪಯೋಗಿಸಿದಾಗ ಅವುಗಳು ಸೂಕ್ತವಾಗಿಲ್ಲವೆಂದು ಕಂಡು ಬಂದಿತು, ಹಾಗಾದರೆ ಮಕ್ಕಳು " ಓದುವುದನ್ನು" ಕಲಿಯಲು ಸಹಾಯವಾಗಲು ಇನ್ನೇನು ಮಾಡಬಹುದು?

ಈ ಕೆಳಗೆ ಕೆಲವು ಚಟುವಟಿಕೆಗಳು ಹಾಗೂ ಕಾರ್ಯತಂತ್ರವನ್ನು ಕೊಡಲಾಗಿದೆ. ಪಾರಂಪರಿಕ ವಿಧಾನಗಳಿಗೆ ಬಳಕೆಯಾಗಿರುವವರು, ಈ ವಿಧಾನಗಳನ್ನು ಆಶ್ಚರ್ಯಕರವೂ ಹಾಗೂ ಅಸಂಭವಗಳೆಂದು ತೀರ್ಮಾನಿಸಬಹುದು, ಆದರೆ ಸಾಮಾನ್ಯವಾಗಿ ಉಪಯೋಗಿಸುವ ತಂತ್ರಗಳು, ಆಸಕ್ತಿಕರವೂ, ಪರಿಣಾಮ ಇರಿಯೂ ಆಗಿದ್ದಿದ್ದರೆ, ನಾವು ಚಟುವಟಿಕೆ ಮತ್ತು ವಿಧಾನಗಳಿಗಾಗಿ ಯೋಜಿಸಬೇಕಾದ ಪ್ರಮೇಯವಿರಲಿಲ್ಲ.

ಪುಸ್ತಕಗಳಿಂದ ಪ್ರಾರಂಭಿಸೋಣ

"ಓದಿನ" ಕಲಿಕೆಯನ್ನು ಫ್ಲಾಸ್ ಕಾರ್ಡ್, ಅಕ್ಷರದ ಮರದ ಮಾದರಿಗಳು, ಚಾರ್ಟ್‌ಗಳಿಂದ ಪ್ರಾರಂಭಿಸುವುದುಕ್ಕಿಂದ, ಪುಸ್ತಕಗಳ ಮೂಲಕ ಮಾಡುವುದು ಉತ್ತಮ, ಹೇಗಾದರೂ ಮಕ್ಕಳು ಪುಸ್ತಕಗಳನ್ನು ಓದಬಲ್ಲವರಾಗುವುದು ಖಚಿತ ಪಡಿಸುವುದು ಮುಖ್ಯ ಉದ್ದೇಶ ಚಾರ್ಟ್ ಮತ್ತು ಇತರೆ ಸಾಮಗ್ರಿಗಳನ್ನು ಕೆಲವೊಮ್ಮೆ ಉಪಯೋಗಿಸಬಹುದೇ ವಿನಹ, ಅವು, ಪುಸ್ತಕಗಳ ಪಾತ್ರವನ್ನು ಅವುಗಳನ್ನು ಹೇಗೆ ಉಪಯೋಗಿಸುದೆಂದು ತಿಳಿಯಬೇಕು ಸಣ್ಣ ಸಣ್ಣ (ಕಿರು) ಕಥೆಗಳಿರುವ,ಆಸಕ್ತಿಕರ ಪುಸ್ತಕಗಳು ಉಪಯುಕ್ತ ಕಥಾ ಸಂಕಲನಗಳು,ಸರಳವಾದ ಮತ್ತು ಚಿತ್ರಯುಕ್ತವಾದ,ಮುದ್ರಿತ ಅಥವಾ ಹಸ್ತ ಲಿಖಿತವಾಗಿರಬಹುದು (ಮಕ್ಕಳೇ ಚಿತ್ರ ಬರೆಯಬಹುದು) ಸಂಕಲನದಲ್ಲಿ ಕಥೆಗಳೇ ಅಲ್ಲದೆ, ಕವಿತೆ, ಗೀತೆಗಳು ಮತ್ತು ಅಭಿನಯ ಗೀತೆಗಳನ್ನು ಸೇರಿಸಬಹುದು.

## ಓದುವಿಕೆ

Notes

### ಪುಸ್ತಕವನ್ನು ಗಟ್ಟಿಯಾಗಿ, ಮಕ್ಕಳಿಗೆ ಓದಿ ಹೇಳುವುದು

ನಾವು ಮಕ್ಕಳಿಗೆ ಪುಸ್ತಕವನ್ನು ಗಟ್ಟಿಯಾಗಿ ಓದಿ ಹೇಳುವಾಗ, ಮಕ್ಕಳ ಗುಂಪು ಬಹಳ ದೊಡ್ಡದಾಗಿರಬಾರದು, ಮಕ್ಕಳು ನಿಮ್ಮ ಬಳಿ ಕುಳಿತಿರುವುದು ಅಪೇಕ್ಷಣೀಯ ತರಗತಿಯ ಉಳಿದ ಮಕ್ಕಳಿಗೆ, ಆಸಕ್ತಿಕರವಾದ ಚಟುವಟಿಕೆ/ಕಾರ್ಯವನ್ನು ಕೊಡಬಹುದು ನಿಮ್ಮ ಸುತ್ತಲೂ ಕುಳಿತಿರುವ ಮಕ್ಕಳು ಓದುತ್ತಿರುವ ಪುಟ ನೋಡು ವಂತಿರಬೇಕು. ಓದಿ ಹೇಳುವಾಗ ನಿಮ್ಮ ಶಿಕ್ಷಕರ ಕಡೆಯಿಂದ ಮಾಹಿತಿ ಸೇರಿಸಿ ವಿವರಿಸಬೇಕು ಕೆಲವು ಪುಸ್ತಕಗಳು ಬಹಳ ವಿವರಣೆ ಹೊಂದಿದ್ದು, ಅವುಗಳನ್ನು ಹ್ರಸ್ವಗೊಳಿಸಿ, ನಿಮ್ಮದೇ ಶಿಕ್ಷಕರ ಪದಗಳಿಂದ ಜೋಡಿಸಬೇಕು ಬಹಳ ವಿವರವಿರುವ ಕಥೆಯನ್ನು ಓದುವುದರಿಂದ, ಮಕ್ಕಳ ಗಮನ ಹಿಡಿದಿಡುವುದು ಸಾಧ್ಯವಾಗದು ಒಂದು ಪುಟದಲ್ಲಿ ಒಂದು ಅಥವಾ ಎರಡು ವಾಕ್ಯಗಳಿದ್ದರೆ, ಅವಕ್ಕೆ ಸ್ವಲ್ಪ ಸೇರಿಸಿ ಹೇಳಬಹುದು ಪುಸ್ತಕದಲ್ಲಿರುವ ನಿರೂಪಣಾ ಚಿತ್ರಗಳನ್ನು ಮಕ್ಕಳಿಗೆ ತೋರಿಸಿ ಅದರ ಬಗ್ಗೆ ವಿವರವಾಗಿ ಮಾತನಾಡುವುದು ಉಪಯುಕ್ತ.

### ಗೀತೆ/ಕವಿತೆಗಳನ್ನು ವಾಚಿಸುವುದು ಹಾಡುವುದು

"ಓದುವಿಕೆ"ಯ ಒಂದು ಪ್ರಮುಖ ಅಂಗವೆಂದರೆ ಮುಂದಾಗಿ ನಿರೀಕ್ಷಿಸುವ ಸಾಮರ್ಥ್ಯ ಈ ಸಾಮರ್ಥ್ಯ ಬೆಳವಣಿಗೆಯಲ್ಲಿ ಕವಿತೆಗ ಳು ಪ್ರಮುಖ ಪಾತ್ರ ವಹಿಸುತ್ತವೆ ಮಕ್ಕಳು ನಿರಂತರವಾಗಿ, ಕ್ಲುಪ್ತವಾಗಿ,ಕಾವ್ಯ ವಾಚನವನ್ನು ಕೇಳುತ್ತಿದ್ದರೆ, ಅವರು ಭಾಷೆಯ ವಿನ್ಯಾಸವನ್ನು ಮೆಚ್ಚುವ ಸಂಭವಗಳು ಹೆಚ್ಚಾಗುತ್ತವೆ ಕಾವ್ಯ, ಕವಿತೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು, ಸುಲಭ ಮಕ್ಕಳು ಇದಕ್ಕಾಗಿ ಹೆಚ್ಚು ಪರಿಶ್ರಮ ಹಾಕಬೇಕಾದ್ದಿಲ್ಲ. ಕೇಳುತ್ತಾ ಕೇಳುತ್ತಾ, ಹೇಳುತ್ತಾ ಆನಂದಿಸುತ್ತಾ ನೆನಪಿನಲ್ಲಿಟ್ಟುಕೊಳ್ಳಬಹುದು ಮಕ್ಕಳಿಗೆ ವಿವಿಧ, ಉತ್ತಮ ಕವಿಗ್ವಿಣ್ವಳುಬೇಕು ಶಿಕ್ಷಕರು ಈ ರೀತಿಯ ಕವಿತೆಗ ಳನ್ನು ಸ್ವಾಭಾವಿಕವಾಗಿ ಆಯ್ಕೆ ಮಾಡಬಹುದು ಕೇವಲ ನೀತಿ ಭೋದಕ ಗೀತೆಗಳಲ್ಲದೆ, ಮಕ್ಕಳು ಆಡುವಾಗ, ಓಡುವಾಗ, ನಡೆದಾಡುವಾಗ ಹೇಳಬಹುದಾದ ಗೀತೆಗಳನ್ನು ಸಂಗ್ರಹಿಸಬಹುದು ಅವು ಜಾನಪದ ಹಾಡುಗಳಾಗಬಹುದು ಇದನ್ನು ಒಂದು ಕಿರುಹೊತ್ತಿಗೆಯ ರೂಪದಲ್ಲಿ ಚಿತ್ರ ಸಮೇತ ನೀಡಬಹುದು. ಈ ದಿಶೆಯಲ್ಲಿ ಹಿರಿಯ ಮಕ್ಕಳ ಸಾಹಯ ಪಡೆಯಬಹುದು. ಈ ಕವಿತಾ ಸಂಗ್ರಹವನ್ನು ಇತರೇ ಪುಸ್ತಕಗಳಂತೆ ಓದಬಹುದು. ಈ ಪುಸ್ತಕದ ಸುತ್ತ ಕುಳಿತು ಹಾಡಬಹುದು ಒಂದೆರಡು ಬಾರಿ ವಾಚನದನಂತರ, ಪುಸ್ತಕ ನೋಡದೆ ಹಾಡಬಹುದು ಮಕ್ಕಳು ಪುನರುಚ್ಚರಿಸಬಹುದು ಕವಿತೆ ಹಾಡು ಮಕ್ಕಳಿಗೆ ಇಷ್ಟವಾದಾಗ, ಅವರು ಅದನ್ನು ಓದಿದಾಗ,ಮುಂದಿನ ಸಾಲುಗಳನ್ನು ಪದಗಳನ್ನು ಬಹುಬೇಗ ನಿರೀಕ್ಷಿಸಬಲ್ಲರು. ಹೀಗೆ ಮಕ್ಕಳಿಗೆ ಇಷ್ಟವಾಗುವ, ತಾ ಳಬದ್ಧವಾದ, ಪ್ರಾಸವಿರುವ, ಉತ್ತಮ ಕವಿತೆಗ ಳನ್ನು ಶಿಕ್ಷಕರು ಹೆಣೆಯಬಹುದು ಮಕ್ಕಳು ಇವುಗಳಿಂದ ಆನಂದಿಸುತ್ತಾರೆ ಮಕ್ಕಳು ತಾವೇ ಈ ರೀತಿಯ ಪುಟ್ಟಪುಟ್ಟ ಕವಿತೆಗಳನ್ನು ರಚಿಸಬಹುದು

Notes

**The Quarrel**

*I quarreled with my brother,*
*I don't know what about,*
*One thing led to another*
*And somehow we fell out.*
*The start of it was slight,*
*The end of it was strong,*
*He said he was right,*
*I knew he was wrong!*
*We hated one another.*
*The afternoon turned black.*
*Then suddenly my brother*
*Thumped me on the back,*
*And said, 'oh, come along!*
*We can't go on all night-*
*I was in the wrong.'*
*So he was in the right.*

*—Eleanor Farjeon*

The amount children would learn enjoying reading and writing such poems is far greater than what we can achieve by teaching 'a' for 'apple'. Or consider the following poem that may be used in the middle school:

*I went to the pictures tomorrow,*
*I took a front seat at the back;*
*I fell from the pit to the gallery,*
*And broke a front bone in my back.*
*A lady she gave me some chocolate,*
*I ate it and gave it her back*
*I phoned for a taxi and walked it,*
*And that's why I never came back.*

If children enjoy the poem, they can make similar poems in English and/ or in their own languages. They can also try to translate this poem into the languages represented in the classroom.

Notes

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 5

1. *ಓದುವಿಕೆಯ ಭೋದನೆಯನ್ನು ಪ್ರಾರಂಭಿಸಲು ಉತ್ತಮ ರೀತಿ*
   *ಎ) ಫ್ಲಾಷ್ ಕಾರ್ಡ್*
   *ಬಿ) ಭಿತ್ತಿ ಪತ್ರಗಳು (ಚಾರ್ಟ್)*
   *ಸಿ) ಮರದ ಅಕ್ಷರ ಮಾದರಿಗಳು ಮತ್ತು ಇತರೆ ಸಾಮಗ್ರಿ*
   *ಡಿ) ಪುಸ್ತಕಗಳು*

2. *"ಓದುವುದು ಹೇಗೆ" ಎಂಬುದನ್ನು ಕಲಿಸುವ, ಪಾರಂಪರಿಕ ವಿಧಾನಗಳಲ್ಲದೆ,ಮಕ್ಕಳು "ಓದುವಿಕೆಯನ್ನು ಕಲಿಯಲು, ಇನ್ನೇನು ಮಾಡಬಹುದು?*

   ..................................................................................................................................

   ..................................................................................................................................

   ..................................................................................................................................

3. *ಕವಿತೆ, ಪದ್ಯಗಳನ್ನು ಉಪಯೋಗಿಸಿಕೊಂಡು "ಓದುವಿಕೆ"ಯನ್ನು ಭೋದಿಸುವುದು ಸುಲಭವಾಗಿದೆ ಏಕೆ?*

   ..................................................................................................................................

   ..................................................................................................................................

   ..................................................................................................................................

### 5.4.4 ಕೆಲವು ಕ್ರಿಯಾ ಕಲಾಪಗಳು (ಚಟುವಟಿಕೆಗಳು)

ಅಕ್ಷರಗಳನ್ನು ಗುರುತಿಸುವುದು

ಆಸಕ್ತಿಕರ ಸಾಮಗ್ರಿಗಳ ಒಡನಾಟದ ಪ್ರಕ್ರಿಯೆಯಿಂದ, ಮಕ್ಕಳು ತಾವೇ ಅಕ್ಷರಗಳನ್ನು ಗುರುತಿಸಬಲ್ಲರಾಗುತ್ತಾರೆ ಎಂದು ನಾವು ನಂಬುತ್ತೇವೆ. ಇದು ಶಬ್ದ (ಧ್ವನಿ)ಯನ್ನು, ನಮ್ಮ ಸುತ್ತಲಿನ ಪರಿಸರದಲ್ಲಿ ಕೇಳುತ್ತಾ ಗಳಿಸಿಕೊಳ್ಳುವಂತೆ. ಹೀಗೆ ಚಟುವಟಿಕೆಗಳು ಈ ಪ್ರಕ್ರಿಯೆಗಳಲ್ಲಿ ಸಹಾಯವಾಗಬಲ್ಲವು ಉದಾಹರಣೆಗೆ ಕಥೆ, ಕವಿತೆಗ ಳ ಮೂಲಕ ಅಕ್ಷರ ಪರಿಚಯ. ಒಂದು ಕಥೆ ಅಥವಾ ಕವಿತೆಯನ್ನು ಅನೇಕ ಬಾರಿ ಕೇಳಿದ ಹಾಡಿದ ನಂತರ, ನಿರ್ದಿಷ್ಟ ಅಕ್ಷರಗಳು ಬರುವ ಪದಗಳನ್ನು ಗುರ್ತಿಸುವಂತೆ ಹೇಳಿ, ನಂತರ, ಆ ಪದಗಳ ಪಟ್ಟಿ ಮಾಡಿ, ಇನ್ನು ಅದೇ ರೀತಿಯ (ಆ ಅಕ್ಷರಗಳಿರುವ) ಪದಗಳನ್ನು ಬರೆಯಲು ಹೇಳಿ ಕಪ್ಪು ಹಲಗೆಯ ಮೇಲೆ, ಬೇರೆ ಪದಗಳನ್ನು ಬರೆದು, ಅಕ್ಷರಗಳನ್ನು ಗುರ್ತಿಸಲು ಹೇಳಿ, ಕೆಲವೊಮ್ಮೆ ವಿವಿಧ ಭಾಷೆಗಳಲ್ಲಿ, ಅಕ್ಷರ ವಿನ್ಯಾಸ ಮತ್ತು ಉಚ್ಛಾರಣೆ, ಒಂದಕ್ಕೊಂದು ತಾ ಳೆ ಆಗದಿರಬಹುದು. ಆ ಸಂದರ್ಭಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಈ ರೀತಿಯ ಅಭ್ಯಾಸವನ್ನು ಹಿಂದಿ, ಅಥವಾ ಇನ್ನಿತರ ಭಾಷಾ ತರಗತಿಯಲ್ಲೂ ಮಾಡಬಹುದು.

Notes

ಓದಿದಂತೆ ಮಾಡುವುದು

ಓದುವುದನ್ನು ಕಲಿತ ಮಕ್ಕಳು, ತಾವು ಓದಿದ್ದನ್ನು ಮತ್ತು ಅದನ್ನು ಮಾಡುವುದಕ್ಕೂ ಸಂಬಂಧವಿದೆ ಎಂಬುದನ್ನು ತಿಳಿಯುವುದು ಮನಗಾಣುವುದು ಪ್ರಮುಖವಾದದ್ದು. ಈ ಚಟುವಟಿಕೆಯಲ್ಲಿ ಶಿಕ್ಷಕರು ಮಾತನಾಡದೆ, ಕಪ್ಪು ಹಲಗೆಯ ಮೇಲೆ ಕೆಲವು ಸೂಚನೆಗಳನ್ನು ಬರೆಯುತ್ತಾರೆ ಪ್ರತಿ ವಿದ್ಯಾರ್ಥಿಗೂ ಒಂದು ಸಂಖ್ಯೆ ಕೊಡಲಾಗುತ್ತದೆ ಕರೆದಾಗ ಆ ವಿದ್ಯಾರ್ಥಿಯು ಒಂದು ತನ್ನ ಸಂಖ್ಯೆಯ ಸೂಚನೆಯನ್ನು ಓದಿ, ಅದರಂತೆ ಮಾಡಬೇಕು ಉದಾಹರಣೆಗೆ, 10ನೇ ನಂಬರಿನ ವಿದ್ಯಾರ್ಥಿ ಎದ್ದುನಿಲ್ಲು, ತರಗತಿಯ ಹೊರಗಡೆಗೆ ಹೋಗಿ, ಮೈದಾನದಿಂದ ಒಂದು ಪುಟ್ಟ ಕಲ್ಲನ್ನು ತೆಗೆದುಕೊಂಡುಬಾ ವಿದ್ಯಾರ್ಥಿಯು ಆ ಸೂಚನೆಯ ಪ್ರಕಾರ ನಡೆದುಕೊಳ್ಳಬೇಕು ಹೀಗೆ, ಇಲಿ ಮಾತಿಲ್ಲ, ಕೇವಲ ಓದು–ಅರ್ಥ–ಕ್ರಿಯೆ. ಇದೇ ರೀತಿ ಪ್ರತಿ ವಿದ್ಯಾರ್ಥಿಗೂ ಪ್ರತಿ ವಿದ್ಯಾರ್ಥಿಗೂ ತನ್ನ ಸರದಿ ಬರುವುದು ಬರ ಬರುತ್ತಾ ಸೂಚನೆಗಳು ಸಂಕೀರ್ಣವನ್ನಾಗಿ ಮಾಡಬಹುದು ಸೂಚನಾ ಫಲಕ, ದಾರಿದೂರುವ ಫಲಕ, ಇವುಗಳನ್ನು ಓದಿ ಅರ್ಥ ಮಾಡಿಕೊಂಡು, ಆ ರೀತಿ ನಡೆದುಕೊಳ್ಳುವುದು ಹತ್ತಿರದ ಆಸ್ಪತ್ರೆ, ದಾರಿನಕ್ಷೆ ಇತ್ಯಾದಿಗಳಿಗೆ ಭೇಟಿ ನೀಡಬಹುದು.

ಮುಂಚಿನಪದ – ನಂತರದ ಪದ

ಈ ಚಟುವಟಿಕೆಗೆ ಹೇರಳವಾಗಿ ಪುಸ್ತಕಗಳು ಲಭ್ಯವಿರಬೇಕು ಪ್ರತಿ ವಿದ್ಯಾರ್ಥಿಗೂ ಒಂದೊಂದು ಪುಸ್ತಕ ಲಭ್ಯವಾಗುವಂತೆ ವಿತರಿಸಿರಿ. ಪುಸ್ತಕವನ್ನು ತೆರೆಯಲು ಹೇಳಿ (ಯಾವುದಾದರೂ ಪುಟ). ಆ ಪುಟದಲ್ಲಿ ನಿರ್ದಿಷ್ಟ ಸ್ಥಳದಲ್ಲಿ (ಉದಾ, ಬಲಗಡೆಯ, ಕೆಳಮೂಲೆಯಲ್ಲಿನ ವಾಕ್ಯ) ಗಮನಿಸಲು ಹೇಳಿ ಪುಟದ ಕೊನೆಯಲ್ಲಿ ಪೂರ್ಣ ವಿರಾಮದ ಚಿಹ್ನೆ ಇದೆಯೇ? ಇದ್ದರೆ, ಮುಂದಿನ ಪುಟ ತೆರೆಯಿರಿ ಪುಟದ ಕೊನೆಯಲ್ಲಿ ಪೂರ್ಣ ವಿರಾಮ ಇಲ್ಲದ ಪುಟವನ್ನು ಆಯ್ಕೆ ಮಾಡಿರಿ. ಆ ಪುಟವನ್ನು ಪೂರ್ಣವಾಗಿ, ಕೊನೆಯವರೆಗೂ, ಮೌನವಾಗಿ ಓದಿರಿ. ಮುಂದಿನ ಪುಟ ತಿರುಗಿಸದೆ, ಅದರಲ್ಲಿ ಮೊದಲ ಪದ ಯಾವುದಿರ ಬೇಕೆಂದು ಊಹಿಸಿ ನಿರೀಕ್ಷಣೆಯಿಂದ ಹೇಳಿರಿ) ಮಕ್ಕಳು, ಪ್ರತಿಯೊಬ್ಬರೂ, ತಮ್ಮ ಊಹೆಯನ್ನು ತಿಳಿಸಿದ ಮೇಲೆ, ಪುಟ ತಿರುಗಿಸಲು ಹೇಳಿ ಮತ್ತು ಪರೀಕ್ಷಿಸಲು ತಿಳಿಸಿ. ಯಾವ ವಿದ್ಯಾರ್ಥಿಗಳ ಊಹೆ ಸರಿಯಾಗಿದೆಯೊ, ಅವರಿಗೆ ಪ್ರೋತ್ಸಾಹಿಸಿ ಚಪ್ಪಾಳೆ ಮೂಲಕ ಪುಟ ತಿರುಗಿಸಿದ ನಂತರ, ಹಿಂದುರುಗಿಸಿ ನೋಡದೆ, ಹಿಂದಿನ ಪುಟದ ಕಡೆ ಪದವನ್ನು ತಿಳಿಸಲು ಹೇಳಿ ಈ ರೀತಿ ಚಟುವಟಿಕೆ ಮುಂದುವರೆಸಬಹುದು.

ನಿಮ್ಮ ಪ್ರಗತಿ ಪರೀಕ್ಷಿಸಿ ಕೊಳ್ಳಿರಿ – 6

1. ಓದುವಿಕೆಯನ್ನು ಕಲಿಯಲು, ಎರಡು ಹೊಸ ಚಟುವಟಿಕೆಗಳನ್ನು ಸಲಹೆ ಮಾಡಿರಿ.

..........................................................................................

..........................................................................................

..........................................................................................

2. ಓದುವುದನ್ನು ಕಲಿಯಲು, ಚಟುವಟಿಕೆಗಳು ಹೇಗೆ ಸಹಾಯಕವಾಗುತ್ತದೆ.

..........................................................................................

..........................................................................................

..........................................................................................

Notes

# 5.5 ಓದುವುದು ಮತ್ತು ಬರೆಯುವುದು ನಡುವಿನ ಸಂಬಂಧ

'ಓದು' ಮತ್ತು 'ಬರೆಹ' ಗಳು ಸಾಮಾನ್ಯವಾಗಿ ಕಠಿಣ ದಕ್ಷತೆ (ಸಾಮರ್ಥ್ಯ)ವೆಂದು ಪರಿಗಣಿತವಾಗಿದೆ ಓದುವಿಕೆ ಎಂಬುದು ಲಿಖಿತ ಸಾಮಗ್ರಿಯಲ್ಲಿನ ಅರ್ಥವನ್ನು ಗ್ರಹಿಸುವ ಸಾಮರ್ಥ್ಯವನ್ನು ಒಳಗೊಂಡಿದೆ. ಬರೆಹ ಎಂಬುದು ಉತ್ಪಾದಕ ಸಾಮರ್ಥ್ಯ, ಬರೆದು ಅಭಿವ್ಯಕ್ತಗೊಳಿಸುವುದು ಪ್ರಾಥಮಿಕ ಶಾಲಾ ಕಾರ್ಯಕ್ರಮದಲ್ಲಿ ಇವುಗಳು ಕ್ರಮಣನುಸಾರ ಪರಿಗಣಿತವಾಗಿದೆ. ಮೊದಲು "ಓದುವ" ಭೋದನೆ, ನಂತರ "ಬರೆಹದ" ಭೋದನೆ. ಹೊಸ ಅರಿವಿನ ಹಿನ್ನೆಲೆಯಲ್ಲಿ 'ಓದು'"ಬರೆಹ" ಗಳುಪ್ರತ್ಯೇಕ ಪ್ರಕ್ರಿಯೆಗಳಲ್ಲಿ ಅವು ಹೇಗೆ, ಒಂದಕ್ಕೊಂದು, ಬೆಸೆದು ಕೊಂಡಿವೆ ಎಂದರೆ, ಅರ್ಥ ಮಾಡಿಕೊಂಡು ಓದುವ ಸಾಮಥ್ಯವು, ಬರೆಹದ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಇವೆರಡು ಸಾಮರ್ಥ್ಯಗಳನ್ನು ಪೂರಕಗಳನ್ನಾಗಿಸುವ, ಅನೇಕ ಅಂಶಗಳಿವೆ ಉದಾ ಪದಗಳನ್ನು ಉಪಯೋಗಿಸುವುದು, ಅರ್ಥೈಸಿಕೊಳ್ಳುತ್ತಾನೆ ಓದುಗನುಪಪ್ರಾರಂಭಿಕ ಅರ್ಥ ವಿನ್ಯಾಸವನ್ನು ಬದ ಲಾಯಿಸುತ್ತಾ, ಹೊಂದಿಸುತ್ತಾ ಸಾಗುತ್ತಾನೆ ಅದರಂತೆಯೆ, ಬರೆಯುಯವಾಗ ನಾವು ಆಗಾಗ್ಗೆ ಬರೆಹವನ್ನು ಸುಧಾರಿಸುತ್ತಿರುತ್ತೇವೆ ಓದು ಮತ್ತು ಬರೆಹ ಎರಡಲ್ಲೂ ಅರ್ಥದ ರಚನೆ ಮಾಡುತ್ತಿರುತ್ತೇವೆ ಉದಾಹಣೆಗೆ, ಮಕ್ಕಳ ತಾಯಿಯು, ಕ್ಯಾಲೆಂಡರ್‌ನಲ್ಲಿ, ಒಂದು ತಾರೀಖಿಗೆ ಗುರ್ತುಹಾಕಿ ಮಗುವು, ಕೇವಲ ಬರೆಹವನ್ನು ನೋಡುವುದು,ಓದುವುದರ ಜೊತೆಗೆ ಅರ್ಥವನ್ನು ಕಲ್ಪಿಸಿಕೊಳ್ಳುತ್ತಾರೆ.

ಈ ಮೇಲಿನ ಉದಾಹರಣೆಯಲ್ಲಿ ಒಂದೇ ಚಟುವಟಿಕೆಯಲ್ಲಿ ಅನೇಕ ಬಾರಿ ಪರಿಕಲ್ಪನೆಗಳು, ಓದುವ, ಬರೆಯುವ, ಅರ್ಥ ಮಾಡಿಕೊಳ್ಳುವ ಅಂಶಗಳು ಅದಕವಾಗಿದೆ ಈ ಚಟುವಟಿಕೆಯ ಬಹುಪಾಲು ಎಲ್ಲಾ ಮನೆಗಳಲ್ಲೂ ವೃತ್ತ ಪತ್ರಿಕೆ, ನಿಯತಕಾಲಿಕೆಗಳು ಬರದ ಮನೆಗಳಲ್ಲೂ ಸಹ ನಡೆಯುತ್ತದೆ, ಮಗುವು ತನ್ನ ತಾಯಿ, ಕ್ಯಾಲೆಂಡರ್‌ನಲ್ಲಿ ಇನ್ನೊಂದು ರೀತಿಯಲ್ಲಿ ಬಳಸಿಕೊಳ್ಳುವ ಪ್ರಯತ್ನಮಾಡುತ್ತದೆ. ಉದಾ ಪರೀಕ್ಷಾ ದಿನಾಂಕ ನಮೂದು,ಬಂಧುಗಳ ಆಗಮನದ ದಿನಾಂಕ ಇತ್ಯಾದಿ ಶಾಲೆಗೆ ದಾ ಖಲಾಗುವ ಮುನ್ನವೇ, ಮಕ್ಕಳು ಓದುವ ಬರೆಯುವ ಪ್ರಕ್ರಿಯೆಗಳನ್ನು ನೋಡಿ ಮಾಡಿ ತಿಳಿಯುವ ಅವಕಾಶಗಳು ನಡೆಯುತ್ತವೆ.

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 7**

1. ಸಾಮಾನ್ಯವಾಗಿ ಓದು ಮತ್ತು ಬರೆಹ ಸಾಮಾರ್ಥ್ಯಗಳು ಎರಡು ಬೇರೆ ಬೇರೆ ಎಂದು ಏಕೆ ಪರಿಗಣಿಸಲಾಗುತ್ತದೆ.

..........................................................................................................................................

..........................................................................................................................................

..........................................................................................................................................

Notes

2. "ಓದು" ಮತ್ತು "ಬರೆಹಗಳ ಸಾಮಾನ್ಯ ಪ್ರಕ್ರಿಯೆಗಳಾವುವು?

.......................................................................................................................

.......................................................................................................................

.......................................................................................................................

## 5.6 ಕ್ರೂಢೀಕರಿಸೋಣ

"ಓದುವಿಕೆಯ ಒಂದು ಸೃಜನಾತ್ಮಕ ಕಾರ್ಯ ಚಟುವಟಿಕೆ ಓದುವುದೇನೆಂದರೆ, ಕೇವಲ, ಬರೆದ ಸಾಮಗ್ರಿ ಧ್ವನಿ ಗೊಳಿಸುವುದಿಲ್ಲ ಬರೆದಿರುವ ಪಠ್ಯ ಸಾಮಗ್ರಿಗಳು ಅರ್ಥವನ್ನು ಗ್ರಹಿಸುವುದಾಗಿದೆ ಓದುವಾಗ, ನಾವು ಬರೆದಿರುವ ಪ್ರತಿಯೊಂದು ಅಂಶವನ್ನೂ, ಬಿಡಿಬಿಡಿಯಾಗಿ ನೋಡದೆ, ಸಮಗ್ರ ಚಿತ್ರಣವನ್ನು ಕಟ್ಟಿಕೊಳ್ಳುತ್ತೇವೆ ಬಹುಪಾಲು ಊಹೆ ಅನಿರೀಕ್ಷಿತ ಮತ್ತು ಮುಂಗಾಣುವುದು ಆಗಿರುತ್ತದೆ. ಓದುವ ಸಾಮರ್ಥ್ಯವೆಂದರೆ, ಊಹೆಮಾಡುವ ದಕ್ಷತೆ ಪ್ರಸ್ತುತದಲ್ಲಿನ, ಓದುವಿಕೆಯನ್ನು ಕಲಿಸುವ ವಿಧಾನಗಳಾದ, ಅಕ್ಷರ ಸಹ ಓದುವುದು, ನಿಯಮಗಳನ್ನು ಕಂಡಪಾಳ ಮಾಡುವುದು ಮತ್ತು ತಪ್ಪಿಲ್ಲದೆ ಓದುವುದು ಪುನ ಪುನ ತಪ್ಪು ಗ್ನಿಮ್ಜಿಶುವುದುಯ ಇವುಗಳು, ಓದುವ ಸಾಮರ್ಥ್ಯವನ್ನು ವೃದ್ಧಿಗೊಳಿಸಲಾರವು ಅವುಗಳು ತಡೆಗೋಡೆಗಳಾವುದು

ಮಕ್ಕಳಿಗೆ ಓದುವ ವಿಪುಲ ಅವಕಾಶಗಳನ್ನು ಆಸಕ್ತಿಕರ ಮತ್ತು ಸಂದರ್ಭೋಚಿತ ಸಾಮಗ್ರಿಗಳನ್ನು ಓದಗಿಸಿದಾಗ ಓದು ಒಂದು ಆನಂದವೀಯುತ ಪ್ರಕ್ರಿಯೆಯಾಗುತ್ತದೆ.

## 5.7 ಹೆಚ್ಚಿನ ವಾಚನಕ್ಕೆ ಸಲಹೆಗಳು

ಪಾಂಡೆ, ಲತಾ ಪಡನೆಕಿ ದೆಫ್ಲಿನೆಕಿ ಸಮರ್ಝ್ ನವದೆಹಲಿ

ಜೋಶಿ, ಸುಶೀಲ್ (1989) ಬಜ್ಜೆ ಕ್ಯೋಂ ಫಡ್‌ನಹಿ ಏಕಲವ್ಯ

## 5.8 ಪಠ್ಯಾಂಕ ಅಭ್ಯಾಸಗಳು

1. ಈ ಪಠ್ಯಭಾಗದಿಂದ, ಓದುವಿಕೆಯ ಬಗ್ಗೆ ಪಡೆದ ಮುಖ್ಯಾಂಶಗಳು ಯಾವುವು?
2. ಓದುವುದು ಎಂದರೇನು ಅರ್ಥ? ಮಗುವು ಓದನ್ನು ಕಲಿತಿದೆ ಎಂದು ಯಾವಾಗ ಹೇಳಬಹುದು
3. ಕಥೆಗಳ ಮೂಲಕ ಮಕ್ಕಳು ಓದುವುದನ್ನು ಕಲಿಯಲು ಸಹಾಯವಾಗುವುದೆಂದು, ನೀವು ಚಿಂತನೆ ಮಾಡುತ್ತೀರಾ? ಉದಾಹರಣೆಯೊಂದಿಗೆ ವಿವರಿಸಿ.
4. ಓದುವುದನ್ನು ಸಂತೋಷದಾಯಕವನ್ನಾಗಿ ಮಾಡಲು ಪ್ರಯತ್ನಗಳನ್ನು ಮಾಡಬೇಕು?
5. ಓದುವುದನ್ನು ಕಲಿಯಲು ಅನುಕೂಲವಾಗುವಂತೆ ಪಠ್ಯಪುಸ್ತಕವಲ್ಲದೆ, ಬೇರೆ ಯಾವ ಸಹಾಯಕ ಸಾಮಗ್ರಿಗಳನ್ನು ಬಯಸುತ್ತೀರಿ?

Notes

6. 'ಓದುವನ್ನು ಕಲಿಸಲು, ಪ್ರಚಲಿತ ವಿಧಾನಗಳನ್ನು ವಿಶ್ಲೇಷಿಸಿರಿ.

7. ಭಾಷೆಯನ್ನು ಸಮಗ್ರ ರೀತಿಯಲ್ಲಿ ಕಲಿಯುವುದು ಅಥವ ತುಣುಕುಗಳಾಗಿ ಕಲಿಯುವುದು ಸುಲಭ ನಿಮ್ಮ ಉತ್ತರವನ್ನು ಸಮರ್ಥಿಸಿಕೊಳ್ಳಿರಿ.

## ಹೆಚ್ಚಿನ ಕಾರ್ಯಭಾರ

1. ನಿಮ್ಮ ತರಗತಿಯ ಕೋಣೆಯಲ್ಲಿ ಓದುವ ಮೂಲೆ ಏರ್ಪಡಿಸಿ ಮತ್ತು ಮಕ್ಕಳು ಅದನ್ನು ಉಪಯೋಸುವಂತೆ ಪ್ರೋತ್ಸಾಹಿಸಿರಿ.

2. ಮಕ್ಕಳು ಸಾಮಾನ್ಯವಾಗಿ ಹಾಡುವ, ಇಷ್ಟಪಡುವ ಹಾಡು ಮತ್ತು ಕವಿತೆಗ ಳನ್ನು ಸಂಗ್ರಹಿಸಿರಿ ಇದನ್ನು ಮಕ್ಕಳು ಓದುವುದನ್ನು ಕಲಿಯಲು ಹೇಗೆ ಉಪಯೋಗಿಸುವಿರಿ?



Notes

## ಪಠ್ಯಭಾಗ 5 ಬರೆಯುವಿಕೆ (ಬರಹ)

ವಿನ್ಯಾಸ

*6.0 ಪ್ರಸ್ತಾವನೆ – ಪರಿಚಯ*

*6.1 ಕಲಿಕಾ ಉದ್ದೇಶಗಳು*

*6.2 ಲೇಖನ (ಬರೆಯುವುದು) ಎಂದರೇನು?*

*6.3 ಬರಹದ ಪ್ರಾರಂಭ, ಬರೆಯಲು ಆರಂಭಿಸುವುದು*

*6.3.1 ಸೂಕ್ಷ್ಮ ಚಾಲನಾ (ಶಾರೀರಿಕ) ಕೌಶಲ್ಯಗಳು*

*6.3.2 ಅಕ್ಷರಗಳು, ಪದಗಳು ಮತ್ತು ವಾಕ್ಯಗಳನ್ನು ಅಭ್ಯಸಿಸುವುದು.*

*6.4 ಉತ್ತಮ ಹಸ್ತಲೇಖನದ ಅಂಶಗಳು*

*6.4.1 ಲೇಖನ ಸ್ಪಷ್ಟತೆ, ಹಾಗೂ ಉತ್ತಮ ಹಸ್ತ ಲೇಖನ*

*6.4.2 ಉತ್ತಮ ಹಸ್ತಲೇಖನ ವೃದ್ಧಿಗೆ ಮಕ್ಕಳಿಗೆ ಸಹಾಯ*

*6.4.3 ಹಸ್ತಲೇಖನವು, ಬರಹದಲ್ಲಿನ ನ್ಯೂನತೆ (ಕಷ್ಟತೆ) ಮತ್ತು ಇತರೆ ವಿಕಲಾಂಗತೆಯ ಸೂಚಕವಾಗಿ*

*6.5 ಉತ್ತಮ ಬರೆಯುವಿಕೆಯ ಗುಣಲಕ್ಷಣಗಳು*

*6.5.1 ವ್ಯಾಕಾರಣ ಶುದ್ಧ ಭಾಷೆ*

*6.5.2 ಓದುಗರನ್ನು ಮನದಲ್ಲಿಟ್ಟುಕೊಳ್ಳುವುದು*

*6.5.3 ಸರಾಗತೆ (ಸಲಿಲತೆ) ಮತ್ತು ಹಸ್ರಸ್ವತೆ (ಕ್ಲುಪ್ತತೆ)*

*6.6 ಪ್ರಾಥಮಿಕ ತರಗತಿಗಳಲ್ಲಿ ಬರಹವನ್ನು ವೃದ್ಧಿಪಡಿಸುವುದು.*

*6.7 ಬರಹದ ಉಚ್ಚ ರೀತಿಗಳು*

*6.8 ಕ್ರೂಢೀಕರಿಸೋಣ*

*6.9 ನಿಮ್ಮ ಪ್ರಗತಿ ಪರೀಕ್ಷೆಗೆ ಮಾದರಿ ಉತ್ತರಗಳು*

*6.10 ಹೆಚ್ಚಿನ ವಾಚನಕ್ಕೆ ಸಲಹೆಗಳು.*

*6.11 ಪಠ್ಯಾಂತ ಅಭ್ಯಾಸ.*

## 6.0 ಪ್ರಸ್ತಾವನೆ – ಪರಿಚಯ

ಈ ಹಿಂದಿನ ಪಠ್ಯಭಾಗಗಳಲ್ಲಿ ಮೂರು ಮುಖ್ಯ ಬಾಷಾ ಕೌಶಲ್ಯಗಳ ಬಗ್ಗೆ – ಆಲಿಸುವುದು ಮಾತಾನಾಡುವುದು ಮತ್ತು ಓದುವುದು – ತಿಳಿದಕೊಂಡಿದ್ದೇವೆ. ಹಾಗೂ ಅವುಗಳ ಪರಸ್ಪರ ಅವಲಂಬನೆಯನ್ನು ತಿಳಿದಿದ್ದೇವೆ. ಬರೆಯುವ ಸಾಮರ್ಥ್ಯ ಕೊನೆಯದು.

ಅದು. ಹಿಂದಿನ ಮೂರು ಕೌಶಲ್ಯಗಳ ಮೇಲೆ ಆಧಾರಿತವಾಗಿದ್ದು, ನಂತರ ವೃದ್ಧಿಪಡಿಸಬೇಕಾದ್ದು, ಬರಹವನ್ನು ಕಲಿಯುವಾಗ ಭಾಷೆಯ ಮುಖ್ಯ ಕ್ರಿಯೆಗಳಾದ ಸಂವಹನೆ ಮತ್ತು ಅಭಿವ್ಯಕ್ತಿಗಳು ಮುಖ್ಯವಾಗುವುವು. ಈ ಪಠ್ಯಭಾಗದಲ್ಲಿ ಸಂವಹನಾ ಸಾಮರ್ಥ್ಯ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಬಗ್ಗೆ ಚರ್ಚಿಸೋಣ ಮತ್ತು ಬರೆಯುವುದನ್ನು ಕಲಿಯುವಲ್ಲಿ ಇದೆರಡೂ ಕ್ರಿಯೆಗಳ ಪ್ರಾಸಂಗಿಕೆಯನ್ನು ತಿಳಿಯೋಣ. ಪರಿಣಾಮ ಕಾರಿಯಾಗಿ ಬರೆಯಲು ಕಲಿಸುವ ಕೆಲವು ತಂತ್ರಗಳು ಇಲ್ಲಿ ಸಲಹೆ ಮಾಡಲಾಗಿದೆ. ಬೇರೆ ಇತರ ಕೌಶಲ್ಯಗಳಂತೆ ಲೇಖನ ಕತೆ ಯನ್ನು ಸಮಗ್ರ ಪರಿಪೇಕ್ಷ್ಯೆಯಲ್ಲಿ ನೋಡಬೇಕು. ನೀವು ಬರೆಯುವಾಗ ನೀವು ಬರೆಯುತ್ತಿರುವುದನ್ನು ಓದುತ್ತಿರುವಿರಿ ಹಾಗೂ ಮೌನವಾಗಿ ನೀವೇ ಮಾತಾನಾಡುತ್ತಿರುತ್ತೀರಿ ಮತ್ತು ಆಲಿಸುತ್ತಿರುತ್ತೀರಿ.

ಮಕ್ಕಳಿಗೆ ಅವರ ಅನುಭವವು ಅರ್ಥವತ್ತಾಗಿದ್ದರೆ ಮಾತ್ರ ಬೋಧನೆಯು ಪರಿಣಾಕಾರಿಯಾಗುವುದು. ಈ ತತ್ವವು ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಅಕ್ಷರಗಳನ್ನು ವ್ಯಾಕರಣವನ್ನು ಕಲಿಸುವಾಗ ಅನ್ವಯವಾಗುವುದು. ಹಾಗೆಯೇ ಉಚ್ಚ ತರಗತಿಗಳಲ್ಲಿ ವಿವಿಧ ರೀತಿಯ ಲೇಖನ ವನ್ನು ಕಲಿಸುವಾಗ ಅನ್ವಯವಾಗುವುದು. ಅನೇಕ ತರಗತಿಯಲ್ಲಿನ ಕ್ರಿಯಾ ಕಲಾಪಗಳಾದ ತಪ್ಪುಗಳನ್ನು ತಿದ್ದುವುದು. ಹಸ್ತಲೇಖನದ ಮೇಲಿನ ಗಮನ, ಉತ್ತಮ ಭಾಷಾ ಪ್ರಯೋಗ ಇತ್ಯಾದಿಗಳನ್ನು ಲೇಖದನ ಅರ್ಥ ಮತ್ತು ಪ್ರಕ್ರಿಯೆಯನ್ನು ಈ ಪಠ್ಯಭಾಗದಲ್ಲಿ ಚರ್ಚಿಸಲಾಗುವುದು.

## 6.1 ಕಲಿಕಾ ಉದ್ದೇಶಗಳು

ಈ ಪಠ್ಯಭಾಗದ ಅಧ್ಯಯನದ ನಂತರ ನೀವು.

- ಬರೆಯುವುದು ಲೇಖನ ಎಂದರೆ ಏನೆಂದು ಅರಿಯುವಿರಿ ಅದರ ಸ್ವಭಾವ ಮತ್ತು ಆಲಿಸುವುದು ಮಾತನಾಡುವುದು ಹಾಗೂ ಓದುವುದು ಇವುಗಳೊಡನೆಯ ಸಂಬಂಧ ಅರಿಸುವುದಲ್ಲದೆ, ಈ ಎಲ್ಲ ನಾಲ್ಕು ಕೌಶಲ್ಯಗಳನ್ನು ಸಮಗ್ರ ಪರಿಪೇಕ್ಷ್ಯೆಯಲ್ಲಿ ನೋಡಬಲ್ಲಿರಿ.
- ಉತ್ತಮ ಲೇಖನ (ಬರೆಯುವುದು) ಎಂದರೇನು ಅರ್ಥ ಎಂದು ತಿಳಿಯುವಿರಿ.
- ಮಕ್ಕಳಿಗೆ ಬರೆಯುವುದನ್ನು ಕಲಿಸುವಲ್ಲಿ ಶಿಕ್ಷಕರ ಪಾತ್ರವನ್ನು ತಿಳಿಯುವಿರಿ.
- ವಿವಿಧ ರೀತಿಯ ಬರೆಯುವಿಕೆ ಯನ್ನು ತಿಳಿಯುವಿರಿ ಹಾಗೂ
- ಬರೆಯುವ ಕಲೆಯನ್ನು ಕಲಿಸುವಾಗ ಉಪಯೋಗಿಸುವ ವಿವಿಧ ಚಟುವಟಿಕೆಗಳ ಬಗ್ಗೆ ತಿಳಿಯುವಿರಿ.

## 6.2 ಬರೆಯುವುದು ಎಂದರೆ ಏನರ್ಥ?

ಭಾಷಾ ಕಲಿಕೆಯಲ್ಲಿ ಲೇಖನ (ಬರೆಯುವುದು) ವನ್ನು ಕಲಿಯುವುದು ಒಂದು ದುರ್ಗಮ ಮೈಲಿಗಲ್ಲು. ಕಾರಣವೇನೆಂದರೆ, ಬರೆಯುವದರಲ್ಲಿ ವಿವಿಧ ಸಾಮರ್ಥ್ಯಗಳ ಏಕ ಕಾಲದಲ್ಲಿ ಒಳಗೊಂಡಿರುತ್ತವೆ. ಬರೆಯುವಲ್ಲಿ ಪ್ರಥಮವಾಗಿ ಲೇಖನಿ (ಪೆನ್ನು – ಪೆನ್ಸಿಲ್) ಯನ್ನು ಹಿಡಿದುಕೊಳ್ಳುವ ಉತ್ತಮ ಕರಕೌಶಲ್ಯವಿದ್ದು, ನಿರೀಕ್ಷಿತ ಉದ್ದೇಶಿತ ಚಿಹ್ನೆಗಳನ್ನು ನಮೂದಿಸಬೇಕು ನಂತರದಲ್ಲಿ ಮಾತನ್ನು ಪ್ರತಿನಿಧಿಸುವ ಚಿಹ್ನೆಗಳನ್ನು (ಅಕ್ಷರ, ಪದ) ಕಲಿತು, ಭಾಷೆಯ ಮುಖಾಂತರ ಬರೆದು ಇತರರೊಡನೆ ಸಂವಹಿಸುವ ಕಲೆಯನ್ನು ಗಳಿಸಬೇಕು.

ಬರೆಯುವುದು, ಲೇಖನ ಎಂದರೇನು?

ನಿಘಂಟಿನ ಪ್ರಕಾರ ಲೇಖನ ಎಂದರೆ ಚಿಹ್ನೆ ಮತ್ತು ಗುರುತುಗಳನ್ನು ಒಂದು ತಲದ ಮೇಲೆ ನಮೂದಿಸಿ ಇನ್ನೊಬ್ಬ ವ್ಯಕ್ತಿಯು ಅರ್ಥ ಮಾಡಿಕೊಂಡು ಅರಿಯುವಂತೆ ಮಾಡುವ ಕ್ರಿಯೆ. ಇದು ಒಂದು ನೇರ ನಿರ್ವಚನೆಯಾಗಿದ್ದು, ದಿನ ನಿತ್ಯದಲ್ಲಿ ನಾವು ಉಪಯೋಗಿಸುವ ಅದರ ಅರ್ಥದ ಛಾಯೆಯನ್ನು ಕಡೆಗಣಿಸಿದೆ. ಉದಾಹರಣೆಗೆ ನಿರ್ವಚನೆಯ ಭಾಷೆ ಮತ್ತು ಬರಹದ ನಡುವಿನ ಪ್ರಮುಖ ಸಂಬಂಧದ ಬಗ್ಗೆ ಉಲ್ಲೇಖವಿಲ್ಲ. ಒಬ್ಬ ವ್ಯಕ್ತಿಯು ಒಂದು ಚಿತ್ರ ಬಿಡಿಸುತ್ತಾನೆ ಎಂದರೆ ಆ ಚಿತ್ರವನ್ನು ಜನ ಅರ್ಥಮಾಡಿಕೊಳ್ಳುತ್ತಾರೆ ಆದರೆ ಲೇಖನ ಅಲ್ಲ.

Notes

ನಿಘಂಟಿನ ನಿರ್ವಚನೆಯು ಮಾತು ಮತ್ತು ಬರಹದ ನಡುವಿನ ಕೊಂಡಿಯನ್ನು ಕಡೆಗಣಿಸುತ್ತದೆ. ಮಾತನಾಡುವ ಹಾಗೂ ಬರಹ ಕ್ರಿಯೆಗಳು ಬೇರೆ ಬೇರೆ ಕಾಲ ಘಟ್ಟಗಳಲ್ಲಿ ಉದಯಿಸಿದವು. ಮಾನವನ ಭಾಷೆ ಯಾವಾಗ ಪ್ರಾರಂಭವಾಯ್ತೆಂಬುದು ಸುಮಾರು 1.5 ದಶಲಕ್ಷ ವರುಷಗಳ ಹಿಂದೆ ಆಗಿದೆ ಎಂದು ಅಂದಾಜು. ಎಲ್ಲಾ ಸಮುದಾಯಗಳಲ್ಲಿ ಆಡುವ ಭಾಷೆಯು, ಲಿಖಿತ ಭಾಷೆಗಿಂತ ಮುಂಚೆಯೇ ಉಗಮವಾಗಿವೆ. ಈಗಿನ ದಿನಗಳಲ್ಲಿಯೂ ಹಲವು ಸಮುದಾಯಗಳಲ್ಲಿ ಕೇವಲ ಬಾಯಿ ಮಾತಿನ ಸಂವಹನೆ ಮಾತ್ರವಿದೆ. ಸಮುದಾಯಗಳು ಸಮಯ ಕೇಳಿದಂತೆ ಹೆಚ್ಚು ವಿಸ್ತಾರವಾದಂತೆ, ಬರಹ ಬಾಷೆಯು ಅಸ್ತಿತ್ವಕ್ಕೆ ಬಂದಿತು ಎಂದು ತಿಳಿಯಬಹುದು. ಒಂದು ಸಮುದಾಯದಲ್ಲಿನ ವ್ಯಕ್ತಿಗಳ ಮಧ್ಯೆ ಹಾಗೂ ವಿವಿಧ ಸಮುದಾಗಳ ನಡುವಿನ ವ್ಯಕ್ತಿಗಳ ನಡುವಿನ ಸಂವಹನೆ ಹೆಚ್ಚಾದಂತೆ, ವ್ಯಾಪಾರ ವಾಣಿಜ್ಯ ವಹಿವಾಟು ವ್ಯವಹಾರಗಳನ್ನು ದಾಖಲಿಸಲು ಲಿಖಿತ ಭಾಷೆಯ ಅವಶ್ಯಕತೆ ಕಂಡು ಬಂತು. ಬರಹದ ಮೂಲ ಪ್ರಾಯಶಃ ಈ ಬೆಳವಣಿಗೆಗಳಿಂದಲೇ ಆಗಿದೆ.

ನಾವು ಮಾತಾನಾಡಿದುದ್ದನು ಅಭಿವ್ಯಕ್ತಿಸುವ ಮಾಧ್ಯಮವೇ ಬರಹ ಅಂದರೆ ಬರಹವು ಹೊಸ ಭಾಷೆಯನ್ನು ಪ್ರತಿನಿಧಿಸುವುದಿಲ್ಲ. ಆದರೆ ನಾವು ಆಡಿದ ಭಾಷೆಯ ಪ್ರತಿನಿಧಿಸುತ್ತದೆ ಅಷ್ಟೆ. ಎರಡು ಅಭಿವ್ಯಕ್ತಿ ಮಾದ್ಯಮ ಗಳ ನಡುವೆ ವಿಭಿನ್ನತೆ ಇದೆ. ಮಾತನಾಡಿದ ಸಂದೇಶಕ್ಕಿಂತ ಬರೆದಿಟ್ಟ ಪದಗಳು ಹೆಚ್ಚು ಶಾಶ್ವತ. ನಾವು ಆಡಿದ ಮಾತು, ಅದರ ಶಬ್ದದ ಮಾತಿನ ಸದ್ದು ಅಡಗುವರೆಗೆ ಮಾತ್ರವಿರುತ್ತದೆ. ಆದರೆ ಬರೆದಿಟ್ಟದ್ದು, ನಾವು ಯಾವುದರ ಮೇಲೆ ಬರೆದಿಟ್ಟವೋ ಅದು ಇರುವಷ್ಟೂ ಕಾಲ ಇರುತ್ತದೆ. ಹೀಗಾಗಿ ಮಾತನಾಡಿದ ಪದ (ಆಡಿದ ಮಾತು) ಹಿಡಿತಕ್ಕೆ ಸಿಕ್ಕುವುದಿಲ್ಲ ಅದೃಸ್ಯ ಹಾಗೂ ಅ ಶಾಶ್ವತ ಆದರೆ ಬರೆದಿಟ್ಟದ್ದು, ಹಿಡಿತಕ್ಕೆ ಸಿಗುವುದು, ಕಾಣುವುದು ಹಾಘೂ ಶಾಶ್ವತವಾದ್ದು, ಇನ್ನೊಂದು ವಿಷಯವೆಂದರೆ ನಾವು ಮಾತನಾಡುವಾಗ, ಕೇಳುಗನು (ಶ್ರೋತೃವು) ಸಾಮಾನ್ಯವಾಗಿ ನಮ್ಮೆದರು ಇರುತ್ತಾನೆ. ನಮ್ಮ ಮಾತಿನ ವಿಷಯವು ಪದಗಳಿಂದ ಮತ್ತು ಮಾನಾಡುವಾಗ ಇರುವ ಹಾವ ಭಾವಗಳನ್ನು ಒಳಗೊಂಡಿರುತ್ತದೆ. ಅದೂ ಅಲ್ಲದೆ ಪದದ ಶಬ್ದದ ಧ್ವನಿಯ ಏಳಿತಗಳು ಒಳಗೊಂಡಿರುತ್ತವೆ (ಧ್ವನಿ ಸ್ವಭಾವ ಗುಣಗಳು) ಸಂವಾದದ ಸಮಯದಲ್ಲಿನ ಸಂದರ್ಭವೂ ಹೇಳುಗ ಮತ್ತು ಕೇಳುಗರಿಬ್ಬರಿಗೂ ಸ್ಪಷ್ಟವಾಗಿ ತಿಳಿದಿರುತ್ತದೆ. ಹೀಗಗಿ ಆಡಿದ ಪದ, ವಾಕ್ಯಗಳು ಅವುಗಳನ್ನೆ ಬರೆದಿಟ್ಟಾಗ ತೋರುವುದಕ್ಕಿಂತ ಭಿನ್ನವಾಗಿರುತ್ತವೆ. ಮೂರನೆಯದಾಗಿ ಮಾತನಾಡುವಾಗ ನಾವು ತತ್‍ಕ್ಷಣ (ಸ್ಥಳದಲ್ಲೆ) ತಿದ್ದಿಕೊಳ್ಳುವ ಮತ್ತು ಅಪಾರ್ಥಕ್ಕೆ ಎಡೆಗೂಡದಿರುವಂತೆ ಮಾಡುವ ಅವಕಾಶವಿರುವುದು. ಆದರೆ ಬರಹ ದಲ್ಲಿ ಆ ರೀತಿಯ ಯಾವುದೇ ಅವಕಾಶವಿಲ್ಲ ಪ್ರಖ್ಯಾತ ಕಾದಂಬರಿಕಾರ ಶ್ರೀ ಮುನ್ಷಿ ಪ್ರೇಮಚಂದರ ಮಾತಿನಲ್ಲಿ ಆಡಿದ ನಾಲಿಗೆಯನ್ನು ಕತ್ತರಿಸಲಾಗುವುದಿಲ್ಲ. ಆದರೆ ಬರೆದ ಕೈಗಳು ಕತ್ತರಿಸಲ್ಪಡುತ್ತದೆ. ಅದೃಷ್ಟವೆಂದರೆ, ಬರೆಯಲು ನಮಗೆ ಸಾಕಷ್ಟು ಸಮಯವು ಲಭ್ಯವಿದೆ. ಆದರೆ ಮಾತನಾಡುವಾಗ ನಮ್ಮಲ್ಲಿ ಸಮಯವಿರುವುದಿಲ್ಲ. ಹೀಗಾಗಿ ನಾವು ಬಯಸಿದರೆ, ಬರೆಯುವುದನ್ನು ಯೋಚಿಸಿ ಚಿಂತನೆ ಮಾಡಿ ಬರೆಯುವ ವಾಕ್ಯಗಳಲ್ಲಿ ಸುಧಾರಣೆ ಮಾಡಿ, ಮತ್ತೆ ಬರೆಯಬಹುದಾಗಿದೆ.

ನಾಲ್ಕನೆಯದಾಗಿ, ಆಡುವ ಮಾತು (ಭಾಷೆಯ) ನಿರಂತರ ಬದಲಾಗುತ್ತಿರುತ್ತದೆ. ಆದರೆ ಬರಹದ ಭಾಷೆಯು ಬಹು ನಿಧಾನವಾಗಿ ಬದಲಾಗಲು ಅನೇಕ ಸಾಮಾಜಿಕ ಒತ್ತಡಗಳು ಕಾರಣ ವಾಗಿರುತ್ತವೆ. ಉದಾಹರಣೆಗೆ, ಹಿಂದಿ ಭಾಷೆಯಲ್ಲಿ ? ಯನ್ನು ಉಪಯೋಗಿಸುತ್ತೇವೆ. (ಯಾವುದೇ ಬೇರೆ ಭಾಷೆಯಲ್ಲೂ) ಇದರ ಉಚ್ಚಾರಣೆ (ಅರ್ಥ) ಎಲ್ಲ ಕಡೆಯೂ ಒಂದೇ ಆಗಿದೆ. ಆಂಗ್ಲ ಭಾಷೆಯಲ್ಲಿ ಬಸ್ ಕಪ್ ಬಟ್ ಪದಗಳಲ್ಲಿ ಯು ವನ್ನು ಎ ಯಂತೆ ಉಚ್ಚರಿಸುತ್ತೇವೆ. ಶಟ್ ಬಟರ್ ಡ್ರಮ್ ಮಕ್ಕಳು ಈ ಅಂಶಗಳು ಮಹತ್ವದಾದ್ದಾಗಿರುವುವು. ಈ ಮೇಲೆ ತಿಳಿಸಿದ ಕೆಲವು ವ್ಯತ್ಯಾಸಗಳು ಬರಹ ಮತ್ತು ಉಚ್ಚಾರಣೆ (ಮಾತಾನಾಡುವಾಗ) – ತಿಳಿಯದೆ ಹೋದಲ್ಲಿ ಮಕ್ಕಳು ತಪ್ಪು ಮಾಡುವ ಸಾಧ್ಯತೆಗಳು ಹೆಚ್ಚುತ್ತವೆ. ಹೀಗಾಗಿ ಈ ರೀತಿಯ ತಪ್ಪಿನ ಸಂದರ್ಭಗಳು ಬರಹ ಕಲಿಯುವಾಗಿನ ಪ್ರಮುಖ ಹಂತ (ಮೆಟ್ಟಿಲು) ಗಳನ್ನು ಪ್ರತಿನಿಧಿಸುತ್ತವೆ.

Notes

## ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 1

1. ಬರಹ ಮಾಧ್ಯಮವು
   ಎ) ಹೊಸ ಭಾಷೆಯನ್ನು ಪ್ರತಿನಿಧಿಸುತ್ತದೆ.
   ಬಿ) ಅದೇ (ಒಂದೇ) ಭಾಷೆಯನ್ನು ಬೇರೆ ಬೇರೆ
   ಸಿ) ಬರೆಯುವುದನ್ನು ಕಲಿಸುತ್ತದೆ.
   ಡಿ) ಓದುವುದನ್ನು ಕಲಿಸುತ್ತದೆ.

2. ಒಬ್ಬ ವ್ಯಕ್ತಿಯು "ಬರೆಯಲು" ಯಾವ ಯಾವ ಕೌಶಲ್ಯಗಳು ಬೇಕಾಗಿವೆ.

   ........................................................................................................................

   ........................................................................................................................

   ........................................................................................................................

3. "ಬರಹ" ಮತ್ತು "ಆಡುವ" ಭಾಷೆಗಳ ನಡುವಿನ ವ್ಯತ್ಯಾಸಗಳೇನು? ಇವುಗಳಲ್ಲಿ ಯಾವುದು ಹೆಚ್ಚು ಬದಲಾವಣೆಗೆ ಒಳಗಾಗುತ್ತದೆ.

   ........................................................................................................................

   ........................................................................................................................

   ........................................................................................................................

4. ಮಕ್ಕಳಿಗೆ ಒಂದು ಪುಟ್ಟ ಪಠ್ಯವಸ್ತುವನ್ನು ಓದಲು ಹೇಳಿರಿ. ನಂತರ ಆ ಪಠ್ಯವಸ್ತು ಏನಿಂದ ಅರಿತಿದ್ದೇನು? ಎಂದು ಕೇಳಿರಿ, ನಂತರ ಪಠ್ಯವಸ್ತುವಿನ ಬಗ್ಗೆ ಬರೆಯುವಾಗ ಅವರು ಮಕ್ಕಳು, ಎದುರಿಸಿದ ಕಠಿಣತೆ ಮತ್ತು ಮಾಡಿರುವ ತಪ್ಪುಗಳನ್ನು ವಿಶ್ಲೇಷಿಸಿರಿ.

   ........................................................................................................................

   ........................................................................................................................

   ........................................................................................................................

Notes

## 6.3 ಬರೆಯುವುದನ್ನು ಪ್ರಾರಂಭಿಸುವುದು

### 6.3.1 ಸಂಕೀರ್ಣ, ಶಾರೀರಿಕ ಅಂಗಚಾಲನ ಕೌಶಲ್ಯಗಳು

ಮಕ್ಕಳು, ಬರೆಯುವುದನ್ನು ಕಲಿಯುವ ಮುನ್ನ, ಕೆಲವು ಅಂಗ ಹತೋಟಿ, ಚಾಲನ ಕೌಶಲ್ಯಗಳನ್ನು ಅವಶ್ಯವಾಗಿ ವೃದ್ಧಿಕೊಳ್ಳಬೇಕು (ಹಿಡಿತದ ಸಾಮರ್ಥ್ಯ). ಈ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ಮಕ್ಕಳು, ಕೆಲವು ಘನ ಪದಾರ್ಥಗಳನ್ನು ಹಿಡಿಯುವ ತಿರುಗಿಸುವ ತಿರುಚುವ ಮತ್ತು ಅದರೊಡನೆ ಆಟವಾಡಲು ಅವಕಾಶಕೊಡುವುದು ಸೂಕ್ತ.

ಮಕ್ಕಳು ಈ ಅಂಗ ಹತೋಟಿ ಕೌಶಲ್ಯಗಳ ವೃದ್ಧಿಯ ಜೊತೆಗೆ ಮಕ್ಕಳು ಆನಂದಪಡುವ ಇನ್ನೊಂದು ಮುಖ್ಯ ಚಟುವಟಿಕೆ ಎಂದರೆ, ಚಿತ್ರ ಬಿಡಿಸುವುದು ಹೀಗಾಗಿ ಮಕ್ಕಳು ಚಿತ್ರ ಬಿಡಿಸುವುದನ್ನು ಪ್ರೋತ್ಸಾಹಿಸಬೇಕು. ಮಕ್ಕಳ ಮೊದಲ ಚಿತ್ರಗಳು ಅರ್ಥಹೀನ, ಗೀಚುವಿಕೆ ಎನಿಸಿದರೂ ಕ್ರಮೇಣ ಅರ್ಥವಾಗುವ ಆಕೃತಿಯೂ ಚಿತ್ರಗಳೂ ಆಗುತ್ತವೆ. ಚಿತ್ರಕಲೆಯಲ್ಲದೆ, ಬರೆಯಲು ಕಲಿಯಲು ಬೇಕಾದ ಅಂಗಚಾಲನ ಕೌಶಲ್ಯ ಅಭಿವೃದ್ಧಿಗೆ ಕೆಲವು ಆಟ, ಚಟುವಟಿಕೆಗಳು ಉದಾ. ಒಂದು ಪಾತ್ರೆಯಿಂದ ಇನ್ನೊಂದಕ್ಕೆ ಸುರಿಯುವುದು ಗೋಲಿ ಆಟ, ಮೀಟುವುದು, ಜೇಡಿಮಣ್ಣು ಅಥವಾ ಕಲಿಸಿದ ಹಿಟ್ಟನಿಂದ ಆಕೃತಿಗಳನ್ನು ಮಾಡುವುದು ಇತ್ಯಾದಿಗಳು, ಸಹಾಯವಾಗಿರುತ್ತವೆ. ಯಾವಾಗ, ಅವಶ್ಯವೊ, ಆಗ ಶಿಕ್ಷಕರು ಮಕ್ಕಳನ್ನು ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸುವುದು ಅವಶ್ಯವಾಗಿದೆ.

### 6.3.2 ಅಕ್ಷರಗಳು ಪದಗಳು, ವಾಕ್ಯಗಳನ್ನು ಅಭ್ಯಾಸ ಮಾಡುವುದು

ಅಕ್ಷರಗಳನ್ನು ಪದಗಳನ್ನು ಪದೇ ಪದೇ ಬರೆಯುವುದನ್ನು ಅಭ್ಯಾಸ ಮಾಡುವುದರಿಂದ ವಾಕ್ಯಗಳನ್ನು ಬರೆಯುವುದಕ್ಕೆ ಸಹಾಯವಾಗುವುದು ಎಂದು ನಂಬಲಾಘಿದೆ. ಕೊಂಚ ಮಟ್ಟಿಗೆ ಇದು ಸೂಕ್ತವೂ ಹೌದು. ಆದರೆ ಅಕ್ಷರಗಳನ್ನು ಪದಗಳನ್ನು ಪದೇ ಪದೇ ಬರೆಯುವ ಬೇಸರಕರಿಸುವ ಅಭ್ಯಾಸವು, ಮಕ್ಕಳಲ್ಲಿ ಬರೆಯುವ ಮೊದಲೇ ಅನಾಸಕ್ತಿಯನ್ನು ತರಬಹುದು. ಆದ್ದರಿಂದ ಪತ್ಯೇಕ ಅಕ್ಷರಗಳು (ಮಾದರಿಗಳು) ಮತ್ತು ವರ್ಣಮಾಲಾ ಪಟಗಳು ಮಕ್ಕಳನ್ನು ಬರಹಕ್ಕೆ ಪರಿಚಯಿಸುವಲ್ಲಿ ಸಹಾಯಕವಾಗುವವು ಅಕ್ಷರಗಳ ಸಂಬಂಧವು ಪದಗಳ ಜೊತೆ ಉಂಟಾಗುವ ವರೆಗೂ ಅರ್ಥಪೂರ್ಣ ವಾಗದಿರಬಹುದು.

ಮಕ್ಕಳಿಗೆ ಬರೆಯಲು ಕಲಿಸಲು ಎರಡು ಪ್ರಮುಖ ಮಹತ್ವಪೂರ್ಣ ಅಂಶಗಳೆಂದರೆ, ಮಕ್ಕಳ ಸಾಮರ್ಥ್ಯಗಳು ಮತ್ತು ಅವರು ಕಲಿಯಲು ಬೇಕಾದ ಅರ್ಥಪೂರ್ಣ ವಾತಾವರಣ ನಿರ್ಮಾಣ, ಮಕ್ಕಳಲ್ಲಿ ಭಾಷಾ ಕಲಿಕೆಯ ಅಗಾಧವದ ಸುಪ್ತ ಪ್ರತಿಭೆ ಅಡಗಿದೆ ಎಂಬ ಅಂಶವನ್ನು ಮನಗಂಡು ಗೌರವಿಸುವುದು. ಅತಿಮುಖ್ಯವಾದುದು. ಅವರು (ಮಕ್ಕಳು ತಮ್ಮ ಸ್ವಂತ ಭಾಷೆಯನ್ನು, ಅರ್ಥಪೂರ್ಣವಾದ ಸಾಮಾಜಿಕ ಅನುಭವದಿಂದ, ಆಲಿಸುವುದರಿಂದ, ಆಡುವುದರಿಂದ ಕಲಿತು ಬಿಡುತ್ತಾರೆ. ಹಾಗೆಯೆ ಬರಹ ವನ್ನು ಸಹ ಅರ್ಥಪೂರ್ಣ ಲಿಖಿತ ಸಾಮಗ್ರಿಗಳಿಂದ ಸಾಮಾಜಿಕ ಅನುಭವದಿಂದ ಗ್ರಹಿಸುತ್ತಾರೆ.

Notes

## ಬರೆಯುವಿಕೆ

ಕಲಿಸುವಾಗ ನಾವು ಮಕ್ಕಳಿಗೆ ಪ್ರತಿಯೊಂದನ್ನು ಹೇಳಬೇಕು. ಹೇಳದ ಹೊರತು ಅವರು ಕಲಿಯುವುದಿಲ್ಲ ಎಂಬ ಪೂರ್ವ ನಿರ್ಧಾರದಿಂದ ವರ್ತಿಸುತ್ತೇವೆ. ಶಾಲೆಗೆ ಬರುವುದಕ್ಕೆ ಮುನ್ನವೆ ಮಕ್ಕಳು ಬರೆಯುವ ಸಾಮರ್ಥ್ಯವನ್ನು ಅಂತರ್ಗತವಾಗಿ ಹೊಂದಿರುತ್ತಾರೆ. ಮಕ್ಕಳು ಮಣ್ಣಿನಲ್ಲಿ ಮರಳಿನಲ್ಲಿ ನೆಲದ ಮೇಲೆ ಕಾಗದದ ಮೇಲೆ ಗೀಚುವುದನ್ನು ಸಾಮಾನ್ಯ ಮತ್ತು ತಾವು ಗೀಚಿದ ಚಿತ್ರದ ಕತೆಯನ್ನು ಹೇಳುತ್ತಾರೆ. ಮಕ್ಕಳಿಗೆ ಈ ಚಿತ್ರಗಳು ಅರ್ಥಹೀನವಲ್ಲ, ಆದರೆ ಈ ಚಿತ್ರಗಳು (ಗೀಚುವಿಕೆ) ಅವರ ವಿಶಿಷ್ಟ ಭಾಷೆಯಾಗಿದ್ದು ಅವರ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುವ ಅವಕಾಶ ನೀಡಬೇಕು. ಮಕ್ಕಳ ಕಲಿಯುವಿಕೆಯ ಪ್ರಕ್ರಿಯೆಯು ಜ್ಞಾನದ ತುಣುಕುಗಳನ್ನು ಜೋಡಿಸುವುದಲ್ಲಿ ಮೊದಲು ಪೂರ್ಣಚಿತ್ರ ಹೊರಹೊಮ್ಮುತ್ತದೆ. ನಂತರ ವಿಶಿಷ್ಟತೆಗಳು, ವಿಶದವಾಗುತ್ತವೆ. ಪೂರ್ಣ, ಅರ್ಥಪೂರ್ಣ ಚಿತ್ರಣ ಇಲ್ಲದೆ, ವಿಶೇಷಗಳಿಂದ, ಪದ, ವರ್ಣಮಾಲೆ, ಗಳಿಂದ ಯಾವ ಪ್ರಯೋಜನವಿಲ್ಲ.

### ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 2

1. *ಕಲಿಕೆಯ ಪ್ರಕ್ರಿಯೆಯು ಹೇಗೆ ನಡೆಯುವುದು?*
   *ಎ) ಸಣ್ಣ ಸಣ್ಣ ತುಣುಕುಗಳನ್ನು ಒಟ್ಟಿಗೆ ಸೇರಿಸುವುದರಿಂದ ಪೂರ್ಣ ಚಿತ್ರ ಪಡೆಯುವುದು.*
   *ಬಿ) ಪೂರ್ಣ ಚಿತ್ರಣವನ್ನು ಮೊದಲು ಪಡೆದು, ನಂತರ ಇತರೆ ವಿಶಿಷ್ಟತೆಗಳನ್ನು ಪರಿವೀಕ್ಷಿಸುವುದು.*
   *ಸಿ) ಕಂಠಪಾಠ ಮಾಡುವುದು (ನೆನಪು)*
   *ಡಿ) ಚಿತ್ರ ಬಿಡಿಸುವುದು.*
2. *ಮಕ್ಕಳು ಶಾಲೆಯ ಶಿಕ್ಷಣಕ್ಕೆ ಮೊದಲೇ ಬರೆಯಲು ಪ್ರಾರಂಭಿಸುವ ಚಿಹ್ನೆಗಳು, ಚಿತ್ರಗಳು, ಅವರ ಬಗ್ಗೆ ಏನು ಹೇಳುತ್ತವೆ?*

   ..............................................................................................................

   ..............................................................................................................

   ..............................................................................................................
3. *ಸಂಕೀರ್ಣ ಅಂಗಜಾಲನಾ ಕೌಶಲ್ಯ ಎಂದರೆ ಅರ್ಥವೇನು? ಮಕ್ಕಳಲ್ಲಿ ಅವುಗಳನ್ನು ಬೆಳೆಸುವ ಬಗೆ ಹೇಗೆ?*

   ..............................................................................................................

   ..............................................................................................................

   ..............................................................................................................
4. *ಬರಹ ವನ್ನು ಭೋದಿಸುವ ಪ್ರಾರಂಭದಲ್ಲಿ ಅಕ್ಷರ (ವರ್ಣಮಾಲೆಯನ್ನು) ವನ್ನು ಪದೇ ಪದೇ ಬರೆಯುವುದಲ್ಲಿ ಏನು ಸಮಸ್ಯೆಯಿದೆ?*

   ..............................................................................................................

   ..............................................................................................................

   ..............................................................................................................

## 6.4 ಉತ್ತಮ ಹಸ್ತ ಬರಹ ದ ಅಂಶಗಳು

ಮಕ್ಕಳು ಬರೆಯಲು ಕಲಿಯುವ ಪ್ರಾರಂಭ ಹಂತದಲ್ಲೇ ಅವರ ಹಸ್ತಲೇಖನವು, ಗುಣಾತ್ಮಕ ವಾಗಿರಬೇಕೆಂದು ಒತ್ತಾಯಿಸುತ್ತೇವೆ. ಆದರೆ ಮಗುವಿನ ಲೇಖನವು ಒದಬಲ್ಲದಾಗಿರುವುದು ಮುಖ್ಯವಾದದ್ದಾಗಿದೆ ಮತ್ತು ಬರೆದಿರುವುದರ ಅರ್ಥ.

Notes

ಮಕ್ಕಳು ಏನು ಬರೆದಿದ್ದಾರೆ ಎಂಬುದು ಮತ್ತು ಮುಖ್ಯವಾಗಿರುತ್ತದೆ. ಮಕ್ಕಳು ಬರೆದಿರುವ ಪದಗಳನ್ನು ಸುಂದರವಾಗಿ ಅನುಕರಿಸಬಹುದು. ಆದರೆ ಮಕ್ಕಳಿಗೆ ತಾವು ಬರೆದಿರುವುದೇನು ಎಂಬ ಅರಿವಿದೆಯೆ ಎಂಬುದು ಪ್ರಮುಖ ಪ್ರಶ್ನೆ.

### 6.4.1 ಓದಬಲ್ಲದಾದ ಬರಹ – ಉತ್ತಮ ಹಸ್ತಲೇಖನ

ಪ್ರಾಥಮಿಕ ತರಗತಿಗಳಲ್ಲಿ ಸಾಮಾನ್ಯವಾಗಿ, ಶಿಕ್ಷಕರು ಉತ್ತಮ ಹಸ್ತಲೇಖನ ಮತ್ತು ಮುದ್ದಾದ ಅಕ್ಷರಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತಾರೆ. ಏನೇ ಇರಲ್ಲಿ ಮಕ್ಕಳು ಬರೆದ ಸಾಮಗ್ರಿಯು ಅರ್ಥಪೂರ್ಣವಾಗಿರಬೇಕಾದ್ದು ಹೆಚ್ಚು ಮುಖ್ಯವಾದದ್ದು ಬರಹದ ನಿಜವಾದ ಸೌಂದರ್ಯವೆಂದರೆ, ಅದರಲ್ಲಿನ ವಿಷಯ ವಸ್ತುವಿನ ಅರ್ಥಪೂರ್ಣತೆ. ಉತ್ತಮ ಹಸ್ತಲೇಖನವನ್ನು ಮೆಚ್ಚುವುದಕ್ಕೆ ಕಾರಣವೆಂದರೆ, ಅದನ್ನು ಓದುವುದು ಸುಲವಾಗಿರುವುದು. ವ್ಯಕ್ತಿಯ ಹಸ್ತಲೇಖನದ ಸುಂದರತೆಯು, ಆ ವ್ಯಕ್ತಿಯ ಭಾಷಾ ಪ್ರಬುದ್ಧತೆಯ ಸೂಚಕವಲ್ಲ. ವ್ಯಕ್ತಿಯ ಹಸ್ತಲೇಖನವು ಸುಂದರವಾಗಿದ್ದರೆ, ಅದಕ್ಕೆ ತಕ್ಕಂತೆ ಅವರ ಭಾಷಾ ಸಾಮರ್ಥ್ಯವೂ ಬಲವಾಗಿದೆ. ಎಂದರ್ಥವಲ್ಲ. ಅದೇ ರೀತಿಯಲ್ಲಿ ಹಸ್ತ ಲೇಖನವು ಅಷ್ಟು ಚೆನ್ನಾಗಿಲ್ಲರುವುದಿಲ್ಲ ಎಂದರ್ಥವಲ್ಲ ತರಗತಿಯಲ್ಲಿ ಒಂದೇ ರೀತಿಯ ಬೋಧನೆ, ತರಬೇತಿ ಯು ಎಲ್ಲಾ ಮಕ್ಕಳಿಗೂ ದೊರೆತರೂ ಕೊನೆಯಲ್ಲಿ ಪ್ರತಿಯೊಬ್ಬ ಮಗುವೂ ತನ್ನದೇ ಆದ ವಿಶಿಷ್ಟ ಹಸ್ತಲೇಖನವನ್ನು ಬೆಳೆಸಿಕೊಳ್ಳುತ್ತಾರೆ ಹೀಗಾಗಿ ಮುದ್ದಾದ ಅಕ್ಷರಗಳ ಬದಲಿಗೆ ವಿಷಯ ವಸ್ತುವಿನ (ಬರಹದ) ಮಹತ್ವಕ್ಕೆ ಒತ್ತು ಕೊಡಬೇಕು. ಶಿಕ್ಷಕರು, ಮಕ್ಕಳ ಉತ್ತಮ ಹಸ್ತಲೇಖನಕ್ಕೆ ಓದಬಲ್ಲುದಾದ ಪ್ರೋತ್ಸಾಹಿಸಬೇಕು.

### 6.4.2 ಮಕ್ಕಳು ಉತ್ತಮ ಹಸ್ತಲೇಖನ ಬೆಳೆಸಿಕೊಳ್ಳಲು ಸಹಾಯ

ಮಕ್ಕಳು ಉತ್ತಮ ಹಸ್ತಲೇಖನವನ್ನು ವೃದ್ಧಿಸಿಕೊಳ್ಳಲು ಬರೆಯಲು ಬೇಕಾದ ಮೂಲಭೂತ ಕೌಶಲ್ಯಗಳು, ಅಂದರೆ ಸಂಕೀರ್ಣ, ಸೂಕ್ಷ್ಮ ಅಂಗಚಾಲನಾ ಕೌಶಲ್ಯ, ದೃಷ್ಠಿ ಪರಿಪೇಕ್ಷೆ, ಶಾರೀರಿಕ ನಿಯಂತ್ರಣ, ಪೆನ್ನು ಪೆನ್ಸಿಲ್ ಪೆನ್ಸಿಲ್ ಹಿಡಿತ ಮತ್ತು ಭುಜಗಳ ಸ್ಥಿರತೆ ಮುಂತಾದವುಗಳನ್ನು ಸೂಕ್ತ ಶಾರೀರಿಕ ಅಭ್ಯಾಸಗಳಿಂದ ಬೆಳೆಸಿಕೊಳ್ಳಲು ಸಹಾಯ ಮಾಡಬೇಕು. ಶಿಕ್ಷಕರೂ ಸಹ ಬೋದಿಸುವಾಗ (ಬರಹವನ್ನು) ಆಸಕ್ತಕರವಾದ ವಿಧಾನಗಳಿಂದ, ಕೌಶಲ್ಯ ವೃದ್ಧಿಸುವುದು, ಉದಹಾರಣೆಗೆ ಅಕ್ಷರಗಳನ್ನು (ವಿಶೇಷ ಅಕ್ಷರಗಳು) ಬರೆಯುವಾಗ ಉದಾ ಎಸ್ ಅಕ್ಷರವು ಹಾವಿನಂತೆ ಕ್ಯೂ ಅಕ್ಷರವು ದಾರವಿರುವ ಬೂಲನಿನಂತೆ ಎಂದು ಹೇಳಿದಾಗ ಮಕ್ಕಳು ಆಸಕ್ತಿ ತಳೆಯುತ್ತಾರೆ. ಆಟಗಳಿಂದಲೂ ಮಕ್ಕಳು ತಮ್ಮ ಬರಹದಲ್ಲಿನ ಕೆಲವು ನ್ಯೂನತೆಗಳನ್ನು ಪರಿಹರಿಸಿಕೊಳ್ಳಬಹುದು ಉದಾ. ಪದಗಳ ನಡುವಿನ ಅಂತ, ಅಕ್ಷರಗಳ ಗಾತ್ರ, ಅಕ್ಷರಗಳ ನೇರತೆ ಇತ್ಯಾದಿ, ನಿಗದಿತ ಸಾಲುಗಳ (ಗೆರೆ) ನಡುವೆ ಅಕ್ಷರ ಬರೆಯುವುದು, ಅಕ್ಷರಗಳ ಗಾತ್ರ, ನೇರತೆಯನ್ನು ಕಲಿಸಬಹುದು. ಸಣ್ಣ ಪಠ್ಯ ವಸ್ತುವನ್ನು (ಮಕ್ಕಳಿಗೆ ಅರ್ಥವಾಗುವ) ಅವಶ್ಯವಾಗಿ ಬಳಸಬೇಕು. ಆಗ ಆ ಪಠ್ಯ ವಸ್ತುವಿನ ಆಧಾರಿತ ಅಭ್ಯಾಸ ವಸ್ತುವನ್ನು ರೂಪಿಸಬಹುದು. ಕೇವಲ, ಅಕ್ಷರಗಳನ್ನು ಬಿಡಿ ಬಿಡಿಯಾಗಿ ಕಲಿಯುವುದರಿಂದ ಪ್ರಯೋಜನವಿರದು.

### 6.4.3 ಹಸ್ತಲೇಖನ ಮತ್ತು ವ್ಯಕ್ತಿತ್ವ

ಕೆಲವು ಶಿಕ್ಷಕರು ತಮ್ಮ ಅಭಿಪ್ರಾಯದಲ್ಲಿ ಕೆಟ್ಟ ಹಸ್ತ ಲೇಖನವು ವ್ಯಕ್ತಿತ್ವ ನ್ಯೂನತೆ ದಾರಿಯಾಗುವುದು ಎನ್ನುತ್ತಾರೆ. ಹೀಗಾಗಿ ಅವರು ಯಾವಾಗಲೂ ಮಕ್ಕಳನ್ನು ಬೇಸರ ತರಿಸುವ ಅಕ್ಷರಗಳನ್ನು ಸುಂದರವಾಗಿ ಮತ್ತೆ ಮತ್ತೆ ಬರೆಯುವಂತೆ ಹೇಳುತ್ತಾರೆ.

Notes

ಈ ರೀತಿಯ ಚಟುವಟಿಕೆಯು ಕಷ್ಟಕರವೂ ಶ್ರಮದಾಯಕವೂ ಹಾಗೂ ಪೂರ್ಣವಾಗಿ ಅನುತ್ಪಾದಕವೂ ಆಗಿರುವುದೆಂದು ಶಿಕ್ಷಕರು ತಿಳಿಯಬೇಕು. ಕೇವಲ ಹಸ್ತಲೇಖನದ ಬೆಳವಣಿಗೆಯಿಂದ ವ್ಯಕ್ತಿತ್ವದ ವಿಕಾಸವಾಗದು, ಏಕೆಂದರೆ ಹಸ್ತಲೇಖನವು, ವ್ಯಕ್ತಿತ್ವವನ್ನು ಯಾವುದೇ ರೀತಿಯಲ್ಲಿ ಪರಿಣಾಮ ಬೀರದು. ಹಸ್ತ ಲೇಖನದ ಮೇಲಿನ ಅತಿಯಾದ ಒತ್ತಾಯವು, ಮಕ್ಕಳನ್ನು ಬರಹದಲ್ಲಿ ಅನಾಸಕ್ತರನ್ನಾಗಿಸಬಹುದು. ನಮ್ಮ ಒತ್ತಾಸೆ. ಅರ್ಥ ಪೂರ್ಣ ಓದಬಲ್ಲುದಾದ ಬರವಣಿಗೆಯನ್ನು ವೃದ್ಧಿಸುವ ಚಟುವಟಿಕೆಯ ಮೇಲಿರಬೇಕು.

## 6.4.4 ಹಸ್ತಲೇಖನವು ಕಲಿಯುವ ನ್ಯೂನತೆ . (ಡೈಸ್‌ಲೆಕ್ಸಿಯಾ) ಮತ್ತು ಇತರೆ ನ್ಯೂನತೆಗಳ ಸೂಚಕವಾಗಿ

ಓದುವ ಕಲಿಯುವ ಅವ್ಯವಸ್ಥೆಯೇ ಈ ಡೈಸ್‌ಲೆಕ್ಸಿಯಾ. ಹಾಗೆ ನೋಡಿದರೆ, ಪ್ರತಿಯೊಬ್ಬರೂ ನ್ಯೂನತೆ ಇರುವವರೆ. ನಾವೆಲ್ಲರೂ ಓದುವಾಗ ತಪ್ಪುಗಳನ್ನು ಮಾಡುವೆವು. ಆದರೆ ಕೆಲವರು (ತೀರಾ ಕಡಿಮೆ ಶೇಕಡಾ) ಈ ನ್ಯೂನತೆಯಿಂದ ಬಹಳವಾಗಿ ತೀವ್ರವಾಗಿ ನರಳುತ್ತಿರುತ್ತಾರೆ. ಈ ರೀತಿಯ ತೀವ್ರ ನ್ಯೂನತೆಯಿರುವವರು ನಾವು ಎಷ್ಟೇ ಪ್ರಯತ್ನ ಹಾಕಿದರೂ ನ್ಯೂನತೆಯಿಂದ ಬಿಡುಗಡೆ ಹೊಂದಿರುವುದಿಲ್ಲ. ಅವರು ಒಂದು ಚಿತ್ರವನ್ನು ಸಮಗ್ರವಾಗಿ ನೋಡಿದರೂ ಅದರಲ್ಲಿನ ಸೂಕ್ಷ್ಮತೆಗಳನ್ನು ನೋಡಿರರುವುದಿಲ್ಲ. ಅವರು ಎರಡು ಆಯಾಮದಲ್ಲಿನ ಬೋದಕಗಳಿಗೆ ಸ್ಪಂದಿಸಲಾರರು. ಹೀಗಾಗಿ ಅವರಲ್ಲಿ ಬರಹದ ಸಮಸ್ಯೆ ಉಂಟಾಗುವುದು. ಈ ರೀತಿಯ ನ್ಯೂನತೆ (ಡೈಸ್‌ಲೆಕ್ಸಿಯಾ) ಇರುವವರ ಹಸ್ತಲೇಖನವು ಓದಬಲ್ಲದಾಗಿರುವುದಿಲ್ಲ, ಕಾರಣವೆಂದರೆ ಅವರು ಬರೆಯುವ ಅಕ್ಷರಗಲು, ಸಮಾನ ಗಾತ್ರಗಳಲ್ಲಿರದೆ, ಅವ್ಯವಸ್ಥಿತ ರೀತಿಯಲ್ಲಿ ಚದುರಿರುತ್ತವೆ. ಹಾಗೂ ಅದೇ ಅಕ್ಷರವು, ಪದವನ್ನು ಬರೆಯುವಾಗ ಸಮಸ್ಥಿತಿಯನ್ನು ಕಾಯ್ದುಕೊಳ್ಳಲಾರರು. ಅವರು ಈಗಾಗಲೇ ಬರೆದಿರುವ ಸಾಮಗ್ರಿಯನ್ನು ನಕಲು ಮಾಡಲಾರರು. ಇನ್ನೊಂದು ಅಂಶವೆಂದರೆ ಅವರು ಒಂದೇ ರೀತಿಯ ಭಂಗಿಯಲ್ಲಿ ಕುಳಿತು ಬರೆಯಲಾರರು.

ಬಡವಾದ (ಪೂರ್) ಬರೆಯುವ ಕೌಶಲ್ಯದ ಸ್ಥಿತಿ, ಮತ್ತು ನ್ಯೂನತೆಯ ಲಕ್ಷಣಗಳು ಪರಸ್ಪರ ಹಂಚಿಕೊಂಡಂತೆ ತೋರುವುದು ಹೇಗೆಂದರೆ, ಸರಿಯಿಲ್ಲದ ಅಂಗಚಾಲನಾ ಕೌಶಲ್ಯ ಯೋಜನಾ ಕೌಶಲ್ಯ ನೋಟದ ಪರಿಪೇಕ್ಷೆ ಇತ್ಯಾದಿ ಈ ಕುರುಹುಗಳು ಕಂಡರೂ, ಡೈಸ್‌ಲೆಕ್ಸಿಯಾ ಎಂದು ತೀರ್ಮಾನಿಸಿಲಾಗದು. ಈ ಕುರುಹುಗಳಿಂದಾಗಿ ಅವನ ಶಿಕ್ಷಣದಲ್ಲಿ ಬಾಧಾಕವಾಗುವಾಗ ಅವನಿಕೆ (ಕಲಿಕಾರ್ಥಿಗೆ) ವಿಶೇಷ ಸಹಾಯವನ್ನು ತಜ್ಞರಿಂದ ಪಡೆಯಬಹುದು.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 3

1. ಡೈಸಿಲೆಕ್ಸಿಯಾ (ಕಲಿಯುವ ನ್ಯೂನತೆ) ಹೊಂದಿರುವ ವ್ಯಕ್ತಿಯು
   ಎ) ಯಾವಾಗಲೂ ಪೂರ್ಣಚಿತ್ರ ನೋಡುವನು
   ಬಿ) ಚಿತ್ರಗಳನ್ನು ನೋಡಲಾರನು
   ಸಿ) ಚಿತ್ರದ ತುಣಕುಗಳನ್ನು ನೋಡುವನು
   ಡಿ) ಚಿತ್ರ ಬಿಡಿಸಲಾರನು

2. ಬರಹದ ಮೇಲೆ ಹಸ್ತದ ಸ್ಥಾನ ಮತ್ತು ಲೇಖನಿಯ ಮೇಲಿನ ಹಿಡಿತಗಳ ಪ್ರಭಾವನ್ನು ವಿಶ್ಲೇಷಿಸಿರಿ.

   ..........................................................................................

   ..........................................................................................

   ..........................................................................................

Notes

3. ಅಕ್ಷರಗಳನ್ನು ಪರಿಚಯಿಸುವದರಲ್ಲಿ ಅಕ್ಷರಗಳ ಬರಹ ವನ್ನು ಆಸಕ್ತಿಕರವನ್ನಾಗಿಸುವ ಮಾರ್ಗಗಳ ಬಗ್ಗೆ ಚಿಂತನೆ ಮಾಡಿರಿ ಹಸ್ತ ಲೇಖನದ ಸಮಸ್ಯೆಗಳನ್ನು ಗುರಿಯಾಗಿಸಿರಿ ಲೇಖನಾಭ್ಯಾಸ ಗಳನ್ನು ರೂಪಿಸಿರಿ.

........................................................................................................................................

........................................................................................................................................

........................................................................................................................................

4. ನಿಮ್ಮ ತರಗತಿಯಲ್ಲಿ ಪದಗಳನ್ನು ಅಕ್ಷರಗನನು ಅವ್ಯಸ್ಥಿತ ರೀತಿಯಲ್ಲಿ ಬರೆಯುವ ಮಗುವಿದೆ ಎಂದು ಭಾವಿಸಿ, ಆ ಮಗುವಿನ ಬಗ್ಗೆ ನೀವೇನು ಮಾಡುವಿರಿ? ವಿವರಿಸಿ.

........................................................................................................................................

........................................................................................................................................

........................................................................................................................................

## 6.5 ಉತ್ತಮ ಲೇಖನದ ಗುಣಲಕ್ಷಣಗಳು

ನಮ್ಮ ಬರಹವು ನಿರೀಕ್ಷಿತ ನಿಯಮ ಮತ್ತು ವ್ಯಾಕರಣಕ್ಕೆ ಕಟ್ಟುಬದ್ದವಾಗಿರಬೇಕು. ಕೇಳುಗನು ಅಪಾರ್ಥ ಮಾಡಿಕೊಂಡ ಸಂದರ್ಭದಲ್ಲಿ ಹೇಳುಗನು, ವಿಷದಪಡಿಸಲು, ಅವಕಾಶವಿರುತ್ತದೆ. ಬರಹ ಸಂವಹನದಲ್ಲಿ ಈ ರೀತಿ ಅವಕಾಶಗಳಿಲ್ಲ ಈ ರೀತಿಯ ವ್ಯತ್ಯಾಸಗಳನ್ನು ಅಳೆಯಲು ಯಾವುದೇ ಮಾನದಂಡವಿಲ್ಲ ಇದು ಬರೆಯುವುದನ್ನು ಕಲಿಯುವ ಮಕ್ಕಳಿಗೆ ಸಮಸ್ಯೆಯೊಡ್ಡತ್ತದೆ. ಆಡುವ ಭಾಷೆಯ ಬರೆಯುವುದನ್ನು ಕಲಿಯಲು ಪ್ರಾರಂಭಿಸುವ ಮಕ್ಕಳಿಗೆ ಆಧಾರವಾಗಿದೆ. ಆಡುವ ಭಾಷೆಗೆ ಸಂಬಂಧಿಸಿದ ಸ್ಪೆಲಿಂಗ್ ಬರಹದ ಚಿಹ್ನೆಗಳು, ಇವುಗಳನ್ನು ಪ್ರಾರಂಭದಲ್ಲೆ ಒತ್ತು ಕೊಟ್ಟರೆ, ಮಕ್ಕಳ ಬರಹದ ಬಗ್ಗೆ ನಿರುತ್ಸಾಹಿತರಾರುತ್ತಾರೆ. ಆದ್ದರಿಂದ ಮಕ್ಕಳು ತಮ್ಮ ರೀತಿಯಲ್ಲಿ ಬರಯೆಲು ಪ್ರಾರಂಭದಲ್ಲಿ ಬಿಟ್ಟು ಕೊಡಬೇಕು. ನಿಖರತೆಯ ಕಡೆಗೆ ನಂತರ ಗಮನ ಕೊಡಬೇಕು.

ಭಾಷಾ ಕಲಿಕೆಯಲ್ಲಿ ಬರೆಯುವ ಕಲೆಯು ಕಠಿಣ ತಮವಾದದ್ದು. ಈ ಕೌಶಲ್ಯವು, ಶಬ್ದ ಭಂಡಾರ, ವ್ಯಾಕರಣ ಮತ್ತು ವಾಕ್ಯರಚನೆಯಲ್ಲಿನ ಪ್ರಭುತ್ವವನ್ನು ಬಯಸುತ್ತದೆ.

ಮಕ್ಕಳು ಸಣ್ಣ ಬರಹಗಳನ್ನು ಬರೆಯುವುದನ್ನು ಕಲಿತಾಗ, ಅದರಲ್ಲಿನ ವಾಕ್ಯಗಳ ನಡುವಿನ ಸಂಬಂಧಕೊಂಡಿಯನ್ನು ಒಳಗೊಂಡಿರುತ್ತದೆ. ಇದರಿಂದ ಅರ್ಥ ರಚನೆಯಲ್ಲಿ ಸಹಾಯಕವಾಗುತ್ತವೆ. ಅರ್ಥವು ಭಾಷೆಯ ಒಂದು ಅವಿಭಾಜ್ಯ ಅಂಗ, ಆದರೆ ಬರಹದಲ್ಲಿ ಹೆಚ್ಚಿನ ಗಮನ ಹರಿಸಬೇಕು. ಏಕೆಂದರೆ ಬರಹದಲ್ಲಿ ಇಲ್ಲಿ ಸಂವಹನದಲ್ಲಿ ಆಗಿರಬಹುದಾದ ಲೋಪಗಳನ್ನು ವಿಶದಪಡಿಸುವ ಅವಕಾಶವಿಲ್ಲ. ಬರಹದ ಕಲೆಯನ್ನು ಅರ್ಥೈಸುವ ಮತ್ತು ಅವ್ಯವಸ್ಥಿತ ಅನಿಸಿಕೆ ಅಂಶಗಳನ್ನು ಹೊಂದಾಣಿಕೆಯಾಗುವಂತೆ ಹೆಣೆಯುವ ಕಾರ್ಯವೆಂದು ತಿಳಿಯಬಹುದು. ಬರಹವು ಅರ್ಥವತ್ತಾದ ಅಭಿವ್ಯಕ್ತಿ ಮತ್ತು ಸಂವಹನೆಯನ್ನು ಗುರಿಯಾಗಿಸಿಕೊಂಡಿರುತ್ತದೆ ಬಹುವೇಳೆ ಸರಿಯಾದ (ವ್ಯಾಕಾರಣ ಇತ್ಯಾದಿ) ಬರಹದ ಮೇಲಿನ ಒತ್ತಿನಿಂದಾಗಿ ಈ ಉದ್ದೇಶಗಲು ಮರೆಯಾಗುತ್ತವೆ.

Notes

## 6.5.1 ವ್ಯಾಕಾರಣ ಶುದ್ಧ ಭಾಷೆ

ಶಿಕ್ಷಕರು , ಮಕ್ಕಳ ಬರಹದ ಮೌಲ್ಯ ಮಾಪನ ಮಾಡುವಾಗ ಅಕ್ಷರ ಶುದ್ಧತೆ ಮತ್ತು ವ್ಯಾಕರಣ ಶುದ್ಧತೆಯಲ್ಲಿನ ತಪ್ಪುಗಳನ್ನು ಗಮನಿಸುತ್ತಾರೆ. ಮಕ್ಕಳು, ಮಾತನಾಡುವಾಗ ಬರೆಯುವಾಗ ಈ ರೀತಿಯ ತಪ್ಪುಗಳಾಗುವುದು ಸಹಜ ಎಂಬ ವಿಷಯವನ್ನು ಶಿಕ್ಷಕರು ತಿಳಿಯಬೇಕು. ನಾವ್ಯಾರೂ – ಪ್ರಾರಂಭದಿಂದಲೇ ಬಹಳ ಶುದ್ಧವಾಗಿ ಬರೆಯಲು ಮಾತನಾಡಲು ಸಾಧ್ಯವಾಗಿಲ್ಲ. ಸಂಕೀರ್ಣದ ವಾಕ್ಯಗಳಲ್ಲಿ , ತಪ್ಪುಗಳಾಗುವುದು ಹೆಚ್ಚು ಸಂಭವನೀಯ.

ಆಡುವ ಭಾಷೆಯ ಧ್ವನಿ ಮತ್ತು ಬರಹದ ಭಾಷೆಗೂ ಒಂದಕ್ಕೊಂದು ರೀತಿಯ, ಹೊಂದಾಣಿಕೆಯು ಇಲ್ಲವೆಂಬ ಸತ್ಯವನ್ನು ಪರಿಗಣಿಸಿದಾಗ, ಬೇರೆ ಬೇರೆ ಮಕ್ಕಳು, ಬೇರೆ ಬೇರೆ ರೀತಿಯಲ್ಲಿ ಬರೆಯುವುದು ಸಹಜವಾಗಿದೆ. ಮತ್ತೊಂದು ಅಂಶವೆಂದರೆ, ಭಾಷೆಯಲ್ಲಿ, ಸಮಾಜದ ಮತ್ತು ಕ್ಷೇತ್ರೀಯ ಬದಲಾವಣೆಗಳು ಹೆಚ್ಚು ಕಂಡುಬರುತ್ತವೆ. ಬೇರೆ ಬೇರೆ ಸಾಮಾಜಿಕ ಹಿನ್ನಲೆ ಇಂದ ಮಕ್ಕಳು, ಒಂದೇ ಪದವನ್ನು ಬೇರೆ ಬೇರೆ ರೀತಿ ಮಾತನಾಡುವುದನ್ನು ಕಾಣಬಹುದು ಉದಾಹರಣೆಗೆ ಹಿಂದಿಯಲ್ಲಿನ ಶಕ್ ಪದವನ್ನು ಕೆಲವು ಸಮುದಾಯದವರು ಸಕ್ ಎಂದು ಉಚ್ಚರಿಸುತ್ತಾರೆ. ಅವರು ಶಾಂತಿ ಯನ್ನು ಸಾಂತಿ ಎಂದೂ ಬರೆಯಬಹುದು. ಇದನ್ನು ಬಹುದೊಡ್ಡ ತಪ್ಪೆಂದು ತಿಳಿಯದೆ, ಕಲಿಕೆಯ ಪ್ರಕ್ರಿಯೆಯ ಭಾಗವೆಂದು ತಿಳಿಯಬೇಕು.

ಇದೇ ರೀತಿಯ ಉದಾಹರಣೆಗಳನ್ನು ವ್ಯಾಕರಣದಿಂದಲೂ ನೀಡಬಹುದು. ಹಲವು ಸಮುದಾಯಗಳ ಹಿಂದಿ ಭಾಷೆಯಲ್ಲಿ ಕ್ರಿಯಾಪದಲ್ಲಿ ಲಿಂಗಬೇಧ ಮಾಡುವುದೇ ಇಲ್ಲ. ಈ ರೀತಿಯ ತಪ್ಪುಗಳನ್ನು ಮಕ್ಕಳ ಮತ್ತು ಅವರ ಪೋಷಕರ ಮುಂದೆ ಒತ್ತಿ ಹೇಳುತ್ತಿದ್ದರೆ ಅವರುಗಳು ಅನುತ್ಸಾಹಿತರಾಗುತ್ತಾರೆ, ಕೆಲವೊಮ್ಮೆ ಮಕ್ಕಳು ಶಾಲೆಯಿಂದ ವಿಮುಖರಾಗಬಹುದು.

ಮಕ್ಕಳಿಗೆ ಅಕ್ಷರಶುದ್ಧತೆ, ಮತ್ತು ವ್ಯಾಕರಣವನ್ನು ಕಲಿಸಲು ಅವರಿಗೆ ಹೆಚ್ಚು ಆಸಕ್ತಿಕರ, ಸವಾಲಯುಕ್ತ ಬರಹ ಸಾಮಗ್ರಿಗಳನ್ನು ಓದಲು ನೀಡಬೇಕು ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಬರೆಯಲು ಪ್ರೋತ್ಸಾಹಿಸಬೇಕು, ಅಕ್ಷರಶುದ್ಧತೆ ಮತ್ತು ವ್ಯಾಕರಣಗಳು ಅರ್ಥಪೂರ್ಣ ಅಂತ್ಯವಲ್ಲ. ಹಾಗಲ್ಲದೆ ಅರ್ಥಪೂರ್ಣ ಅಂತ್ಯವು, ಪರಿಣಾಮಕಾರಿ, ಆಸಕ್ತಿಯುಕ್ತ ಹಾಗೂ ಸಮಾಧಾನಕಾರಿ ಸಂವಹನವಾಗುವುದು.

## 6.5.2 ಓದುಗರನ್ನು ಮನದಲ್ಲಿಟ್ಟುಕೊಳ್ಳವುದು

ನಾವು ವರೆಯುವುದಲ್ಲವೂ ಓದುವುಕ್ಕಾಗಿ ಬೇರೆಯವರಲ್ಲದಿದ್ದರೂ, ನಮಗೆಗಾಗಿ, ನಾವು ಬರೆದಿದ್ದನ್ನು ಯಾರೂ ಓದುತ್ತಾರೆ ಎಂಬುದನ್ನು ಗಮನದಲ್ಲಿರಿಸಿಕೊಂಡು, ನಮ್ಮ ಬರಹ ಬದಲಾಗುತ್ತಿರುತ್ತದೆ. ನಮ್ಮ ಭಾಷೆಯ ಶೈಲಿ, ವ್ಯಾಕರಣ ಪದಗಳ ಆಯ್ಕೆ ಇವುಗಳು, ನಾವು ಬರೆದಿದ್ದನು ಯಾರು ಓದುವರೆಂದು ನಾವು ನಂಬಿದ್ದೆವೆಯೊ, ಅದರಿಂದ ಪ್ರಭಾವಿತವಾಗುವುದು ಈ ವಿಷಯವನ್ನು ಮನಗಂಡು ಮಕ್ಕಳನ್ನು ಓದುಗರಿಗೆ ಸಂವೇದನಾ ಶೀಲರಾಗುವಂತೆ, ತರಗತಿಯಲ್ಲಿ ಅನೇಕ ಚಟುವಟಿಕೆ ಹಮ್ಮಿಕೊಳ್ಳಬಹುದು ಬರೆಯುವ ಮೊದಲು, ಓದುಗರ ಬಗ್ಗೆ ಚಿಂತನೆ ಮಾಡುವಂತೆ ಪ್ರಶ್ನೆಗಳನ್ನು ರೂಪಿಸಬಹುದು. ಈ ರೀತಿ ಮಕ್ಕಳು ಬೇರೆ ಬೇರೆ ರೀತಿಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯಲು ಉತ್ತೇಜಿಸಬಹುದು. ಉದಾಹರಣೆಗೆ ತಂದೆ ತಾಯಿಯವರಿಗೆ ಬರೆಯುವ ಸ್ನೇಹಿತರಿಗೆ ಬರೆಯುವ ಪತ್ರಗಳು.

Notes

## ಸರಾಗತೆ (ಸಲಿಲತೆ) ಮತ್ತು ಹಸ್ರಸ್ವತೆ (ಕ್ಲುಪ್ತತೆ)

ಸರಾಗತೆ ಮತ್ತು ಹ್ರಸ್ವತೆಗಳು, ಬರವಣಿಗೆಯಲ್ಲಿ ಅಪೇಕ್ಷಿತ ಲಕ್ಷಣಗಳು, ಏಕೆಂದರೆ, ಅರ್ಥವನ್ನು ಓದುಗನು, ಕನಿಷ್ಠ ಗೊಂದಲ ಮತ್ತು ಪರಿಶ್ರಮದಿಂದ ಮಾಡಿಕೊಳ್ಳುವಂತೆ, ಲೇಖಕನು ಸಂವಹಿಸುತ್ತಾನೆ. ಸ್ಪಷ್ಟ ಹಾಗೂ ಕ್ಲುಪ್ತ ಬರವಣಿಗೆಗಾಗಿ, ಮಕ್ಕಳಿಗೆ ಬರಹದ ಅನುಭವ ಮಾತ್ರವಲ್ಲ ಓದುಗನಾಗಿಯೂ ಅನುಭವಿಸಬೇಕು. ಓದಿನಿಂದ ವಿವಿಧ ಲೇಖಕರು ತಮ್ಮ ಅನಿಸಿಕೆಗಳನ್ನು ತಿಳಿಪಡಿಸಲು ಅನುಸರಿಸುವ ವಿಧಾನಗಳು ಪರಿಚಿತವಾಗುತ್ತವೆ.

ಸ್ಪಷ್ಟ ಹಾಗೂ ಕ್ಲಪವಾದ ಬರಹಕ್ಕಾಗಿ ಮುಂದಾಗಿ ಯೋಜಿಸುವುದು ಅಗತ್ಯ, ನಾವೇನು ಬರೆಯಬಯಸುತೇವೆ ನಮ್ಮ ಅನಿಸಿಕೆಗಳೇನು? ನಾವೇನು ಹೇಳ ಬಯಸುತ್ತೇವೆ ಅನಿಸಿಕೆಗಳ ನಡುವಿನ ಸಂಬಂಧಗಳು ಪ್ರಸ್ತುತಪಡಿಸುವ ಕ್ರಮ ಮತುತ ನಾವು ಪ್ರಸ್ತುತಪಡಿಸಬೇಕಾದ ದೃಷ್ಟಿಕೋನ ಈ ಎಲ್ಲದರ ಬಗ್ಗೆ ಯೋಜಿಸಬೇಕು. ಮಕ್ಕಳ ಸಹ ತಾವು ಬರೆದಿರುವುದನ್ನು ಪರಿಶೀಲಿಸಿ ಪರಿವರ್ತಿಸಲು ಸಾಕಷ್ಟು ಕಾಲನೀಡಬೇಕು. ಈ ರೀತಿಯ ಕಾಲಾವಕಾಶ ನೀಡಿದಾಗ ಮಕ್ಕಳು ಓದಿ, ತಾವು ಬರೆದದ್ದನ್ನು ತಿದ್ದುಪಡಿ ಮಾಡಿ ಸುಧಾರಿಸಿ, ತಮ್ಮ ಬರೆಯುವ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳುತ್ತಾರೆ. ಶಿಕ್ಷಕರು, ಮಕ್ಕಳ ಬರಹದಲ್ಲಿ ಅಲ್ಲಲ್ಲಿ ಹಾಕುವ ಕೆಂಪು ಗುರುತುಗಳು ಮಕ್ಕಳನ್ನು ಹತಾಶರನ್ನಾಗಿಸುತ್ತವೆ.

## 6.5.3 ಸರಳ – ಸುಂದರ ಭಾಷೆ

ಉತ್ತಮ ಲೇಖನವೆಂದರೆ, ಅದರಲ್ಲಿ ಉಪಯೋಗಿಸುವ ಭಾಷೆ ಸುಂದರವೂ, ಸಲೀಲವಾಗಿರಬೇಕು ಹಾಗೂ ಪದ ಲಾಲಿತ್ಯದಿಂದ ಕೂಡಿರಬೇಕು ಎಂಬ ನಂಬಿಕೆ ಇದೆ. ಕೆಲವೊಮ್ಮೆ ಆ ರೀತಿಯ ಲೇಖನವು, ಗಗನವೂ ಸ್ಫೂರ್ತಿದಾಯಕವಾಗಿದೆ ಎಂಬ, ಅಭಿಪ್ರಾಯ ತೋರಿದರೂ, ಓದುಗನನ್ನು ಗೊಂದಲದಲ್ಲಿ ಸಿಕ್ಕಿಸಿ, ಹೇಳಬೇಕಾದ್ದನ್ನು ತಿಳಿಸದೆ ಹೋಗಬಹುದು. ಯಾವ ಲೇಖನವು ತನ್ನ ಸಂದೇಶವನ್ನು ಓದುಗನಿಗೆ ಸ್ಪಷ್ಟ ರೂಪದಲ್ಲಿ ರವಾನಿಸುತ್ತದೆಯೊ, ಅದನ್ನು ಉತ್ತಮ ಲೇಖನ ಎನ್ನಬಹುದು. ಹೀಗಾಗಿ ಮಕ್ಕಳು, ಅರ್ಥವನ್ನು ಸ್ಪಷ್ಟವಾಗಿ ನಿರೂಪಿಸುವ ಭಾಷೆಯನ್ನು ಬಳಸಲು ಪ್ರೋತ್ಸಾಹಿಸಬೇಕು.

ಯಾವುದೇ ಬರಹದ ಮುಖ್ಯ ಉದ್ದೇಶ. ಉತ್ತಮವಾಗಿ ಅಭಿವ್ಯಕ್ತಿಸುವುದೇ ವಿನಹ, ಓದುಗನ ಮೇಲೆ ಅಭಿಪ್ರಾಯ ಮೂಡಿಸುವುದಲ್ಲ. ಹಾಗಂತ ಕೇವಲ ಸರಳ ಬರಹವೇ ಉತ್ತಮ ಲೇಖನ ವೆಂದರ್ಥವಲ್ಲ. ಮಕ್ಕಳ ಶಬ್ದ ಭಂಡಾರ, ಬೆಳೆದಂತೆಲ್ಲಾ ಅವರು ಅಪರೂಪದ ಶಬ್ದಗಳನ್ನು ಬಳಸಬಹುದು. ಮಕ್ಕಳ ಹೆಚ್ಚಿನ ಓದಿನ ಫಲವಾಗಿ ಇತರ ಭಾಷೆಗಳ ಸಂಬಂಧದಿಂದ ಅವರ ಶಬ್ದ ಭಂಡಾರ ಬೆಳೆಯುವುದು ಸಂದರ್ಭೋಚಿತ ಸೂಕ್ತ ಪದ ಬಳಕೆಗೆ ಪ್ರೋತ್ಸಾಹ ನೀಡಬೇಕು ಅಪಾರ ಶಬ್ದ ಭಂಡಾರದಿಂದ ಸೂಕ್ತ ಪದಗಳ ಆಯ್ಕೆಯ ಸಾಧ್ಯತೆ ಇದ್ದು, ಅಭಿವ್ಯಕ್ತಿ ಸ್ವತಂತ್ರ ವಿರುವುದು ಬಹಳ ಒಳ್ಳೆಯದು. ಏನೇ ಆದರೂ ಉತ್ತಮ ಪರಿಣಾಮಕಾರಿ ಸಂವಹನೆಗೆ ಆದ್ಯತೆ ನೀಡಬೇಕು. ಮಕ್ಕಳು ಓದುಗನನ್ನು ಗೌರವ ಭಾವದಿಂದ ನೋಡಿ ಅವನ ಅವಶ್ಯಕತೆಗೆ ಹೊಂದುಕೊಳ್ಳುವಂತೆ ಮಾಡಬೇಕು ಅವರಿಗೆ (ಮಕ್ಕಳಿಗೆ) ಸರಳ ಹಾಗೂ ಸಲಿಲ ಬರಹದ ಉದಾಹರಣೆ ನೀಡಬೇಕು. ಪ್ರಾಮಾಣಿಕ , ಸರಳ ಲೇಖನವು ಕೇವಲ ಸುಂದರ ಭಾಷೆಯ ಲೇಖನಗಳಿಗಿಂತಲೂ ಯಾವಾಗಲೂ ಉತ್ತಮ. ಈ ಕೆಳಗಿನವನ್ನು ಎ ಮತ್ತು ಬಿ ಯನ್ನು ಹೋಲಿಸಿ ನೋಡಿ.

ಎ) ಅತ್ಯಮತ ವಿನಯ ಪೂರ್ವಕವಾಗಿಯೂ ಮತ್ತು ಗೌರವದಿಂದಲೂ ನಾನು ನಿಮಗೆ ತಿಳಿಸ ಬಯಸುವುದೇನೆಂದರೆ, ತಾವು ಕೃಪೆ ಮಾಡಿ ನನಗೆ ಎರಡು ದಿನಗಳ ರಜೆ ನೀಡಿದರೆ, ನಾನು ನಿಮಗೆ ಬಹಳ ಅಬಾರಿಯಾಗಿಯೂ ಋಣಿಯಾಗಿರುತ್ತೇನೆ.

ಬಿ) ದಯವಿಟ್ಟು ನನಗೆ ಎರಡು ದಿನಗಳ ರಜೆ ಮಂಜೂರು ಮಾಡಿರಿ.

ಸಿ) ಯು (ಎ) ಗಿಂತಲೂ ಉತ್ತಮ ಎನಿಸುತ್ತದೆ.

## ಬರೆಯುವಿಕೆ

Notes

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 4

1. ಲೇಖನದ ಉದ್ದೇಶಗಳೇನು

   ಎ) ಸುಂದರ ಭಾಷೆಯನ್ನು ಬಳಸುವುದು

   ಬಿ) ವ್ಯಾಕರಣ ಬದ್ಧ ಭಾಷೆ ಉಪಯೋಗಿಸುವುದು

   ಸಿ) ಶುದ್ಧತೆಯಿಂದ ಬರೆಯುವುದು

   ಡಿ) ಅರ್ಥಪೂರ್ಣ ಅಭಿವ್ಯಕ್ತಿ ಮತ್ತು ಸಂವಹನೆ

2. ಉತ್ತಮ ಲೇಖನದ ಗುಣ ಲಕ್ಷಣಗಳಾವುವು

   ..........................................................................................

   ..........................................................................................

   ..........................................................................................

3. ಶುದ್ಧತೆಯ ಲೇಖನ ಅಥವಾ ಅರ್ಥಪೂರ್ಣ ಲೇಖನ ಇವುಗಳಲ್ಲಿ ಯಾವುದು ಹೆಚ್ಚು ಮುಖ್ಯವಾದದು? ನಿಮ್ಮ ಉತ್ತರಕ್ಕೆ ಕಾರಣಗಳನ್ನು ನೀಡಿರಿ.

   ..........................................................................................

   ..........................................................................................

   ..........................................................................................

4. ಲೇಖನ (ಬರಹ) ವನ್ನು ಕಲಿಯುವಾಗ ಮಕ್ಕಳು ಅಕ್ಷರ ಶುದ್ಧಿ ಮತ್ತು ವ್ಯಾಕರಣದ ತಪ್ಪುಗಳನ್ನು ಏಕೆ ಮಾಡುತ್ತಾರೆ?

   ..........................................................................................

   ..........................................................................................

   ..........................................................................................

5. ಮಕ್ಕಳಿಗೆ ಇಷ್ಟವಾದ ಪ್ರಿಯವಾದ ಪುಸ್ತಕವನ್ನು ಉಪಯೋಗಿಸಿ ಅವರಲ್ಲಿ ಉತ್ತಮ ಲೇಖನ ಸಾಮರ್ಥ್ಯ ಬೆಳೆಸುವ, ಒಂದು ಕ್ರಿಯಾ ಕಲಾಪದ ಬಗ್ಗೆ ಚಿಂತನೆ ಮಾಡಿ

   ..........................................................................................

   ..........................................................................................

   ..........................................................................................

Notes

6. ಲೇಖನ ಕಲೆ (ಕೌಶಲ್ಯ) ಅಭಿವೃದ್ಧಿಯಲ್ಲಿ ಬರೆದದ್ದನ್ನು ಪನಾರಾವಲೋಕಿಸುವ ಮತ್ತು ಸುಧಾರಿಸಿ ಬರೆಯುವುದರ ಪಾತ್ರವೇನು?

..........................................................................................................................................

..........................................................................................................................................

..........................................................................................................................................

## 6.6 ಪ್ರಾಥಮಿಕ ತರಗತಿಗಳಲ್ಲಿ ಲೇಖನ ಕಲೆಯನ್ನು ಬೆಳೆಸುವುದು

ಪ್ರಾಥಮಿಕ ತರಗತಿಗಳಲ್ಲಿ ಒದಗಿಸಿದ, ಆಲಿಸುವ ಮಾತನಾಡುವ ಹಾಗೂ ಓದುವ ಕೌಶಲ್ಯಗಳು ಬರಹವನ್ನು ಬೆಳೆಸಲು ಬುನಾದಿಯಾಗುತ್ತವೆ. ಬರೆಯುವ ಕ್ರಿಯೆಯು ಅರ್ಥಪೂರ್ಣವಾಗಿರುವಾಗ, ಮಕ್ಕಳು ಬರಹವನ್ನು ಪರಿಣಾಮಕಾರಿಯಾಗಿ ಕಲಿಯುವರು ಆ ಬರಹವು ಆನಂದ ದಾಯಕವೂ ಮತ್ತು ಅವರ (ಮಕ್ಕಳ) ಸಂದರ್ಭೋಜಿತವೂ ಆಗಿದ್ದಾಗ, ಪರಿಣಾಮಕಾರಿ ಕಲಿಕೆಯಾಗುತ್ತದೆ. ಮಕ್ಕಳ ಬರಹ ದ ಕಲಿಕೆಯನ್ನು ಗರಿಷ್ಠ ರೀತಿಯಲ್ಲಿ ಉಂಟು ಮಾಡಲು, ಕೆಲವು ವೈಯಕ್ತಿಕ ಮತ್ತು ಸಮೂಹ (ಗುಂಪು) ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು ಈ ಕೆಳಗೆ ಕೆಲವು ಚಟುವಟಿಕೆಗಳನ್ನು ಕೊಟ್ಟಿದೆ. ಇವು ಸಲಹೆ ಮಾತ್ರವಾಗಿದ್ದು ಮಾಡಬಹುದಾದ ಚಟುವಟಿಕೆಗಳ ಅಂಶವಾಗಿದೆ.

- ಚಿತ್ರ ಸಂಯೋಜನೆ
  ಇದರಲ್ಲಿ ಮಕ್ಕಳಿಗೆ, ವಸ್ತುಗಳ ಘಟನೆಗಳ ಅಥವಾ ಸ್ಥಳದ ಚಿತ್ರ ತೋರಿಸಿ, ಅದರ ಬಗ್ಗೆ ಬರೆಯುವಂತೆ ಹೇಳುವುದು, ಈ ಚಟುವಟಿಕೆಯಲ್ಲಿ ವಿವಿಧ ಪ್ರಕಾರದ ಬರವಣಿಗೆ ಆಗಬಹುದು. ಮಕ್ಕಳು ಕಥೆ ವಿವರಣೆ, ಸಂವಾದ, ಚಿತ್ರದಲ್ಲಿರುವ ರಿಕ್ತತೆ ಬಗ್ಗೆ (ಖಾಲಿಜಾಗ) ಕವನ ಇತ್ಯಾದಿ. ಒಂದು ಕಥೆಗೆ ಸಂಬಂಧಪಟ್ಟಂತೆ ಚಿತ್ರ ಮಾಲಿಕೆಯನ್ನು ಒದಗಿಸಿದಾಗ ಮಕ್ಕಳು ಕಥೆ ಬರೆಯಬಹುದು.

- ಕೊಟ್ಟಿರುವ ಕಥಾ ಹಂದರದಿಂದ ಕಥೆ ಬರೆಯುವುದು
  ಮಕ್ಕಳಿಗೆ ಕಥೆಗೆ ಸಂಬಂಧಿಸಿದ ಪದಗಳ, ಪದಗುಚ್ಛಗಳ ಹಂದರವನ್ನು ಒದಗಿಸಿ, ಆ ಪದಗಳು ಪದಗುಚ್ಛಗಳನ್ನು ಉಪಯೋಗಿಸಿ ಕಥೆ ಹೆಣೆಯಲು ಹೇಳಬಹುದು.

- ಸ್ವತಂತ್ರಲೇಖನ
  ಮಕ್ಕಳು ತಾವು ಆಸಕ್ತಿ ಹೊಂದಿರುವ, ಬಹುವಾಗಿ ಮಾತನಾಡುವ ವ್ಯಕ್ತಿ, ಅಥವಾ ವಿಷಯದ ಬಗ್ಗೆ ಬರೆಯುವಂತೆ ಹೇಳಬಹುದು. ಇದರಿಂದ ಲೇಖನ ಕಲೆಯ ಅಭಿವೃದ್ಧಿಯಲ್ಲದೆ, ಶಿಕ್ಷಕರು, ಕಲಿಕೆಗೆ ಮಾಡಬಹುದಾದ, ತಂತ್ರಗಳು ಮತ್ತು ಸವಲತ್ತುಗಳ ಸೂಚನೆಗಳು ಸಿಗಬಹುದು.

- ಕಥೆಯನ್ನು ಮುಂದುವರಿಸಬಹುದು
  ಮಕ್ಕಳಿಗೆ ಕಥೆಯ ಪ್ರಾರಂಭವನ್ನು ತಿಳಿಸಿ ನಂತರ ಏನಾಗುವುದೆಂದು ಚಿಂತನೆ ನಡೆಸಿ, ಬರೆಯಲು ಹೇಳುವುದು

- ಉಕ್ತಲೇಖನ
  ಶಿಕ್ಷಕರು ಗಟ್ಟಿ ಧ್ವನಿಯಲ್ಲಿ, ಪದಗಳು, ವಾಕ್ಯಗಳನ್ನು ಹೇಳಿ, ಮಕ್ಕಳು ಬರೆಯುವಂತೆ ತಿಳಿಸುವುದು ಇದರಿಂದ ಮಕ್ಕಳು ಹೇಳಿದ ಧ್ವನಿ ಮತ್ತು ಬರಹವನ್ನು ಹೊಂದಾಣಿಕೆ ಮಾಡಬಲ್ಲರೇ ಎಂದು ತಿಳಿಯಬಹುದು

Notes

### ಬರೆಯುವಿಕೆ

- ಅಂತ್ಯಾಕ್ಷರಿ (ಬರಹದಲ್ಲಿ)
  ಮಕ್ಕಳು ಪದಗಳನ್ನು ಬರೆಯಲು ಹೇಳಿ ಮೊದಲು ಪದದ, ಅಂತಿಮ ಅಕ್ಷರದಿಂದ ಮುಂದಿನ ಪದವು ಪ್ರಾರಂಭವಾಗುವಂತೆ ಇರಬೇಕು. ಇದರಿಂದ ಮಕ್ಕಳಿಗೆ ತಿಳಿಯದಂತೆ ಶಿಕ್ಷಕರು ಸಮಸ್ಯೆಯನ್ನು ಅರಿಯಬಹುದು.

- ಮಕ್ಕಳು ಯಾವುದಾದರೂ ವಿಷಯದ ಬಗ್ಗೆ ಮಾತನಾಡಲು ಹೇಳಿ, ತಾವು ಹೇಳಿದ್ದನ್ನು ಬರೆಯುವಂತೆ ಮಾಡುವುದು, ಇದರಿಂದ ಬರಹದ ಸಂವಹನಾ ಉದ್ದೇಶ ವಿಶದವಾಗುವುದಲ್ಲದೆ ಹೇಳಿಕೆ ಮತ್ತು ಬರಹದ ನಡುವಿನ ಕೊಂಡಿಯೂ ಸ್ಪಷ್ಟವಾಗುವುದು

- ಪ್ರಾಸಬದ್ಧ ಪದಗಳು
  ಕೊಟ್ಟಿರುವ ಪದಕ್ಕೆ ಪ್ರಾಸವಿರುವ ಇತರೆ ಶಬ್ದಗಳನ್ನು ಮಕ್ಕಳು ಹೇಳಬೇಕು ಅಥವಾ ಆ ಶಬ್ದದ ಧ್ವನಿಯಿರುವ ಮತ್ತೊಂದು ಶಬ್ದವನ್ನು ಹೇಳಬೇಕು.

ಬರಹವನ್ನು ಕಲಿಸುವಾಗ, ಶಿಕ್ಷಕರು, ಮಕ್ಕಳಿಗೆ ಅವರವರ ಅನಿಸಿಕೆಯನ್ನು ಅಭಿವ್ಯಕ್ತಿಪಡಿಸಲು ಬಿಡಬೇಕು. ಕೆಲವು ಮಾದರಿ ಪ್ರಬಂಧಗಳನ್ನು ಕಂಠಪಾಠ (ಉರು ಹೊಡೆಯುವುದು) ಮಾಡುವಂತೆ ಮಕ್ಕಳನ್ನು ಒತ್ತಾಯ ಮಾಡುವುದು ಬಹಳ ಅಪಾಯಕಾರಿ. ಇದರಿಂದ ಮಕ್ಕಳು ಸ್ವಂತವಾಗಿ ಬರೆಯುವ ಆಸಕ್ತಿಯನ್ನು ನಾಶಮಾಡಿದಂತಾಗುತ್ತದೆ. ಮಕ್ಕಳು ಸ್ವತಂತ್ರವಾಗಿ ಯೋಚಿಸಲು ಅಭಿವ್ಯಕ್ತಿಸಲು ಅವಕಾಶವಾದಾಗ ಸ್ವತಂತ್ರವಾಗಿ ಬರೆಯುವರು.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 5

*1. ಮಕ್ಕಳಿಗೆ ಬರಹ ಕಲಿಸುವಾಗ ಏನು ಮಾಡಬೇಕು?*
*ಎ) ಮಕ್ಕಳು ಕೆಲವು ನಿರ್ದಿಷ್ಟ ವಿಷಯವನ್ನು ಕಂಠಪಾಠ ಮಾಡಿ ಬರೆಯುವಂತೆ ಹೇಳಬೇಕು.*

*ಬಿ) ಮಕ್ಕಳು ವರ್ಣಮಾಲೆ ಬರೆಯುವಂತೆ ಹೇಳಬೇಕು*

*ಸಿ) ಮಕ್ಕಳು ತಮ್ಮ ಆಲೋಚನೆಗಳನ್ನು ಬರೆಯುವ ಅವಕಾಶ ನೀಡಬೇಕು.*

*ಡಿ) ಮಕ್ಕಳು ಪದೇ ಪದೇ ಅದೇ ಅಕ್ಷರ, ಪದವನ್ನು ಬರೆಯುವಂತೆ ತಿಳಿಸಬೇಕು.*

*2. ಪ್ರಾಸಬದ್ಧ ಪದಗಳು, ಬರಹ ಕಲಿಸುವಲ್ಲಿ ಹೇಗೆ ಸಹಾಯಕವಾಗಿವೆ? ವಿವರಿಸಿ.*

..............................................................................................................

..............................................................................................................

..............................................................................................................

*3. ಪ್ರಾಥಮಿಕ ತರಗತಿಗಳಲ್ಲಿ 'ಬರೆಹ'ವನ್ನು ಕಲಿಸಲು, ಸಲಹೆ ಮಾಡಿರುವ ಚಟುವಟಿಕೆಗಳನ್ನು ಪ್ರಯತ್ನಿಸಿರಿ.*

..............................................................................................................

..............................................................................................................

..............................................................................................................

Notes

4. 'ಬರೆಹ'ವನ್ನು ಕಲಿಸಲು, ಕಥೆಗಳನ್ನೊಳಗೊಂಡ, ಇತರೆ ಚಟುವಟಿಕೆಗಳ ಬಗ್ಗೆ ಚಿಂತನೆ ಮಾಡಿರಿ.

........................................................................................................................................

........................................................................................................................................

........................................................................................................................................

## 6.7 ಬರೆಹದಉಚ್ಚಶ್ರೇಣಿ ಪ್ರಕಾರಗಳು

ಪ್ಯಾರಾಗ್ರಾಫ್, ಪತ್ರಲೇಖನ, ಪ್ರಬಂಧಲೇಖನ, ಕಥೆ ಮತ್ತು ಕವನ ಲೇಖನ, ಮುಂತಾದವುಉಚ್ಚಶ್ರೇಣಿ ಲೇಖನಗಳು ಇವುಗಳನ್ನು ಅಭಿವ್ಯಕ್ತಿ ಸೃಜನಾತ್ಮಕ ಮತ್ತು ಸಂವಹನಾ ಸಾಮರ್ಥ್ಯಗಳನ್ನು ಬೆಳೆಸಲು, ಶಾಲೆಗಳಲ್ಲಿ ಕಲಿಸಲಾಗುತ್ತದೆ.

ಒಂದು ವಿಷಯದ ಬಗ್ಗೆ ಕೇಂದ್ರಿಕರಿಸಿ, ಆಲೋಜಿಸಿ ಬರೆಯಲುಕಲಿಯಲು ಪ್ಯಾರಾಗ್ರಾಫ್ ಲೇಖನ ಸಹಕಾರಿಯಾಗಿದೆಇದುಅಭಿವ್ಯಕ್ತಿಸಲು, ಸಮಭಾವದಿಂದ ಬರೆಯಲು ಮಕ್ಕಳನ್ನು ಪ್ರೋತ್ಸಾಹಿಸುವುದಲ್ಲದೆ, ಪ್ರಬಂದ ಲೇಖನಕ್ಕೆ ಆಧಾರವಾಗಿದೆ.ಮಕ್ಕಳಿಗೆಅವರ ಜೀವನಕ್ಕೆ ಪ್ರಸ್ತುತವಾದ ವಿಷಯದ ಬಗ್ಗೆ ಬರೆಯುವಂತೆ ಹೇಳುವುದು ಸೂಕ್ತ.ಮಕ್ಕಳ ವಯೋಮಾನ, ಸಾಮರ್ಥ್ಯ, ಬರೆಯುವ ಸಾಮರ್ಥ್ಯ ಮತ್ತು ಅರಿವಿನ ಅನುಗುಣವಾಗಿ, ಇದರ ಪ್ರಮಾಣ ಬದಲಾಗುತ್ತದೆ.

ಪ್ರಬಂಧ ಲೇಖನ:– ಪ್ರಬಂಧವೆಂದರೆ, ಯಾವುದಾದರು ವಿಷಯದ ಬಗ್ಗೆ, ಅನೇಕ ಅನಿಸಿಕೆಗಳನ್ನು, ಸಮಭಾವದಿಂದಕ್ರಮಾನುಸಾರ ಸಂಯೋಜಿಸಿರುವ ಬರೆಹ. ಪ್ರಬಂಧಗಳಲ್ಲಿ ಮೂಲಭೂತವಾಗಿಎರಡು ವಿಧಚಿಂತನಾತ್ಮಕ ಮತ್ತು ಭಾವನಾತ್ಮಕ ಪ್ರಬಂಧದಲ್ಲಿ ಅನೇಕ ಭಾಗ ಗಳಿವೆ ಪ್ರಸ್ತಾವನೆ, ನಂತರ ಮುಖ ವಿಷಯ ವಸ್ತು ಆನಂತರತೀರ್ಮಾನ ಹಂತ ಹೀಗೆಂದರೆ, ಪ್ರಬಂಧವು ಆಲೋಚನೆಗಳ ಸುಲಭ ಹರಿವು.ಆಲೋಚನೆ ಚಿಂತನೆಗಳು ವಿಷಯಕ್ಕೆ ಪ್ರಸ್ತುತವಾಗಿರುವುದುಅವಶ್ಯ ಮತ್ತು ತಾರ್ಕಿಕವಾದ ಹರಿವಿರ ಬೇಕು.ಪ್ರಬಂಧಕಾರನು, ವಿಷಯವನ್ನುವಿಶದರೂಪದಲ್ಲಿ ನಿರಂತರೆಯಿಂದ, ಬೆಳೆಸುತ್ತಾ ಹೋಗಬೇಕು ಪ್ರಬಂಧಗಳು ಗಹನವೂ, ವಿವರಣಾತ್ಮಕವಾಗಿ ವಿಷಯ ವಸ್ತುವನ್ನು ಅಭಿವ್ಯಕ್ತಿಗೊಳಿಸುತ್ತವೆ.

ಕೆಲವೊಮ್ಮೆ ಪ್ರಬಂಧದಗುಣದ ಬಗ್ಗೆ, ಚಿಂತಿತರಾಗುವ ಶಿಕ್ಷಕರು, ಪ್ರಬಂಧಗಳನ್ನು ಹೇಳಿ ಬರೆಸುತ್ತಾರೆ (ಉಕ್ತಲೇಖನ), ಈ ರೀತಿಯಿಂದ, ಮಕ್ಕಳು ವಿಷಯ ವಸ್ತು ವಿನ ಬಗ್ಗೆ ಪರಿಣಾಮಕಾರಿಯಾಗಿಅಭಿವ್ಯಕ್ತಿಸುವ ಸಾಮರ್ಥ್ಯವನುನ ಬೆಳೆಸಿಕೊಳ್ಳುವ ಉದ್ದೇಶವು ಪೂರ್ಣ ವಿಫಲವಾಗುತ್ತದೆ.ಮಕ್ಕಳ ಸ್ವಂತ ಆಲೋಚನೆಗಳು, ಅನುಭವಗಳಿಗೆ ಪ್ರಾಮುಖ್ಯತೆಕೊಟ್ಟು, ಅವುಗಳನ್ನು ಬರೆಹದಲಿಲ ಅಭಿವ್ಯಕ್ತಿ ಮಾಡುವುದಕ್ಕೆ ಅವಕಾಶ ಕೊಡಬೇಕು.

ಪತ್ರ ಲೇಖನ :–

ಪಾರಂಪರಿಕವಾಗಿ, ಪತ್ರಗಳನ್ನು ಬರೆಯುವುದುದೂರದಲ್ಲಿರುವ ವ್ಯಕ್ತಿಗಳಿಗೆ ಸಂದೇಶರವಾನಿಸಲು ಇರುವ ಪದ್ಧತಿ ಪ್ರಬಂಧಗಳಂತಲ್ಲದೆ, ಪತ್ರಗಳಿಗೆ ಒಂದು ಬಹಳ ನಿರ್ದಿಷ್ಟವಾದ ಸಂವಹಾ ಉದ್ದೇಶವಿರುತ್ತದೆ.ಆದ್ದರಿಂದ, ಅಂಶಗಳ ವಿವರಗಳು ಪ್ರಬಂಧದಲ್ಲಿಇದ್ದಂತೆ, ಪತ್ರಗಳಲ್ಲಿ ಇರುವುದಿಲ್ಲ. ಆದರೆ ಪತ್ರದಲ್ಲಿ ಸಂವಹಿಸಲು ಕೆಲವು ಕೌಶಲ್ಯ ಗಳು ಬೇಕು ಪತ್ರ ಪಡೆಯುವರ ಮತ್ತು ಪತ್ರ ಬರೆಯುವವರ ಸಂಬಂಧಕ್ಕೆಅನುಗುಣವಾಗಿ ಪತ್ರಲೇಖನವು, ಬೇರೆ ಬೇರೆಯಾಗುತ್ತದೆ.ಪತ್ರ ಲೇಖಕನು, ಪತ್ರದ ವಿಷಯ ವಸ್ತುವಿಗೆ, ಪತ್ರಓದುಗನು, ಹೇಗೆ ಪ್ರತಿಕ್ರಿಯಿಸುತ್ತಾನೆಎಂಬುದನ್ನುಅರಿಯಬೇಕು.

## ಬರೆಯುವಿಕೆ

Notes

ಕಥಾ ಲೇಖನ :–ಕಥಾ ಲೇಖನವು ಮಕ್ಕಳು, ಆಲೋಚಿಸುವ ಮತ್ತು ಬರೆಯುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಈ ಕ್ರಿಯಾ ಕಲಾಪವು ಯಾವ ವಯಸ್ಸಿನಲ್ಲಾದರೂ ಕೈಗೊಳ್ಳಬಹುದು ಮಕ್ಕಳು ಬರೆಯಲುಪ್ರಾರಂಭಿಸಿದ ಹಂತದಲ್ಲೆಕಥಾ ಲೇಖನಗಳನ್ನು ಪರಿಚಯಿಸಿದರೆ, ಅವರ ಮಕ್ಕಳ ಆಲೋಚನೆಗಳು, ಅವರ ಬರೆಯುವಕಲೆಗೆ ಸಹಕರಿಸುವುದು. ಹಿರಿಯ ಮಕ್ಕಳಲ್ಲೂ ಈ ಅಭ್ಯಾಸಗಳು ಹಾಗೆ ಇರುತ್ತವೆಇಲ್ಲಿಚಿಂತನಾಕೌಶಲ್ಯ ಮತ್ತು ಕಲ್ಪನಾ ಶಕ್ತಿಗಳ ಮೇಲೆ ಹೆಚ್ಚು ಒತ್ತುಕೊಡಲಾಗುವುದು ಮಕ್ಕಳು ಬೆಳೆದಂತೆ, ಅವರು ಸಮಸ್ಯೆಗಳ ವಿವಿಧ ಪರಿಪೇಕ್ಷೆಗಳು, ಸಮಸ್ಯಾ ಪರಿಹಾರ ಮತ್ತು ಬರೆಹದ ಸೌಂದರ್ಯ ಗುಣಗಳನ್ನು ಮೆಚ್ಚುವದಕ್ಷತೆ ಪಡೆಯಬೇಕೆಂಬುದುಅಪೇಕ್ಷಿತ. ಈ ಕೌಶಲ್ಯಗಳು, ಸಾಹಿತ್ಯದ ವಿವಿಧ ಪ್ರಕಾರಗಳ ನಿಕಟತೆಯಿಂದ ಬೆಳೆಯುತ್ತಾವೆ ಮಕ್ಕಳು ಹಿರಿಯತರಗತಿ ಗತಿಗಳಿಗೆ ಬರುವ ವೇಳಗೆ, ಅವರು ವಿವಿಧ ಸಾಹಿತ್ಯ ಪ್ರಕಾರಗಳಿಗೆ (ಕವನ, ಕವಿತೆ, ಕಥೆ, ನಾಟಕ,ಕಾದಂಬರಿಇತ್ಯಾದಿ) ತೆರೆದುಕೊಂಡಿರುತ್ತಾರೆ, ಇದರಿಂದಕಥೆ ಹೆಣೆಯುವ, ಆಲೋಚಿಸುವ ಶಕ್ತಿ ಇನ್ನೂ ಹೆಚ್ಚಾಗುತ್ತದೆಕಥಾ ಲೇಖನವು ಸಾಹಿತ್ಯದಲ್ಲಿ ಮತ್ತು ಭಾಷೆಯಲ್ಲಿರುಚಿ ಮತ್ತು ಆಸಕ್ತಿ ಉಂಟುಮಾಡುತ್ತದೆ.

ಕಥಾ ಲೇಖನವಲ್ಲದೆ, ಮಕ್ಕಳನ್ನು ಪರ್ಯಾಯ ಅಂತ್ಯವುಳ್ಳದ್ದನಾಗಿ, ಕಥೆಯನ್ನುಒಂದು ಮುಖ್ಯ ಕೀಲಕ ಹಂತದಿಂದ ಮುಂದುವರೆಸುವ ಹಾಗೂ ನಿದಿಷ್ಟ ಪಾತ್ರದಕುರಿತು ಬರೆಯುವುದಕ್ಕೆ ಹೇಳಬಹುದು.

ಕವನ, ಕವಿತಾ ಲೇಖನ :–
ಪ್ರಾಥಮಿಕ ತರಗತಿಗಳಲ್ಲಿ, ಮಕ್ಕಳಿಗೆ, ಪ್ರಾಸಬದ್ಧವಾದಕವಿತೆ, ಗಳು ಮಾತ್ರ ತಿಳಿದಿರುತ್ತದೆ.ಕಿರಿಯ ಮಕ್ಕಳು, ಪ್ರಾಸವನ್ನು ಆನಂದಿಸುತ್ತಾರೆ ಮತ್ತು ಪ್ರಾಸಪಗಳು ಆಸಕ್ತಿ ಹುಟ್ಟಿಸಿ, ಪದಗಳ ಪರಿಚಯವಾಗುತ್ತದೆಇದರಿಂದಾಗಿಅವರು ಮಕ್ಕಳು ಓದಲು ಸುಲಭವಾಗುತ್ತದೆ.ಪ್ರಾಸ ಪದಗಳು ಬರೆಹದಲ್ಲೂ ಆಕಸ್ತಿ ಹುಟ್ಟಿಸಿ, ಧ್ವನಿ ಆಧಾರದ ಮೇಲೆ ಬರೆಯುವಕೌಶಲ್ಯ ಬೆಳೆಯುತ್ತದೆ.ಆದ್ದರಿಂದಕಿರಿಯ ಮಕ್ಕಳಿಗೆ, ಸಣ್ಣ ಕವಿತೆಗಳನ್ನು ಚಟುವಟಿಕೆಕೈಗೊಳ್ಳಬಹುದು ಮಕ್ಕಳು, ತಾವಾಗಿಯೊಅಥವಾ ಸಹಪಾಠಿಗ ಳೊಡನೆಯೋ, ಕವಿತೆರಚಿಸಬಹುದುಇದುಒಂದುಆನಂದದಾಯಕಕ್ರಿಯಾ ಕಲಾಪ.

ಹಿರಿಯ ತರಗತಿಗಳಲ್ಲಿ, ಕವನ ರಚನೆಯು ಹೆಚ್ಚು ಸಂಕೀರ್ಣವಾಗುತ್ತದೆ, ಏಕೆಂದರೆಕವನದ ಬಗ್ಗೆ ಅವರಅರಿವು ಗಹನವೂ, ಶ್ರೀಮಂತವೂ ಆಗಿರುತ್ತದೆ.ಕವನ, ಕವಿತೆರಚನೆಯಿಂದ. ಮಕ್ಕಳಲ್ಲಿ ಸೌಂದರ್ಯ ಪ್ರಜ್ಞೆ ಮತ್ತು ಮೆಚ್ಚುಗೆಯನ್ನು ಬೆಳಸಬಹುದು.

### ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 6

*1. ಪ್ರಾಥಮಿಕ ತರಗತಿಗಳಲ್ಲಿ, ಮಕ್ಕಳು ಯಾವರೀತಿಯ ಕವನಗಳನ್ನು ತಿಳಿದಿರುತ್ತಾರೆ.*

*ಎ) ಕಷ್ಟಕರ ಪದಗಳಿರುವ ಕವನಗಳು*

*ಬಿ) ಚಿಂತನಾಯುಕ್ತ ಕವನಗಳು*

*ಸಿ) ಪ್ರಾಸಬದ್ಧ ಪದಗಳಿರುವ ಕವನಗಳು*

*ಡಿ) ಸಣ್ಣ ಕವನಗಳು*

*2. ಪತ್ರ ಲೇಖನವು, ಪ್ರಬಂಧ ಲೇಖನಕ್ಕಿಂತ ಹೇಗೆ ಭಿನ್ನವಾಗಿದೆ?*

........................................................................................................................

........................................................................................................................

........................................................................................................................

Notes

*3. ಮಕ್ಕಳಲ್ಲಿ ಕುತೂಹಲ ವಿಷಯದ ಬಗ್ಗೆ ಒಂದು ಪ್ಯಾರಾಗ್ರಾಫ್ ಮತ್ತು ಒಂದು ಪ್ರಬಂಧ ಬರೆಯಿರಿ.*

..........................................................................................................................

..........................................................................................................................

..........................................................................................................................

*4. ಸಾಮಾನ್ಯವಾಗಿ ಶಾಲೆಗಳಲ್ಲಿ ಶಿಕ್ಷಕರು, ಪತ್ರಗಳು ಮತ್ತು ಪ್ರಬಂಧಗಳನ್ನು ಬರೆಯುತ್ತಾರೆ ಮತ್ತು ಮಕ್ಕಳು ಅವುಗಳನ್ನು ಕಂಠಪಾಠಮಾಡಿ, ಅವಶ್ಯವಾದಾಗ ಬರೆಯಬೇಕೆಂದಅಪೇಕ್ಷಿಸುತ್ತಾರೆಇದು ಸರಿಯೆ? ನಿಮ್ಮಉತ್ತರಕ್ಕೆ ಕಾರಣಗಳನ್ನು ನೀಡಿರಿ.*

..........................................................................................................................

..........................................................................................................................

..........................................................................................................................

## 6.8 ಕ್ರೂಢೀಕರಿಸೋಣ

“ಬರೆಹ”ಒಂದು ಭಾಷಾಕೌಶಲ್ಯ ಬರೆಹವೆಂದರೆ ಚಿಹ್ನೆಗಳನ್ನು ನಮೂದಿಸುವುದು ಮತ್ತು ಅದನ್ನು ಮತ್ತೊಬ್ಬರುಓದುವುದು ಮತ್ತು ಅರಿಯುವುದು ಮಕ್ಕಳಿಗೆ ಬರೆಹ ಕಲಿಸುವ ಮುನ್ನ, ಅವರಲ್ಲಿ ಕೆಲವು ಬರೆಹ ಪೂರ್ವ ಸಾಮರ್ಥ್ಯಗಳನ್ನು ಬೆಳೆಸುವುದು ಮುಖ್ಯ, ಇವು ಸೂಕ್ಷ್ಮವಾದ ಅಂಗಚಾಲನೆ, ಕುಳಿತು ಕೊಳ್ಳುವ ಭಂಗಿ, ಹಾಗೂ ಶಾರೀರಿಕ ಬೆಳವಣಿಗೆ, ಮತ್ತು ವಿ ಶ್ವದ ವಾಗಿ ಅಭಿವ್ಯಕ್ತಿಸುವಆಡು ಮಾತಿನ ಸಾಮರ್ಥ್ಯ ಮಕ್ಕಳು ಬರೆಯಲು ಬರೆಹ ಸಾಮಗ್ರಿಗಳೊಡನೆ ಪ್ರಯತ್ನಿಸುವ ಮತುತ ಸಂವಹಿಸುವ ತಯಾರಿ ಮುಖ್ಯ ಪ್ರಾರಂಭದಲ್ಲಿಮಕ್ಕಳಿಗೆ ಬರೆಹವುಅರ್ಥಪೂರ್ಣವಾಗಿರುವುದು ಅಲೆ ಅವಶ್ಯ ಪ್ರಾರಂಭದಲ್ಲಿ ಮಕ್ಕಳು, ತಪ್ಪುಗಳನ್ನು ಮಾಡುತ್ತಾರೆ. ಏಕೆಂದರೆಆಡು ಮಾತಿಗೂ, ಬರೆಹಕ್ಕೂಇರುವ ಭಾಷಾ ವ್ಯತ್ಯಾಸದಿಂದ.ಮಾತನಾಡುವುದು ಮತ್ತು ಆಲಿಸುವುದನ್ನು ಉತ್ತೇಜಿಸಿ, ಅವು ಒಂದಕ್ಕೊಂದು ಪೂರಕವಾಗುವಂತೆ ಮಾಡಬೇಕು.

ಹಸ್ತಲೇಖನವು, ಮಕ್ಕಳ ವ್ಯಕ್ತಿತ್ವದ ಮಾಹಿತಿಕೊಡುವುದಿಲ್ಲ ಸುಂದರವಲ್ಲದ ಹಸ್ತಲೇಖನವೆಂದರೆ ಅನಪೇಕ್ಷಿಸಿ ವಾದ್ದದನ್ನು ಸೂಚಿಸುತ್ತದೆಎಂದಲ್ಲ ಮಕ್ಕಳು ತಮ್ಮ ಹಸ್ತಲೇಖನವನ್ನು ಬರವಣಿಗೆಯಲ್ಲಿಕ್ಲುಪತೆ ಮತ್ತು ಸಲಿಲತೆಯನ್ನು ಮಹತ್ವವಾಗಿ ಪರಿಗಣಿಸಬೇಕುಇದರೊಂದಿಗೆ ಸರಳತೆಯೂ ಮುಖ್ಯ.ಆಡುವ ಭಾಷೆಗಿಂತಲೂ, ಬರೆಹದ ಭಾಷೆಯು ಭಿನ್ನವಾಗಿರುವುದರಿಂದ, ಮಕ್ಕಳನ್ನು ಹೆಚ್ಚು ಹೆಚ್ಚು ಓದುವ ಸಾಮಗ್ರಿಗಳಿಗೆ ತೆರೆದಿಡ ಬೇಕು ಇದರಿಂದ ಮಕ್ಕಳು ಅಕ್ಷರ ಶುದ್ಧತೆ ಹಾಗೂ ವ್ಯಾಕರಣ ಬದ್ಧತೆಯನ್ನು ಬೆಳೆಸಿಕೊಳ್ಳುವ ಸಹಾಯವಾಗುತ್ತದೆ.ಮಕ್ಕಳು ಹಿರಯರಾಗಿ ಬೆಳೆದಂತೆ ಅವರ ಬರೆಹದಕೌಶ್ಯಲವೂ ವೃದ್ಧಿಯಾಗುತ್ತದೆ.ವಯಸ್ಸು ಹೆಚ್ಚಾದಂತೆ ಮಕ್ಕಳನ್ನು ವಿಭಿನ್ನ ಉಚ್ಚ ಸಾಹಿತ್ಯ ಪ್ರಕಾರಗಳಿಗೆ, ಅಂದರೆ, ಪತ್ರಲೇಖನ, ಪ್ರಬಂಧಲೇಖನ, ಕಾವ್ಯ, ಕವಿತೆ ಮುಂತಾದವುಗಳಿಗೆ ಪರಿಚಯಿಸಬೇಕು.ಇವುಗಳಲಿ ಪ್ರತಿಯೊಂದಕ್ಕೂಸಮಾನತೆರನಾದಕೌಶಲ್ಯಬೇಕಾದರೂ, ಅವುಗಳದೇ ಆದ ವಿಶಿಷ್ಟ ಸಾಮರ್ಥ್ಯ ಬಯಸುತ್ತವೆ ಶಿಕ್ಷಕರು ಇವುಗಳನ್ನು ಅರಿತಿರಬೇಕು.

Notes

## 6.9 ಹೆಚ್ಚಿನ ವಾಚನಕ್ಕೆ ಸಲಹೆಗಳು

ಟ್ರ್ಯಾಸ್ಟ್ಆರ್.ಎಲ್ (1995) ಭಾಷೆಗಳು ಮೂಲ ಭೂತ ಅಂಶಗಳು ಲ್ಯಾಂಗ್ವೇಜಸ್, ಬೇಸಿಕ್ಸ್ ಲಂಡರ್ಕೌಟ್ಲೆಜ್ಡ್

ಕೋಲ್, ಬಾರ್ಬೆರಾ
ಎಕ್ಸ್ಪ್ಲೋರಿಂಗ್ ದಿ ಡೈನಮಿಕ್ಸ್ಆಫ್ ಸೆಕೆಂಡ್ ಲ್ಯಾಂಗ್ವೇಜ್ ಲಂಡರ್ಕೇಂಬ್ರಿಡ್ಜ್ಯೂನಿವರ್ಸಿಟಿ ಪ್ರೆಸ್

ಯೂಟ್, ಜಾರ್ಜ್ (1995) ದಿಸ್ಟಡಿಆಪ್ ಲ್ಯಾಂಗ್ವೇಜ್ ಲಂಡಸ್, ಕೇಂಬಿಡ್ಜ್ಯೂನಿರ್ವಸಿಟಿ ಪ್ರೆಸ್.

## 6.10 ಪಠ್ಯಾಂತ ಅಭ್ಯಾಸಗಳು

1. ಬರೆಹಕ್ಕೆ ಸೂಕ್ಷ್ಮಅಂಗಜಾಲನಾ ಕೌಶಲ್ಯ ಗಳಿಸುವುದು ಏಕೆ ಅವಶ್ಯಕವಾಗಿದೆ.
2. ಶಾಲೆಗೆ ಬರುವ ಮೊದಲೇ ಮಕ್ಕಳಿಗೆ ವಿಶಿಷ್ಟವಾದ, ಬರೆಯುವ ಸಾಮರ್ಥ್ಯವಿರುತ್ತದೆ ನಿಮ್ಮ ಸುತ್ತಲಿನ 4–5 ವರ್ಷದ ಮಕ್ಕಳನ್ನು ಗಮನಿಸಿದರಿ, ಮತ್ತು ಈ ಹೇಳಿಕೆಗೆ ಉದಾಹರಣೆಕೊಡಿರಿ.
3. ಆಡುವ ಭಾಷೆ ಶೀಘ್ರಗತಿಯಲ್ಲಿ ಬದ ಲಾಗುತ್ತದೆ. ಆದರೆ ಬರೆಹದ ಭಾಷೆಯು ನಿಧಾನವಾಗಿ ಬದ ಲಾಗುತ್ತದೆ.ಉದಾಹರಣೆಯೊಂದಿಗೆ ವಿವರಿಸಿರಿ.
4. ಬರೆಹದಲ್ಲಿ ಸರಳತೆ, ಸಲತೆ ಮತ್ತು ಕ್ಲುಪ್ತತೆಗಳ ಮಹತ್ವವೇನು? ವಿವರಿಸಿ.
5. ಆಡುವ ಮತ್ತು ಬರೆಯುವ ಭಾಷೆಗಳನ್ನು ವಿಶ್ಲೇಷಿಸಿ.
6. ಕಲಿಯುವಇರುವ ಮಕ್ಕಳು ಬರೆಹದಲ್ಲಿಎದುರಿಸುವ ಕಷ್ಟಗಳು ಯಾವುದು?
7. ಭಾಷಾಕಲಿಕೆಯಲ್ಲಿಕಥಾ ಲೇಖನ ಮತ್ತು ಕವಿತಾ ಲೇಖನಗಳ ಪಾತ್ರವೇನು?

## ಚಟುವಟಿಕೆಕ್ರಿಯಾ ಕಲಾಪ

ಮಕ್ಕಳಲ್ಲಿ ಸೂಕ್ಷ್ಮ ಅಂಗ ಚಾಲನಾ ಕೌಶಲ್ಯವನ್ನು ಬೆಳಸಲು ಚಟುವಟಿಕೆಯು ಬಗ್ಗೆ ಚಿಂತನೆ ಮಾಡಿರಿ.

ತರಗತಿಯಲ್ಲಿ ಮಕ್ಕಳು ಹೆಚ್ಚು ಸಂವಹನ ಶೀಲರಾಗಲು, ಮಾಡಬಹುದಾದ ಈ ಉದ್ದೇಶ ಈಡೇರಿಕೆಗೆ ಯಾವ ರೀತಿಯ ಸಾಮಗ್ರಿಗಳು ಉಪಯುಕ್ತವಾಗುವುವು.

# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

## *ಕೋರ್ಸ್ - 503*

## *ಪೂರ್ವಪ್ರಾಥಮಿಕ ಹಂತದ ಭಾಷೆಯ ಕಲಿಕೆ*

### ವಿಭಾಗ – 3

## ತರಗತಿಯಲ್ಲಿ ಭಾಷೆಯನ್ನು ಕಲಿಯುವುದು

ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ

ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,

ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309

ಜಾಲತಾಣ : www.nios.ac.in

## ಪರಿಣಿತರ ಸಮಿತಿ

ಡಾ॥ ಸಿತಾಂಶು ಎಸ್.ಜೆನಾ
ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ
ಶ್ರೀ ಬಿ.ಕೆ. ತ್ರಿಪಾಠಿ
ಭಾ.ಆ.ಸೆ. ಪ್ರಮುಖ ಸಚಿವರು,
ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,
ಝಾರ್ಖಂಡ್ ಸರ್ಕಾರ, ರಾಂಚಿ
ಪ್ರೋ ಎ.ಕೆ. ಶರ್ಮಾ
ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ
ನವದೆಹಲಿ
ಪ್ರೋ.ಎಸ್.ವಿ.ಎಸ್.ಚೌಧರಿ
ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.
ನವದೆಹಲಿ
ಪ್ರೋ.ಸಿ.ಬಿ.ಶರ್ಮಾ
ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ
ಮುಕ್ತ ವಿಶ್ವವಿದ್ಯಾಲಯ, ನವದೆಹಲಿ
ಪ್ರೋ. ಎಸ್.ಸಿ. ಅಗರ್‌ಕರ್
ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ
ಕೇಂದ್ರ, ಮುಂಬಯಿ

ಪ್ರೋ.ಸಿ.ಎಸ್. ನಾಗರಾಜು
ಭೂತಪೂರ್ವಪ್ರಾಚಾರ್ಯರು
ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ದೊರೈಸ್ವಾಮಿ
ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು
ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ
ಪ್ರೊ. ಬಿ. ಫಾಲಚಂದ್ರ
ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,
ಹಾಗೂ ಭೋಧನಾ ವಿಭಾಗದ ವರಿಷ್ಟರು ಆರ್‌ಇಐ
(ಎನ್‌ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ಕೆ. ವಸಿಷ್ಠ
ಭೂತಪೂರ್ವ ಮುಖ್ಯಸ್ಥರು, ಡಿಇಇ,
ಎನ್‌ಸಿಇಜರ್‌ಟಿ, ನವದೆಹಲಿ
ಪ್ರೊ. ವಸುಧಾ ಕಾಮತ್
ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ
ವಿಶ್ವವಿದ್ಯಾಲಯ, ಮುಂಬಯಿ

ಡಾ. ಹೂಮ ಮಸೂದ್
ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ
ಪ್ರೊ॥ ಪವನ್ ಸುಧೀರ್
ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ
ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ
ಶ್ರೀ ಬಿನಯ ಪಟ್ನಾಯಕ್
ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,
ರಾಂಚಿ
ಡಾ. ಕುಲದೀಪ್ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,
ನೊಯಿಡಾ
ಪ್ರೋ. ಎಸ್.ಸಿ. ಪಾಂಡಾ
ವರಿಷ್ಠ ಸಮಾಲೋಚಕರು (ಶೈಕ್ಷಣಿಕ)
ಡಾ॥ ಕುಜನ್ ಬಲಾ
ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ.

## ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು

ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ

## ಪಠ್ಯಲೇಖರು

ಡಾ॥ ಮೊಹಿತ್ ಮೋಹನ್ ಮೊಹಂತಿ
ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ
ಒಡಿಶಾ
ಡಾ॥ ಪರಶುರಾಮ್ ರಾಯಸಿಂಗ್
ನಿವೃತ್ತ ರೀಡರ್ (ಶಿಕ್ಷಣ)
ಎನ್.ಡಿ.ಡ್ಲ್ಯೂ ಅಧ್ಯಾಪಕ ಶಿಕ್ಷಣ
ಮಹಾವಿದ್ಯಾಲಯ, ಭುವನೇಶ್ವರ
ಶ್ರೀ ಸುದರ್ಶನ ಸಂತಾರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ
ಶ್ರೀ ತಪಸ್ ಕುಮಾರ್ ನಾಯಕ್
ವರಿಷ್ಟ ಅಧ್ಯಾಪಕರ ಶಿಕ್ಷಕರು
ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು
ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ
ಶ್ರೀಮತಿ. ಸುಚಪ್ರವಾ ಮೊಹಾಪಾತ್ರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಡಿ.ಐ.ಇ.ಟಿ. ಕಟಕ್ ನರಸಿಂಗಪುರ್

ಡಾ॥ ಜೆ.ಸಿ. ನಂದಾ
ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ
ಮಹಾವಿದ್ಯಾಲಯ ಭುವನೇಶ್ವರ
ಶ್ರೀ ಕಾರ್ತಿಕೇಶ್ವರ ಜಿಹರಾ
ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇ.ಟಿ ಕೊರಾಪುಟ್ ಜೆಪುರ್
ಶ್ರೀಮತಿ. ಲಿಪಿಕಾ ಸಾಹು
ವರಿಸ್ಠ ಅಧ್ಯಾಪಕ ಶಿಕ್ಷಕರು
ಡಿ.ಐ.ಇ. ಟಿ. ನಯಾಘರ್ ರಜಸುನಖಾಲ
ಶ್ರೀ ಪೂರ್ಣಚಂದ್ರಬ್ರಹ್ಮ
ವರಿಷ್ಠ ಅಧ್ಯಾಪಕರ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ
ಡಾ॥ ರಾಜೇಂದ್ರ ಕುಮಾರ ನಾಯಕ್
ಉಪನ್ಯಾಸಕರು ಶಿಕ್ಷಣ ವಿಭಾಗ
ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್

ಶ್ರೀಮತಿ ಚಂದ್ರಿಕಾ ನಾಯಕ್
ವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇಟಿ. ನವಘರ್ ರಾಜಸುಂಬಾಲ
ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ
ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್
ಥೆಂಡಿಪಾಡ
ಶ್ರೀ ಪ್ರಶಾಂತಕುಮಾರ ರಥ್
ಪ್ರಾಂಶುಪಾಲರು ಡಿ.ಐ.ಇಟಿ. ಪುರಿ
ಡಾ॥ ದುರ್ಗಾಚರಣ ರಾಣಾ
ನಿವೃತ್ತರೀಡರ್ (ಶಿಕ್ಷಣ)
ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್
ಶ್ರೀ ಅನಂತ ಕಿಶೋರ ಸ್ವಾರ್ಯಿ
ಯೋಜನ ಪ್ರಬಂಧಕರು ಯುವ ಮತ್ತು
ಸಾಮಾಜಿಕ ಅಭಿವೃದ್ಧಿ
ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ

## ವಿಷಯ ಸಂಪಾದಕರು

ಡಾ॥ ಸುಶ್ಮಿತಾ ಮಿತ್ರ
ಭೂತಪೂರ್ವ ನಿರ್ದೇಶಕರು
ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ.

## ಭಾಷಾ ಸಂಪಾದಕರು

ಡಾ. ಎ.ಡಿ. ತಿವಾರಿ
ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ
ಎನ್‌ಸಿಇಆರ್‌ಟಿ ನವದೆಹಲಿ

## ಕಾರ್ಯಕ್ರಮ ಸಂಯೋಜಕರು

ಡಾ॥ ಕುಲದೀಪ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ

ಪ್ರೋ॥ ಎಸ್.ಪಿ. ಪಾಂಡ
ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ

ಡಾ॥ ಕಂರ್ಚ್ ಬಾಲಾ
ಕಾರ್ಯಪಾಲಕ ಅಧಿಕಾರಿ (ಅಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ

## ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ

ಶ್ರೀ. ಖಿ.ಎನ್. ಉಪ್ರೇತಿ.
ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.
ನೊಯಿಡಾ
ಶ್ರೀ ಧರ್ಮಾನಂದ ಜೋಶಿ
ಕಾರ್ಯಪಾಲಕ ಸಹಾಯಕರು, ಮುದ್ರಣ
ಎನ್.ಐ.ಓ.ಎಸ್. ನೊಯಿಡಾ

## ಬೆರಳಚ್ಚು

ಶಿವಂ ಗ್ರಾಫಿಕ್ಸ್
431, ರಿಶಿನಗರ್, ದೆಹಲಿ–34

## ಕಛೇರಿ ಸಹಾಯಕರು

ಶ್ರೀಮತಿ. ಸುಷ್ಮಾ
ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,
ಎನ್.ಐ.ಓ.ಎಸ್. ನೊಯಿಡಾ.

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾದ್ಯಮಿಕ ಮತ್ತು ಉಚ್ಚಮಾದ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯುವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ-ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

# ವಿಭಾಗ – 3

# ತರಗತಿಯಲ್ಲಿ ಭಾಷೆಯನ್ನು ಕಲಿಯುವುದು

**ವಿಭಾಗ ಪಠ್ಯಭಾಗ**

*ಪಠ್ಯಭಾಗ 7 : ಸಾಹಿತ್ಯ ಮತ್ತು ಭಾಷೆ*

*ಪಠ್ಯಭಾಗ 8 : ತರಗತಿಯ ಸಂರಚನೆಯೊಳಗೆ ಭಾಷಾ ಕಲಿಕೆಯ ವಿಧಾನಗಳು*

*ಪಠ್ಯಭಾಗ 9 : ಶೈಕ್ಷಣಿಕ ಸಾಮಗ್ರಿಗಳು – ಕೆಲವು ವಿನೂತನ ಆಯಾಮಗಳು*

*ಪಠ್ಯಭಾಗ 10 : ಮೌಲ್ಯಮಾಪನ/ಪರಿಶೀಲನೆ*

# ವಿಭಾಗ ಪರಿಚಯ

ಘಟಕ 7 ಮತ್ತು 8ರಲ್ಲಿ ಸಾಹಿತ್ಯದ ಭಾಷೆಯನ್ನು ಪ್ರಶಂಸಿಸುವ ಹಾಗೂ ಮಕ್ಕಳಲ್ಲಿ ಭಾಷೆಯನ್ನು ಆಸಕ್ತಿಯಿಂದ ಕಲಿಯುವುದಕ್ಕೆ ಪ್ರೇರೇಪಿಸಬಲ್ಲ ಅಂಶ ಯಾವುದು ಎಂಬುದನ್ನು ಗುರುತಿಸುವ ಬಗ್ಗೆ ನಾವು ಕಲಿಯುತ್ತೇವೆ. ಇದರೊಡನೆ, ಭಾಷೆಯನ್ನು ಕಲಿಯುವ ಪ್ರಕ್ರಿಯೆಯಲ್ಲಿ ಕವಿತೆ, ಕತೆ, ನಾಟಕ ಮೊದಲಾದವುಗಳ ಪಾತ್ರವನ್ನು ಕುರಿತು ತಿಳಿದುಕೊಳ್ಳುತ್ತೇವೆ.

ಘಟಕ 9ರಲ್ಲಿ ಭಾಷೆಯ ಕಲಿಕೆಯ ತರಗತಿಗಳಲ್ಲಿ ನಾವು ಬಳಸಬಹುದಾದ ಕಲಿಸುವಿಕೆಯ ವಿಧಾನಗಳ ಬಗ್ಗೆ ಹಾಗೂ ಆ ವಿಧಾನಗಳನ್ನು ಹೇಗೆ, ಪರಿಣಾಮಕಾರಿಯಾಗಿಸಬಹುದು ಎಂಬುದರ ಬಗ್ಗೆ ತಿಳಿದುಕೊಳ್ಳುತ್ತೇವೆ. ಕಲಿಸುವ ವಿಧಾನಗಳು ಹಾಗೂ ಬಳಸುವ ಉಪಕರಣಗಳು ಆಸಕ್ತಿಕರವೂ, ಮಕ್ಕಳ ಕುತೂಹಲವನ್ನು ಹೆಚ್ಚಿಸುವಂತವೂ, ಉತ್ತೇಜಿಸುವಂತವೂ ಆಗಿರದ ಹೊರತು, ಯಾವುದೇ ಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಯುವಲ್ಲಿ ಮಕ್ಕಳು ಆಸಕ್ತಿ ತೋರಿಸಲಾರರು.

ಘಟಕ 10ರಲ್ಲಿ ಕಲಿಕೆಯ ಪರಿಶೀಲನೆ ಹಾಗೂ ಮೌಲ್ಯಮಾಪನದ ಕೆಲಸ ನಡೆಯುತ್ತದೆ. ಸಾಂಪ್ರದಾಯಿಕ ಹಾಗೂ ರೂಢಿಗತ ವಿಧಾನಗಳನ್ನು ಪರೀಕ್ಷಿಸುವ ಮೂಲಕ ಈಗಿರುವ ವಿಧಾನವನ್ನು ಹೇಗೆ ಆಧುನೀಕರಿಸಬಹುದು ಎಂಬುದನ್ನು ಗೊತ್ತುಮಾಡಿಕೊಳ್ಳುವ ಹಾಗೂ ಕಲಿಕೆಯ ಪರಿಶೀಲನೆಯನ್ನು ಹೇಗೆ ಮೌಲ್ಯಮಾಪನ ಮಾಡಬಹುದು ಎಂಬುದನ್ನು ನಿರ್ಧರಿಸುತ್ತೇವೆ.

# ಪರಿವಿಡಿ


| *ಕ್ರ.ಸಂ.* | *ಪಠ್ಯಭಾಗ* | *ಪುಟಸಂಖ್ಯೆ* |
|---|---|---|
| **1** | **ಪಠ್ಯಭಾಗ–7: ಸಾಹಿತ್ಯ ಮತ್ತು ಭಾಷೆ** | **01** |
| **2** | **ಪಠ್ಯಭಾಗ–8: ತರಗತಿಯ ವಾತಾವರಣದೊಳಗೆ ಭಾಷಾ ಬೋಧನೆಯ ವಿಧಾನಗಳು** | **22** |
| **3** | **ಪಠ್ಯಭಾಗ–9: ಶೈಕ್ಷಣಿಕ ಸಾಮಗ್ರಿಗಳು – ಕೆಲವು ವಿನೂತನ ಆಯಾಮಗಳು** | **51** |
| **4** | **ಪಠ್ಯಭಾಗ–10: ಮೌಲ್ಯಮಾಪನ/ಪರಿಶೀಲನೆ** | **69** |

# ಪಠ್ಯಭಾಗ 7 ಸಾಹಿತ್ಯ ಮತ್ತು ಭಾಷೆ

Notes

## ಸ್ವರೂಪ

*7.0 ಪ್ರಸ್ತಾವನೆ*

*7.1 ಕಲಿಕೆಯ ಉದ್ದೇಶಗಳು*

*7.2 ಸಾಹಿತ್ಯಕ ಸಾಧನಗಳು*

*7.3 ಭಾಷೆಯ ಕಲಿಕೆಯಲ್ಲಿ ಸಾಹಿತ್ಯದ ಪಾತ್ರ*

*7.3.1 ಸಾಹಿತ್ಯವೆಂದರೆ ಏನು?*

*7.3.2 ಸಾಹಿತ್ಯದ ರೂಪಗಳು*

*7.3.3 ಭಾಷೆಯ ಕಲಿಕೆಯಲ್ಲಿ ಇತಿಹಾಸದ ಹಿನ್ನೆಲೆಯಲ್ಲಿ ಸಾಹಿತ್ಯದ ಉಪಯುಕ್ತತೆ*

*7.4 ಸಾಹಿತ್ಯದ ಕಲಿಕೆಯ ಉದ್ದೇಶಗಳು*

*7.4.1 ತರಗತಿಯ ಬಗೆಗಳು*

*7.4.2 ಪ್ರಥಮ ಭಾಷೆ, ದ್ವಿತೀಯ ಭಾಷೆ (ಅಥವಾ ಅನ್ಯದೇಶೀ ಭಾಷೆ)ಯ ತರಗತಿ*

*7.4.3 ಸಾಹಿತ್ಯದ ಮೂಲಕ ಬೇರೆಬೇರೆ ಕೌಶಲಗಳ ಬೆಳವಣಿಗೆ*

*7.5 ಸಾಹಿತ್ಯದ ಕಲಿಸುವಿಕೆಯ ವಿವಿಧ ಪ್ರಕಾರಗಳು*

*7.5.1 ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ಅಳವಡಿಸಿಕೊಳ್ಳುವುದು*

*7.5.2 ತರಗತಿಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ಬಳಸಿಕೊಳ್ಳುವುದು*

*7.5.3 ತರಗತಿಗಳಲ್ಲಿ ಸಮಸ್ಯೆಗಳನ್ನು ಎದುರಿಸುವುದು*

*7.6 ಸಮಗ್ರವಾಗಿ ಹೇಳುವುದಾದರೆ*

*7.7 ಹೆಚ್ಚಿನ ಓದಿಗಾಗಿ ಹಾಗೂ ಆಕರಗಳು*

*7.8 ಘಟಕದ ಕೊನೆಯ ಅಭ್ಯಾಸಗಳು*

## 7.0 ಪ್ರಸ್ತಾವನೆ

ಈ ಘಟಕದಲ್ಲಿ, ಭಾಷೆಯ ಕಲಿಕೆಯಲ್ಲಿ ಸಾಹಿತ್ಯದ ಪಾತ್ರದ ಬಗ್ಗೆ ನಾವು ಪರೀಕ್ಷಾತ್ಮಕ ಅಧ್ಯಯನ ಮಾಡುತ್ತೇವೆ. ಹೆಚ್ಚಿನ ಶಾಲೆಗಳಲ್ಲಿ, ಪ್ರಾಥಮಿಕ ತರಗತಿಗಳಲ್ಲಿ ಸಾಹಿತ್ಯವನ್ನು ಒಂದು ಪ್ರತ್ಯೇಕ ವಿಷಯವಾಗಿ ಪರಿಗಣಿಸುವುದೇ ಇಲ್ಲ. ಅದನ್ನು ಕೇವಲ ಒಂದು ಭಾಷೆಯಾಗಿ (ಅದು ಕನ್ನಡ, ಇಂಗ್ಲಿಷ್, ಹಿಂದಿ ಅಥವಾ ಸಂಸ್ಕೃತ ಯಾವುದೇ ಆಗಿರಲಿ) ಪಠ್ಯಕ್ರಮದಲ್ಲಿ ಸೇರಿಸಿರಲಾಗುತ್ತದೆ. ಹಾಗೆ ನೋಡಿದರೆ, ಕತೆಗಳನ್ನು, ಕವಿತೆಗಳನ್ನು, ಪ್ರಬಂಧಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಿರುತ್ತಾರಾದರೂ, ಅವನ್ನು ಯಾಕೆ ಸೇರಿಸಲಾಗಿದೆ, ಅವುಗಳನ್ನು ಓದುವುದರಿಂದ ಆಗುವ ಲಾಭವೇನು, ಭಾಷೆಯನ್ನು ಕಲಿಯುವಾಗ ಸಾಹಿತ್ಯದ ಪಾತ್ರವೇನು ಎಂಬ ಹಲವಾರು ವಿಷಯಗಳ ಬಗ್ಗೆ ಚರ್ಚೆ ಆಗಿರುವುದು ತೀರಾ ಅಪರೂಪ. ಈ ಘಟಕದಲ್ಲಿ ನಾವು ಚರ್ಚಿಸಲಿರುವ ಕೆಲವು ಪ್ರಶ್ನೆಗಳು ಹೀಗಿವೆ:

Notes

- ಸಾಹಿತ್ಯವೆಂದರೆ ಏನು?
- ಮಕ್ಕಳ ಸಾಹಿತ್ಯವೆಂದರೆ ಏನು?
- ತರಗತಿಗಳಲ್ಲಿ ಅದನ್ನು ಕಲಿಸುವುದು ಹೇಗೆ ಹಾಗೂ
- ಅದರಿಂದ ಲಭಿಸಬಹುದಾದ ಉಪಯೋಗಗಳು ಏನು?

## 7.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಅಭ್ಯಸಿಸಿದ ನಂತರ

- ಸಾಹಿತ್ಯದ ವಿವಿಧ ಪ್ರಕಾರಗಳ ಹಾಗೂ ಸ್ವರೂಪಗಳ ಪರಿಚಯ ನಿಮಗಾಗುತ್ತದೆ.
- ಭಾಷೆಯನ್ನು ಕಲಿಯುವಾಗ ಸಾಹಿತ್ಯದ ಪಾತ್ರವೇನು ಎಂಬುದರ ಬಗ್ಗೆ ನೀವು ವಿಶ್ಲೇಷಣೆ ಮಾಡಬಲ್ಲವರಾಗುತ್ತೀರಿ.
- ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ಅಳವಡಿಸಿಕೊಳ್ಳುವ ವಿಷಯದ ಕುರಿತಂತೆ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಲ್ಲವರಾಗುತ್ತೀರಿ.
- ಸಾಹಿತ್ಯದ ಕಲಿಸುವಿಕೆಯಲ್ಲಿ ಎದಿರಾಗಬಹುದಾದ ತೊಡಕುಗಳನ್ನು ಗುರುತಿಸಬಲ್ಲವರಾಗುತ್ತೀರಿ.
- ಸಾಹಿತ್ಯದ ಕಲಿಸುವಿಕೆಯಲ್ಲಿ ಶಿಕ್ಷಕರ ಪಾತ್ರವೇನು ಎಂಬುದನ್ನು ಸ್ಪಷ್ಟವಾಗಿ ವಿವರಿಸಬಲ್ಲವರಾಗುತ್ತೀರಿ.

## 7.2 ಸಾಹಿತ್ಯಕ ಸಾಧನಗಳು

ವಿಭಿನ್ನ ರೀತಿಯ ಸಾಧನಗಳಾದ ಉಪಮೆ, ಹೋಲಿಕೆ, ವಿಶೇಷಾಲಂಕಾರ, ಅನುಪ್ರಾಸ, ಅಕ್ಷರಗಳ ಧ್ವನಿಸಾಮ್ಯ, ಸಾಂಗತ್ಯ, ಪ್ರಾಸ, ಸಾದೃಶ್ಯ, ಪರ್ಯಾಯಪದ ಬಳಕೆ, ಮೊದಲಾದವುಗಳ ಅಳವಡಿಕೆಯಿಂದ ಅಲಂಕಾರವೆಂದರೆ ಸೌಂದರ್ಯವನ್ನು ಹೆಚ್ಚಿಸುವುದು. ಮಾತನಾಡುವಾಗಲೂ ಕೇಳುವವರಿಗೆ ಹಿತವಾಗುವಂತೆ ಚಮತ್ಕಾರದ ರೀತಿಯಲ್ಲಿ ಮಾತಾನಾಡುವುದರಿಂದ, ಪದಗಳನ್ನು ಬಳಸುವುದರಿಂದ ನಾವು ನಿತ್ಯವೂ ಮಾತನಾಡುವ ಭಾಷೆಗಿಂತ ಸಾಹಿತ್ಯದ ಭಾಷೆಯು ಭಿನ್ನವಾಗಿರುತ್ತದೆ ಈ ಕೆಲವು ಸಾಧನಗಳನ್ನು ನಾವು ವಿವರವಾಗಿ ಗಮನಿಸೋಣ.

1. ಹೋಲಿಕೆ (ಸಿಮಿಲಿ): ಯಾವುದೇ ಎರಡು ವಸ್ತು ಅಥವಾ ವ್ಯಕ್ತಿಗಳ ನಡುವೆ ವಿಶೇಷ ಅಂಶವೊಂದನ್ನು ಗಮನದಲ್ಲಿರಿಸಿಕೊಂಡು ಹೋಲಿಕೆ ಮಾಡಬೇಕಾದ ಸಂದರ್ಭದಲ್ಲಿ ಬಳಸಲಾಗುವ ಗುಣಕ್ಕೆ ಹೋಲಿಕೆ ಎನ್ನಲಾಗುತ್ತದೆ. ಎಕ್ಸ್ ಮತ್ತು ವೈಗಳ ನಡುವೆ ಹೋಲಿಕೆ ಮಾಡಬೇಕಾದ ಸಂದರ್ಭದಲ್ಲಿ ಮೂರನೆಯ ಜೆಡ್‌ನ್ನು ಕೂಡಾ ಹೋಲಿಕೆಯಲ್ಲಿ ಒಳಗೊಳ್ಳುವುದು ಮತ್ತು ಆ ಮೂಲಕ ಮೂರೂ ಅಂಶಗಳ ನಡುವೆ ಒಂದು ಸಂಬಂಧ ಏರ್ಪಡುವುದು ಉದಾಹರಣೆಗೆ 'ಆಕೆಯ ಮುಖವು ಚಂದ್ರನಂತೆ ಮುದ್ದಾಗಿದೆ' ಎಂದು ಹೇಳುವಾಗ ಆಕೆಯ ಮುಖ ಎಕ್ಸ್ ಆದರೆ ಚಂದ್ರನು ವೈ ಅಗುತ್ತದೆ. ಇವೆರಡರ ನಡುವೆ ಏರ್ಪಡುವ 'ಮುದ್ದಾಗಿದೆ' ಎಂಬುದು ಜೆಡ್, ಅಂದರೆ ಎಕ್ಸ್ ಮತ್ತು ವೈ ನಡುವಿನ ಕೊಂಡಿಯಾಗುತ್ತದೆ.

2. ರೂಪಕಾಲಂಕಾರ (ಮೆಟಾಫರ್): ರೂಪಕಾಲಂಕಾರದ ಮುಖ್ಯ ಲಕ್ಷಣವೆಂದರೆ ಯಾವುದೇ ಎರಡು ವಸ್ತುಗಳ ನಡುವಿನ ಸಾಮ್ಯತೆಯನ್ನು ಗುರುತಿಸುವುದಾಗಿದೆ. ಕೆಳಗಿನ ವಾಕ್ಯಗಳನ್ನು ಗಮನಿಸಿ:
   1. ಒಂಟೆಗಳು ಮರುಭೂಮಿಯಲ್ಲಿ ಕಾಣಸಿಗುತ್ತವೆ
   2. ಒಂಟೆಗಳು ಮರುಭೂಮಿಯ ಹಡಗುಗಳಿದ್ದಂತೆ

ಇಲ್ಲಿ, ಒಂದನೆಯ ವಾಕ್ಯದಲ್ಲಿ ಯಾವುದೇ ರೂಪಕವನ್ನು ಕಾಣದ ನಾವು ಎರಡನೆಯ ವಾಕ್ಯದಲ್ಲಿ ಒಂದು ರೂಪಕವನ್ನು ಕಾಣುತ್ತೇವೆ. ಕೇವಲ ಒಂಟೆ ಎಂದಷ್ಟೇ ಹೇಳಿದಾಗ, ನಿಮ್ಮ ಕಣ್ಣಿಗೆ ಒಂಟೆ ಮಾತ್ರ ಕಾಣುತ್ತದೆ. ಆದರೆ ಅದನ್ನು ಮರುಭೂಮಿಯ ಹಡಗು ಎಂದು ಹೇಳುವಾಗ ನಿಮ್ಮ ಮನಸ್ಸಿಗೆ ಸಮುದ್ರಕ್ಕೆ ಹಡಗು ಹೇಗೋ ಅದೇರೀತಿ ಒಂಟೆಯು ಮರುಭೂಮಿಯ ಮೇಲಿನ ಹಡಗು ಆಗಿದೆ ಎಂಬುದಾಗಿ ತೋರುತ್ತದೆ.

3. ಅನುಪ್ರಾಸ (ಅಲಿಟರೇಶನ್): ಏಕರೂಪದ ವರ್ಣಗಳು ಮತ್ತೆಮತ್ತೆ ಬರುವಂತೆ ಶಬ್ದಗಳನ್ನು ಜೋಡಿಸಿ ರಚಿಸಿದ ಒಂದು ಶಬ್ದಾಲಂಕಾರ. ಉದಾಹರಣೆಗೆ, ಒಂದು ಪದ್ಯದ ಸಾಲುಗಳ ಪ್ರಾರಂಭದ ಶಬ್ದಗಳ ಉಚ್ಚಾರ ಒಂದೇ ನಮೂನೆಯದ್ದಾಗಿದ್ದರೆ ಅದನ್ನು ಅನುಪ್ರಾಸ ಎನ್ನುತ್ತೇವೆ.
   ಸರಳವಾಗಿ ಹೇಳುವುದಾದರೆ,
   ಕಡಲತೀರದಲ್ಲಿ ಅವಳು ಮಡಿಲುತುಂಬ ಮೀನುಹಿಡಿದು ಒಡನೆ ದಡದಿ ಮಾರಿ ಮನೆಗೆ ನಡೆದು ಹೋದಳು

   ಒಂದೇ ವರ್ಣವು ಮತ್ತೆ ಮತ್ತೆ ಪುನರುಕ್ತಿಯಾದರೆ ಅಂದರೆ ಒಂದೊ, ಎರಡೊ. ಮೂರೊ ಅಕ್ಷರಗಳು ಮತ್ತೆ ಮತ್ತೆ ಬಂದರೆ ಅದನ್ನು "ವೃತ್ತ್ಯಾನುಪ್ರಾಸ" ಎನ್ನುತ್ತಾರೆ.

   'ಯಾರಿಟ್ಟಿಗೆಯಿವು ಗೊತ್ತಿದೆ ನನಗೆ' ಎಂತಲೋ ಅಥವಾ 'ಸಂತನು ಕಾಡಿಗೆ ನಡೆದೇ ನಡೆದನು ಕಡೆಯಲಿ ಲೋಕವ ದಾಟಿದನು' ಎಂಬಲ್ಲಿ ಈ ಲಕ್ಷಣಗಳು ನಮಗೆ ಕಾಣುತ್ತವೆ.

   ಎರಡು ಸ್ವರಗಳು ಜತೆಜತೆಯಾಗಿ ಹಲವು ಕಡೆ ಬಂದರೆ, ಅದನ್ನು "ಛೇಕಾನುಪ್ರಾಸ" ಎನ್ನುವರು. ದೀಪದ ದ್ವೀಪದಿ ಹಚ್ಚಿರಿ ಪ್ರಣತಿ ಇಲ್ಲಿ ಇ ಸ್ವರದ ಪುನರುಕ್ತಿಯಾಗಿದೆ.

4. ಅಣಕಕಾವ್ಯ (ಐರನಿ): ಹೆಚ್ಚಿನ ಸಂದರ್ಭಗಳಲ್ಲಿ ಎದುರಿನ ವ್ಯಕ್ತಿ ಅಥವಾ ವಸ್ತುವನ್ನು ಅಣಕವಾಡಿಕೊಂಡು, ಗೇಲಿ ಮಾಡಿಕೊಂಡು ಮಾತಾಡುವ ಪದಬಳಕೆಗೆ ಅಣಕಕಾವ್ಯ ಅಥವಾ ಐರನಿ ಎನ್ನುತ್ತಾರೆ. ಉದಾಹರಣೆಗೆ, ನಿಮ್ಮ ವಾಹನ ಚಾಲಕನು ತಪ್ಪುಮಾಡಿರುವಾಗಲೂ ನೀವು ಆತನಿಗೆ ಎಂದಿನಂತೆ ನೀನು ಎಂದು ಕರೆಯದೇ, 'ಹೌದೇ ಮಹಾಶಯರೇ' ಅಥವಾ 'ಹೌದೇ ಮಹಾನುಭಾವರೇ' ಎಂದು ವ್ಯಂಗ್ಯವಾಗಿ ಮಾತಾಡಿಸುವುದು. ಅಂದರೆ ವ್ಯಕ್ತಿಯು ತಾನು ಹೇಳಬೇಕಾದುದನ್ನು ಸಹಜರೀತಿಯಲ್ಲಿ ಹೇಳದೇ, ಅದಕ್ಕೆ ವ್ಯಂಗ್ಯದ ಲೇಪಕೊಟ್ಟು ಮಾತಾಡುವುದು.

5. ಸೂಚನಾತ್ಮಕ ಹೋಲಿಕೆ (ಅಲ್ಯೂಶನ್): ವ್ಯಕ್ತಿ ಅಥವಾ ವಸ್ತುವನ್ನು ವಿಶೇಷವಾಗಿ, ಹೋಲಿಸಿ ಮಾತಾಡುವುದಕ್ಕೆ ಸೂಚನಾತ್ಮಕ ಹೋಲಿಕೆ ಮಾಡುವುದು ಎನ್ನಲಾಗುತ್ತದೆ. ಉದಾಹರಣೆಗೆ, ಅಮಿತನು ಸರ್ದಾರ ವಲ್ಲಭಭಾಯಿವರಷ್ಟೇ ಕಠಿಣ ಮನುಷ್ಯ ಎಂದು ಹೇಳುವಾಗ, ಸರ್ದಾರ ಪಟೇಲರು ಉಕ್ಕಿನ ಮನುಷ್ಯ, ಸಮರ್ಥ ನಾಯಕ ಎಂಬುದನ್ನು ಒತ್ತಿ ಹೇಳಿದ ಹಾಗೆ.

6. ಅತ್ಯುಕ್ತಿ ಅಥವಾ ಅತಿಶಯೋಕ್ತಿ (ಹೈಪರ್‌ಬೋಲೆ): ಕವಿಗಳು, ಬರಹಗಾರರು ಒಂದು ಅಂಶವನ್ನು, ಸಂಗತಿಯನ್ನು ವಿಜೃಂಭಿಸುವಂತೆ ವರ್ಣಿಸಬಲ್ಲರು. 'ಆ ಋಷಿಮುನಿಯು ಈ ಪರ್ವತಗಳಷ್ಟೇ ಪ್ರಾಚೀನನು, ಸನಾತನನು' ಎಂದು ಕವಿಯೊಬ್ಬ ಬಣ್ಣಿಸಿದರೆ ಅದು ಅತಿಶಯೋಕ್ತಿಯಾಗುತ್ತದೆ.

7. ಪ್ರಾಸ (ರೈಮ್): ಒಂದೇ ರೀತಿ ಕೇಳಿಸುವ ಎರಡು ವರ್ಣಗಳು ಪುನರುಕ್ತಿಯಾದರೆ ಅದನ್ನು ಪ್ರಾಸ ಎಂದು ಕರೆಯುತ್ತೇವೆ. ಉದಾಹರಣೆಗೆ ಶೇಕ್ಸ್‌ಪಿಯರ್ ಕವಿಯ ಸಾನೆಟ್ಟಿನ ಸಾಲುಗಳನ್ನೇ ಗಮನಿಸೋಣ:

   ಶಲ್ ಐ ಕಂಪೇರ್ ದೀ ಟು ಅ ಸಮ್ಮರ್ಸ್ ಡೇ
   ದೋ ಆರ್ ಮೋರ್ ಲವ್ಲೀ ಅಂಡ್ ಮೋರ್ ಟೆಂಪ್ರೇಟ್
   ರಫ್ ವಿಂಡ್ಸ್ ಡು ಶೇಕ್ ದಿ ಡಾರ್ಲಿಂಗ್ ಬಡ್ಸ್ ಆಫ್ ಮೇ
   ಅಂಡ್ ಸಮ್ಮರ್ಸ್ ಲೀಸ್ ಹ್ಯಾತ್ ಆಲ್ ಟೂ ಶಾರ್ಟ್ ಅ ಡೇಟ್

   ಕವಿತೆಯ ಕೊನೆಯಲ್ಲಿ ಬರುವ ಡೇ, ಮೇ ಹಾಗೂ ಟೆಂಪ್ರೇಟ್, ಡೇಟ್ – ಇಂತಹ ಪದಗಳನ್ನು ಪ್ರಾಸಪದಗಳು ಎನ್ನಲಾಗುತ್ತದೆ. ಮೊದಲ ಹಾಗೂ ಮೂರನೆಯ ಮತ್ತು ಎರಡನೆಯ ಹಾಗೂ ಕೊನೆಯ ಸಾಲುಗಳಲ್ಲಿ ಈ ಪ್ರಾಸ ಪದಗಳು ಬಂದಿರುವುದನ್ನು ಗಮನಿಸಬಹುದು.

Notes

8. ಪರ್ಸನಫಿಕೇಶನ್: ಜಡವಸ್ತುಗಳಲ್ಲಿ ಮನುಷ್ಯನ ವಿಶೇಷ ಗುಣಗಳನ್ನು ಆರೋಪಿಸಿ ವರ್ಣಿಸುವ ಒಂದು ಬಗೆಯ ಅಲಂಕಾರ. ಕವಿಯೊಬ್ಬ ಗಾಳಿಯು ಎದ್ದುನಿಂತು ನನ್ನನ್ನು ಕೇಳಿತು... ಎಂದು ಬರೆದರೆ, ಇಲ್ಲಿ ಗಾಳಿಯನ್ನು ಸಶಕ್ತ ಮನುಷ್ಯನ ಹಾಗೆ ಪರಿಭಾವಿಸಲಾಗಿದೆ ಎಂದು ಅಂದಾಜಿಸಬಹುದು.

9. ಸಂಕೇತಗಳು (ಸಿಂಬಲ್ಸ್): ಯಾವುದೇ ಒಂದು ವಸ್ತುವು ಮತ್ತೊಂದರ ಸಂಕೇತವಾಗಿ ನಿಲ್ಲುವ ಪದಬಳಕೆಗೆ ಸಂಕೇತಗಳು ಎನ್ನಲಾಗುತ್ತದೆ. ಉದಾಹರಣೆಗೆ ಪಾರಿವಾಳ ಒಂದು ಪಕ್ಷಿ. ಅದನ್ನು ಶಾಂತಿಯ ಸಂಕೇತವಾಗಿ ಬಳಸಲಾಗುತ್ತದೆ. ಅದೇ ರೀತಿಯಾಗಿ ಕೇವಲ ಒಂದು ಸೇಬು ಆಡಂ ಮತ್ತು ಈವರ ವಿಷಯದಲ್ಲಿ ಪತನದ ಸಂಕೇತವಾಗಿ ಬಳಕೆಯಾಗಿದೆ ಎಂಬುದನ್ನು ಇಲ್ಲಿ ಗಮನಿಸೋಣ.

ನೀವು ಅಭ್ಯಾಸದ ಭಾಗವಾಗಿ ಒಂದು ಕತೆಯನ್ನೋ, ಕವಿತೆಯನ್ನೋ ಓದಿ ಈ ಮೇಲೆ ವಿವರಿಸಿದ ಸಂಗತಿಗಳನ್ನು ಗುರುತಿಸಬಲ್ಲವರಾಗಿರುತ್ತೀರಿ ಹಾಗೂ ಓದುಗರ ಮೇಲೆ ಅವು ಉಂಟುಮಾಡುವ ಪರಿಣಾಮವನ್ನು ವಿಮರ್ಶಿಸಬಲ್ಲವರಾಗುತ್ತೀರಿ.

### ಪ್ರಗತಿಯ ಪರಿಶೀಲನೆ – 1

*1. ಸಂಕೇತ, ಹೋಲಿಕೆ ಹಾಗೂ ಅಲಂಕಾರ ಇವುಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಬರೆಯಿರಿ.*

..............................................................................................................................................

..............................................................................................................................................

..............................................................................................................................................

*2. ಈ ಕೆಳಗಿನವುಗಳಲ್ಲಿ ಹೋಲಿಕೆಗಳು, ಅಲಂಕಾರಗಳು ಹಾಗೂ ಉಪಮೆಗಳನ್ನು ಗುರುತಿಸಿ ಬರೆಯಿರಿ.*

*ಎ. ನನ್ನ ಪ್ರೀತಿಯು ಕೆಂಪು ಗುಲಾಬಿ ಹೂವಿನಂತೆ*

*ಬಿ. ಅವಳ ನಗುವು ಮೋನಾಲಿಸಾಳ ನಗುವಿನ ಹಾಗೆ ಮೋಹಕವಾಗಿದೆ*

*ಸಿ. ಜೀವನ ಒಂದು ಹೋರಾಟ*

*ಡಿ. ಮೊದಲೆರಡು ಯುದ್ಧಗಳನ್ನು ಗೆದ್ದವನಿಗೆ ಮೂರನೆಯದು ವಾಟರ್‌ಲೂ ಆಗಿ ಮಾರ್ಪಟ್ಟಿತು*

*ಇ. ಅವರ ತಾಯಿ ಶಕ್ತಿಯ ಒಂದು ಆಧಾರಸ್ತಂಭ*

*ಎಫ್. ಅವಳೊಂದು ಕದಲಿಸಲಾಗದ ಕಲ್ಲಿನ ಕಂಭವಿದ್ದಂತೆ*

*ಜಿ. ಗಣಿತದಲ್ಲಿ ಅವಳು ಪರಮಜಾಣೆಯಾದರೂ ಭಾಷೆ ಅವಳಿಗೆ ಕಾಲೊಳಗಿನ ಮುಳ್ಳು.*

*3. ನೀವು ಓದಿರುವ ಕವಿತೆಯೊಂದರಿಂದ ಮನುಷ್ಯನ ವಿಶೇಷ ಗುಣಗಳನ್ನು ಆರೋಪಿಸಿ ವರ್ಣಿಸುವ ಅಲಂಕಾರಪದಗಳನ್ನು ಹಾಗೂ ಸೂಚನಾತ್ಮಕ ಹೋಲಿಕೆ ಪದಗಳನ್ನು ಹುಡುಕಿ ಬರೆಯಿರಿ.*

..............................................................................................................................................

..............................................................................................................................................

..............................................................................................................................................

Notes

*4. ನೀವು ಅಭ್ಯಸಿಸಿರುವ ಯಾವುದಾದರೊಂದು ಇಂಗ್ಲಿಷ್/ಹಿಂದಿ ಪದ್ಯವೊಂದರಿಂದ ಪ್ರಾಸಪದಗಳನ್ನು ಆರಿಸಿ ಬರೆಯಿರಿ.*

..........................................................................................................

..........................................................................................................

..........................................................................................................

*5. ಬಲ ಮತ್ತು ದುರ್ಬಲ ಇದರಲ್ಲಿ ಸಾಂಗತ್ಯಪದವನ್ನು ಹುಡುಕಿ, ವಿವರಿಸಿರಿ. ಇನ್ನೂ ಮೂರು ಉದಾಹರಣೆಗಳನ್ನು ವಿವರಿಸಿರಿ.*

..........................................................................................................

..........................................................................................................

..........................................................................................................

*6. ಕೌರವ ರೌರವ ಈ ಪದಗಳಲ್ಲಿ ಧ್ವನಿಸಾಮ್ಯವನ್ನು ಗುರುತಿಸಿ. ಈ ಮಾದರಿಯ ಇನ್ನಷ್ಟು ಪದಗಳನ್ನು ಸಂಗ್ರಹಿಸಿ ಬರೆಯಿರಿ.*

..........................................................................................................

..........................................................................................................

..........................................................................................................

*7. ಸರಿಯಾದ ಆಯ್ಕೆಯನ್ನು ಗುರುತಿಸಿ ಬರೆಯಿರಿ.*
*ಕಪ್ಪು ನಿನಗೆ ಒಪ್ಪಿಗೆಯೇ? ಇದು ನೀವು ಕಲಿತಿರುವ ಭಾಷಾ ಸಾಧನಗಳಲ್ಲಿ ಯಾವುದಕ್ಕೆ ಉದಾಹರಣೆಯಾಗಿದೆ? ಅನುಪ್ರಾಸ, ವೃತ್ತ್ಯಾನುಪ್ರಾಸ ಅಥವಾ ಛೇಕಾನುಪ್ರಾಸ.*

..........................................................................................................

..........................................................................................................

..........................................................................................................

## 7.3 ಭಾಷೆಯ ಕಲಿಕೆಯಲ್ಲಿ ಸಾಹಿತ್ಯದ ಪಾತ್ರ

### 7.3.1 ಸಾಹಿತ್ಯವೆಂದರೆ ಏನು?

ಸರಳವಾದ ಅರ್ಥದಲ್ಲಿ ಸಾಹಿತ್ಯವನ್ನು ವಿವರಿಸುವುದಾದರೆ ಅದೊಂದು ಸೃಜನಾತ್ಮಕ ರಚನಾ ಕೌಶಲ. ಯಾವುದಾದರೂ ವಿಷಯದ ಬಗ್ಗೆ ಸಮರ್ಪಕ ಶಬ್ದಗಳನ್ನು ಬಳಸಿಕೊಂಡು ಇತಿಹಾಸ, ಭೌಗೋಳ, ವಿಜ್ಞಾನ ಮೊದಲಾದವುಗಳ ಕುರಿತಾಗಿ ರಚನೆಯಾಗುವ ಬರವಣಿಗೆಯೂ ಸಾಹಿತ್ಯವೆನಿಸಿಕೊಳ್ಳುತ್ತದೆ. ಪ್ರತಿಯೊಂದು ವಿಷಯವೂ ತನ್ನದೇ ಆದ ಸಾಹಿತ್ಯವನ್ನು ಹೊಂದಿದ್ದು, ಆ ವಿಷಯದ ಮೇಲೆ ಸಮಗ್ರವಾಗಿ ಬೆಳಕು ಚೆಲ್ಲುತ್ತದೆ. ಪಾಕಶಾಸ್ತ್ರವು ತನ್ನದೇ ಆದ ವಿಶಿಷ್ಟ ಬಗೆಯ ಸಾಹಿತ್ಯವನ್ನು ಹೊಂದಿದ್ದು, ಯಾವುದೇ ನಿರ್ದಿಷ್ಟ ಪದಾರ್ಥಗಳನ್ನು ತಯಾರಿಸುವ ಹಂತದಲ್ಲಿ ಅನುಸರಿಸಬೇಕಾದ ಸಂಗತಿಗಳ ಬಗ್ಗೆ ಒಂದೊಂದಾಗಿ, ಕ್ರಮಬದ್ಧವಾಗಿ ವಿವರಣೆ ಒದಗಿಸುತ್ತದೆ. ಸವಿವರಣೆಯುಳ್ಳ, ಸುಲಭವಾಗಿ ಅರ್ಥವಾಗಬಲ್ಲ, ಯಾವುದಾದರೊಂದು ನಿರ್ದಿಷ್ಟ ವಿಷಯದ ಕುರಿತಾದ ಮಾಹಿತಿಯನ್ನು ಸ್ಥೂಲವಾಗಿ ಸಾಹಿತ್ಯ ಎನ್ನಬಹುದು.

Notes

ಬೇರೆ ರೀತಿಯ ಬರವಣಿಗೆಗೆ ಹೋಲಿಸಿದಾಗ ಸಾಹಿತ್ಯಕ ಬರವಣಿಗೆಗೆ ತನ್ನದೇ ಆದ ವಿಶಿಷ್ಟತೆ ಹಾಗೂ ಭಾಷಾ ಬಳಕೆಯಲ್ಲಿ ವಿಭಿನ್ನತೆ ಇರುವುದರ ಬಗ್ಗೆ ನಾವು ಹೆಚ್ಚು ಗಮನ ನೀಡಬೇಕಾಗುತ್ತದೆ. ಇಲ್ಲಿ, ಶಬ್ದ ಹಾಗೂ ಅರ್ಥಗಳು ಸುಲಭವಾಗಲಿ ಅಥವಾ ಸರಳವಾಗಲಿ ಇರುವುದಿಲ್ಲ. ಅದು ಕಲಾತ್ಮಕವಾಗಿರುತ್ತದೆ. ಯಾವುದೇ ಭಾಷೆಯ ಸಾಹಿತ್ಯವು ಅಲ್ಲಿನ ಪರಿಸರ, ಸಮಾಜ ಹಾಗೂ ಕಾಲಕ್ಕೆ ಹಿಡಿದ ಕನ್ನಡಿ ಇದ್ದಂತೆ. ವಾಸ್ತವ ಹಾಗೂ ಕಾಲ್ಪನಿಕ ಎರಡರ ಹಿನ್ನೆಲೆಯಲ್ಲಿಯೂ ಸಾಹಿತ್ಯವು ಕನ್ನಡಿಯ ಕೆಲಸವನ್ನು ಮಾಡುತ್ತದೆ. ಆಯಾ ಕಾಲಘಟ್ಟದ ಜನರು ಹಾಗೂ ಅವರ ಭಾವನಾ ಪ್ರಪಂಚದ ಮನೋವ್ಯವಹಾರಗಳನ್ನು ಕಲಾತ್ಮಕವಾಗಿ, ಸೃಜನಾತ್ಮಕವಾಗಿ ಪ್ರತಿಬಿಂಬಿಸುವುದು ಸಾಹಿತ್ಯರಚನೆಯ ಮೂಲಸೆಲೆಯಾಗಿದೆ. ಕೆಲವೊಮ್ಮೆ ಸಾರ್ವತ್ರಿಕ ಮಾನವ ಮೌಲ್ಯಗಳ ಅಭಿವ್ಯಕ್ತಿಯೂ ಆಗಿ ಸಾಹಿತ್ಯವು ಹೊರಹೊಮ್ಮುತ್ತದೆ. ಹೀಗೆ, ಕಾವ್ಯ, ಕಾದಂಬರಿ, ನಾಟಕ ಇತ್ಯಾದಿ ಸಾಹಿತ್ಯದ ಯಾವುದೇ ಪ್ರಕಾರವೂ ಸಾಮಾಜಿಕ, ಕಲಾತ್ಮಕ, ಸಾರ್ವತ್ರಿಕವಾದ ಆಯಾಮಗಳನ್ನು ಹೊಂದಿರಬೇಕಾದುದು ಅಗತ್ಯ. ಸೂಕ್ತ ಭಾಷಾ ಬಳಕೆಯಿಂದ ಪ್ರಾದೇಶಿಕ ಆಚರಣೆಗಳನ್ನು ಶಬ್ದ, ರಚನೆ ಹಾಗೂ ಪದಗಳ ಮೂಲಕ ಅರ್ಥವತ್ತಾಗಿ ಅಭಿವ್ಯಕ್ತಗೊಳಿಬಲ್ಲ ಸಾಮರ್ಥ್ಯ ಸಾಹಿತ್ಯಕ್ಕೆ ಇದೆ. ಓದುಗನ ಮೇಲೆ ಅದು ಉಂಟು ಮಾಡುವ ಭಾವನಾತ್ಮಕ ಪರಿಣಾಮವೂ ಕೂಡಾ ಅಷ್ಟೇ ಪ್ರಮುಖ ಅಂಶವಾಗಿದೆ. ಯಾವ ಕಾಲಕ್ಕೂ ಮಾನವ ಜನಾಂಗದ ಜೊತೆಗೆ ನೆಲೆಸಿರುವ ಸತ್ಯ ಮತ್ತು ಸೌಂದರ್ಯದ ಎರಡು ಮುಖ್ಯ ಎಳೆಗಳನ್ನು ಒಳಗೊಂಡ ಹಾಗೂ ಸಾರ್ವತ್ರಿಕ ಆಯಾಮವನ್ನು ಹೊಂದಿರುವ ಸಾಹಿತ್ಯವು ಬಹುಕಾಲ ನೆಲೆಸುತ್ತದೆ.

ಹೀಗಾಗಿ ಯಾವುದೇ ಸಾಹಿತ್ಯ ಪ್ರಕಾರವನ್ನು ಅದರ ಉದ್ದೇಶಗಳ ಆಧಾರದ ಮೇಲೆ ಮೂರು ಪ್ರಮುಖ ಆಯಾಮಗಳಲ್ಲಿ ವಿಂಗಡಿಸಬಹುದಾಗಿದೆ.

1. ತಿಳಿವಳಿಕೆ ಸಾಹಿತ್ಯ : ಈ ಪ್ರಕಾರದಲ್ಲಿ ಬರುವ ಸಾಹಿತ್ಯವೆಂದರೆ, ವಿಶ್ವಕೋಶಗಳು, ನಿಘಂಟುಗಳು, ಮಾಹಿತಿ ಪುಸ್ತಕಗಳು, ನುಡಿಗಟ್ಟುಗಳ ನಿಘಂಟುಗಳು, ಅರ್ಥಕೋಶಗಳು ಇತ್ಯಾದಿ. ಈ ತರಹದ ಗ್ರಂಥಗಳು ನಮಗೆ ತಿಳಿಯದೇ ಇರುವ ಹಲವಾರು ವಿಷಯಗಳ ಕುರಿತು ಅಪಾರವಾದ ಮಾಹಿತಿಯನ್ನು ಒದಗಿಸುತ್ತವೆ. ಇಲ್ಲಿ ಸೃಜನಾತ್ಮಕವಾದ ಅಥವಾ ಕಲಾತ್ಮಕವಾದ ಯಾವುದೇ ಬರವಣಿಗೆ ಇರದಿರುವುದರಿಂದ ಸಾಹಿತ್ಯದ ನಿಜವಾದ ಅರ್ಥದಲ್ಲಿ ಇರದೇ, ಕೇವಲ ಮಾಹಿತಿಯ ಆಕರಗ್ರಂಥಗಳಾಗಿ ಉಪಯುಕ್ತವಾಗಿವೆ.

2. ವಿಮರ್ಶಾತ್ಮಕ ಸಾಹಿತ್ಯ : ಈ ಪ್ರಕಾರದಲ್ಲಿ ಯಾವುದಾದರೊಂದು ವಿಷಯದ ಉಪಯುಕ್ತತೆ, ಪರಿಣಾಮ, ಸ್ವಭಾವ, ಗುಣಾವಗುಣಗಳ ಕುರಿತಂತೆ ತಾರ್ಕಿಕ ನೆಲೆಯಲ್ಲಿ ಚರ್ಚಿಸಲಾಗಿರುತ್ತದೆ. ಈ ತರಹದ ಬರವಣಿಗೆಯು ಓದುಗರನ್ನು ಜಿಜ್ಞಾಸೆಗೊಳಪಡಿಸಿ, ಹೆಚ್ಚಿನದನ್ನು ತಿಳಿದುಕೊಳ್ಳಲು ಪ್ರೇರೇಪಿಸುವಂತಿರುತ್ತದೆ. ಉದಾಹರಣೆಗೆ, ವೈಜ್ಞಾನಿಕ ಲೇಖನಗಳು, ಗ್ರಂಥಗಳು, ತತ್ವಶಾಸ್ತ್ರ, ಗಣಿತಶಾಸ್ತ್ರ ಇತ್ಯಾದಿ. ಈ ಪ್ರಕಾರದಲ್ಲಿಯೂ ಕೂಡಾ, ಕಲಾತ್ಮಕ ಅಂಶಗಳ ಕಡೆಗೆ ಹೆಚ್ಚಿನ ಮಹತ್ವ ನೀಡದೇ, ಮಾಹಿತಿಯನ್ನು ಸಂಗ್ರಹಿಸುವ ಕಡೆಗೆ, ಸಮಸ್ಯೆಗಳಿಗೆ ಪರಿಹಾರಾತ್ಮಕವಾಗಿ ನಿರೂಪಣೆಗೊಂಡ ಬರವಣಿಗೆಯನ್ನು ರಚಿಸುವ ಕಡೆಗೆ, ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ವಿಶ್ಲೇಷಿಸಿಕೊಳ್ಳುವ ಕಡೆಗೆ ಹೆಚ್ಚಿನ ಒತ್ತು ನೀಡಲಾಗಿರುತ್ತದೆ. ಮೂರನೆಯ ಹಂತದ ಸಾಹಿತ್ಯವೆಂದು ಇದನ್ನು ಕರೆಯಬಹುದು.

3. ಸೃಜನಾತ್ಮಕ ಅಥವಾ ಕಾಲ್ಪನಿಕ ಸಾಹಿತ್ಯ : ಈ ಪ್ರಕಾರದಲ್ಲಿ ಕಾವ್ಯ, ನಾಟಕ, ಕಾದಂಬರಿ, ಮಹಾಕಾವ್ಯ, ಸಣ್ಣಕತೆ ಮುಂತಾದ ಸಾಹಿತ್ಯಕ ರಚನೆಗಳು ಅಡಕವಾಗಿವೆ. ಮನಸ್ಸಿಗೆ ಮುದ ನೀಡುವ, ಮನರಂಜಿಸುವ, ಮತ್ತೆ ಮತ್ತೆ ಓದಬೇಕೆಂಬ ಅಭಿಲಾಷೆಯನ್ನು ಹುಟ್ಟಿಸುವ ಸೃಜನಾತ್ಮಕ ಬರವಣಿಗೆ ಇಲ್ಲಿ ಹೇರಳವಾಗಿ ಸಿಗುತ್ತದೆ. ಈ ರಚನೆಗಳಲ್ಲಿನ ಪಾತ್ರಗಳ ಜೊತೆಗೆ ತಮ್ಮನ್ನು ತಾವು ಕಲ್ಪಿಸಿಕೊಂಡೋ, ಸಮೀಕರಿಸಿಕೊಂಡೋ ಓದುಗರು ಹೃದ್ಯವಾಗಿ ಓದಬಹುದಾದ ಈ ರಚನೆಗಳು ಅವರನ್ನು ಕಾಲ್ಪನಿಕ ಲೋಕದಲ್ಲಿ ವಿಹರಿಸುವಂತೆ ಮಾಡುತ್ತವೆ. ಮಾನವೀಯ ಮೌಲ್ಯಗಳ,

ಕ್ರಿಯಾಶೀಲತೆಯ ಪ್ರತಿಬಿಂಬದಂತೆ ತೋರುವ ಈ ಪ್ರಕಾರದ ಸಾಹಿತ್ಯವು ಅದೇ ಬಗೆಯ ಸಂವೇದನೆಗಳನ್ನು ಓದುಗರಲ್ಲಿಯೂ ಪಕ್ವಗೊಳಿಸಬಲ್ಲಷ್ಟು ಶಕ್ತವಾಗಿರುತ್ತದೆ. ಈ ಘಟಕದಲ್ಲಿ ಭಾಷೆಯನ್ನು ಕಲಿಯುವಾಗ ಈ ಬಗೆಯ ಸಾಹಿತ್ಯಕ ರಚನೆಗಳ ಉಪಯೋಗ ಹಾಗೂ ಕೊಡುಗೆಗಳ ಕುರಿತಂತೆ ಚರ್ಚಿಸಲಿದ್ದೇವೆ. ಭಾಷಾಶಿಕ್ಷಕರು ಪ್ರಥಮ ಅಥವಾ ದ್ವಿತೀಯ ಯಾವುದೇ ಆಗಿರಲಿ, ಒಂದು ಭಾಷೆಯನ್ನು ಕಲಿಸುವಾಗ, ಸಾಹಿತ್ಯದ ಬಗ್ಗೆ ತಿಳಿದುಕೊಳ್ಳುವ ಆಕರಗ್ರಂಥಗಳಾಗಿ ಉಪಯೋಗವಾಗುವವೆಂದರೆ ಅವು ಪಠ್ಯಪುಸ್ತಕಗಳೇ.

ಆದರೆ, ಸಮಯದ ಮಿತಿ ಹಾಗೂ ಸಂಪನ್ಮೂಲಗಳ ಕೊರತೆಯಿಂದಾಗಿ ಶಾಲೆಗಳು ಸಾಹಿತ್ಯದ ಬಗ್ಗೆ, ಪಠ್ಯಪುಸ್ತಕಗಳ ಮಿತಿಯಾಚೆ ಹೆಚ್ಚುದೂರ ಹೋಗದೇ ಕೇವಲ ಸೀಮಿತ ಚೌಕಟ್ಟಿನಲ್ಲಿ ಮಾತ್ರ ಕಲಿಸಬಲ್ಲವು. ಹೀಗಾಗಿ ಆ ಕೆಲಸವನ್ನು ಪೂರೈಸುವ ಮತ್ತು ಪಠ್ಯೇತರವಾಗಿಯೂ ಮಕ್ಕಳಿಗೆ ಸಾಹಿತ್ಯದ ಮೂಲಭೂತ ತಿಳಿವಳಿಕೆ ನೀಡುವ ಹೆಚ್ಚಿನ ಜವಾಬ್ದಾರಿಯನ್ನು ಶಿಕ್ಷಕರೇ ಹೊರಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಶಿಕ್ಷಕರು ಕೆಳಕಾಣಿಸಿದ ಕೆಲವು ಸರಳ, ಮೂಲಭೂತ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳುವ ವಿಷಯದಲ್ಲಿ ಕ್ರಿಯಾಶೀಲತೆಯಿಂದ ಮುಂದುವರಿಯಬಹುದಾಗಿದೆ.

- ಜಾಗರೂಕತೆಯಿಂದ ಆಯ್ದ ಮತ್ತು ಸಮರ್ಥ ಭಾಷಾ ಬಳಕೆಯನ್ನು ಹೊಂದಿರುವ ನಿರ್ದಿಷ್ಟ ಸಾಹಿತ್ಯಕ ಪಠ್ಯ. ಅದರಲ್ಲಿ ಸಾಕಷ್ಟು ಉಪಮೆಗಳು, ಅಲಂಕಾರಗಳು, ಹೋಲಿಕೆಗಳು ನುಡಿಗಟ್ಟುಗಳು, ವಿನೂತನ ಶೈಲಿಯ ಭಾಷಾ ಬಳಕೆ ಮುಂತಾದವು ಅಡಕವಾಗಿವೆಯೇ ಎಂಬುದನ್ನು ಗಮನಿಸಬೇಕು.
- ಕಾವ್ಯ, ನಾಟಕ, ಗದ್ಯ, ಕಾದಂಬರಿ – ಇವುಗಳಲ್ಲಿ ಯಾವುದಾದರೂ ಒಂದು ಬಗೆಯ ಸಾಹಿತ್ಯಕ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ ಇದರಿಂದ ಕಲಾತ್ಮಕ ಅಭಿರುಚಿಯ ಅನುಭವ ಹಾಗೂ ಮನೋಲ್ಲಾಸಗಳು ದೊರಕುವಂತಿರಬೇಕು.

ಹಾಗೆಂದು ಇದನ್ನು ಒತ್ತಾಯಪೂರ್ವಕ ಮೂಡಿಸುವಂತೆಯೂ ಇರಬಾರದು. ತಾನು ಆಯ್ಕೆ ಮಾಡಿಕೊಂಡಿರುವ ಪಠ್ಯವು ತನ್ನ ವಿದ್ಯಾರ್ಥಿಗಳಿಗೆ ಸಾಹಿತ್ಯಕ ಅಂಶಗಳ ಪ್ರತಿಬಿಂಬವಾಗಿ ಕೆಲಸಮಾಡುತ್ತಿದೆಯೇ ಎಂಬುದನ್ನು ಶಿಕ್ಷಕ/ಕಿ ಮನನ ಮಾಡಿಕೊಂಡಿರಬೇಕು. ಆರಿಸಿಕೊಂಡಿರುವ ಕೃತಿಯು ಎಲ್ಲ ಬಗೆಯಲ್ಲೂ ಚರ್ಚಿಸಲು ಯೋಗ್ಯವಾಗಿದ್ದರೂ ಸಹ, ತರಗತಿಯಲ್ಲಿ ಅದನ್ನು ಬಳಸಿಕೊಳ್ಳಬಹುದೇ ಎಂಬುದನ್ನು ಅರಿತುಕೊಳ್ಳುವುದು ಅಗತ್ಯವಗಿದೆ. ಈ ವಿಷಯದಲ್ಲಿ ಮಕ್ಕಳ ವಯೋಮಾನವನ್ನೂ ಪರಿಗಣಿಸಬೇಕಾಗುತ್ತದೆ. ಮಕ್ಕಳಿಗೆ ಸೂಕ್ತವಾದ ಯಾವುದೇ ಬಗೆಯ ಸಾಹಿತ್ಯಕ ರಚನೆಯನ್ನು ನಾವು ಮಕ್ಕಳ ಸಾಹಿತ್ಯ ಅಥವಾ ಕಿಶೋರ ಸಾಹಿತ್ಯವೆಂದು ಕರೆಯುತ್ತೇವೆ. ಮಕ್ಕಳ ಸಾಹಿತ್ಯದ ಹೆಚ್ಚಿನ ನಿದರ್ಶನಗಳಲ್ಲಿ ಕಥಾನಾಯಕ, ಅಥವಾ ಮುಖ್ಯ ಕಥಾಪಾತ್ರವು ಸಹ ಬಾಲಕನೋ ಬಾಲಕಿಯೋ ಆಗಿರುತ್ತಾರೆ. ಜಾನಪದ ಕತೆಗಳಲ್ಲಿ ಅಥವಾ ಯಾವುದೇ ಮಕ್ಕಳ ಕತೆಗಳಲ್ಲಿ ಕೇಂದ್ರಬಿಂದು, ಪಾತ್ರ ಮಕ್ಕಳೇ ಆಗಿರುತ್ತಾರೆ. ಆದರೆ, ಕೆಲವೊಮ್ಮೆ ಮಕ್ಕಳೇ ಕಥಾಹಂದರದ ಕೇಂದ್ರವಸ್ತು ಎಂಬ ಒಂದೇ ಕಾರಣಕ್ಕೆ ಎಲ್ಲ ಬರವಣಿಗೆಯನ್ನೂ ನಾವು ಆಯ್ಕೆ ಮಾಡಿಕೊಳ್ಳಲಾಗುವುದಿಲ್ಲ. ಕೆಲವು ಕೃತಿಗಳಲ್ಲಿ, ಸಂಕೀರ್ಣ ಮನೋಸ್ಥಿತಿಯ ಮಕ್ಕಳೂ ಪಾತ್ರಗಳಾಗಿದ್ದಿರಬಹುದು. ಇದಕ್ಕೆ ನಿದರ್ಶನವೆಂದರೆ ಪ್ರೇಮಚಂದರ ಈದ್ಗಾ ಕತೆಯಲ್ಲಿ ವ್ಯಕ್ತವಾಗಿರುವ ಕಥಾನಾಯಕ ಬಾಲಕನ ಭಾವನೆಗಳು, ಜೈಶಂಕರ್ ಪ್ರಸಾದರ ಖೇಲ್ ಬೈ ಜೈನೇಂದ್ರ, ಮೊದಲಾದುವು ಸಂಕೀರ್ಣ ವಿಷಯಗಳನ್ನು ಹೊಂದಿದ್ದು, ತರಗತಿಯ ಮಕ್ಕಳಿಗೆ ಅರ್ಥವಾಗದೇ ಇರಬಹುದು. ಆಯ್ಕೆ ಮಾಡಿಕೊಳ್ಳುವ ಪಠ್ಯದ ಆಶಯ, ಕತೆ, ವಿಷಯ ಇವು ಮಕ್ಕಳ ಮನೋವಿಕಾಸಕ್ಕೆ ಪೂರಕವಾಗಿರಬೇಕಾದುದು ಅಗತ್ಯವಾಗಿದೆ. ಭಾಷೆ, ಭಾವ ಎಲ್ಲವೂ ಹದವರಿತ ರೂಪದಲ್ಲಿ ಅವರನ್ನು ತಲುಪಬೇಕಾಗುತ್ತದೆ.

ಈ ಘಟಕದಲ್ಲಿ ಭಾಷೆಯ ಕಲಿಕೆಯಲ್ಲಿ ಸಾಹಿತ್ಯದ ಪಾತ್ರ ಎಂಬ ವಿಷಯದ ಕುರಿತು ನಾವು ಅಭ್ಯಸಿದ್ದೇವೆ. ಜೊತೆಗೆ, ಬೇರೆ ಬೇರೆ ಪೂರಕ ಮಾಹಿತಿಗಳು, ಜಾಹಿರಾತುಗಳು, ಕಾರ್ಟೂನುಗಳು ಮುಂತಾದವು ಸಾಹಿತ್ಯೇತರ ಆಕರಗಳಾಗಿ ನಿಮಗೆ ಉಪಯೋಗವಾಗಬಲ್ಲವು.

## ಪ್ರಗತಿಯ ಪರಿಶೀಲನೆ – 2

1. ಕಲಾಪ್ರಜ್ಞೆಯುಳ್ಳ ಅಥವಾ ಕಲಾತ್ಮಕವಾದ ಸಾಹಿತ್ಯಕ್ಕೂ, ಕಲಾತ್ಮಕವಲ್ಲದ ಸಾಹಿತ್ಯಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಿ ಬರೆಯಿರಿ.

   ..........................................................................................................................

   ..........................................................................................................................

   ..........................................................................................................................

Notes

2. *ಈವರೆಗೆ ಚರ್ಚಿಸಿದ ವಿಷಯಗಳನ್ನು ಆಧರಿಸಿ, ಮಕ್ಕಳ ಸಾಹಿತ್ಯವೆಂದರೆ ಏನು ಎಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿ. 6 ರಿಂದ 14 ವರ್ಷಗಳ ವಯೋಮಿತಿಯ ಮಕ್ಕಳಿಗಾಗಿ ಬರೆದ ಯಾವುದೇ ಬರವಣಿಗೆಯನ್ನೂ ಕೂಡಾ ನೀವು ಮಕ್ಕಳ ಸಾಹಿತ್ಯವೆಂದು ಪರಿಗಣಿಸುವಿರಾ?*

.......................................................................................................................................

.......................................................................................................................................

.......................................................................................................................................

3. *ಮಕ್ಕಳ ಬಗ್ಗೆ ಇರುವ ಎಲ್ಲಾ ಕತೆಗಳನ್ನೂ ಮಕ್ಕಳ ಕತೆಗಳೆಂದು ಕರೆಯಬಹುದೇ? ಉದಾಹರಣೆಗಳ ಸಮೇತ ನಿಮ್ಮ ನಿಲುವನ್ನು ವಿವರಿಸಿ.*

.......................................................................................................................................

.......................................................................................................................................

.......................................................................................................................................

4. *ಈ ಕೆಳಗಿನವು ಸಾಹಿತ್ಯದ ಉದಾಹರಣೆಗಳೇ ಅಲ್ಲವೇ ಎಂಬುದನ್ನು ನಿರ್ಧರಿಸಿ.*
   *ಎ. ದಿನಪತ್ರಿಕೆಗಳ ಜಾಹಿರಾತುಗಳು*

   *ಬಿ. ಅರ್ಥಕೋಶಗಳು*

   *ಸಿ. ಕೇಕ್ ತಯಾರಿಯ ವಿವರಣೆ*

   *ಡಿ. ಪದ್ಯ*

## 7.3.2 ಸಾಹಿತ್ಯದ ಪ್ರಕಾರಗಳು

ತರಗತಿಗಳಲ್ಲಿ ಕಲಿಸುವಾಗ ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕಲಾವಂತಿಕೆಯನ್ನು ಉದ್ದೀಪನಗೊಳಿಸುವಂತಹ ಪದ್ಯ, ಕತೆ, ನಾಟಕ, ಆತ್ಮಚರಿತ್ರೆ, ಜೀವನಚರಿತ್ರೆ, ಕಾದಂಬರಿ, ಪ್ರಬಂಧ ಹೀಗೆ ಹಲವಾರು ಸಾಹಿತ್ಯದ ಪ್ರಕಾರಗಳನ್ನು ಬಳಸಿಕೊಳ್ಳಬಹುದು. ವಿಪುಲ ಸಾಹಿತ್ಯಕ ರಚನೆಗಳಿಗೆ ತೆರೆದುಕೊಳ್ಳುವುದರಿಂದ ಮಕ್ಕಳ ಭಾಷಾಪ್ರೌಢಿಮೆ, ಕ್ರಿಯಾಶೀಲತೆ, ಸೃಜನಾತ್ಮಕತೆಯಲ್ಲಿ ಅಪಾರ ಬೆಳವಣಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ.

ನಾಟಕ: ಹಲವಾರು ಘಟನೆಗಳನ್ನು, ಕೆಲವೊಮ್ಮೆ ವ್ಯಕ್ತಿಗಳ ಜೀವನವನ್ನು ಆಧರಿಸಿ, ಹೆಣೆಯಲಾದ ಕಥಾಹಂದರವನ್ನು ಅಭಿನಯಿಸುವ ಪ್ರಕಾರವೇ ನಾಟಕ. ನಾಟಕ ರಚನೆಕಾರರದ್ದು ನಿಜಕ್ಕೂ ಸವಾಲಿನ ಕೆಲಸ. ಬರೆಯುವವರು ತಾವು ಸೃಷ್ಟಿಸುವ ಹತ್ತಾರು ಪಾತ್ರಗಳೊಳಗೆ ಹೊಕ್ಕು ಅವರ ಬದುಕನ್ನು ತಮ್ಮ ದೃಷ್ಟಿಕೋನದಲ್ಲಿ ಪುನರ್‌ಸೃಷ್ಟಿಸಿ, ವೀಕ್ಷಕರೂ ಸಹ ಮೈಮರೆತು ಪಾತ್ರಗಳೊಳಕ್ಕೆ ಲೀನವಾಗುವ ರೀತಿಯಲ್ಲಿ ನಾಟಕವನ್ನಾಗಿ ಮಾರ್ಪಡಿಸುವುದು ಸುಲಭಸಾಧ್ಯವಾ ಕೆಲಸವೇನಲ್ಲ. ಎಲ್ಲ ನಾಟಕಗಳಿಗೂ, ಆರಂಭ, ಮಧ್ಯ ಹಾಗೂ ಅಂತ್ಯ ಎಂಬ ಮೂರು ಭಾಗಗಳಿರುತ್ತವೆ. ಹಾಸ್ಯ, ಗಂಭೀರ, ದುರಂತ, ಸಾಮಾಜಿಕ ಹೀಗೆ ಹಲವಾರು ಬಗೆಯ ನಾಟಕಗಳಿವೆ. ಅವುಗಳನ್ನು ಕಾವ್ಯವನ್ನೋ, ಗದ್ಯವನ್ನೋ ಆಧಾರವಾಗಿಟ್ಟುಕೊಂಡು ಸಹ ಬರೆಯಬಹುದಾಗಿದೆ. ಶೇಕ್ಸ್‌ಪಿಯರ್ ಮಹಾಕವಿಯು ಬರೆದಿರುವ ಹ್ಯಾಮ್ಲೆಟ್, ಕಿಂಗ್ ಲಿಯರ್ ಮೊದಲಾದ ನಾಟಕಗಳು ಕಾವ್ಯಪ್ರಕಾರವನ್ನು ಆಧರಿಸಿ ಬರೆದವುಗಳು. ಒಂದು ನಾಟಕವು ಅಂತಿಮವಾಗಿ ಯಶಸ್ಸು ಕಾಣುವುದು, ಜನಪ್ರಿಯವಾಗುವುದು ರಂಗದ ಮೇಲೆ ಪ್ರದರ್ಶಿತಗೊಂಡಾಗಲೇ. ಕಾದಂಬರಿಗೆ, ಸಣ್ಣಕತೆಗೆ ಅಥವಾ ಒಂದು ಪದ್ಯಕ್ಕೆ ಈ ಅವಕಾಶವಿಲ್ಲ. ನಮ್ಮ ಮುಂದೆ ವಿವಿಧಬಗೆಯ ವೇಷಗಳನ್ನು ಧರಿಸಿ, ರಂಗದ ಮೇಲೆ ನಾಟಕವನ್ನು ಪ್ರಸ್ತುತಪಡಿಸುವ ತಂಡಕ್ಕೆ ನಟರೆಂದು, ಕಲಾವಿದರೆಂದು ಹೆಸರು. ಇವರುಗಳು ಪರಿಣಾಮಕಾರಿಯಾಗಿ ಅಭಿನಯಿಸಿದಾಗಲೇ ನಾಟಕಕ್ಕೆ ಸಾರ್ಥಕತೆ ಲಭಿಸುತ್ತದೆ. ಸಂಭಾಷಣೆಗಳು ಒಪ್ಪಿಸುತ್ತಾ ಅಭಿನಯಿಸುವ ಪಾತ್ರಗಳು, ಕೆಲವೊಮ್ಮೇ ಪಾತ್ರಗಳು ತಮ್ಮಷ್ಟಕ್ಕೇ ತಾವೇ ಮಾತಾಡಿಕೊಂಡು ಅಭಿನಯಿಸುವುದು (ಸ್ವಗತ) ಮೊದಲಾದ ಸನ್ನಿವೇಶಗಳೆಲ್ಲ ನಾಟಕದಲ್ಲಿ ಅಡಕವಾಗಿರುತ್ತವೆ.

ಏಕಾಂಕ ನಾಟಕ: ನಾಟಕದ ಈ ಪ್ರಕಾರದಲ್ಲಿ, ಇಡೀ ನಾಟಕದ ಕಥಾನಕವು, ಒಂದೇ ಕಾಲಮಾನ ಹಾಗೂ ಪ್ರದೇಶದಲ್ಲಿ ನಡೆಯುತ್ತಿರುತ್ತದೆ. ರಚನೆ, ಸ್ವರೂಪಗಳು ಚಿಕ್ಕದಾಗಿದ್ದರೂ ಅಂತಿಮ ದೃಶ್ಯಗಳು ಕಟ್ಟಿಕೊಡುವ ಭಾವತೀವ್ರತೆ ಅಪಾರ. ದೊಡ್ಡ ನಾಟಕಗಳಿಗಿಂತ, ಈ ಚಿಕ್ಕ ಚಿಕ್ಕ ಏಕಾಂಕ ನಾಟಕಗಳೇ ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸಿಕೊಡಲು ಅನುಕೂಲವದವು. ಹೆಚ್ಚು ರಂಗಸಜ್ಜಿಕೆಯ, ಪರಿಕರಗಳ ಅಗತ್ಯವಿರದ ಇವು ನಟಿಸಲು ತುಂಬ ಸುಲಭವಾದವು. ಮಕ್ಕಳು ತಾವೇ ನಾಟಕ ರಚಿಸಿ, ಅಭಿನಯಿಸುವ ಚಟುವಟಿಕೆಗಳನ್ನು ಶಿಕ್ಷಕರು ಪ್ರೋತ್ಸಾಹಿಸಬಹುದು.

ಕಾದಂಬರಿ: ಹಲವಾರು ಪಾತ್ರಗಳನ್ನೊಳಗೊಂಡ, ಸುದೀರ್ಘ ಕಥಾನಕವನ್ನು ಕಾದಂಬರಿ ಎನ್ನಲಾಗುತ್ತದೆ. ಯಾವುದೇ ಒಂದು ನಿರ್ದಿಷ್ಟ ಸ್ಥಳ, ವ್ಯಕ್ತಿ, ಪರಿಸರ ಹಾಗೂ ಕಾಲಘಟ್ಟದಲ್ಲಿ ನೈಜ ಘಟನೆಗಳನ್ನಾಧರಿಸಿ ಕಾದಂಬರಿಯನ್ನು ರಚಿಸಲಾಗಿರುತ್ತದೆ. ಕೆಲ ಖ್ಯಾತ ಇಂಗ್ಲಿಷ್ ಕಾದಂಬರಿಕಾರರಾದ ಫೀಲ್ಡಿಂಗ್, ಡಿಕನ್ಸ್, ಹಾರ್ಡಿ, ಮರೆಡಿತ್ ಹಾಗೂ ಜಾಯ್ಸ್. ಇವರೆಲ್ಲ ಮನುಷ್ಯ ಜೀವನದ ಸೂಕ್ಷ್ಮಗಳನ್ನು, ಎಷ್ಟು ನೈಜವಾಗಿ, ಹೃದ್ಯವಾಗಿ ಬರೆದಿರುತ್ತಾರೆಂದರೆ, ಓದುಗರು ಕಾದಂಬರಿಯ ಲೋಕದೊಳಕ್ಕೆ ತಮ್ಮನ್ನೂ ಒಂದು ಪಾತ್ರವಾಗಿಸಿಕೊಂಡು ಕಳೆದುಹೋಗುವಷ್ಟು. ಕಾದಂಬರಿಯು ಅದೆಷ್ಟೇ ದೊಡ್ಡದಾಗಿದ್ದರೂ, ಜೀವನಕ್ಕೆ ಹತ್ತಿರವಾಗಿರುವಾಗ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

ಕತೆ: ಸಾಹಿತ್ಯ ಪ್ರಕಾರಗಳಲ್ಲೇ ಅತ್ಯಂತ ಜನಪ್ರಿಯವಾದುದೆಂದರೆ ಸಣ್ಣಕತೆಗಳು. ಶಾಲಾಪಠ್ಯಗಳಲ್ಲಿ ಈಗಾಗಲೇ ಸೇರಿಕೊಂಡಿರುವ ಇವು, ಸರಳವಾಗಿ, ಸುಲಲಿತವಾಗಿ ಓದಿಸಿಕೊಂಡು ಹೋಗುತ್ತವೆ. ಯಾವುದೇ ಒಂದು ಭಾವದ ಮೇಲೆ ಓದುಗನ ಮನಸ್ಸು ನೆಲೆನಿಲ್ಲುವ ಹಾಗೆ ಮಾಡುವ ಈ ಸಣ್ಣಕತೆಗಳು ಕಥೆಯ ಮುಖ್ಯ ಹಂದರಕ್ಕೆ ಪೂರಕವಾಗಿಲ್ಲದ ಸಣ್ಣಸಣ್ಣ ಸಂಗತಿಗಳನ್ನೂ, ವಿವರಗಳನ್ನೂ ಕೂಡಾ ನೀಡುತ್ತ ಓದುಗನನ್ನು ಭಾವತೀವ್ರತೆಯ ಪ್ರಪಂಚಕ್ಕೆ ಕರೆದೊಯ್ಯಬಲ್ಲವು. ಬೋಧನಾ ಶಾಸ್ತ್ರದ ಅತ್ಯಂತ ರಚನಾತ್ಮಕ ಹಾಗೂ ಪರಿಣಾಮಕಾರಿ ಸಾಧನವಾಗಿ ಸಣ್ಣಕತೆಗಳನ್ನು ಬಳಸಿಕೊಳ್ಳುವುದು ಸೂಕ್ತವೆಂಬ ಅಂಶದ ಬಗ್ಗೆಯೂ ನಾವು ಇಲ್ಲಿ ಚರ್ಚಿಸಲಿದ್ದೇವೆ. ಜಗತ್ತಿನ ಖ್ಯಾತ ಸಣ್ಣಕತೆಗಾರರಲ್ಲಿ ಸಾಮರ್‌ಸೆಟ್ ಮಾಮ್, ಆಂಟನ್ ಶೆಕಾಫ್, ಸಾಕಿ, ಎಡ್ಗರ್ ಅಲೆನ ಪೋ, ಆರ್ ಕೆ ನಾರಾಯಣ್, ಕೆ ಬಿ ವೈದ್ ಮೊದಲಾದವರನ್ನು ಹೆಸರಿಸಬಹುದು. ಮಕ್ಕಳ ಕಥಾಪ್ರಪಂಚದಲ್ಲಿ ರಸ್ಕಿನ್ ಬಾಂಡ್ ಅವರದ್ದು ಅತ್ಯಂತ ಜನಪ್ರಿಯ ಹೆಸರು. ಓ ಹೆನ್ರಿಯ ದಿ ಲಾಸ್ಟ್ ಲೀಫ್ ಮತ್ತು ದಿ ಗಿಫ್ಟ್ ಆಫ್ ಮ್ಯಾಗಿ ಕತೆಗಳನ್ನು ಯಾರೂ ಮರೆಯುವಂತೆಯೇ ಇಲ್ಲ.

ಪ್ರಬಂಧ: ಭಾವನೆಗಳು ಹದವಾಗಿ, ಸಕಾರಣಗಳೊಂದಿಗೆ ಬರೆಯಲ್ಪಟ್ಟ ಗದ್ಯಮಾದರಿಗೆ ಸೇರುವ ಸಾಹಿತ್ಯದ ಒಂದು ಅಂಗವೇ ಪ್ರಬಂಧ. ಪ್ರಬಂಧ ರಚಿಸಲು ಹೆಚ್ಚಿನ ಓದು, ಅನ್ಯ ವಿಷಯ ಜ್ಞಾನ ಅಗತ್ಯ. ಸೂಕ್ತ ನಿದರ್ಶನಗಳನ್ನು ಬಳಸಿಕೊಂಡು, ಶಿಸ್ತುಬದ್ಧ ಚಿತ್ರಣಗಳೊಂದಿಗೆ, ಚುಟುಕಾಗಿಯೂ, ಚುರುಕಾಗಿಯೂ ಸಂಗತಿಗಳನ್ನು ವಿವರಿಸುವ ಈ ಪ್ರಕಾರವು ತುಂಬ ಜನಪ್ರಿಯತೆ ಹೊಂದಿದೆ. ಚಾರ್ಲ್ಸ್ ಲ್ಯಾಂಬ್, ಆಡಿಸನ್, ಆರ್ ಕೆ ನಾರಾಯಣ್, ನೆಹರು, ಗಾಂಧಿ, ರಸ್ಕಿನ್ ಬಾಂಡ್ ಮೊದಲಾದವರ ಸ್ವಾರಸ್ಯಕರ ಪ್ರಬಂಧಗಳನ್ನು ನೀವು ಓದುವಿರಾದರೆ ನಿಮಗೆ ಅದರ ಮಹತ್ವ ತಿಳಿಯುತ್ತದೆ ಮಾತ್ರವಲ್ಲ ಹೊಸಹೊಸ ವಿಚಾರಗಳು ನಿಮ್ಮ ಮನಸಿನಲ್ಲಿಯೂ ಮೂಡಬಹುದು.

ಆತ್ಮಚರಿತ್ರೆ: ವ್ಯಕ್ತಿಯು ತನ್ನ ಬದುಕಿನ ಅನುಭವಗಳಿಂದಾಯ್ದ ಸಂಗತಿಗಳನ್ನು ಆಪ್ತವಾಗಿ ಓದುಗರ ಜೊತೆಗೆ ಹಂಚಿಕೊಳ್ಳುವ ನೆನಪುಗಳನ್ನು ಆತ್ಮಚರಿತ್ರೆ ಎನ್ನಬಹುದು. ಇಲ್ಲಿ ಆತ್ಮಚರಿತ್ರೆಯನ್ನು ದಾಖಲಿಸುತ್ತಿರುವ ವ್ಯಕ್ತಿಯೇ ಆ ಸಾಹಿತ್ಯದ ನಾಯಕನೋ ನಾಯಕಿಯೋ ಆಗಿರುತ್ತಾರೆ. ಜೀವನದಲ್ಲಿ ತಾವು ಕಂಡುಂಡ ನೋವು ನಲಿವುಗಳನ್ನು, ಎದಿರಿಸಿದ ಸವಾಲುಗಳನ್ನು, ಹೋರಾಟದ ನೆನಪುಗಳನ್ನು ಹಿಂದಕ್ಕೆ ಚಲಿಸಿ, ಗಮನಿಸಿ, ನೆನಪಿಸಿಕೊಂಡು ಬರೆಯುವ ಈ ಬರವಣಿಗೆಯು ಆಯಾ ಲೇಖಕನ ಜೀವನಚಿತ್ರಣವನ್ನು ನೀಡುತ್ತದೆ. ಗಾಂಧೀಜಿಯವರ 'ಸತ್ಯದೊಂದಿಗೆ ನನ್ನ ಪ್ರಯೋಗಗಳು' ಅತ್ಯಂತ ಜನಪ್ರಿಯ ಹಾಗೂ ವ್ಯಾಪಕವಾಗಿ ಓದಲ್ಪಟ್ಟಿರುವ ಆತ್ಮಕಥೆಯೆಂದು ಹೇಳಬಹುದು.

ಜೀವನಚರಿತ್ರೆ: ಜನಪ್ರಿಯ ವ್ಯಕ್ತಿಯೊಬ್ಬರ ಕುರಿತು ಅವರನ್ನು ಹತ್ತಿರದಿಂದ ಬಲ್ಲವರೊಬ್ಬರು ಅಥವಾ ಯಾರೇ ಆದರೂ ಅವರ ಜೀವನದ ಕುರಿತಾಗಿ ಬರೆವ ಬರವಣಿಗೆಯು ಜೀವನಚರಿತ್ರೆ ಎನಿಸಿಕೊಳ್ಳುತ್ತದೆ. ನಿಘಂಟನ್ನು ಮೊಟ್ಟಮೊದಲು ಪರಿಚಯಿಸಿದ ಡಾ. ಜಾನ್ಸನ್ ಬಗ್ಗೆ ಬೋಸ್ವೆಲ್ ಎಂಬಾತನು ಬರೆದ ಜೀವನಚರಿತ್ರೆಯು ಸಾಹಿತ್ಯ ಪ್ರಪಂಚದಲ್ಲಿ ಮೈಲಿಗಲ್ಲು ಸೃಷ್ಟಿಸಿದ ಸಂಗತಿ ಇಲ್ಲಿ ಉಲ್ಲೇಖಾರ್ಹವಾದುದು.

ಪ್ರವಾಸಕಥನ: ಲೇಖಕ, ಬರಹಗಾರ ತಾನು ಕೈಗೊಂಡ ಪ್ರವಾಸದ ಅನುಭವಗಳನ್ನು ಒಂದೆಡೆ ದಾಖಲಿಸುವ ಬರವಣಿಗೆಗೆ ಪ್ರವಾಸ ಸಾಹಿತ್ಯವೆನ್ನಲಾಗುತ್ತದೆ. ಪ್ರವಾಸದುದ್ದಕ್ಕೂ ತಾನು ನೋಡುವ ಸ್ಥಳಗಳು, ಭೇಟಿಯಾಗುವ ಜನರು, ಅನುಭವಿಸುವ ಸಂಗತಿಗಳನ್ನು ಸ್ವಾರಸ್ಯಕರವಾಗಿ, ಆಸಕ್ತಿ ಮೂಡಿಸುವ ರೀತಿಯಲ್ಲಿ ಲೇಖಕ ಬರೆಯುತ್ತಾ ಹೋಗುತ್ತಾನೆ. ಎಲ್ಲ ಭಾಷೆಯ ಸಾಹಿತ್ಯಲೋಕದಲ್ಲಿ ಬಹುತೇಕ ಸಾಹಿತಿಗಳು ಈ ಪ್ರಕಾರವನ್ನು ಸಾಮಾನ್ಯವಾಗಿ ಬರೆದೇ ಇರುತ್ತಾರೆ ಎಂಬುದು ಸರ್ವವಿದಿತ ಸಂಗತಿ.

ವ್ಯಕ್ತಿಚಿತ್ರಣ/ಪರಿಚಯ: ಲೇಖಕನೊಬ್ಬ ಯಾವುದೇ ವ್ಯಕ್ತಿಯ, ಸ್ಥಳದ, ಘಟನೆಯ, ದೃಶ್ಯದ ಅಥವಾ ಸಮಘಟಿಗಳ ಕುರಿತು ಬರೆಯುವ ಪುಟ್ಟಪುಟ್ಟ ಬರವಣಿಗೆಗಳನ್ನು ವ್ಯಕ್ತಿಚಿತ್ರಣ, ಸ್ಥಳಪರಿಚಯ ಅಥವಾ ಮಾಹಿತಿ ಬರವಣಿಗೆ ಎನ್ನಲಾಗುತ್ತದೆ. ಚಿತ್ರಣ ಎಂದೇ ಈ ಕಿರುಬರವಣಿಗೆಗಳನ್ನು ಕರೆಯಬಹುದು. ಯಾವುದಾದರೊಂದು ಸಂಗತಿಯ ಕುರಿತೇ ಈ ಬರಹಗಳನ್ನು ರಚಿಸಲಾಗಿರುತ್ತದೆ.

ಆತ್ಮವೃತ್ತಾಂತ: ಯಾವುದಾದರೊಬ್ಬ ವ್ಯಕ್ತಿಯು ತನ್ನ ಬದುಕಿನಲ್ಲಿ ಜರುಗಿದ ಸಂಗತಿಗಳನ್ನು, ಘಟನಾವಳಿಗಳನ್ನು ವರ್ಣಿಸಿ ಬರೆಯುವ ಬರವಣಿಗೆಗೆ ಸ್ಮರಣಿಕೆ ಎನ್ನಬಹುದ್ನುವು ಕೇವಲ ಆತನ ಅನುಭವದಲ್ಲಿ ಅರಳಿಕೊಂಡ ನೆನಪುಗಳಾಗಿರಬೇಕೇ ಹೊರತು, ಕಾಲ್ಪನಿಕವಾಗಿ ಬರೆದವುಗಳಾಗಲಿ ಅಥವಾ ಸೃಜಿಸಿ ಬರೆದವುಗಳಾಗಲಿ ಆಗಿರಬಾರದು. ಇತರರ ಬಗ್ಗೆ ಬರೆಯುವಾಗಲೂ ಲೇಖಕನು ಅವರೊಡನೆ ಒಂದು ಖಾಸಗಿ ಅನುಬಂಧವನ್ನು ಹೊಂದಿರಬೇಕಾಗುತ್ತದೆ. ಆತ್ಮವೃತ್ತಾಂತವು ಪೂರ್ವೇತಿಹಾಸದ ನೆನಪುಗಳನ್ನು ದಾಖಲಿಸುವ ಬರವಣಿಗೆ ಎಂಬುದಾಗಿ ಒಟ್ಟಂದದಲ್ಲಿ ಹೇಳಬಹುದು.

ಕವಿತೆ/ಕಾವ್ಯ/ಪದ್ಯ: ಕಾವ್ಯ ಪ್ರಕಾರವನ್ನು ಇಡೀ ಸಾಹಿತ್ಯದ ಜೀವಾಳ ಎನ್ನುವುದರ ಜೊತೆಗೆ ಅತ್ಯಂತ ಪ್ರಾಚೀನ ಪ್ರಕಾರ ಎಂದೂ ಸಹ ಹೇಳಬಹುದು. ಎಲ್ಲ ಸಮಾಜಗಳ ಅತ್ಯಂತ ಶ್ರೇಷ್ಠ ಮಹಾಕಾವ್ಯಗಳು ಕೂಡಾ ಕಾವ್ಯದ ಹಿನ್ನಲೆಯಲ್ಲಿಯೇ ರಚಿಸಿದವುಗಳಾಗಿವೆ. ಪ್ರಾಚೀನ ಗ್ರೀಕಿನ ಒಡಿಸ್ಸಿ ಅಥವಾ ಇಲಿಯಡ್ ಇರಲಿ, ಭಾರತೀಯ ಮಹಾಕಾವ್ಯ ಮಹಾಭಾರತ ಅಥವಾ ರಾಮಾಯಣವಿರಲಿ, ಇವೆಲ್ಲವೂ ಕಾವ್ಯದ ಮೂಲಕ ಹೇಳಿದ ಸುದೀರ್ಘ ಕಥಾನಕಗಳೇ ಆಗಿವೆ. ಕಾಳಿದಾಸ, ಭಾಸ, ಭಟ, ಶೇಕ್ಸ್‌ಪಿಯರ್, ಡನ್, ಶೆಲ್ಲಿ, ಕೀಟ್ಸ್, ಬೈರನ್, ವರ್ಡ್ಸ್‌ವರ್ತ್, ಈಲಿಯಟ್, ಯೀಟ್ಸ್ ಈ ಎಲ್ಲ ಖ್ಯಾತನಾಮರಾದ ಮಹಾಕವಿಗಳ ಹೆಸರುಗಳನ್ನು ನೀವೆಲ್ಲ ಕೇಳಿಯೇ ಇರುತ್ತೀರಿ. ಕಾವ್ಯವು ಗೀತಾತ್ಮಕವಾದುದು. ನಾನಾ ನಮೂನೆಯ ರೂಪಕಾಲಂಕರಗಳನ್ನು, ಉಪಮೆಗಳನ್ನು, ಹೋಲಿಕೆಗಳನ್ನು ಒಳಗೊಂಡು, ವಿಶಿಷ್ಟವಾಗಿ ರಚಿಸಲ್ಪಟ್ಟ ಕಾವ್ಯವು ಆಸಕ್ತರ ಮನಸ್ಸನ್ನು ತಲುಪುವ ಶಕ್ತಿ ಹೊಂದಿದೆ. ಪ್ರಬಂಧ, ಕತೆ ಅಥವಾ ಕಾದಂಬರಿಯಂತಹ ಗದ್ಯ ಪ್ರಕಾರಗಳಂತೆ ಹೆಚ್ಚಿನ ವಿವರಣೆಯನ್ನು ಬೇಡದೇ, ಕೆಲವೇ ಶಬ್ದಗಳ ಬಳಕೆ, ಸಾಲುಗಳ ಹೆಣಿಕೆಯೊಂದಿಗೆ, ಭಾವನಾತ್ಮಕ ಯೋಚನೆಗಳನ್ನು ತೀವ್ರವಾಗಿ ತಟ್ಟುವ ಪ್ರಕಾರ ಕಾವ್ಯ. ಒಮ್ಮೆ ಬರೆದಾದ ಮೇಲೆ ಸಾಕಷ್ಟು ಚರ್ಚೆಗಳಿಗೆ, ಸಂವಾದಗಳಿಗೆ ದಾರಿ ಮಾಡಿಕೊಡುವ, ಚಿಂತನೆಗೆ ಹಚ್ಚುವ ಶಕ್ತಿ ಕಾವ್ಯಕ್ಕಿದೆ. ಮುಕ್ತ ಅಭಿಪ್ರಾಯಗಳಿಗೆ ದಾರಿಮಾಡಿಕೊಡುತ್ತದೆ. ಗೀತಾತ್ಮಕವಾಗಿ ಬರೆಯುವುದರ ಜೊತೆಗೇ ಮುಕ್ತವಾಗಿ, ವ್ಯಾಕರಣ, ಛಂದಸ್ಸುಗಳ ಹಂಗಿರದೆಯೂ ಬರೆಯಬಹುದಾದ ಕಾವ್ಯಪ್ರಕಾರವು ಬರೆಯಲು ಎಷ್ಟು ಸುಲಭವೋ, ಅನುವಾದಿಸಲು ಅಷ್ಟೇ ಸಂಕೀರ್ಣವಾದ ಪ್ರಕಾರವಾಗಿದೆ.

ಈ ಬಗೆಯ ಸಾಹಿತ್ಯದ ಪ್ರಕಾರಗಳನ್ನು, ಸಾಧನಗಳನ್ನು ಶಾಲಾ ಪಠ್ಯದಲ್ಲಿ ಅಳವಡಿಸಿಕೊಳ್ಳುವ ಮುಖ್ಯ ಉದ್ದೇಶವೆಂದರೆ, ಮಕ್ಕಳಿಗೆ ಸಾಹಿತ್ಯದ ಪರಿಚಯವನ್ನು ತರಗತಿಗಳಲ್ಲೇ ಮಾಡಿಕೊಡಬಹುದು ಎನ್ನುವ ಕಾರಣಕ್ಕೆ. ಹಾಗೆಂದು, ಮಕ್ಕಳು ಶಾಲೆಯ ಕಲಿಕೆಯ ಹಂತದಲ್ಲಿಯೇ ಇಡೀ ಸಾಹಿತ್ಯವನ್ನು ಅರೆದುಕುಡಿದುಬಿಡಬೇಕು, ಎಲ್ಲವನ್ನೂ ಅರ್ಥೈಸಿಕೊಂಡುಬಿಡಬೇಕು, ಪಂಡಿತರಾಗಿಬಿಡಬೇಕು ಎಂಬ ಕಾರಣಕ್ಕಾಗಿ ಅವರಿಗೆ ಸಾಹಿತ್ಯವನ್ನು ಕಲಿಸಬೇಕು ಎಂಬುದು ಇಲ್ಲಿರುವ ಉದ್ದೇಶವಲ್ಲ. ಬದಲಾಗಿ, ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಳ್ಳುವ ಮೂಲಕ ಅವರೊಳಗಿನ ಕ್ರಿಯಾತ್ಮ ಆಲೋಚನಾ ಕ್ರಮಗಳಿಗೆ ಒಂದು ಶಿಸ್ತು ಲಭಿಸಲಿ ಎಂಬುದಷ್ಟೇ ಶಾಲಾಪಠ್ಯದಲ್ಲಿ ಅವರು ಸಾಹಿತ್ಯವನ್ನು ಓದಿದರೆ ಉತ್ತಮ ಎಂಬ ಅಭಿಪ್ರಾಯ ಸರಿಯಾದುದು. ಇದರಿಂದಾಗಿ ಭಾಷಾಜ್ಞಾನ, ಶಬ್ದಬಳಕೆ, ಮಾತಿನ ವೈಖರಿ, ನುಡಿಗಟ್ಟುಗಳ ಸಹಜ ಬಳಕೆ, ವಾಕ್ಯರಚನೆ ಮುಂತಾದ ವಿಷಯಗಳ ಕಡೆಗೆ ಅವರು ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಾಹಿತ್ಯದ ಕಲಿಕೆ ಪೂರಕವಾಗುವಂತಿರಬೇಕು.

Notes

## ಪ್ರಗತಿಯ ಪರಿಶೀಲನೆ – 3

1. *ಈ ಕೆಳಗಿನದು ಗದ್ಯಪ್ರಕಾರಕ್ಕೆ ಸೇರುವುದಿಲ್ಲ*
   *ಎ. ನಾಟಕ*
   *ಬಿ. ಕಾದಂಬರಿ*
   *ಸಿ. ಕವಿತೆ*
   *ಡಿ. ಕತೆ*

2. *ಆತ್ಮಕಥೆ ಹಾಗೂ ಜೀವನಚರಿತ್ರೆ ಎರಡಕ್ಕೂ ಇರುವ ವ್ಯತ್ಯಾಸವೇನು?*
   ................................................................................
   ................................................................................
   ................................................................................

3. *ಕವಿತೆಯ ಗುಣಲಕ್ಷಣಗಳೇನು?*
   ................................................................................
   ................................................................................
   ................................................................................

4. *ಕೆಲವು ಪ್ರಸಿದ್ಧ ಕತೆಗಾರರನ್ನು ಹೆಸರಿಸಿ.*
   ................................................................................
   ................................................................................
   ................................................................................

5. *ನಿಮಗಿಷ್ಟವಾದ ಕವಿತೆಯ ಕೆಲವು ಸಾಲುಗಳನ್ನು ಬರೆಯಿರಿ. ಕವಿಯ ಹೆಸರನ್ನು ಬರೆಯಿರಿ. ಬರೆದಿರುವ ಸಾಲುಗಳ ಅರ್ಥವನ್ನು ವಿವರಿಸಿ.*
   ................................................................................
   ................................................................................
   ................................................................................

6. ಸಣ್ಣಕತೆಗಾರರಾಗಿ ಖ್ಯಾತಿ ಪಡೆದಿರುವ ಕತೆಗಾರರ ಹೆಸರುಗಳನ್ನು ಬರೆಯಿರಿ. ನೀವು ಇಷ್ಟಪಟ್ಟ ಸಿನಿಮಾ ಯಾವುದು? ಅದರ ಕತೆಯನ್ನು ಬರೆದವರು ಯಾರು?
   ................................................................................
   ................................................................................
   ................................................................................

Notes

### 7.3.3 ಐತಿಹಾಸಿಕ ಹಿನ್ನೆಲೆಯಲ್ಲಿ ಭಾಷಾ ಕಲಿಕೆಯೊಳಗೆ ಸಾಹಿತ್ಯದ ಉಪಯುಕ್ತತೆ

20ನೇ ಶತಮಾನದ ನಾಲ್ಕನೇ ದಶಕದವರೆಗೂ ಸಾಹಿತ್ಯವು ಭಾಷೆಯನ್ನು ಕಲಿಸುವ ಪ್ರಮುಖ ಸಾಧನವಾಗಿಯೇ ಬಳಕೆಯಾಗುತ್ತಿತ್ತು. ಯಾವುದೇ ಅನ್ಯದೇಶೀಯ ಭಾಷೆಯನ್ನು ಕಲಿಯುವಾಗಲೂ, ಸಾಹಿತ್ಯದ ಜ್ಞಾನ ಇರಬೇಕೆಂಬುದನ್ನು ಅರಿತುಕೊಳ್ಳಲಾಗಿತ್ತು. ಆದರೆ 1940ರಿಂದ 1960ರ ಅವಧಿಯಲ್ಲಿ ಸಿದ್ಧಮಾದರಿಗಳನ್ನು ಅವಲಂಬಿಸಿದ ಪಠ್ಯಗಳ ಅಗತ್ಯವನ್ನು ಮನಗಂಡು ಅವುಗಳನ್ನು ಪರಿಚಯಿಸಿದ್ದರಿಂದ. ಅನ್ಯದೇಶೀ ಭಾಷೆಯನ್ನು ಕಲಿಯುವಾಗ ಸಾಹಿತ್ಯದ ಬಳಕೆಯ ಬಗ್ಗೆ ಅಂತಹ ಹೆಚ್ಚಿನ ಮಹತ್ವವನ್ನೇನೂ ಕೊಟ್ಟಿರಲಿಲ್ಲ. ಆ ಸಂದರ್ಭದಲ್ಲಿ ಕೆಳವರ್ಗದವರ ಆಸಕ್ತಿಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದರಿಂದಾಗಿ ಸಾಹಿತ್ಯದ ಕಲಿಕೆಯನ್ನು ಅಷ್ಟು ಮಹತ್ವದ ಸಂಗತಿಯಾಗಿ ಪರಿಗಣಿಸಿರಲಿಲ್ಲ ಎಂಬುದಾಗಿ ತಿಳಿದುಬರುತ್ತದೆ. ಮೂಲತಃ, ಭಾಷಾ ಕಲಿಕೆ ಎಂದರೆ ವ್ಯಾಕರಣ ಶಾಸ್ತ್ರದ ಅಧ್ಯಯನವೆಂತಲೇ ಅಭಿಪ್ರಾಯವಿದ್ದಿತು. ಬಳಿಕ ಇದಕ್ಕೆ ಸೇರ್ಪಡೆಯಾದದ್ದು ಅನುವಾದ ಶಾಸ್ತ್ರ. ಪಠ್ಯ ಅಥವಾ ಕಲಿಕಾ ಸಾಮಗ್ರಿಯು ಸದಾಕಾಲಕ್ಕೂ ವ್ಯಾಕರಣದ ನಿಯಮಗಳನ್ನು ಆಧರಿಸಿರುವುದಿಲ್ಲ ಹಾಗೂ ಕೆಲವೊಮ್ಮೆ ಅರಿವಿನ ಸಾಮರ್ಥ್ಯ ಮತ್ತು ಭಾಷಾ ಸಾಮರ್ಥ್ಯಗಳು ಪರಸ್ಪರ ಜೊತೆಯಾಗಿಯೇ ಚಲಿಸಲಾರವು ಕೂಡಾ.

ಮೊದಲು ವ್ಯಾಕರಣದಶಾಸ್ತ್ರದ ಅನುವಾದ ಪದ್ಧತಿಯು ಬರಿಯ ನಾಮಪದ, ಕ್ರಿಯಾಪದಗಳ ಕಂಠಪಾಠ ಪದ್ಧತಿಯನ್ನೇ ಅನುಸರಿಸುವ ವಿಧಾನವಿದ್ದಿತು. ಜೊತೆಗೆ ಮೂಲಭಾಷೆಯಿಂದ ಸ್ಥಳೀಯ ಭಾಷೆಗೆ, ಸ್ಥಳೀಯ ಭಾಷೆಯಿಂದ ಅನ್ಯಭಾಷೆಗೆ ಅನುವಾದಿಸುವ ಪರಿಪಾಠವಿದ್ದಿತಲ್ಲದೇ, ಈಗಲೂ ಆ ಪದ್ಧತಿ ರೂಢಿಯಲ್ಲಿದೆ. 1970–80ರ ದಶಕದಿಂದೀಚೆಗಷ್ಟೇ, ಶಾಲೆಗೆ ಬರುವ ಮಕ್ಕಳು ಸ್ವಭಾವತಃ ಉತ್ತಮ ಭಾಷಾ ಜ್ಞಾನವನ್ನು ಹೊಂದಿದವರೂ, ತಿಳಿವಳಿಕೆಯುಳ್ಳವರೂ ಆಗಿರುತ್ತಾರೆ, ಅವರ ಅರಿವಿನ ಪರಿಧಿಯನ್ನು ತಮ್ಮ ಕಲಿಕೆಯ ಚಟುವಟಿಕೆಗಳ ಮೂಲಕ, ಭಾಷಾಜ್ಞಾನವನ್ನು ಹೆಚ್ಚಿಸುವ ಸಮರ್ಥ ಪಠ್ಯಗಳನ್ನು ಕಲಿಸುವ ಮೂಲಕ ನೀರೆರೆದು ಪೋಷಿಸುವ, ಪ್ರೋತ್ಸಾಹಿಸುವ ಕೆಲಸವನ್ನಷ್ಟೇ ಶಿಕ್ಷಕರು ಪ್ರಾಮಾಣಿಕವಾಗಿ ಮಾಡಿದರೆ ಉತ್ತಮ ಎಂಬ ಅಭಿಪ್ರಾಯವು ಮೂಡತೊಡಗಿತು. ಆ ಬಳಿಕವೇ, ಮಕ್ಕಳ ಜ್ಞಾನವಿಸ್ತರಣೆಯ ಕೆಲಸದಲ್ಲಿ ಸಾಹಿತ್ಯದ ಪಾತ್ರವೂ ಅನನ್ಯವಾದುದು ಎಂಬ ಅಭಿಪ್ರಾಯ ಗಟ್ಟಿಯಾಗಿ, ಉತ್ತಮ ಹಾಗೂ ಓದಲೇಬೇಕಾದ ಸಾಹಿತ್ಯಕೃತಿಗಳ ಬಳಕೆ ಪಠ್ಯದ ಮೂಲಕ ಆಗಬೇಕಾದುದರ ಕಾರ್ಯಕ್ಕೆ ಮಹತ್ವ ದೊರೆತದ್ದು.

ವಿಡೋಸನ್ ಅವರ ಪ್ರಕಾರ, ಭಾಷಾ–ವಿಜ್ಞಾನದ ಜ್ಞಾನವು ಬಳಸು ಮತ್ತು ಬಳಕೆ ಎಂಬ ಎರಡು ಹಂತಗಳಲ್ಲಿ ಇರುತ್ತದೆ. ಇದರ ಪ್ರಕಾರ, 'ಬಳಸು' ಎಂಬುದು ಜ್ಞಾನದ ನಿಯಮಗಳನ್ನು ಹೊಂದಿದ್ದರೆ, 'ಬಳಕೆ'ಯು ಬಳಸಬೇಕಾದುದನ್ನು ಸಂವಹನದಲ್ಲಿ ಹೇಗೆ ಬಳಸಬೇಕು ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಇಂದಿನ ಬಹುಮಟ್ಟಿಗಿನ ಸಾಹಿತ್ಯಕ ಪಠ್ಯವು ಭಾಷೆಯ ಸಮರ್ಥ ಬಳಕೆಗೆ ಬೇಕಾದ ಜ್ಞಾನವನ್ನು ಒದಗಿಸುತ್ತದೆ. ಪೋವೆ ಎಂಬುವವರು ಮಂಡಿಸುವಂತೆ, "ಭಾಷೆಯ ಎಲ್ಲ ಬಗೆಯ ಕೌಶಲಗಳನ್ನು ಹೆಚ್ಚಿಸಬೇಕಾದುದು ಸಾಹಿತ್ಯದ ಕೆಲಸ ಏಕೆಂದರೆ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಬಗೆಯ ತಿಳಿವಳಿಕೆಯನ್ನು, ಜ್ಞಾನವನ್ನು ಹೆಚ್ಚಿಸುತ್ತದೆ".
ಈ ನಿಟ್ಟಿನಲ್ಲಿ 20ನೇ ಶತಮಾನದ ಹೊತ್ತಿಗೆ ಸಾಹಿತ್ಯವು ಭಾಷಾಜ್ಞಾನವನ್ನು, ಅರಿವನ್ನು ವಿಸ್ತರಿಸಿಕೊಳ್ಳಲು ನೆರವಾಗುವ, ಭಾಷಾಕೌಶಲವನ್ನು ಬೆಳೆಸಿಕೊಳ್ಳುವ ಬಹುಮುಖ್ಯ ಸಾಧನವಾಗಿ ಪರಿಗಣಿಸಲ್ಪಡುತ್ತದೆ. ಇತ್ತೀಚಿನ ದಿನಗಳಲ್ಲಿ, ಅಕ್ಷರಮಾಲೆಯನ್ನು ಬಾಯಿಪಾಠ ಮಾಡಿ ಕಲಿಯುವುದಾಗಲಿ, ಉರುಹೊಡೆಯುವ ಮುಂತಾದ ನಿಸ್ತೇಜ ಪದ್ಧತಿಗಳನ್ನು ಅನುಸರಿಸದೇ ಕತೆ, ಹಾಡುಗಳ ಮೂಲಕ ಪರಿಣಾಮಕಾರಿಯಾಗಿ ಕಲಿಸಲು ಪ್ರಯತ್ನಿಸುತ್ತಿರುವುದು ಇದಕ್ಕೆ ನಿದರ್ಶನವಾಗಿದೆ.

ಪ್ರಗತಿಯ ಪರಿಶೀಲನೆ – 4

*1. ಮೂಲತಃ ಭಾಷೆಯನ್ನು ಕಲಿಸುವುದರ ಮೂಲವೆಂದರೆ*
*ಎ. ಅರ್ಥಗಳನ್ನು ಕಲಿಸುವುದು*
*ಬಿ. ವಾಕ್ಯವನ್ನು ಕಲಿಸುವುದು*
*ಸಿ. ವ್ಯಾಕರಣ ಪಾಠ ಕಲಿಸುವುದು*
*ಡಿ. ಶಬ್ದ ಕಲಿಸುವುದು*

Notes

*2. 20ನೆಯ ಶತಮಾನದ ಕೊನೆಯ ಹೊತ್ತಿಗೆ ಭಾಷಾಕಲಿಕೆಯಲ್ಲಿ ಆದ ಸಾಹಿತ್ಯದ ಉಪಯುಕ್ತತೆಯ ಕುರಿತಾಗಿ ವಿವರಣೆ ನೀಡಿ.*

............................................................................................................

............................................................................................................

............................................................................................................

*3. ಭಾಷಾಕಲಿಕೆಯಲ್ಲಿ ವ್ಯಾಕರಣಾನುವಾದ ಪ್ರಕ್ರಿಯೆಯ ಮೂಲಭೂತ ನಿಯಮಗಳೇನು?*

............................................................................................................

............................................................................................................

............................................................................................................

## 7.4 ಸಾಹಿತ್ಯವನ್ನು ಕಲಿಸುವ ಉದ್ದೇಶಗಳು

ಸಾಹಿತ್ಯವನ್ನು ತರಗತಿಯಲ್ಲಿ ಕಲಿಸುವಾಗ ಅದರ ವಿವಿಧ ಪ್ರಕಾರಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಪ್ರಥಮ, ದ್ವಿತೀಯ ಭಾಷೆಗಳನ್ನು ಕಲಿಸುವುದು ಅಥವಾ ಸಾಹಿತ್ಯದ ಕಲಿಸುವಿಕೆಯು ಶಾರೀರಿಕ ವಿನ್ಯಾಸ, ಭಂಗಿ, ಪ್ರಸ್ತುತಪಡಿಸುವ ವಿಧಾನ ಮೊದಲಾದ ಕೆಲವೊಂದು ಅಂಶಗಳನ್ನು ಅವಲಂಬಿಸಿದೆ.

1. ಭಾಷೆಯ ವಿನ್ಯಾಸ : ಇಲ್ಲಿ, ಸಾಹಿತ್ಯವನ್ನು ಕೇವಲ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಬಳಸಿಕೊಳ್ಳಲಾಗುತ್ತದೆ. ಶಬ್ದಸಂಗ್ರಹ ಹಾಗೂ ವಾಕ್ಯರಚನೆಗಳು ಇದರ ಗುರಿ. ಹೀಗೆ ಮಾಡುವಾಗ ಸಾಹಿತ್ಯದ ಮೇಲಿನ ಆಸಕ್ತಿಯು ಕಳೆದುಹೋಗಿಬಿಡುವುದು ಈ ವಿನ್ಯಾಸದ ಮಿತಿಯಾಗಿದೆ. ಹಾಗೆ ನೋಡಿದರೆ, ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳಿಗೆ ಸಾಹಿತ್ಯದ ಮೇಲಿನ ಆಸಕ್ತಿ ಕುಂಠಿತವಾಗುವುದಷ್ಟೇ ಅಲ್ಲ, ಅವರು ಇತ್ತ ಶಬ್ದಸಂಗ್ರಹವನ್ನೂ ಹೆಚ್ಚು ಮಾಡಿಕೊಳ್ಳುವುದಿಲ್ಲ, ಅತ್ತ ವ್ಯಾಕರಣವನ್ನೂ ಸರಿಯಾಗಿ ಕಲಿಯುವುದಿಲ್ಲ.

2. ಸಾಹಿತ್ಯಕ ವಿನ್ಯಾಸ : ತರಗತಿಗಳಲ್ಲಿ ಸಾಹಿತ್ಯಕ ಚಟುವಟಿಕೆಗಳ ಕಲಿಕೆಯೇ ಹೆಚ್ಚು ಮಹತ್ವ ಪಡೆದುಕೊಂಡಾಗ ಸಹಜವಾಗಿ ಕಲಿಯುವವರ ಗಮನವು ವಿಷಯಸಾರ ಹಾಗೂ ವಿವರಣಾತ್ಮಕ ಕಲ್ಪನೆಗಳ ಕಡೆಗೆ ನೀಡಲ್ಪಡುತ್ತದೆ. ನಿರ್ದಿಷ್ಟವಾದ ಸಂಸ್ಕೃತಿಯ ಅಧ್ಯಯನವೋ, ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳುವುದು ಇಲ್ಲಿ ಮುಖ್ಯವಾಗುತ್ತದೆ. ಭಾಷಾಶ್ರೀಮಂತಿಕೆಯ ಸಹಜ ಬೆಳವಣಿಗೆಯಾಗುವುದೊಂದರ ಹೊರತಾಗಿ, ಛಂದಸ್ಸು, ಅಲಂಕಾರ, ವಾಕ್ಯರಚನೆ, ಬಳಕೆ ಮುಂತಾದ ಅಂಶಗಳ ಕಡೆಗೆ ನೀಡಲಾಗುವ ಗಮನ ತುಂಬಾ ಕಡಿಮೆಯೆಂದೇ ಹೇಳಬಹುದು. ಒಬ್ಬ ವಿದ್ಯಾರ್ಥಿಗೆ ಇದು ಅನುಕೂಲಕರವಾಗಿ ಪರಿಣಮಿಸಿದರೆ ಮತ್ತೊಬ್ಬರಿಗೆ ಇದು ಕೊರತೆಯಾಗಿ ಪರಿಣಮಿಸಬಹುದು.

3. ವ್ಯಕ್ತಿತ್ವ ವಿಕಸನ ವಿನ್ಯಾಸ : ಈ ವಿನ್ಯಾಸದಲ್ಲಿ ವಿದ್ಯಾರ್ಥಿಯ ವೈಯಕ್ತಿಕ ಹಾಗೂ ಸಾಮೂಹಿಕ ಸಂವೇದನಾತ್ಮಕ ಬೆಳವಣಿಗೆಯ ಕಡೆಗೆ ಹೆಚ್ಚು ಮಹತ್ವ ನೀಡುವುದು ಮುಖ್ಯ ಉದ್ದೇಶವಾಗಿದೆ. ಸಾಹಿತ್ಯವನ್ನು ಅಧ್ಯಯನ ಮಾಡುವ ಮೂಲಕ ಆಗಬಹುದಾದ ವಿದ್ಯಾರ್ಥಿಯ ಮನೋವಿಕಾಸವನ್ನು ಸಹ ಇಲ್ಲಿ ಗಮನಿಸಲಾಗುತ್ತದೆ. ಹೀಗೆ ಸಾಹಿತ್ಯವನ್ನು ಆಸಕ್ತಿಯಿಂದ ಓದುವ ಮನಸ್ಸಿರುವ ಮಕ್ಕಳು ಸಮಾಜದಲ್ಲಿ ಉತ್ತಮ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು, ಜೀವನದಲ್ಲಿ ಎಲ್ಲ ಬಗೆಯಲ್ಲಿಯೂ ಮಾದರಿ ವ್ಯಕ್ತಿಗಳಾಗಿ ಬೆಳೆಯಬಲ್ಲರೆಂಬ ಆಶಾಭಾವವನ್ನು ಈ ವಿನ್ಯಾಸದ ಸ್ವರೂಪವು ಮೂಡಿಸುತ್ತದೆ.

### 7.4.1 ತರಗತಿಯ ನಮೂನೆಗಳು

ಸಾಹಿತ್ಯವನ್ನು ಕಲಿಸುವ ಮುಖ್ಯ ಉದ್ದೇಶಗಳು ಹಾಗೂ ಮಾದರಿಗಳನ್ನು ನಾವು ಈವರೆಗೆ ಚರ್ಚಿಸಿದೆವು. ಆದರೆ ಅದನ್ನು ತರಗತಿಯಲ್ಲಿ ಅಳವಡಿಸಿಕೊಳ್ಳುವ ವಿಧಾನಗಳು ಯಾವುವು? ಸಾಹಿತ್ಯವನ್ನು ತರಗತಿಗಳಲ್ಲಿ ಯಾವ ಯಾವ ವಿಭಿನ್ನ ವಿಧಾನಗಳ ಮೂಲಕ ಕಲಿಸಬಹುದೆಂಬುದರ ಬಗ್ಗೆ ನೀವು ಯಾವಾಗಲಾದರೂ ಯೋಚಿಸಿದ್ದೀರಾ? ಮಕ್ಕಳು ಮನೆಯಲ್ಲಿ ಬಳಸುವ ಭಾಷೆಯ ಸ್ವರೂಪ ಎಂಥದ್ದು? ತರಗತಿಯ ಭಾಷೆಗೂ, ಮನೆಯಲ್ಲಿ ಬಳಸುವ ಭಾಷೆಗೂ ನಡುವಿನ ವ್ಯತ್ಯಾಸಗಳೇನು? ಈ ಘಟಕವು ಈ ಪ್ರಶ್ನೆಗಳಿಗೆಲ್ಲ ಉತ್ತರ ಕೊಡುವ ಪ್ರಯತ್ನ ಮಾಡುತ್ತದೆ.

ಈ ಮುಂಚಿನ ಘಟಕಗಳಲ್ಲಿ ಉಲ್ಲೇಖಿಸಿದ ಹಾಗೆ, ಕ್ರಾಶೆನ್, ಪಡೆದುಕೊಳ್ಳುವಿಕೆ ಮತ್ತು ಕಲಿಯುವಿಕೆ ಇವೆರಡರ ನಡುವಿನ ವ್ಯತ್ಯಾಸವನ್ನು ವಿವರಿಸುತ್ತಾನೆ. ಮನೆ ಹಾಗೂ ಮನೆಯ ಆಸುಪಾಸಿನಲ್ಲಿ ಸಹಜ ವಾತಾವರಣದಲ್ಲಿ ಕಲಿಯುವ ಭಾಷೆಗೆ 'ಪಡೆದುಕೊಳ್ಳುವಿಕೆ' ಎಂದು ಹೇಳಬಹುದಾದರೆ, ಶಾಲೆಯ ವಾತಾವರಣದ ಲ್ಲಿ ಮಗು ಕಲಿಯುವ ಭಾಷೆಯು ವ್ಯವಸ್ಥಿತ ಮಾದರಿಯದ್ದಾಗಿರುತ್ತದೆ.

ಮನೆಯ ಸಹಜ ವಾತಾವರಣದಲ್ಲಿ, ಮಕ್ಕಳು ತಾವು ಕಲಿಯುವ ಭಾಷೆಯ ನಿಯಮಗಳನ್ನು ಅತ್ಯಂತ ಸುಲಭವಾಗಿ ಅನುಸರಿಸಿಬಿಡುತ್ತಾರೆ, ಕಾರಣ, ಅಲ್ಲಿನ ಕಲಿಕೆಯಲ್ಲಿ ಗಮನಾರ್ಹ ಪ್ರಮಾಣದ ಕಾಳಜಿ, ಅಕ್ಕರೆಗಳು ದೊರಕುತ್ತವೆ. ಭಾಷೆಯ ಕಲಿಕೆ ಅಲ್ಲಿ ಸಹಜವಾಗಿಯೇ ಆಪ್ತವಾಗಿಬಿಡುತ್ತದೆ. ಆದರೂ, ಭಾಷೆಯ ಸ್ವಾಭಾವಿಕ ಕಲಿಸುವಿಕೆ ಇರದ ಹೊರತು ಒಂದು ಭಾಷೆಯನ್ನು ಅಷ್ಟು ಸಮರ್ಥವಾಗಿ, ಸುಲಭವಾಗಿ ಯಾರೂ ಕಲಿಯಲು ಸಾಧ್ಯವಿಲ್ಲ. ಹಾಗಾಗಿಯೇ, ಶಾಸ್ತ್ರೀಯವಾಗಿ, ಶಿಸ್ತುಬದ್ಧ ರೀತಿಯಲ್ಲಿ ಕಲಿಯಬೇಕೆಂದಾಗ, ಶಾಲೆಯ ವಾತಾವರಣದಲ್ಲಿ ಸೂಕ್ತ ಮಾರ್ಗದರ್ಶನದಲ್ಲಿ ಇದನ್ನು ಸಾಧಿಸುವ ಅಗತ್ಯ ಕಂಡುಬರುತ್ತದೆ.

ಧನಾತ್ಮಕ ಅಂಶವೆಂದರೆ, ಸಾಹಿತ್ಯವು ಅದನ್ನು ಸಾಧಿಸುವ ಒಂದು ಪ್ರಬಲ ಸಾಧನ ಎಂಬುದು. ಸ್ವಾಭಾವಿಕ ಪರಿಸರದಲ್ಲಿ, ಮಕ್ಕಳು ರಚನೆಗಿಂತ ಅರ್ಥಕ್ಕೆ ಹೆಚ್ಚು ತಮ್ಮ ಗಮನವನ್ನು ಕೇಂದ್ರೀಕರಿಸಲು ಸಾಹಿತ್ಯವು ಸಹಾಯ ಮಾಡುತ್ತದೆ. ಒಮ್ಮೆ ಅರ್ಥವು ಮನಸ್ಸಿಗಿಳಿಯಿತೆಂದರೆ, ವ್ಯಾಕರಣ ಮತ್ತು ಶಬ್ದಸಂಗ್ರಹಣೆಯಂತಹ ಇನ್ನಿತರ ಅಂಶಗಳು ತಮ್ಮಷ್ಟಕ್ಕೆ ತಾವೇ ಅರ್ಥವಾಗತೊಡಗುತ್ತವೆ. ಅಷ್ಟಾಗಿಯೂ, ವ್ಯಾಕರಣವನ್ನು ಮುಕ್ತವಾಗಿ ಕಲಿಸುವ ನಿಯಮಗಳು ಹಾಗೂ ಹೊಸಹೊಸ ಶಬ್ದಗಳನ್ನು ಬಳಸುವ ವಿಧಾನಗಳು ಎಲ್ 2ರ ಗುಂಪು ಇರುವ ತರಗತಿಗೆ ಬಹಳ ಮುಖ್ಯವಾಗಿ ತೋರುವ ಅಂಶಗಳಾಗಿವೆ.

ಒಬ್ಬ ಶಿಕ್ಷಕರಾಗಿ ಪೂರ್ವಪ್ರಾಥಮಿಕ ಅಥವಾ ಪ್ರಾಥಮಿಕ ತರಗತಿಗಳಲ್ಲಿ ಒಂದು ಮಗುವು ದ್ವಿತೀಯ ಭಾಷೆಗಿಂತ ಹೆಚ್ಚು ಪ್ರಥಮ ಭಾಷೆಯ ಮೇಲೆ ಹೆಚ್ಚಿನ ಹಿಡಿತ ಸಾಧಿಸಿರುವುದು ಕಾಣುತ್ತದೆ. ಆಗ ದ್ವಿತೀಯ ಭಾಷಾ ಶಿಕ್ಷಕರು ದ್ವಿತೀಯ ಭಾಷೆಯನ್ನೇ ಹೆಚ್ಚು ಬಳಸುವಂತೆ ಮಗುವನ್ನು ತರಬೇತಿಗೊಳಿಸುವ ಗುರಿ ಹೊಂದಿರಬೇಕಾಗುತ್ತದೆ. ಒತ್ತಾಯಪೂರ್ವಕ ಕಲಿಸುವಿಕೆಗಿಂತ, ಸ್ವಾಭಾವಿಕವಾಗಿ ಕಲಿಯಲು ವಿದ್ಯಾರ್ಥಿಗಳು ಮನಸ್ಸು ಮಾಡುವ ರೀತಿಯಲ್ಲೇ ತರಗತಿಗಳನ್ನು ರೂಪಿಸಬೇಕಾಗುತ್ತದೆ. ವಾಸ್ತವಿಕ ಪ್ರಪಂಚದಲ್ಲಿ ಹೆಚ್ಚು ಬಳಕೆಯಾಗುವ ಭಾಷೆಯ ಜೊತೆಗೆ ವಿದ್ಯಾರ್ಥಿಗಳು ತಮ್ಮನ್ನು ತಾವು ಜೋಡಿಸಿಕೊಳ್ಳುವಂತಿರಬೇಕಾಗುತ್ತದೆ. ಒಂದು ಮಾದರಿ ಎಲ್2 ತರಗತಿ ಹೇಗಿದ್ದಿರಬಹುದು? ಮನೆಯ ಅಥವಾ ಬೀದಿಯ ಸ್ವಾಭಾವಿಕ ವಾತಾವರಣಕ್ಕಿಂತ ಇಲ್ಲಿನ ಪರಿಸರ ಭಿನ್ನವಾಗಿರುತ್ತದೆ. ದ್ವಿತೀಯ ಅಥವಾ ಅನ್ಯದೇಶೀ ಭಾಷೆಯನ್ನು ಕಲಿಸುವ ಹೆಚ್ಚಿನ ಶಿಕ್ಷಕರು ವ್ಯಾಕರಣ ಶಾಸ್ತ್ರದ ಅನುವಾದದಲ್ಲೇ ಹೆಚ್ಚು ನಂಬಿಕೆಯಿಡುತ್ತಾರೆ. ಒಂದಷ್ಟು ಶಬ್ದಗಳ ಪಟ್ಟಿ ಮಾಡಿಟ್ಟುಕೊಳ್ಳುವುದು ಹಾಗೂ ಅವಕ್ಕೆ ಪೂರಕವಾದ ಉದಾಹರಣೆಗಳನ್ನು ನೀಡಿ ವ್ಯಾಕರಣವನ್ನು ಕಲಿಸುವುದು, ಅದಕ್ಕೊಂದು ನಿದರ್ಶನವನ್ನೋ, ದೃಷ್ಟಾಂತವನ್ನೋ ಕೊಟ್ಟು ಅದರ ನಿಯಮಗಳನ್ನು ಬಣ್ಣಿಸುವುದು ಹಾಗೂ ಅಭ್ಯಾಸ ಮಾಡಲು ಕೆಲವು ಪ್ರಶ್ನೆಗಳನ್ನು ಕೊಟ್ಟುಬಿಡುವುದು, ಇಷ್ಟನ್ನು ಮಾತ್ರ ಅವರು ಮಾಡಬಲ್ಲರು. ಮನೆಪಾಠಕ್ಕೆ ಹೆಚ್ಚು ಹತ್ತಿರವಿರುವ ಈ ಪದ್ಧತಿಯು ತರಗತಿಯ ಕಲಿಸುವಿಕೆಗಿಂತ ಸಾಕಷ್ಟು ಭಿನ್ನವಾಗಿದ್ದು, ಹೆಚ್ಚೇನನ್ನೂ ಸಾಧಿಸಲು ಇಲ್ಲಿ ಸಾಧ್ಯವಾಗುವುದೇ ಇಲ್ಲ. ಅದಕ್ಕೆ ವಿರುದ್ಧವಾಗಿ, ಸಹಜ ಹಾಗೂ ಸ್ವಾಭಾವಿಕ ಪರಿಸರದಲ್ಲಿ ಸಿದ್ಧಗೊಂಡ ತರಗತಿಯಲ್ಲಿ ವಿದ್ಯಾರ್ಥಿಗಳು ಒತ್ತಡಮುಕ್ತರಾಗಿರುತ್ತಾರೆ ಹಾಗೂ ಸಮರ್ಪಕ ಅರಿವು, ಜ್ಞಾನ ಅವರಿಗೆ ಲಭ್ಯವಾಗುತ್ತದೆ. ಅಂತಹ ಪರಿಸರದ ಕಲಿಕೆಯಲ್ಲಿ ಅವರ ತಪ್ಪುಗಳನ್ನು ಎತ್ತಿಕಾಣಿಸುವ ಬದಲಾಗಿ ನಿತ್ಯದ ಬದುಕಿಗೆ ಹತ್ತಿರವಾದ ಆಯ್ದ ಹಲವಾರು ಸಂಗತಿಗಳ ಮೂಲಕವೇ ಹೆಚ್ಚು ಸಹಜವಾಗಿ, ಸರಳವಾಗಿ ಮಾತಾಡುವುದನ್ನು, ಸಂವಹನ ನಡೆಸುವುದನ್ನು ಅವರು ಕಲಿಯಬಲ್ಲವರಾಗಿರುತ್ತಾರೆ. ಹಾಗಾಗಿ ಅವರು ಅಪರಿಚಿತ ಭಾಷೆಯವರೊಂದಿಗೂ ಸಂಪರ್ಕ ಸಾಧಿಸಬಲ್ಲರು.

Notes

**ಪ್ರಗತಿಯ ಪರಿಶೀಲನೆ – 5**

*1. ಒಂದು ಮಗುವು ಶಾಲೆಗೆ ಸೇರುವುದಕ್ಕೂ ಸಾಕಷ್ಟು ಮುನ್ನವೇ ತನ್ನ ಪ್ರಥಮ ಭಾಷೆಯನ್ನು ಕಲಿತಿರುತ್ತದೆ: (ಯಾವುದಾದರೂ ಒಂದನ್ನು ಆಯ್ಕೆ ಮಾಡಿ)*
*ಎ. ಮನೆಪಾಠದ ಪರಿಸರದಿಂದ ಪ್ರಭಾವಿತ ಹೇಳಿಕೆ*
*ಬಿ. ಸ್ವಾಭಾವಿಕ ಪರಿಸರದಿಂದ ಪ್ರಭಾವಿತ ಹೇಳಿಕೆ*
*ಸಿ. ಪಾಲಕರು ಹೇಳಿಕೊಟ್ಟದ್ದರಿಂದ ಪ್ರಭಾವಿತ ಹೇಳಿಕೆ*
*ಡಿ. ಮೇಲಿನ ಉತ್ತರಗಳಲ್ಲಿ ಯಾವುದೂ ಅಲ್ಲ*

*2. ದ್ವಿತೀಯ ಭಾಷಾ ಶಿಕ್ಷಕರ ಗುರಿ ಏನಾಗಿರಬೇಕು?*

..........................................................................................................................................

..........................................................................................................................................

..........................................................................................................................................

*3. ಭಾಷೆಯನ್ನು ಕಲಿಯುವ ವಿಷಯದಲ್ಲಿ ಮನೆಪಾಠದ ಪರಿಸರಕ್ಕೂ ಸ್ವಾಭಾವಿಕ ಪರಿಸರಕ್ಕೂ ಇರುವ ವ್ಯತ್ಯಾಸವೇನು?*

..........................................................................................................................................

..........................................................................................................................................

..........................................................................................................................................

*4. ವ್ಯಾಕರಣಾನುವಾದ ಪದ್ಧತಿ ಎಂದರೇನು?*

..........................................................................................................................................

..........................................................................................................................................

..........................................................................................................................................

## 7.4.2 ಪ್ರಥಮ ಹಾಗೂ ದ್ವಿತೀಯ (ಅಥವಾ ಅನ್ಯದೇಶೀಯ) ಭಾಷೆಯ ತರಗತಿಗಳು

ನಿಮಗೀಗಾಗಲೇ ಮನೆಯ ವಾತಾವರಣದಲ್ಲಿ ಬಳಸುವ ಹಾಗೂ ತರಗತಿಯಲ್ಲಿ ಬಳಸುವ ಭಾಷೆಯ ನಡುವಿನ ವ್ಯತ್ಯಾಸದ ಬಗ್ಗೆ ಗೊತ್ತಾಗಿರಬಹುದು. ತರಗತಿಗಳಲ್ಲಿನ ಪ್ರಯತ್ನಗಳು ಹಾಗೂ ಅವಕಾಶಗಳ ಮಿತಿಗಳ ಆಧಾರದ ಮೇಲೆ ಈ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು. ತಮ್ಮ ಮಾತೃಭಾಷೆಯಷ್ಟೇ ಸಮರ್ಥವಾಗಿ ಶಾಲೆಯ ದ್ವಿತೀಯ ಭಾಷೆಯನ್ನೂ ಸುಲಭವಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ವಿದ್ಯಾರ್ಥಿಗಳಿಗೆ ಯಾವ ಬಗೆಯ ಬೋಧನಾ ಸಾಮಗ್ರಿಯನ್ನು ಒದಗಿಸಬೇಕಾಗುತ್ತದೆ?

Notes

ಸಾಹಿತ್ಯವನ್ನು ಯಾವುದೇ ಭಾಷೆಯನ್ನು ಕಲಿಸಲೂ ಬಳಸಿಕೊಳ್ಳಬಹುದು. ಅವು ಪ್ರಥಮ, ದ್ವಿತೀಯ ಅಥವಾ ಬೇರೆ ಯಾವುದೇ ಭಾಷೆಗಳಾಗಿರಬಹುದು. ಆಯ್ಕೆಮಾಡಿಕೊಳ್ಳುವ ಸಾಹಿತ್ಯ ಮಾತ್ರ ಸರಳವೂ, ಸುಲಭವಾಗಿ ಅರ್ಥವಾಗುವಂತೆಯೂ, ಆಸಕ್ತಿಕರವಾಗಿಯೂ ಇರಬೇಕಾಗುತ್ತದೆ. ಅಗತ್ಯವಿರುವೆಡೆ ಮಾತ್ರ ವ್ಯಾಕರಣವನ್ನು ಕಲಿಸಿದರಾಯಿತು. ಕಲಿಕೆಯಲ್ಲಿ ಪ್ರಗತಿ ಸಾಧಿಸಬೇಕೆನ್ನುವವರಿಗೆ ಸಾಕಷ್ಟು ಪೂರಕ ಪಠ್ಯದ ಅಗತ್ಯ ಇರುತ್ತದೆ. ಸಾಹಿತ್ಯ ಆ ಕೆಲಸವನ್ನು ಮಾಡುತ್ತದೆ. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸಿ, ಅವರಿಗೆ ಅಗತ್ಯವಾದ, ಅವರ ಬೌದ್ಧಿಕ ಮಟ್ಟಕ್ಕಿಂತ ತುಸು ಹೆಚ್ಚೇ ಉತ್ತಮವಾದ, ಯಾವ ಸವಾಲುಗಳನ್ನೂ ಎದುರಿಸಿಯೇನು ಎಂಬ ವಿಶ್ವಾಸ ಮೂಡಿಸುವ, ಅವರ ಮನೋಬಲವನ್ನು ಒರೆಗೆ ಹಚ್ಚುವ ಸಾಹಿತ್ಯಕ ಪಠ್ಯವನ್ನು ಒದಗಿಸುವ ಜವಾಬ್ದಾರಿಯನ್ನು ಶಿಕ್ಷಕರು ಹೊರಬೇಕಾಗುತ್ತದೆ. ಮಕ್ಕಳೊಳಗಿನ ಸಾಮರ್ಥ್ಯವನ್ನು ಗುರುತಿಸುವುದು ಈ ಕಾರಣದಿಂದಲೇ ಶಿಕ್ಷಕರಿಗೆ ಅತಿಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಭಾಷೆಯ ಜೊತೆಗೆ ಸೆಣಸಾಡಿದಷ್ಟೂ ಸಮರ್ಥವಾಗಿ, ಹೆಚ್ಚು ಹೆಚ್ಚು ಅದನ್ನು ಕಲಿಯುತ್ತಾ ಹೋಗುತ್ತಾರೆ. ಬಹುತೇಕ ರಾಜ್ಯಗಳಲ್ಲಿ ಇಂಗ್ಲಿಷನ್ನು ಒಂದನೆಯ ತರಗತಿಯಿಂದಲೇ ಕಲಿಸಲಾಗುತ್ತದೆ. ಮಾತೃಭಾಷೆಯಲ್ಲಿಯೇ ಶಿಕ್ಷಣ ಪಡೆದು, ಈಗ ಕಲಿಸುತ್ತಿರುವ ಶಿಕ್ಷಕರಿಗೆ ತಮ್ಮ ಮಾತೃಭಾಷೆಯಷ್ಟೇ ಸುಲಲಿತವಾಗಿ ದ್ವಿತೀಯ ಭಾಷೆಯನ್ನು ಕಲಿಸುವುದಾಗಲಿ, ಅದಕ್ಕೆ ಪೂರಕವಾದ, ಅಗತ್ಯ ಪಠ್ಯವನ್ನು ಒದಗಿಸುವುದಾಗಲಿ ಸ್ವಲ್ಪ ಸವಾಲೆನಿಸಬಹುದು. ಹೀಗಾಗಿಯೇ, ಬೋಧನಾ ಪಠ್ಯವನ್ನು ಆಯ್ಕೆಮಾಡುವಾಗ ಹೆಚ್ಚಿನ ಗಮನವನ್ನು ಅವರು ನೀಡಬೇಕಾಗುತ್ತದೆ. ಹೀಗೆ ತಯಾರು ಮಾಡಿದ ಅಧ್ಯಯನ ಪಠ್ಯವು ಮಿತವಾಗಿಯೂ, ವಿದ್ಯಾರ್ಥಿಗಳು ಸ್ವತಂತ್ರವಾಗಿ ಓದಿಕೊಳ್ಳಲು ಪ್ರೇರೇಪಿಸುವಂತೆಯೂ ಇರಬೇಕು.

ಈ ನಿಟ್ಟಿನಲ್ಲಿ ಕಲಿಕೆಗೆ ಸಾಹಿತ್ಯವನ್ನು ಬಳಸಿಕೊಳ್ಳುವಾಗ ಈ ಕೆಳಗಿನ ಅಂಶಗಳಿಗೆ ಮಹತ್ವ ನೀಡಬೇಕಾಗುತ್ತದೆ:

1. ಪಠ್ಯವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವುದು ಆಗದಿದ್ದರೂ ಭಾಗಶಃ ಅರ್ಥಮಾಡಿಕೊಳ್ಳುವಂತಿರಬೇಕು.
2. ಪ್ರತಿಕ್ರಿಯೆ – ಹೀಗೆ ಒದಗಿಸಿದ ಪಠ್ಯದ ಕುರಿತು ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡುವಂತಿರಬೇಕು. ಅದು ಸಲಹೆ, ವಿಮರ್ಶೆ ಯಾವ ರೂಪದಲ್ಲಿಯೂ ಆಗಿರಬಹುದು. ಹೇಳಿದ ಮಾತನ್ನೇ ಹೇಳದೇ, ವಿದ್ಯಾರ್ಥಿಗಳು ತಮ್ಮದೇ ಅನಿಸಿಕೆಯನ್ನು ಮುಕ್ತವಾಗಿ ವ್ಯಕ್ತಪಡಿಸುವಂತಿರಬೇಕು.
3. ಕ್ರಿಯಾಶೀಲತೆಯನ್ನು ಹುರಿದುಂಬಿಸಲು ಸಾಕಷ್ಟು ಅವಕಾಶ ನೀಡುವಂತಿರಬೇಕು.
4. ವಿಶ್ಲೇಷಣೆಯ ಹಂತದಲ್ಲಿ ವಿದ್ಯಾರ್ಥಿಗಳು ಏನನ್ನು ಅಭ್ಯಾಸ ಮಾಡಿದ್ದಾರೋ ಅದನ್ನು ಪ್ರೋತ್ಸಾಹಿಸಿ, ಮೆಚ್ಚುಗೆ ನೀಡಬೇಕು. ಯಾವುದೇ ಕಾರಣಕ್ಕೂ ಕೇವಲ ಹೇಳಿದ್ದರಲ್ಲಿ ತಪ್ಪುಗಳನ್ನೇ ಹುಡುಕಿ ನಿಂದಿಸುವಂತಿರಬಾರದು. ತಾವು ಓದುವ ಸಾಹಿತ್ಯದ ಎಷ್ಟೇ ಸಣ್ಣ ಓದುವಿಕೆಯಲ್ಲಿಯೂ ಕೂಡಾ ವಿದ್ಯಾರ್ಥಿಗಳು ತರ್ಕಬದ್ಧ, ಸುಸಂಬದ್ಧ ಆಲೋಚನಾಕ್ರಮವನ್ನು ಬೆಳೆಸಿಕೊಳ್ಳಲು ಶಿಕ್ಷಕರು ನೀಡುವ ಸಲಹೆಗಳು ಪ್ರೋತ್ಸಾಹಕರವಾಗಿರಬೇಕು.

## 7.4.3 ಸಾಹಿತ್ಯದ ಮೂಲಕ ಬೇರೆಬೇರೆ ಕೌಶಲಗಳ ಬೆಳವಣಿಗೆ

ಈವರೆಗೆ ತರಗತಿಗಳಲ್ಲಿ ಯಾವಬಗೆಯ ಸಾಹಿತ್ಯವನ್ನು ಉಪಯೋಗಿಸಿಕೊಂಡರೆ ಉತ್ತಮ ಎಂಬುದನ್ನು ತಿಳಿದುಕೊಂಡೆವು. ತಾನು ಓದುವ ಕವಿತೆ, ಕತೆಗಳ ಮೂಲಕ ವಿದ್ಯಾರ್ಥಿಯು ಭಾಷೆಯ ಸೂಕ್ತಬಳಕೆಯ ಕ್ರಮವನ್ನು ಅರಿತುಕೊಳ್ಳುತ್ತಾನಾದರೂ ಇತರೆ ಕೆಲವು ಕ್ರಮಗಳ ಮೂಲಕವೂ ಸಾಹಿತ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಭ್ಯಸಿಸಬಹುದಾಗಿದೆ. ಆಸಕ್ತಿಕರ, ಕುತೂಹಲಕಾರೀ ಕತೆಗಳು ಓದುಗನ ಏಕಾಗ್ರತೆಯನ್ನು ಮತ್ತಷ್ಟು ಉತ್ತಮಗೊಳಿಸುವ, ಚುರುಕುಗೊಳಿಸುವ ಸಾಧ್ಯತೆಗಳಿರುತ್ತವೆ. ಅವರ ಕಲ್ಪನಾ ಶಕ್ತಿ ಗರಿಗೆದರುತ್ತದೆ. ಸ್ವತಂತ್ರವಾಗಿ ಯೋಚಿಸುವ, ಮುಕ್ತವಾಗಿ ಭಾವನೆಗಳನ್ನು ವ್ಯಕ್ತಪಡಿಸುವ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ತಿಳಿಯದೇ ಇರುವ ಶಬ್ದಗಳಿಗೆ ಅರ್ಥಗಳನ್ನು ಹುಡುಕುವ ಮೂಲಕ ಶಬ್ದಸಂಗ್ರಹ ಹೆಚ್ಚುತ್ತಾ ಹೋಗುತ್ತದೆ. ತಾವು ಓದಿದ ಕೃತಿಗಳಿಂದ ಪ್ರಭಾವಿತಗೊಂಡು, ತಮ್ಮದೇ ಸ್ವತಂತ್ರ ಬರವಣಿಗೆಯ ಮೂಲಕ ಸಮಾಜಕ್ಕೆ ಉತ್ತಮವಾದುದನ್ನು ಕೊಡುಗೆಯಾಗಿ ನೀಡುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಲು ಪ್ರೇರೇಪಣೆ ನೀಡುತ್ತದೆ.

**ಸಾಹಿತ್ಯ ಮತ್ತು ಭಾಷೆ**

Notes

ಸ್ಕಾಟ್‌ನ ಪ್ರಕಾರ ಸಾಹಿತ್ಯವು ಸೌಂದರ್ಯ, ಮೌಲ್ಯಯುತ ಬಾಳುವೆ ಹಾಗೂ ಆಧ್ಯಾತ್ಮಿಕ ಗುಣಗಳಿಗೆ ಒಟ್ಟಂದದಲ್ಲಿ ಹಿಡಿದ ಕನ್ನಡಿಯಾಗಿದ್ದು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಉನ್ನತೀಕರಿಸುವ ಕೆಲಸ ಮಾಡುತ್ತದೆ. ಸಾಹಿತ್ಯದ ಮೂಲಕ ಭಾಷೆಯನ್ನು ಅಭ್ಯಸಿಸುವಾಗ ಸಂಸ್ಕೃತಿಯು ಕೂಡಾ ವ್ಯಕ್ತಿತ್ವ ವಿಕಸನವನ್ನು ಪೋಷಿಸುತ್ತಾ ಹೋಗುತ್ತದೆ. ಇದರಿಂದ ವಿದ್ಯಾರ್ಥಿಯು ಸಹಜವಾಗಿಯೇ ಸಂಸ್ಕೃತಿ ಮೂಲಧಾತುಗಳೆಡೆಗೆ ಸೆಳೆಯಲ್ಪಡುತ್ತಾನೆ ಹಾಗೂ ಅದರಲ್ಲಿ ಹಾರ್ದಿಕವಾಗಿ ಪಾಲ್ಗೊಳ್ಳುತ್ತಾ ಹೋಗುತ್ತಾನೆ.

ಖ್ಯಾತಕವಿ ವಿಡೋಸನ್‌ನ ಪ್ರಕಾರ, ಸಾಹಿತ್ಯವು ಬಳಕೆಯಾಗಬೇಕಾಗಿರುವುದು ಕೇವಲ ಭಾಷೆಯನ್ನು ಸಮರ್ಥವಾಗಿ ಕಲಿಯಲು ಅಥವಾ ಸಂಸ್ಕೃತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮಾತ್ರವೇ ಅಲ್ಲ, ಬದಲಾಗಿ, ಸಂವಹನ ಕಲೆಯನ್ನು ಪರಿಣಾಮಕಾರಿಯಾಗಿ ಕಲಿತುಕೊಳ್ಳಲು ಕೂಡಾ. ಸಾಹಿತ್ಯಕ ಪಠ್ಯದ ಅಧ್ಯಯನದಿಂದ ಕೇವಲ ಸಾಂಸ್ಕೃತಿಕ ಬೆಳವಣಿಗೆ ಆಗುವುದಷ್ಟೇ ಅಲ್ಲದೇ, ಆಲಿಸುವ, ಓದುವ ಹಾಗೂ ಬರೆಯುವ ಕೌಶಲಗಳೂ ಉತ್ತಮಗೊಳ್ಳುತ್ತಾ ಹೋಗುತ್ತವೆ. ಹಾಗೆನೋಡಿದರೆ, ಸಾಹಿತ್ಯದ ಬಳಕೆ ಹಾಗೂ ವಿಶ್ಲೇಷಣೆಗಳ ಮೂಲಕ ಪ್ರಸ್ತುತ ಜಗತ್ತಿನ ವ್ಯವಹಾರಗಳು, ಆಗುಹೋಗುಗಳು, ಭಿನ್ನ ಅನುಭವಗಳು ಅರ್ಥವಾಗುತ್ತಾ ಹೋಗುತ್ತವೆ. ವೈಯಕ್ತಿಕ ಅಥವಾ ಸಾಮಾಜಿಕ ಸಮಸ್ಯೆಗಳೆಂದರೇನೆಂಬುದನ್ನು ಅರ್ಥೈಸಿಕೊಳ್ಳುವ ಪ್ರಬುದ್ಧತೆ ಬೆಳೆಯುತ್ತಾ ಹೋಗುತ್ತದೆ. ಅವರವರ ಭಾವನಾತ್ಮಕ ಸಾಮರ್ಥ್ಯದ ಆಧಾರದ ಮೇಲೆ ಪ್ರತಿಯೊಬ್ಬರೂ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಪಕ್ವಗೊಳ್ಳುತ್ತಾ ಹೋಗುತ್ತಾರೆ.

**ಪ್ರಗತಿಯ ಪರಿಶೀಲನೆ – 6**

*1. ಕುತೂಲಕಾರಿ ಕತೆಗಳು ಈ ಕೆಳಗಿನ ಯಾವುದನ್ನು ಹೆಚ್ಚಿಸಿಕೊಳ್ಳಲು ಸಹಾಯಕ?*

*ಎ. ಏಕಾಗ್ರತೆ*

*ಬಿ. ಕಲ್ಪನಾ ಸಾಮರ್ಥ್ಯ*

*ಸಿ. ಊಹಿಸುವ ಸಾಮರ್ಥ್ಯ*

*ಡಿ. ಮೇಲಿನ ಎಲ್ಲವೂ*

*2. ಮಕ್ಕಳನ್ನು ಸಾಹಿತ್ಯಕ್ಕೆ ಮುಖಾಮುಖಿಯಾಗಿಸುವುದರಿಂದ ಆಗುವ ಪ್ರಯೋಜನಗಳೇನು?*

........................................................................................................................

........................................................................................................................

........................................................................................................................

## 7.5 ಸಾಹಿತ್ಯ ಬೋಧನೆಯ ವಿಭಿನ್ನ ಸ್ವರೂಪಗಳು

ಒಬ್ಬ ಭಾಷಾಶಿಕ್ಷಕರಾಗಿ ನೀವು ಕತೆಗಳು, ಕವಿತೆಗಳು, ಪ್ರಬಂಧಗಳು ಇತ್ಯಾದಿ ಸಾಹಿತ್ಯದ ಬೇರೆಬೇರೆ ಪ್ರಕಾರಗಳನ್ನು ಬಳಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ನಿಮಗೆ ತುಂಬ ಪರಿಯವಾದ ಪ್ರಕಾರ ಯಾವುದು? ಹೆಚ್ಚಿನ ಮಕ್ಕಳು ಕತೆಯನ್ನು ಕೇಳಲು ಉತ್ಸಾಹ ತೋರಿದರೆ, ಕವಿತೆಯಲ್ಲಿಯೂ ಅವರ ಆಸಕ್ತಿ ಚಿಗುರಲು ನೀವೇನು ಮಾಡುತ್ತೀರಿ? ಪ್ರಬಂಧವೂ ಸಹ ಅಷ್ಟೇ ಸುಂದರವಾದ ಗದ್ಯಪ್ರಕಾರ ಎಂದು ಹೇಗೆ ಅರ್ಥ ಮಾಡಿಸುತ್ತೀರಿ? ಅದಕ್ಕಾಗಿ ನೀವು ಅಳವಡಿಸಿಕೊಳ್ಳಬೇಕಾಗುವ ಬೋಧನಾ ವಿಧಾನಗಳು, ಪದ್ಧತಿಗಳು ಯಾವುವು? ಯಾವುದೇ ಪ್ರಕಾರದ ಸಾಹಿತ್ಯಕ ಪಠ್ಯದ ಮೇಲೆ ಮಕ್ಕಳ ಮನಸ್ಸನ್ನು ಹಿಡಿದಿಡುವ ನಿಟ್ಟಿನಲ್ಲಿ ನೀವೇನು ಮಾಡಬಲ್ಲಿರಿ?

ಇವೇ ಮೊದಲಾದ ಅಂಶಗಳನ್ನು, ಪಠ್ಯವನ್ನು ಸಂಯೋಜಿಸುವುದನ್ನು ಈ ಘಟಕದಲ್ಲಿ ನಾವು ತಿಳಿದುಕೊಳ್ಳಲಿದ್ದೇವೆ.

Notes

### 7.5.1 ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ಅಳವಡಿಸಿಕೊಳ್ಳುವುದು

ಕತೆಗಳು, ಜಾನಪದ ಕತೆಗಳು, ಪೌರಾಣಿಕ ಕತೆಗಳು, ದೃಷ್ಟಾಂತ ಕತೆಗಳು, ಜಗತ್ತಿನ ಶ್ರೇಷ್ಠ ಕತೆಗಳು ಇವೆಲ್ಲವನ್ನೂ ಪ್ರಾಸಬದ್ಧ ಶಿಶುಗೀತೆಗಳ ಜೊತೆಗೆ ಪ್ರಾಥಮಿಕ ತರಗತಿಯ ಪಠ್ಯದಲ್ಲಿ ಸೇರಿಸಲಾಗಿದೆ. ಮಾಧ್ಯಮಿಕ ಹಂತದಲ್ಲಿ ಇವುಗಳನ್ನೇ ಕಾದಂಬರಿ, ನಾಟಕಗಳು, ಆತ್ಮಚರಿತ್ರೆ, ವ್ಯಕ್ತಿಚಿತ್ರಣ, ಆತ್ಮಕಥನ ಮೊದಲಾದ ಪ್ರಕಾರಗಳ ಜೊತೆಗೆ ಕಲಿಸಲಾಗುತ್ತದೆ. ಸಣ್ಣಕತೆಗಳನ್ನು ಮಕ್ಕಳಿಗೆ ಕಲಿಸುವಾಗ ಸಾಕಷ್ಟು ಪ್ರಯೋಜನಗಳಾಗುತ್ತವೆ. ಅವು ಹೆಸರೇ ಹೇಳುವ ಹಾಗೆ ಸಣ್ಣಕತೆಗಳು ಹಾಗೂ ಸರಳವಾಗಿ, ಬೇಗ ಓದಿ ಮುಗಿಸಿಬಿಡುವಂತವು. ಎಷ್ಟೋಸಲ ಅದರೊಳಗಿನ ಸರಳತೆಯೇ ಮಕ್ಕಳು ಹೆಚ್ಚು ಬೇಗ ಓದಿಮುಗಿಸಿ ಬಿಡುವ ಹಾಗೆ ಮಾಡಿಬಿಡುತ್ತದೆ. ಹೆಚ್ಚಿನದನ್ನು ಚುಟುಕಾಗಿ, ಕೆಲವೇ ಶಬ್ದಗಳಲ್ಲಿ ಮುಖ್ಯಕತೆಯೊಂದನ್ನು ಹೇಳುವ ಚುರುಕಿನ ರಚನೆಯಿಂದಾಗಿ ಹಾಗೂ ಕೊನೆಯವರೆಗೂ ಕುತೂಹಲವನ್ನು ಕಾದಿರಿಸುವ ಗುಣದಿಂದಾಗಿ ಅವು ಮಕ್ಕಳಿಗೆ ತುಂಬ ಪ್ರಿಯವಾದವು. ಪ್ರಾಥಮಿಕ ಹಂತದ ಮಕ್ಕಳಿಗೆ ಪ್ರಾಸಬದ್ಧ ಶಿಶುಗೀತೆಗಳನ್ನು ಹಾಡುತ್ತಾ ಕುತೂಹಲ ಮೂಡುವಂತೆ ಕತೆ ಹೇಳುವುದು ಹೆಚ್ಚು ಪರಿಣಾಮಕಾರಿಯಾದರೆ, ಅದಕ್ಕಿಂತ ಸ್ವಲ್ಪ ದೊಡ್ಡ ತರಗತಿಯ ಮಕ್ಕಳಿಗೆ, ಶಬ್ದ ಹಾಗೂ ಲಯಬದ್ಧ ನಿರೂಪಣೆಯ ಜೊತೆಗೆ ಹೇಳುವುದು ಉಪಯುಕ್ತವಾಗಿರುತ್ತದೆ.

ಕವಿತೆಯು ಹೋಲಿಕೆ, ಉಪಮೆ, ಅಲಂಕಾರಗಳು, ಅನುಪ್ರಾಸಗಳು ಮುಂತಾದುವನ್ನು ಬಳಸಿಕೊಂಡು ರಚಿತವಾಗಿರುವುದರಿಂದ, ಕವಿತ ಕಲಿಯುವ ಮಕ್ಕಳು ಸಹಜವಾಗಿ ಅದರೊಡನೆ ಬಳಕೆಯಾದ ಇತರೆ ಅಂಶಗಳನ್ನೂ ಕಲಿಯುತ್ತಾ ಹೋಗುತ್ತಾರೆ. ಅವರೊಳಗಿನ ಭಾಷಾಬಳಕೆಯ ಜ್ಞಾನವನ್ನು ಈ ಬಗೆಯ ಕಲಿಕೆಗಳು ಕ್ರಿಯಾಶೀಲವಾಗಿ ಪೋಷಿಸುತ್ತಾ ಹೋಗುತ್ತವೆ. ನಾಟಕ ಪ್ರಕಾರವನ್ನು ಕಲಿಸುವಾಗಲಂತೂ, ಮಕ್ಕಳ ಶ್ರವಣಕಲೆಯು ವ್ಯಾಪಕವಾಗಿ ಹೆಚ್ಚುತ್ತದೆ. ಸಂಕೀರ್ಣ ವ್ಯಾಕರಣಬದ್ಧ ವಾಕ್ಯರಚನೆಗಳು ನಾಟಕದ ತಿರುಳನ್ನು ಅರ್ಥಮಾಡಿಕೊಳ್ಳುವಂತೆ ಮಕ್ಕಳನ್ನು ಪ್ರೇರೇಪಿಸುತ್ತವೆ. ಆ ಮೂಲಕ ಸಾಹಿತ್ಯವನ್ನು ಅಭ್ಯಸಿಸುವುದರಿಂದ ಆಗುವ ಪ್ರಯೋಜನಗಳನ್ನು ಅವರು ಅರಿತುಕೊಳ್ಳಬಲ್ಲವರಾಗುತ್ತಾರೆ. ನಾಟಕದ ಪಠ್ಯವನ್ನು ಓದುವಾಗ, ದೃಶ್ಯಗಳನ್ನು ಕಲ್ಪಿಸಿಕೊಳ್ಳುವ, ಪಾತ್ರಗಳು ಹೇಗಿದ್ದಿರಬಹುದು ಎಂದು ಊಹಿಸಿಕೊಂಡು ತಲ್ಲೀನರಾಗುವ, ಸಂಭಾಷಣೆಯೊಂದನ್ನು ಅದೆಷ್ಟು ವಿಶಿಷ್ಟ ಶೈಲಿಯಲ್ಲಿ, ಭಂಗಿಯಲ್ಲಿ ಪಾತ್ರಗಳು ಹೇಳಬಹುದೆನ್ನುವ ಅಂಶ – ಇವೆಲ್ಲವೂ ಮಕ್ಕಳ ಆಲೋಚನಾ ಕ್ರಮವನ್ನು, ಊಹಿಸುವ ಸಾಮರ್ಥ್ಯವನ್ನು ಅರಳಿಸುತ್ತಾ ಹೋಗುತ್ತವೆ. ಅವರಿಗರಿವಿಲ್ಲದೆಯೇ ನಾಟಕದೊಳಗೆ ಅವರು ತಮ್ಮನ್ನು ತಾವೇ ಕಲ್ಪಿಸಿಕೊಂಡು ವಿಹರಿಸುವ ಅಪೇಕ್ಷೆಯನ್ನು ನಾಟಕದ ಓದು ಹುಟ್ಟಿಹಾಕುತ್ತದೆ. ಮನುಷ್ಯನಾಗುವುದು, ಮನುಷ್ಯನಾಗುಳಿಯುವುದು ಹೇಗೆ ಎಂಬ ಸಹಜ ವಿಷಯಗಳನ್ನವರು ಕಲಿಯುತ್ತಾ ಹೋಗುತ್ತಾರೆ. ನಾಟಕಗಳು ಸೃಜನಶೀಲತೆಯನ್ನು ಉದ್ದೀಪಿಸಬಲ್ಲವು, ನಮ್ಮೊಳಗನ್ನು ಅರಳಿಸಬಲ್ಲವು, ನಮ್ಮ ಆಂತರ್ಯವನ್ನು ಅಭಿವ್ಯಕ್ತಗೊಳಿಸಲು ಪ್ರಚೋದಿಸಬಲ್ಲವು, ಸ್ವಯಂಜ್ಞಾನಿಗಳಾಗಲು ದಾರಿತೋರಬಲ್ಲವು.

ಇತ್ತೀಚಿನ ವರ್ಷಗಳಲ್ಲಿ, ಸಾಹಿತ್ಯವನ್ನು ಸಾಮಾಜೀಕರಣಗೊಳಿಸದಷ್ಟೂ, ಅದು ನಮ್ಮ ಓದುವ, ಬರೆಯುವ, ನಿರರ್ಗಳ ಮಾತಾಡುವ ಕಲೆಯನ್ನು ಚುರುಕುಗೊಳಿಬಲ್ಲುದೆಂಬುದನ್ನು ಸಂಶೋಧನೆಗಳ ಮೂಲಕ ಸಾಧಿಸಲಾಗಿದೆ. ಓದುವುದೆಂದರೆ ಕೇವಲ ಓದಲ್ಲ, ಅದು ನಮ್ಮ ಮನೋವಿಕಾಸದ ಮಾರ್ಗವೇ ಆಗಿದೆ ಎಂಬುದು ಸರ್ವವಿದಿತವಾಗಿದೆ. ಹೆಚ್ಚುಹೆಚ್ಚು ಓದುವಿಕೆ ನಮ್ಮ ಮನಸ್ಸು ಮಾಗುವಂತೆ ಮಾಡುತ್ತದೆ ಎಂಬುದು ಸಾಬೀತಾಗಿದೆ. ಮಕ್ಕಳ ಮನೋಲೋಕವನ್ನು ಕ್ರಿಯಾಶೀಲವಾಗಿ ಯೋಚಿಸಲು ಹಚ್ಚುವ, ಅವರ ಕಲ್ಪನೆಯ ಹಕ್ಕಿಗೆ ಗರಿಗಳನ್ನು ಹಚ್ಚುವ ಅವರನ್ನು ಸೂಕ್ಷ್ಮವಾಗಿ ಆಲೋಚಿಸಲು ಪ್ರೇರೇಪಿಸುವ, ಭಿನ್ನ ಸಾಂಸ್ಕೃತಿಕ ಪರಿಸರದಲ್ಲಿಯೂ ತಮ್ಮ ವೈಯಕ್ತಿಕ ಆಸಕ್ತಿಗಳನ್ನು ಗುರುತಿಸಿಕೊಂಡು, ಸವಾಲುಗಳನ್ನು ಎದುರಿಸುತ್ತಲೇ ಬದುಕುವ ಸಹಜತೆಯನ್ನು ನಾಟಕದ ಓದು, ಅಭಿನಯ ಮುಂತಾದವು ಖಂಡಿತ ಕಲಿಸಿಕೊಡಬಲ್ಲವು. ಪೂರ್ವಪ್ರಾಥಮಿಕ ಹಂತದಿಂದಲೂ, ಸಾಹಿತ್ಯದ ಮಗ್ಗುಲುಗಳಾದ ಕಾದಂಬರಿ, ಕತೆ, ಕವಿತೆ, ಶಿಶುಗೀತೆಗಳು, ಜನಪದ ಕತೆಗಳು, ಮೊದಲಾದುವನ್ನು ಕಲಿಯುವ ಮಗುವಿಗೆ ತಾನು ಓದುವುದನ್ನು, ಕಲಿಯುವುದನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಕಡೆಗೆ ಗಮನ ನೀಡುವ ಅಗತ್ಯವಿದೆ. ವಿದ್ಯಾರ್ಥಿಗಳು ತಂತಮ್ಮ ಆಸಕ್ತಿಗನುಗುಣವಾಗಿ ಸಾಹಿತ್ಯ ಕೃತಿಯನ್ನು ಆರಿಸಿಕೊಂಡು ಓದುವುದನ್ನು ಬೆಂಬಲಿಸುವ, ಪ್ರೋತ್ಸಾಹಿಸುವ,

ಅವರ ಮುಖ್ಯ ವಿಷಯಗಳನ್ನು ಆಸಕ್ತಿಯಿಂದ ಕಲಿಯುವುದನ್ನು ಉತ್ತೇಜಿಸುವ ವಿಧಾನಗಳನ್ನು ಶಿಕ್ಷಕರು ಪಾಲಿಸಬೇಕಾದ ಜರೂರತ್ತು ಇದೆ. ಅದರಿಂದಾಗಿಯೇ, ವಿದ್ಯಾರ್ಥಿಗಳಿಗೆ ಸರ್ವತೋಮುಖ ಬೆಳವಣಿಗೆಯೂ, ಕಲಿಕೆಯೂ ಏಕಕಾಲಕ್ಕೆ ಸಾಧಿತವಾಗುವ ರೀತಿಯಲ್ಲಿ, ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಪಠ್ಯವನ್ನು ರಚಿಸಬೇಕಾಗುತ್ತದೆ.

ಸಾಹಿತ್ಯದ ಕಲಿಕೆಯು, ಮೂಲಭೂತ ಭಾಷಾಕೌಶಲಗಳನ್ನು ಕಲಿಯುವುದರ ಜೊತೆಗೇ (ಓದುವುದು, ಬರೆಯುವುದು, ಮಾತಾಡುವುದು ಇತ್ಯಾದಿ) ಅದರ ಭಾಷೆಯ ಇತರೆ ಅಂಶಗಳಾದ ವ್ಯಾಕರಣ, ರಚನಾ ಕೌಶಲ್ಯ, ಬರೆಯುವ ಸಾಮರ್ಥ್ಯ ಮೊದಲಾದುವನ್ನು ಕಲಿತುಕೊಳ್ಳಬಲ್ಲವರಾಗುತ್ತಾರೆ. ನಿರೀಕ್ಷಿತ ಮಟ್ಟದಲ್ಲಿ ಅವರು ಓದುತ್ತಿದ್ದಾರೆಯೇ ಎಂಬುದನ್ನು ಎನ್‌ಸಿಆರ್‌ಟಿಇ ಹೊರತಂದಿರುವ ಭಾಷಾ ಪಠ್ಯಪುಸ್ತಕಗಳಲ್ಲಿನ ಚಟುವಟಿಕೆಗಳ ಮೂಲಕ ತಿಳಿದುಕೊಳ್ಳಬಹುದು. ಒಂದನೆಯ ತರಗತಿಯ ಹಿಂದಿ ಪಠ್ಯವು ಸರಳ ಶಿಶುಗೀತೆಗಳನ್ನು ಹೊಂದಿದ್ದು, ಕಲಿಕೆಯ ಕೊನೆಯ ಹೊತ್ತಿಗೆ ಮಗುವು ಒಂದು ಕತೆಯನ್ನು ಒಂದೆರಡು ದಿನಗಳಲ್ಲಿಯೇ ಓದಿ, ಅರ್ಥಮಾಡಿಕೊಳ್ಳುವಷ್ಟು ಕೌಶಲವನ್ನು ಗಳಿಸಿಕೊಳ್ಳುವಷ್ಟು ಜಾಣ್ಮೆಯನ್ನು, ಏಕಾಗ್ರತೆಯನ್ನು ಪ್ರಕಟಿಸಬಲ್ಲದು. ಅದೇ, ಐದನೆಯ ತರಗತಿಯ ಪುಸ್ತಕವು ಗದ್ಯ ಸಾಹಿತ್ಯ (ಕತೆ, ಪ್ರಬಂಧ, ಸಂದರ್ಶನ, ಕವಿತೆ, ನಾಟಕ)ವನ್ನು ಹೊಂದಿದೆ. ಪ್ರೇಮಚಂದರ ಈದ್ಗಾದಂತಹ ಕತೆಗಳು ಮಕ್ಕಳ ಸೂಕ್ಷ್ಮಮನಸ್ಸನ್ನು ಆಲೋಚನೆಗೆ, ಚಿಂತನೆಗೆ ಹಚ್ಚುತ್ತವೆ. ಈ ವಿಷಯದಲ್ಲಿ ಪಠ್ಯಪುಸ್ತಕಗಳನ್ನು ವಿಶ್ಲೇಷಣೆ ಮಾಡುವುದರಿಂದಲೂ, ಯಾವಬಗೆಯ ಸಾಹಿತ್ಯ ನಿಮ್ಮ ತರಗತಿಯ ಮಕ್ಕಳಿಗೆ ಸೂಖ್ತ ಎಂಬುದನ್ನು ನೀವು ನಿರ್ಧರಿಸಲು ಸಹಾಯವಾಗುತ್ತದೆ.

## 7.5.2 ತರಗತಿಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ಬಳಸಿಕೊಳ್ಳುವುದು ಹೇಗೆ?

ಈ ಘಟಕದಲ್ಲಿ, ಸಾಹಿತ್ಯದ ಭಿನ್ನಪ್ರಕಾರಗಳಾದ, ಕವಿತೆ, ಕತೆ, ಕಾದಂಬರಿ, ನಟಕ, ಏಕಾಂಕ ನಾಟಕ ಮೊದಲಾದವುಗಳ ಮೂಲಕ ನಿಯೋಜಿತ ಪಠ್ಯಪುಸ್ತಕಗಳನ್ನು ಹಾಗೂ ಶೈಕ್ಷಣಿಕ ಪಠ್ಯವನ್ನು ತರಗತಿಗಳಲ್ಲಿ ಕಲಿಸುವುದು ಹೇಗೆಂದು ತಿಳಿದುಕೊಳ್ಳಲಿದ್ದೇವೆ.

ಕತೆಗಳು ಹಾಗೂ ಸಣ್ಣಕತೆಗಳಿಂದ ಆಯ್ದ ಸಂಗತಿಗಳ ಮೂಲಕ:

- ಹೆಚ್ಚೂಕಡಿಮೆ ಎಲ್ಲಾ ಪಠ್ಯಪುಸ್ತಕಗಳಲ್ಲಿ ಸಣ್ಣಕತೆಗಳು ಇದ್ದೇ ಇರುತ್ತವೆ. ನೀವೇ ನಿಮಗಿಷ್ಟವಾದ ಸಣ್ಣಕತೆಯೊಂದನ್ನು ಆಯ್ಕೆಮಾಡಿಕೊಂಡು, ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಬಹುದು.
- ಆಯ್ಕೆಮಾಡಿಕೊಂಡಿರುವ ಪಠ್ಯವು ಸುದೀರ್ಘ ಕತೆಯೊಂದರ ಭಾಗವಾಗಿದ್ದರೆ, ಅದರ ಹಿಂದಿನ ಅಥವಾ ನಂತರದ ಘಟನೆಗಳನ್ನು ಮಕ್ಕಳೇ ಊಹಿಸಿಕೊಂಡು ಬರೆಯುವಂತೆ ಸೂಚಿಸಬಹುದು.
- ಕಥೆಯಲ್ಲಿ ಬರುವ ಯಾವುದೋ ಒಂದು ಪಾತ್ರದ ವ್ಯಕ್ತಿತ್ವವನ್ನು ಬಣ್ಣಿಸಿ ಬರೆಯಲು ಹೇಳಬಹುದು.
- ಕಥೆಯಲ್ಲಿನ ಯಾವುದಾದರೂ ಎರಡು ಪಾತ್ರಗಳ ನಡುವಿನ ಸಂಭಾಷಣೆಯನ್ನು ನಾಟಕದ ರೂಪದಲ್ಲಿ ಅಭಿನಯಿಸಲು ಪ್ರೋತ್ಸಾಹಿಸಬಹುದು.
- ಕಥೆಯ ನಿರೂಪಣೆಯನ್ನು ಅರ್ಧಕ್ಕೇ ನಿಲ್ಲಿಸಿ, ಆ ಭಾಗದ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು. ಭಿನ್ನ ತರಗತಯ ಮಕ್ಕಳಿಗೆ ಭಿನ್ನವಾದ ಮಾದರಿಯಲ್ಲಿ ಪ್ರಶ್ನೆಗಳನ್ನು ರಚಿಸಿಕೊಳ್ಳಬಹುದು.
- ಮಕ್ಕಳು ಅ ಕತೆಯ ಬಗ್ಗೆ ಯಾವ ಆಲೋಚನೆ ಹೊಂದಿದ್ದಾರೆ? ಕತೆಯಲ್ಲಿ ಏನು ನಡೆಯುತ್ತಿದೆ ಎಂದು ಅವರು ತಿಳಿದುಕೊಂಡಿದ್ದಾರೆ? ಅವರ ಮನಸ್ಸಿನಲ್ಲಿ ಕತೆಯ ಪಾತ್ರಗಳ ಕುರಿತು ಮೂಡುತ್ತಿರುವ ಆಲೋಚನೆಗಳೇನು, ಭಾವನೆಗಳೆಂತಹವು? ಕತೆಯ ಕುರಿತು ಅವರ ಒಟ್ಟಾರೆ ಅಭಿಪ್ರಾಯವೇನು? – ಇವೇ ಮುಂತಾದ ಪ್ರಶ್ನೆಗಳನ್ನು ಶಿಕ್ಷಕರು ಮಕ್ಕಳಿಗೆ ಕೇಳುತ್ತಾ, ಮಕ್ಕಳು ಕತೆಗೆ ಸ್ಪಂದಿಸುವುದು ಹೇಗೆ ಎಂಬುದನ್ನು ಕಲಿಸಿಕೊಡಬಹುದು.
- ಪ್ರಾಥಮಿಕ ಹಂತದ ಮಕ್ಕಳು ಮೌಖಿಕವಾಗಿ ಉತ್ತರ ನೀಡಿದರೆ, ಮಾಧ್ಯಮಿಕ ಹಂತದ ಮಕ್ಕಳು ಬರವಣಿಗೆಯ ರೂಪದಲ್ಲಿ ಅವರ ಉತ್ತರಗಳನ್ನು ಸಂಗ್ರಹಿಸಿ ಕೊಡಬಹುದು.
- ಅಕ್ಬರ್–ಬೀರಬಲ್ಲ, ಅಲ್ಲಾ–ಊದಾಲ, ಗೋನು ಜಾ, ತೆನಾಲಿ ರಾಮ ಮುಂತಾದ ಕತೆಗಳು ಸರಳವೂ, ಆಸಕ್ತಿ ಮೂಡಿಸುವಂತೆಯೂ ಇರುವುದರಿಂದ, ಇಂತಹ ಚಟುವಟಿಕೆಗಳಲ್ಲಿ ಮಕ್ಕಳು ಸುಲಭವಾಗಿ ತಮ್ಮ ಯೋಚನೆಗಳನ್ನು ವ್ಯಕ್ತಪಡಿಸಬಲ್ಲರು.

Notes

**ಕವಿತೆ ಅಥವಾ ಪದ್ಯದ ಮೂಲಕ:**

- ಒಂದು ಪದ್ಯವನ್ನು ಆಯ್ಕೆಮಾಡಿಕೊಂಡು, ಅದನ್ನು ಓದಿ ಅಥವಾ ಮಕ್ಕಳಿಗೆ ಓದಲು ತಿಳಿಸಿ, ಸರಿಯಾದ ಉಚ್ಚಾರಣೆ, ಧ್ವನಿಯ ಏರಿಳಿತ, ಲಯಬದ್ಧ ಓದುವಿಕೆ ಮೊದಲಾದ ವಿಷಯಗಳನ್ನು ಅರ್ಥಮಾಡಿಸಬಹುದು.
- ಆ ಪದ್ಯ ಯಾರಿಗಾಗಿ ಬರೆದದ್ದು? ಯಾಕೆ ಬರೆದರು? ಎನ್ನುವುದನ್ನು ಚರ್ಚಿಸಬಹುದು. ಪದ್ಯದಲ್ಲಿ ವ್ಯಕ್ತವಾಗಿರುವ ಸಂಗತಿಗಳನ್ನು ಚರ್ಚಿಸಿ, ಅಂತಹ ಸಂಗತಿಗಳು ತಮ್ಮ ಜೀವನದಲ್ಲಿ ಹೇಗೆ ಅಡಕವಾಗಿವೆ ಎಂದು ಮಾತಾಡಿಕೊಳ್ಳಬಹುದು.
- ಕವಿತೆಯ ಕುರಿತು ಅವರಿಗನಿಸಿದ ಆಲೋಚನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಬಹುದು.
- ಪದ್ಯದ ರಚನೆಗೆ ಧಕ್ಕೆ ಬಾರದ ಹಾಗೆ ಕೇವಲ ಭಾವವನ್ನು ಮಾತ್ರ ಬದಲಾಯಿಸಿ, ತಮ್ಮದೇ ಶೈಲಿಯಲ್ಲಿ ಮರುರಚನೆ ಮಾಡಲು ಪ್ರೋತ್ಸಾಹಿಸಬಹುದು.
- ಮೇಲಿನ ತರಗತಿಗಳ ಮಕ್ಕಳಾದರೆ, ಅವರಿಗೆ ಆ ಪದ್ಯದ ವಿಭಿನ್ನ ಲಕ್ಷಣಗಳ ಕುರಿತು ಬಣ್ಣಿಸಲು ಹಾಗೂ ಅದರಲ್ಲಿ ಅವರಿಗಿಷ್ಟವಾದ ಅಂಶ ಯಾವುದೆಂದು ವಿವರಿಸಲು ಹೇಳಬಹುದು.
- ಪದ್ಯದಲ್ಲಿನ ಪ್ರಾಸದ ರಚನೆಯ ಕುರಿತು ವಿವರಿಸಲು ತಿಳಿಸಬಹುದು.

**ನಾಟಕಗಳ ಮೂಲಕ:**

ನಿಮ್ಮ ತರಗತಿಯ ಪಾಠದಲ್ಲಿ ಯಾವ ತರಹದ ನಾಟಕವನ್ನು ನೀವು ಆರಿಸಿಕೊಳ್ಳುವಿರೆಂಬ ನಿರ್ಧಾರ ನಿಮಗೆ ಬಿಟ್ಟದ್ದು. ಕೆಲವರು ಸಮಕಾಲೀನ ನಾಟಕಕಾರರಾದ ಆರ್ಥರ್ ಮಿಲ್ಲರ್, ಸಾಕಿ ಮುಂತಾದವರ ಆಧುನಿಕ ನಾಟಕಗಳನ್ನು ಆಯ್ದುಕೊಳ್ಳಬಹುದು. ಯಾಕೆಂದರೆ ರಚನೆಯ ಹಾಗೂ ಭಾಷೆಯ ಬಳಕೆಯ ದೃಷ್ಟಿಯಲ್ಲಿ ಅವು ತುಂಬಾ ಸುಲಭವಾಗಿ ಅರ್ಥವಾಗುವ ನಾಟಕಗಳು. ಶೇಕ್ಸ್‌ಪಿಯರ್ ನಾಟಕಗಳು, ಭರತೇಂದುವಿನ ಅಂಧೇರ್ ನಗರಿ, ರಾಮಕುಮಾರ ವರ್ಮಾರ ಅಶೋಕ ಶಸ್ತ್ರತ್ಯಾಗ ಮೊದಲಾದ ಪ್ರಸಿದ್ಧ ಹಿಂದಿನಾಟಕಗಳನ್ನೂ ಆಯ್ಕೆ ಮಾಡಿಕೊಳ್ಳಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಮಕ್ಕಳ ಕಲ್ಪನಾಶಕ್ತಿಯು ಹೊರಹೊಮ್ಮಲು ಅನುಕೂಲವಾದಂತಹ, ಅವರ ಭಾವನಾಪ್ರಪಂಚವನ್ನು ಸುಲಭವಾಗಿ ತಲುಪಬಲ್ಲಂತಹ ನಾಟಕಗಳನ್ನು ಆರಿಸಿಕೊಳ್ಳುವುದು ಹೆಚ್ಚು ಸೂಕ್ತ. ಮಕ್ಕಳು ತಾವೇ ನಾಟಕ ರಚಿಸಿ, ಅವರ ಪರಿಕರಗಳನ್ನು ಅವರೇ ಹೊಂದಿಸಿಕೊಂಡು, ಅವರೇ ಅಭಿನಯಿಸುವಂತೆ ಪ್ರೋತ್ಸಾಹಿಸುವ ಪ್ರಯತ್ನಗಳೂ ಕೂಡಾ ಆಗಬೇಕು.

ವೃತ್ತಪತ್ರಿಕೆಗಳನ್ನು ಕತ್ತರಿಸಿ ತಯಾರಿಸಿಕೊಂಡ ಪರಿಕರಗಳು, ಚಿತ್ರಗಳು, ಅಥವಾ ನಾಟಕಕ್ಕೆ ಅಗತ್ಯವಾದ ಇನ್ನಿತರ ವಸ್ತುಗಳನ್ನು ಬಳಸಿಕೊಂಡು ಅಭಿನಯಿಸುವುದನ್ನು ಪ್ರೋತ್ಸಾಹಿಸಬೇಕಾದುದು ಅವಶ್ಯ. ತಾವು ಜೀವಿಸುವ ಪ್ರಪಂಚದ ವ್ಯವಹಾರಗಳನ್ನು ತಮ್ಮದೇ ಬಗೆಯಲ್ಲಿ ಅರ್ಥೈಸಿಕೊಂಡು, ಅವರದೇ ಮಾತುಗಳಲ್ಲಿ ಅದನ್ನು ಅಭಿನಯಿಸಿ ತೋರಿಸುವ, ಕಲಿತ ಭಾಷೆಯನ್ನು ಸಮರ್ಥವಾಗಿ ಬಳಸುವ, ತಮ್ಮಮ ವಿಚಾರಗಳನ್ನು ಸಹಪಾಠಿಗಳೊಂದಿಗೆ ಹಾರ್ದಿಕವಾಗಿ ವಿನಿಮಯ ಮಾಡಿಕೊಳ್ಳುವ, ದೃಷ್ಟಿಕೋನಗಳನ್ನು ಹರಿತಗೊಳಿಸಿಕೊಳ್ಳುವ ಹಲವಾರು ಧನಾತ್ಮಕ ಸಂಗತಿಗಳಿಗೆ ಈ ಚಟುವಟಿಕೆಯು ಹಾದಿಮಾಡಿಕೊಡಬಲ್ಲುದು.

### 7.5.3 ಸಾಹಿತ್ಯದ ತರಗತಿಗಳಲ್ಲಿ ಎದಿರಾಗುವ ಸಮಸ್ಯೆಗಳು

ಬೋಧನಾಪಠ್ಯವಾಗಿ ಆಯ್ಕೆಮಾಡಿಕೊಳ್ಳುವ ಸಾಹಿತ್ಯವು ಸರಿಯಾದುದಾಗಿಲ್ಲವಾದರೆ, ಮಕ್ಕಳ ಭಾಷಾಜ್ಞಾನ, ಅರಿವಿನ ಸಹಜವಿಕಾಸವಾಗುವ ತರಹದ್ದು ಅಲ್ಲವಾದರೆ, ಶಿಕ್ಷಕರು ಎದುರಿಸಬಹುದಾದ ಸಮಸ್ಯೆಗಳು ಹಲವಾರು. ತಾವು ಅಭ್ಯಸಿಸಲಿರುವ ಪಠ್ಯವೇ ಮಕ್ಕಳಿಗೆ ಸರಿಯಾಗಿ ಅರ್ಥವಾಗದಿದ್ದರೆ, ವ್ಯಾಕರಣ, ಭಾಷಾಬಳಕೆ ಮನಸ್ಸಿಗೆ ತಿಳಿಯುವಂತೆ ಇರದಿದ್ದರೆ, ಇಡೀ ಕಲಿಕೆಯ ಅವಧಿಯಲ್ಲಿ ಮಕ್ಕಳು ಆಸಕ್ತಿಯನ್ನೇ ಕಳೆದುಕೊಂಡು, ಇಡೀ ಯೋಜನೆಯೇ ವಿಫಲವಾಗುವ ಅಪಾಯಗಳು ಇರುತ್ತವೆ. ಯಾವ ಭಾಷಾಮಾಧ್ಯಮದ ಮೂಲಕ ಮಕ್ಕಳು ಸಾಹಿತ್ಯವನ್ನು ಅಭ್ಯಾಸ ಮಾಡುತ್ತಿರುವರೋ ಆ ಭಾಷೆಯನ್ನು ಅರ್ಥಮಾಡಿಕೊಳ್ಳುವ ಹಂತದಲ್ಲಿಯೇ ಅವರಿಗೆ ತೊಡಕುಗಳಿದ್ದಲ್ಲಿ, ಅಂತಹ ಸಾಹಿತ್ಯವನ್ನು ಕಲಿಯುವುದರಲ್ಲಿ ಯಾವುದೇ ಹುರುಳಿಲ್ಲ. ಹಾಗೆ ಆ ಸಾಹಿತ್ಯವನ್ನು ಓದಿ, ಬಳಿಕ ಅದನ್ನು ಚರ್ಚೆಮಾಡಿರೆಂದು ಶಿಕ್ಷಕರು ಸೂಚಿಸುವ ಪ್ರಕ್ರಿಯೆಯೇ ಅರ್ಥವಿಲ್ಲದ್ದು.

**ಸಾಹಿತ್ಯ ಮತ್ತು ಭಾಷೆ**

ಬೇರೆಬೇರೆ ಭಾಷೆಗಳ ಶಿಕ್ಷಕರು ಆಯಾ ಭಾಷಿಕ ನೆಲೆಯಲ್ಲಿ, ಬೇರೆ ಬೇರೆ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ. ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳನ್ನು ತುಂಬ ಸೂಕ್ಷ್ಮ ಹಾಗೂ ಭಿನ್ನಬಗೆಯ ನೆಲೆಗಟ್ಟಿನ ಮೇಲೆ ಅರಿತುಕೊಂಡು ಸಾಹಿತ್ಯಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳೊಡನೆ ಹೊಂದಿಕೊಳ್ಳಬೇಕಾಗುತ್ತದೆ. ಪ್ರಥಮಭಾಷೆಯೇ ಪ್ರಧಾನವಾಗಿರುವ ಮಕ್ಕಳಿಗೆ ದ್ವಿತೀಯ ಭಾಷೆಯ ಸಾಹಿತ್ಯವನ್ನೂ, ದ್ವಿತೀಯ ಭಾಷೆಯೇ ಪ್ರಧಾನ ಮಾಧ್ಯಮವಾಗಿರುವ ಮಕ್ಕಳಿಗೆ ಪ್ರಥಮ ಭಾಷೆಯ ಸಾಹಿತ್ಯವನ್ನೂ ಕಲಿಸುವುದು ಸಂಕೀರ್ಣವೇ ಹೌದು. ಪ್ರಾಥಮಿಕ ಹಂತದ ಮಕ್ಕಳಿಗಾದರೆ ಸಾಹಿತ್ಯಕ ಪಠ್ಯದ ಆಯ್ಕೆ ಸರಳವೇ ಆಗಿರಬೇಕಾಗುತ್ತದೆ. ಇದನ್ನೇ ಮಾಧ್ಯಮಿಕ ಹಂತದ ಮಕ್ಕಳಿಗೆ ಹೇಳಲಿಕ್ಕಾಗುವುದಿಲ್ಲ. ಅವರಿಗೆ ಆಯ್ದುಕೊಳ್ಳಲಾಗುವ ಸಾಹಿತ್ಯಕ ಕೃತಿಗಳ ಸ್ವರೂಪವೇ ಬೇರೆ ರೀತಿಯದ್ದು. ಶಿಕ್ಷಕರಿಗೂ ಸಹ ಅವರವರ ಮಾತೃಭಾಷೆಯಿಂದ ಹೊರತಾದ ದ್ವಿತೀಯ ಭಾಷೆಯ ಸಾಹಿತ್ಯವನ್ನು ಕಲಿಸುವಾಗ ವಿಷಯಜ್ಞಾನ, ಸ್ಪಷ್ಟತೆ, ನಿಖರ ಮಾಹಿತಿ ಮೊದಲಾದವುಗಳು ಪ್ರಮುಖ ಮಾನದಂಡಗಳಾಗಿ ಪಾತ್ರವಹಿಸುತ್ತವೆ. ಭಾಷೆ ಯಾವುದೇ ಆಗಿದ್ದರೂ ಸಾಹಿತ್ಯವನ್ನು ಸಮರ್ಪಕವಾಗಿ ಕಲಿಸುವ ವಿಷಯದಲ್ಲಿ ತೀವ್ರ ಆಸಕ್ತಿ, ಅಭಿರುಚಿ ಮೂಡಿಸುವ ಶಿಕ್ಷಕರ ತರಬೇತಿಗಳ ಅಗತ್ಯ ತುಂಬಾ ಅವಶ್ಯಕವಾದುದು.

ಪ್ರಗತಿಯ ಪರಿಶೀಲನೆ – 7

1. *ಸಾಹಿತ್ಯವನ್ನು ಅಭ್ಯಸಿಸುವುದರಿಂದ ಹೆಚ್ಚುವ ಕೌಶಲ್ಯ ಯಾವುದು?*
   *ಎ. ಓದುವುದು*
   *ಬಿ. ಬರೆಯುವುದು*
   *ಸಿ. ಮಾತಾಡುವುದು*
   *ಡಿ. ಆಲಿಸುವುದು*

2. *ತರಗತಿಯಲ್ಲಿ ನಾಟಕದ ಮೂಲಕ ಭಾಷೆಯನ್ನು ಕಲಿಸುವ ಚಟುವಟಿಕೆಯಲ್ಲಿ ಮಕ್ಕಳಲ್ಲಿ ತುಂಬಬಹುದಾದ ಮೌಲ್ಯಗಳು ಯಾವುವು?*

   ................................................................................................................................

   ................................................................................................................................

   ................................................................................................................................

3. *ಪ್ರಾಥಮಿಕ ಹಾಗೂ ಮಾಧ್ಯಮಿಕ ತರಗತಿಗಳ ಪಠ್ಯದಲ್ಲಿ ಬಳಸುವ ಸಾಹಿತ್ಯದ ಪ್ರಕಾರಗಳನ್ನು ವಿಂಗಡಿಸಿ ಬರೆಯಿರಿ ಹಾಗೂ ಅವುಗಳಲ್ಲಿ ಬಳಸದೇ ಇರುವ ಪ್ರಕಾರಗಳನ್ನು ಪಟ್ಟಿಮಾಡಿ.*

   ................................................................................................................................

   ................................................................................................................................

   ................................................................................................................................

4. *ತರಗತಿಗಳಲ್ಲಿ ಅಭ್ಯಾಸ ಮಾಡುವುದಕ್ಕೆ ಸಾಹಿತ್ಯದ ಪ್ರಕಾರಗಳನ್ನು ಆಯ್ದುಕೊಳ್ಳಲು ಇರುವ ಮೂಲಕಾರಣವೇನು?*

   ................................................................................................................................

   ................................................................................................................................

   ................................................................................................................................

Notes

Notes

## 7.6 ಸಮಗ್ರವಾಗಿ ಹೇಳುವುದಾದರೆ

- ಸಾಹಿತ್ಯವು ಎಲ್ಲ ನಮೂನೆಯ ಬರವಣಿಗೆಯನ್ನು ಒಳಗೊಂಡಿರುತ್ತದೆ ಆದರೆ ಅತ್ಯಂತ ಅಗತ್ಯವಾದದ್ದೆಂದರೆ ಕ್ರಿಯಾಶೀಲ ಅಥವಾ ಸೃಜನಶೀಲ ಹಾಗೂ ಕಾಲ್ಪನಿಕ ಬರವಣಿಗೆ; ಮಾಹಿತಿ ಸಾಹಿತ್ಯ ಹಾಗೂ ಜಾಹಿರಾತುಗಳು ನಿಜವಾದ ಸಾಹಿತ್ಯಕ ಬರವಣಿಗೆಗಳಲ್ಲ.
- ಸಾಹಿತ್ಯವು ಎರಡು ಬಗೆಯದು: ಕ್ರಿಯಾಶೀಲ ಅಥವಾ ಸೃಜನಶೀಲ ಸಾಹಿತ್ಯ ಹಾಗೂ ಸೃಜನಶೀಲವಲ್ಲದ ಸಾಹಿತ್ಯ. ಸೃಜನಶೀಲ ಸಾಹಿತ್ಯದ ಮುಖ್ಯ ಉದ್ದೇಶ ಆನಂದವನ್ನು ತಂದುಕೊಡುವುದು, ಕರುಣೆ, ಅನುಕಂಪ ಹಾಗೂ ಸೂಕ್ಷ್ಮಭಾವದಿಂದ ಪ್ರತಿಸ್ಪಂದಿಸುವುದನ್ನು ಪ್ರಚೋದಿಸುವುದು. ಇದರಲ್ಲಿ ಕತೆ, ಕವಿತೆ, ಪ್ರಬಂಧ, ಚಿತ್ರಕಥನ ಮುಂತಾದವು ಸೇರಿವೆ. ಸೃಜನೇತರ ಅಥವಾ ಸೃಜನಶೀಲವಲ್ಲದ ಸಾಹಿತ್ಯದ ಮುಖ್ಯ ಉದ್ದೇಶ ಮಾಹಿತಿಯನ್ನು ಕಲೆಹಾಕುವುದು, ಘಟನೆಗಳನ್ನು, ಸಂಗತಿಗಳನ್ನು ಸಂಗ್ರಹಿಸಿ ನೆನಪಿಟ್ಟುಕೊಳ್ಳುವುದು, ಪತ್ರಿಕೆಗಳಲ್ಲಿನ ಪದಬಂಧ ರಚಿಸುವುದು, ಲೆಕ್ಕಗಳು ಮುಂತಾದುವನ್ನು ಕಂಡುಹಿಡಿಯುವುದು, ನಿಘಂಟುಗಳು, ವಿಶ್ವಕೋಶಗಳು, ವಿಜ್ಞಾನ ಸಾಹಿತ್ಯ ಮೊದಲಾದವು.
- ಸಾಹಿತ್ಯದ ಬದಲಾಗಿ ಭಾಷೆಯನ್ನು ಕಲಿಸುವಾಗ ಇತರೆ ಮುದ್ರಿತ ಪರಿಕರಗಳಾದ ಜಾಹಿರಾತು ತುಣುಕುಗಳು, ವ್ಯಂಗ್ಯಚಿತ್ರಗಳು ಮುಂತಾದುವನ್ನು ಬಳಸಬಹುದು.
- ಸಾಹಿತ್ಯವನ್ನು ಅದರ ಸ್ವರೂಪದ ಆಧಾರದ ಮೇಲೆ ಗದ್ಯ (ಕತೆ, ಕಾದಂಬರಿ, ಆತ್ಮಚರಿತ್ರೆ, ಪ್ರವಾಸಕಥನ), ಪದ್ಯ (ಕವಿತೆ, ವಚನ, ದ್ವಿಪದಿ, ತ್ರಿಪದಿ ಇತ್ಯಾದಿ) ಹಾಗೂ ನಾಟಕ ಎಂಬ ಮೂರು ಭಾಗಗಳಾಗಿ ವಿಂಗಡಿಸಬಹುದು.
- ಭಾಷೆಯ ತರಗತಿಯಲ್ಲಿ ಸಾಹಿತ್ಯವನ್ನು ಮೂರು ಹಂತಗಳಲ್ಲಿ ಕಲಿಯುತ್ತೇವೆ: ಭಾಷಾವಾರು, ಸಾಹಿತ್ಯವಾರು ಹಾಗೂ ವ್ಯಕ್ತಿತ್ವ ವಿಕಸನ.
- ಭಾಷೆಯನ್ನು ಕಲಿಯುವ ಎರಡು ವಿಧಾನಗಳೆಂದರೆ – ಭಾಷೆಯನ್ನು ಸಾಧಿಸಿಕೊಳ್ಳುವುದು ಹಾಗೂ ಭಾಷೆಯನ್ನು ಕಲಿತುಕೊಳ್ಳುವುದು. ಸಾಂಪ್ರದಾಯಿಕ ಬೋಧನಾಪದ್ಧತಿಯ ಅಗತ್ಯವಿಲ್ಲದೇ, ಸ್ವಾಭಾವಿಕ ಪರಿಸರದಲ್ಲಿ ಕಲಿಯುವುದು. ತರಗತಿಗಳಲ್ಲಿ ರೂಢಿಗತ ಮಾದರಿಯಲ್ಲಿಯೂ ಕಲಿಯಬಹುದು. ಸಾಹಿತ್ಯವು ಕಲಿಕೆಯ ಸಂದರ್ಭವನ್ನು ಸಾಧಿಸಿಕೊಳ್ಳುವ ಸಂದರ್ಭಕ್ಕೆ ತಂದುನಿಲ್ಲಿಸಲು ಸಹಾಯ ಮಾಡುತ್ತದೆ.
- ಭಾಷಾತರಗತಿಗಳಲ್ಲಿ ಕಲಿಸಲು ಆಯ್ಕೆಮಾಡಿಕೊಳ್ಳುವ ಸಾಹಿತ್ಯವು ಮಕ್ಕಳಲ್ಲಿ ಆಸಕ್ತಿ ಮೂಡಿಸುವಂತಿರಬೇಕು ಹಾಗೂ ಸೂಕ್ತವಾದುದಾಗಿರಬೇಕು.
- ಸಾಹಿತ್ಯವನ್ನು ಕಲಿಕೆಯಲ್ಲಿ ಬಳಸಿಕೊಳ್ಳುವುದರಿಂದ, ಮಕ್ಕಳಲ್ಲಿ ಕ್ರಿಯಾಶೀಲವಾಗಿ ಆಲೋಚಿಸುವ ಸಾಮರ್ಥ್ಯ, ಯಾವುದೇ ಪಠ್ಯವನ್ನೂ ವಿಮರ್ಶಿಸುವ ಜಾಣ್ಮೆ, ಸ್ವಯಂ–ಅರಿವು, ವಿಶ್ಲೇಷಿಸುವ ಸಾಮರ್ಥ್ಯ, ಏಕಾಗ್ರತೆ ಮುಂತಾದ ಧನಾತ್ಮಕ ಅಂಶಗಳು ಬೆಳವಣಿಗೆ ಹೊಂದುತ್ತವೆ. ಮಕ್ಕಳು ಸಾಮಾಜಿಕ, ಸಾಂಸ್ಕೃತಿಕ ವಲಯಗಳಲ್ಲಿ ಹೆಚ್ಚು ಕ್ರಿಯಾಶೀಲತೆಯಿಂದ ಕೆಲಸಮಾಡಬಲ್ಲವರಾಗುತ್ತಾರೆ. ಸೂಕ್ಷ್ಮವಾಗಿ ಆಲೋಚಿಸುವ, ಪ್ರತಿಕ್ರಿಯಿಸುವ, ಸ್ಪಂದಿಸುವ ಗುಣವನ್ನು ಮೈಗೂಡಿಸಿಕೊಳ್ಳುತ್ತಾರೆ.
- ಮಕ್ಕಳ ಸಾಹಿತ್ಯವನ್ನು ಓದುವುದರಿಂದ, ಅವರಲ್ಲಿ ಊಹಾಸಾಮರ್ಥ್ಯ. ಕಲ್ಪನಾಶಕ್ತಿ, ಓದಿನ ಕಡೆಗೆ ಹೆಚ್ಚಿನ ಗಮನ, ಹಾಗೂ ಸ್ವ–ಅಭಿವ್ಯಕ್ತಿ ಸಾಮರ್ಥ್ಯಗಳು ಬೆಳೆಯುತ್ತವೆ.
- ಭಾಷೆಯ ಮೂಲಭೂತ ಕೌಶಲಗಳ ಜೊತೆಗೆ (ಓದುವ, ಬರೆಯುವ, ಆಲಿಸುವ ಹಾಗೂ ಮಾತನಾಡುವ) ಅಭಿವ್ಯಕ್ತಿ ಸಾಮರ್ಥ್ಯ, ಕ್ರಿಯಾಶೀಲ ಬರವಣಿಗೆ, ಪದಗಳ ಅರ್ಥ ಹುಡುಕುವುದು ಹಾಗೂ ವ್ಯಾಕರಣಜ್ಞಾನ ಮುಂತಾದವನ್ನು ಕಲಿಯಬಹುದು..

## ಪ್ರಯೋಗಾತ್ಮಕ ಚಟುವಟಿಕೆ

ನಿಮ್ಮ ತರಗತಿಯ ಮೂಲೆಯೊಂದರಲ್ಲಿ ಗ್ರಂಥಾಲಯವನ್ನು ರಚಿಸಿ. ಗ್ರಂಥಭಂಡಾರಕ್ಕಾಗಿ ಆಯ್ಕೆಮಾಡಲಾಗಿರುವ ಪುಸ್ತಕಗಳ ಸಂಖ್ಯೆ, ಮಾಹಿತಿಕೋಶಗಳು, ಹಾಗೂ ಪಠ್ಯಸಾಮಗ್ರಿಯ ಬಗ್ಗೆ ವಿವರವಾಗಿ ಬರೆಯಿರಿ.

Notes

## 7.7 ಹೆಚ್ಚಿನ ಓದು ಹಾಗೂ ಆಕರಗ್ರಂಥಗಳು


ಅಗ್ನಿಹೋತ್ರಿ ಆರ್ ಕೆ (2007). ಹಿಂದಿ: ಎನ್ ಎಸೆನ್ಶಿಯಲ್ ಗ್ರಾಮರ್. ಲಂಡನ್, ರೂಟ್‌ಲೆಡ್ಜ್

ಕ್ರಾಶೆನ್ ಸ್ಟೀಫನ್ ಡಿ. (1981) ಪ್ರಿನ್ಸಿಪಲ್ಸ್ ಅಂಡ್ ಪ್ರಾಕ್ಟೀಸ್ ಇನ್ ಸೆಕಂಡ್ ಲ್ಯಾಂಗ್ವೇಜ್ ಅಕ್ವಿಸಿಶನ್. ಇಂಗ್ಲಿಷ್ ಲ್ಯಾಂಗ್ವೇಜ್ ಟೀಚಿಂಗ್ ಸೀರೀಸ್. ಲಂಡನ್: ಪ್ರೆಂಟೀಸ್–ಹಾಲ್ ಇಂಟರ್‌ನ್ಯಾಶನಲ್ (ಯುಕೆ) ಲಿಮಿಟೆಡ್.

ವಿಡೋಸನ್, ಎಚ್ ಜಿ. 1990. ಆಸಪೆಕ್ಟ್ಸ್ ಆಫ್ ಲ್ಯಾಂಗ್ವೇಜ್ ಟೀಚಿಂಗ್. ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಿತ.

ವರ್ಕಿಂಗ್ ಪೇಪರ್ಸ್ ಆಫ್ ದಿ ಸಮ್ಮರ್ ಇನಸ್ಟಿಟ್ಯೂಟ್ ಆಫ್ ಲಿಂಗ್ವಿಸ್ಟಿಕ್ಸ್, 1997

ನಾರ್ತ್ ಡಕೋಟಾ ವಿಶ್ವವಿದ್ಯಾಲಯ, 1997ರ ಸೆಶನ್, 41.1

ler.letras.up.pt/uploads/ficheiros/6082.pdf10Nov.2011


## 7.8 ಘಟಕದ ಕೊನೆಯ ಚಟುವಟಿಕೆಗಳು

1. ಘಟಕದ ಉದ್ದೇಶಗಳನ್ನು ಆಧರಿಸಿ ಹೇಳಬಹುದಾದರೆ ಸಾಹಿತ್ಯದ ಭಿನ್ನ ಪ್ರಕಾರಗಳು ಯಾವುವು?
2. ಸಾಹಿತ್ಯವನ್ನು ತರಗತಿಗಳಲ್ಲಿ ಬಳಸಿಕೊಳ್ಳುವಾಗ ಶಿಕ್ಷಕರಾಗಿ ನಿಮ್ಮ ಅನುಭವವೇನು?
3. ನಿಮ್ಮ ವಿದ್ಯಾರ್ಥಿಗಳಿಗೆ ಸಾಹಿತ್ಯವನ್ನು ಪರಿಚಯಿಸುವಾಗ ಕೇವಲ ಕೃತಿಗಳ ಬಗ್ಗೆ ಉಲ್ಲೇಖಿಸಲುವಿರಾ ಅಥವಾ ಮೂಲಕೃತಿಗಳನ್ನು ಓದುವಂತೆ ಸಾಮಗ್ರಿಯನ್ನು ಒದಗಿಸುವಿರಾ? ಕಾರಣ ಸಮೇತ ವಿವರಿಸಿ.
4. ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಓದುವಿಕೆಯ ಬಗ್ಗೆ ಆಸಕ್ತಿ ಮೂಡಿಸುವ ಇತರೆ ಯಾವ ಬಗೆಯ ಪೂರಕ ಸಾಹಿತ್ಯ ಓದಲು ಪ್ರೇರೇಪಿಸುವಿರಿ?
5. ತರಗತಿಗಳಲ್ಲಿ ಸಾಹಿತ್ಯವನ್ನು ಓದುವ ಪ್ರಕ್ರಿಯೆಯಲ್ಲಿ ನಾಲ್ಕೂಬಗೆಯ ಕೌಶಲಗಳನ್ನು ಅಭ್ಯಸಿಸಲು ಅನುವಾಗುವಂತೆ ವಿದ್ಯಾರ್ಥಿಗಳನ್ನು ಹೇಗೆ ತಯಾರು ಮಾಡುವಿರಿ?
6. ಮಹಾಕಾವ್ಯವೆಂದರೇನು? ಉದಾಹರಣೆಗಳ ಜೊತೆಗೆ ವಿವರಿಸಿ.
7. ಭಾಷೆಯನ್ನು ಕಲಿಸುವಾಗ ಸಾಹಿತ್ಯದ ಭಿನ್ನಪ್ರಕಾರಗಳನ್ನು ಹೇಗೆ ಬಳಸಿಕೊಳ್ಳುವಿರೆಂಬುದನ್ನು ಕಾವ್ಯದ ಒಂದು ಉದಾಹರಣೆಯನ್ನು ನೀಡುವ ಮೂಲಕ ವಿವರಿಸಿರಿ.
8. ಪ್ರಾಥಮಿಕ ಹಂತದ ಮಕ್ಕಳಿಗಾಗಿ ಕತೆಗಳನ್ನು ಅಥವಾ ಕವಿತೆಗಳನ್ನು ಆಯ್ಕೆಮಾಡುವಾಗ ಯಾವ ಅಂಶಗಳನ್ನು ಅನುಸರಿಸುವಿರಿ?
9. ಇತಿಹಾಸದ ಹಿನ್ನೆಲೆಯನ್ನಿಟ್ಟುಕೊಂಡು ಭಾಷಾಕಲಿಕೆಯಲ್ಲಿ ಸಾಹಿತ್ಯದ ಉಪಯುಕ್ತತೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

Notes

# ಘಟಕ 8 ತರಗತಿಯ ವಾತಾವರಣದೊಳಗೆ ಭಾಷಾಬೋಧನೆಯ ವಿಧಾನಗಳು

## ವಿನ್ಯಾಸ

*8.0 ಪ್ರಸ್ತಾವನೆ*

*8.1 ಕಲಿಕೆಯ ಉದ್ದೇಶಗಳು*

*8.2 ಪಠ್ಯಯೋಜನೆಯ ಮಹತ್ವ*

*8.3 ಪಠ್ಯ ಯೋಜನೆ ಎಂದರೇನು?*

*8.4 ಪಠ್ಯ ಯೋಜನೆಯ ಅಂಗಗಳು*

*8.4.1 ಏನನ್ನು ಬೋಧಿಸಬೇಕು?*

*8.4.2 ಯಾರಿಗೆ ಬೋಧಿಸಬೇಕು?*

*8.4.3 ಮೌಲ್ಯಮಾಪನದ ಕೌಶಲಗಳು*

*8.4.4 ಪಠ್ಯ ಯೋಜನೆಯ ಸಾಧನಗಳು*

*8.5 ಪಠ್ಯಗುಚ್ಛಗಳನ್ನು ಯೋಜಿಸುವುದು*

*8.6 ಮಾದರಿ ಬೋಧನಾ ಯೋಜನೆ*

*8.6.1 ತೂಲಿಕಾಳ ತರಗತಿ*

*8.6.2 ಸತ್ಪುರದ ದಟ್ಟ ಕಾಡು*

*8.6.3 ವರ್ಣಮಾಲೆಯನ್ನು ಕಲಿಸುವುದು*

*8.6.4 ರಾಧಾಳ ತರಗತಿ*

*8.6.5 ಕತೆ ಹೇಳುವ ತಂತ್ರಗಳು*

*8.7 ಪ್ರಕಟಣೆಗಳು ಹಾಗೂ ಜಾಹಿರಾತುಗಳು*

*8.8 ಪಠ್ಯ ಯೋಜನೆಯನ್ನು ತಯಾರಿಸುವುದು ಹೇಗೆ?*

*8.9 ಸಮಗ್ರವಾಗಿ ಹೇಳುವುದಾದರೆ*

*8.10 ಹೆಚ್ಚಿನ ಓದಿಗಾಗಿ ಮತ್ತು ಆಕರಗ್ರಂಥಗಳು*

*8.11 ಘಟಕದ ಕೊನೆಯ ಚಟುವಟಿಕೆಗಳು*

## 8.0 ಪ್ರಸ್ತಾವನೆ

ಮಕ್ಕಳಿಗೆ ಸಾಹಿತ್ಯವನ್ನು ಬೋಧಿಸಲು ಹಲವಾರು ಮಾರ್ಗಗಳಿವೆ. ಈಗಾಗಲೇ ಅವುಗಳ ಪೈಕಿ ಕೆಲವನ್ನು ತಿಳಿದುಕೊಂಡಿದ್ದೇವೆ. ಭಿನ್ನ ಚಟುವಟಿಕೆಗಳ ಮೂಲಕ ಕಲಿಸುವುದು, ಪಾಠದ ನಂತರ ಅದನ್ನು ಸಾರಾಂಶ ರೂಪದಲ್ಲಿ ಚರ್ಚಿಸುವುದು, ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು, ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ತಂತ್ರಗಳನ್ನು ಅಳವಡಿಸಿಕೊಳ್ಳುವುದು, ಸಮೀಕ್ಷೆಗಳನ್ನು ಕೈಗೊಳ್ಳಲು ಸಹಾಯ ಮಾಡುವುದು ಇತ್ಯಾದಿ.

## ತರಗತಿಯ ವಾತಾವರಣದೊಳಗೆ ಭಾಷಾಬೋಧನೆಯ ವಿಧಾನಗಳು

Notes

ಪ್ರತಿ ವಿಧಾನವೂ ಆಯಾ ಭಾಷೆಯ ಕಲಿಕೆಯನ್ನು ಅವಲಂಬಿಸಿದ್ದು ಅದಕ್ಕೆ ಅದರದ್ದೇ ಆದ ನಿಯಮಾವಳಿಗಳಿವೆ. ಯಾವುದೇ ಸಿದ್ಧ ಪದ್ಧತಿಯನ್ನು ಅನುಸರಿಸದೇ ತಮ್ಮದೇ ವಿಧಾನದಲ್ಲಿ ಬಓಧಿಸುವ ಶಿಕ್ಷಕರೂ ಇದ್ದಾರೆ. ಉದಾಹರಣೆಗೆ, ಕೆಲವು ಶಿಕ್ಷಕರು, ಪಾಠದ ಕೊನೆಗೆ ಕೇಳಿದ ಪ್ರಶ್ನೆಗಳಿಗೆ ಸಿದ್ಧ ಉತ್ತರಗಳನ್ನು ಬಾಯಿಪಾಠ ಮಾಡಿಸಿ, ಪರೀಕ್ಷೆಗಳಲ್ಲಿ ಅದನ್ನೇ ಬರೆದು, ಅಂಕಗಳಿಸಲು ಪ್ರೋತ್ಸಾಹಿಸುವ ನಿದರ್ಶನಗಳೂ ಇವೆ. ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ಉಪಯೋಗವಾದೀತು ಎನ್ನುವುದು ಅವರ ಆಲೋಚನೆ. ಇನ್ನು ಕೆಲವು ತರಗತಿಗಳಲ್ಲಿ ಶಿಕ್ಷಕರು ತಾವು ಬೋಧಿಸುವ ಪದ್ಧತಿಯಲ್ಲಿಯೇ ಮಕ್ಕಳು ಕಲಿತು, ಉತ್ತರಗಳನ್ನು ಬರೆಯಬೇಕೆಂದು ಒತ್ತಡ ಹೇರುತ್ತಾರೆ. ಮತ್ತಿನ್ನು ಕೆಲವು ಕಡೆಗಳಲ್ಲಿ, ತುಂಬ ಕ್ರಿಯಾಶೀಲ ವಿಧಾನಗಳನ್ನು ಅನುಸರಿಸಿ, ಬೋಧನಾ ಪಠ್ಯವು ಸದಾಕಾಲ ಸಹಜವಾಗಿ ಮಕ್ಕಳ ಮನಸ್ಸಿನಲ್ಲಿ ನೆನಪುಳುಯುವಂತೆ ಕಲಿಸುವ ಶಿಕ್ಷಕರೂ ಇದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪ್ರಯೋಗಾತ್ಮಕವಾಗಿ ಲಭಿಸಬಹುದಾದ ಪ್ರಯೋಜನಗಳ ಕಡೆಗೆ ಹಾಗೂ ಅವರು ಕಡೆತನಕವೂ ಕಲಿಕೆಯನ್ನು ಆಸ್ವಾದಿಸುವ ರೀತಿಯಲ್ಲಿ ಬೋಧಿಸುವ ಕಡೆಗೆ ಅವರ ಲಕ್ಷ್ಯ ಇರುವುದು ಖಚಿತವಾಗುತ್ತದೆ. ಸಿದ್ಧ ಹಾಗೂ ವ್ಯವಸ್ಥಿತ ಕಲಿಕೆಯ ವಾತಾವರಣದಲ್ಲಿ ಕಲಿತುದಕ್ಕಿಂತ ಹೆಚ್ಚಿನದನ್ನು ಮಕ್ಕಳು ಹೊರಗಡೆಯೇ ಹೆಚ್ಚು ಪರಿಣಾಮಕಾರಿಯಾಗಿ ಕಲಿಯುವರೆಂಬ ಅಂಶವನ್ನೂ ಗಮನಿಸಲಾಗಿದೆ. ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಿಂದಲೂ ಒಂದು ಮಗು ಕಲಿಯುವುದು ಸಾಕಷ್ಟು ಇರುತ್ತದೆ. ಈಗ ಸಮಸ್ಯೆ ಏನೆಂದರೆ, ಹೇಗೂ ತಮ್ಮಷ್ಟಕ್ಕೆ ತಾವು, ನಿರ್ದಿಷ್ಟ ಯೋಜನೆಗಳೇನೂ ಇರದ ವಾತಾವರಣದಲ್ಲಿ ಮಕ್ಕಳು ಭಾಷೆಯನ್ನು ಕಲಿಯುತ್ತಾರಾದರೆ, ಶಿಕ್ಷಕರಿಗೆ ವಿಶೇಷ ತರಬೇತಿಯನ್ನು ನೀಡಿ, ಅದನ್ನು ಮಕ್ಕಳಿಗೆ ದಾಟಿಸುಬ ಅಗತ್ಯವಾದರೂ ಏನು ಎಂಬುದು. ಒಂದು ಸಿದ್ಧ, ಸೀಮಿತ ಟ್ಯೂಶನ್ ವಾತಾವರಣದಲ್ಲಿ ಮಗು ಕಲಿಯುವುದಕ್ಕೂ, ಮುಕ್ತವಾದ, ಸೀಮಿತ ಚೌಕಟ್ಟುಗಳಿಲ್ಲದ ವಾತಾವರಣದಲ್ಲಿ ಮಗು ಕಲಿಯುವದಕ್ಕೂ ತುಂಬ ವ್ಯತ್ಯಾಸಗಳಿವೆ. ಇದರ ಪರಿಣಾಮಗಳೂ ಕೂಡಾ ಅಷ್ಟೇ ಭಿನ್ನವಾದವು.

ಶಾಲೆಯು ಇಂತಹ ಒಂದು ಸಿದ್ಧಮಾದರಿಯಲ್ಲಿ ಬೋಧನೆಯನ್ನು ಒದಗಿಸುವ ಸಂಸ್ಥೆ. ಇಲ್ಲಿ ಭಿನ್ನ ಹಿನ್ನೆಲೆಯುಳ್ಳ, ಆಸಕ್ತಿಗಳುಳ್ಳ, ಕೌಶಲಗಳುಳ್ಳ ಮಕ್ಕಳು, ಯೋಜಿತ ಪಠ್ಯವನ್ನು, ನಿರ್ದಿಷ್ಟ ಸಮಯದ ಚೌಕಟ್ಟಿನೊಳಗೆ, ವ್ಯವಸ್ಥಿತ ಕಲಿಸುವಿಕೆಯ ವಾತಾವರಣದೊಳಗೆ ಕಲಿಯುತ್ತಾರೆ. ನಾವು ಜೀವಿಸುತ್ತಿರುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ. ಅಲ್ಲಿ ಮಗುವಿನ ಸಾಮಾಜಿಕ ಹಿನ್ನೆಲೆ ಎಷ್ಟೇ ಭಿನ್ನಬಗೆಯದ್ದಾದರೂ, ವ್ಯವಸ್ಥಿತ ಬೋಧನಾಕ್ರಮವನ್ನು ಅನುಸರಿಸಿ, ಸರಿಯಾದ ಹಾಗೂ ಪರಿಣಾಮಕಾರಿ ವಿಧಾನದಲ್ಲಿ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಕಲಿಸಬೇಕು ಎಂಬುದು ಈ ವ್ಯವಸ್ಥೆಯ ಧ್ಯೇಯ. ಹಾಗಾಗಿ, ಮಗು ಏನನ್ನು, ಎಷ್ಟು ಪ್ರಮಾಣದಲ್ಲಿ, ಎಷ್ಟು ಕಾಲದವರೆಗೆ ಕಲಿಯಬೇಕು ಎಂಬುದು ಹಾಗೆ ಕಲಿಸುವ ಕ್ರಮಗಳೇನು ಎಂಬುದರಷ್ಟೇ ಮಹತ್ವದ ಸಂಗತಿಯಾಗಿದೆ. ಈ ಕಲಿಕೆಯನ್ನು ಅಳೆಯಲು ಯೋಗ್ಯ ಪರಿಶೀಲನೆಯ ಅಥವಾ ಮೌಲ್ಯಮಾಪನದ ವಿಧಾನಗಳಿರಬೇಕಾಗುತ್ತದೆ. ಶಾಲೆ ವ್ಯವಸ್ಥಿತ ಕಲಿಯುವಿಕೆಗೆ ಸೂಕ್ತ ವಾತಾವರಣವನ್ನು, ಬೆಳವಣಿಗೆಗೆ ಪೂರವಾದ ಶಿಕ್ಷಣವನ್ನು, ಸ್ವಯಂ–ಮೌಲ್ಯಮಾಪನದ ತಂತ್ರಗಳನ್ನು, ತಾರ್ಕಿಕ ಬೌದ್ಧಿಕ ಸಂಪತ್ತನ್ನು ಒದಗಿಸುತ್ತದೆ. ಆದ್ದರಿಂದ ಶಾಲೆಯ ವಾತಾವರಣದೊಳಗೇನೇ ನಾವು ಪರಿಣಾಮಕಾರಿ ಬೋಧನಾ ಚಟುವಟಿಕೆಗಳನ್ನು ತರಗತಿಯ ಬೋಧನೆಗಳ ಮೂಲಕ ಒದಗಿಸಬೇಕಾಗುತ್ತದೆ.

ಒಂದು ತರಗತಿಗೆ ಸೂಕ್ತ ಬೋಧನಾ ಯೋಜನೆಯನ್ನು ರೂಪಿಸುವಾಗ, ತರಗತಿಗೆ ಬರುವುದಕ್ಕೂ ಮುನ್ನವೇ ಒಬ್ಬ ವಿದ್ಯಾರ್ಥಿಯು ಸಾಕಷ್ಟು ವಿಚಾರಗಳನ್ನು ಕಲಿತುಕೊಂಡೇ ಬಂದಿರುತ್ತಾನೆ. ಇದರಿಂದಾಗಿ ನಿತ್ಯದ ಜೀವನದ, ಮಕ್ಕಳು ಬಲ್ಲ ಹಲವಾರು ಸಂಗತಿಗಳನ್ನು ಬೋಧನಾ ಸಾಮಗ್ರಿಯ ಜೊತೆಗೆ ತಳುಕು ಹಾಕಿ, ಬೋಧನೆಯು ಪರಿಣಾಮಕಾರಿಯಾಗಿಯೂ, ಆಸಕ್ತಿಕರವಾಗಿಯೂ ಇರುವಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಘಟಕದಲ್ಲಿ, ಭಿನ್ನ ಬೋಧನಾಶೈಲಿಗಳ ಕೆಲವು ಉದಾಹರಣೆಗಳನ್ನು, ಮಾದರಿಗಳನ್ನು ಕಲಿಯುವ ಮೂಲಕ ನಮ್ಮದೇ ಆದ ಬೋಧನಾ ಮಾದರಿಯನ್ನು ರೂಪಿಸಲು ಪ್ರಯತ್ನ ಮಾಡಲಿದ್ದೇವೆ.

Notes

## 8.1 ಕಲಿಯುವುದರ ಉದ್ದೇಶಗಳು

ಈ ಘಟಕದಲ್ಲಿ ನೀವು ಕಲಿಯುವ ಅಂಶಗಳು ಹೀಗಿವೆ:

- ಭಾಷಾ ಬೋಧನೆಯ ಶಾಸ್ತ್ರೀಯ ಪದ್ಧತಿಗಳು ಯಾವುವು? ಅವುಗಳ ಮಿತಿಗಳೇನು?
- ಪಠ್ಯಯೋಜನೆಯನ್ನು ರೂಪಿಸುವುದರ ಮಹತ್ವ
- ಪಠ್ಯ ಯೋಜನೆ ಎಂದರೇನು? ಏಕೆ ಕೇವಲ ಪಠ್ಯಯೋಜನೆ ಎಂದು ಹೇಳುತ್ತೇವೆ? ಬೋಧನಾ ಯೋಜನೆ ಎಂದೇಕೆ ಹೇಳುವುದಿಲ್ಲ?
- ಪರಿಣಾಮಕಾರಿ ಪಠ್ಯಯೋಜನೆಯ ಅನುಷ್ಠಾನ ಹಾಗೂ ಮೌಲ್ಯಮಾಪನ
- ಪಠ್ಯಯೋಜನೆಯ ವ್ಯಾಪ್ತಿ ಮತ್ತು ಅನುಮತಿಸಬಹುದಾದ ಸಾಧ್ಯತೆಗಳು
- ಪರಿಣಾಮಕಾರಿ ಪಠ್ಯಯೋಜನೆಯನ್ನು ತಯಾರಿಸುವುದು

## 8.2 ಪಠ್ಯಯೋಜನೆಯನ್ನು ರೂಪಿಸುವುದರ ಮಹತ್ವ

ಯಾವುದೇ ಬಗೆಯ ಬೋಧನೆಗೆ ಸಮಯ ವ್ಯಯಿಸದೇ ಇದ್ದಾಗಲೂ ಒಂದು ಮಗುವು ಭಾಷೆಯನ್ನು ಕಲಿಯುವ ಸಾಮರ್ಥ್ಯ ಹೊಂದಿರುವಾಗ ಪಠ್ಯಯೋಜನೆಯನ್ನು ರೂಪಿಸುವ ಅಗತ್ಯವಿದೆಯೇ ಎಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕು. ಯೋಜನೆಯನ್ನು ರೂಪಿಸುವ ಅಗತ್ಯವೇನು?
ಕೆಲವು ಶಿಕ್ಷಕರು ಯಾವುದೇ ಪೂರ್ವತಯಾರಿಯಿಲ್ಲದೆಯೇ ತರಗತಿಗೆ ತೆರಳಿದರೂ, ಉತ್ತಮವಾಗಿಯೇ ಮಕ್ಕಳಿಗೆ ಬೋಧಿಸಬಲ್ಲರು ಎಂಬುದನ್ನು ನಾವು ತಿಳಿದಿದ್ದೇವೆ. ಯಾಕೆಂದರೆ ಅಂತಹ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳು ಎಷ್ಟು ಜಾಣರು, ಅವರ ಕಲಿಕೆಯ ಮಟ್ಟವೇನು, ಹೇಗೆ ಕಲಿಸಿದರೆ ಉತ್ತಮರೀತಿಯಲ್ಲಿಅವರು ಕಲಿಯಬಲ್ಲರೆಂಬ ಬಗ್ಗೆ ಚೆನ್ನಾಗಿ ತಿಳಿದಿರುತ್ತದೆ. ಮಕ್ಕಳೆಡೆಗೆ ಅವರಿಗೊಂದು ಆದರಪೂರ್ವಕ, ಮಮತೆಯ ಕಾಳಜಿ ಇರುತ್ತದೆ. ಆ ರೀತಿಯ ಶಿಕ್ಷಕರು ಮನಸ್ಸಿನಲ್ಲಿಯೇ ತಮ್ಮ ಪಠ್ಯದ ಯೋಜನೆಯನ್ನು ತಯಾರಿಸಿಕೊಂಡು ತರಗತಿಯನ್ನು ಪ್ರವೇಶಿಸಬಲ್ಲರು ಮತ್ತು ಅಲ್ಲಿಯೇ ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಅಚ್ಚುಕಟ್ಟಾಗಿ ಪಾಠ ಮಾಡಬಲ್ಲರು.

ಇನ್ನು ಶಾಲೆಗೆ ತನ್ನದೇ ಆದ ಕೆಲವು ಲಕ್ಷಣಗಳಿವೆ. ಅವು ಸ್ವಾಭಾವಿಕ ಪರಿಸರದ ಕಲಿಕೆಗಿಂತ ಭಿನ್ನವಾಗಿರುವ ಜ್ಞಾನಾರ್ಜನೆಯ ಕೇಂದ್ರಗಳು. ತರಗತಿಯಲ್ಲಿನ ಭಾಷಾ ಬೋಧನೆಗೆ ಅಥವಾ ಜ್ಞಾನದ ಬೋಧನೆಗೆ ಒಂದು ನಿರ್ದಿಷ್ಟ ರಚನೆಯಲ್ಲಿ ಕಲಿಸಬೇಕೆಂಬ ಕಟ್ಟುಪಾಡುಗಳಿರುತ್ತವೆ ಹಾಗೂ ಅದು ವ್ಯವಸ್ಥಿತವಲ್ಲದ ಪರಿಸರದಲ್ಲಿ ಭಾಷೆಯನ್ನು ಕಲಿಯುವ ಸಂಗತಿಗಿಂದ ಭಿನ್ನವಾಗಿರುತ್ತದೆ. ತಾಯಿಯೊಬ್ಬಳು ತನ್ನ ಮಗುವಿಗೆ ಮನೆಯ ವಾತಾವರಣದಲ್ಲಿ ಒಂದು ಭಾಷೆಯನ್ನು ಕಲಿಸುವುದಕ್ಕೂ, ಅದೇ ಭಾಷೆಯನ್ನು ಶಿಕ್ಷಕಿಯಾಗಿ ತನ್ನದೇ ಮಗುವಿಗೆ ತರಗತಿಯ ಪರಿಸರದಲ್ಲಿ ಕಲಿಸುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಭಾಷೆ ಒಂದು ಸಂಕೀರ್ಣ ವಿಷಯ. ಔಪಚಾರಿಕ ಭಿನ್ನತೆ, ವಾಕ್ಯರಚನೆಯಲ್ಲಿನ ಭಿನ್ನತೆ, ಶಬ್ದಗಳ ಬಳಕೆಯ ವಿಧಾನ ಪ್ರತಿಯೊಂದೂ ಪರಿಸರದಿಂದ ಪರಿಸರಕ್ಕೆ ವ್ಯತ್ಯಾಸವಾಗುತ್ತಲೇ ಇರುತ್ತದೆ. ಹೀಗಾಗಿಯೇ ಶಾಲೆಯ ಹಂತದಲ್ಲಿ ವ್ಯವಸ್ಥಿತ ಹಾಗೂ ಗಂಭೀರ ಸ್ತರದ ಭಾಷಾ ಬೋಧನೆಯ ಯೋಜನೆಗಳನ್ನು ಶಿಕ್ಷಕರಿಂದ ನಿರೀಕ್ಷಿಸಲಾಗುತ್ತದೆ.

ಮನೆಯ ವಾತಾವರಣದಲ್ಲಿ, ಕಲಿಕೆಯ ಪ್ರಕ್ರಿಯೆಯು ಪ್ರಯೋಗಾತ್ಮಕವಾಗಿರುತ್ತದೆ ಮತ್ತು ಅಲ್ಲಿ ತಪ್ಪುಗಳನ್ನು ಮಾಡುವ, ಅಪಹಾಸ್ಯಕ್ಕೊಳಗಾಗದೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಅವಕಾಶವಿರುತ್ತದೆ. ಆ ಬಗೆಯ ಮುಕ್ತತೆ, ಸಮಯಾವಕಾಶ ಶಾಲೆಯ ಪರಿಸರದಲ್ಲಿ ಸಿಗುವುದಿಲ್ಲ. ಏಕೆಂದರೆ ಶಾಲೆಯಲ್ಲಿ 'ಎಲ್ಲವೂ ಸರಿಯಾಗಿರಬೇಕು, ಕರಾರುವಕ್ಕಾಗಿರಬೇಕು' ಎಂಬ ಅಲಿಖಿತ ನಿಯಮವಿರುವ ವಾತಾವರಣವೇ ಹೆಚ್ಚು. ಮನುಷ್ಯ ಭಾಷೆಯ ಮುಖ್ಯ ಲಕ್ಷಣವೆಂದರೆ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಗಳೆರಡರಲ್ಲಿಯೂ ಬದಲಾಗುತ್ತಲೇ ಇರುವುದು. ಹೀಗಾಗಿ ಮಗುವು ಭಾಷೆಯ ಮೇಲೆ ಹಿಡಿತ

ಸಾಧಿಸಬೇಕಾದರೆ, ಆಲಿಸುವ ಸೂಕ್ಷ್ಮತೆ ಹಾಗೂ ವಾತಾವರಣ ಎರಡನ್ನೂ ತಾಳೆನೋಡುವ ಗುಣವನ್ನು ಅವಶ್ಯವಾಗಿ ಬೆಳೆಸಿಕೊಳ್ಳಬೇಕಾಗುತ್ತದೆ. ಈ ಹಂತದಲ್ಲಿಯೇ ಪಠ್ಯವನ್ನು ಯೋಜಿಸಿಯೇ ಪಾಠ ಮಾಡಬೇಕಾದ ಅಗತ್ಯ ಕಾಣಿಸುವುದು. ವೈಯಕ್ತಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭಾಷಾವಾರು ಬದಲಾವಣೆಗಳನ್ನು ತರಗತಿಯಲ್ಲಿ ಪಡೆದುಕೊಳ್ಳುವ ಕೆಲಸವೇ ಇಡೀ ಪಠ್ಯಯೋಜನೆಯ ಕೆಲಸವನ್ನು ಸವಾಲಿನದ್ದು ಎನಿಸುವ ಹಾಗೆ ಮಾಡಿಬಿಡುತ್ತದೆ.

**ಪ್ರಗತಿಯ ಪರಿಶೀಲನೆ – 1**

1. *ಶಾಲೆಯ ಪರಿಸರದಲ್ಲಿ ಭಾಷೆಯನ್ನು ಕಲಿಯುವುದಕ್ಕಿಂತ ಮನೆಯ ಪರಿಸರದಲ್ಲಿ ಭಾಷೆಯನ್ನು ಕಲಿಯುವ ಅವಕಾಶಗಳು ____*
   *ಎ. ವಿರಳ*
   *ಬಿ. ವ್ಯತ್ಯಾಸವೇನಿಲ್ಲ*
   *ಸಿ. ಹೇರಳ*
   *ಡಿ. ಸಾಕಾಗದು*

2. *ಒಂದು ಮಗುವು ಪರಿಸರದ ಸಹಾಯದಿಂದ ತನಗೆ ಬೇಕಾದಂತೆ ತನ್ನ ಜ್ಞಾನಭಂಡಾರವನ್ನು ತಾನೇ ಕಟ್ಟಿಕೊಳ್ಳಬಲ್ಲದು. ಈ ಮಾತನ್ನು ಉದಾಹರಣೆಗಳೊಂದಿಗೆ ಹಾಗೂ ನೀವು ಮಕ್ಕಳನ್ನು ನೋಡಿ ಗಮನಿಸಿರಬಹುದಾದ ಹಿನ್ನೆಲೆಯಲ್ಲಿ ವಿಸ್ತರಿಸಿ ಬರೆಯಿರಿ.*

   ....................................................................................................................................

   ....................................................................................................................................

   ....................................................................................................................................

3. *ಭಾಷಾ ಬೋಧನೆಯ ವಿಷಯದಲ್ಲಿ ಪಠ್ಯಯೋಜನೆಗೆ ಅಷ್ಟೊಂದು ಮಹತ್ವವಿರುವುದಕ್ಕೆ ಕಾರಣವೇನು?*

   ....................................................................................................................................

   ....................................................................................................................................

   ....................................................................................................................................

## 8.3 ಪಠ್ಯಯೋಜನೆ ಎಂದರೇನು?

ತರಗತಿಯ ಹಿನ್ನೆಲೆಯಿಟ್ಟುಕೊಂಡು ಪಠ್ಯಯೋಜನೆ ಎಂದರೇನು ಎಂಬ ಬಗ್ಗೆ ತಿಳಿದುಕೊಳ್ಳೋಣ. ರಾಜಸ್ಥಾನದ ಕೊಟ್ಡಾ ಎಂಬ ಗ್ರಾಮೀಣ ಶಾಲೆಯಲ್ಲಿ ಮಹಿಮಾ ಹೆಸರಿನ ಶಿಕ್ಷಕಿಯು ಐದನೆಯ ತರಗತಿಗೆ ಬೋಧಿಸಲು ಆಯ್ಕೆಯಾದ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸೋಣ. ತರಗತಿಯ ವಿದ್ಯಾರ್ಥಿಗಳ ಸಂಖ್ಯೆ 25. ಪಾಠ 16 – ಜಪಾನ್‌ನ ಸಂಸ್ಕೃತಿ ಮತ್ತು ಉತ್ಸವಗಳು ಎಂಬುದು (ಓಅಇಖಖಿ) ಆಕೆಯ ಆಯ್ಕೆಯ ವಿಷಯವಾಗಿತ್ತು. ಪಾಠವನ್ನು ಗಟ್ಟಿಯಾಗಿ ಓದುವುದರ ಮೂಲಕ ಆಕೆ ತರಗತಿಯನ್ನು ಪ್ರಾರಂಭಿಸಿದರು. ಆಕೆ ಓದುತ್ತಿರುವಾಗ ಮಕ್ಕಳು ಬೆರಳುಗಳಿಂದ ಪಠ್ಯವನ್ನು ಅನುಸರಿಸುತ್ತಾ ಇದ್ದರೂ, ನಿಜಕ್ಕೂ ಸಾಲುಗಳ ಮೇಲೆ ಅವರ ಗಮನ ಇರಲೇಇಲ್ಲ. ಎರಡು ಪುಟದಷ್ಟು ಗಟ್ಟಿಯಾಗಿ ಓದಿದ ಮೇಲೆ ಶಿಕ್ಷಕಿ ಓದುವುದನ್ನು ನಿಲ್ಲಿಸಿ ಜಪಾನಿನ ಬಗ್ಗೆ ವಿವರಿಸಲು ಪ್ರಾರಂಭಿಸಿದರು. ಮಕ್ಕಳು ಗಂಭಿರಮುಖಭಾವದಿಂದ, ಏನೂ ಅರ್ಥವಾಗದವರಂತೆ ಆಕೆಯನ್ನೇ ನೋಡುತ್ತಿದ್ದರು.

ಅದರ ಕಡೆಗೆ ಗಮನವೇ ಇರದಂತೆ ಆಕೆ ಓದುವುದನ್ನೇ ಮುಂದುವರೆಸಿದರು. ಜಪಾನಿನ ಬಗ್ಗೆ ಒಂದಷ್ಟು ಪರಿಚಯ ಮಾಡಿಸಿದ ಮೇಲೆ ಉಳಿದ ಪಠ್ಯವನ್ನೂ ಗಟ್ಟಿಯಾಗಿ ಓದಿ ಮುಗಿಸಿದರು. ಮಕ್ಕಳಿಂದ ಯಾವ ಚಟುವಟಿಕೆಯನ್ನೂ ಮಾಡಿಸಲಿಲ್ಲ. ಮಕ್ಕಳು ಕುಳಿತಲ್ಲಿಯೇ ಕುಳಿತಿದ್ದರು. ಕೆಲವರು ಚಿತ್ರಬಿಡಿಸುತ್ತ ಕುಳಿತಿದ್ದರೆ, ಇನ್ನು ಕೆಲವರು ಪುಟಗಳ ಮೇಲಿನ ಹೂವಿನ ಚಿತ್ರಬಿಡಿಸುತ್ತ, ಮತ್ತೆ ಕೆಲವರು ಮತ್ತೇನನ್ನೋ ಮಾಡುತ್ತ ಕುಳಿತಿದ್ದರು.

ಆ ರೀತಿ ಇಡೀ ಪಾಠವನ್ನು ಓದಿದ ಮೇಲೆ ಎದ್ದು, ಕಪ್ಪುಹಲಗೆಯ ಮೇಲೆ ಕಠಿಣಪದಗಳನ್ನೂ, ಅವುಗಳ ಅರ್ಥವನ್ನೂ ಬರೆದಾದ ಮೇಲೆ, ಮಕ್ಕಳು ಅದನ್ನೇ ಬರೆದುಕೊಂಡರು. ಅಲ್ಲಿಂದ ಮುಂದೆ ಮೂರನೆಯ ದಿನದಂದು ಘಟಕ (ಯುನಿಟ್) ಪರೀಕ್ಷೆ ಇರುತ್ತದೆಂದು ಹಾಗೂ ಪರೀಕ್ಷೆಯಲ್ಲಿ ಪಾಸಾಗುವುದಿದ್ದರೆ, ಬರೆಸಿದ ಕಠಿಣಪದಗಳು, ಅವುಗಳ ಅರ್ಥಗಳನ್ನು ಸರಿಯಾಗಿ ಕಲಿತು ಬರಬೇಕು ಅಂದು ಘೋಷಿಸಿದ ಶಿಕ್ಷಕಿಯು ತರಗತಿಯಿಂದ ತೆರಳಿದರು.

**ಪ್ರಗತಿಯ ಪರಿಶೀಲನೆ – 2**

*1. ಮಹಿಮಾ ಅವರ ಬೋಧನಾ ಪದ್ಧತಿಯನ್ನು ಈ ಕೆಳಗಿನ ಲಕ್ಷಣಗಳ ಆಧಾರದ ಮೇಲೆ ವಿಶ್ಲೇಷಿಸಿ, 10ಕ್ಕೆ ಎಷ್ಟು ಅಂಕ ಕೊಡಬಹುದೆಂದು ನಿರ್ಧರಿಸಿ.*

- *ತರಗತಿಯಲ್ಲಿ ಭಾಗವಹಿಸುವಿಕೆ*
- *ವಿದ್ಯಾರ್ಥಿಕೇಂದ್ರಿತ ಬೋಧನೆ*
- *ಪಠ್ಯವನ್ನು ಸಂದರ್ಭಕ್ಕೆ ಹೋಲಿಸುವಿಕೆ*
- *ಬೋಧನಾ ತಯಾರಿ*
- *ವಿಷಯವನ್ನು ಅರ್ಥಮಾಡಿಕೊಂಡಿರುವುದು*
- *ಮಕ್ಕಳ ಕಲಿಕೆಗೆ ಕೊಟ್ಟ ಅವಕಾಶ*

## 8.4 ಪಠ್ಯಯೋಜನೆಯ ಅಂಶಗಳು

ಶಿಕ್ಷಕರೊಬ್ಬರು ತಮ್ಮ ಪಠ್ಯಯೋಜನೆಯು ಪರಿಣಾಮಕಾರಿಯಾಗಿರಲು ಮಾಡಿದ ಕೆಲಸಗಳ ಬಗ್ಗೆ ನೋಡೋಣ.

1. ಏನನ್ನು ಬೋಧಿಸಬೇಕು
2. ಬೋಧಿಸಲು ಆಗಬೇಕಾದ ಸ್ವಯಂ–ತಯಾರಿ
3. ಪಠ್ಯವನ್ನು ಬೋಧಿಸುವುದು ಹೇಗೆ
4. ಯಾವ ಬಗೆಯ ಪಠ್ಯಸಾಮಗ್ರಿಗಳು ಬೇಕಾಗುತ್ತವೆ
5. ವಿದ್ಯಾರ್ಥಿಗಳು ಕಲಿತರೇ ಇಲ್ಲವೇ ಎಂಬುದನ್ನು ಗೊತ್ತುಮಾಡಿಕೊಳ್ಳುವುದು ಹೇಗೆ
6. ಮಾಡಿದ ಪಾಠ ಮಕ್ಕಳಿಗೆ ಅರ್ಥವಾಗಿಲ್ಲದಿದ್ದರೆ, ಪಠ್ಯಯೋಜನೆಯ ವಿಫಲತೆ ಕಾಣಿಸಿದರೆ, ಅದನ್ನು ಸುಧಾರಿಸಲು ಮಾಡಬೇಕಾದ ಪರ್ಯಾಯ ವ್ಯವಸ್ಥೆ ಏನು?

ಇದು ಕೇವಲ ಪಠ್ಯಯೋಜನೆಯ ಒಂದು ಅಂದಾಜು ಮಾತ್ರ. ಇದರ ಹೊರತಾಗಿ ಪರಿಣಾಮಕಾರಿಯಾಗಿ ಇದಕ್ಕೆ ಸೇರಿಸುವುದು ಏನಾದರೂ ಇದೆ ಎಂದು ನಿಮಗೆ ಅನ್ನಿಸುತ್ತದೆಯೇ? ಹಾಗಿದ್ದರೆ, ನಿಮ್ಮ ಮನಸ್ಸಿಗೆ ಬಂದ ಕೆಲವನ್ನು ವಿವರಣೆಯ ಜೊತೆಗೆ ಇಲ್ಲಿ ಸೇರಿಸಿ.

## 8.4.1 ಏನನ್ನು ಬೋಧಿಸಬೇಕು?

ಒಂದು ನಿರ್ದಿಷ್ಟ ವಯೋಮಿತಿಯ ಮಕ್ಕಳು ಏನನ್ನು, ಎಷ್ಟು ಪ್ರಮಣದಲ್ಲಿ ಕಲಿಯಲು ಇಚ್ಛಿಸುತ್ತಾರೆ ಎಂಬುದನ್ನು ಗುರುತುಮಾಡಿಕೊಂಡು, ಪಠ್ಯ ರಚಿಸುವವರು ಪಾಠಗಳನ್ನು ಬರೆಯುತ್ತಾರೆ. ಪಠ್ಯದ ವಿಷಯದ ಆಯ್ಕೆ ನಮ್ಮ ಕೈಯಲ್ಲಿಲ್ಲವಾದರೂ, ಏನನ್ನು, ಎಷ್ಟನ್ನು ಹಾಗೂ ಹೇಗೆ ಕಲಿಸಬೇಕು ಎಂಬುದನ್ನು ನಾವೇ ಖಂಡಿತ ನಿರ್ಧರಿಸಬಹುದು. ಮಕ್ಕಳ ಸ್ಪರ್ಧಾತ್ಮಕ ಸಾಮರ್ಥ್ಯದ ಅರಿವು ಸಹ ನಮಗಿದ್ದರೆ, ಹೇಗೆ ಮತ್ತು ಎಷ್ಟನ್ನು ಕಲಿಸಬೇಕು ಎಂದು ತಿಳಿದುಬಿಡುತ್ತದೆ. ಕೆಳಪ್ರಾಥಮಿಕ ಹಂತದಲ್ಲಿ, ತರಗತಿಗೆ ಸೂಕ್ತವಾದ ಪಠ್ಯಪುಸ್ತಕವನ್ನು ಆಯ್ಕೆಮಾಡಿಕೊಳ್ಳುವ ಜವಾಬ್ದಾರಿ ಶಿಕ್ಷಕರಿಗಿರುತ್ತದೆ. ಲಭ್ಯವಿರುವ ಆಯ್ದ ಹತ್ತಾರು ಪುಸ್ತಕಗಳ ನಡುವೆ ಅವರು ಈ ಆಯ್ಕೆಯನ್ನು ಮಾಡಬೇಕಾಗಿರುತ್ತದೆ. ನಮ್ಮ ಮಕ್ಕಳಿಗೆ ಯಾವುದನ್ನು ಏಕೆ ಕಲಿಸಬೇಕು ಎಂಬ ತಿಳಿವಳಿಕೆ ಶಿಕ್ಷಕರಿಗೆ ಇದ್ದರೆ ಪುಸ್ತಕದ ಆಯ್ಕೆ ಸುಲಭವಾಗುತ್ತದೆ.

ಪಠ್ಯದಲ್ಲಿ 20 ಪಾಠಗಳು ಇದ್ದರೆ, ಎಲ್ಲಾ 20 ಪಾಠಗಳನ್ನೂ ಕಲಿಸಬೇಕು ಎಂದೇನೂ ಇರುವುದಿಲ್ಲ. ಕೆಲವನ್ನು ಬೋಧಿಸಿ, ಪೂರಕ ಚಟುವಟಿಕೆಗಳನ್ನು ಮಾಡಲು, ಓದಲು ತಿಳಿಸಬಹುದು. 20 ಪಾಠಗಳ ಪೈಕಿ 12ನ್ನಷ್ಟೇ ನಾವು ಬೋಧಿಸಬೇಕು ಎಂದಿರುವಾಗ, ಯಾವ ಆಧಾರದ ಮೇಲೆ ಆ ಸೂಚನೆಯನ್ನು ಕೊಡಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಪ್ರಾರಂಭದಿಂದಲೇ ಮಕ್ಕಳ ಪ್ರಗತಿಗೆ ಪೂರವಾದ 12 ಪಾಠಗಳು ಯಾವುದು ಎಂದು ತಿಳಿದುಕೊಂಡು ಪರಿಣಾಮಕಾರಿ ಬೋಧನೆಯ ಯೋಜನೆಯನ್ನು ನಾವು ರೂಪಿಸಿಕೊಳ್ಳದಿದ್ದರೆ, 12ಪಾಠಗಳನ್ನು ಕೂಡಾ ಮುಗಿಸಲು ಆಗುವುದಿಲ್ಲ. ಬೋಧನಾ ನಂತರದ ಪರಣಾಮಗಳ ಅಂದಾಜು ಸಹ ಇರಬೇಕಾಗುತ್ತದೆ. ಮಕ್ಕಳ ಕಲಿಕೆಯಲ್ಲಿ ಪ್ರಗತಿ ಸಾಧಿಸುವ, ಅಪೇಕ್ಷಿತ ಬೆಳವಣಿಗೆಗೆ ಪೂರವಾಗುವ ಯಾವುದನ್ನು ನೀವು ಬೋಧಿಸಲಿದ್ದೀರಿ ಎಂಬುದರ ಸ್ಪಷ್ಟತೆ ಇರಲೇಬೇಕಾಗುತ್ತದೆ.

## 8.4.2 ಯಾರಿಗೆ ಬೋಧಿಸಬೇಕು?

ವಿದ್ಯಾರ್ಥಿಗಳ ಸ್ವಭಾವ ಹಾಗೂ ಕಲಿಕಾ ಸಾಮರ್ಥ್ಯದ ಬಗ್ಗೆ ಚೆನ್ನಾಗಿ ತಿಳಿದಿದ್ದರೆ, ಬೋಧನಾ ಯೋಜನೆಯನ್ನು ಹೇಗೆ ತಯಾರಿಸಿಕೊಳ್ಳಬೇಕೆಂಬುದು ಗೊತ್ತಾಗಿಬಿಡುತ್ತದೆ. ಈಗಾಗಲೇ ಮಗುವಿಗೆ ಏನೆಲ್ಲ ಗೊತ್ತಿದೆ, ಹಾಗೂ ಏನು ಗೊತ್ತಾಗಬೇಕಿರುವುದು ಏನು ಎಂಬುದನ್ನು ತಿಳಿದುಕೊಳ್ಳುವುದು ತುಂಬಾ ಮುಖ್ಯ. ಅವರಿಗೆ ಈಗಾಗಲೇ ಗೊತ್ತಿರುವುದನ್ನು ಅಥವಾ ಗೊತ್ತೇ ಇಲ್ಲದಿರುವುದನ್ನು, ಯಾವುದನ್ನು ಬೋಧಿಸಿದರೂ ಮಕ್ಕಳು ಖಾಲಿತನ ಅನುಭವಿಸುವ ಹಾಗೂ ಏನನ್ನೂ ಕಲಿಯದೇ ಉಳಿದುಬಿಡುವ ಸಾಧ್ಯತೆಗಳು ಇರುತ್ತವೆ. ಅಲ್ಲಿ ಯಾವ ಕಲಿಕೆಯೂ ಸಾಧ್ಯವಾಗುವುದೇ ಇಲ್ಲ. ಬೋಧಿಸಬೇಕಾದ ವಿಷಯಗಳ ಬಗ್ಗೆ ನಿಖರಜ್ಞಾನವನ್ನಿಟ್ಟುಕೊಂಡೇ ಮಕ್ಕಳಿಗೆ ಕಲಿಸಲು ಹೊರಡುವುದು ಉತ್ತಮ ವಿಧಾನ. ಇಲ್ಲದೇ ಹೋದರೆ, ಯಾವೊಂದೂ ರಚನಾತ್ಮಕ ಚಟುವಟಿಕೆಗಳಿಲ್ಲದೇ, ಏನನ್ನು ಕಲಿಸಬೇಕೆಂದುಕೊಂಡಿರುವೆವೋ ಅದನ್ನು ಅರ್ಥಮಾಡಿಸುವುದರಲ್ಲಿಯೇ ಸಮಯ ಕಳೆದುಹೋಗಿಬಿಡುವ ಅಪಾಯಗಳು ಇವೆ. ಎರಡನೆಯದಾಗಿ, ಬೋಧಿಸಬೇಕೆಂದಿರುವ ಪಠ್ಯದ ಬಗ್ಗೆ ಮಕ್ಕಳಿಗೆ ಈಗಾಗಲೇ ಗೊತ್ತಿರುವುದು ಏನು ಎನ್ನುವುದು ಶಿಕ್ಷಕರಿಗೆ ತಿಳಿದಿರಬೇಕು. ಉದಾಹರಣೆಗೆ, ಪಾಠವು ದೀಪಾವಳಿ ಆಚರಣೆಯ ಬಗ್ಗೆ ಇದ್ದರೆ, ದೀಪಾವಳಿ ಕುರಿತು ಮಗುವಿಗೆ ಏನು ಗೊತ್ತಿದೆ ಎಂಬುದನ್ನು ಗೊತ್ತು ಮಾಡಿಕೊಂಡು ನಂತರ ಬಳಸಲಾಗಿರುವ ಭಾಷೆಯ ಸಂಕೀರ್ಣತೆಯನ್ನು ವಿವರಿಸಬಹುದು.

ಜೊತೆಗೆ ಮಗುವು ಕಲಿಯುತ್ತಿರುವ ಭಾಷೆಯು ಪ್ರಥಮ, ದ್ವಿತೀಯ ಅಥವಾ ತೃತೀಯ ಯಾವುದು ಎಂಬುದನ್ನು ತಿಳಿದುಕೊಂಡಿರಬೇಕು. ಉದಾಹರಣೆಗೆ ಮನೆಯಲ್ಲಿಯೂ, ಹೊರಗೂ ಕನ್ನಡವೇ ಮಾತೃಭಾಷೆಯಾಗಿರುವ, ಅದನ್ನೆ ಮಾತಾಡುವ ಒಬ್ಬ ವಿದ್ಯಾರ್ಥಿಯು ಶಾಲೆಯಲ್ಲಿ ಹಿಂದಿ ಭಾಷೆಯನ್ನು ಪ್ರಥಮ ಭಾಷೆಯಾಗಿ ಆಯ್ಕೆಮಾಡಿಕೊಂಡರೆ, ಶಿಕ್ಷಕರು ಹಾಗೆ ದ್ವಿತೀಯ ಅಥವಾ ತೃತೀಯ ಆಯ್ಕೆಯಾಗಿರಬಹುದಾದ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡಿರುವ ವಿದ್ಯಾರ್ಥಿಯು ಅವನೊಬ್ಬನೇ ಇದ್ದಾನೆಯೇ, ಹಾಗಿದ್ದರೆ ಯಾವ ವಿಶೇಷ ಗಮನವನ್ನು ಅವನಿಗೆ ಕೊಡಬಹುದು ಎಂಬುದನ್ನೆಲ್ಲ ಗುರುತು ಮಾಡಿಕೊಳ್ಳಬೇಕಾಗುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಅಳವಡಿಸಿಕೊಳ್ಳಬಹುದಾದ ಪಠ್ಯದ ಬಗ್ಗೆಯೂ ವಿಶೇಷ ಮುತುವರ್ಜಿ ವಹಿಸಬೇಕಾಗುತ್ತದೆ. ಯಾಕೆಂದರೆ ಇಂತಹ ವಿದ್ಯಾರ್ಥಿಗಳು ಇತರೆ ವಿದ್ಯಾರ್ಥಿಗಳಷ್ಟೇ ಕಲಿಯುವುದರಲ್ಲಿ ಚುರುಕಾಗಿರುತ್ತಾರೆ. ಈಗಾಗಲೇ ವಿವರಿಸಿರುವ ಹಾಗೆ, ಮಕ್ಕಳು ಮನೆಯಲ್ಲಿ ಮಾತಾಡುವ ಭಾಷೆಯನ್ನೇ ಬಳಸುವುದನ್ನು ಉತ್ತೇಜಿಸುವುದು ಉತ್ತಮ.

Notes

### 8.4.3 ಮೌಲ್ಯಮಾಪನದ ಕೌಶಲಗಳು

ಮಗುವಿನ ಕಲಿಕೆಯ ಬಗ್ಗೆ ಸತತವಾದ ಮೌಲ್ಯಮಾಪನದ ಅಗತ್ಯದ ಕುರಿತು ಶಿಕ್ಷಕರಿಗೆ ಗಮನ ಇದ್ದೇಇರಬೇಕಾಗುತ್ತದೆ. ಇದರಿಂದ ತರಗತಿಗಳಲ್ಲಿ ಅವರ ಭಾಗವಹಿಸುವಿಕೆ, ಪಾಠಗಳಿಗೆ ಸ್ಪಂದಿಸುವ ರೀತಿ, ಕುತೂಹಲದ ಅರಿವು, ಪಠ್ಯದಲ್ಲಿ ಆಸಕ್ತಿ ಇತ್ಯಾದಿಗಳ ಬಗ್ಗೆ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ತರಗತಿಯಲ್ಲಿ ಬೋಧನಾಕ್ರಮವು ಪರಿಣಾಮಕಾರಿಯಾಗಿದೆಯೋ ಇಲ್ಲವೋ ಎಂಬುದರ ಬಗ್ಗೆ ನಾವು ಧನಾತ್ಮಕ ಆಸಕ್ತಿ ತಾಳದೇ ಹೋದರೆ, ಅಲ್ಲಿ ಒಂದೆಡೆ ತಡೆದು, ಬೋಧನಾ ಪಠ್ಯವನ್ನು ಪರಿಷ್ಕರಿಸಿಕೊಳ್ಳುವ, ಆಸಕ್ತಿಕರವನ್ನಾಗಿಸಿಕೊಳ್ಳುವ ಹೊಣೆಗಾರಿಕೆ ಶಿಕ್ಷಕರದ್ದು. ಇದರಿಂದ ಭಾಗವಹಿಸುವಿಕೆ, ಪ್ರತಿಸ್ಪಂದಿಸುವಿಕೆ, ಪರಿಣಾಮಕಾರಿ ಕಲಿಕೆ, ಬೋಧನೆ ಎಲ್ಲವಕ್ಕೂ ಚೇತನ ತುಂಬಬಹುದು. ಇದಕ್ಕಾಗಿ ಸತತ ಮೌಲ್ಯಮಾಪನದ, ಪರಿಶೀಲನೆಯ ಅಗತ್ಯವಿದೆ. ಕೆಲವೊಮ್ಮೆ, ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗುವಂತೆ ಮಾಡುವ ಉದ್ದೇಶ ಶಿಕ್ಷಕರಿಗಿದ್ದರೂ, ವಾಸ್ತವದಲ್ಲಿ ಆ ರೀತಿ ಮಾಡುವುದು ಸಾಧ್ಯವಾಗಿರುವುದಿಲ್ಲ. ಮೂಮುಚಿತವಾಗಿಯೇ ಪಠ್ಯಯೋಜನೆಯನ್ನು ಮಾಡಿಕೊಳ್ಳದೇ ಹೋದರೆ ಈ ರೀತಿಯ ಸಮಸ್ಯೆಗಳು ಬರುತ್ತವೆ. ಮಾಡಿಮುಗಿಸಬೇಕು ಎಂಬ ಒಂದೇ ಕಾರಣಕ್ಕೆ ಪಠ್ಯಯೋಜನೆಗಳನ್ನು ರಚಿಸಿಕೊಳ್ಳುವ ಧಾವಂತಕ್ಕೆ ಬೀಳದೇ, ಮಾಡಿರುವ ಪಾಠವು ಎಷ್ಟರಮಟ್ಟಿಗೆ ವಿದ್ಯಾರ್ಥಿಗಳಿಗೆ ಅರ್ಥವಾಗಿದೆ, ಎಷ್ಟನ್ನು ಪರಿಣಾಮಕಾರಿಯಾಗಿ ಕಲಿತಿದ್ದಾರೆ, ಪಠ್ಯಯೋಜನೆಯು ನಿಜಕ್ಕೂ ಉಪಯೋಗವಾಗುವಂತಿದೆಯೇ ಎಂಬುದರ ಕಡೆಗೆ ಲಕ್ಷ್ಯವಹಿಸಿದರೆ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಬಹುದು. ಸತತ ಮೌಲ್ಯಮಾಪನದಿಂದ ಇದನ್ನು ಸಾಧಿಸಬಹುದು. ಆದ್ದರಿಂದ, ಪಠ್ಯಯೋಜನೆಯು ಸಾಕಷ್ಟು ಬದಲಾವಣೆಗಳಿಗೆ, ಧನಾತ್ಮಕ ತಿದ್ದುಪಡಿಗಳಿಗೆ ಒಗ್ಗಿಕೊಳ್ಳುವ ರೀತಿಯಲ್ಲಿ ರಚಿತವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

### 8.4.4 ಹೇಗೆ ಬೋಧಿಸಬೇಕು

ಯೋಜನೆಯನ್ನು ಸಿದ್ಧಪಡಿಸಬೇಕಾದರೆ, ತರಗತಿಯ ಪರಿಸರದಲ್ಲಿ, ವಿದ್ಯಾರ್ಥಿಗಳೊಂದಿಗೆ ಬೋಧನೆ–ಕಲಿಕೆಗಳು ಸಾಗಬೇಕಾದ ನಿರ್ದಿಷ್ಟ ವಿಧಾನದ ಬಗ್ಗೆ ತಿಳಿಸವಳಿಕೆ ಇರಬೇಕಾಗುತ್ತದೆ. ಉದಾಹರಣೆಗೆ, ಯೋಜನೆಯ ಪ್ರಕಾರ 5ರಿಂದ 10 ವಿದ್ಯಾರ್ಥಿಗಳ ಗುಂಪುಗಳನ್ನು ಮಾಡಿಕೊಳ್ಳಬೇಕೇ ಅಥವಾ ಕಾರ್ಯಸೂಚಿಯ ಪ್ರಕಾರ ಮುಂದುವರಿಯಬೇಕೇ? ಉತ್ತಮ ಕಲಿಕೆಗಾಗಿ ತರಗತಿಯು ನಿಗದಿಪಡಿಸಿದ ಸಮಯಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡಿದ್ದರಿಂದ ಅಥವಾ ಶಿಕ್ಷಕರೇ ಬೋಧನೆಗೆ ಹೆಚ್ಚು ಸಮಯ ತೆಗೆದುಕೊಂಡ ಕಾರಣದಿಂದ ಯೋಜನೆಯ ಪ್ರಕಾರವೇ ಬೋಧನೆಯನ್ನು ಕೈಗೊಳ್ಳದ ಸಾಧ್ಯತೆಯೂ ಇರಬಹುದು. ಅಂತಹ ಸಂದರ್ಭದಲ್ಲಿ, ಮುಂದೆ ನಿಯೋಜಿಸಲ್ಪಟ್ಟ ತರಗತಿಯನ್ನು ಹೆಚ್ಚುವರಿ ತರಗತಿಯಾಗಿ ಬದಲಾಯಿಸಿಕೊಂಡು, ಯೋಜಿತ ಪಠ್ಯವನ್ನು ನಿಗದಿತ ಸಮಯಮಿತಿಯಲ್ಲಿಯೇ ಮುಗಿಸುವ ಪ್ರಯತ್ನ ಮಾಡಬೇಕು.

ವಿಷಯಬೋಧನೆಯ ಜೊತೆಗೆ ಇನ್ನೂ ಹಲವಾರು ತರಗತಿ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದರಿಂದಲೂ ಕ್ರಿಯಾಶೀಲವಾಗಿ ಬೋಧನೆ ಮಾಡಬಹುದು. ಹಾಗಿದ್ದಾಗ ಕಲಿಸುವವರಿಗೇ ವಿಷಯದ ಬಗ್ಗೆ ನಿಖರವಾದ ಮಾಹಿತಿ, ಜ್ಞಾನಗಳು ಇರಬೇಕಾದುದು ಅಗತ್ಯ ಹಾಗೂ ಅದನ್ನು ವ್ಯವಸ್ಥಿತ ಯೋಜನೆಯಡಿ ಮಕ್ಕಳ ವೈಯಕ್ತಿಕ ಹಾಗೂ ಸಾಮೂಹಿಕ ಎರಡೂ ನೆಲೆಗಳಲ್ಲಿ ಅಳವಡಿಸಿಕೊಂಡು ಬೋಧಿಸಲು ಪ್ರಯತ್ನಿಸಬಹುದು. ಕಠಿಣವೆನಿಸಿದರೂ ಕೂಡಾ, ಆಕ್ಷಣದ ಬದಲಾವಣೆಗಳಿಗೆ ಒಗ್ಗುವಂತೆ ಬೋಧನಾಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದೇ ಆದಲ್ಲಿ, ಖಂಡಿತ ಪರಿಣಾಮಕಾರಿಯಾಗಿ ವಿಷಯಗಳನ್ನು ಕಲಿಸಬಹುದು.

ಬೋಧನೆಯ ಹೊತ್ತಿಗೆ ಅವಶ್ಯಕ ಸಾಮಗ್ರಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು ಉತ್ತಮ. ಅವುಗಳಲ್ಲಿ ಮುಖ್ಯವಾದವೆಂದರೆ, ಬೋಧನಾ ಪಠ್ಯಯೋಜನೆ, ಚಟುವಟಿಕೆ ಪ್ರತಿಗಳು (ವರ್ಕ್‌ಶೀಟ್), ನಕಾಶೆಗಳು, ಚಿತ್ರಗಳು ಹಾಗೂ ವರ್ಕ್‌ಬುಕ್. ಭಾಷಾಸಾಮಗ್ರಿಗಳು ಮಹತ್ವದ ಪಾತ್ರ ವಹಿಸುವುದರಿಂದ ಅವುಗಳನ್ನು ಕೂಡಾ ಹೊಂದಿಸಿಟ್ಟುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಶಬ್ದಚಿತ್ರಗಳು ಅಥವಾ ವರ್ಣಮಾಲೆಯ ಪಟ – ಇವು ಚಿಕ್ಕವಾದರೂ ಕೆಲವೊಮ್ಮೆ ಅಪಾರವಾಗಿ ಉಪಯೋಗಕ್ಕೆ ಬರಬಲ್ಲ ವಸ್ತುಗಳು. ಈ ಸಾಮಗ್ರಿಗಳನ್ನು ಬದಲಾಗಬಹುದಾದ ತರಗತಿಗಳು, ಕ್ರಿಯಾಶೀಲ ಕೆಲಸಗಳಿಗೆ ಮುಂತಾದುವಕ್ಕೆ ಬಹಳಷ್ಟು ಬೇರೆಬೇರೆ ಕೆಲಸಗಳಿಗೂ ಉಪಯೋಗಿಸಿಕೊಳ್ಳುವ ರೀತಿಯಲ್ಲಿ ಸಿದ್ಧಪಡಿಸಿ ಇಟ್ಟುಕೊಳ್ಳುವುದು ಒಳ್ಳೆಯ ಅಭ್ಯಾಸ. ಒಟ್ಟಾರೆಯಾಗಿ ಹಾಗೂ ಬಹುಮುಖ್ಯವಾಗಿ ಯೋಜಿತರೀತಿಯಲ್ಲಿ ಸಿದ್ಧವಾಧ ಪಠ್ಯ ಇದ್ದುಬಿಟ್ಟರೆ ಅದರಷ್ಟು ಉತ್ತಮ ಸಾಮಗ್ರಿ ಬೇರಾವುದೂ ಇಲ್ಲ ಎನ್ನಬಹುದು.

Notes

**ಪ್ರಗತಿಯ ಪರಿಶೀಲನೆ – 3**

*1. ಮಗುವಿನ ಭಾಷಾಕಲಿಕೆಯ ಪ್ರಯಾಣದಲ್ಲಿ ಪ್ರಾಥಮಿಕ ಹಂತದ ಗುರುವೆಂದರೆ*
*ಎ. ಶಿಕ್ಷಕರು*
*ಬಿ. ಪಾಲಕರು*
*ಸಿ. ಸ್ವತಃ ಮಗುವೇ*
*ಡಿ. ಪಠ್ಯ ತಯಾರಿಸುವವರು*

*2. ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಷ್ಟೇ ಇರಬೇಕು ಹೀಗೆಯೇ ಇರಬೇಕು ಎಂಬುದನ್ನು ತಿಳಿದುಕೊಳ್ಳುವುದು ನಿಮಗೆಷ್ಟು ಮುಖ್ಯವಾಗುತ್ತದೆ ?*

..................................................................................................................

..................................................................................................................

..................................................................................................................

*3. 'ಪಠ್ಯಯೋಜನೆಯಲ್ಲಿ ಮುಕ್ತತೆ'ಯಿಂದ ಆಗುವ ಪರಿಣಾಮಗಳೇನು?*

..................................................................................................................

..................................................................................................................

..................................................................................................................

*4. ಮಕ್ಕಳಿಗೆ ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿನ ಮಕ್ಕಳಿಗೆ ಅವರ ಕಲಿಕೆಗನುಸಾರವಾಗಿಯೇ ಭಾಷಾ ಬೋಧನೆಯನ್ನು ಏಕೆ ಮಾಡಬೇಕು?*

..................................................................................................................

..................................................................................................................

..................................................................................................................

## 8.5 ಪಠ್ಯವನ್ನು ಎಷ್ಟು ಮುಂಚಿತವಾಗಿ ಯೋಜಿಸಬೇಕು

ಹೆಚ್ಚಿನ ಸಮಯದಲ್ಲಿ, ಶಿಕ್ಷಕರು ಹೆಚ್ಚು ವಿಸ್ತೃತವಾದ ಪಠ್ಯಬೋಧನೆಯನ್ನು ಮಾಡುವುದರ ಕಡೆಗೆ ಲಕ್ಷ್ಯವಹಿಸಬೇಕು ಎಂಬುದು ಶಾಲೆಗಳ ನಿರೀಕ್ಷೆಯಾಗಿರುತ್ತದೆ. ಆಮೂಲಕ, ತಮ್ಮ ವಾರ್ಷಿ ಬೋಧನಾ ಯೋಜನೆಯನ್ನು ನಿರ್ದಿಷ್ಟ ಸಮಯಮಿತಿಯೊಳಗೆ ಮಾಡಿಮುಗಿಸಬೇಕೆಂಬ ಅಥವಾ ಶಾಲೆಯ ಶೈಕ್ಷಣಿಕ ಅವಧಿಯೊಳಗೆ ಮುಗಿಸಿಕೊಟ್ಟು, ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ನಡುವಣ ಬೋಧನಾ–ಕಲಿಕಾ ಪದ್ಧತಿಯ ಪರಿಣಾಮಗಳನ್ನು ಕಂಡುಕೊಳ್ಳುವ ಉದ್ದೇಶ ಹೊಂದಿರುತ್ತವೆ. ಶಿಕ್ಷಕರು ಶ್ರಮವಹಿಸಿ ಕೆಲಸಮಾಡುತ್ತಿದ್ದಾರೆ ಎಂಬುದು ಇದರಿಂದ ಖಚಿತವಾಗಿ ಅನಿಸಿದರೂ, ಬೋಧನಾ ಮಾದರಿಯು ಯೋಜಿಸಿಕೊಂಡಷ್ಟು ಪರಿಣಾಮಕಾರಿಯಲ್ಲ ಎಂಬುದು ತಿಳಿಯುತ್ತದೆ. ಇಂತಹ ಕಡೆ, ಹೆಸರಿಗ ಎಮಾತ್ರ ಮಹತ್ವ ಪಡೆದ ಕಾರಣಕ್ಕೆ ಸಾಪ್ತಾಹಿಕ ಅಥವಾ ದೈನಂದಿನ ಪ್ರಗತಿಯ ವರದಿಗಳನ್ನು ಶಿಕ್ಷಕರು 'ಸಲ್ಲಿಸಬೇಕಾಗಿದೆ' ಎಂಬ ಒಂದೇ ಕಾರಣಕ್ಕೆ ಸಲ್ಲಿಸುವುದು ಅಸಮಂಜಸ ಎನಿಸುತ್ತದೆ. ನಿರಿ ೕಕ್ಷಿತ ಹಾಗೂ ಅಪೇಕ್ಷಿತ ಮಟ್ಟದಲ್ಲಿ ಮಹತ್ವ ಕೊಡದೇ, ಆಯಾ ದಿನದ ತರಗತಿಗೆ ಮಾತ್ರವೇ ಮಹತ್ವ ಕೊಡುವುದರಿಂದ, ಬೋಧನೆಯ ಗುರಿ ಏನೆಂಬುದೇ ಮರೆತು ಹೋಗಿ, ವಾರಪೂರ್ತಿಯ ಬೋಧನೆಯನ್ನು ಕಡೆಗಣಿಸಿದಂತಾಗುತ್ತದೆ. ಇದು ಮಕ್ಕಳ ಮೂಲಭೂತ ಬೆಳವಣಿಗೆಯ ಕಡೆಗೆ ಎಳ್ಳಷ್ಟೂ ಗಮನ ಕೊಡುವುದೇ ಇಲ್ಲ.

Notes

ಪಠ್ಯರಚನಾಕಾರರ ಆಶಯದಂತೆ, ಶಿಕ್ಷಕರುಗಳ ಅಂದಾಜಿನಂತೆ ಯೋಜಿತ ಪಠ್ಯಕ್ರಮವನ್ನು ನಿರ್ದಿಷ್ಟ ಅವಧಿಯೊಳಗೆ ಮಾಡಿಮುಗಿಸಿದ ಭಾವನೆಯಿರುತ್ತದೆ ಅಷ್ಟೇ. ಇದರ ಮತ್ತೊಂದು ಮಿತಿ ಎಂದರೆ, ಮಕ್ಕಳು ಕ್ರಿಯಾಶೀಲತೆಯಿಂದ ಕಲಿಯುವ ಯಾವ ಸನ್ನಿವೇಶವೂ ನಡೆಯದೇ ಇರುವುದು. ಅವರ ಆಲೋಚನೆಗಳಿಗೆ ಅವಕಾಶವೇ ಇರದೇ, ಬೋಧನೆಯು ನೀರಸವಾಗಿಬಿಡುವ ಅಪಾಯವಿರುತ್ತದೆ. ಮಗುವು ಭಾಷೆಯನ್ನು ತನ್ನದೇ ಬಗೆಯಲ್ಲಿ ಕಲಿಯುವ ಅವಕಾಶವಿರುವುದರಿಂದಲೇ ಇದು ಪ್ರಾಥಮಿಕ ಅಗತ್ಯವಾಗಿ ತೋರುತ್ತದೆ.

ಎಷ್ಟು ಕ್ಷಿಪ್ರವಾಗಿ ಒಂದು ಬೋಧನಾ ಪಠ್ಯವನ್ನು ಯೋಜಿಸಬಹುದು? ಇದಕ್ಕೆ ನಿರ್ದಿಷ್ಟ ಉತ್ತರಗಳಿಲ್ಲ. ಏಕೆಂದರೆ ಕಲಿಯುವಿಕೆ ಒಂದು ನಿರಂತರ ಪ್ರಕ್ರಿಯೆ. ಅದರದ್ದೇ ಆದ ಮೈಲಿಗಲ್ಲುಗಳನ್ನು ಹೊಂದಿರುವಂಥದ್ದು. ಶಿಕ್ಷಕರು ಗಮನ ನೀಡಬೇಕಾಗಿರುವ ಅಂಶವೆಂದರೆ, ಮಕ್ಕಳ ಮನೋಸಾಮರ್ಥ್ಯ, ಕುತೂಹಲ, ಅವರ ಭಾಗವಹಿಸುವಿಕೆ, ಸ್ವತಃ ಪಾಲ್ಗೊಳ್ಳುವ ಸ್ವಭಾವ, ಸವಾಲಿನ ಕೆಲಸಗಳನ್ನು ನಿರ್ವಹಿಸುವ ಬಗೆ, ವಿಷಯಜ್ಞಾನ ಇವೆಲ್ಲವೂ ಒಂದೇ ದಾರದಲ್ಲಿ ಜೋಡಿಸಬಹುದಾದ ಹೂವಗಳೇ ಎಂಬುದನ್ನು ಮಾತ್ರ. ಇವುಗಳನ್ನು ಹೊಂದಿರದ ಪಠ್ಯಯೋಜನೆಯು ಪರಿಪೂರ್ಣ ಅನ್ವೇಷಣೆಯ ಕೊರತೆಯನ್ನು ಅನುಭವಿಸಬೇಕಾಗುತ್ತದೆ.

ತರಗತಿಯಲ್ಲಿ ಮಗುವು ತನಗೆ ಕೇಳಬೇಕೆನಿಸಿ ಯಾವುದೇ ಪ್ರಶ್ನೆಯನ್ನು ಕೇಳಿ, ಉತ್ತರವನ್ನು ಕಂಡುಕೊಳ್ಳುವುದಕ್ಕೆ ಮುಕ್ತ ಅವಕಾಶವಿರುವುದನ್ನು ಪಠ್ಯಯೋಜನೆಯು ಧೃಡಪಡಿಸುವಂತಿರಬೇಕು. ತಮ್ಮ ತಮ್ಮ ಗೊಂದಲಗಳನ್ನು, ಸಮಸ್ಯೆಗಳನ್ನು ತಮಗೆ ಬಂದ, ಹೊಳೆದ ರೀತಿಯಲ್ಲಿ ಕೇಳಿ, ಅನಿಸಿದ ವಿಚಾರಗಳನ್ನು ಮುಕ್ತವಾಗಿ ವ್ಯಕ್ತಪಡಿಸಿ, ಪರಿಹಾರವನ್ನು ಸಹ ಕೇಳಿಪಡೆದುಕೊಳ್ಳುವಂತಿರಬೇಕು. ತೀರಾ ಭಿನ್ನವಾಗಿಲ್ಲ ಹೊರತು, ಮಕ್ಕಳು ಸಹ ಮುಕ್ತವಾಗಿ ಪಠ್ಯಯೋಜನೆಯ ಅಗತ್ಯ ಬದಲಾವಣೆಗಳಲ್ಲಿ ಭಾಗವಹಿಸಿ, ಅವರ ಆಲೋಚನಾಕ್ರಮಗಳ ಆಧಾರದ ಮೇಲೆ ಸ್ವಾಗತಾರ್ಹ ಬದಲಾವಣೆಗಳನ್ನು ಮಾಡಿಕೊಳ್ಳುವ ಹಾಗಿದ್ದರೆ ಅಂತಹ ಸನ್ನಿವೇಶಗಳಲ್ಲಿ ಮಕ್ಕಳಿಗೆ ಅಗತ್ಯ ಸ್ವಾತಂತ್ರ್ಯ ಕೊಡುವುದಕ್ಕೆ ಶಿಕ್ಷಕರು ತಯಾರಿರಬೇಕು. ಇಂತಹ ಮಾರ್ಪಾಟುಗಳು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇಬ್ಬರಿಗೂ ಪೂರಕವಾಗಿರಬೇಕು.

ವಿದ್ಯಾರ್ಥಿಯ ವೈಯಕ್ತಿಕ ಭಾಗವಹಿಸುವಿಕೆಗೆ ಕೊಟ್ಟಷ್ಟೇ ಗಮನವನ್ನು ವೈಯಕ್ತಿಕ ಪ್ರೋತ್ಸಾಹಕ್ಕೂ ಕೊಡುವಂತಿರಬೇಕು. ಒಂದು ತಪ್ಪು ಉತ್ತರವನ್ನು ಕೆಂಪುಬಣ್ಣದ ಪೆನ್ನಿನಿಂದ ಗುರುತು ಹಾಕಿಬಿಟ್ಟುಬಿಡುವ ಬದಲು, ಮಗು ಯಾಕೆ ಆ ತಪ್ಪನ್ನು ಮಾಡಿದೆ ಎಂದು ವಿಶ್ಲೇಷಿಸಿಕೊಳ್ಳಬೇಕು. ಇದನ್ನು ತಪ್ಪಿನ ವಿಶ್ಲೇಷಣೆ ಎನ್ನಬಹುದು. ಸಂಪೂರ್ಣ ನಿರ್ಮೂಲನೆ ಮಾಡಿಬಿಡಬೇಕು ಅನ್ನುವುದಕ್ಕೆ ತಪ್ಪುಗಳು ಗಾಯಗಳಲ್ಲ. ಯಾತಕ್ಕಾಗಿ ತಪ್ಪಾಗಿದೆ ಕಂಡುಕೊಂಡು, ಅದನ್ನು ಯೋಗ್ಯ ಪರಿಸರದಲ್ಲಿ, ಪರಿಹರಿಸಿಕೊಳ್ಳಲು ಮಾರ್ಗದರ್ಶನ ಮಾಡಬೇಕಾದುದು ಅಗತ್ಯ. ತಪ್ಪು ಮಾಡುವುದು ಮಗುವಿನ ಸಹಜ ಸ್ವಭಾವ.

**ಪ್ರಗತಿಯ ಪರಿಶೀಲನೆ – 4**

1. ಕೆಳಗಿನ ವಾಕ್ಯವನ್ನು ಪೂರ್ಣಗೊಳಿಸಿ
   ಸಾಮಾನ್ಯವಾಗಿ ________ ನ್ನು ಮಾಡುವ ಕಡೆಗೆ ಹಾಗೂ __________ ಗಳನ್ನು ಮುಗಿಸುವುದರ ಕಡೆಗೆ ಶಿಕ್ಷಕರು ಹೆಚ್ಚಿನ ಮಹತ್ವ ನೀಡುತ್ತಾರೆ.

2. ಈ ಉಪಘಟಕದಲ್ಲಿ ವಿದ್ಯಾರ್ಥಿಕೇಂದ್ರಿತ ಪಠ್ಯಯೋಜನೆಯನ್ನು ತಯಾರಿಸುವಾಗ ಯಾವ ಅಂಶಗಳ ಕಡೆಗೆ ಹೆಚ್ಚು ಗಮನ ನೀಡಬೇಕಾದುದು ಅಗತ್ಯವೆಂಬುದನ್ನು ನೀವು ಕಲಿತಿದ್ದೀರಿ?

   ..........................................................................................................................

   ..........................................................................................................................

   ..........................................................................................................................



Notes

3. ಬೋಧನಾ ತರಗತಿಯಲ್ಲಿ ನಿರ್ದಿಷ್ಟ ಸಮಯದಲ್ಲಿ, ನಿರ್ದಿಷ್ಟ ಪಠ್ಯವೊಂದನ್ನು ಯೋಜಿಸುವ ಪ್ರಕ್ರಿಯೆಯಲ್ಲಿ ಮಕ್ಕಳಿಗೇ ಮುಖ್ಯಪಾತ್ರ ವಹಿಸಲು ಬಿಟ್ಟಲ್ಲಿ, ಪರಿಣಾಮಕಾರಿ ಕಲಿಕೆಗೆ ಅದು ಹೇಗೆ ಸಹಾಯಕವಾದೀತೆಂಬುದನ್ನು ವಿವರಿಸಿ.

..........................................................................................................................

..........................................................................................................................

..........................................................................................................................

4. ಅನ್ವೇಷಕ ಮನೋಭಾವವನ್ನು ಪ್ರೋತ್ಸಾಹಿಸುವುದಕ್ಕಾಗಿ, ವಿಷಯನ್ನು ಬೋಧಿಸುವ ಸಾಕಷ್ಟು ಮೊದಲೇ ನಿಮ್ಮ ಬೋಧನಾ ಯೋಜನೆಯನ್ನು ಹೇಗೆ ರೂಪಿಸಿಕೊಳ್ಳುವಿರಿ. ವಿವರಿಸಿ.

..........................................................................................................................

..........................................................................................................................

..........................................................................................................................

## 8.6 ಮಾದರಿ ಪಠ್ಯಯೋಜನೆಗಳು

ಈಗ ಕೆಲವು ಪಠ್ಯಯೋಜನೆಗಳನ್ನು ಗಮನಿಸೋಣ ಹಾಗೂ ಅದರಲ್ಲಿ ಅಳವಡಿಸಿಕೊಳ್ಳಲಾಗಿರುವ ವಿಧಾನಗಳನ್ನು ವಿಶ್ಲೇಷಿಸಲು ಪ್ರಯತ್ನಿಸೋಣ. ಈ ಯೋಜನೆಗಳು ಭಿನ್ನ ಹಿನ್ನೆಲೆ ಹೊಂದಿದ್ದು, ಶಿಕ್ಷಕರು ಯಾವರೀತಿಯಲ್ಲಿ ಈ ಪಠ್ಯಗಳ ಉಪಯೋಗವನ್ನು ತಮ್ಮ ಬೋಧನಾ ಚಟುವಟಿಕೆಗಳಿಗೆ ಬಳಸಿಕೊಳ್ಳುವರೆಂಬುದನ್ನು ಹಾಗೂ ಯಾವ ಅಂಶಗಳನ್ನು ಅವರು ಉಪೇಕ್ಷಿಸುವರೆಂಬುದನ್ನು ಗಮನಿಸೋಣ. ಜೊತೆಗೆ, ತರಗತಿಯ ಭಾಗವಹಿಸುವಿಕೆಗೆ ಯಾವ ಅಂಶಗಳನ್ನು ಅವರು ಸೃಷ್ಟಿಸಿಕೊಳ್ಳುವರೆಂಬುದನ್ನು ಸಹ ನೋಡೋಣ. ಅವರ ಯೋಜನೆಗಳಲ್ಲಿ ಯಶಸ್ಸು ಪಡೆದವು ಯಾವವು ಹಾಗೂ ವಿಫಲವಾದವು ಯಾವವು ಎಂಬುದನ್ನೂ ಕೂಡಾ ಇಲ್ಲಿ ನಾವು ಕಲಿಯಲಿದ್ದೇವೆ.

### 8.6.1 ಮಾದರಿ ಪಠ್ಯ ಒಂದು – ತೂಲಿಕಾಳ ತರಗತಿ

ಎರಡನೆಯ ತರಗತಿಯ ತೂಲಿಕಾ ಎಂಬ ಶಿಕ್ಷಕಿಯ ಪಠ್ಯಯೋಜನೆಯ ಉದಾಹರಣೆ ನೋಡೋಣ ಹಾಗೂ ಅದರ ಮಾದರಿ, ರಚನೆ ಮುಂತಾದುವನ್ನು ವಿಶ್ಲೇಷಿಸೋಣ.

ಬಿಹಾರದ ಗ್ರಾಮೀಣ ಶಾಲೆಯೊಂದರಲ್ಲಿ ತೂಲಿಕಾ ಪ್ರಾಥಮಿಕ ಶಾಲಾಶಿಕ್ಷಕಿ. ಆ ಶಾಲೆಯ ಒಂದು ತುದಿಗೆ ಹಳ್ಳಿಯಿದ್ದು ಮತ್ತೊಂದು ತುದಿಗೆ ಅರಣ್ಯವಿದೆ. ಹೆಚ್ಚಿನವರ ಕಸುಬು ಕೃಷಿ. ಪಾಲಕರಲ್ಲಿ ಕೆಲವರು ಪಟ್ಟಣಗಳಲ್ಲಿ ಮೇಸ್ತ್ರಿಗಳಾಗಿ, ರಿಕ್ಷಾ ಓಡಿಸುವವರಾಗಿ, ಬಡಗಿಗಳಾಗಿ, ವ್ಯಾಪಾರಿಗಳಾಗಿ ಕೆಲಸ ಮಾಡುವವರು ಹಾಗೂ ವಾರದಲ್ಲಿ ಒಮ್ಮೆ ಮಾತ್ರ ಮನೆಗೆ ಬಂದುಹೋಗುವವರು. ಮಕ್ಕಳಲ್ಲಿ ಹೆಚ್ಚಿನವರು ಹೊಲಗಳಲ್ಲಿ ತಾಯಂದಿರಿಗೆ ಬೆಳೆ ಕಟಾವು ಮಾಡಲು, ಮನೆಯಲ್ಲಿ ಉಳಿದ ಮಕ್ಕಳನ್ನು ನೋಡಿಕೊಳ್ಳಲು, ಅಡುಗೆಯಲ್ಲಿ ಸಹಾಯ ಮಾಡಿಕೊಂಡು ಇರುವವರು. ಕೆಲವರ ಪಾಲಕರು ಕೇವಲ ಪ್ರಾಥಮಿಕ ಶಾಲೆಯ ಮೆಟ್ಟಿಲು ಹತಿರುವ ಕನಿಷ್ಟ ಅಕ್ಷರಸ್ಥರಾಗಿದ್ದರೆ, ಇನ್ನು ಕೆಲವರ ಪಾಲಕರು ಪೂರ್ತಿ ಅನಕ್ಷರಸ್ಥರು. ತೂಲಿಕಾರ ತರಗತಿಯ ಮಕ್ಕಳಿಗೆ ಯಾವುದೇ ವೃತ್ತಪತ್ರಿಕೆಗಳ, ಪುಸ್ತಕಗಳ ಪರಿಚಯವೇ ಇಲ್ಲ. ಆಕೆ ಕಲಿಸುವ ಎರಡನೆಯ ತರಗತಿಯ ಮಕ್ಕಳ ಸಂಖ್ಯೆ 30. ಮಕ್ಕಳು ಮನೆಯಲ್ಲಿ ಭೋಜಪುರಿ ಭಾಷೆಯನ್ನು ಮತಾಡುತ್ತಾರೆ. ಶಾಲೆಯಲ್ಲಿ ಅವರು ಕಲಿಯುತ್ತಿರುವ ಮಾಧ್ಯಮ ಹಿಂದಿ. ಮಕ್ಕಳು ಹಿಂದಿ ಲಿಪಿಯನ್ನು ತಕ್ಕಮಟ್ಟಿಗೆ ಗುರುತಿಸಬಲ್ಲರು ಹಾಗೂ ಕೆಲವೇ ಕೆಲವು ಶಬ್ದಗಳನ್ನು ಓದಬಲ್ಲರು. ಇನ್ನುಳಿದಂತೆ ನಿರರ್ಗಳವಾಗಿ ಓದಲು, ಬರೆಯಲು, ಒಂದೇ ಒಂದು ಸಣ್ಣವಾಕ್ಯವನ್ನು ರಚಿಸಲೂ ಅವರಿಗೆ ಬರುವುದಿಲ್ಲ. ಇಂತಹ ಮಕ್ಕಳಿಗಾಗಿ ಶಿಕ್ಷಕಿ ಆರಿಸಿಕೊಂಡಿರುವುದು ಎರಡನೇ ತರಗತಿಯ ಹತ್ತನೇ ಪಾಠ 'ನಿಜವಾದ ಮಿತ್ರ' ಎಂಬ ಒಂದು ಕತೆ.

Notes

ಮಕ್ಕಳೊಂದಿಗೆ ಭೋಜಪುರಿ ಹಾಗೂ ಹಿಂದಿ ಎರಡೂ ಭಾಷೆಗಳಲ್ಲಿ ಸಂಭಾಷಿಸುತ್ತ ಕತೆಯನ್ನು ನಿರೂಪಣೆ ಮಾಡಬೇಕು ಎಂಬುದು ಶಿಕ್ಷಕಿಗೆ ತಿಳಿದಿದೆ. ಆಕೆ ಹಿಂದಿಯಲ್ಲಿ ಕೇಳುವ ಪ್ರಶ್ನೆಗಳಿಗೆ ಮಕ್ಕಳು ಭೋಜಪುರಿಯಲ್ಲಿ ಉತ್ತರಿಸುವರೆಂದು ಆಕೆಗೆ ತಿಳಿದಿದೆ. ಅವರು ಹಾಗೆ ಮಾಡಿದರೆ ಆಕೆ ಆಕ್ಷೇಪಿಸುವುದಿಲ್ಲ, ಅವರನ್ನು ದೂಷಿಸುವುದಿಲ್ಲ. ಬದಲಿಗೆ, ಚಿಕ್ಕಚಿಕ್ಕ ಗುಂಪುಗಳಲ್ಲಿ ಅವರನ್ನು ಗುಂಪು ಮಾಡಿ ಕೂರಿಸಿ, ಮಕ್ಕಳು ಒಬ್ಬರಿಗೊಬ್ಬರು ಪಠ್ಯವನ್ನು ಅರ್ಥಮಾಡಿಕೊಂಡು, ಇನ್ನಷ್ಟು ಉತ್ತಮವಾಗಿ ಕಲಿಯಲಿ ಎಂಬ ನಂಬಿಕೆ ಆಕೆಗಿದೆ. ಜೊತೆಗೆ, ಬರೆಯುವ, ಓದುವ ಮಾತಾಡುವ ಹಾಗೂ ಆಲಿಸುವ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕೆಂಬುದು ಆಕೆಗೆ ತಿಳಿದಿದೆ. ಇದರಿಂದ ಮಕ್ಕಳು ಕಲಿಯುವಲ್ಲಿ ಆಸಕ್ತಿ ತೋರುವ ಬಗ್ಗೆ, ಕಲಿಸಿದ್ದನ್ನು ಕಲಿತು, ಭಾಷೆಯನ್ನು ಮತ್ತಷ್ಟು ಕಲಿಯುವುವ ಬಗ್ಗೆ ಆಸಕ್ತಿ ಮೂಡಿಸಿಕೊಂಡಾರೆಂಬ ಬಗ್ಗೆ ಆಕೆಗೆ ವಿಶ್ವಾಸವಿದೆ.

ಕತೆ ಇರುವುದು ಮನೆಗೆ ಮರಳುತ್ತಿರುವ ಗೆಳೆಯರಿಬ್ಬರಿಗೆ ಒಂದು ಕರಡಿ ಇದಿರಾಗುವ ಬಗ್ಗೆ. ಮಕ್ಕಳಿಗೆ ಯಾವ್ಯಾವ ಬಗೆಯ ಪ್ರಾಣಿಗಳ ಬಗ್ಗೆ ಗೊತ್ತು ಎಂದು ಕೇಳುವ ಮೂಲಕ ಪಾಠವನ್ನು ಪ್ರಾರಂಭಿಸಲು ಶಿಕ್ಷಕಿ ಆಲೋಚಿಸುತ್ತಾರೆ. ಪರಿಸರದಲ್ಲಿ ಇರುವ ಪ್ರಾಣಿಗಳ ಬಗ್ಗೆ ಮಕ್ಕಳಿಗೆ ಸ್ವಲ್ಪವಾದರೂ ತಿಳಿದಿರುತ್ತದೆ ಎಂಬುದು ಆಕೆಯ ಅಂದಾಜು. ನಿತ್ಯ 35ನಿಮಿಷ ಪಾಠ ಮಾಡುವ ಆಕೆ ಈ ಕತೆಯನ್ನು ಹೇಳಿ ಮುಗಿಸಲು ತೆಗೆದುಕೊಳ್ಳಬೇಕಾಗಿರುವ ಅವಧಿ ಒಂದು ವಾರ. ಆಕೆಯ ಪಠ್ಯಯೋಜನೆ ಈ ರೀತಿ ಇದೆ:

- ತರಗತಿಯಲ್ಲಿ ಚಿತ್ರಬಿಡಿಸಲು ಮಕ್ಕಳನ್ನು ತೊಡಗಿಸುವುದು
- ಒಬ್ಬರಿಗೊಬ್ಬರು ಕತೆಯ ಬಗ್ಗೆ ತಮ್ಮತಮ್ಮಲ್ಲೇ ಚರ್ಚಿಸಲು ಅವಕಾಶ ಮಾಡಿಕೊಡುವುದು
- ಬಿಡಿಸಿದ ಚಿತ್ರಗಳ ಬಗ್ಗೆ ಮಾತಾಡಿಕೊಳ್ಳಲು ಬಿಡುವುದು
- ಕತೆಯನ್ನು ಕೇಳಿದ ಮೇಲೆ ಏನು ಅರ್ಥವಾಯಿತು ಎಂಬುದನ್ನು ಹೇಳಲು ಪ್ರೇರೇಪಿಸುವುದು
- ಪ್ರಾಣಿಗಳ ಹೆಸರುಗಳನ್ನು ಬರೆಯಲು ಸೂಚಿಸುವುದು
- ಕತೆಯ ಕೊನೆಗೆ ಏನಾಗಬಹುದು ಎಂಬುದನ್ನು ಊಹಿಸಲು ಮಕ್ಕಳಿಗೆ ಹೇಳುವುದು
- ತಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಮಕ್ಕಳು ತಾವು ನೋಡಿದ ಪ್ರಾಣಿಗಳ ಬಗ್ಗೆ ಚರ್ಚೆಮಾಡುವುದು

ಆಕೆಯ ದಿನನಿತ್ಯದ ಪಠ್ಯಕ್ರಮದ ಯೋಜನೆಯು ಈ ಕೆಳಗಿನಂತೆ ಇದ್ದಿತು:

ಮೊದಲನೇ ದಿನ:

1. ತಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಮಕ್ಕಳು ತಾವು ನೋಡಿದ ಪ್ರಾಣಿಗಳ ಹೆಸರುಗಳನ್ನು ಬರೆಯಲು ಹೇಳುವುದು.
2. ಹಾಗೆ ನೋಡಿದ ಪ್ರಾಣಿಗಳ ಪೈಕಿ ಅವರಿಗಿಷ್ಟವಾದ ಪ್ರಾಣಿಯ ಚಿತ್ರ ಬರೆಯಲು ಹೇಳಿ, ಅದನ್ನು ವೃತ್ತದಿಂದ ಗುರುತಿಸಲು ಸೂಚಿಸುವುದು.
3. ಬರೆದ ಪ್ರಾಣಿಗಳ ಹೆಸರನ್ನು ಗಟ್ಟಿಯಾಗಿ ಓದಲು ಹೇಳುವುದು ಹಾಗೂ ಆ ಪ್ರಾಣಿಯ ಧ್ವನಿಯನ್ನು ಅನುಕರಣೆ ಮಾಡಲು ಸೂಚಿಸುವುದು.

ಎರಡನೇ ದಿನ:
ಉಹಾತ್ಮಕ ಕೌಶಲಗಳನ್ನು ಮಕ್ಕಳಲ್ಲಿ ಬೆಳೆಸುವುದು

1. ಕೊಟ್ಟಿರುವ ಮೂರೂ ಕತೆಗಳನ್ನು ಓದಲು ಮಕ್ಕಳಿಗೆ ಸಾಕಷ್ಟು ಸಮಯಾವಕಾಶ ಕೊಡುವುದು
2. ಓದಿದ ಕತೆಗಳನ್ನು ಅಭಿನಯಿಸುವಂತೆ ತಿಳಿಸಿ, ಉಳಿದ ಮಕ್ಕಳು ಪ್ರೋತ್ಸಾಹಿಸುವಂತೆ ಸೂಚಿಸುವುದು
3. ಕತೆಯ ಮಧ್ಯಭಾಗವನ್ನು ಊಹಿಸಲು ಮಕ್ಕಳಿಗೆ ತಿಳಿಸುವುದು
4. ಹಾಗೆ ಊಹಿಸಿದ ಎಲ್ಲ ಅಂಶಗಳನ್ನು ಹಲಗೆಯ ಮೇಲೆ ಬರೆದು ತೋರಿಸುವುದು

ಮೂರನೆಯ ದಿನ:
ಮಕ್ಕಳು ಊಹಿಸಿದ ಮುಕ್ತಾಯದ ಮೂಲಕ ಕತೆಯನ್ನು ಮುಗಿಸುವುದು

1. ಪೂರ್ತಿ ಕತೆಯನ್ನು ಓದಿ ಮುಗಿಸಿದ ಮೇಲೆ ಪರಿಚಿತ ಶಬ್ದಗಳಾದ ಕರಡಿ, ಹಳ್ಳಿ, ಗೆಳೆಯ, ಬಾಯಿ, ಮೂಗು, ರಾಮ, ಶ್ಯಾಮ ಮೊದಲಾದುವನ್ನು ಹಲಗೆಯ ಮೇಲೆ ಪಟ್ಟಿಮಾಡುವುದು.
2. ಅವರವರ ಪುಸ್ತಕಗಳಲ್ಲಿ ಮಕ್ಕಳು ಆ ಶಬ್ದಗಳನ್ನು ಬರೆಯಲು ಹೇಳುವುದು
3. ಆಯ್ದ ಶಬ್ದಗಳನ್ನು ವೃತ್ತದಿಂದ ಸುತ್ತುವರಿಯಲು ಸೂಚಿಸುವುದು
4. ಯಾವುದಾದರೊಂದು ಆಟವನ್ನು ಆಡಿಸುವುದು

ನಾಲ್ಕನೆಯ ದಿನ: ಕತೆಯಲ್ಲಿ ಬರುವ ಕಠಿಣಪದಗಳನ್ನು ಗುರುತಿಸಿ ಓದಲು ಮಕ್ಕಳಿಗೆ ತಿಳಿಸುವುದು ಹಾಗೂ ಅವುಗಳ ಅರ್ಥವನ್ನು ಹೇಳಲು ಹುರಿದುಂಬಿಸುವುದು.

ಐದನೆಯ ದಿನ: ಪಾಠದ ಕೊನೆಗೆ ಇರುವ ಚಟುವಟಿಕೆಗಳನ್ನು ಮಕ್ಕಳೊಂದಿಗೆ ಸೇರಿ ಮಾಡುವುದು.

ಆರನೆಯ ದಿನ: ವಾಕ್ಯರಚನೆಯ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.

ಪ್ರತಿನಿತ್ಯದ ಪಠ್ಯಕ್ರಮದ ಸಾರಾಂಶ ಮತ್ತು ವಿಶ್ಲೇಷಣೆ

ಮೊದಲ ದಿನ

ತೂಲಿಕಾ ಮಕ್ಕಳನ್ನು ತಮ್ಮ ಸುತ್ತಮುತ್ತಲೂ ನೋಡುವ ಪ್ರಾಣಿಗಳ ಬಗ್ಗೆ ಮಾತನಾಡಿ ಎಂದು ಪ್ರೇರೇಪಿಸುವುದರ ಮೂಲಕ ತನ್ನ ಅಂದಿನ ಪಾಠಕ್ಕೆ ಚಾಲನೆ ನೀಡಿದಳು. ನಂತರ ಕೆಲ ಪ್ರಾಣಿಗಳ ಹೆಸರನ್ನು ಹಲಗೆಯ ಮೇಲೆ ಬರೆದಳು. ಮಕ್ಕಳು ಪ್ರಾಣಿಗಳ ಹೆಸರುಗಳನ್ನು ತಮ್ಮ ಪುಸ್ತಕದಲ್ಲಿ ಬರೆದುಕೊಂಡರು. ಆ ಪ್ರಾಣಿಗಳ ಬಗ್ಗೆ ಮಾತನಾಡಿ ಎಂದು ತೂಲಿಕಾ ಹೇಳಿದಾಗ ಮಕ್ಕಳು ಮೊದಲು ಸಾಕುಪ್ರಾಣಿಗಳಿಂದ ಪ್ರಾರಂಭಿಸಿ ನಂತರ ಕಾಡುಪ್ರಾಣಿಗಳ ಬಗ್ಗೆ ಮಾತಾಡತೊಡಗಿದರು. ಮಕ್ಕಳ ಮನಸ್ಸಿಗೆ ಪ್ರಾಣಿಗಳ ಬಗ್ಗೆ ಸಂದೇಶ ರವಾನೆಯಾಗಲು ಅವಳು ಒಂದು ಸಣ್ಣ ಆಟ ಪ್ರಾರಂಭಿಸಿದಳು. ಅದರಂತೆ ಅವಳು ಹೆಸರಿಸಿದ ಪ್ರಾಣಿಗಳ ಧ್ವನಿಯನ್ನು ನಕಲು ಮಾಡಲು ಮಕ್ಕಳಿಗೆ ಹೇಳಿದಳು. ನಂತರ ಹಲಗೆಯ ಮೇಲೆ ಬರೆದಿದ್ದ ಪ್ರಾಣಿಗಳ ಪಟ್ಟಿಯಿಂದ ಆ ಪ್ರಾಣಿಯನ್ನು ಹೆಕ್ಕಿತೆಗೆಯಲು ಹೇಳಿದಳು.

Notes

ಒಮ್ಮೆ ಆಕೆಗೆ, ಹೀಗೆ ಮಕ್ಕಳು ಧ್ವನಿ ಹಾಗೂ ಪ್ರಾಣಿಯ ಹೆಸರನ್ನು ತಾಳೆ ಮಾಡಬಲ್ಲರು ಎಂದು ಗೊತ್ತಾದಾಗ ಪ್ರಾಣಿಗಳ ಹೆಸರುಗಳನ್ನು ಅವರವರ ಪುಸ್ತಕಗಳಲ್ಲಿ ಬರೆದುಕೊಳ್ಳಲು ಹೇಳಿದಳು. ನಂತರದ ಕೆಲಸ ಆಯಾ ಪ್ರಾಣಿಗಳ ಹೆಸರನ್ನು ಅದರ ಚಿತ್ರದೊಂದಿಗೆ ಹೊಂದಿಸಿ ಬರೆಯುವುದು. ಮಕ್ಕಳು ಈ ಕೆಲಸದಲ್ಲಿ ನಿರತರಾಗಿದ್ದಾಗ ತೂಲಿಕಾ ತರಗತಿಯಲ್ಲಿ ಒಂದು ಸುತ್ತು ಸುತ್ತಿಬಂದು ಮಕ್ಕಳು ಪ್ರಾಣಿಗಳ ಹೆಸರು ಮತ್ತು ಚಿತ್ರವನ್ನು ಹೊಂದಿಸುವಲ್ಲಿ ನೆರವಾದಳು.

ಎರಡನೆಯ ದಿನ

ಅಂದು ತೂಲಿಕಾ ಮೂರು ಚಿತ್ರಗಳಿರುವ ಒಂದು ಕತೆಯನ್ನು ಆಯ್ದುಕೊಂಡಳು. ನಂತರ ಮಕ್ಕಳನ್ನು ಆ ಚಿತ್ರದಲ್ಲಿ ಏನು ಕಾಣುವುದು ಎಂದು ಕೇಳಿದಳು. ಇಬ್ಬರು ಹುಡುಗರು ಮತ್ತು ಒಂದು ಕರಡಿ ಕಾಣುವುದು ಎಂದು ಮಕ್ಕಳು ಹೇಳಿದರು. ಮುಂದುವರೆದು ಅದರಲ್ಲಿ ಒಬ್ಬ ಹುಡುಗ ಮರದ ಮೇಲೆ ಇದ್ದಾನೆ ಎಂತಲೂ ಸೇರಿಸಿದರು. ಮಕ್ಕಳ ಈ ಉತ್ತರದಿಂದ ತೃಪ್ತಳಾದ ಶಿಕ್ಷಕಿ ಚಿತ್ರದಲ್ಲಿನ ಹುಡುಗರು ಹಾಗೂ ಕರಡಿ ಏನು ಮಾಡುತ್ತಿವೆ ಎಂದು ಕೇಳಿ, ಅವರ ಗ್ರಹಣಶಕ್ತಿಯನ್ನು ಒರೆಗೆ ಹಚ್ಚಿದಳು. ಆಟವನ್ನು ಮುಂದುವರೆಸುತ್ತಾ ಮಕ್ಕಳಿಗೆ ಅವರಿಗೆ ತೋಚಿದ ಕತೆಹೇಳಲು ತಿಳಿಸಿದಳು. ಮೊದಮೊದಲು ಹಿಂದೇಟು ಹಾಕಿದ ಮಕ್ಕಳು ನಂತರ ಉತ್ಸಾಹದಿಂದಲೇ ಭಾಗವಹಿಸಿ ತಮ್ಮದೇ ಆದ ಅನೇಕ ಕತಗಳನ್ನು ಹೆಣೆದು ಹೇಳಿದರು. ಅದನ್ನು ಬಹುವಾಗಿ ಮೆಚ್ಚಿಕೊಂಡ ಶಿಕ್ಷಕಿ ಈಗ ತಾನು ಮಕ್ಕಳಿಗೆ ಕತೆಯನ್ನು ಓದಿ ಹೇಳುವೆ ಎಂದಳು. ತಾನು ಪುಸ್ತಕದಿಂದ ನಿಧಾನವಾಗಿ ಆದರೆ ಸ್ಪಷ್ಟವಾಗಿ ಕತೆ ಓದುವಾಗ, ಮಕ್ಕಳಿಗೆ ಪುಸ್ತಕದಲ್ಲಿ ಆಕೆ ಓದುತ್ತಿರುವ ಸಾಲುಗಳ ಮೇಲೆ ಬೆರಳು ಸರಿಸುತ್ತಾ ಗುರುತಿಸಲು ಹೇಳಿದಳು. ಸ್ವಲ್ಪ ಸಮಯದಲ್ಲಿಯೇ ಅರ್ಧಕ್ಕಿಂತ ಹೆಚ್ಚು ಮಕ್ಕಳು ಈಕೆಯ ಜೊತೆಜೊತೆಗೆ ಮೆಲು ಧ್ವನಿಯಲ್ಲಿ ಕತೆಯನ್ನು ಓದತೊಡಗಿದರು. ಇವಳ ಜೊತೆಗೆ ಓದಲಾಗದ ಮಕ್ಕಳು ಈಕೆ ಓದುವ ಕತೆಯನ್ನು ಆಸಕ್ತಿಯಿಂದ ಕೇಳಿಸಿಕೊಳ್ಳತೊಡಗಿದರು. ಆಗ, ಕತೆ ಓದಲು ಬರುತ್ತಿದ್ದ ಮಕ್ಕಳ ಬದಿಯಲ್ಲಿ, ಇನ್ನೂ ಓದಲು ಹೆಣಗುತ್ತಿರುವ ಮಕ್ಕಳನ್ನು ಕೂರಿಸಿದಳು. ಕತೆಯಲ್ಲಿ ಬರುವ ಇಬ್ಬರು ಹುಡುಗರು ಕರಡಿಯನ್ನು ಭೇಟಿ ಮಾಡಿದರು ಎಂಬಲ್ಲಿಗೆ ಕತೆಯನ್ನು ನಿಲ್ಲಿಸಿಬಿಟ್ಟಳು. “ಮಕ್ಕಳೇ, ಈಗ ಹೇಳಿ, ಒಂದು ಕಾಡಿನಲ್ಲಿ ಯಾರೂ ಸಹಾಯಕ್ಕೆ ಇಲ್ಲದಿದ್ದಾಗ, ಕರಡಿ ಎದಿರಾದಾಗ ಆ ಹುಡುಗರು ಏನು ಮಾಡಿರಬಹುದು?” ಎಂದು ಕೇಳುತ್ತಾ ಅವರ ಕಲ್ಪನೆಗೆ ಇಂಬು ಕೊಟ್ಟಳು. ಮಕ್ಕಳು ಅನೇಕ ಸಾಧ್ಯತೆಗಳನ್ನು ಹೇಳಿದರು. ಅದನ್ನೆಲ್ಲ ಆಕೆ ಪಟ್ಟಿ ಮಾಡಿದಳು ಮತ್ತು ಆ ಸಂದರ್ಭವನ್ನು ಸೂಚಿಸಿದ ಮಗುವಿನ ಹೆಸರನ್ನು ಅದರ ಸೂಚನೆಯ ಬದಿಯಲ್ಲಿ ಬರೆಯುತ್ತಾ ಹೋದಳು. ಅಲ್ಲಿಗೆ ಎರಡನೆಯ ದಿನ ಪಾಠ ಮುಗಿಯಿತು.

ಮೂರನೆಯ ದಿನ

ಇಂದು ತೂಲಿಕಾ ಕತೆಯನ್ನು ಮತ್ತೊಮ್ಮೆ ಜೋರಾಗಿ ಓದಿ, ಹಿಂದಿನ ದಿವಸ ನಿಲ್ಲಿಸಿದ ಕಡೆಯೇ ನಿಲ್ಲಿಸಿ ಮಕ್ಕಳನ್ನು ಕತೆಯ ಕೊನೆ ಏನಾಗಿರಬಹುದು ಎಂದು ಊಹಿಸಲು ಹೇಳಿದಳು. ಅವರು ತಮ್ಮತಮ್ಮ ಕಲ್ಪನೆಯನ್ನು ವ್ಯಕ್ತಪಡಿಸಿದ ಮೇಲೆ ಕತೆಯನ್ನು ಮುಂದುವರಿಸಿದಳು. ಇದಾದ ಮೇಲೆ ತೂಲಿಕಾ ಪಾತ್ರಗಳ ಗುಣನಡತೆಯ ಬಗ್ಗೆ ವಿವರಿಸತೊಡಗಿದಳು. ನಂತರ ಮಕ್ಕಳನ್ನು ಉದ್ದೇಶಿಸಿ, ನೀವು ಆ ಹುಡುಗರ ಸ್ಥಾನದಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿರಿ? ಹುಡುಗರ ನಡವಳಿಕೆಯಿಂದ ಅವರಿಗೆ ಏನನ್ನಿಸಿತು ಎಣದೆಲ್ಲ ಕೇಳಿದಳು. ಇದಾದ ನಂತರ ಕರಡಿ ಎಂಬ ಪದವನ್ನು ಹಲಗೆಯ ಮೇಲೆ ಬರೆದಳು ಹಾಗೂ ತಮ್ಮ ಪುಸ್ತಕಗಳಲ್ಲಿ ಅದೇ ಶಬ್ದವನ್ನು ಪೆನ್ಸಿಲಿನಿಂದ ಗುರುತು ಮಾಡಿಕೊಳ್ಳಲು ಹೇಳಿದಳು. ಇಡೀ ಕತೆಯಲ್ಲಿ ಕರಡಿ ಎಂಬ ಪದದ ಹಾಗೆಯೇ, ಗ್ರಾಮ, ಸತ್ತದ್ದು ಎಂಬ ಪದದ ಬಳಕೆ ಎಷ್ಟುಸಲ ಆಗಿದೆ ಎಂದು ಗಮನಿಸಲು ಹೇಳಿದಳು.

Notes

ಒಮ್ಮೆ ಪದಗಳನ್ನು ಗುರುತಿಸುವ ಆಟ ಮುಗಿದ ಮೇಲೆ ತೋಳ ಬಂತು ತೋಳ ಆಟವನ್ನು ಪ್ರಾರಂಭಿಸಿದಳು. ಇದರಂತೆ ಎಲ್ಲ ಮಕ್ಕಳು ಸತ್ತಂತೆ ನಟಿಸಿ ಮಿಸುಕಾಡದೇ ಮಲಗಲು ತಿಳಿಸಿದಳು. ಹಾಗೆ ಮಲಗಿದ ಮಕ್ಕಳು ಕಣ್ಣುಮುಚ್ಚಿ, ಗಂಭೀರ ಮುಖಭಾವದಿಂದ ಇರಬೇಕಿತ್ತು. ಯಾವ ಮಗುವು ಕಣ್ಣುಬಿಟ್ಟ ನೋಡಿದರೆ, ಮಿಸುಕಾಡಿದರೆ, ಆ ಮಗುವು ಆಟದಿಂದ ಹೊರಕ್ಕೆ ಎಂದು ತಿಳಿಸಿದಳು. ಮಕ್ಕಳಿಗೆ ಆಟ ಅರ್ಥವಾಗಲು ಕೆಲಸಮಯ ಹಿಡಿಯಿತು. ಮೊದಮೊದಲು ನೆಲದ ಮೇಲೆ ಮಲಗಿದ್ದರೂ, ಅದು ಅವರಿಗೆ ಬಹಳ ಸೋಜಿಗವೆನಿಸಿ, ಉಕ್ಕಿ ಬರುವ ನಗುವನ್ನು ಹತ್ತಿಕ್ಕಲಾಗದೇ ಮಲಗಿದಲ್ಲಿಯೇ ಕುಲುಕುಲು ನಗುವಿನಿಂದ ಮಿಸುಕಾಡತೊಡಗಿದರು. ಅರ್ಧಕ್ಕರ್ಧ ಮಕ್ಕಳು ಒಂದೋ ಕಣ್ಣುಬಿಡುವದು ಅಥವಾ ಮುಸಿಮುಸಿ ನಗುವುದು ಮಾಡಿ ಆಟದಿಂದ ಹೊರಕ್ಕೆ ಹೋಗುತ್ತಿದ್ದರು. ಮೊದಲ ಸುತ್ತಿನ ಆಟ ತುಂಬ ಬೇಗ ಮುಗಿಯಿತು. ನಂತರ ಆಟದ ರೀತಿಗಳು ತಿಳಿದು ಚೆನ್ನಾಗಿ ನಟಿಸತೊಡಗಿದರು. ಮಕ್ಕಳು ಸತ್ತಂತೆ ನಟಿಸಲಿಲ್ಲ ಎಂದು ಹೊರಹಾಕುವುದು ಅಷ್ಟು ಸುಲಭವಾಗಿರಲಿಲ್ಲ.

ನಾಲ್ಕನೆಯ ದಿನ

ನಾಲ್ಕನೆಯ ದಿನ ತುಲಿಕಾ ಪಾಠ ಮಾಡಲು ಕಠಿಣ ಪದಗಳನ್ನು ಆಯ್ದುಕೊಡಳು. ಹಾಗೆ ಮಕ್ಕಳನನ್ನು ಸಹ ಕಠಿಣ ಪದಗಳನ್ನು ಗುರುತಿಸಿ ಎಂದಳು. ಅವರು ಗುರುತಿಸಿದ ಕಠಿಣ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು, ಅವರಲ್ಲಿ ಯಾರಿಗಾದರೂ ಆ ಪದಗಳ ಅರ್ಥ ಗೊತ್ತೇ ಎಂದು ವಿಚಾರಿಸಿದಳು. ಮಕ್ಕಳಿಗೆ ಕಠಿಣ ಪದದ ಅರ್ಥ ತಿಳಿಸಿದ ನಂತರ, ಆ ಪದಗಳನ್ನು ಉಪಯೋಗಿಸಿ ವಾಕ್ಯವನ್ನು 'ರಚಿಸುವಂತೆ ಪ್ರೋಸ್ತಾಹಿಸಿದಳು.

ಐದನೆಯ ದಿನ

ಮಕ್ಕಳೊಡನೆ ಕಲೆತು ಖುದ್ದಾಗಿ ಪಥ್ಯದ ಕೊನೆಯಲ್ಲಿದ್ದ ಪ್ರಶ್ನೋತ್ತರಗಳನ್ನು ಉತ್ತರಿಸಲು ಅವರಿಗೆ ನೆರವಾದಳು. ಅಭ್ಯಾಸದ ಕೊನೆಯಲ್ಲಿ ತೂಲಿಕಾ ಮಕ್ಕಳಿಗೆ ಎರಡು ಪದಗಳನ್ನು ಹೇಳಿ ಎಂದಳು. 'ಕುರ್ಸಿ' ಮತ್ತು 'ಕಿತಾಬ್' ಎಂಬ ಎರಡು ಪದಗಳನ್ನು ಅವಳು ಕಪ್ಪು ಹಲಗೆಯ ಮೆ ೀಲೆ ಬರೆದಳು. ಮೊದಲ ಪದದಿಂದ 'ಸೀ' ಮತ್ತು ಎರಡನೆಯ ಪದದಿಂದ 'ತಾ' ಅಕ್ಷರಗಳನ್ನು ತೆಗೆದುಕೊಂಡು ಎರಡನ್ನು ಸೇರಿಸಿದರೆ ಏನಾಗುತ್ತದೆ ಅಂತ ಮಕ್ಕಳನ್ನು ಕೇಳಿದಳು. ಅವರಿಗೋ ಅದು ಬಹಳ ಸರಳ ಎನಿಸಿತು. ಒಕ್ಕೊರಿಲಿನಲ್ಲಿ 'ಸೀತಾ ' ಎಂದರು. ಇದೇ ರೀತಿ ಹೊಸ ಹೊಸ ಪದಗಳನ್ನು ಹುಟ್ಟುಹಾಕುವ ಆಟವನ್ನು ಮಕ್ಕಳು ಖುಷಿಯಿಂದ ಆಡಿದರು. ತುಲಿಕಾ ಮೂವರು ಮಕ್ಕಳನ್ನು ಕರೆದು ಕಪ್ಪು ಹಲಗೆಯ ಮೇಲೆ ಹೊಸ ಪದಗಳನ್ನು ಬರೆಯಲು ಹೇಳಿದಳು. ಉಳಿದ ಮಕ್ಕಳು ತಮ್ಮ ತಮ್ಮ ಜಾಗದಲ್ಲಿಯೇ ಕುಳಿತು ಹೊಸ ಅಭ್ಯಾಸವನ್ನು ಮುಂದುವರೆಸಿದರು. ಚುರುಕಾಗಿದ್ದ ಕೆಲ ಮಕ್ಕಳು ವೇಗವಾಗಿ ಹೊಸ ಪದ ಕಟ್ಟೋ ಆಟ ಆಡಿ ಮುಗಿಸಿದರು. ಬಳಿ ತೆರಳಿ ತುಲಿಕಾ ಪಾಠದ ಅಭ್ಯಾಸ ಮಾಡುವಂತೆ ಪ್ರೋತ್ಸಾಹಿಸಿದಳು. ಇದೇ ರೀತಿ ಮಕ್ಕಳು ತಮಗೆ ಈಗಾಗಲೇ ಪರಿಚಯವಿದ್ದ ಪ್ರಾಣಿಗಳ ಹೆಸರುಗಳನ್ನು ಮತ್ತು ಹೊಸ ಪ್ರಾಣಿಗಳ ಹೆಸರನ್ನು ಪಟ್ಟಿ ಮಾಡಿದರು.

ಇದರ ನಂತರ ನಡೆಸಿದ ಅಭ್ಯಾಸವೇ ಕಷ್ಟಕರ. ಮಕ್ಕಳು ತಾವು ಗುರುತಿಸಿದ, ಪಟ್ಟಿಮಾಡಿದ ಪದಗಳನ್ನು ಉಪಯೋಗಿಸಿ ಹೊಸ ಹೊಸ ವಾಕ್ಯಗಳನ್ನು ರಚಿಸಬೇಕಾಯಿತು. ತುಲಿಕಾ ಗಟ್ಟಿಯಾಗಿ ಪದಗಳನ್ನು ಓದಿ ಹೇಳಿ ಮಕ್ಕಳಿಗೆ ವಾಕ್ಯಗಳನ್ನು ರಚಿಸಿ ಎಂದು ಹೇಳಿದಳು. ಕೆಲ ಮಕ್ಕಳು ಅವಳು ಹೇಳಿದ ಪದಗಳನ್ನು ಬಳಸಿ ಬಳಸಿ ತಮ್ಮ ಪುಸ್ತಕದಲ್ಲಿ ವಾಕ್ಯಗಳನ್ನು ರಚಿಸಿ ಬರೆದರೆ, ಮತ್ತೆ ಕೆಲವರು ಕುಳಿತಲ್ಲೇ ಮೌಖಿಕವಾಗಿ ಉತ್ತರಗಳನ್ನು ಪಟಪಟನೆ ಹೇಳುತ್ತಿದ್ದರು. ಇದೇ ಅಭ್ಯಾಸವನ್ನು ತುಲಿಕಾ ಪುನರಾವರ್ತನೆ ಮಾಡುವುದರಲ್ಲಿ ಅಂದಿನ ತರಗತಿಯ ಅವಧಿ ಮುಗಿಯಿತು.

Notes

ಆರನೇ ದಿನ

ಆರನೆ ದಿನ ತುಲಿಕಾ ಪದಗಳ ಬದಲು ವಾಕ್ಯಗಳನ್ನು ಬಳಸುವ ಪಾಠವನ್ನು ಮಕ್ಕಳಿಗೆ ಬೋಧಿಸಿದಳು. ಮೊದಲು ಅವಳು ಪಠ್ಯ ಪುಸ್ತಕದ ಹಿಂದೆ ಇರುವ ಅಭ್ಯಾಸಗಳನ್ನೇ ಮಕ್ಕಳ ಕೈಲಿ ಮಾಡಿಸಿದಳು. ಪಠ್ಯ ಪುಸ್ತಕದಲ್ಲಿರುವ ಪ್ರಶ್ನೆಗಳಿಗೆ ಕೆಲವು ಮಕ್ಕಳು ಉತ್ತರ ಕೊಟ್ಟರೇ ಮತ್ತೆ ಕೆಲವರಿಗೆ ಉತ್ತರಿಸಲಾಗಲಿಲ್ಲ. ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದ ನಂತರ ತುಲಿಕಾ, ಒಂದೊಂದು ಸೂಕ್ತ ಉತ್ತರ ಏನೆಂಬುದನ್ನು ಮಕ್ಕಳಿಗೆ ವಿವರಿಸಿದಳು. ಕಡೆಗೆ ಪ್ರಶ್ನೆಗಳಿಗೆ ಸರಿಯಾದ ಉತ್ತರ ಏನೆಂಬುದನ್ನು ತುಲಿಕಾ ಕಪ್ಪುಹಲಗೆಯ ಮೇಲೆ ಬರೆದಳು. ಈ ರೀತಿಯಾಗಿ ಇಡೀ ಪ್ರಶ್ನೆ – ಉತ್ತರದ ಅಭ್ಯಾಸವನ್ನು ಮಕ್ಕಳು ಮಾಡಿ ಮುಗಿಸಿ,ಅದನ್ನೆಲ್ಲ ತಮ್ಮ ಪುಸ್ತಕದಲ್ಲಿ ಬರೆದುಕೊಂಡರು. ಹಾಗೆ ಬರೆದುಕೊಳ್ಳಲು ಹೆಣಗುತ್ತಿರುವ ಕೆಲ ಮಕ್ಕಳಿಗೆ ತುಲಿಕಾ ತಾನೇ ಖುದ್ದಾಗಿ ಬಳಿ ನಿಂತು ಬರೆಸಿದಳು.

ಹೀಗೆ ಮುಂದುವರೆಯುತ್ತ ತುಲಿಕಾ ಮಕ್ಕಳಿಗೆ ಒಂದು ಪದವನ್ನು ಕೊಟ್ಟು ಅದರಿಂದ ವಾಕ್ಯವನ್ನು ರಚಿಸಿ ಎಂದಳು ಮಕ್ಕಳಿಗೆ ಅರಿವಾಗಲೆಂದು ಒಂದೊಂದು ಪದದ ಅರ್ಥವನ್ನು ಸವಿಸ್ತಾರವಾಗಿ ಹಲವಾರು ಉದಾಹರಣೆಗಳಿಂದ ವಿವರಿಸಿದಳು. ವಾಕ್ಯ ರಚನೆ ಮಾಡಲು ಕಷ್ಟಪಡುತ್ತಿದ್ದ ಕೆಲ ಮಕ್ಕಳಿಗೆ, ಪದಗಳನ್ನು ಮತ್ತೊಮ್ಮೆ ಕಪ್ಪುಹಲಗೆಯ ಮೇಲೆ ಬರೆದು, ಅವರು ಸರಿಯಾಗಿ ಅರಿತುಕೊಳ್ಳಲು ನೆರವಾದಳು.

ಇಷ್ಟರಲ್ಲಿ ಸಾಮಾನ್ಯ ಎಲ್ಲ ಮಕ್ಕಳೂ ಸಹ ಕನಿಷ್ಠ ಐದು ಪದಗಳನ್ನು ಬಳಸಿಯಾದರು ವಾಕ್ಯ ರಚಿಸುವಷ್ಟು ಪ್ರಾವೀಣ್ಯತೆ ಪಡೆದರು. ಅಷ್ಟರಲ್ಲಿ ತರಗತಿಯ ಸಮಯ ಮುಗಿದು, ಇನ್ನು ಕೇವಲ ಮೂರು ಪದಗಳು ಉಳಿದವು. ತುಲಿಕಾ ಅವುಗಳನ್ನು ಬಳಸಿ ವಾಕ್ಯ ರಚನೆ ಮಾಡಿಕೊಂಡು ಬನ್ನಿ ಎಂದು ಮಕ್ಕಳಿಗೆ ಮನೆಗೆಲಸ (ಹೋಮ್ ವರ್ಕ್ ) ಕೊಟ್ಟಳು.

**ಪ್ರಗತಿಯ ಪರಿಶೀಲನೆ – 5**

1. *ತೂಲಿಕಾರ ತರಗತಿಯ ಮಕ್ಕಳ ಸಂಖ್ಯೆ ಎಷ್ಟು?*
   *ಎ. 10 ಬಿ. 20 ಸಿ. 30 ಡಿ. 40*

2. *ಶಿಕ್ಷಕಿ ಮಕ್ಕಳು ಚಿತ್ರಿಕೆಗಳನ್ನು ಉಪಯೋಗಿಸುವ ಬದಲು ಚಿತ್ರಗಳನ್ನೇ ಬಿಡಿಸಲು ಏಕೆ ಹೇಳಿದರು?*

   ……………………………………………………………………………………………

   ……………………………………………………………………………………………

   ……………………………………………………………………………………………

3. *ಶಿಕ್ಷಕಿ ತನಗೆ ತಿಳಿದಿದ್ದ ಪ್ರಾಣಿಗಳ ಹೆಸರುಗಳನ್ನು ಉಲ್ಲೇಖಿಸಿ, ಅವುಗಳ ಬಗ್ಗೆ ಗೊತ್ತಿದೆಯೇ ಎಂದೇಕೆ ಮಕ್ಕಳನ್ನು ಕೇಳಲಿಲ್ಲ?*

   ……………………………………………………………………………………………

   ……………………………………………………………………………………………

   ……………………………………………………………………………………………

*4. ಕತೆಯ ಕೊನೆಯನ್ನು ವಿಸ್ತಾರವಾಗಿ ಹೇಳದೇ ಶಿಕ್ಷಕಿ ಮಕ್ಕಳನ್ನೇ ಕತೆಯ ಕೊನೆಯನ್ನು ಊಹಿಸಲು ಏಕೆ ಹೇಳಿದರು?*

..........................................................................................................

..........................................................................................................

..........................................................................................................

*5. ಮೂರನೆಯ ದಿನವೂ ಶಿಕ್ಷಕಿ ಕತೆಯ ಮೊದಲರ್ಧವನ್ನೇ ಮತ್ತೆ ಹೇಳಿದ್ದೇಕೆ?*

..........................................................................................................

..........................................................................................................

..........................................................................................................

*6. ನೀವು ಶಿಕ್ಷಕಿ ತೂಲಿಕಾ ಆಗಿದ್ದರಿ ಎಂದುಕೊಳ್ಳಿ. ಆಗ ಮಕ್ಕಳ ಪಾಲಕರು ಅಥವಾ ಪೋಷಕರು ನೀವು ಅನವಶ್ಯಕ ಚಟುವಟಿಕೆಗಳ ಮೂಲಕ ಮಕ್ಕಳ ಸಮಯ ಹಾಳು ಮಾಡುತ್ತಿದ್ದೀರಿ ಎಂತಲೋ, ನೇರವಾಗಿ ಭಾಷೆಯನ್ನು ಕಲಿಸುವ ಬದಲಾಗಿ ಬೇರೇನನ್ನೋ ಕಲಿಸುತ್ತಿದ್ದೀರಿ ಎಂತಲೋ ದೂರಿದರೆ, ನೀವು ಆ ಪರಸ್ಥಿತಿಯನ್ನು ಹೇಗೆ ನಿಭಾಯಿಸುವಿರಿ?*

..........................................................................................................

..........................................................................................................

..........................................................................................................

### 8.6.2 ಮಾದರಿ ಪಾಠ – 2 – ಸತ್ಪುರಾದ ದಟ್ಟ ಅಡವಿ

ತರಗತಿಯಲ್ಲಿ ಕವಿತೆಯನ್ನು ಹೇಳಿಕೊಡಲು ಹೀನಾ ಯಾವ ರೀತಿ ಯೋಜನೆಯನ್ನು ಸಿದ್ಧಪಡಿಸಿದಳೆಂದು ಈಗ ನಾವು ನೋಡೋಣ.

ಭೋಪಾಲ್ ನಗರದ ಹೊರವಲಯದಲ್ಲಿರುವ ಮಂಗಲ್‌ಪುರಿ ಶಾಲೆಯಲ್ಲಿ 5ನೇ ತರಗತಿಯ ಮಕ್ಕಳಿಗೆ ಹೀನಾ ಹಿಂದಿಯನ್ನು ಕಲಿಸುತ್ತಾಳೆ. ಆ ಭಾಗದ ಜನರು ಚಿಕ್ಕದಾದ ಜೋಪಡಿಗಳಲ್ಲಿ ವಾಸಿಸುತ್ತಾರೆ. ಸ್ಥಳೀಯರಿಗೆ ಒಳಚರಂಡಿ ವ್ಯವಸ್ಥೆ ಅಥವಾ ಶುದ್ಧ ಕುಡಿಯುವ ನೀರು, ವಿದ್ಯುತ್ ಅಥವಾ ಸರಿಯಾದ ರಸ್ತೆಗಳ ಸೌಲಭ್ಯ ಸಹ ಇಲ್ಲ. ಸಂಜೆ ಹೊತ್ತಿಗೆ ಓದಲು ಮಕ್ಕಳಿಗೆ ಬೀದಿದೀಪಗಳೇ ಬೆಳಕಿನ ಮೂಲವಾಗಿದೆ. ಬಹಳಷ್ಟು ಪಾಲಕರು ಅನಕ್ಷರಸ್ಥರು, ಕೆಲವರು 5ನೇ ತರಗತಿಯವರೆಗೆ ಓದಿದ್ದಾರೆ. ಅಲ್ಲಿನ ನಿವಾಸಿಗಳ ಮುಖ್ಯ ಕಾಯಕವೆಂದರೆ ದಿನಗೂಲಿ, ಆಟೋರಿಕ್ಷಾ ಚಾಲನೆ, ಚಿಂದಿ ಆಯುವುದು ಮತ್ತು ಮನೆಗೆಲಸ. ಶಾಲೆಗೆ ಹೋಗುವ ಮಕ್ಕಳು ತಮ್ಮ ಪಾಲಕರಿಗೆ ಚಿಂದಿ ಆಯಲು ಮತ್ತು ಮನೆಗೆಲಸದಲ್ಲಿಯೂ ಸಹ ನೆರವಾಗುತ್ತಾರೆ. ಹೀನಾಳ ತರಗತಿಯಲ್ಲಿ 25 ಮಕ್ಕಳಿದ್ದಾರೆ. ಮಕ್ಕಳು ಉರ್ದು, ಗೋಂಡಿ ಮತ್ತು ಮಾಲವಿ ಮಿಶ್ರಿತ ಹಿಂದಿಯಲ್ಲಿ ಮಾತನಾಡಿದರು. ಅನೇಕ ಮಕ್ಕಳಿಗೆ ಓದಲು ಬರಲಿಲ್ಲ. ಓದಲು ಬರುವವರು ಒಂದೊಂದೇ ಅಕ್ಷರಗಳನ್ನು ಹೆಕ್ಕುತ್ತ, ನಿಧಾನವಾಗಿ ಓದುತ್ತಿದ್ದರು. ಅದು "ಸತ್ – ಪುರ – ಕೆ – ಘ – ನೆ – ಜಂ – ಗ – ಲ್" ರೀತಿಯ ಓದು.

ಸತ್ಪುರ ಕೆ ಘನೆ ಜಂಗಲ್ ಎಂಬುದು ಮಧ್ಯಪ್ರದೇಶದ ದಟ್ಟ ಕಾಡಿನ ಬಗೆಗಿನ ಕವಿತೆ. ಹೀನಾ ಅದನ್ನು ಜೋರಾಗಿ ಎರಡು–ಮೂರು ಸಲ ಓದಿದಳು. ಸತ್ಪುರವನ್ನು ತೋರಿಸಲು ಅವಳು ಮಧ್ಯಪ್ರದೇಶದ ನಕಾಶೆಯನ್ನು ಬಳಸಿಕೊಂಡಳು. ಅವಳು ನಾಲ್ಕು ದಿನದಲ್ಲಿ ಕಲಿಸಲು ಯೋಜಿಸಿದ್ದಳು.

Notes

ಅವಳ ಉದ್ದೇಶಗಳು ಹೀಗಿವೆ:

- ಮಕ್ಕಳು ಅರಣ್ಯದೊಂದಿಗಿನ ತಮ್ಮ ಸ್ವಂತ ಅನುಭವವನ್ನು ಹಂಚಿಕೊಳ್ಳುವುದು.
- ತರಗತಿಯಲ್ಲಿ ಸಾಮೂಹಿಕ ಚರ್ಚೆಯಂತಹ ಚಟುವಟಿಕೆಯ ಮೂಲಕ ಮಕ್ಕಳನ್ನು ಕವಿತೆಯ ಬಗ್ಗೆ ಮಾತನಾಡಲು ಉತ್ತೇಜಿಸುವುದು.
- ಮಕ್ಕಳಿಗೆ ಕಾವ್ಯದ ಭಾಷೆ ಮತ್ತು ಕಾವ್ಯಾತ್ಮಕ ಭಾಷಾಶೈಲಿಯನ್ನು ಕಲಿಸುವುದು.
- ಮಕ್ಕಳಿಂದ ಕವಿತೆಯನ್ನು ವಾಚಿಸಿ, ಅದರ ಬಗ್ಗೆ ಬರೆಯುವಂತೆ ಮಾಡುವುದು.

ಆಕೆಯ ದಿನವಹಿ ಯೋಜನೆ ಹೀಗಿತ್ತು:

ಮೊದಲ ದಿನ

- ಅರಣ್ಯದ ಅನುಭವಗಳನ್ನು ಹಂಚಿಕೊಳ್ಳುವುದು
- ವಿವಿಧ ಮಾರ್ಗಗಳಿಂದ ಸತ್ಪುರವನ್ನು ಮಕ್ಕಳಿಗೆ ಪರಿಚಯಿಸುವುದು.
- ಮಕ್ಕಳು ಆತ್ಮವಿಶ್ವಾಸದಿಂದ ಕವಿತೆಯನ್ನು ಪಠಿಸುವಂತೆ ಮಾಡುವುದು.
- ಸಾಮೂಹಿಕವಾಗಿ ಕವಿತೆಯ ಅರ್ಥದ ತಿಳಿವಳಿಕೆಯನ್ನು ತರುವುದು.
- ತಮ್ಮದೇ ಭಾಷೆಯಲ್ಲಿ ಮತ್ತು ನೀಡಲಾದ ಭಾಷೆಯಲ್ಲಿ (ಈ ಪ್ರಕರಣದಲ್ಲಿ ಹಿಂದಿ ಭಾಷೆ) ಪ್ರಾಣಿಗಳ ಹೆಸರುಗಳನ್ನು ಹೇಳುವುದು ಮತ್ತು ತಿಳಿದುಕೊಳ್ಳುವುದು.

ಎರಡನೇ ದಿನ

- ಕಠಿಣ ಶಬ್ದಗಳ ಅರ್ಥವನ್ನು ತಿಳಿದುಕೊಳ್ಳುವುದು ಮತ್ತು ಸಂದರ್ಭಾನುಸಾರ ಅವುಗಳ ಬಳಕೆ
- ಚರ್ಚೆಯ ಮೂಲಕ ಕವಿತೆಯ ಅರ್ಥವನ್ನು ಹಂಚಿಕೊಳ್ಳುವುದು
- ಸಂಯುಕ್ತ ಪದಗಳ ಬಳಕೆ

ಮೂರನೇ ದಿನ

- ಚರ್ಚಾಮಾರ್ಗದಿಂದ ಕವಿತೆಯ ಗ್ರಹಿಕೆ
- ಮಕ್ಕಳ ಅನುಭವಗಳನ್ನು ತರಗತಿಯ ಸ್ಥಿತಿಗೆ ತರುವುದು.
- ಪಾಠದ ಕೊನೆಯಲ್ಲಿ ನೀಡಿರುವ ಚಟುವಟಿಕೆಗಳನ್ನು ಮಕ್ಕಳೊಂದಿಗೆ ಜೊತೆಯಾಗಿ ಮುಗಿಸುವುದು.

ನಾಲ್ಕನೇ ದಿನ

- ನೀಡಲಾದ ಚಟುವಟಿಕೆಗಳನ್ನು ಮಕ್ಕಳ ನೆರವಿನೊಂದಿಗೆ ಮುಗಿಸುವುದು
- ಉತ್ತರಗಳನ್ನು ತಾವಾಗಿ ರಚಿಸಲು ಮಕ್ಕಳಿಗೆ ನೆರವಾಗುವುದು
- ಪ್ರಾಸಗಳ ಬಳಕೆ

Notes

## ಪ್ರತಿನಿತ್ಯದ ಪಠ್ಯಕ್ರಮದ ಸಾರಾಂಶ ಮತ್ತು ವಿಶ್ಲೇಷಣೆ

### ಮೊದಲನೇ ದಿನ

ಮಕ್ಕಳು ಅರಣ್ಯವನ್ನು ನೋಡಿದ್ದಾರೋ ಇಲ್ಲವೋ ಎಂದು ಕೇಳುವ ಮೂಲಕ ಹೀನಾಳು ತನ್ನ ತರಗತಿಯನ್ನು ಪ್ರಾರಂಭಿಸಿದಳು. ನೋಡಿದವರು ಹಿಂದಿಯ ತಮ್ಮದೇ ಆಡುಭಾಷೆಯಲ್ಲಿ ಮಾತನಾಡುವಂತೆ ಹೇಳಲಾಯಿತು. ಅರಣ್ಯದ ವಿವರಣೆ, ಅರಣ್ಯದಲ್ಲಿ ಕಾಣಸಿಗುವ ಪಕ್ಷಿ–ಪ್ರಾಣಿಗಳ ಹೆಸರುಗಳನ್ನು ಈ ಪಾಠದ ಕಲಿಕಾ ಮಾಧ್ಯಮವಾದ ಸಾಮಾನ್ಯ ಹಿಂದಿಯಲ್ಲಿ ಆಕೆಯು ಬರೆದುಕೊಂಡಳು. ಅವರ ತಿಳಿವಿನ ಮಟ್ಟವನ್ನು ಪರೀಕ್ಷಿಸಲು, ಮಕ್ಕಳು ಹೇಳಿದ ಪ್ರಾಣಿಗಳ ಹೆಸರುಗಳನ್ನು ಉತ್ತಮ ಹಿಂದಿಯಲ್ಲಿ ಹೇಳುವಂತೆ ಆಕೆ ಉತ್ತೇಜಿಸಿದಳು. ನಂತರ ಕಲಿಕೆಗೆ ಸಹಾಯಕಾರಿಯಾದ, ಮಧ್ಯಪ್ರದೇಶದ ನಕಾಶೆಯನ್ನು ಬಳಸಿಕೊಂಡು, ಅದರಲ್ಲಿ ಸತ್ಪುರವನ್ನು ಕಂಡುಹಿಡಿಯುವಂತೆ ಆಕೆ ಮಕ್ಕಳಿಗೆ ಹೇಳಿದಳು. ನಂತರ ಆಕೆಯು ಕವಿತೆಯನ್ನು ಪರಿಚಯಿಸಿದಳು. ಅವರಲ್ಲೊಬ್ಬರಿಗೆ ಪೂರ್ಣ ಕವಿತೆಯನ್ನು ಓದಲು ಹೇಳುವ ಮೂಲಕ, ಮೊದಲನೇ ದಿನವೇ ಆಕೆಯು ವಾಚನಾ ಅಭ್ಯಾಸವನ್ನು ಪ್ರಾರಂಭಿಸಿದಳು. ನಂತರ ಆಕೆಯು ಮತ್ತೊಬ್ಬ ಮಗುವಿಗೆ ಕವಿತೆಯ ಎರಡು ಚರಣಗಳನ್ನು ಓದಲು ಹೇಳಿದಳು. ಚರ್ಚಾಮಾರ್ಗದಿಂದ ಕವಿತೆಯನ್ನು ಅರ್ಥೈಸಿಕೊಳ್ಳುವ ಮೂಲಕ ತರಗತಿಯ ಸಮಾಪ್ತಿಯಾಯಿತು. ಅದರಲ್ಲಿ, ಅರಣ್ಯವಾಸಿ ಕಾಡುಪ್ರಾಣಿಗಳ ನಿತ್ಯಕ್ರಮಗಳು ಏನಿರಬಹುದೆಂಬ ಕಾಲ್ಪನಿಕ ಚರ್ಚೆಯೂ ಶಾಮೀಲಾಗಿತ್ತು.

### ಎರಡನೇ ದಿನ

ಸಂಪೂರ್ಣ ಕವಿತೆಯನ್ನು ಓದಿದ ನಂತರ, ಅದರ ಸಾರದ ಸೈದ್ಧಾಂತಿಕ ಪುನರವಲೋಕನದ ಮೂಲಕ ಎರಡನೇ ದಿನವನ್ನು ಹೀನಾ ಪ್ರಾರಂಭಿಸಿದಳು. ನಂತರ ಆಕೆಯು ಕವಿತೆಯ ಮೂರು ಚರಣಗಳನ್ನು ಓದುವಂತೆ ಮಕ್ಕಳಿಗೆ ತಿಳಿಸಿ, ತರಗತಿಯಲ್ಲಿ ಚರ್ಚಿಸಲು ಆ ಚರಣಗಳನ್ನು ಅನೇಕ ಲಘು ಪ್ರಶ್ನೆಗಳನ್ನಾಗಿ ಪರಿವರ್ತಿಸಿದಳು. ನಡುನಡುವೆ ಕಠಿಣ ಶಬ್ದಗಳ ಸಾಂದರ್ಭಿಕ ಅರ್ಥಗಳನ್ನು ಹೇಳುತ್ತ, ಆ ಶಬ್ದಗಳಿಂದ ಮಕ್ಕಳು ವಾಕ್ಯರಚಿಸುವಂತೆ ಆಕೆ ಮಾಡಿದಳು. ಅವರು ಆ ಅಭ್ಯಾಸದಲ್ಲಿ ಸಿಲುಕಿಕೊಂಡಾಗ, ಅವರಿಗೆ ಆಕೆ ಸಹಾಯ ನೀಡಿದಳು.

### ಮೂರನೇ ದಿನ

ಅವರು ಕವಿತೆಯನ್ನು ಜೋರಾಗಿ ಓದುವುದು ಮತ್ತು ಚರ್ಚೆಯ ಮೂಲಕ ಅರ್ಥೈಸಿಕೊಳ್ಳುವುದನ್ನು ಮುಂದುವರೆಸಿದರು. ಮಕ್ಕಳು ಕವಿತೆಯನ್ನು ಜೋರಾಗಿ ಓದಿ, ಶಬ್ದಗಳ ಮತ್ತು ಕವಿತೆಯ ಅರ್ಥವನ್ನು ತಿಳಿದುಕೊಳ್ಳಲು ಚರ್ಚಾಮಾರ್ಗವನ್ನು ಅನುಸರಿಸುವಂತೆ ಆಕೆ ನೋಡಿಕೊಂಡಳು. ಇಡೀ ಪ್ರಕ್ರಿಯೆಯಲ್ಲಿ ಆಕೆ ಮಕ್ಕಳಿಗೆ ಸಹಾಯ ಮಾಡಿದಳು. ತರಗತಿಯಲ್ಲಿ ಚರ್ಚೆ ನಡೆಯುತ್ತಿದ್ದಂತೆಯೇ ಆಕೆಯು ಪ್ರಶ್ನೆಗಳನ್ನು ಕೇಳುತ್ತಲೇ ಇದ್ದಳು. ಚರ್ಚೆಯ ನಂತರ, ಇಡೀ ಕವಿತೆಯನ್ನು ಓದುವಂತೆ ಎರಡು–ಮೂರು ಮಕ್ಕಳಿಗೆ ಆಕೆ ಹೇಳಿದಳು. ನಂತರ ಆಕೆಯು ತಲೆಬರಹಗಳೊಂದಿಗೆ ಎರಡು ಲಂಬ ಸಾಲುಗಳನ್ನು ಮಾಡಿದಳು. ಒಂದು ಕಡೆಗೆ 'ನನಗೆ ಅರಣ್ಯ ಇಷ್ಟ' ಎಂದು ಬರೆದಿದ್ದ ರೆ, ಮತ್ತೊಂದು ಕಡೆಗೆ 'ನನಗೆ ಅರಣ್ಯ ಇಷ್ಟವಿಲ್ಲ' ಎಂದು ಬರೆದಿತ್ತು. ನಂತರ, ಮಕ್ಕಳಿಗೆ ಆಕೆಯು ಎರಡೂ ಬದಿಗಳನ್ನು ತುಂಬಿಸಲು ಹೇಳಿದಳು ಹಾಗು ಮಕ್ಕಳು ನೀಡಿದ ಪ್ರತಿಕ್ರಿಯೆಗಳನ್ನು ಬರೆಯುತ್ತಿದ್ದಂತೆ ಆ ಅಂಶಗಳನ್ನು ಆಕೆ ಚರ್ಚಿಸಿದಳು. ಅನಂತರ, ಆಕೆಯು ಮಕ್ಕಳಿಗೆ ಕವಿತೆಯ ಬಗ್ಗೆ ಒಂದು ಪ್ಯಾರಾವನ್ನು ಬರೆಯಲು ಹೇಳಿದಳು. ಮಕ್ಕಳು ಬರೆಯುತ್ತಿದ್ದಂತೆ, ಆಕೆಯು ತರಗತಿಯಲ್ಲಿ ಸುತ್ತಾಡುತ್ತ ಅವರಿಗೆ ನೆರವಾದಳು.

### ನಾಲ್ಕನೇ ದಿನ

ಮೂರನೇ ದಿನ ಚರ್ಚಿಸಿದ ಎಲ್ಲ ಅಂಶಗಳ ಪುನರವಲೋಕನದೊಂದಿಗೆ ಹೀನಾ ನಾಲ್ಕನೇ ದಿನವನ್ನು ಪ್ರಾರಂಭಿಸಿದಳು. ನಂತರ ಆಕೆಯು ಕವಿತೆಯ ಕೊನೆಯಲ್ಲಿ ನೀಡಿದ ಅಭ್ಯಾಸಗಳನ್ನು ಕೈಗೆತ್ತಿಕೊಂಡಳು. ಆಕೆಯು ಕವಿತೆಯನ್ನು ಅದಾಗಲೇ ಸಾಕಷ್ಟು ವಿವರವಾಗಿ ಚರ್ಚಿಸಿದ್ದುದರಿಂದ ಮಕ್ಕಳು ಹೆಚ್ಚಿನ ಚರ್ಚೆ ಮಾಡದೆ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಲಾರಂಭಿಸಿದರು.

Notes

ನಂತರ ಆಕೆಯು ಪ್ರಾಸಬದ್ಧ ಶಬ್ದಗಳನ್ನು ತೆಗೆದುಕೊಂಡು, ಕವಿತೆಯಲ್ಲಿ ಅಂತಹುದೇ ಶಬ್ದಗಳನ್ನು ಕಂಡುಹಿಡಿಯುವಂತೆ ಮಕ್ಕಳಿಗೆ ಹೇಳಿದಳು. ಇದು ಕಠಿಣವೆನಿಸಿದ ಮಕ್ಕಳಿಗೆ ತಿಳಿಯುವಂತೆ ಆಕೆಯು ಕೆಲವು ಉದಾಹರಣೆಗಳನ್ನು ಬೋರ್ಡಿನ ಮೇಲೆ ಬರೆದಳು. ಉತ್ತರ ಹೇಳಿದ ಮಕ್ಕಳನ್ನು ಹೀನಾ ಪ್ರಶಂಸಿಸಿದಳು. ಕೆಲವು ಮಕ್ಕಳು ತಪ್ಪು ಶಬ್ದಗಳನ್ನು ಹೇಳಿದ್ದರೂ, ಆಕೆಯು ಅವರನ್ನೂ ಸಹ ಉತ್ತೇಜಿಸಿದಳು. ಅವರನ್ನು ಒಂದು ದಿನಕ್ಕಾಗಿ ಕಾಡಿನಲ್ಲಿ ಒಬ್ಬರೇ ಇರಲು ಬಿಟ್ಟರೆ ಅವರೇನು ಮಾಡುವರೆಂದು ಆಕೆ ಬರೆಯಲು ಹೇಳಿದಳು. ಮಕ್ಕಳು ಬರೆಯತೊಡಗಿದರು ಮತ್ತು ಪ್ರಶ್ನೆ ಕೇಳುವ ಮಕ್ಕಳಿಗೆ ನೆರವಾಗಲು ಹೀನಾ ತರಗತಿಯಲ್ಲಿ ಒಂದು ಸುತ್ತು ಸುತ್ತಿ ಬರುತ್ತಿದ್ದಳು.

## ಪ್ರಗತಿಯ ಪರಿಶೀಲನೆ – 6

*1. ತನ್ನ ಪಾಠದ ಯೋಜನೆಯಲ್ಲಿ, ಹೀನಾ ಯಾವ ದಿನದಂದು ಮಕ್ಕಳೊಂದಿಗೆ ಪಾಠದ ಕೊನೆಯ ಅಭ್ಯಾಸವನ್ನು ಮಾಡಲು ನಿರ್ಧರಿಸಿದ್ದಳು?*

*ಅ. ಮೊದಲನೇ ದಿನ*

*ಬ. ಎರಡನೇ ದಿನ*

*ಕ. ಮೂರನೇ ದಿನ*

*2. ಭಾಷಾ ತರಗತಿಯಲ್ಲಿ ನಕಾಶೆಯನ್ನು ತೋರಿಸಿದುದರ ಮಹತ್ವವೇನು?*

..............................................................................................................................

..............................................................................................................................

..............................................................................................................................

*3. ಕವಿತೆಯ ಅರ್ಥವನ್ನು ತಾನೇ ಹೇಳದ ಹೀನಾಳನ್ನು ನೀವು ಉತ್ತಮ ಶಿಕ್ಷಕಿಯೆಂದು ಪರಿಗಣಿಸುವಿರೇ? ನಿಮ್ಮ ಉತ್ತರವನ್ನು ಸಮರ್ಥನೆಗಳೊಂದಿಗೆ ತೋರಿಸಿರಿ.*

..............................................................................................................................

..............................................................................................................................

..............................................................................................................................

*4. 'ಒಂದು ದಿನ ಕಾಡಿನಲ್ಲಿ ನಿಮ್ಮನ್ನು ಬಿಟ್ಟರೆ ನೀವೇನು ಮಾಡುವಿರಿ?' ಎಂಬ ಪ್ರಶ್ನೆಯನು ್ನ ಉತ್ತರಿಸುವಂತೆ ಹೇಳುವ ಮೂಲಕ ಮಕ್ಕಳಲ್ಲಿ ಯಾವ ಕಲಿಕಾ ಕೌಶಲ್ಯವನ್ನು ಬೆಳೆಸಬಹುದು?*

..............................................................................................................................

..............................................................................................................................

..............................................................................................................................

5. *ಪಾಠದ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಮಕ್ಕಳು ಅವರಾಗಿಯೇ ಉತ್ತರ ನೀಡುವಂತೆ ಮಾಡುವುದು ಸರಿಯೆ? ನಿಮ್ಮ ನಿಲುವನ್ನು ಸಮರ್ಥಿಸಿ.*

.............................................................................................................................

.............................................................................................................................

.............................................................................................................................

### 8.6.3 ವರ್ಣಮಾಲೆಯನ್ನು ಕಲಿಸುವ ವಿಧಾನ

ಲೋಕೇಶ ದೆಹಲಿಯ ದೇವನಗರದಲ್ಲಿ ಸರ್ಕಾರಿ ಶಾಲೆಯಲ್ಲಿ ಒಂದನೆಯ ತರಗತಿಗೆ ಪಾಠ ಮಾಡುವ ಒಬ್ಬ ಶಿಕ್ಷಕ. ಶಾಲೆಯು ನಗರ ಪ್ರದೇಶದಲ್ಲಿದ್ದು, ಅಲ್ಲಿಗೆ ಬರುವ ಮಕ್ಕಳು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದವರು. ಹೆಚ್ಚಾಗಿ ಅವರ ತಾಯ್ತಂದೆಯರು ಕೂಲಿಕಾರರಾಗಿರುವಂಥವರು. ವಾಸಕ್ಕೆ ತಮ್ಮದೇ ಸ್ವಂತ ಮನೆಯೂ ಇಲ್ಲದವರು. ಯವುದಾದರೊಂದು ಕಟ್ಟಡದ ಕೆಲಸ ನಡೆಯುವವರೆಗೆ ಅಲ್ಲಿ ಕೂಲಿ ಕೆಲಸಮಾಡಿಕೊಂಡಿದ್ದು, ಅಲ್ಲಿನ ಕೆಲಸ ಮುಗಿಯುತ್ತಲೇ ಮತ್ತೊಂದೆಡೆ ವಲಸೆ ಹೋಗಿಬಿಡುತ್ತಾರೆ. ಕೂಲಿಕೆಲಸವನ್ನು ಹುಡುಕುತ್ತ ಹುಡುಕುತ್ತ ಊರಿಂದೂರಿಗೆ ವಲಸೆ ಹೋಗುವುದರಿಂದ ಅವರ ಮಕ್ಕಳು ಒಂದೇ ಸ್ಥಳದಲ್ಲಿ ನೆಲೆನಿಲ್ಲುವುದಕ್ಕೆ ಆಗದೇ, ಎಲ್ಲಿಯೂ ಶಾಲೆಗೆ ಹೋಗುವುದು ಆಗುವುದಿಲ್ಲ. ಒಂದು ಶಾಲೆಯಲ್ಲಿ ಹೆಚ್ಚೆಂದರೆ 3–4 ತಿಂಗಳು ಅಥವಾ ಹೆಚ್ಚೆಂದರೆ ಒಂದು ವರ್ಷ. ಈ ರೀತಿಯ ಮಕ್ಕಳಿಂದಾಗಿ ಶಾಲೆಯಲ್ಲಿ ಸದಾ ಗೈರಿನ ಪ್ರಮಾಣ ಹೆಚ್ಚಿರುತ್ತದೆ. ಲೋಕೇಶರ ತರಗತಿಗೆ 15 ಮಕ್ಕಳು ದಾಖಲಾತಿ ಪಡೆದುಕೊಂಡಿದ್ದರು. ಇನ್ನುಳಿದ ಐವರು ಮಕ್ಕಳು ದಾಖಲಾತಿ ಪಡೆದುಕೊಂಡಿರಲಿಲ್ಲ. ಒಂದೂವರೆ ವರ್ಷದ ಮಕ್ಕಳಿಂದ ಐದಾರು ವರ್ಷದವರೆಗಿನ ಮಕ್ಕಳು ಅಲ್ಲಿದ್ದರು. ಶಿಶುವಯದ ಮಕ್ಕಳು ತರಗತಿಯ ಭಾಗವಲ್ಲದಿದ್ದರೂ, ಲೋಕೇಶ ಇಡೀ ತರಗತಿಯ ಬಗ್ಗೆ ಗಮನ ವಹಿಸಬೇಕಾಗಿತ್ತು. ಅಲ್ಲಿ ಕುಳಿತುಕೊಳ್ಳುವ ಯಾವುದೇ ಉಪಕರಣಗಳಿರಲಿಲ್ಲ. ನಾರಿನ ಚೀಲದ ಮೇಲೆ ಅಥವಾ ನೆಲದ ಮೇಲೆಯೇ ಮಕ್ಕಳು ಕುಳಿತಿರುತ್ತಿದ್ದರು.

ಲೋಕೇಶ ಹಿಂದಿ ವರ್ಣಮಾಲೆಯನ್ನು ಆ ಮಕ್ಕಳಿಗೆ ಕಲಿಸಬೇಕಾಗಿದ್ದಿತು. ಮೊದಲು ಆ ಮಕ್ಕಳಲ್ಲಿ ತರಗತಿಯಲ್ಲಿನ ವಸ್ತುಗಳನ್ನು ಪಟ್ಟಿಮಾಡುವಂತೆ ಕೇಳಲಾಯಿತು. ಅದರಲ್ಲಿ ಫ್ಯಾನು, ಕುರ್ಚಿ, ಇತ್ಯಾದಿ ವಸ್ತುಗಳನ್ನು ಮಕ್ಕಳು ಪಟ್ಟಿ ಮಾಡಿದರು. ಕೆಲವು ಮಕ್ಕಳನ್ನು ಚಿತ್ರ ಬಿಡಿಸಿ, ಕೆಳಗೆ ಅವರವರ ಹೆಸರುಗಳನ್ನು ಬರೆಯುವಂತೆ ಕೇಳಿಕೊಳ್ಳಲಾಯಿತು. ಮುಂದಿನ ನಾಲ್ಕು ದಿನಗಳಿಗಾಗಿ ಲೋಕೇಶ ತಯಾರಿಸಿಕೊಂಡ ಪಠ್ಯಯೋಜನೆಯು ಹೀಗಿದ್ದಿತು:

- ವರ್ಣಮಾಲೆಯನ್ನು ಉದಾಹರಣೆ ಸಮೇತ ಕಲಿಸುವುದು
- ಕತೆಯ ಮೂಲಕ ವರ್ಣಮಾಲೆಯನ್ನು ಕಲಿಸುವುದು
- ಮಕ್ಕಳ ಅನಿಸಿಕೆಗೆ ಅವಕಾಶ ಕೊಡುವುದು
- ಅವರ ಶಬ್ದಭಂಡಾರ ಹೆಚ್ಚಿಸುವುದು

ಶಿಕ್ಷಕನ ದಿನವಹಿ ಪಠ್ಯಯೋಜನೆಯು ಹೀಗಿದ್ದಿತು:

ಮೊದಲನೆಯ ದಿನ:
ರ ಅಕ್ಷರವನ್ನು ವಿವರಣೆಯೊಂದಿಗೆ ಕಲಿಸುವುದು

ಎರಡನೆಯ ದಿನ
ಕ ಅಕ್ಷರವನ್ನು ವಿವರಣೆಯೊಂದಿಗೆ ಕಲಿಸುವುದು

ಮೂರನೆಯ ದಿನ
ಸ ಮತ್ತು ಲ ಅಕ್ಷರಗಳನ್ನು ವಿವರಣೆಯೊಂದಿಗೆ ಕಲಿಸುವುದು; ಒಂದು ಪದ್ಯವನ್ನು ಆಯ್ಕೆಮಾಡಿಕೊಂಡು ಗಟ್ಟಿಯಾಗಿ ಓದುವುದು ಹಾಗೂ ಅದರಲ್ಲಿ ಗುರುತಿನ ಅಕ್ಷರಗಳನ್ನು ತೋರಿಸುವುದು

Notes

ನಾಲ್ಕನೆಯ ದಿನ
ಅವೇ ಶಬ್ದಗಳಿಂದ ಅಕ್ಷರಗಳನ್ನು ಹುಡುಕುವುದು, ಹೊಸಹೊಸ ಶಬ್ದಗಳನ್ನು ಗುರುತಿಸುವುದು.

ಪ್ರತಿನಿತ್ಯದ ಪಠ್ಯಕ್ರಮದ ಸಾರಾಂಶ ಮತ್ತು ವಿಶ್ಲೇಷಣೆ

ಮೊದಲನೆಯ ದಿನ:
ಶಿಕ್ಷಕನು ಆಟಗಳ ಮೂಲಕ ರ ಅಕ್ಷರವನ್ನು ಕಲಿಸಲು ಯೋಚಿಸುತ್ತಾನೆ. ಯಾರ ಹೆಸರಿನಲ್ಲಿ ರ ಅಕ್ಷರವು ಇದೆಯೋ ಗುರುತಿಸಿ ಹೇಳಿ ಎಂದು ಮಕ್ಕಳಿಗೆ ಸೂಚಿಸುತ್ತಾನೆ. ಅವನ್ನು ಹಲಗೆಯ ಮೇಲೆ ಬರೆದು, ವೃತ್ತ ಎಳೆಯುತ್ತಾನೆ. ಬಳಿಕ ಚಟುವಟಿಕೆಯೊಂದನ್ನು ಸೂಚಿಸಿ, ಅದರಲ್ಲಿ ಜಾದೂಗಾರನೊಬ್ಬ ಪೆಟ್ಟಿಗೆಯಿಂದ ರ ಅಕ್ಷರವನ್ನು ಮಾತ್ರ ತೆಗೆದಂತೆ ಅಭಿನಯಿಸಿ, ಒಂದು ಕಾಲ್ಪನಿಕ ಪೆಟ್ಟಿಗೆಯನ್ನು ಹಲಗೆಯ ಮೇಲೆ ಬಿಡಿಸುತ್ತಾನೆ. ಬಳಿಕ ರುಮಾಲು, ರೇಡಿಯೋ, ರಿಕ್ಷಾ, ರದ್ದಿ ಮೊದಲಾದ ಶಬ್ದಗಳನ್ನು ಹೇಳುತ್ತಾ, ಪೆಟ್ಟಿಗೆಯಿಂದ ತೆಗೆದಂತೆ ಮಾಡುತ್ತಾನೆ. ಹೀಗೆ ರದಿಂದ ಆರಂಭವಾಗುವ ಬಹಳಷ್ಟು ಶಬ್ದಗಳನ್ನು ಅವನು ಮಕ್ಕಳಿಗೆ ಪರಿಚಯಿಸಿದಂತಾಯಿತು. ಮಕ್ಕಳಿಗೆ ತುಂಬಾ ಅಚ್ಚರಿಯಾಗಿ ಆ ಎಲ್ಲ ಶಬ್ದಗಳನ್ನು ಅವರು ಪುನರುಚ್ಛರಿಸುತ್ತಾರೆ. ರ ದಿಂದ ಪ್ರಾರಂಭವಾಗುವ ಇನ್ನಿತರೆ ಕೆಲವು ಶಬ್ದಗಳನ್ನು ಬರೆಯಲು ಶಿಕ್ಷಕ ಮಕ್ಕಳಿಗೆ ಹೇಳುತ್ತಾನೆ.

ಎರಡನೆಯ ದಿನ
ಎರಡನೆಯ ದಿನ, ಶಿಕ್ಷಕ ಲೋಕೇಶನು ಕ ಅಕ್ಷರವನ್ನು ಪರಚಿಯಿಸಲು ನಿರ್ಧರಿಸುತ್ತಾನೆ ಹಾಗೂ ಹಿಂದಿನ ದಿನದ ವಿಧಾನವನ್ನೇ ಅಳವಡಿಸಿಕೊಳ್ಳಲು ಯೋಚಿಸುತ್ತಾನೆ. ಒಂದು ಪೆಟ್ಟಿಗೆಯನ್ನು ಚಿತ್ರಿಸಿ, ಅದರಿಂದ ಜಾದೂಗಾರನು ಏನನ್ನು ಹೊರತೆಗೆಯಬಹುದೆಂದು ಕೇಳುತ್ತಾನೆ. ಕ ದಿಂದ ಆರಂಭವಾಗುವ ಸಾಕಷ್ಟು ಶಬ್ದಗಳನ್ನು ಮಕ್ಕಳು ಹೇಳಿದಾಗ, ಶಿಕ್ಷಕನು ಅವನ್ನು ಹಲಗೆಯ ಮೇಲೆ ಬರೆಯುತ್ತಾನೆ. ರ ಅಕ್ಷರಕ್ಕೆ ಮತ್ತೊಂದು ಪೆಟ್ಟಿಗೆಯ ಚಿತ್ರ ಬರೆದು ಕೇಳಿದಾಗ ಮಕ್ಕಳು ಇಡೀ ಪೆಟ್ಟಿಗೆಯನ್ನು ರ ಅಕ್ಷರದ ಶಬ್ದಗಳಿಂದ ತುಂಬಿಸಿಬಿಡುತ್ತಾರೆ. ಅವಧಿಯುದ್ದಕ್ಕೂ ಶಿಕ್ಷಕನು ತಾಳ್ಮೆಯಿಂದ ಇದ್ದುದು ಗೊತ್ತಾಗುವುದು.

ಮೂರನೆಯ ದಿನ
ಸ ಮತ್ತು ಲ ಅಕ್ಷರಗಳಿಗೆ ಶಿಕ್ಷಕನು ಹಿಂದಿನ ದಿನ ಪ್ರಯೋಗಿಸಿದ್ದ ವಿಧಾನವನ್ನೇ ಅನುಸರಿಸಿ, ನಂತರ ಎರಡು ಪದ್ಯಗಳನ್ನು ಗಟ್ಟಿಯಾಗಿ ಓದುತ್ತಾನೆ. ಬಳಿಕ ಅದರಲ್ಲಿ ಪಠ್ಯದಲ್ಲಿ ಬರುವ ಪದಗಳನ್ನು ಗುರುತು ಮಾಡಲು ಹೇಳಿದರು. ಮಕ್ಕಳು ಎಲ್ಲಾ ನಾಲ್ಕೂ ಅಕ್ಷರಗಳನ್ನು ಒಟ್ಟಿಗೇ ಗುರುತಿಸಲು ಕಷ್ಟಪಟ್ಟರು. ಬಳಿಕ ಆ ಚಟುವಟಿಕೆಯನ್ನು ನಿಲ್ಲಿಸಿ, ಒಂದು ಬಾರಿಗೆ ಕೇವಲ ಒಂದು ಅಕ್ಷರವನ್ನು ಮಾತ್ರವೇ ಗುರುತಿಸಲು ಶಿಕ್ಷಕ ತಿಳಿಸಿದನು.

ನಾಲ್ಕನೆಯ ದಿನ
ಈಗ ಮಕ್ಕಳು ನಾಲ್ಕೂ ಅಕ್ಷರಗಳನ್ನು ಗುರುತಿಸುತ್ತಾರೆ. ಮಕ್ಕಳು ಅಕ್ಷರಗಳನ್ನು ಸರಿಯಾಗಿ ಕಲಿತಿದ್ದರಿಂದ ಇದು ಪುನರಭ್ಯಾಸದ ತರಗತಿಯ ಸಮಯವಾಗಿತ್ತು. ಹೀಗಾಗಿ ಕಲಿಸಿದ ನಾಲ್ಕೂ ಅಕ್ಷರಗಳನ್ನು ಬಳಸಿಕೊಂಡು ರಚಿಸಲಾದ ಶಬ್ದಗಳನ್ನು ಶಿಕ್ಷಕನು ಬರೆದನು. ಬಳಿಕ ನಾಲ್ಕು ಪೆಟ್ಟಿಗೆಗಳನ್ನು ರಚಿಸಿ, ಅಕ್ಷರಗಳಿಂದ ಗುರುತಿಸಿ, ಆಯಾ ಶಬ್ದಗಳನ್ನು ಅದೇ ಪೆಟ್ಟಿಗೆಯಲ್ಲಿ ಇಡಲಾಯಿತು. ಸಲ್ವಾರ್ ಎಂಬ ಪದವನ್ನು ತೋರಿಸಿ ನಂತರ ಅದು ಯಾವ ಪೆಟ್ಟಿಗೆಗೆ ಸೇರುವುದೆಂದು ಮಕ್ಕಳನ್ನು ಕೇಳಲಾಯಿತು. ಮಕ್ಕಳು ಮೂರೂ ಶಬ್ದಗಳನ್ನು ಮುಚ್ಚಿಬಿಟ್ಟಿದ್ದರಿಂದ ಅವರಿಗೆ ಸರಿಯಾದ ಶಬ್ದವನ್ನು ಗುರುತಿಸಲು ಆಗಲಿಲ್ಲ. ಬಳಿಕ ಚರ್ಚೆಯ ನಂತರ ಸರಿಯಾದ ಉತ್ತರದೊಂದಿಗೆ ವಾಪಾಸು ಬರಲು ಹೇಳಿದಾಗ, ಮಕ್ಕಳಿಗೆ ಮೂರೂ ಪೆಟ್ಟಿಗೆಗಳಿಗೆ ಅಕ್ಷರಗಳು ಸೇರುವವೆಂಬುದು ತಿಳಿಯಿತು. ಇದರಿಂದ ಮಕ್ಕಳು ಆಕ್ಷರಗಳನ್ನು ಗುರುತಿಸುವುದರ ಜೊತೆಗೆ, ಪದಗಳನ್ನೂ ಓದಲು ಕಲಿತರು.

Notes

**ಪ್ರಗತಿಯ ಪರಿಶೀಲನೆ – 7**

1. *ಲೋಕೇಶನ ನಾಲ್ಕನೆಯ ದಿನದ ಪಠ್ಯಯೋಜನೆ ಏನಿತ್ತು?*
   *ಎ. ಸ ಅಕ್ಷರವನ್ನು ಕಲಿಸುವುದು*

   *ಬಿ. ಪ ಅಕ್ಷರವನ್ನು ಕಲಿಸುವುದು*

   *ಸಿ. ಚ ಅಕ್ಷರವನ್ನು ಕಲಿಸುವುದು*

   *ಡಿ. ಪಾಠದ ಪುನರಭ್ಯಾಸ ಮಾಡಿಸುವುದು*

2. *ಅಕ್ಷರಗಳನ್ನು ಕಲಿಸಲು ಲೋಕೇಶನು ಅನುಸರಿಸಿದ ವಿಧಾನವು ಸರಿಯಾದುದೆಂದು ನಿಮಗೆ ಅನಿಸುತ್ತದೆಯೇ?*

   ..........................................................................................................

   ..........................................................................................................

   ..........................................................................................................

3. *ಯಾವ ಪೆಟ್ಟಿಗೆಯಲ್ಲಿ ಸಲ್ವಾರ್ ಪದ ಇರುವುದೆಂಬುದನ್ನು ತಿಳಿಯಲು ಲೋಕೇಶನು ಮಕ್ಕಳೊಂದಿಗೆ ಅಷ್ಟೊಂದು ಸಮಯವನ್ನು ಕಳೆದಿದ್ದೇಕೆ? ನೇರವಾಗಿ ಉತ್ತರವನ್ನು ಮಕ್ಕಳಿಗೆ ಹೇಳಬಹುದಿತ್ತು ಎಂದು ನಿಮಗೆ ಅನಿಸುವುದೇ?*

   ..........................................................................................................

   ..........................................................................................................

   ..........................................................................................................

## 8.6.4 ಮಾದರಿ ಪಠ್ಯ ಯೋಜನೆ 4 - ರಾಧಾಳ ತರಗತಿ

ರಾಜಸ್ಥಾನಿನ ಅತಾರು ಘಟಕದಲ್ಲಿ ರಾಧಾ ಒಬ್ಬ ಮಾಧ್ಯಮಿಕ ಶಾಲಾ ಶಿಕ್ಷಕಿ. ಇಂಗ್ಲಿಷ್ ಕಲಿಸುತ್ತಾರೆ. ಶಾಲೆಗೆ ಪಟ್ಟಣ ಹಾಗೂ ಹಳ್ಳಿ ಎರಡರಿಂದಲೂ ವಿದ್ಯಾರ್ಥಿಗಳು ಬರುತ್ತಾರೆ. ಹೆಚ್ಚಿನ ಪಾಲಕರು ಕೃಷಿಕರಾಗಿದ್ದು, ಕಿರಾಣಿ ಅಂಗಡಿ ನಡೆಸುತ್ತ, ಸಣ್ಣಸಣ್ಣ ಹೊಟೆಲುಗಳನ್ನು ನಡೆಸುತ್ತ, ಅಂಗಡಿಗಳನ್ನು ನಡೆಸುತ್ತ ಇರುವವರಾಗಿದ್ದಾರೆ. ಹೆಚ್ಚಿನ ಮಕ್ಕಳು ಕೃಷಿಹಿನ್ನೆಲೆಯ ಕುಟುಂಬದವರೇ ಆಗಿದ್ದಾರೆ. ಹೊಲಗೆಲಸಗಳು ಅಧಿಕವಾಗಿರುವ ಸಮಯದಲ್ಲಿ ಶಾಲೆಯಲ್ಲಿ ಮಕ್ಕಳ ಗೈರುಹಾಜರಿ ಎದ್ದುಕಾಣುತ್ತದೆ. ರಾಧಾಳ ತರಗತಿಯಲ್ಲಿ 41 ಜನ ಮಕ್ಕಳಿದ್ದಾರೆ. ಅವಕಾಶ ದೊರೆತಾಗಲೆಲ್ಲ ಪದ್ಯ ಹೇಳಿಕೊಡುವುದು ಆಕೆಗೆ ಪ್ರಿಯವಾದ ಕೆಲಸ. ಮಳೆಗಾಲದ ಒಂದು ತರಗತಿಯಲ್ಲಿ ಕೆಲದಿನಗಳ ಕಾಲ ಆಕೆ ಹೇಳಿಕೊಡಲು ಯೋಜಿಸಿದ್ದ ಪದ್ಯವೊಂದರ ಪಠ್ಯ ಯೋಜನೆ ಹೀಗಿತ್ತು.

- ಪದ್ಯವನ್ನು ಹೇಳಿಕೊಡುತ್ತಿರುವಾಗ ಮಕ್ಕಳ ಸಕ್ರಿಯ ಪಾಲ್ಗೊಳ್ಳುವಿಕೆ
- ಪದ್ಯವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಲು ಮಕ್ಕಳಿಗೆ ಹೇಳುವುದು

Notes

- ಚರ್ಚೆಯ ಮೂಲಕ ಅವರಲ್ಲಿನ ಭಾಷಾ ಜ್ಞಾನವನ್ನು ಉತ್ತೇಜಿಸುವುದು
- ಇಂಗ್ಲಿಷ್ ಪದ್ಯಗಳನ್ನು ಕಲಿಯುವಾಗ ಆತ್ಮವಿಶ್ವಾಸ ಮೂಡಿಸುವುದು

ಮೊದಲನೇ ದಿನ:

1. ಮಳೆಯೊಂದಿಗಿನ ಅನುಭವವನ್ನು ಹಂಚಿಕೊಳ್ಳಲು ತಿಳಿಸುವುದು
2. ಪದ್ಯವನ್ನು ಓದುವುದು ಹಾಗೂ ತರಗತಿಯ ಚಟುವಟಿಕೆಗಳಲ್ಲಿ ಭಾಗವಹಿಸುವುದು
3. ಚರ್ಚೆಯ ಮೂಲಕ ಪದ್ಯದ ಅರ್ಥವನ್ನು ತಿಳಿದುಕೊಳ್ಳುವುದು
4. ಗುಂಪು ಚಟುವಟಿಕೆಗಳ ಮೂಲಕ ಕಠಿಣ ಪದಗಳ ಅರ್ಥವನ್ನು ತಿಳಿದುಕೊಳ್ಳುವುದು

ಎರಡನೆಯ ದಿನ

1. ಚಿತ್ರವನ್ನು ತಯಾರಿಸಿ, ಅದರ ಮೂಲಕ ಪದ್ಯದಲ್ಲಿ ಬರುವ ನಾಮಪದಗಳನ್ನು ಕಲಿಯುವುದು
2. ಚಿತ್ರದ ಹಿನ್ನೆಲೆಯನ್ನು ಚರ್ಚಿಸುವುದು

ಮೂರನೆಯ ದಿನ

1. ಗುಣವಿಶೇಷಣಗಳನ್ನು ಕಲಿಸುವುದು, ಪದ್ಯದಲ್ಲಿ ಬರುವ ಗುಣವಿಶೇಷಣಗಳನ್ನು ಕಲಿಯುವುದು

ನಾಲ್ಕನೆಯ ದಿನ

1. ಪಠ್ಯದ ಕೊನೆಯಲ್ಲಿ ಕೊಡಲಾದ ಚಟುವಟಿಕೆಗಳನ್ನು ಮಾಡುವುದು

ದಿನವಹಿ ಚಟುವಟಿಕೆಯ ಸಾರಾಂಶ

ಒಂದನೆಯ ದಿನ

ಮಳೆಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಪ್ರಶ್ನೋತ್ತರ ಮಾದರಿಯಲ್ಲಿ ಚರ್ಚಿಸಲು ರಾಧಾ ಮಕ್ಕಳಿಗೆ ಸೂಚಿಸಿದಳು. ನಂತರ ಒಂದು ಆಟವನ್ನು ಆಡಿಸಲಾಯಿತು. ಆ ಪ್ರಕಾರ, ಪ್ರತಿ ಮಗುವೂ ಮಳೆ ಎಂಬ ಪದ ಕಿವಿಗೆ ಬಿದ್ದೊಡನೆ, ತಮಗೆ ಏನು ನೆನಪಾಗುತ್ತದೆ ಎಂಬುದನ್ನು ಮಕ್ಕಳು ಹೇಳಬೇಕಾಗಿತ್ತು. ನಂತರ ಮಕ್ಕಳಿಂದ ಪದ್ಯವನ್ನು ಗಟ್ಟಿಯಾಗಿ ಓದಿಸಲಾಯಿತು. ಅಭಿನಯಿಸುತ್ತಾ ಪದ್ಯ ಓದುವಂತೆ ಮಕ್ಕಳಿಗೆ ಸೂಚಿಸಲಾಯಿತು. ಇದರಿಂದ ಮಕ್ಕಳಿಗೆ ಪದ್ಯವು ಸುಲಭವಾಗಿ ಅರ್ಥವಾಗುತ್ತಾ ಹೋಯಿತು.

ಎರಡನೆಯ ದಿನ

ಮಕ್ಕಳಿಗೆ ತಮ್ಮ ಹಳ್ಳಿಯ ಚಿತ್ರ ಬರೆಯಲು ಸೂಚಿಸಲಾಯಿತು. ಯಾವುದನ್ನು ಚಿತ್ರಿಸಲು ಮಕ್ಕಳು ಕಷ್ಟಪಡುತ್ತಿರುವರು ಎಂಬುದನ್ನು ಶಿಕ್ಷಕಿ ಗುರುತಿಸಿಕೊಂಡರು. ಆಗ ಉದ್ದೇಶವನ್ನು ಬದಲಾಯಿಸಿ, ತಮ್ಮ ಮನೆಯಿಂದ ಶಾಲೆಗೆ ಬರುವ ದಾರಿಯ ಚಿತ್ರವನ್ನು ಎಲ್ಲಾ ವಿವರಗಳ ಜೊತೆಗೆ ಬಿಡಿಸುವಂತೆ ಹೇಳಲಾಯಿತು. ಮರದ ಹಾಗೂ ಗುಡಿಸಲಿನ ಚಿತ್ರ ಬರೆಯಲು ಹೇಳಿ, ಮೇಲೆ, ಕೆಳಗೆ, ಒಳಗೆ, ಹೊರಗೆ ಮೊದಲಾದ ಶಬ್ದಗಳನ್ನು ಹಲಗೆಯ ಮೇಲೆ ಬರೆಯಲಾಯಿತು. ಬಿಡಿಸಿದ ಚಿತ್ರಗಳನ್ನು ಬರೆದ ಚಿತ್ರಗಳೊಂದಿಗೆ ವಿವರಿಸಲಾಯಿತು. ಸೂಚನೆಗಳು ಚುಟುಕಾಗಿ ಇದ್ದವು. 'ಮರದ ಕೆಳಗೆ ಗೊಂಬೆಯನ್ನು ಬಿಡಿಸಿರಿ' ಇತ್ಯಾದಿ.
ಮಕ್ಕಳು ಚಟುವಟಿಕೆಯಲ್ಲಿ ಮಗ್ನರಾಗಿದ್ದಾಗ ಒಂದು ಸುತ್ತು ತರಗತಿಯನ್ನು ಶಿಕ್ಷಕಿ ಓಡಾಡಿ ಗಮನಿಸಿದರು. ಸುತ್ತಲೂ, ಹಿಂದೆ ಎಂಬ ಕೆಲವು ಪದಗಳನ್ನು ವಿವರಿಸುವುದು ಮಕ್ಕಳಿಗೆ ಕಷ್ಟವೆನಿಸಿತು. ಆದರೆ, ಶಿಕ್ಷಕಿ ಇತರೆ ಹಲವಾರು ಉದಾಹರಣೆಗಳನ್ನು ಕೊಟ್ಟು ಪಾಠವನ್ನು ಮುಗಿಸಿದರು.

**ತರಗತಿಯ ವಾತಾವರಣದೊಳಗೆ ಭಾಷಾಬೋಧನೆಯ ವಿಧಾನಗಳು**

ಮರದ ಹಾಗೂ ಗುಡಿಸಲಿನ ಚಿತ್ರ ಬರೆಯಲು ಹೇಳಿ, ಮೇಲೆ, ಕೆಳಗೆ, ಒಳಗೆ, ಹೊರಗೆ ಮೊದಲಾದ ಶಬ್ದಗಳನ್ನು ಹಲಗೆಯ ಮೇಲೆ ಬರೆಯಲಾಯಿತು. ಬಿಡಿಸಿದ ಚಿತ್ರಗಳನ್ನು ಬರೆದ ಚಿತ್ರಗಳೊಂದಿಗೆ ವಿವರಿಸಲಾಯಿತು. ಸೂಚನೆಗಳು ಚುಟುಕಾಗಿ ಇದ್ದವು. 'ಮರದ ಕೆಳಗೆ ಗೊಂಬೆಯನ್ನು ಬಿಡಿಸಿರಿ' ಇತ್ಯಾದಿ. ಮಕ್ಕಳು ಚಟುವಟಿಕೆಯಲ್ಲಿ ಮಗ್ನರಾಗಿದ್ದಾಗ ಒಂದು ಸುತ್ತು ತರಗತಿಯನ್ನು ಶಿಕ್ಷಕಿ ಓಡಾಡಿ ಗಮನಿಸಿದರು. ಸುತ್ತಲೂ, ಹಿಂದೆ ಎಂಬ ಕೆಲವು ಪದಗಳನ್ನು ವಿವರಿಸುವುದು ಮಕ್ಕಳಿಗೆ ಕಷ್ಟವೆನಿಸಿತು. ಆದರೆ, ಶಿಕ್ಷಕಿ ಇತರೆ ಹಲವಾರು ಉದಾಹರಣೆಗಳನ್ನು ಕೊಟ್ಟು ಪಾಠವನ್ನು ಮುಗಿಸಿದರು.

ಮೂರನೆಯ ದಿನ

ಪದ್ಯವನ್ನು ವಿವರಿಸಿ, ಪ್ರಶ್ನೋತ್ತರಗಳ ಮೂಲಕ ಕೆಲವೊಂದು ವಿಷಯಗಳನ್ನು ಚರ್ಚಿಸಲು ಶಿಕ್ಷಕಿ ಮಕ್ಕಳಿಗೆ ಸೂಚಿಸಿದರು. ಉದಾಹರಣೆಗೆ, ತೋಟ ಎಂಬ ಶಬ್ದ ಬರೆದು, ಅದಕ್ಕೆ ಸಂಬಂಧಿಸಿದ ಗುಣವಿಶೇಷಣಗಳಾದ ಹಸಿರು, ದೊಡ್ಡ, ವಿಸ್ತಾರವಾದ ಮುಂತಾದ ಪದಗಳನ್ನು ಅಭಿನಯದ ಮೂಲಕ ತೋರಿಸಲು ಹೇಳಿದರು. ಪದ್ಯದಲ್ಲಿ ಬಂದಿರುವ ಇತರೆ ಗುಣವಿಶೇಷಣಗಳನ್ನು ಗೆರೆಎಳೆದು ಗುರುತಿಸಲು ತಿಳಿಸಿದರು. ಇನ್ನಿತರ ಗುಣವಿಶೇಷಣಗಳನ್ನು ಹುಡುಕಿ ಬರೆಯಲು ತಿಳಿಸಿದರು. ಇದರಿಂದಾಗಿ ಮಕ್ಕಳು ವಿವರವಾಗಿ ವಿಷಯವನ್ನು ಅರಿತುಕೊಂಡರು.

ನಾಲ್ಕನೆಯ ದಿನ

ಈಗ ಚಟುವಟಿಕೆಗಳನ್ನು ಮಾಡಿಸುವ ಸಮಯ. ಇಂಗ್ಲಿಷಿನಲ್ಲಿ ಪಠ್ಯದ ಪ್ರಶ್ನೆಗಳನ್ನು ಗಟ್ಟಿಯಾಗಿ ಓದಿ ಹೇಳಿದಾಗ ಮಕ್ಕಳಿಗೆ ಅರ್ಥವಾಗಲಿಲ್ಲ. ಬಳಿಕ ಹಿಂದಿ ಹಾಗೂ ಸ್ಥಳೀಯ ಭಾಷೆಯಲ್ಲಿ ವಿವರಿಸಿದಾಗ ಮಕ್ಕಳು ಪ್ರತಿಕ್ರಿಯಿಸಿದರು. ಶಿಕ್ಷಕಿ ಅವರು ನೀಡಿದ ಉತ್ತರಗಳನ್ನು ಹಲಗೆಯ ಮೇಲೆ ಬರೆದರು. ಸ್ಥಳೀಯ ಭಾಷೆಯಲ್ಲಿ ಅವರು ನೀಡಿದ ಉತ್ತರಗಳನ್ನೂ ಬರೆಯಲಾಯಿತು. ಅವೇ ಉತ್ತರಗಳನ್ನು ಇಂಗ್ಲಿಷಿನಲ್ಲಿ ವಿವರಿಸಿ ಚರ್ಚಿಸಲಾಯಿತು. ಕೊನೆಗೆ, ಪಠ್ಯದ ಕೊನೆಯಲ್ಲಿ ಇದ್ದ ಪ್ರಶ್ನೆಗಳಿಗೆ ಮಕ್ಕಳು ಹಲಗೆಯ ಮೇಲಿನ ವಿವರಣೆಗಳ ಆಧಾರದ ಮೇಲೆ ಸುಲಭವಾಗಿ ಉತ್ತರಿಸಿದರು.

**ಪ್ರಗತಿಯ ಪರಿಶೀಲನೆ – 8**

*1. ರಾಧಾ ಕಲಿಸುತ್ತಿದ್ದ ವಿಷಯ ಯಾವುದು?*

*ಎ. ಹಿಂದಿ*

*ಬಿ. ಇಂಗ್ಲಿಷ್*

*ಸಿ. ವಿಜ್ಞಾನ*

*ಡಿ. ಗಣಿತ*

*2. ಕೊನೆಯ ದಿನದ ಪಾಠದ ವೇಳೆ ಹಲಗೆಯ ಮೇಲೆ ಬರೆದಿದ್ದ ಉತ್ತರಗಳನ್ನು ಬರೆದುಕೊಳ್ಳಲು ರಾಧಾ ಮಕ್ಕಳಿಗೆ ಸೂಚಿಸಿದರು. ಆಗ ಮಕ್ಕಳು ಯಾವುದಾದರೂ ಭಾಷೆಯನ್ನು ಕಲಿತರೇ?*

..............................................................................................................................

..............................................................................................................................

..............................................................................................................................

Notes

Notes

*3. ವಿವರಿಸಿರುವ ಪದ್ಯವನ್ನು ಮೂರನೇ ತರಗತಿಯ ಮಕ್ಕಳಿಗೆ ನೀವೇ ಕಲಿಸುತ್ತಿರುವ ಹಾಗೆ ಪಠ್ಯಯೋಜನೆ ತಯಾರಿಸಿ.*

.....................................................................................................................................

.....................................................................................................................................

.....................................................................................................................................

### 8.6.5 ಪರಿಣಾಮಕಾರಿ ಪಠ್ಯಯೋಜನೆಗೆ ಕತೆಯ ಮೂಲಕ ಬೋಧಿಸುವ ತಂತ್ರ

ಹರಿಯಾಣದ ಫರೀದಾಬಾದಿನಲ್ಲಿ ಕೌಶಲ್ 5ನೆ ತರಗತಿಯ ಮಕ್ಕಳಿಗೆ ಇಂಗ್ಲಿಷ್ ಬೋಧಿಸುವ ಶಿಕ್ಷಕ. ಅವನ ತರಗತಿಯಲ್ಲಿ ಕೆಳಮಧ್ಯಮ ವರ್ಗಕ್ಕೆ ಸೇರಿದ 25 ಮಕ್ಕಳಿರುವರು. ಹೆಚ್ಚಿನ ಪಾಲಕರು ದಿನಗೂಲಿಯ ಆಧಾರದ ಮೇಲೆ ಕೆಲಸಮಾಡುವ ಕೂಲಿಕಾರರು ಹಾಗೂ ಕೆಲವರು ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರು. ಮನೆಗೆಲಸವನ್ನೂ ಮಾಡಿಕೊಂಡು, ಜೊತೆಗಿರುವ ಸಣ್ಣಸಣ್ಣ ಮಕ್ಕಳನ್ನೂ ನೋಡಿಕೊಂಡು ಶಾಲೆಗೆ ಬರುತ್ತಾರೆ ಈ ಮಕ್ಕಳು.
ಇವತ್ತು ಕೌಶಲ್ ಹರಿಯಾಣ ಶಿಕ್ಷಣ ಇಲಾಖೆಯ ಪ್ರಕಟಣೆಯ ಪಠ್ಯಪುಸ್ತಕದಿಂದ 9ನೇ ಪಾಠವನ್ನು ಆರಿಸಿಕೊಂಡಿದ್ದಾನೆ. ಅದು ಜೀವನದಲ್ಲಿ ಮುಂದೆ ದೊಡ್ಡವ್ಯಕ್ತಿಯಾಗುವ ಬಾಲಕನೊಬ್ಬನ ಬಾಲ್ಯದ ಕತೆ. ತರಗತಿಗೆ ಹೋಗುವ ಮೊದಲೇ ಕೌಶಲ್ ಪಾಠವನ್ನು ಓದಿಕೊಂಡಿದ್ದಾನೆ.

ಮೊದಲನೆ ದಿನ

ಕೌಶಲ್ ಮಕ್ಕಳಿಗೆ ತಮ್ಮ ಬಾಲ್ಯಜೀವನದ ಅನುಭವಗಳನ್ನು, ಅಂದರೆ, ಅವರು ಮಾಡುತ್ತಿದ್ದ ಚೇಷ್ಟಗಳು, ಮೋಜಿನ ಪ್ರಸಂಗಗಳು, ತಪ್ಪುಮಾಡಿ ಅನುಭವಿಸಿದ ಶಿಕ್ಷೆಗಳು ಇತ್ಯಾದಿ ಸಂಗತಿಗಳನ್ನು ಹಂಚಿಕೊಳ್ಳಲು ಹೇಳುತ್ತಾನೆ. ತಮ್ಮ ಬಾಲ್ಯದ ಅನುಭವಗಳ ಬಗ್ಗೆ ಮಾತನಾಡಲು ಹಿಂಜರಿದ ಮಕ್ಕಳ ಸಂಕೋಚವನ್ನು ಹೋಗಲಾಡಿಸಲು ಶಿಕ್ಷಕ ಕೌಶಲ್ ತನ್ನದೇ ಬಾಲ್ಯಜೀವನದ ಕತೆಯನ್ನು ಮಕ್ಕಳಿಗೆ ಹೇಳುತ್ತಾನೆ. ಇದು ಮಕ್ಕಳು ಅವರವರ ಬಾಲ್ಯದ ನೆನಪುಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಹಾಯ ಮಾಡಿತು. ಬಳಿಕ ಕೌಶಲ್ ಪಾಠವನ್ನು ಗಟ್ಟಿಯಾಗಿ ಓದಲು ಪ್ರಾರಂಭಿಸುತ್ತಾನೆ. ಅವನ ತರಗತಿಯ ಹೆಚ್ಚಿನ ಮಕ್ಕಳಿಗೆ ಇಂಗ್ಲಿಷ್ ಓದಲು ಬರುವುದಿಲ್ಲವಾದ್ದರಿಂದ ಹಾಗೂ ಕೆಲವು ಮಕ್ಕಳಿಗೆ ಬಂದರೂ ಕೇವಲ ಒಮ್ಮೆ ಮಾತ್ರ ಎರಡು ಮೂರು ಪದಗಳನ್ನು ಓದಲುಬಲ್ಲವರಾಗಿದ್ದರು. ಬೇರೆಬೇರೆ ಹಾವಭಾವಗಳಿಂದ, ಗಟ್ಟಿಯಾಗಿ ಪಾಠವನ್ನು ಶಿಕ್ಷಕ ಓದಿದನು. ವಿಷಯವನ್ನು ಚೆನ್ನಾಗಿ ವಿವರಿಸಲು ಕೆಲವೊಮ್ಮೆ ಅಲ್ಲಿಯದೆ ಸ್ಥಳೀಯ ಭಾಷೆಯನ್ನು ಬಳಸಿದ. ಬಳಿಕ ನರೇಂದ್ರನ ಬಾಲ್ಯಜೀವನದ ಬಗ್ಗೆ ಇದ್ದ ವಿವರಣೆಯನ್ನು ಓದಿಮುಗಿಸಿದ. ನಂತರ ಮಕ್ಕಳಿಗೆ ನರೇಂದ್ರನು ಹೇಗಿದ್ದನು ಎಂದು ಕೇಳಿ, ಮತ್ತೆ ಓದಲು ತೊಡಗಿದ. ಮಕ್ಕಳು ನರೇಂದ್ರನ ಬಾಲ್ಯಜೀವನದ ಬಗ್ಗೆ ತಮಗೆ ತಿಳಿದಿದ್ದನ್ನು ಕುರಿತು ಮಾತಾಡತೊಡಗಿದರು. ಚರ್ಚೆಯ ಹಾಗೂ ವಿವರಣೆಯ ನಂತರ ಕೌಶಲ್ ಈ ಕೆಳಗಿನ ಪ್ರಶ್ನೆಗಳನ್ನು ಹಲಗೆಯ ಮೇಲೆ ಪಟ್ಟಿಮಾಡಿದನು.

ಹೆಸರು________________________________________

ವಯಸ್ಸು________________________________________

ತಾಯಿಯ ಹೆಸರು________________________________________

ತಾಯಿಯ ಉದ್ಯೋಗ________________________________________

ತಂದೆಯ ಹೆಸರು________________________________________

ತಂದೆಯ ಉದ್ಯೋಗ________________________________________

ನಿಮಗೇನು ಇಷ್ಟವಾಗುವುದು? ________________________________________

ನಿಮಗೇನು ಇಷ್ಟವಾಗುವುದಿಲ್ಲ? ________________________________________

ಕೌಶಲ್ ಮೊದಲನೆ ದಿನದ ಅಭ್ಯಾಸದ ಅಂಗವಾಗಿ ನರೇಂದ್ರನ ಬಗ್ಗೆ ಎಲ್ಲಾ ಮಾಹಿತಿಯನ್ನು ಪಠ್ಯದಿಂದ ಹುಡುಕಿ ತೆಗೆಯಲು ಹೇಳಿದ. ಆದರೆ ಮಕ್ಕಳಿಗೆ ನರೇಂದ್ರನ ಬಗ್ಗೆ ಎಲ್ಲಾ ಮಾಹಿತಿಯನ್ನು ಪಠ್ಯದಿಂದ ಹುಡುಕಿ ತೆಗೆದು ವ್ಯವಸ್ಥಿತವಾಗಿ ಬರೆಯುವುದು ಕಷ್ಟವಾಯಿತು. ನಂತರ ತಮ್ಮತಮ್ಮಲ್ಲಿಯೇ ಚರ್ಚಿಸಿ ಮೇಲೆ ಪಟ್ಟಿಮಾಡಿರುವ ಪ್ರಶ್ನೆಗಳನ್ನು ತುಂಬಲು ಹೇಳಿದ. ಬಾಲಕಿಯರು ಮತ್ತು ಬಾಲಕರು ಪರಸ್ಪರ ಮಾತಾಡಿಕೊಳ್ಳಲು ಮೊದಮೊದಲು ಹಿಂಜರಿದರೂ ನಂತರ ಒಬ್ಬರಿಗೊಬ್ಬರು ಮಾತಾಡಿಕೊಂಡರು.

ಎರಡನೇ ದಿನ

ಕೌಶಲ್ ಮೊದಲನೇ ದಿನದ ಚಟುವಟಿಕೆಗಳ ಬಗ್ಗೆ ಮೊದಲು ಮಾತಾನಾಡಿ ನಂತರ ಇಡೀ ಕತೆಯನ್ನು ಸ್ಥಳೀಯ ಭಾಷೆಯ ಉಪಯೋಗದೊಂದಿಗೆ, ಕೆಲವು ಕಠಿಣ ಪದಗಳನ್ನು ಉಪಯೋಗಿಸಿ ಓದುತ್ತಾನೆ. ಬಳಿಕ ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡಿ, ಪ್ರತಿಯೊಂದು ಗುಂಪಿಗೂ ನರೇಂದ್ರನ ಬಗ್ಗೆ ಅವರ ಮಾತೃಭಾಷೆಯಲ್ಲಿಯೇ ಮಾತಾಡುವ ಅವಕಾಶವನ್ನು ಕೊಟ್ಟನಲ್ಲದೇ, ತಮಗೆ ಅರ್ಥವಾದ ಅಂಶಗಳನ್ನು ಪುಸ್ತಕದಲ್ಲಿ ಬರೆದಿಡುವಂತೆ ಸೂಚಿಸಿದನು.
ಮಕ್ಕಳು ಪರಸ್ಪರ ಈ ವಿಷಯವಾಗಿ ಚರ್ಚಿಸುವುದರಿಂದ ಉಂಟಾದ ಗಲಾಟೆಯನ್ನು ಗಮನಿಸಿ, ಶಿಕ್ಷಕ ಅವರಿಗೆ ಮೆತ್ತಗೆ ಮಾತಾಡುವುದಾಗಿ ಸೂಚಿಸಿದನು.

ಮೂರನೇ ದಿನ

ಗುಂಪು ಚಟುವಟಿಕೆಯ ಮೂಲಕ ಮಕ್ಕಳು ತಮಗೆ ಒಪ್ಪಿಸಿದ ಕಾರ್ಯಯೋಜನೆಯನ್ನು ಮಾಡಿಮುಗಿಸಿದರು. ಕೌಶಲ್ ಪ್ರತಿ ಗುಂಪಿಗೂ ಅಂಕಗಳನ್ನು ಕೊಟ್ಟು, ಆಯಾ ಗುಂಪಿಗೆ ಕಾರ್ಯನಿರ್ವಹಣೆಯನ್ನು ನಿಗದಿತ ಸ್ಥಾನಗಳನ್ನು ಕೊಡುವ ಮುಖಾಂತರ ಘೋಷಿಸಿದನು. ಚರ್ಚೆಯಿಂದ ವ್ಯಕ್ತವಾದ ಅನಿಸಿಕೆಗಳನ್ನು ಕ್ರೋಢೀಕರಿಸಿ ಹಲಗೆಯ ಮೇಲೆ ಬರೆದನು. ತರಗತಿಯು ಮುಗಿಯುವವರೆಗೆ ಇದೇ ಸಂಗತಿಗಳ ಕುರಿತಾಗಿ ಚರ್ಚೆ ನಡೆಯಿತು.

ನಾಲ್ಕನೆಯ ದಿನ

ಮಕ್ಕಳು ಪಾಠವನ್ನು ಓದುತ್ತಿರುವಾಗ ಕೌಶಲ್ ಅವರಿಗೆ ಪಾಠದ ಕೊನೆಯಲ್ಲಿ ಕೊಡಲಾಗಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಸೂಚಿಸಿದ. ಮಕ್ಕಳು ಉತ್ತರಗಳನ್ನು ಹುಡುಕಿ ತೆಗೆಯುತ್ತಿರುವಂತೆಯೇ, ಶಿಕ್ಷಕ ಅವುಗಳನ್ನು ಹಲಗೆಯ ಮೇಲೆ ಬರೆಯಲಾರಂಭಿಸಿದ. ಈ ರೀತಿಯಾಗಿ ಚರ್ಚಾವಿಧಾನದಿಂದ ಇಡೀ ಅಭ್ಯಾಸವನ್ನು ಮುಗಿಸಿದ.

**ಪ್ರಗತಿಯ ಪರಿಶೀಲನೆ – 9**

*1. ಎರಡನೇ ದಿನ ಕತೆಯನ್ನು ಓದುವಾಗ ಕೌಶಲ್ ಯಾವ ಭಾಷೆಯನ್ನು ಉಪಯೋಗಿಸಿದನು?*

*ಎ. ಸ್ಥಳೀಯ ಭಾಷೆಯ ಪದಗಳು*

*ಬಿ. ಇಂಗ್ಲಿಷ್ ಪದಗಳು*

*ಸಿ. ಉರ್ದುಪದಗಳು*

*ಡಿ. ಹಿಂದಿ ಪದಗಳು*

Notes

*2. ನರೇಂದ್ರನ ಕುರಿತು ಬರೆಯುವ ಬದಲಾಗಿ ಕೌಶಲ್ ತಮ್ಮ ಕುರಿತೇ ಬರೆಯುವಂತೆ ಮಕ್ಕಳಿಗೆ ಹೇಳಿದ್ದೇಕೆ?*

.......................................................................................................................

.......................................................................................................................

.......................................................................................................................

*3. ಕೌಶಲ್ ತರಗತಿಯನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದೇಕೆ?*

.......................................................................................................................

.......................................................................................................................

.......................................................................................................................

*4. ಗುಂಪು ಚಟುವಟಿಕೆಯು ಪರಿಣಾಮಕಾರಿಯಾಗಿ ಕಲಿಯಲು ಮಕ್ಕಳಿಗೆ ಹೇಗೆ ಸಹಾಯಕವಾಯಿತು?*

.......................................................................................................................

.......................................................................................................................

.......................................................................................................................

*5. ಚರ್ಚಾವಿಧಾನದಿಂದ ತರಗತಿಯಲ್ಲಿ ಗದ್ದಲ ಹೆಚ್ಚಾಯಿತು. ಇದು ತರಗತಿಯನ್ನು ನಡೆಸುವ ಉತ್ತಮ ವಿಧಾನವೆಂದು ನಿಮಗೆ ಅನಿಸುತ್ತದೆಯೇ? ತರಗತಿಯ ಶಿಸ್ತಿಗೆ ಧಕ್ಕೆ ತರುವುದೆಂದು ಅನಿಸುವುದಿಲ್ಲವೇ? ಸವಿವರವಾಗಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.*

.......................................................................................................................

.......................................................................................................................

.......................................................................................................................

## 8.7 ಭಿತ್ತಿಪತ್ರಗಳು ಮತ್ತು ಜಾಹಿರಾತುಗಳು

ಭಿತ್ತಿಪತ್ರಗಳು ಮತ್ತು ಜಾಹಿರಾತುಗಳು ಒಂದು ಪರಿಣಾಮಕಾರಿಯಾದ ಪಠ್ಯಯೋಜನೆಗೆ ತುಂಬ ಉಪಯೋಗವಾಗಬಲ್ಲ ಅಂಶಗಳು. ನಮ್ಮ ಜೀವನಕ್ಕೆ ಹಾಗೂ ಪರಿಸರಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅತ್ಯಂತ ಸರಳವಾಗಿ ಹಾಗೂ ಆಪ್ತವಾಗಿ ಪ್ರಸ್ತುತಪಡಿಸುತ್ತವೆ. ಇಂದಿಗೂ, ಜಾಹಿರಾತುಗಳು ಮತ್ತು ಸಾಮಾನ್ಯ ಭಿತ್ತಿಪತ್ರಗಳನ್ನು ಪಠ್ಯಯೋಜನೆಯ ಸಾಂಪ್ರದಾಯಿಕ ಬೋಧನಾ ಸಾಮಗ್ರಿಗಳಾಗಿ ಪರಿಗಣಿಸಿಲ್ಲ. ಆದರೆ, ಇವು ಚಿಕ್ಕ ಸಂಗತಿಗಳಾದರೂ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವೆ ಮಹತ್ವದ ಕೊಂಡಿಗಳಾಗಿ ಬಳಕೆಯಾಗಬಲ್ಲವು.

ಭಿನ್ನರೀತಿಯ ಸೂಚನಾಫಲಕಗಳು, ಗೋಡೆಬರಹಗಳು, ಜಾಹಿರಾತುಗಳು ಮುಂತಾದುವನ್ನು ಶಾಲೆ, ಕಛೇರಿ, ಅಂಗಡಿ, ಮಾರುಕಟ್ಟೆ ಮೊದಲಾದ ಸ್ಥಳಗಳಲ್ಲಿ ನಾವು ನೋಡುತ್ತೇವೆ. ತುಂಬಾ ಸಾಮಾನ್ಯ ಉದ್ದೇಶ ಹಾಗೂ ಸರಳ ಭಾಷೆಯೊಂದಿಗೆ ಪ್ರಕಟವಾಗುವ ಅವುಗಳನ್ನು ಅರ್ಥಮಾಡಿಕೊಳ್ಳಲು ನಾವು ತುಂಬಾ ಕಷ್ಟಪಡಬೇಕಾಗಿಲ್ಲ. ಕನಿಷ್ಟ ಅಕ್ಷರಜ್ಞಾನವಿರುವ ಜನಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತಿರುತ್ತವೆ. ಇವು ಓದುವ ಕೌಶಲ್ಯವನ್ನು ಹೆಚ್ಚಿಸಬಲ್ಲವು. ಹಾಗೆ ನೋಡಿದರೆ, ನಮ್ಮದಲ್ಲದ ಅನ್ಯಭಾಷೆಯನ್ನು ಕಲಿಯುವ ಕುತೂಹಲವನ್ನು ಮೂಡಿಸಬಲ್ಲವು. ಈ ನಮೂನೆಯ ಬರಹಗಳನ್ನು, ಪ್ರಕಟಣೆಗಳನ್ನು ಬಳಸಿಕೊಳ್ಳಲು ಸಾಕಷ್ಟು ಮಾರ್ಗಗಳಿವೆ.

ನೀವು ನಿಮ್ಮ ವಿದ್ಯಾರ್ಥಿಗಳಿಗೆ ಸೂಚನಾಫಲಕಗಳು, ಗೋಡೆಬರಹಗಳು, ಜಾಹಿರಾತುಗಳು ಮೊದಲಾದುವನ್ನು ಬಳಸಿಕೊಂಡು, ಚಿತ್ರಗಳು, ಬರವಣಿಗೆಯ ಮೂಲಕ ಹೊಸದೊಂದು ಯೋಜನೆಯನ್ನೇ ಬರೆಯಲು ಪ್ರೇರೇಪಿಸಬಹುದು. ಚಿತ್ರಪಟ, ಪ್ರದರ್ಶನ ಇವನ್ನು ಪೋಸ್ಟರುಗಳ ಮೂಲಕ ತೋರಿಸಬಹುದು.

3ರಂತಹ ಪೂರ್ವಪ್ರಾಥಮಿಕ ತರಗತಿಗಳಲ್ಲಿ ಮಕ್ಕಳು ಚಿತ್ರಗಳ ಮಊಲಕ ಆಯ್ದುಕೊಂಡ ಶಬ್ದಗಳ ಸೊಗಸಾದ ಪಟ್ಟಿಯನ್ನು ರಚಿಸಬಲ್ಲರು. ಒಂದು ಸೂಚನಾಫಲಕವನ್ನು ತೋರಿಸಿ, ಅದರ ಅರ್ಥವೇನು, ಅದು ಏನನ್ನು ಹೇಳುತ್ತಿದೆ ಎಂಬುದನ್ನು ಚಿಹ್ನೆಗಳು, ಸಂಕೇತಗಳು, ಅಥವಾ ಚಿತ್ರಗಳ ಮೂಲಕ ಬರೆಯಿರಿ ಅಂದು ಸೂಚಿಸಬಹುದು. ಅದರ ಮೇಲೆ ಏನನ್ನು ಬರೆಯಲಾಗಿದೆ, ಅದನ್ನು ಸಹ ಬರೆಯಿರಿ ಎಂದು ಹೇಳಬಹುದು. ಅವು ಏನನ್ನು ಹೇಳುತ್ತಿವೆ ಎಂಬುದನ್ನು ಕೂಡಾ ಮಕ್ಕಳು ಗುರುತಿಸಿ ಬರೆಯಬಹುದು. ಅವುಗಳ ಮೇಲೆ ಇರುವ ಸಂದೇಶಗಳನ್ನು ತಮ್ಮದೇ ಸ್ವಂತ ವಾಕ್ಯಗಳಲ್ಲಿ ಬರೆಯಲೂ ಕೂಡಾ ಹೇಳಬಹುದು.

## ಪ್ರಗತಿ ಪರಿಶೀಲನೆ – 10

*1. ಸೂಚನಾಫಲಕಗಳು, ಗೋಡೆಬರಹಗಳು, ಜಾಹಿರಾತುಗಳು ಯಾವ ರೀತಿಯಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರದ ಕುರಿತು ಹೇಳುತ್ತವೆ?*
   *ಎ. ಕಷ್ಟದ ಮಾರ್ಗಗಳ ಮೂಲಕ*
   *ಬಿ. ಆಸಕ್ತಿಕರವಲ್ಲದ ಮಾರ್ಗಗಳ ಮೂಲಕ*
   *ಸಿ. ಸರಳ ಹಾಗೂ ಆಸಕ್ತಿಕರ ಮಾರ್ಗಗಳ ಮೂಲಕ*
   *ಡಿ. ಬೇಸರ ತರಿಸುವ ಮಾರ್ಗಗಳಿಂದ*

*2. ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಣುವ ಕನಿಷ್ಟ 20 ಭಿತ್ತಿಪತ್ರಗಳ ಹಾಗೂ ಸೂಚನಾಫಲಕಗಳ ಪಟ್ಟಿಮಾಡಿ.*

..........................................................................................................

..........................................................................................................

..........................................................................................................

*3. 5ನೇ ತರಗತಿ ಮಕ್ಕಳಿಗಾಗಿ ಪಠ್ಯಯೋಜನೆಯ ಭಾಗವಾಗಿ ಯಾವಬಗೆಯ ಪ್ರಕಟಣೆಗಳು ಅಥವಾ ಗೋಡೆಬರಹಗಳನ್ನು ಮಾಡಲು ಇಚ್ಛಿಸುವಿರಿ? ಅದಕ್ಕೆ ಸಂಬಂಧಿಸಿದಂತೆ ಕೇಳಬಹುದಾದ ಐದು ಪ್ರಶ್ನೆಗಳನ್ನು ಪಟ್ಟಿಮಾಡಿ.*

..........................................................................................................

..........................................................................................................

..........................................................................................................

*4. ಭಾಷಾಬೋಧನೆಯ ತರಗತಿಯಲ್ಲಿ ಸೂಚನಾಫಲಕಗಳನ್ನು ಬಳಸಿಕೊಳ್ಳುವುದರ ಮಹತ್ವವೇನು? ಗೋಡೆಬರಹಗಳು, ಜಾಹಿರಾತುಗಳನ್ನು ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದೇ?*

..........................................................................................................

..........................................................................................................

..........................................................................................................

Notes

5. ಕೆಲವು ಜಾಹಿರಾತುಗಳನ್ನು ಉಪಯೋಗಿಸಿಕೊಂಡು ಒಂದು ಅಥವಾ 2ನೇ ತರಗತಿಗೆ ಪಠ್ಯಯೋಜನೆಯೊಂದನ್ನು ತಯಾರಿಸಿ. ಅದೇ ಜಾಹಿರಾತುಗಳನ್ನು ಉಪಯೋಗಿಸಿಕೊಂಡು 4ನೇ ತರಗತಿಗೆ ಬೋಧನಾ ಸಾಮಗಿಯೊಂದನ್ನು ತಯಾರಿಸಿ.

....................................................................................................

....................................................................................................

....................................................................................................

## 8.8 ಪಠ್ಯ ಯೋಜನೆಯನ್ನು ತಯಾರಿಸುವುದು ಹೇಗೆ?

ಒಂದು ತರಗತಿಯಲ್ಲಿ ಎರಡು ಮೂಲಭೂತ ಅಂಶಗಳಿರುತ್ತವೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು. ಇಲ್ಲಿ ಇಬ್ಬರೂ ಜ್ಞಾನಾರ್ಜನೆ ಮಾಡುವ ಹಾಗೂ ಕಲಿತ ಜ್ಞಾನವನ್ನು ಬದುಕಿಗೆ ಅನ್ವಯಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತಾರೆ.

ತರಗತಿಯ ಇನ್ನುಳಿದ ಅಂಶಗಳ ಕಡೆಗೆ ಗಮನ ಹರಿಸುವುದಾದರೆ, ಪಠ್ಯಪುಸ್ತಕಗಳು, ಪಾಠಗಳು, ಪರೀಕ್ಷೆಗಳು, ವಿದ್ಯಾರ್ಥಿಗಳು ಪಡೆದುಕೊಳ್ಳುವ ಅನುಭವಗಳು, ಪೋಷಕರ ನಿರೀಕ್ಷೆಗಳು ಇತ್ಯಾದಿ. ಒಂದು ಪಠ್ಯಕ್ರಮವನ್ನು ಯೋಜಿಸುವಾಗ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕಠಿಣತರ ಪಠ್ಯಕ್ರಮದ ಜೊತೆಗೆ ಅಲ್ಪಪ್ರಮಾಣದ ಹೊಂದಾಣಿಕೆಯ ಅಂಶವೂ ಅಡಕವಾಗಿರುತ್ತದೆ. ಕಠಿಣ ಪಠ್ಯಕ್ರಮ ಶಿಕ್ಷಣದ ಹಾಗೂ ಬೋಧನೆಯ ಉದ್ದೇಶಗಳನ್ನು ಈಡೇರಿಸಿದರೆ, ಹೊಂದಾಣಿಕೆಯ ಅಂಶವು ಬೋಧನೆಯಲ್ಲಿ ಇದಿರಾಗುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತದೆ. ಹಾಗಾಗಿ ಶಿಕ್ಷಕರು ದೃಢ ಹಾಗೂ ಸ್ಥಿರವಾದ ಉದ್ದೇಶಗಳನ್ನು, ಗುರಿಗಳನ್ನು ಹೊಂದಿದ ಯೋಜನೆಯೊಂದಿಗೆ, ಕೊನೆಯ ಕ್ಷಣದ ಬದಲಾವಣೆಗೂ ಸಿದ್ಧವಿರುವ ರೀತಿಯಲ್ಲಿ ಪಠ್ಯಕ್ರಮವನ್ನು ಯೋಜಿಸಿಕೊಳ್ಳಬೇಕು. ಈ ಸಮತೋಲವನ್ನು ಹೊಂದಲು ಶಿಕ್ಷಕರು ಮೊದಲಿಗೆ ಪಾಠದ ಉದ್ದೇಶಗಳನ್ನು ಗುರುತು ಹಾಕಿಕೊಳ್ಳಬೇಕಾಗುತ್ತದೆ. ನಂತರ ನಿಧಾನವಾಗಿ ತರಗತಿಯ ಮಕ್ಕಳ ಆಗಿನ ಮನಃಸ್ಥಿತಿಗೆ ಅನುಗುಣವಾಗಿ ಚಟುವಟಿಕೆಗಳನ್ನು ನಡೆಸುತ್ತಾ ಹೋಗಬೇಕು.
ಹಾಗಿದ್ದರೆ ಈಗ ಪಠ್ಯಕ್ರಮದ ಯೋಜನೆಯನ್ನು ತಯಾರು ಮಾಡಿಕೊಳ್ಳುವ ವಿಧಾನ ಮತ್ತು ಪಠ್ಯವನ್ನು ವಿಂಗಡಿಸಿಕೊಂಡು ಭಾಷೆಯನ್ನು ಗಳಿಸಿಕೊಳ್ಳುವ ಬಗೆಯನ್ನು ಗಮನಿಸೋಣ.

1. ತರಗತಿಯ ಸಮಯ – ಮೊದಲಿಗೆ ಶಿಕ್ಷಕ ವಾರದಲ್ಲಿ ಮತ್ತು ವರ್ಷಪೂರ್ತಿ ಸಿಗಬಹುದಾದ ಅವಧಿಗಳ ಸಂಖ್ಯೆಯನ್ನು ಗುರುತು ಮಾಡಿಕೊಳ್ಳಬೇಕು. ಇದರಿಂದ ಪ್ರತಿ ಪಾಠಕ್ಕೂ ಕೊಡಬಹುದಾದ ಸಮಯ ಮತ್ತು ಮಹತ್ವದ ಅರಿವಾಗುತ್ತದೆ. ಬೋಧನಾ ಉದ್ದೇಶಗಳನ್ನು, ಗುರಿಗಳನ್ನು ಸಾಧಿಸಲು ಸಹಾಯವಾಗುತ್ತದೆ.

2. ತರಗತಿಯ ವ್ಯಾಪ್ತಿ (ವಿದ್ಯಾರ್ಥಿಗಳ ಸಂಖ್ಯೆ) ಮತ್ತು ವಯೋಮಾನದ ವಿವರಗಳು

3. ಪಠ್ಯದ ಶೀರ್ಷಿಕೆ

4. ಪೂರ್ವಜ್ಞಾನ: ವಿದ್ಯಾರ್ಥಿಯ ಪೂರ್ವಜ್ಞಾನದ ಬಗ್ಗೆ ತಿಳಿದುಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ಕಾರಣ, ಯೋಜಿತ ಪಠ್ಯಕ್ರಮವನ್ನು ನಿಗದಿಪಡಿಸಿದ ಅವಧಿಯೊಳಗೆ ಹೇಗೆ ಮುಗಿಸಿಕೊಳ್ಳಬೇಕೆನ್ನುವ ಹಾಗೂ ಶಿಕ್ಷಕ ಹೇಗೆ ಮುಂದುವರಿಯಬಹುದೆನ್ನುವ ಅಂಶ ಇದರಿಂದ ಗೊತ್ತಾಗುತ್ತದೆ. ಉದಾಹರಣೆಗೆ ಶಿಕ್ಷಕ ಮೂರನೆಯ ತರಗತಿಯ ಮಕ್ಕಳಿಗೆ ಇಂಗ್ಲಿಷ್ ಭಾಷೆ ಬೋಧಿಸುವಾಗ ಅವರು ಈಗಾಗಲೇ ವರ್ಣಮಾಲೆಯನ್ನು, ಸಂಖ್ಯೆಗಳನ್ನು ಕಲಿತಿರುತ್ತಾರೆ ಎಂಬುದು ಶಿಕ್ಷಕರ ನಿರೀಕ್ಷೆಯಾಗಿರುತ್ತದೆ. ಆದರೆ ಕೆಲವು ಮಕ್ಕಳು ಕಲಿತಿರದೇ ಇದ್ದಾಗ, ಶಿಕ್ಷಕನು ತಾಳ್ಮೆಯಿಂದ ಅವರಿಗಾಗಿ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿಕೊಂಡು ಹೇಳಿಕೊಡಬೇಕಾಗುತ್ತದೆ. ಇದರಿಂದ ಆ ಮಕ್ಕಳೂ ಸಹ ತರಗತಿಯ ಮಟ್ಟವನ್ನು ತಲುಪುವುದು ಸಾಧ್ಯವಾಗುತ್ತದೆ.

5. ಸಾಮಾನ್ಯ ಉದ್ದೇಶ: ಪಠ್ಯದ ಮೂಲಕ ನೀವು ಸಾಧಿಸಬೇಕೆಂದುಕೊಂಡಿರು ಒಟ್ಟಾರೆ ಉದ್ದೇಶ

6. ನಿರ್ದಿಷ್ಟ ಉದ್ದೇಶ: ಈ ಉದ್ದೇಶವನ್ನು ದಿನನಿತ್ಯದ ಪಠ್ಯಕ್ರಮದ ಗುರಿಯ ಜೊತೆಗೆ ಹೋಲಿಸಿಕೊಳ್ಳಬಹುದು. ಆಯಾ ದಿನ ಅಥವಾ ಅವಧಿಯಲ್ಲಿ ಏನು ನಡೆಯಿತೆಂಬುದನ್ನು ಇದು ಸೂಚಿಸುತ್ತದೆ.
7. ವಿಧಾನಗಳು/ಪದ್ಧತಿ: ಸಾಮಾನ್ಯ ಹಾಗೂ ನಿರ್ದಿಷ್ಟ ಉದ್ದೇಶಗಳನ್ನು ಗಮನಸದಲ್ಲಿರಿಸಿಕೊಂಡು ತರಗತಿಯಲ್ಲಿ ಆದ ಬೆಳವಣಿಗೆಯನ್ನು ಕುರಿತದ್ದು.

8. ಸ್ವ–ಮೌಲ್ಯಮಾಪನ: ಈ ಅಂಶವನ್ನು ಹಾಗೆಯೇ ಬಿಡಬೇಕು. ಇದನ್ನು ಶಿಕ್ಷಕರೇ ಬೋಧನಾ ತರಗತಿಯ ನಂತರ ಮೌಲ್ಯಮಾಪನ ಮಾಡಿ ಭರ್ತಿ ಮಾಡಬೇಕು. ತರಗತಿಯಲ್ಲಿ ಸರಿಯಾದ ಕ್ರಮದಲ್ಲಿ ನಡೆದ, ತಪ್ಪು ಕ್ರಮದಲ್ಲಿ ನಡೆದ ಸಂಗತಿಗಳನ್ನು ಉಲ್ಲೇಖಿಸಿ, ನಿರ್ದಿಷ್ಟ ಪಠ್ಯದ ಉದ್ದೇಶ ಈಡೇರಿದ ಅಥವಾ ಈಡೇರದ ಬಗ್ಗೆ ವಿವರಿಸಬೇಕು. ತರಗತಿಯಲ್ಲಿ ಯೋಜಿತ ಪಠ್ಯಕ್ರಮವನ್ನು ಬದಲಾಯಿಸಬೇಕಾದ ಅಗತ್ಯವನ್ನು ಕೂಡಾ ಶಿಕ್ಷಕ ಬರೆಯಬೇಕಾಗುತ್ತದೆ.

9. ಸಲಹೆಗಳು/ಅಭಿಪ್ರಾಯಗಳು: ನಿಮ್ಮದೇ ಆದ ಅನುಭವಗಳನ್ನು ಸಾರಾಂಶವಾಗಿಸಲು ಹಾಗೂ ನೀವೇ ಯೋಜಿಸಿದ ಪಠ್ಯಕ್ರಮವನ್ನು ಅಗತ್ಯಕ್ಕೆ ತಕ್ಕ ಹಾಗೆ ಹೊಂದಿಸಿಕೊಳ್ಳುವಂತೆ ಬದಲಾಯಿಸಿಕೊಳ್ಳಲು ಈ ಭಾಗವು ನಿಮಗೆ ಸಹಾಯ ಮಾಡುತ್ತದೆ. ಮೊದಲ ದಿನದ ಪಾಠ ಎಷ್ಟರಮಟ್ಟಿಗೆ ಯಶಸ್ವಿಯಾಯಿತು ಎಂಬುದನ್ನು ತಿಳಿಯುವಲ್ಲಿಯೂ ಇದು ಉಪಯುಕ್ತವಾಗಿದೆ.

**ಪ್ರಗತಿಯ ಪರಿಶೀಲನೆ – 11**

*1. ಪಾಠದ ಯೋಜನೆಯನ್ನು ಸಿದ್ಧಗೊಳಿಸುತ್ತಿರುವಾಗ, ಸಾಮಾನ್ಯವಾಗಿ ಎಷ್ಟು ಅಂಶಗಳನ್ನು ನೆನಪಿಡಬೇಕು?*

*ಎ. ನಾಲ್ಕು*

*ಬಿ. ಐದು*

*ಸಿ. ಒಂಭತ್ತು*

*ಡಿ. ಹನ್ನೆರಡು*

*2. ಸ್ವ–ವಿಮರ್ಶೆ ಎಂದರೇನು?*

..........................................................................................................

..........................................................................................................

..........................................................................................................

*3. ಸಾಮಾನ್ಯ ಅಥವಾ ಒಟ್ಟಾರೆ ಉದ್ದೇಶ ಮತ್ತು ನಿರ್ದಿಷ್ಟ ಉದ್ದೇಶಗಳ ನಡುವಿನ ವ್ಯತ್ಯಾಸವೇನು?*

..........................................................................................................

..........................................................................................................

..........................................................................................................

Notes

*4. ಪಾಠದ ಯೋಜನೆಯ ಸಿದ್ಧತೆಯಲ್ಲಿ ಸೇರಿಸಲೇಬೇಕಾದ ವಿಷಯ ಯಾವುದು?*

..........................................................................................................................................

..........................................................................................................................................

..........................................................................................................................................

ವಿವಿಧ ಮಾದರಿಗಳ ಮೂಲಕ ಪಾಠದ ಯೋಜನಾ ಮಾದರಿಯನ್ನು ರೂಪಿಸಲು ಈ ಘಟಕವು ನಿಮಗೆ ನೆರವಾಗಿರಬಹುದು. ಕೋಟ್ರಾದ ಶಾಲೆಯಲ್ಲಿ 5ನೇ ತರಗತಿಗಾಗಿ ಜಪಾನಿನ ಮೇಲೆ ಪಾಠದ ಯೋಜನೆಯನ್ನು ಮಹಿಮಾ ಹೇಗೆ ಸಿದ್ಧಪಡಿಸಬಹುದಿತ್ತೆಂದು ನೀವು ಗಮನಿಸಿರಬಹುದು. ಉದಾಹರಣೆಗೆ, ಮಹಿಮಾ ಹೇಗೆ ಜಪಾನಿನ ಬಗ್ಗೆ ಮಾತನಾಡುವುದರಿಂದ ತರಗತಿಯನ್ನು ಪ್ರಾರಂಭ ಮಾಡಿ, ನಂತರ ಅವರ ಸಂಸ್ಕೃತಿ ಮತ್ತು ಹಬ್ಬಗಳ ಬಗ್ಗೆ ಮಾತನಾಡಿದಳೆಂದು ನೋಡಿದೆವು. ಆಕೆಯು ವಿಶ್ವದ ನಕಾಶೆಯ ನೆರವು ಪಡೆದು, ಅದರಲ್ಲಿ ಜಪಾನ್ ಎಲ್ಲಿದೆ ಎಂದು ತೋರಿಸಿದಳು ಮತ್ತು ಜಪಾನಿನ ರಾಜಧಾನಿ ಟೋಕಿಯೋದ ಬಗ್ಗೆಯೂ ಮಾತನಾಡಿದಳು. ಅವರ ಸಂಪ್ರದಾಯಗಳು, ವೇಷಭೂಷಣಗಳು, ಸಾಮಾಜಿಕ ಶೈಲಿ, ಆಹಾರ, ಪುಷ್ಪಾಲಂಕಾರ ಇತ್ಯಾದಿಗಳ ಕುರಿತು ಹೇಳುವ ಮೂಲಕ ಮಕ್ಕಳೆದುರಿಗೆ ಆಕೆಯು ಜಪಾನಿನ ಸುಂದರ ದೃಶ್ಯಗಳನ್ನು ತೆರೆದಿಟ್ಟಳು. ಇದರ ನಂತರ, ಪಾಠದಲ್ಲಿ ನೀಡಿದ ಚಿತ್ರಗಳ ಬಗ್ಗೆ ಮತ್ತು ಕಠಿಣ ಶಬ್ದಾರ್ಥಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ. ಮಕ್ಕಳು ಮತ್ತು ಸಾಮೂಹಿಕ ಚಟುವಟಿಕೆ, ವೈಯಕ್ತಿಕ ಸಾಧನೆಯಿಂದ ಅವರು ಅಧ್ಯಾಯವನ್ನು ಅರ್ಥ ಮಾಡಿಕೊಳ್ಳಬೇಕಾದುದರ ಕಡೆಗೆ ಈ ಪ್ರಯತ್ನವು ಗಮನ ನೀಡಬಹುದು. ಪ್ರತಿ ಪ್ಯಾರಾದ ನಂತರ ನೀವು ಅಭ್ಯಾಸಕ್ಕೆ ಸಂಬಂಧಿತ ಪ್ರಶ್ನೆಗಳನ್ನು ಕೇಳಬಹುದು. ಹತ್ತನೇ ಪಾಠದಲ್ಲಿ ಬರುವ ಯೋಜನೆ ಮತ್ತು ಮಾದರಿ ವಿಭಾಗದಲ್ಲಿ ಮಕ್ಕಳೆಲ್ಲ ಒಟ್ಟಾಗಿ ಜಪಾನಿನ ಮೇಲೆ ಸಾಕಷ್ಟು ವಿಷಯಗಳನ್ನು ಒಗ್ಗೂಡಿಸಬೇಕಾಗುತ್ತದೆ. ಮಕ್ಕಳ ಈ ಯೋಜನಾಕಾರ್ಯದ ಪ್ರದರ್ಶನವನ್ನು ಆಕೆ ತರಗತಿಯಲ್ಲಿ ಏರ್ಪಡಿಸಬಹುದಿತ್ತು.

## 8.9 ಸಮಗ್ರವಾಗಿ ಹೇಳುವುದಾದರೆ

- ನಮ್ಮ ಪಾಠಗಳನ್ನು ಸರಿಯಾಗಿ ಯೋಜಿಸಿದರೆ, ಹೆಚ್ಚು ವ್ಯವಸ್ಥಿತವಾಗಿ ಕಲಿಸಬಹುದು.
- ಮಕ್ಕಳು, ತರಗತಿಯ ಪರಿಸ್ಥಿತಿಯ ಹಿನ್ನೆಲೆ ಮತ್ತು ಅಧ್ಯಾಯದಲ್ಲಿನ ವಿಷಯದ ಹಿನ್ನೆಲೆಗಳನ್ನು ತಿಳಿದುಕೊಂಡರೆ ಉತ್ತಮ ಪಾಠಯೋಜನೆಯನ್ನು ಸಿದ್ಧಗೊಳಿಸಲು ಸಾಧ್ಯ.
- ತರಗತಿಯ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯರಾಗಿ ಪಾಲ್ಗೊಳ್ಳಬೇಕು. ಶಿಕ್ಷಕರಷ್ಟೇ ಮಾತನಾಡುತ್ತಿದ್ದರೆ, ಅದು ನಿಷ್ಫಲತೆಗೆ ಎಡೆಮಾಡಿಕೊಡಬಹುದು.
- ನಿರ್ದಿಷ್ಟ ತರಗತಿಯಲ್ಲಿ ನೀವು ಹೇಳಿಕೊಟ್ಟದ್ದನ್ನು ಮಾತ್ರ ಮಕ್ಕಳು ಕಲಿಯುತ್ತಾರೆಂಬುದು ಸತ್ಯವಲ್ಲ. ಮಕ್ಕಳಲ್ಲಿ ಬೇರೆಯೇ ವಿಚಾರ ಪ್ರಕ್ರಿಯೆಯಿರುತ್ತದೆಮತ್ತು ಅವರು ಕಲಿಕೆಯಲ್ಲಿ ಅದನ್ನೇ ಉಪಯೋಗಿಸಿಕೊಳ್ಳುತ್ತಾರೆ, ಆದ್ದರಿಂದಲೇ ನಿಮ್ಮ ಪಾಠಯೋಜನೆಯು, ಅವರಲ್ಲಿ ಚಿಂತನಾಸಾಮರ್ಥ್ಯವನ್ನು ಬೆಳೆಸುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದನ್ನು ಒಳಗೊಂಡಿರುವುದು ಅತಿ ಮುಖ್ಯ.
- ಮಕ್ಕಳು ನೀಡುವ ಪ್ರತಿ ಉತ್ತರದಲ್ಲಿಯೂ ತಪ್ಪು ಹುಡುಕುವ ಬದಲು, ಆ ಪ್ರಶ್ನೆಯನ್ನು ನೀಡಿದಾಗ ಅದನ್ನು ಹೇಗೆ ತೆಗೆದುಕೊಂಡನೆಂದು ಶಿಕ್ಷಕನು ನೋಡುವುದು ಉತ್ತಮ. ಕಲಿಕೆಯನ್ನು ತಪ್ಪುಗಳಿಂದ ಅಲ್ಲದೆ ಸಂಪಾದನೆ(ಅರ್ಜನೆ)ಗಳಿಂದ ಅಳೆಯುವುದು ಮುಖ್ಯ. ಒಬ್ಬ ಶಿಕ್ಷಕನು ಕೇಳಬೇಕಾದ ಪ್ರಶ್ನೆಯೆಂದರೆ: ಮಗುವು ಸರಿಯಾಗಿ ಹೇಳಿದುದೇನು? ದುರದೃಷ್ಟವಶಾತ್ ನಮ್ಮ ಗಮನವೆಲ್ಲ ಸದಾ ತಪ್ಪುಗಳ ಮೇಲೆಯೇ ಇರುತ್ತದೆ.

Notes

- ತರಗತಿಗೆ ಬರುವ ಮುನ್ನ ಶಿಕ್ಷಕನು ಅಧ್ಯಾಯವನ್ನು ಎರಡು–ಮೂರು ಸಲ ಓದಿದರೆ, ತರಗತಿಯಲ್ಲಿ ಮಾಡಬೇಕಾದ ಚಟುವಟಿಕೆಗಳು ಅಥವಾ ಹೊಂದಿಕೆಗಳನ್ನು ನಿರ್ವಹಿಸುವುದು ಸುಲಭವಾಗುತ್ತದೆ.
- ಪಾಠದ ಯೋಜನೆಯನ್ನು ಮಾಡುವ ಮೊದಲು, ಶಿಕ್ಷಕನಿಗೆ ತರಗತಿಯ ಪ್ರಮಾಣ, ಮಕ್ಕಳ ವಯೋಮಾನ, ತರಗತಿಯ ಪರಿಸ್ಥಿತಿ, ವಿಷಯದ ಬಗ್ಗೆ ವಿದ್ಯಾರ್ಥಿಗಳ ಜ್ಞಾನದ ಹಿನ್ನೆಲೆ ಇತ್ಯಾದಿಗಳನ್ನು ತಿಳಿದುಕೊಂಡಿರಬೇಕು.

## ಚಟುವಟಿಕೆ

ಮೂರು ಪಾಠ ಯೋಜನೆಗಳನ್ನು ಮಾಡಿರಿ – ಒಂದು, ಕವಿತೆಯನ್ನು ಕಲಿಸುವುದು, ಮತ್ತೊಂದು, ಕಥೆಯನ್ನು ಹೇಳುವುದು ಹಾಗು ಇನ್ನೊಂದು, ನಾಟಕವನ್ನು ಹೇಳಿಕೊಡುವುದು – ಈ ಯೋಜನೆಯನ್ನು ಮಕ್ಕಳ ಮೇಲೆ ಪ್ರಯೋಗಿಸಿ. ನಿಮ್ಮ ಅನುಭವವನ್ನು ದಾಖಲಿಸಿ.

# 8.10 ಹೆಚ್ಚಿನ ಓದು ಮತ್ತು ಆಕರಗ್ರಂಥಗಳು

ಹಿಂದಿ ಭಾಗ–2, (2000) ಪಾಟ್ನಾ: ಬಿಹಾರ್ ರಾಜ್ಯ ಪಠ್ಯಪುಸ್ತಕ ಪ್ರಕಟನಾ ಸಂಸ್ಥೆ ನಿಯಮಿತ, ಇಂಗ್ಲಿಷ್ ಪುಸ್ತಕ–5 (2004) ಪಂಚಕುಲ: ಹರಿಯಾಣ ಸರ್ಕಾರ ಪಠ್ಯಪುಸ್ತಕ ಮುದ್ರಣ

# 8.11 ಘಟಕದ ಕೊನೆಯ ಚಟುವಟಿಕೆಗಳು

1. ಈ ಘಟಕದಲ್ಲಿ ನಿಮಗೆ ನೀಡಲಾದ ಪಾಠಯೋಜನೆಯ ಮಾದರಿಯಿಂದ ನೀವು ಕಲಿತದ್ದೇನೆಂಬುದನ್ನು ಪಟ್ಟಿ ಮಾಡಿರಿ. ಉತ್ತರವನ್ನು ಈ ಕೆಳಗಿನ ಅಂಶಗಳ ಆಧಾರದ ಮೇಲೆ ಚರ್ಚಿಸಿ:
   ಎ. ಶಿಕ್ಷಕನ ಪಾತ್ರ
   ಬಿ. ಮಕ್ಕಳು ತರಗತಿಯಲ್ಲಿ ಪಾಲ್ಗೊಳ್ಳುವುದು
   ಸಿ. ವಿಷಯದ ಮೇಲೆ ಕಾರ್ಯ
   ಡಿ. ಪ್ರಶ್ನೋತ್ತರಗಳನ್ನು ಚರ್ಚಿಸುವ ಮಾರ್ಗಗಳು

2. ಮಹಿಮಾ ಮತ್ತು ಇತರರ ತರಗತಿಗಳ ನಡುವಿನ ಅತ್ಯವಶ್ಯಕ ವ್ಯತ್ಯಾಸವೇನು?

3. ಯಾವುದೇ ತರಗತಿಯನ್ನು ತೆಗೆದುಕೊಳ್ಳುವ ಮುನ್ನ ನೀವು ಒಟ್ಟುಗೂಡಿಸಬೇಕಾದ ಪ್ರಾಥಮಿಕ ವಿಷಯಗಳಾವುವು? ಪಾಠವೊಂದನ್ನು ಯೋಜಿಸುವುದರಲ್ಲಿ ಅದು ಯಾವ ಬದಲಾವಣೆಯನ್ನು ತರುತ್ತದೆ?

4. ಮಹಿಮಾಳ ಸ್ಥಾನದಲ್ಲಿ ನೀವು ಇದ್ದಿರಾದರೆ, ಜಪಾನಿನ ಬಗ್ಗೆ ಹೇಳಿಕೊಡುವ ಅಧ್ಯಾಯವನ್ನು ನೀವು ಹೇಗೆ ಕಲಿಸುತ್ತಿದ್ದಿರಿ? ನಿಮ್ಮ ಉತ್ತರವನ್ನು ಸ್ಪಷ್ಟ ಪಡಿಸಲು ಪಾಠ ಯೋಜನೆಯನ್ನು ತಯಾರಿಸಿ.

Notes

# ಘಟಕ 9 ಶೈಕ್ಷಣಿಕ ಸಾಮಗ್ರಿಗಳು : ಕೆಲವು ವಿನೂತನ ಆಯಾಮಗಳು

## ವಿನ್ಯಾಸ


*9.0 ಪ್ರಸ್ತಾವನೆ*

*9.1 ಕಲಿಯುವ ಉದ್ದೇಶಗಳು*

*9.2 ವಿದ್ಯಾಭ್ಯಾಸಕ್ಕೆ ಬೇಕಾಗುವ ಅಗತ್ಯವಾದ ವಸ್ತುಗಳು*

*9.3 ಶೈಕ್ಷಣಿಕ ಸಾಮಗ್ರಿಗಳು ಏಕೆ ಬೇಕು ?*

*9.4 ಕಲಿಕೆಯ ಸಾಮಗ್ರಿಗಳು ಮತ್ತು ಕಲಿಕಾ ಸಹಾಯಕ ವಸ್ತುಗಳ ತದ್ವಿರುದ್ಧತೆ*

*9.5 ಪ್ರದರ್ಶನಾ ನಮೂನೆಗಳು ಮತ್ತು ವಸ್ತುಗಳು*

*9.6 ಕಲಿಕಾ ಸಾಮಗ್ರಿಯು ಹೇಗೆ ನೆರವಾಗುತ್ತದೆ?*

*9.7 ಒಳ್ಳೆಯ ಶೈಕ್ಷಣಿಕ ಸಾಮಗ್ರಿ ಯಾವುದು?*

*9.8 ಕೇವಲ ಒಂದೇ ಸಾಮಗ್ರಿಯನ್ನಿಟ್ಟುಕೊಂಡು ನಾವೇನು ಮಾಡಬಹುದು?*

*9.9 ಭಾಷೆಯ ಕಲಿಕೆಯಲ್ಲಿ ಚಿತ್ರಪಟಗಳ (ಕುಛಿಣಚಿಡಿಜ ಅಚಿಡಿಛ) ಪಾತ್ರ*

*9.10 ಕಲಿಕೆಯ ವ್ಯಾಖ್ಯೆಯ ಹಿನ್ನೆಲೆಯಲ್ಲಿ ಭಾಷಾಕಲಿಕೆಯಲ್ಲಿ ಸಾಮಗ್ರಿಗಳು*

*9.11 ಭಾಷಾತರಗತಿಗೆ ಬೇಕಾಗಬಹುದಾದ ಸಾಮಗ್ರಿಗಳು*

*9.12 ಸಾಮಗ್ರಿಗಳ ಲಭ್ಯತೆ*

*9.13 ಸಾಮಗ್ರಿಗಳನ್ನು ಉಪಯೋಗಿಸುವುದು ಹೇಗೆ?*

*9.14 ಸಾಮಗ್ರಿಗಳನ್ನು ಆಯ್ಕೆ ಮಾಡುವುದು ಹೇಗೆ?*

*9.15 ಸಮಗ್ರವಾಗಿ ಹೇಳುವುದಾದರೆ*

*9.16 ಹೆಚ್ಚಿನ ಓದು ಹಾಗೂ ಪೂರಕ ಗ್ರಂಥಗಳು*

*9.17 ಘಟಕದ ಕೊನೆಯ ಚಟುವಟಿಕೆಗಳು*


## 9.0 ಪ್ರಸ್ತಾವನೆ

ನಾವು ಸರಿಯಾಗಿ ಗಮನಿಸಿದರೆ ನಮ್ಮ ಸುತ್ತಲೂ ಇರುವ ಎಲ್ಲಾ ವಸ್ತುಗಳನ್ನು ಕಲಿಕೆಗೆ ಬಳಸಬಹುದು ಎಂದು ಅನಿಸುತ್ತದೆ. ಒಂದು ರೀತಿಯಲ್ಲಿ ಶಾಲೆ, ತರಗತಿ, ಮೈದಾನಗಳಂತೆ ಕಲ್ಲು, ಮಣ್ಣು , ಎಲೆ, ಧೂಳು ಎಲ್ಲವೂ ಕಲಿಕೆಗೆ ಸಾಧನವಾಗುತ್ತದೆ. ಬಹಳ ಬೆಲೆ ಬಾಳುವಂತಹುದು ಮತ್ತು ವಿದ್ಯುನ್ಮಾನ ವಸ್ತುಗಳು ಮಾತ್ರವೇ ಕಲಿಕೆಗೆ ಉಪಯೋಗವಾಗುವ ವಸ್ತುಗಳು ಎಂಬ ಭ್ರಮೆ ಆವರಿಸಿದೆ. ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಗಣಕ ಯಂತ್ರ(computer), ಇಂಟರ್ನೆಟ್ ಮುಂತಾದ ಹೊಸ ಕಲಿಕಾ ವಸ್ತುಗಳು(ಮಾಧ್ಯಮಗಳು) ನಮ್ಮನ್ನು ಆವರಿಸಿದೆ. ಒಂದು ಕಾಲದಲ್ಲಿ ರೇಡಿಯೋ, ದೂರದರ್ಶನ (TV), ಧ್ವನಿ ಮುದ್ರಕ (tape-recorder) ಮುಂತಾದವುಗಳು ಅತ್ಯುತ್ತಮ ಕಲಿಕಾ ಮಾಧ್ಯಮಗಳು ಎನಿಸಿಕೊಂಡಿದ್ದವು. ಅದಕ್ಕೂ ಮುಂಚೆ ಸಣ್ಣ ವಸ್ತುಗಳು, ಪೋಸ್ಟರ್, ಫ್ಲಾಶ್ ಕಾರ್ಡ್ಸ್ ಮುಂತಾದವುಗಳು ಕಲಿಕಾ ಸಹಾಯಕ ವಸ್ತುಗಳು ಎಂದು ಹೇಳಲ್ಪಡುತ್ತಿದ್ದವು.

ಇತ್ತೀಚಿನ ದಿನಗಳಲ್ಲಿ ಇಂತಹ ಕಲಿಕಾ ವಸ್ತುಗಳ ಮೇಲೆ ಒತ್ತು ನೀಡುವ ಮತ್ತು ಅವುಗಳಿಗೆ ಪ್ರಾಮುಖ್ಯತೆ ನೀಡುವುದು ಕಡಿಮೆ ಆಗಿದೆ. ಈಗಲೂ ಇಂತಹ ಗುಣ ಮಟ್ಟದ ಕಲಿಕಾ ವಸ್ತುಗಳು ಶಾಲೆಗೆ ಸರಿಯಾಗಿ ತಲುಪದಿರುವುದು ಬೇರೆಯ ವಿಷಯ.

ಇತ್ತೀಚಿನ ದಿನಗಳಲ್ಲಿ ಕಲಿಸುವ ಪ್ರಕ್ರಿಯೆ ಮತ್ತು ತಿಳಿಯುವ ವಿಧಾನ, ಮಗುವಿನ ಆಸಕ್ತಿ ಮತ್ತು ಸಾಮರ್ಥ್ಯ ಮುಂತಾದ ವಿಷಯಗಳ ಬಗ್ಗೆ ತಿಳುವಳಿಕೆಯಲ್ಲಿ ಮೂಲಭೂತ ಬದಲಾವಣೆ ಆಗಿದೆ. ಈ ಹೊಸ ತಿಳುವಳಿಕೆಯ ಬೆಳಕಿನಲ್ಲಿ ಕಲಿಕಾ ವಸ್ತುಗಳು ಮತ್ತು ಅವುಗಳ ಉಪಯೋಗವು ಹೊಸ ಆಯಾಮವನ್ನು ಪಡೆದು ಕೊಂಡಿದೆ. ಸುಲಭವಾಗಿ ಕಲಿಕಾ ವಸ್ತುಗಳನ್ನು ಹಲವು ಗುಂಪುಗಳಾಗಿ ವರ್ಗೀಕರಿಸ ಬಹುದು. ಶಿಕ್ಷಕರು ಬಳಸುವ ಮತ್ತು ವಿದ್ಯಾರ್ಥಿಗಳು ಬಳಸುವ ಕಲಿಕಾ ವಸ್ತುಗಳು ಒಂದು ವರ್ಗವಾದರೆ, ದೃಶ್ಯೀಕರಿಸುವುದು ಮತ್ತು ಮೌಖಿಕವಾಗಿ ಬಳಸುವದು ಇನ್ನೊಂದು ವರ್ಗ. ಈ ವಿಭಾಗಗಳು ಮತ್ತು ಅವುಗಳ ಉದ್ದೇಶಗಳು ಬೇರೆ ಬೇರೆ. ಈ ಬೋಧನಾ ಸಾಮಗ್ರಿಗಳ ವಿಷಯಕ್ಕೆ ಬಂದರೆ, ಬೋಧನಾ ಸಾಮಗ್ರಿಗಳು ಕಲಿಸುವ ವಿಧಾನಕ್ಕೆ ಎಷ್ಟು ಸರಿ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಬೋಧನಾ ಸಾಮಗ್ರಿಗಳನ್ನು ಹೇಗೆ ಕಲಿಸಲು ಬಳಸುವುದು ಎಂಬುದು ಇಲ್ಲಿ ಬಹಳ ಮುಖ್ಯ ಪ್ರಶ್ನೆಯಾಗುತ್ತದೆ. ಬೋಧನಾ ಸಾಮಗ್ರಿಗಳು ಹೇಗೆ ತರಗತಿಯಲ್ಲಿ ಕಾಣಿಸಿಕೊಳ್ಳುತ್ತದೆ, ಅದರ ಉದ್ದೇಶ ಏನು ಮತ್ತು ಹೇಗೆ ಉಪಯೋಗವಾಗುತ್ತದೆ? ಕೆಳಗಿನ ಘಟಕದಲ್ಲಿ ಈ ಪ್ರಶ್ನೆಗಳ ಬಗ್ಗೆ ಚರ್ಚಿಸೋಣ.

## 9.1 ಕಲಿಯುವ ಉದ್ದೇಶಗಳು

ಘಟಕವನ್ನು ಓದುವುದರಿಂದ ದೊರೆಯುವ ಲಾಭಗಳು :

- ಕಲಿಕಾ ಸಾಧನಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ
- ಅಗತ್ಯ ಕಲಿಸುವ ಸಾಧನಗಳನ್ನು ಗುರುತಿಸುವದು
- ಒಳ್ಳೆಯ ಕಲಿಸುವ ಸಾಧನಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದು
- ಬೋಧನೆಯ ಸಾಮಗ್ರಿ ಮತ್ತು ಟಿಎಲ್‌ಎಂ ಮಧ್ಯೆ ವ್ಯತ್ಯಾಸವನ್ನು ಗುರುತಿಸುವುದು
- ಭಾಷೆಯ ಬೋಧನೆಯಲ್ಲಿ ಕಲಿಕಾ ಸಾಧನೆಗಳ ಬಗ್ಗೆ ವಿಶ್ಲೇಷಿಸುವುದು
- ಯಾವಾಗ ಮತ್ತು ಹೇಗೆ ಕಲಿಕಾ ಸಾಮಗ್ರಿಗಳನ್ನು ಬಳಸಬೇಕು ಎಂಬ ತಿಳುವಳಿಕೆ ಹೆಚ್ಚಿಸಿಕೊಳ್ಳುವುದು

## 9.2 ಶಿಕ್ಷಣಕ್ಕೆ ಬೇಕಾಗುವ ಅಗತ್ಯವಾದ ಸಾಮಗ್ರಿಗಳು

ಎಲ್ಲ ತರಗತಿಗಳಲ್ಲಿ ಕಲಿಕಾ ಸಾಧನಗಳು ದೊರಕಬೇಕೆಂಬುದನ್ನು ಗುರುತಿಸುವುದು ಮುಖ್ಯವಾಗುತ್ತದೆ. ಇದೇ ರೀತಿ ಕೆಲವೊಂದು ಕಲಿಕಾ ವಸ್ತುಗಳು ಉತ್ತಮ ವಿದ್ಯಾಭ್ಯಾಸಕ್ಕೆ ಶಾಲೆಯಲ್ಲಿ ಲಭ್ಯವಿರಬೇಕೆಎಂಬುದನ್ನು ನಾವು ಗಮನಿಸುವುದಿಲ್ಲ.

Notes

ಕೆಲವೊಂದು ಅಗತ್ಯವಾದ ವಸ್ತುಗಳು ಮನಸ್ಸಿಗೆ ಸ್ಪಷ್ಟವಾಗಿ ತಿಳಿದರೆ ಕೆಲವೊಂದು ತಕ್ಷಣಕ್ಕೆ ಗೋಚರಿಸುವುದಿಲ್ಲ. ಉದಾಹರಣೆಗೆ ಪ್ರತಿಯೊಬ್ಬ ಮಗುವಿಗು ಬೆಂಚು, ಮೇಜು ಅಥವಾ ಕುಳಿತುಕೊಳ್ಳಲು ಕುರ್ಚಿ, ಉತ್ತಮ ಬೆಳಕಿನ ವ್ಯವಸ್ಥೆ ಅಗತ್ಯವಾಗಿ ಇರಬೇಕಾಗುತ್ತದೆ. ಹಾಗೆಯೆ ಕುಡಿಯಲು ಶುದ್ಧವಾದ ನೀರು, ಶೌಚಾಲಯ ಹಾಗು ಹಲವಾರು ವಸ್ತುಗಳ ವ್ಯವಸ್ಥೆಗಳು ಬೇಕಾಗುತ್ತದೆ. ಶಾಲೆಗಳಲ್ಲಿ ವಿದ್ಯಾಭ್ಯಾಸದ ಗುಣ ಮಟ್ಟವನ್ನು ಹೆಚ್ಚಿಸಲು 1986 ರ ನೀತಿ ದಸ್ತಾವೇಜು ಒಂದು ಉತ್ತಮ ಹೆಜ್ಜೆ. ಇದರಲ್ಲಿ ಒಂದು ಮುಖ್ಯ ಅಂಶ ಪ್ರತಿಯೊಂದು ಶಾಲೆಯಲ್ಲಿ ಲಭ್ಯವಿನಿಮ್ಮ ಶಾಲೆಯ ಬಗ್ಗೆ ಯೋಚಿಸುವುದು ಮತ್ತು ಅದರ ಸರಿಯಾದ ಕಾರ್ಯಕ್ಕಾಗಿ ಶಾಲೆಗಳಲ್ಲಿ ಅಗತ್ಯವಾಗಿ ಯಾವ ವಸ್ತುಗಳನ್ನು ಲಭ್ಯವಿರಬೇಕೆಂದು ನೀವೇ ಕೇಳಿಕೊಳ್ಳುವುದು ನಿಮಗೆ ಉಪಯುಕ್ತವಾಗಿದೆ.ರುವ ಅಗತ್ಯ ವಸ್ತುಗಳ ಲಭ್ಯತೆಯ ಗುರುತಿಸುವುದು. ಇದರಲ್ಲಿ ಕನಿಷ್ಟ ಸಂಖ್ಯೆಯ ಪಾಠದ ಕೊಠಡಿಗಳು, ಆಸನ ವ್ಯವಸ್ಥೆ, ಕೆಲವು ಕ್ರೀಡಾ ಸಾಮಗ್ರಿಗಳು, ಗ್ರಂಥಾಲಯ ಪುಸ್ತಕಗಳು ಸೇರಿವೆ. ನಿಮ್ಮ ಶಾಲೆಯ ಬಗ್ಗೆ ಯೋಚಿಸುವುದು ಮತ್ತು ವಸ್ತುಗಳನ್ನು ಅವಶ್ಯಕವಾಗಿ ಲಭ್ಯವಿರಬೇಕೆಂದು ನಿಮ್ಮನ್ನು ಕೇಳಿಕೊಳ್ಳುವುದು ನಿಮಗೆ ಉಪಯುಕ್ತವಾಗಿದೆ. ನಿಮ್ಮ ಶಾಲೆಯಲ್ಲಿ ಏನು ದೊರೆತಿದೆ ಎಂಬುದನ್ನು ಮತ್ತು ಏನು ಕೊರತೆ ಇದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಬಹುದು.

ಶಾಲೆಯಲ್ಲಿ ಈ ಅಗತ್ಯ ವಸ್ತುಗಳ ಹೊರತಾಗಿ, ಇತರ ಕೆಲವು ಶೈಕ್ಷಣಿಕ ಸಾಮಗ್ರಿಗಳು ಬೋಧನೆಗೆ ಬೇಕಾಗುತ್ತದೆ.

**ಪ್ರಗತಿಯ ಪರಿಶೀಲನೆ – 1**

1. *ಈ ಕೆಳಗಿನವು ಅವಶ್ಯಕ ವಸ್ತುಗಳು ಹೌದೇ ಅಲ್ಲವೇ? ನಿಮ್ಮ ಉತ್ತರಕ್ಕಾಗಿ ಕಾರಣಗಳನ್ನು ನೀಡಿ.*
   *ಎ. ಚಾರ್ಟ್*
   
   *ಬಿ. ಮಾದರಿಗಳು*
   
   *ಸಿ. ಬೆಂಚ್*
   
   *ಡಿ. ಭಾಷಾ ಕಾರ್ಡ್‌ಗಳು*

2. *ಶಾಲೆಯಲ್ಲಿ ಅಗತ್ಯವಾದ ವಸ್ತುಗಳು ಯಾವುವು ?*

   ..............................................................................................................................

   ..............................................................................................................................

   ..............................................................................................................................

3. *ನಿಮ್ಮ ಶಾಲೆಯಲ್ಲಿ ಯಾವ ರೀತಿಯ ವಸ್ತುಗಳು ಇರಬೇಕಾಗಿತ್ತು ಎಂಬ ನಿಮಗೆ ಅನಿಸಿದೆ ?*

   ..............................................................................................................................

   ..............................................................................................................................

   ..............................................................................................................................

## 9.3 ಶೈಕ್ಷಣಿಕ ಸಾಮಗ್ರಿಗಳು ಏಕೆ ಬೇಕು ?

ಸಾಮಗ್ರಿಗಳ ಬಳಕೆದಾರ ಯಾರು ಎಂಬುದು ಮೊದಲ ಪ್ರಮುಖ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ, ಬೋಧನೆ–ಕಲಿಕೆ ನಮ್ಮ ದೃಶ್ಯೀಕರಣ ಅವಲಂಬಿಸಿರುತ್ತದೆ. ಶಿಕ್ಷಕ ತನ್ನ/ಅವಳ ದೃಷ್ಟಿಕೋನವನ್ನು ವಿವರಿಸಲು ವಸ್ತುವಿನ ಬಳಕೆಗೆ ಒತ್ತು ನೀಡಬೇಕು, ಮತ್ತು ಒಂದು ಮಾದರಿಯನ್ನು ಪ್ರಸ್ತುತಪಡಿಸಬೇಕು.

ಇದರರ್ಥ ಶಿಕ್ಷಕರು ಮಕ್ಕಳಿಗೆ ಸರಿಯಾದ ವಿವರಣೆಯನ್ನು ನೀಡುತ್ತಾರೆ. ಮಗುವು ಸಾಮಾನ್ಯವಾಗಿ ಮೂಕನಾಗಿರುತ್ತಾನೆ ಮತ್ತು ಎಚ್ಚರಿಕೆಯಿಂದ ಮಾತ್ರ ಕೇಳುತ್ತಾರೆ; ಅವನು/ಅವಳು ಶಿಕ್ಷಕನ ಮಾತುಗಳನ್ನು ಗಮನಿಸಿ ಅವುಗಳನ್ನು ನೋಟ್ಬುಕ್ನಲ್ಲಿ ಗುರುತಿಸಿಕೊಳ್ಳಬೇಕು ಅಥವಾ ಅವನ/ಅವಳ ಶಿಕ್ಷಕನು ನಿರ್ದೇಶಿಸಿದರೆ ವಸ್ತುವನ್ನು ಬಳಸಿಕೊಳ್ಳಬೇಕು.

ಈ ತತ್ವಗಳ ಅಡಿಯಲ್ಲಿ, ಚಾರ್ಟ್ಗಳು, ಸ್ಲೈಡ್ಗಳು, ಮಾದರಿಗಳು ಮುಂತಾದ ವಸ್ತುಗಳನ್ನು ಮಕ್ಕಳು ತಿಳಿದುಕೊಳ್ಳಬೇಕಾದ ವಿಷಯಗಳನ್ನು ಪ್ರತಿನಿಧಿಸುವ ವಿಧಾನಗಳು. ಇದು ಶಿಕ್ಷಕ–ಕೇಂದ್ರಿತ ವಿಧಾನವಾಗಿದೆ. ಇದು ಇತ್ತೀಚೆಗೆ ಸಾಮಾನ್ಯವಾಗಿ ಒಪ್ಪಿಕೊಂಡ ಮತ್ತು ಜನಪ್ರಿಯ ವಿಧಾನ. ಈಗ ಕೂಡ ಅನೇಕರು ಇದನ್ನು ನಂಬುತ್ತಾರೆ. ಈ ಬೋಧನಾ ವಸ್ತುಗಳನ್ನು ಹೆಚ್ಚಾಗಿ ಶಿಕ್ಷಕನಿಂದ ಮಾತ್ರ ಬಳಸಲಾಗುತ್ತದೆ. ಮಕ್ಕಳು ಮಾತ್ರ ವಸ್ತುಗಳನ್ನು ನೋಡಬಹುದಾಗಿದೆ. ಅವರು ತಮ್ಮ ಕೈಯಲ್ಲಿ ವಸ್ತುಗಳನ್ನು ಬಳಸಲು ಅಥವಾ ತೆಗೆದುಕೊಳ್ಳಲು ಸಾಧ್ಯವಿಲ್ಲ. ಮಕ್ಕಳು ಸ್ಪರ್ಶಿಸಿದರೆ ವಸ್ತುಗಳು ಹಾಳಾಗುತ್ತವೆ ಎಂದು ಶಿಕ್ಷಕರು ಹೆದರುತ್ತಾರೆ. ಇತರ ಘಟಕಗಳಲ್ಲಿ ನೀವು ಓದಿದಂತೆಯೇ ಬೋಧನೆಗೆ ಈ ವಿಧಾನವು ಈಗ ಪ್ರಾಥಮಿಕ ತರಗತಿಗಳಿಗೆ ಸೂಕ್ತವೆಂದು ಪರಿಗಣಿಸಲ್ಪಟ್ಟಿಲ್ಲ. ಪ್ರತಿ ಮಗುವೂ ತನ್ನ ಸ್ವಂತ ಚಿಂತನೆಯ ಪ್ರಕ್ರಿಯೆಯ ಮೂಲಕ ತನ್ನ ಜ್ಞಾನವನ್ನು ರಚಿಸುತ್ತಾನೆ ಎಂಬುದು ಈಗ ನಂಬಿಕೆ. ಶಿಕ್ಷಕ ಈ ಪ್ರಯತ್ನದಲ್ಲಿ ಮಾತ್ರ ಸಹಾಯ ಮಾಡಬಹುದು. ಬೇರೊಬ್ಬರು ನಿರ್ಮಿಸಿದ ಲಾಜಿಕಲ್ ಸೂತ್ರೀಕರಣಗಳನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವನ/ಅವಳ ಸ್ವಂತ ಲಾಜಿಕಲ್ ವ್ಯವಸ್ಥೆಯನ್ನು ನಿರ್ಮಿಸಲು ಮತ್ತು ಬಳಸಲು ಮಗುವಿಗೆ ಹೆಚ್ಚು ಮುಖ್ಯವಾಗಿದೆ. ಹೆಚ್ಚು ಶಿಫಾರಸು ಮಾಡಲ್ಪಟ್ಟ ವಿಧಾನದಿಂದ ಈಗ ಮಕ್ಕಳು ವಸ್ತುಗಳನ್ನು ಬಳಸುತ್ತಾರೆ.

ಸಾಮಗ್ರಿಗಳು ಅವನಿಗೆ/ಅವಳಿಗೆ ಸಹಾಯ ಮಾಡಲು, ಅವನ/ಅವಳ ಸ್ವಂತ ತಾರ್ಕಿಕ ಸಿದ್ಧಾಂತಗಳನ್ನು ವಿಭಿನ್ನ ಪರಿಕಲ್ಪನೆಗಳಲ್ಲಿ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಇದಕ್ಕಾಗಿ, ವಸ್ತುಗಳನ್ನು ಸಂವಹನ ಮಾಡಲು, ಅವುಗಳನ್ನು ಪರೀಕ್ಷಿಸಲು, ವಸ್ತುಗಳ ಭಾಗಗಳನ್ನು ನಿರ್ಮಿಸಲು ಅಥವಾ ಕೆಡವಲು ಮತ್ತು ವಿವಿಧ ರೀತಿಯಲ್ಲಿ ಅದನ್ನು ಅನ್ವೇಷಿಸಲು ಮಗುವಿಗೆ ಒಂದು ಅವಕಾಶ ಸಿಗಬೇಕು. ಬೋಧನೆಯ ಈ ಪ್ರಕ್ರಿಯೆಗಾಗಿ, ಕಲಿಕೆಯ ಮಗುವಿಗೆ ವಸ್ತುಗಳು ಯಾವಾಗಲು ದೊರಕುವಂತಿರಬೇಕು. ಭಾಷಾ ಬೋಧನೆಯಲ್ಲಿ ವಸ್ತುಗಳ ಬಳಕೆಯು ಇತರ ವಿಷಯಗಳ ಬಳಕೆಗೆ ಭಿನ್ನವಾಗಿದೆ. ಮುಂದಿನ ವಿಭಾಗಗಳಲ್ಲಿ ಭಾಷೆಯ ತರಗತಿಗೆ ಬೇಕಾದ ರೀತಿಯ ವಸ್ತುಗಳನ್ನು ನಾವು ನೋಡುತ್ತೇವೆ ಮತ್ತು ಬೋಧನೆಯ ಎರಡು ವಿಭಿನ್ನ ತಿಳುವಳಿಕೆಯ ಸಂದರ್ಭದಲ್ಲಿ ಅವುಗಳನ್ನು ಹೇಗೆ ಬಳಸಬಹುದು ಎಂಬುದನ್ನು ನೋಡುತ್ತೇವೆ.

ನಾವು ಕೆಲವು ಜನಪ್ರಿಯ ಪದಗಳನ್ನು ಪರಿಗಣಿಸೋಣ ಮತ್ತು ಬೋಧನೆಯ ಎರಡು ದೃಷ್ಟಿಕೋನಗಳ ಸಂದರ್ಭದಲ್ಲಿ ಅವುಗಳನ್ನು ಪರೀಕ್ಷಿಸೋಣ. ಭಾಷೆಯ ಬೋಧನೆಯ ಸಂದರ್ಭದಲ್ಲಿ ನಾವು ಅವುಗಳನ್ನು ತರುವಾಯ ಪರಿಶೀಲಿಸೋಣ.

ಶೈಕ್ಷಣಿಕ ಪ್ರವಚನದಲ್ಲಿ ಖಿಐಒ ಪದವು ಬಹಳ ಜನಪ್ರಿಯವಾಗಿದೆ. ಹಾಗೆಯೇ ಬೋಧನಾ ನೆರವು ಪದವನ್ನು ಆಗಾಗ್ಗೆ ಬಳಸಲಾಗುತ್ತದೆ. ಈ ಎರಡು ಶಬ್ದಗಳನ್ನು ಅತ್ಯಂತ ಸಮಾನಾರ್ಥಕವಾಗಿ ಪರಿಗಣಿಸಲಾಗುತ್ತದೆ. ಆದಾಗ್ಯೂ, ಈ ಪದಗಳು ಅವುಗಳ ಬಳಕೆಯ ವಿಧಾನದಿಂದ ವಿಭಿನ್ನ ರೀತಿಯ ವಸ್ತುಗಳ ಮತ್ತು ವಿವಿಧ ರೀತಿಯ ದೃಷ್ಟಿಕೋನವನ್ನು ಸೂಚಿಸುತ್ತವೆ.

Notes

**ಪ್ರಗತಿಯ ಪರಿಶೀಲನೆ – 2**

1. *ಖಐಒ ನ ವಿಸ್ತರಿತ ರೂಪ*
   *ಎ. ಒಟ್ಟು ಕೇಳುವ ವಿಷಯ*
   *ಬಿ. ಒಟ್ಟು ಕಲಿಕೆಯ ವಿಷಯ*
   *ಸಿ. ಬೋಧನೆ–ಕಲಿಕೆಯ ವಸ್ತು*
   *ಡಿ. ಕಲಿಕೆ ಮತ್ತು ಬೋಧನಾ ಘಟಕ*

*2. ಮಕ್ಕಳಿಗೆ ಬೋಧನಾ–ಕಲಿಕೆಯ ವಸ್ತುವು ತಲುಪುವ ಅಗತ್ಯ ಏಕಿದೆ?*

.....................................................................................................................

.....................................................................................................................

.....................................................................................................................

*3. ಖಐಒ ನ ಅರ್ಥವೇನು?*

.....................................................................................................................

.....................................................................................................................

.....................................................................................................................

*4. ಬೋಧನೆಯ ಯಾವ ದೃಷ್ಟಿಕೋನವನ್ನು ಈಗ ಪ್ರಾಥಮಿಕ ತರಗತಿಗಳಿಗೆ ಪರಿಗಣಿಸುವುದಿಲ್ಲ ?*

.....................................................................................................................

.....................................................................................................................

.....................................................................................................................

## 9.4 ಕಲಿಕೆಯ ಸಾಮಗ್ರಿಗಳು ಗಿ ಬೋಧನಾಸಾಮಗ್ರಿಗಳು

ಕಲಿಕೆಯ ಸಾಮಗ್ರಿಗಳನ್ನು ಎಲ್ಲ ಸಮಸ್ಯೆಗಳಿಗೆ ಪರಿಹಾರದಂತೆ, ಎಲ್ಲ ತರಗತಿಗಳಿಗೆ, ಎಲ್ಲ ವಿಷಯಗಳಿಗಾಗಿ, ಸಂದರ್ಭದ ಹಂಗಿಲ್ಲದೆ, ನೀಡಲಾಗುತ್ತದೆ. ಇದರ ಬಳಕೆಯಿಂದ ಜಾದೂ ಆಗಿಬಿಡುವುದೆಂದು ನಂಬಿಕೆ. ಇವುಗಳನ್ನು ಉತ್ಪಾದಿಸುವ ಕಾರ್ಯಾಗಾರಗಳಿವೆ. ಇವುಗಳಲ್ಲಿ ಥರ್ಮೋಕೋಲ್, ಚಾರ್ಟ್ ಕಾಗದ, ಬಣ್ಣಗಳು ಇನ್ನಿತರ ಬಗೆಯ ಸಾಮಗ್ರಿಗಳು ಲಭ್ಯ. ಶಿಕ್ಷಕರು ತಮ್ಮ ಕಲಾಸಾಮರ್ಥ್ಯ, ಕಲ್ಪನೆಗಳನ್ನು ಪ್ರದರ್ಶಿಸಲು ಮಹಾಪ್ರಯತ್ನಗಳನ್ನು ಮಾಡಿ, ಸುಂದರ ಮತ್ತು ಸೊಗಸಾದ ನಮೂನೆಗಳನ್ನು ತಯಾರಿಸುತ್ತಾರೆ.

## 9.5 ಪ್ರದರ್ಶನಾ ನಮೂನೆಗಳು ಮತ್ತು ಸಾಮಗ್ರಿಗಳು

ಈ ನಮೂನೆಗಳು ಹಾಗು ಅವುಗಳ ಗುಣಮಟ್ಟವನ್ನು ಅವುಗಳ ಉಪಯೋಗದೊಂದಿಗೆ ಹೋಲಿಸಿದಾಗ ಈ ಕೆಳಗಿನ ಮೂರು ಮುಖ್ಯ ಪ್ರಶ್ನೆಗಳೇಳುತ್ತವೆ:

1. ಈ ನಮೂನೆಗಳು ಮಗುವಿನಲ್ಲಿ ಚಿಂತನೆಗೆ ಹಚ್ಚುತ್ತವೆಯೆ? ಇವುಗಳನ್ನು ಅದು ತನ್ನ ಕಲ್ಪನೆ ಮತ್ತು ಸ್ವತಂತ್ರವಿಚಾರಗಳನ್ನು ರೂಪಿಸಿ, ಅವುಗಳನ್ನು ತೋರ್ಪಡಿಸಲು ಬಳಸಿಕೊಳ್ಳಬಹುದೆ?

ಅಥವಾ

ಅವು ಕೇವಲ ಒಂದು ಬಗೆಯ ಮಾಹಿತಿಯನ್ನು ಒದಗಿಸುತ್ತವೆ, ಎಲ್ಲರೂ ಅದನ್ನೇ ಅರ್ಥಮಾಡಿಕೊಂಡು, ಒಂದೇ ರೀತಿಯಾಗಿ ಮಾತ್ರ ವ್ಯಕ್ತಪಡಿಸಬೇಕೆ?

2. ಮಕ್ಕಳು ಇದರೊಂದಿಗೆ ಮತ್ತೇನನ್ನಾದರೂ ಮಾಡಬಹುದೆ? ಅವರು ಅದನ್ನು ಮುಟ್ಟಿ, ಬದಲಿಸಿ, ಮಾರ್ಪಡಿಸಬಹುದೆ?

ಅಥವಾ

ಮಕ್ಕಳು ಅವುಗಳಿಂದ ದೂರವಿರಬೇಕು, ಏಕೆಂದರೆ ಅವರು ಇವುಗಳನ್ನು ಬಳಸಿದರೆ ಅಥವಾ ಸ್ಪರ್ಶಿಸಿದರೂ ಅದು ಮುರಿಯಬಹುದು ಅಥವಾ ಹಾಳಾಗಬಹುದು.

3. ಮಕ್ಕಳಿಗೆ ಈ ಸಾಮಗ್ರಿಗಳನ್ನು ಬಳಸುವ ಸ್ವಾತಂತ್ರ್ಯವಿದ್ದು, ಅವುಗಳನ್ನು ಅವರು ತಮ್ಮ ಬಳಿ ಇಟ್ಟುಕೊಳ್ಳಬಹುದು ಅಥವಾ ಬಳಸಬಹುದು.

ಅಥವಾ

ಅಂತಹ ಒಂದು ನಮೂನೆಯನ್ನೇ ಮಾಡುವುದು ಅತಿ ಕಠಿಣ. ಪ್ರತಿಯೊಂದು ನಮೂನೆಯೂ ಅದೆಷ್ಟು ಸಮಯ ಮತ್ತು ಸಂಪನ್ಮೂಲವನ್ನು ಬೇಡುತ್ತದೆಯೆಂದರೆ ಪ್ರತೀ ಮಗುವೂ ಅದನ್ನು ಪಡೆಯಲು ಸಾಧ್ಯವಿಲ್ಲ.

ನಿಜಕ್ಕೂ, ಸಾಮಗ್ರಿಯು 'ಅಥವಾ' ಎಂಬುದಕ್ಕೆ ಸರಿಹೋಯಿತೆಂದರೆ, ಅದು ಕಲಿಕಾಸಾಮಗ್ರಿಯಾಗುವುದಿಲ್ಲ. ಕಲಿಕಾಸಾಮಗ್ರಿಯೆಂದರೆ ಕಲಿಯುವುದು–ಕಲಿಸುವುದು. ವಾಸ್ತವವಾಗಿ, 'ಅಥವಾ'ದ ನಂತರದ ವರ್ಗದಲ್ಲಿ ಬರುವ ಸಾಮಗ್ರಿಗಳೆಲ್ಲವೂ ಕಲಿಯುವವನಿಗೆ ನಗಣ್ಯ. ಈ ಸಾಮಗ್ರಿಗಳು ಕಲಿಕೆಗೆ ಸಹಾಯಕ, ಅಂದರೆ, ಅವು ಕಲಿಕಾ ಸಹಾಯಕ ವಸ್ತುಗಳು. ಇವೆರಡೂ ಉಪಯೋಗಕಾರಿ, ಆದರೆ ಅವು ಯಾವ ಸಂದರ್ಭಗಳಲ್ಲಿ ಮತ್ತು ಯಾವ ರೀತಿ ಉಪಯೋಗಕ್ಕೆ ಬರುತ್ತವೆಯೆಂದು ಗಮನಿಸುವುದು ಮುಖ್ಯ. ಈ ಸಾಮಗ್ರಿಗಳ ಲಭ್ಯತೆಯು ಉತ್ತಮ ಕಲಿಕೆಯ ದೃಢೀಕರಣವಲ್ಲ.

ಉತ್ತಮ ಕಲಿಕಾ ಸಾಮಗ್ರಿಗಳಾಗಿ ತರಹಾವರಿ ಚಾರ್ಟ್‌ಗಳು, ಥರ್ಮೊಕೊಲ್ ಮತ್ತು ಪ್ಲಾಸ್ಟಿಕ್‌ನಿಂದ ಮಾಡಿದ ನಮೂನೆಗಳನ್ನು ತೋರಿಸಲಾಗುತ್ತದೆ. ಕಲಿಕೆಗೆ ಸಹಾಯಕಾರಿಯಾಗಿ ಇವು ಕೆಲವು ಉದಾಹರಣೆಗಳಷ್ಟೆ, ಅವು ಕೇವಲ ಶಿಕ್ಷಕರು ಮಕ್ಕಳಿಗಾಗಿ ಏನನ್ನು ನೀಡಬಲ್ಲರೆಂಬುದಕ್ಕೆ ಸಾಕ್ಷಿಯಾಗಿವೆ. ಅವುಗಳಿಂದ ಹೆಚ್ಚಿನ ಕಲಿಕೆಯಾಗುವುದಿಲ್ಲ. ಸಾಮಾನ್ಯವಾಗಿ, ಶಿಕ್ಷಕರು ಅದನ್ನು ಸಿದ್ಧಗೊಳಿಸಲು ಅನೇಕ ದಿನಗಳನ್ನೇ ತೆಗೆದುಕೊಳ್ಳುತ್ತಾರೆ ಮತ್ತು ಅವು ಕಲಿಕಾಸಾಮಗ್ರಿಯ ಕೋಣೆಗಳಲ್ಲಿ ವರ್ಷಗಟ್ಟಲೆ ಪ್ರದರ್ಶನಗೊಳ್ಳುತ್ತವೆ ಆದರೆ ಮಕ್ಕಳು ಅದನ್ನು ಮುಟ್ಟುವಂತಿಲ್ಲ ಅಥವಾ ಹೆಚ್ಚಿನ ಸಮಯ ನೋಡುವಂತೆಯೂ ಇಲ್ಲ. ನಮೂನೆಯು ಹಾಳಾಗುವುದೆಂಬ ಭಯದಿಂದ ಹೀಗಾಗುತ್ತದೆ. ನಮೂನೆಯನ್ನು ಅಧಿಕ ಶ್ರಮವಹಿಸಿ ಮಾಡಿದ ಕಲಾಕೃತಿಯಂತೆ ಕಾಣಲಾಗುತ್ತದೆ. ಅದು ಭಗ್ನಗೊಂಡರೆ ಮತ್ತೊಂದನ್ನು ಮಾಡುವುದು ಕಷ್ಟ.

Notes

ಬಹಳಷ್ಟು ಶಾಲೆಗಳಲ್ಲಿ ಮತ್ತು ಆಖಇಖಿಖಗಳಲ್ಲಿಕಲಿಕಾ ಸಹಾಯಕ ವಸ್ತುಗಳ ಬಗ್ಗೆಯೂ ಇಂತಹುದೇ ಉದಾಹರಣೆ ಸಿಗುತ್ತದೆ. ಬಳಸಿದ ಸಾಮಗ್ರಿಗಳು, ಬಣ್ಣಗಳು ಮತ್ತು ಮಾಡುವ ಕೌಶಲ್ಯ ಇವುಗಳಲ್ಲಿಕೊಂಚ ವ್ಯತ್ಯಾಸ ಕಾಣಬಹುದು. ಈ ನಮೂನೆಗಳನ್ನು ಮಾಡುವುದು ಸವಾಲಿನ ಕೆಲಸ ಹಾಗೂ ಇದಕ್ಕಾಗಿ ಕುಶಲ ಶಿಕ್ಷಕರ ಅಗತ್ಯವಿದೆ. ಆದರೆ ಅವು ವಿದ್ಯಾರ್ಥಿಗಳಿಗೆ ಉಪಯೋಗಕ್ಕೆ ಬರುವುದಿಲ್ಲ. ಅವುಗಳನ್ನು ಅವರು ಬೆರಗಿನಿಂದ ಒಮ್ಮೆ ನೋಡುತ್ತಾರೆ, ನಂತರ ಮರೆಯುತ್ತಾರೆ. ಇಲ್ಲಿ ಕಲಿಕೆಯಾಗುವುದಿಲ್ಲ.

## 9.6 ಕಲಿಕಾ ಸಾಮಗ್ರಿಯು ಹೇಗೆ ನೆರವಾಗುತ್ತದೆ?

ಇದನ್ನು ಕೈಗೆತ್ತಿಕೊಳ್ಳುವ ಮೊದಲು, ಮಕ್ಕಳಿಗೆ ನಾವೇನು ಕಲಿಸಬೇಕಿದೆ ಮತ್ತು ಅವರು ಹೇಗೆ ಕಲಿಯುತ್ತಾರೆಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕು. ಮಕ್ಕಳು ಕಲಿಕಾಪ್ರಕ್ರಿಯೆಯಲ್ಲಿ ಸಕ್ರಿಯರಾಗಿರಬೇಕೆಂಬುದನ್ನು ನಾವು ಗುರುತಿಸಿದರೆ, ಅಂತಹ ಅವಕಾಶಗಳನ್ನು ನಾವು ಮಕ್ಕಳಿಗೆ ಒದಗಿಸುವುದು ಅವಶ್ಯಕ. ಇದರಲ್ಲಿ ಸಾಮಗ್ರಿಗಳು ನೆರವಾಗುತ್ತವೆ. ಉದಾಹರಣೆಗೆ, ಮಕ್ಕಳು ವರ್ಗಗಳ ವಿಷಯದಲ್ಲಿ ತೊಡಗಿಸಿಕೊಳ್ಳಬೇಕೆಂದರೆ, ಸ್ಪಷ್ಟ ಗುಣಗಳನ್ನು ಆಧರಿಸಿ ವರ್ಗೀಕರಿಸಲು ಸುಲಭವಾಗುತ್ತದೆ. ಈ ಗುಣಗಳು ಬಣ್ಣ, ಆಕಾರ, ತೂಕ ಅಥವಾ ಇನ್ನಾವುದಾದರೂ ಆಗಿರಬಹುದು. ವರ್ಗೀಕರಣದಲ್ಲಿ ಆಕೆ/ಆತನು ಆ ಗುಣದ ಬಗ್ಗೆ ಆಲೋಚಿಸಿ ಅದಕ್ಕೆ ಯುಕ್ತ ಶಬ್ದವನ್ನು ನೀಡಬೇಕು. ಪರಿಸರ ಅಭ್ಯಾಸದ ಒಂದು ಭಾಗವು ಭಾಷೋನ್ನತಿಯಾಗಿದ್ದು, ಮಗುವಿಗೆ ವರ್ಗೀಕರಣದ ಅಭ್ಯಾಸವನ್ನು ಮಾಡಿಸಲು ಯಾವುದೇ ಸಾಮಗ್ರಿಯನ್ನು ಮಗುವಿಗೆ ನೀಡಬಹುದು. ಈ ಸಾಮಗ್ರಿಗಳನ್ನು ಬಳಸಿ ಅನೇಕ ರೀತಿಯ ಕೆಲಸಗಳನ್ನು ಮಾಡಬಹುದು. ಆದರೂ, ಕಾರ್ಯವಿಧಾನಗಳನ್ನು, ಅವುಗಳ ಮಟ್ಟವನ್ನು ಬದಲಾಯಿಸಲು ಮತ್ತು ಸಾಮಗ್ರಿಗಳನ್ನು ಸರಿಯಾಗಿ ಆಯ್ಕೆ ಮಾಡಲು ಮುಂದುವರೆಸುವುದು ಅಗತ್ಯ.

ಈ ರೀತಿಯ ಅಭ್ಯಾಸಗಳನ್ನು ಅನೇಕ ಹಂತಗಳಲ್ಲಿ ಮಾಡಬಹುದು. ಒಂದು ಗುಣವನ್ನಾಧರಿಸಿ ಮಕ್ಕಳಿಂದ ವಸ್ತುಗಳನ್ನು ವರ್ಗ ಮಾಡಿಸಬಹುದು. ಅಥವಾ ವಸ್ತುಗಳನ್ನು ಪರೀಕ್ಷಿಸಿ, ಅವುಗಳ ಗುಣಗಳನ್ನು ಆಲೋಚಿಸಿ ವರ್ಗೀಕರಿಸುವಂತೆ ಹೇಳಬಹುದು. ನಿಧಾನವಾಗಿ ನಾವು ಅವರಿಗೆ ಗುಣಗಳನ್ನು ಜೊತೆಗೂಡಿಸಿ ವರ್ಗೀಕರಿಸುವುದನ್ನು ಕಲಿಸಬಹುದು. ಉದಾಹರಣೆಗೆ, ಮಕ್ಕಳಿಗೆ ದುಂಡನೆಯ ಮತ್ತು ಚೌಕಾಕಾರದ ವಸ್ತುಗಳನ್ನು ಆಯಲು ಹೇಳುವುದು. ಈ ಚಟುವಟಿಕೆಯಿಂದ ಮಕ್ಕಳಲ್ಲಿ ಅಗತ್ಯಗಳನ್ನು ವರ್ಗೀಕರಿಸುವ ಸಾಮರ್ಥ್ಯವು ಬೆಳೆಯುತ್ತದೆ. ಆ ಸಾಮರ್ಥ್ಯ ಬೆಳೆಯುತ್ತಿದ್ದಂತೆ, ವಿವಿಧ ಮಟ್ಟದ ವರ್ಗೀಕರಣ ಮಾಡುವ ಸಾಮರ್ಥ್ಯವು ಉತ್ತಮವಾಗತೊಡಗುತ್ತದೆ. ಇದರಿಂದ ಭಾಷಾ ಸಾಮರ್ಥ್ಯವು ಉತ್ತಮಗೊಳ್ಳುವುದಲ್ಲದೆ ವಿವಿಧ ಶಬ್ದಗಳನ್ನು ವಿವಿಧ ಭಾಷಾ ವರ್ಗಕ್ಕೆ ಸೇರಿಸಲು ನೆರವಾಗುತ್ತದೆ.

ವಿವಿಧ ಸಾಮಗ್ರಿಗಳನ್ನು ಅನೇಕ ವಿಧಗಳಲ್ಲಿ ಬಳಸಿ, ಪ್ರತಿಯೊಂದು ವಿಷಯದಲ್ಲಿಯೂ ಮಕ್ಕಳು ಅದನ್ನು ಶಿಸ್ತಾಗಿ ಉಪಯೋಸುವಂತೆ ನೋಡಿಕೊಳ್ಳಬೇಕು. ಪ್ರತಿ ವಿಷಯದಲ್ಲಿಯೂ ವಿವಿಧ ಸಾಮಗ್ರಿಗಳನ್ನು ಬಳಸಿದರೆ ಮಕ್ಕಳಿಗೆ ಕಲಿಯಲು ಸಹಾಯಕಾರಿ.

Notes

**ಪ್ರಗತಿಯ ಪರಿಶೀಲನೆ – 3**

1. *ಈ ಕೆಳಗಿನ ಯಾವುದರಲ್ಲಿ ಕಲಿಯುವವನು ನಗಣ್ಯ?*
   *ಎ. ಕಲಿಕಾ ಸಾಮಗ್ರಿ*
   *ಬಿ. ಕಲಿಕಾ ಸಹಾಯಕ ವಸ್ತುಗಳು*
   *ಸಿ. ಕಲಿಯುವಿಕೆ*
   *ಡಿ. ಮಾದರಿಗಳು*

2. *ಕಲಿಕಾ ಸಾಮಗ್ರಿ ಎಂದರೆ ಜಾದೂವಲ್ಲ. ಈ ವಾಕ್ಯದ ಅರ್ಥವೇನು?*

   ..............................................................................................................................

   ..............................................................................................................................

   ..............................................................................................................................

3. *ಕಲಿಕಾಸಾಮಗ್ರಿ ಮತ್ತು ಕಲಿಕಾ ಸಹಾಯಕ ವಸ್ತುಗಳ ನಡುವಣ ವ್ಯತ್ಯಾಸವೇನು?*

   ..............................................................................................................................

   ..............................................................................................................................

   ..............................................................................................................................

4. *ಮಕ್ಕಳಿಗೆ ಕಲಿಕಾಸಾಮಗ್ರಿಯು ಏಕೆ ಕೈಗೆಟಕುವಂತಿರಬೇಕು?*

   ..............................................................................................................................

   ..............................................................................................................................

   ..............................................................................................................................

5. *ಕಲಿಕಾಸಾಮಗ್ರಿಯು ಯಾವ ರೀತಿಯಾಗಿ ಕಲಿಕೆಗೆ ನೆರವಾಗುತ್ತದೆ ಮತ್ತು ಈ ಸಹಾಯವನ್ನು ಮಾಡುವುದು ಹೇಗೆ?*

   ..............................................................................................................................

   ..............................................................................................................................

   ..............................................................................................................................

## 9.7 ಉತ್ತಮ ಶೈಕ್ಷಣಿಕ ಸಾಮಗ್ರಿ ಯಾವುದು?

ಉತ್ತಮ ಶೈಕ್ಷಣಿಕ ಸಾಮಗ್ರಿ ಎನ್ನುವುದು ಶಿಕ್ಷಕರಿಗೆ ಕೇವಲ ತಮ್ಮ ದೃಷ್ಟಿಕೋನವನ್ನು ವಿವರಿಸುವುದಕ್ಕಾಗಿಯೋ ಅಥವ ಕೇವಲ ಮಾಹಿತಿ ನೀಡುವುದಕ್ಕಾಗಿಯೋ ಇರುವುದಲ್ಲ ಎಂದಾಗ ಈ ಪ್ರಶ್ನೆ ಉದ್ಭವಿಸುತ್ತದೆ. ತರಗತಿಗಳಲ್ಲಿ ಕಪ್ಪುಹಲಗೆ, ಸೀಮೆಸುಣ್ಣ ಅಥವ ಪಠ್ಯಪುಸ್ತಕಗಳಿರಬೇಕೆ? ಶೈಕ್ಷಣಿಕ ಸಾಮಗ್ರಿ ಮತ್ತು ಅದರ ಬಳಕೆಯ ಬಗೆಗಿನ ನಮ್ಮ ಈಗಿನ ತಿಳುವಳಿಕೆ ಸರಿಯಾದುದಲ್ಲ ಎನ್ನುವುದಾದರೆ ಅವುಗಳನ್ನು ತರಗತಿಗಳಲ್ಲಿ ಹೇಗೆ ಬಳಸಬೇಕು? ಕಪ್ಪುಹಲಗೆಯನ್ನು ಬಿಟ್ಟು ಬೇರೆ ಯಾವುದನ್ನಾದರೂ ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿದೆಯೇ? ಇದನ್ನು ಪರೀಕ್ಷಿಸಲು ಮಕ್ಕಳು ಹೇಗೆ ಕಲಿಯುತ್ತಾರೆ, ಅವರುಗಳ ಕಲಿಕೆಯ ಕ್ರಿಯೆಯ ಬಗ್ಗೆ ನಮಗೆ ತಿಳಿದಿರುವುದೇನು ಎಂದು ಮೊದಲು ತಿಳಿದುಕೊಳ್ಳಬೇಕು.

Notes

ಇದರ ಬಗ್ಗೆ ಆಲೋಚಿಸುವಾಗ ಪ್ರಸ್ತುತದಲ್ಲಿನ ಬೋಧಕ ಕಲಿಕೆಯನ್ನು ಯಾವ ಬಗೆಯಲ್ಲಿ ಅರ್ಥೈಸಿಕೊಂಡಿದ್ದೇವೆ ಎನ್ನುವುದನ್ನು ಗಮನಿಸಬೇಕು. ಈ ನಿಟ್ಟಿನಲ್ಲಿ ಬಹುಮುಖ್ಯವಾದದ್ದು ಮನುಷ್ಯರು ಮಕ್ಕಳನ್ನೂ ಒಳಗೊಂಡಂತೆ ಹೊಸ ಅನುಭವಗಳನ್ನು ತಮ್ಮ ಹಿಂದಿನ ಅನುಭವಗಳೊಂದಿಗೆ ಹೋಲಿಸಿ ನೋಡುತ್ತಾರೆ. ಹೊಸದಾಗಿ ಕಲಿಯುವುದೆಲ್ಲವೂ ಹಿಂದಿನ ಕಲಿಕೆಯ ಹಿನ್ನೆಲೆಯಲ್ಲಿ ನಡೆಯುತ್ತದೆ.

ಗಾಢವಾದ ಹಾಗೂ ತತ್‌ಕ್ಷಣದ ಅನುಭವಗಳು ಮಕ್ಕಳಿಗೆ ಅಸಂಗತ ಯೋಚನೆಗಳನ್ನು ಅರ್ಥೈಸಿಕೊಳ್ಳಲು ಹಾಗೂ ಒಳಗೊಳ್ಳಲು ನೆರವಾಗುತ್ತದೆ. ಪ್ರತಿ ಮಗುವೂ ಇದನ್ನು ತನ್ನದೇ ರೀತಿಯಲ್ಲಿ ಮಾಡಿಕೊಳ್ಳುತ್ತದೆ. ಅಂದ ಮೇಲೆ ಕಲಿಯುವ ಪ್ರತಿ ಹುಡುಗಿ/ಗನ ಭಾಗವಹಿಸುವಿಕೆಯು ಕಲಿಕೆಯಲ್ಲಿ ಬಹುಮುಖ್ಯವಾದದ್ದು ಎಂದು ಅರಿತಂತಾಯಿತು. ಇದು ಸಾಧ್ಯವಾಗುವುದು ಗಾಢ ಅನುಭವಗಳನ್ನು ಅರ್ಥೈಸಿಕೊಳ್ಳಲು ಹುಡುಗ/ಗಿಯ ಕಲಿಕೆಯ ನೆರವಾಗುವ ರೀತಿಯಲ್ಲಿ ಶೈಕ್ಷಣಿಕ ವಸ್ತುಗಳಿರಬೇಕು. ಅಂದರೆ ಶೈಕ್ಷಣಿಕ ಸಾಮಗ್ರಿಗಳ ವಿನ್ಯಾಸವು ಮಕ್ಕಳು ತಮಗೆ ಅರ್ಥವಾದದ್ದನ್ನು ಮರು ಪ್ರಯೋಗಕ್ಕೆ ಒಡ್ಡಿ ಪರೀಕ್ಷಿಸಿ ಹೊಸ ಜ್ಞಾನವನ್ನು ತಮ್ಮದಾಗಿಸಿಕೊಳ್ಳುವಂತಿರಬೇಕು. ಮಕ್ಕಳು ವಸ್ತುಗಳೊಂದಿಗೆ ಆಡುತ್ತಾ, ಅವು ಮುರಿಯಬಹುದೆನ್ನುವ ಯಾವುದೇ ಆತಂಕವಿಲ್ಲದೆ ತಮ್ಮ ಚಟುವಟಿಕೆಗಳಿಗೆ ಬಳಸುವಂತಿರಬೇಕು. ಖಐಜನಲ್ಲಿ ಮಕ್ಕಳಿಗೆ ಸ್ವತಃ ತಾವೇ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುವ, ಅರ್ಥೈಸಿಕೊಳ್ಳುವ ಅವಕಾಶಗಳನ್ನು ನೀಡಲಾಗುತ್ತದೆ. ಈ ವಿಧಾನದಲ್ಲಿ ಮಕ್ಕಳು ವಸ್ತುಗಳೊಂದಿಗೆ ಆಡುತ್ತಾ, ಅವುಗಳ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಾ, ಮತ್ತೆ ಮತ್ತೆ ಅವುಗಳೊಂದಿಗೆ ಚಟುವಟಿಕೆಯಲ್ಲಿ ಭಾಗಿಯಾಗುತ್ತಾ ಹೊಸದನ್ನು ಕಲಿಯುತ್ತಾರೆ.

ಉದಾಹರಣೆಗೆ ಅಸಂಗತವಾದ ವಿಷಯವೊಂದನ್ನು ಗ್ರಹಿಸಲು ಅವುಗಳನ್ನು ವಿವರಿಸಲು ಬಳಸುವ ಪ್ರಾತಿನಿಧಿಕ ವಸ್ತುವೊಂದನ್ನು ಗಮನಿಸುತ್ತಾ ಬೇರೆ ಬೇರೆ ಸವಾಲಿನ ಸಂದರ್ಭಗಳಲ್ಲಿನ ವಿವಿಧ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಇದರರ್ಥ ವಸ್ತುಗಳು ಅರ್ಥಮಾಡಿಕೊಳ್ಳಲು ನೆರವಾಗುವ ಹಾದಿಗಳೇ ಹೊರತು ಬೋಧನಾ ಕಲಿಕೆಯ ವಸ್ತುಗಳಲ್ಲ. ತರಗತಿಯ ಮುಖ್ಯ ಉದ್ದೇಶ ಸ್ಪಷ್ಟವಾಗಿರದ ಹೊರತು ಸಾಮಗ್ರಿಗಳ ಬಳಕೆಯು ಯಾವ ರೀತಿಯಲ್ಲೂ ನೆರವಾಗುವುದಿಲ್ಲ. ಅದೇ ರೀತಿ ವಿವಿಧ ವಯಸ್ಸಿನ, ವಿವಿಧ ಹಂತದ, ವಿವಿಧ ಶಾಖೆಗಳ ಮಕ್ಕಳ ಕಲಿಕೆಯ ಖಐಜ ಭಿನ್ನವಾಗಿರುತ್ತದೆ. ಖಐಜನ ಸ್ವರೂಪ ಹಾಗೂ ವಿಧಾನವೇ ಭಿನ್ನವಾಗಿರುತ್ತದೆ. ಪ್ರಸ್ತುತದಲ್ಲಿನ ಶೈಕ್ಷಣಿಕ ವಸ್ತುಗಳು ಬಂದವರಿಗೆ ಶಿಕ್ಷಕಿ/ಕರ ಸೃಜನಶೀಲತೆ, ಕಲಾತ್ಮಕತೆಯ ಪ್ರದರ್ಶನ ಮಾಡುವುದಕ್ಕಷ್ಟೇ ಸೀಮಿತ ಎನ್ನುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಮಾಡಿಟ್ಟಿರುವ ಖಐಜ ವಸ್ತುಗಳು ತರಗತಿಗಳನ್ನು ಹಾಗೂ ಪ್ರಾಂಶುಪಾಲರ ಕೊಠಡಿಗಳನ್ನು ಅಲಂಕರಿಸುವುದಕ್ಕಷ್ಟೇ ಸೀಮಿತವಾಗಿರುತ್ತದೆ. ಖಐಜ ಬಗ್ಗೆ ಯೋಚಿಸುವಾಗ ಅವುಗಳ ಉಪಯೋಗ ಹಾಗೂ ಮಕ್ಕಳು ಅವುಗಳ ಜೊತೆಯಲ್ಲಿ ಹೇಗೆಲ್ಲ ಕೆಲಸ ಮಾಡಬಹುದು ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು ವಿಷಯ ಗಮನಿಸಿ, ಸಾಮಗ್ರಿಗಳನ್ನು ಪರೀಕ್ಷಿಸಿ, ಆಡುತ್ತಾ ಅವುಗಳನ್ನು ಎಸೆದು ಹೊಸದನ್ನು ಕೊಂಡುಕೊಳ್ಳುವಂತಿದ್ದರೆ ಅದಕ್ಕನುಗುಣವಾಗಿಯೇ ಸಾಮಗ್ರಿಗಳನ್ನು ಭಿನ್ನವಾಗಿ ರೂಪಿಸಬೇಕು. ಮಕ್ಕಳು ಬಳಸುವಂತಹ ವಸ್ತುಗಳಾಗಬೇಕು ಎಂದಾಗ ಅವು ಪ್ರದರ್ಶನಕ್ಕಿಡುವಂತಹ ವಸ್ತುಗಳಾಗಿರುವುದು ಸಾಧ್ಯವಿಲ್ಲ.

**Notes**

ವಸ್ತುಗಳು ಸುಲಭಕ್ಕೆ ಹಾಳಾಗಬಾರದು ಹಾಗೂ ಹೆಚ್ಚು ಬೆಲೆಯುಳ್ಳದ್ದಾಗಿರಬಾರದು. ಮಕ್ಕಳು ಬೋಧನಾ–ಕಲಿಕಾ ಚಟುವಟಿಕೆಯಲ್ಲಿ ಭಾಗವಹಿಸುತ್ತಾ ಕಲಿಯುವಂತಹ ತರಗತಿಗಳು ಆಕರ್ಷಕವಾಗಿರಬೇಕು. ಅದರರ್ಥ ತರಗತಿಗಳ ಬಾಹ್ಯ ಸೌಂದರ್ಯವಲ್ಲ. ಬದಲಿಗೆ ಮಕ್ಕಳ ಬಳಕೆಗೆ ಅನುಕೂಲವಾಗುವಂತಿರಬೇಕು. ಆ ಕೊಠಡಿಗಳು ಮಕ್ಕಳಿಗೆ ಇದು ನಮ್ಮದು, ಏನು ಬೇಕಾದರೂ ಮಾಡಬಹುದು ಎನ್ನುವ ಭಾವ ಹುಟ್ಟಿಸುವಂತಿರಬೇಕು. ಅಯ್ಯೋ ಇದನ್ನು ಮುಟ್ಟಿದರೆ ಗಲೀಜಾಗಿಬಿಟ್ಟರೆ, ಹಾಳಾಗಿಬಿಟ್ಟರೆ, ಆಡಲು ಹೋಗಿ ಮುರಿದುಹೋದರೆ, ಸುಮ್ಮನಿದ್ದರೂ ಏನಾದರೂ ಆಗಿಬಿಟ್ಟರೆ ಎನ್ನುವ ತರಹದ ಅಭದ್ರತೆಯ ಭಾವವನ್ನು ಆ ಕೊಠಡಿಗಳು ಮಕ್ಕಳಿಗೆ ಮೂಡಿಸುವಂತಿರಬಾರದು. ಪ್ರಾಥಮಿಕ ಶಾಲೆಗಳ ಸೌಂದರ್ಯವಿರುವುದೇ ಜೀವಂತಿಕೆ, ಖುಷಿ ತುಂಬಿದ ಮಕ್ಕಳಲ್ಲಿ. ಬಣ್ಣದ ಗೋಡೆಗಳು, ತೂಗಿಬಿಟ್ಟ ಚೆಂದದ ನಕಾಶೆಗಳು ಅಥವ ಇನ್ನಿತರ ವಸ್ತುಗಳಲ್ಲಿ ಕೊಠಡಿಯ ಅಂದವಿರುವುದಿಲ್ಲ. ಪ್ರಾಥಮಿಕ ಶಾಲೆಯ ತರಗತಿಗಳ ಕೊಠಡಿಗಳಲ್ಲಿ ಮಕ್ಕಳನ್ನು ಚಟುವಟಿಕೆಯಿಂದಿರಿಸುವಂತಹ ವಸ್ತುಗಳಿಂದ ತುಂಬಿರಬೇಕು. ಅವುಗಳನ್ನು ಅವರು ತಮ್ಮಿಚ್ಛೆಯಂತೆ ಬಳಸುವ ಸ್ವಾತಂತ್ರ್ಯವನ್ನು ನೀಡುವಂತಿರಬೇಕು. ಮಕ್ಕಳಿಗೆ ಅವು ತಮ್ಮ ವಸ್ತುಗಳು ಅವುಗಳೊಂದಿಗೆ ಆಡುತ್ತಾ ಹೊಸ ಅನುಭವಗಳನ್ನು, ಪರಿಕಲ್ಪನೆಗಳನ್ನು ಕಲಿಯಬಹುದು ಎನಿಸುವಂತಿರಬೇಕು.

ಪ್ರಗತಿಯ ಪರಿಶೀಲನೆ – 4

*1. ಪ್ರಾಥಮಿಕ ಶಾಲೆಯ ತರಗತಿಗಳ ಅಂದವನ್ನು ತೋರುವುದು ಯಾವುದು?*

*ಎ. ಬಣ್ಣದ ಗೋಡೆಗಳು*

*ಬಿ. ಬಣ್ಣದ ನಕಾಶೆಗಳು*

*ಸಿ. ಖುಷಿಯಿಂದ ಪಾಲ್ಗೊಳ್ಳುವ ಮಕ್ಕಳು*

*ಡಿ. ಇತರೆ ಆಕರ್ಷಕ ವಸ್ತುಗಳು.*

*2. ಉತ್ತಮ ಶೈಕ್ಷಣಿಕ ಸಾಮಗ್ರಿಗಳ ಗುಣಲಕ್ಷಣಗಳೇನು?*

..................................................................................................................................

..................................................................................................................................

..................................................................................................................................

*3. ಕಲಿಕೆಯ ಬೋಧನೆಯ ಪ್ರಕ್ರಿಯೆಯಲ್ಲಿ ಕಲಿಯುವವರ ಪಾತ್ರ ಬಹಳ ಮುಖ್ಯವಾದದ್ದು ಏಕೆ?*

..................................................................................................................................

..................................................................................................................................

..................................................................................................................................

*4. ಶೈಕ್ಷಣಿಕ ವಸ್ತುಗಳ ಕೊಠಡಿ ಹೇಗಿರಬೇಕು?*

..................................................................................................................................

..................................................................................................................................

..................................................................................................................................

Notes

## 9.8 ಕೇವಲ ಒಂದೇ ಸಾಮಗ್ರಿಯನ್ನಿಟ್ಟುಕೊಂಡು ನಾವೇನು ಮಾಡಬಹುದು?

ನಮ್ಮ ಕಲಿಯುವಿಕೆ ಅಪಾರ ಪ್ರಮಾಣದ ವಸ್ತು (ವಿಷಯ)ಗಳ ಅವಶ್ಯಕತೆ ಇಲ್ಲ. ಪ್ರತಿಯೊಂದು ಕಲಿಕೆಗೂ ಒಂದು ಹೊಸವಸ್ತುವಿನ ನರೆವು ಬೇಕೇಬೇಕು ಎಂಬುದ ಒಪ್ಪಿತವಾಗುವ ಮಾತೇನೂ ಅಲ್ಲ. ಉದ್ದೇಶ ಸ್ಪಷ್ಟವಾಗಿದ್ದರೆ, ನಮ್ಮ ಚಿಂತನಾಲಹರಿ ಸುಗಮವಾಗಿ ಸಾಗಿದರೆ, ಕೇವಲ ಒಂದೇ ವಸ್ತುವಿನಿಂದಲೂ ನಾವು ಹಲವಾರು ಪ್ರಯೋಗಗಳನ್ನು ಮಾಡಬಹುದು. ಈ ತೆರನಾದ ಪ್ರಯೋಗಗಳು ಕೇವಲ ಒಂದು ವಿಷಯಕ್ಕೆ ಸೀಮಿತವಾಗದೇ ಅನೇಕ ವಿಷಯಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತವೆ. ಉದಾಹರಣೆಗೆ ನಮ್ಮ ಬಳಿ ಒಂದು ದಾಳವಿದೆ ಎಂದಾದರೆ ಮಕ್ಕಳು ಅದನ್ನು ಹೇಗೆ ಬಳಸಿಕೊಳ್ಳಬಹುದು? ಅದರ ಮೇಲೆ ಚುಕ್ಕೆಗಳನದನು ಬರೆದು ಆಡಲು ಬಳಸಬಹುದು. ದಾಳದ ಮೇಲೆ ಎಷ್ಟು ಚುಕ್ಕೆಗಳಿವೆಯೋ ಅಷ್ಟು ಕಲ್ಲುಗಳನ್ನು ಒಟ್ಟುಮಾಡಿ ಆಟವಾಡಿ ಎಂದು ಹೇಳಬಹುದು. ನಂತರದ ಹಂತದಲ್ಲಿ, ಎರಡುಮೂರು ಬಾರಿ ದಾಳ ಉರುಳಿಸಿ, ಅದರಿಂದ ಬರುವ ಸಂಖ್ಯೆಗಳನ್ನು ಕೂಡಿಸಿ ಅಷ್ಟು ಕಲ್ಲುಗಳನ್ನು ಸಂಗ್ರಹಿಸಿ ಎನ್ನಬಹುದು. ಹಾಗೆಯೇ, ಈ ಆಟವನ್ನು ಆಡಲು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿದಾಗ, ಯಾವ ಗುಂಪಿನ ಮಕ್ಕಳು ಹೆಚ್ಚು ಕಲ್ಲುಗಳನ್ನು ಸಂಗ್ರಹಿಸಿದವು ಎಂಬುದನ್ನು ಅಥವಾ ಅತಿ ಕಡಿಮೆ ಕಲ್ಲುಗಳನ್ನು ಸಂಗ್ರಹಿಸಿದವು ಗಮನಿಸಬಹುದು. ಅದೇ ದಾಳವನ್ನು ಉಪಯೋಗಿಸಿಕೊಂಡು ಇನ್ನೂ ಹತ್ತುಹಲವು ಆಟಗಳನ್ನು ಆಡಬಹುದು. ಉದಾಹರಣೆಗೆ, ದಾಳವನ್ನು ಉರುಳಿಸಿ, ಬರುವ ಸಂಖ್ಯೆಯನ್ನು ಗುರುತು ಹಾಕಿಕೊಂಡು, ಪ್ರತಿಬಾರಿ ಬಾರಿ ಉರುಳಿಸಿದಾಗ ಬರುವ ಸಂಖ್ಯೆಯಲ್ಲಿ ಒಂದೇ ಸಂಖ್ಯೆ ಎಷ್ಟುಬಾರಿ ಪುನರಾವರ್ತನೆಯಾಗಿದೆ ಎಂದು ಗಮನಿಸಬಹುದು.

ಒಂದು ಹಾಳೆಯ ಮೇಲೆ ದಾಳಗಳನ್ನು ಜೋಡಿಸುತ್ತಾ ಎಷ್ಟು ಅಂತಹ ದಾಳಗಳನ್ನು ಇಡಬಹುದು ಎಂದು ಲೆಕ್ಕಹಾಕಬಹುದು. ಇದರಿಂದ ದಾಳ ಎಷ್ಟು ದೊಡ್ಡದಿದೆ ಎಂಬುದು ತಿಳಿಯುತ್ತದೆ. ಮಕ್ಕಳಿಗೆ ಬೇಕಾದಷ್ಟು ಹಾಳೆಗಳನ್ನು ಕೊಟ್ಟು ಅವನ್ನು ಉಪಯೋಗಿಸಿಕೊಂಡು ವಿವಿಧ ಆಕಾರಗಳನ್ನು ರಚಿಸಿ ಅದರಿಂದ ಹೊಸ ಆಟವೊಂದನ್ನು ಆಡಿಸಬಹುದು. ಆ ರೀತಿ ಜೋಡಿಸಿದ ದಾಳಗಳ ಅಕಾರ ಏನನ್ನು ಹೋಲುತ್ತದೆ ಎಂದು ಕೇಳುವ ಮೂಲಕ ಅವರ ಕಲ್ಪನಾ ಶಕ್ತಿಯನ್ನು ಉತ್ತೇಜಿಸಬಹುದು. ಉದಾಹರಣೆಗೆ ಮಕ್ಕಳು ವೃತ್ತಾಕಾರವಾಗಿ ದಾಳಗಳನ್ನು ಜೋಡಿಸಿದರೆ ಅದು ಒಂದು ಮೂಸಂಬಿ ಹಣ್ಣನ್ನು ಅಥವಾ ಚೆಂಡನ್ನು ಹೋಲುತ್ತದೆ ಎನ್ನಬಹುದು. ಹಾಗೆಯೇ ಅಕ್ಷರಮಾಲೆಯ ಪಟ ಇದ್ದರೆ, ಅಕ್ಷರಗಳ ಆಕಾರದಲ್ಲಿ ದಾಳಗಳನ್ನು ಜೋಡಿಸಿ ಎಂದು ಸೂಚಿಸಬಹುದು. ಹೀಗೆ ಕೇವಲ ಒಂದು ದಾಳದಿಂದ ಅನೇಕ ಆಟಗಳನ್ನು ಆಡಿಸಿ, ಮಕ್ಕಳ ಆಸಕ್ತಿಯನ್ನು ಹೆಚ್ಚಿಸುವಂತೆ ಮಾಡಬಹುದು.

## 9.9 ಭಾಷೆಯ ಕಲಿಕೆಯಲ್ಲಿ ಚಿತ್ರಪಟಗಳ (Picture Cards) ಪಾತ್ರ

ಚಿತ್ರಪಟಗಳು ಮಕ್ಕಳ ಕಲಿಕೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಉದಾಹರಣೆಗೆ ಒಂದು ಚಿತ್ರಪಟದಲ್ಲಿರುವ ಚಿತ್ರವನ್ನು ಅದಕ್ಕೆ ಹೊಂದುವ ಪದದೊಂದಿಗೆ ಜೋಡಿಸಬಹುದು. ಎರಡು ಚಿತ್ರಪಟಗಳನ್ನು ಒಂದಕ್ಕೊಂದು ಹೊಂದಿಸಬಹುದು. ಹಾಗೆಯೇ, ಚಿತ್ರಗಳನ್ನು, ಚಿತ್ರಪಟಗಳನ್ನು ಅನೇಕ ವಿಧದಲ್ಲಿ ಬಳಸಬಹುದು. ಉದಾಹರಣೆಗೆ ಮಾತುಕತೆ, ಚರ್ಚೆ, ಕಲ್ಪನಾಶಕ್ತಿಯನ್ನು ಉದ್ದೀಪನಗೊಳಿಸುವುದಕ್ಕೆ, ಹೆಚ್ಚಿಸುವುದಕ್ಕೆ, ಕತೆಗಳನ್ನು ಹೆಣೆಯಲು ಇತ್ಯಾದಿ. ಮೊದಮೊದಲು ಈ ಚಟುವಟಿಕೆಗಳನ್ನು ಮೌಖಿಕವಾಗಿ ಮಾಡಿಸಿ ಬಳಿಕ ಲಿಖಿತ ರೂಪದಲ್ಲಿ ಮಾಡಿಸಬಹುದು. ಚಿತ್ರಪಟಗಳನ್ನು ಯಾವುದೇ ತರಗತಿಯ ಮಕ್ಕಳಿಗಾದರೂ, ಯಾವುದೇ ಉದ್ದೇಶಕ್ಕಾದರೂ ಬಳಸಬಹುದು. ಇದನ್ನೆಲ್ಲ ಗಮನಿಸಿದಾಗ ಖಿಐಒ ಕೇವಲ ಮಕ್ಕಳಿಗೆ ಏನು ಬೇಕು ಅಂಬ ತಿಳಿವಳಿಕೆ ಇದ್ದಾಗ ಮಾತ್ರ ಉಪಯೋಗವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಚಿತ್ರಪಟಗಳನ್ನು ಬಳಸಿಕೊಂಡು ಮಕ್ಕಳಿಗಾಗಿ ನಡೆಸುವ ಚಟುವಟಿಕೆಗಳು ಅವರು ಕಲಿಕೆಯಲ್ಲಿ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳುವಲ್ಲಿ ಅತ್ಯಂತ ಉಪಯುಕ್ತವಾಗಿವೆ. ಒಮ್ಮೆ ಮಕ್ಕಳು ಚಿತ್ರಪಟಗಳ ಮೂಲಕ ಕಲಿಕೆಯಲ್ಲಿ ಆಸಕ್ತಿ ಕಂಡುಕೊಂಡರೆ ಸಾಕು, ಇತರೆ ವಸ್ತುಗಳನ್ನು ಹೆಕ್ಕಿ ತೆಗೆಯುವುದು ಕಷ್ಟದ ಮಾತೇನಲ್ಲ!

Notes

**ಪ್ರಗತಿಯ ಪರಿಶೀಲನೆ – 5**

*1. ಭಾಷೆಯ ಕಲಿಸುವಿಕೆಯಲ್ಲಿ ಚಿತ್ರಪಟಗಳ ಪಾತ್ರ*
*ಎ. ಓದುವುದರ ಜೊತೆಜೊತೆಗೆ ಓದಿದ್ದನ್ನು ಅರ್ಥೈಸಿಕೊಳ್ಳುವುದು*
*ಬಿ. ಚಿತ್ರಪಟಗಳನ್ನು ನೋಡುವುದು*
*ಸಿ. ಚಿತ್ರಪಟಗನ್ನು ಮಾಡುವುದು*
*ಡಿ. ಅಕ್ಷರಮಾಲೆಯನ್ನು ಬರೆಯುವುದು*

*2. ತರಗತಿಯಲ್ಲಿ ಒಂದು ಚೆಂಡನ್ನು ಎಷ್ಟು ವಿಧಗಳಲ್ಲಿ ಉಪಯೋಗಿಸಬಹುದು?*

.................................................................................................................................

.................................................................................................................................

.................................................................................................................................

*3. ಚಿತ್ರಪಟಗಳನ್ನು ಹಾಗೂ ಶಬ್ದದಪಟಗಳನ್ನು ಭಾಷೆಯ ಕಲಿಕೆಯಲ್ಲಿ ಹೇಗೆ ಬಳಸಬಹುದು?*

.................................................................................................................................

.................................................................................................................................

.................................................................................................................................

## 9.10 ಕಲಿಕೆಯ ವ್ಯಾಖ್ಯೆಯ ಹಿನ್ನೆಲೆಯಲ್ಲಿ ಭಾಷಾಕಲಿಕೆಯ ಸಾಮಗ್ರಿಗಳು

ಭಾಷೆಯನ್ನು ಕಲಿಸುವ ಹಾಗೂ ಕಲಿಯುವ ಕ್ರಿಯೆಗಳಲ್ಲಿನ ವ್ಯತ್ಯಾಸಗಳೆರಡೂ ಕಲಿಕಾ ಸಾಮಗ್ರಿಗಳ ಸ್ವರೂಪ ಹಾಗೂ ಅವು ಬಳಸಲ್ಪಡುವ ರೀತಿಯಲ್ಲಿ ಅಪಾರ ಬದಲಾವಣೆ ಉಂಟುಮಾಡಬಲ್ಲವು. ಯಾವುದೋ ಒಂದು ನಿರ್ದಿಷ್ಟ ಪದ್ಯವನ್ನೋ ಅಥವಾ ಗದ್ಯವನ್ನೋ ಮಾತ್ರ ವಿದ್ಯಾರ್ಥಿಗಳಿಗೆ ಕಲಿಸಬೇಕು ಎಂಬುದು ಮಾತ್ರವೇ ಉದ್ದೇಶವಾಗಿದ್ದರೆ, ಆಗ ಬಳಸುವ ಬೋಧನೆ ಮತ್ತು ಬೋಧನಾ ಸಾಮಗ್ರಿಗಳೇ ಬೇರೆ. ಅದಕ್ಕೆ ತದ್ವಿರುದ್ಧವಾಗಿ, ಕಲಿಯುವವರನ್ನು ಸ್ವತಂತ್ರವಾಗಿ ಆಲೋಚಿಸುವ, ಸಮಾಜದ ಕನ್ನಡಿಯ ಹಾಗೆ ಜೀವಿಸುವ, ಜ್ಞಾನಿಗಳನ್ನಾಗಿ ತಯಾರು ಮಾಡುವ, ಸಾಹಿತ್ಯದಲ್ಲಿ ಹಾಗೂ ಇತರ ವಿಷಯಗಳಲ್ಲಿ ಅಭಿರುಚಿ ಗಳಿಸಿಕೊಳ್ಳಬಲ್ಲ ವ್ಯಕ್ತಿಗಳನ್ನಾಗಿ ಮಾಡುವ ಉದ್ದೇಶವಿದ್ದರೆ, ಅಲ್ಲಿ ನಿರೀಕ್ಷಿಸಲಾಗುವ ವಿಧಾನಗಳೇ ಭೇರೆ. ಕಲಿಯುವವನು ತನ್ನ ವಿಚಾರಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವಂತಿರಬೇಕು ಎಂಬುದು ನಮ್ಮ ಉದ್ದೇಶವಾಗಿದ್ದರೆ ಆಗ ಅಲ್ಲಿ ಬಳಕೆಯಾಗುವ ಬೋಧನಾ ಸಾಮಗ್ರಿಗಳೇ ಬೇರೆ ಬಗೆಯವು.

ತರಗತಿಯಲ್ಲಿನ ಮಗುವು ಕೇವಲ ಪದ್ಯವನ್ನೋ ಪಾಠವನ್ನೋ ಉರುಹಾಕುವಷ್ಟು ಪರಿಣತಿ ಸಾಧಿಸಿದರೆ ಸಾಕೇ, ಪುಸ್ತಕದಲ್ಲಿನ ಮಾಹಿತಿಯನ್ನು ಸರಿಯಾಗಿ, ಸರಿಯಾದ ಕ್ರಮ, ಉಚ್ಚಾರದ ಮೂಲಕ ವ್ಯಕ್ತಪಡಿಸುವುದು ಬೇಕೇ ಬೇಡವೇ? ಮೊದಲಾದ ಸಂಗತಿಗಳ ಬಗ್ಗೆ ಸ್ಪಷ್ಟತೆ ಇರಬೇಕಾದುದು ಅತ್ಯಂತ ಅಗತ್ಯವಾದುದು. ಪದ್ಯ ಕಲಿಯುವುದಷ್ಟೇ ಅಲ್ಲ, ಅದನ್ನು ಹಾಡುವಂತಿರಬೇಕು, ಹೊಸದನ್ನು ಕಲಿಯುವಂತಿರಬೇಕು, ಸ್ವತಃ ಪದ್ಯ ಬರೆಯುವಂತಿರಬೇಕು.

Notes

ಕಲಿತ ಭಾಷೆಯನ್ನು ಭಿನ್ನ ಬರವಣಿಗೆಗಳನ್ನು ಬರೆಯುವ ಮೂಲಕ ಹೊಸದನ್ನು ಕಲಿಯುವಂತಿರಬೇಕು. ಕಲಿತ ಪ್ರಬಂಧಗಳನ್ನು ಅಥವಾ ಉತ್ತರಗಳನ್ನು ನೆನಪಿಟ್ಟುಕೊಂಡು ಕೇಳುವ ಪ್ರಶ್ನೆಗಳಿಗೆ ತನ್ನದೇ ಸ್ವಂತ ವಿಚಾರಗಳನ್ನು ಸೇರಿಸಿಕೊಂಡು ಸ್ವಂತ ವಾಕ್ಯದಲ್ಲಿ ಬರೆಯುವ ಸಾಮರ್ಥ್ಯ ಗಳಿಸಿಕೊಳ್ಳಬೇಕು. ಹೊಸಹೊಸ ಸಾಧ್ಯತೆಗಳಲ್ಲಿ, ಅವಕಾಶಗಳಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಧೃಡತೆ ಇರಬೇಕು. ಇದೆಲ್ಲವನ್ನು ನಮ್ಮ ನಿತ್ಯದ ತರಗತಿಗಳು ಕೊಡುತ್ತವೆ, ತನ್ನ ವಿಚಾರಗಳನ್ನು, ಭಾವನೆಗಳನ್ನು ವ್ಯಕ್ತಪಡಿಸಲು ಸಾಕಷ್ಟು ಮುಕ್ತವಾತಾವರಣವನ್ನು ಕಲ್ಪಿಸಿಕೊಡುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಇದಕ್ಕಾಗಿ, ನವೀನ ಹಾಗೂ ಆಕರ್ಷಕವೆನಿಸುವ ಚಿತ್ರಗಳು, ಚಿತ್ತಾಕರ್ಷಕ ಪಟಗಳು, ಕಲ್ಪನೆಯನ್ನು ಸೃಜಿಸುವಂತೆ ಮಾಡುವ ವಾತಾವರಣ ಎಲ್ಲವೂ ಬೇಕು. ಹೊಸಹೊಸ ಕತೆಗಳನ್ನು ಹೆಣೆಯಲು ಮಕ್ಕಳು ಹೇರಳ ಅವಕಾಶಗಳನ್ನು ಪಡೆಯುವಂತಿರಬೇಕು. ಮುಕ್ತತೆ, ವಿಚಾರಗಳ ವಿಫುಲ ಸೃಷ್ಟಿಗೆ ಸೂಕ್ತವೇದಿಕೆ ನಿರ್ಮಿಸಿಕೊಡಬೇಕು. ತಾವು ತಟಸ್ಥವಾಗಿದ್ದರೂ ಮಕ್ಕಳನ್ನು ಬೆಳೆಸುವ ಸಾಮಗ್ರಿಗಳು ಬೇಕು. ಅವರನ್ನು ಚಿಂತನೆಗೆ ಹಚ್ಚುವ, ಹೊಸಹೊಸ ಸಾಧ್ಯತೆಗಳ ಕ್ಷಿತಿಜದೆಡೆಗೆ ಚಿಮ್ಮುವಂತೆ ಮಾಡುವ ಉದ್ದೀಪಕ ಶಕ್ತಿಗಳು ಬೇಕು.

ಮಾತಾಡುವುದು ಹಾಗೂ ಓದುವುದು – ಇವು ಮಕ್ಕಳನ್ನು ಸ್ವಲ್ಪಮಟ್ಟಿಗೆ ಜಾಣರನ್ನಾಗಿ ಮಾಡಬಲ್ಲವು ಆದರೆ ಮನಸ್ಸಿನ ವಿಕಾಸಕ್ಕೆ ಅಡ್ಡಿಯಾಗಬಲ್ಲವು. ಹೊಸದನ್ನು ಕಲಿಯುವ, ಗ್ರಹಿಸುವ ಸಾಮರ್ಥ್ಯಕ್ಕೆ ಬೇಲಿಹಾಕಬಲ್ಲವು. ಮುಕ್ತಭಾಷಾ ಬಳಕೆಗೆ ಯೋಗ್ಯ ಬೋಧನಾ ಕ್ರಮ ಹಾಗೂ ಸಾಮಗ್ರಿಗಳ ಅಗತ್ಯವಿದೆ. ಅವು ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಗೆ ನೀರೆರೆಯುವಂತಿರಬೇಕು. ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ. ಇದರ ಹೊರತಾಗಿಯೂ ಇನ್ನೂ ಸಾಕಷ್ಟು ವಿಧಾನಗಳನ್ನು ನಾವು ಅನುಸರಿಸಬಹುದು.
ಹತ್ತಾರು ಘಟನೆಗಳನ್ನು ತೋರಿಸುತ್ತಿರುವ ಚಿತ್ರವೋ, ಕೊಲಾಜ್ ಎಂದು ಕರೆಯಲ್ಪಡುವ ಚಿತ್ರಗುಚ್ಛವೋ, ಇವನ್ನು ಬಳಸಿಕೊಂಡು ಮಕ್ಕಳಿಗೆ ಕತೆಗಳನ್ನು ಹೆಣೆಯಲು ಹೇಳಬಹುದು. ಇಲ್ಲಿ ಮಕ್ಕಳು ಕೇವಲ ಚಿತ್ರವನ್ನು ಮಾತ್ರ ಗ್ರಹಿಸದೇ, ಅದನ್ನೂ ಮೀರಿ ಅವರ ಕಲ್ಪನೆಯನ್ನು ಹರಿಯಬಿಟ್ಟಿರುತ್ತಾರೆ. ಅವರ ಭಾವನೆಗಳನ್ನು ಅವರದೇ ಭಾಷೆಯ ಮೂಲಕ ವ್ಯಕ್ತಪಡಿಸಬಲ್ಲವರಾಗಿರುತ್ತಾರೆ.

ಪ್ರಗತಿಯ ಪರಿಶೀಲನೆ – 6

*1. ಮಕ್ಕಳು ಭಾಷೆಯನ್ನು ಆತ್ಮವಿಶ್ವಾಸದಿಂದ ಹೊಸಹೊಸ ಸಾಧ್ಯತೆಗಳೊಡನೆ ಬಳಸಬೇಕೆಂದಾದಲ್ಲಿ ನಾವೇನು ಮಾಡಬಹುದು?*

*ಎ. ಮಕ್ಕಳಿಗೆ ತಮ್ಮ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳಲು, ಕಲ್ಪನಾಶಕ್ತಿಯನ್ನು ವ್ಯಕ್ತಪಡಿಸಲು ಅವಕಾಶ ಕೊಡಬೇಕು.*

*ಬಿ. ಉತ್ತರಗಳನ್ನು ಬಾಯಿಪಾಠ ಮಾಡಿ, ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ಹೇಳಬೇಕು.*

*ಸಿ. ಚಿತ್ರದಲ್ಲಿ ಕೊಟ್ಟಿರುವ ಪದ್ಯವನ್ನು ಓದಲು ಹೇಳಬೇಕು.*

*ಡಿ. ನಿರ್ದಿಷ್ಟ ಶೈಲಿಯ ಗದ್ಯ ಅಥವಾ ಪದ್ಯವನ್ನು ಮಕ್ಕಳಿಗೆ ವಿವರಿಸಬೇಕು*

*2. ತರಗತಿಯಲ್ಲಿ ಭಾಷೆಯನ್ನು ಕಲಿಸುವಾಗ ಯಾವ ಸಾಮಗ್ರಿಗಳನ್ನು ನೀವು ಸುಲಭವಾಗಿ ಬಳಸುತ್ತೀರಿ? ಮಕ್ಕಳು ಈ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಯಾವೆಲ್ಲ ಚಟುವಟಿಕೆಗಳನ್ನು ಮಾಡಬಲ್ಲರು?*

..........................................................................................................................

..........................................................................................................................

..........................................................................................................................

Notes

3. *ಕತೆಗಳನ್ನು ಹೇಳುವ ಮತ್ತು ಸೃಷ್ಟಿಸುವುದಕ್ಕಾಗಿ ನೀಡುವ ಅವಕಾಶವು ಹೇಗೆ ಮಕ್ಕಳ ಭಾಷಾಕಲಿಕೆಯನ್ನು ಬೆಳೆಸುತ್ತದೆ?*

..............................................................................................................

..............................................................................................................

..............................................................................................................

## 9.11 ಭಾಷಾತರಗತಿಗೆ ಬೇಕಾಗಬಹುದಾದ ಸಾಮಗ್ರಿಗಳು

ಭಾಷಾ ತರಗತಿಯಲ್ಲಿ ಸಾಮಗ್ರಿಗಳನ್ನು ಬಳಸುವುದು ಕೇವಲ ಮಗುವು ಬೇರೆ ಬೇರೆ ಭಾಷೆಗಳನ್ನು ಕಲಿಯಲಿ ಎಂಬ ಒಂದೇ ಉದ್ದೇಶಕ್ಕಲ್ಲ. ಬದಲಾಗಿ ಆಕೆಯ/ಅವನ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸಲು ಬಳಸಲಾಗುತ್ತದೆ. ಇದರರ್ಥ, ಕಲಿಕೆಗೆ ಬೇಕಾದ ಸಂಪನ್ಮೂಲಗಳನ್ನು ಬಳಸಿ, ಆಮೂಲಕ ವಿದ್ಯಾರ್ಥಿಯು ತನ್ನ ಕಲ್ಪನಾ ಶಕ್ತಿ ಹಾಗೂ ಸಮರ್ಥಭಾಷಾ ಬಳಕೆಯ ಜ್ಞಾನವನ್ನು ಹೆಚ್ಚಿಸಲು ನೆರವಾಗಬೇಕು ಎಂಬುದಾಗಿದೆ. ಅದಲ್ಲದೇ, ಬರವಣಿಗೆಗ ಪೂರಕವಾಗಿರುವಂತೆಯೂ ಕಲಿಕಾ ಸಾಮಗ್ರಿಗಳನ್ನು ಒದಗಿಸಬೇಕಾಗುತ್ತದೆ. ಭಾಷಾಕಲಿಕೆಯಲ್ಲಿ ಬರೆಯುವುದು ಒಂದು ಅವಿಭಾಜ್ಯ ಹಾಗೂ ಮಹತ್ವದ ಅಂಗ. ಪುಟ್ಟಮಕ್ಕಳಿಗೂ ಕೂಡಾ ಹೊಸಶಬ್ದಗಳನ್ನು ಉಪಯೋಗಿಸಲು, ಪ್ರಯೋಗಿಸಲು, ಸಂಭಾಷಣೆಯಲ್ಲಿ ತೊಡಗಲು ಅಗತ್ಯವಾಗಿದೆ. ಬೇರೆಬೇರೆ ಭಾಷೆಗಳನ್ನು ಕೇಳಿಸಿಕೊಳ್ಳುವುದು ಮತ್ತು ಧ್ವನಿಯ ಸರಿಯಾದ ಏರಿಳಿತ, ತಡೆಗಳು ಮುಂತಾದುವನ್ನು ಕಲಿಯಬಹುದು. ಇದು ಆವರ ಭಾಷಕಲಿಕೆಯ ಪ್ರಯಾಣದ ಮುಖ್ಯಹಂತ. ಬಾಷಾತರಗತಿಗಳಿಗೆ ಬೇಕಾಗುವ ಸಾಮಗ್ರಿಗಳ ಪಟ್ಟಿಮಾಡಬೇಕು. ಅವನ್ನು ಎರಡು ಬಗೆಯವಾಗಿ ವಿಂಗಡಿಸಬಹುದು. ಲಿಖಿತ ಸಾಮಗ್ರಿಗಳು ಹಾಗೂ ಮೌಖಿಕ ಸಾಮಗ್ರಿಗಳು.
ಲಿಖಿತ ಸಾಮಗ್ರಿಗಳಲ್ಲಿ, ಪಠ್ಯಪುಸ್ತಕಗಳು, ಅಭ್ಯಾಸಪುಸ್ತಕಗಳು ಮುಖ್ಯವಾದವು. ಜೊತೆಗೆ, ಫಲಕಗಳು, ಪ್ರಕಟಣೆಗಳು, ಕವಿತೆಗಳು, ಹಾಡುಗಳು ಅಥವಾ ಕೇವಲ ಶಬ್ದಗಳು. ಇದರ ಹೊರತಾಗಿ, ಶಬ್ದಗಳು, ವರ್ಣಮಾಲೆ, ಶಬ್ದಚಿತ್ರಗಳು, ಹಾಗೂ ಇತರ ಚಿತ್ರಗಳು, ಪತ್ರಿಕೆಗಳು (ದಿನ, ವಾರ, ಮಾಸಪತ್ರಿಕೆಗಳು), ಕೂಡಾ ಉಪಯುಕ್ತ ಸಾಮಗ್ರಿಗಳಾಗಬಹುದು.

ಮೌಖಿಕ ಸಾಮಗ್ರಿಗಳಲ್ಲಿ ರೇಡಿಯೋ, ಟೇಪ್‌ರೆಕಾರ್ಡರ್, ಸಿಡಿ ಪ್ಲೇಯರ್, ಸಿನಿಮಾ ಪ್ರಾಜೆಕ್ಟರ್, ಮುಂತಾದವು ಬರುತ್ತವೆ. ಇದು, ಮಕ್ಕಳು ಪದ್ಯ, ನಾಟಕ ಮೊದಲಾದುವನ್ನು ಕೇಳುವ ಅವಕಾಶವನ್ನು ನೀಡುವುದಷ್ಟೇ ಅಲ್ಲ, ಆಂಗಿಕ ಹಾವಭಾವಗಳು ಹೇಗಿರಬೇಕು ಎಂಬುದನ್ನು, ಧ್ವನಿಯ ಏರಿಳಿತವನ್ನೂ ಕಲಿಸುತ್ತದೆ. ಕೇಳುವ, ಮಾತಾಡುವ ಹಾಗೂ ಸ್ಪಷ್ಟವಾಗಿ ಓದುವ ಸಾಮರ್ಥ್ಯವನ್ನು, ವಿಭಿನ್ನ ಅಭಿವ್ಯಕ್ತಿ ಶೈಲಿಗಳನ್ನು ಹೆಚ್ಚಿಸುತ್ತದೆ. ಇಲ್ಲಿ ಬಳಸಲಾಗುವ ಸಿಡಿ, ಕೆಸೆಟ್ಟು ಮುಂತಾದ ಮೌಖಿಕ ಸಾಮಗ್ರಿಗಳು ಒಳ್ಳೆಯ ಗುಣಮಟ್ಟದ್ದಾಗಿರಬೇಕು.

ಕೇವಲ ಸಾಮಗ್ರಿಯುದ್ದರಷ್ಟೇ ಸಾಲದು. ಕಂಪ್ಯೂಟರ್ ಅಥವಾ ಇಂಟರ್ನೆಟ್‌ಗಳು ಮಕ್ಕಳಿಗೆ ಲಭ್ಯವಿವೆ. ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದಷ್ಟೇ ಅಲ್ಲದೇ, ತರಗತಿಯಲ್ಲಿ ಭಿನ್ನ ಚಿತ್ರಗಳು, ದೃಶ್ಯಾವಳಿಗಳನ್ನು ಸಹ ನೋಡಬಹುದು. ದೃಕ್‌ಶ್ರವಣ ಸಾಮಗ್ರಿಗಳು ಭಾಷೆಯ ಕಲಿಕೆ, ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಪ್ರತಿಯೊಬ್ಬ ಶಿಕ್ಷಕನೂ ಕವಿತೆಗಳನ್ನು, ಪದ್ಯಗಳನ್ನು ಪರಿಣಾಮಕಾರಿಯಾಗಿ ಹಾಡುವುದಿಲ್ಲವಾದ್ದರಿಂದ ಮಕ್ಕಳಿಗೆ ಅವನ್ನು ಕೇಳಿಸುವ ಪೂರಕ ವ್ಯವಸ್ಥೆಗಳಾಗಬೇಕು. ಇದೆಲ್ಲವನ್ನು ಕಂಪ್ಯೂಟರ್ ಅಥವಾ ಇಂಟರ್ನೆಟ್ ಸೌಲಭ್ಯದ ಮೂಲಕ ಮಾಡಬಹುದು. ಸಮರ್ಪಕ ಆಕರಗಳನ್ನು, ಸಮರ್ಪಕವಾಗಿ ಬಳಸುವುದು ಹೇಗೆಂದು ಬಲ್ಲ ಶಿಕ್ಷಕ ಮೇಲೆ ವಿವರಿಸಿದ ಎಲ್ಲಕೆಲಸವನ್ನು ಮಾಡಬಲ್ಲ.

Notes

ಇನ್ನಿತರ ಅಂಶಗಳ ಬೆಳವಣಿಗೆಯಲ್ಲಿ ಭಾಷಾ ಬೋಧನೆಯ ತರಗತಿಯೂ ಮಹತ್ತರ ಪಾತ್ರವಹಿಸುತ್ತದೆ. ಸಾಮಗ್ರಿಗಳನ್ನು ಗುಂಪುಗಳಾಗಿ ವಿಂಗಡಿಸುವ ಮೊದಲು ಅವುಗಳ ವಿಶೇಷತೆಗಳನ್ನು ಅರಿತಿರಬೇಕು. ಚಟುವಟಿಕೆಗಳನ್ನು, ಪ್ರಯೋಗಗಳನ್ನು ಕೈಗೊಳ್ಳುವ ವಿಧಾನಗಳು, ಅವಲೋಕನಗಳ ವಿಶ್ಲೇಷಣೆ, ಸಾಮಾನ್ಯೀಕರಣದ ಬೆಳವಣಿಗೆ, ತರ್ಕಬದ್ಧ ಚರ್ಚೆಗಳನ್ನು ನಡೆಸುವುದು, ಇತ್ಯಾದಿಗಳು ಭಾಷಾಬೋಧನೆಯ ಮುಖ್ಯಭಾಗಗಳಾಗಿವೆ. ಇವುಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಬಗ್ಗೆ ಪ್ರತ್ಯೇಕವಾಗಿ ಅವು ಸೇರುವ ವಿಂಗಡಣೆಯಲ್ಲಿ ವಿವರಿಸಲಾಗುವುದು. ಇಲ್ಲಿ ವಿಜ್ಞಾನ, ಗಣಿತ, ಸಮಾಜ ಅಧ್ಯಯನ ಇವು ಸಹ ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಚಟುವಟಿಕೆಗಳಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಮಕ್ಕಳಿಗೆ ನೀಡಲಾದ ಸೂಚನೆಗಳು ಅವರು ಭಾಷೆಯನ್ನು ಉತ್ತಮವಾಗಿ ಕಲಿಯಲು ಸಹಾಯಕವಾಗಿವೆ.

ಪ್ರಗತಿಯ ಪರಿಶೀಲನೆ – 7

*1. ಇವುಗಳಲ್ಲಿ ಯಾವುದು ಮೌಖಿಕ ಸಾಮಗ್ರಿಯಲ್ಲ?*

*ಎ. ರೇಡಿಯೋ*

*ಬಿ. ಪಠ್ಯಪುಸ್ತಕಗಳು*

*ಸಿ. ಸಿಡಿ ಪ್ಲೇಯರ್*

*ಡಿ. ಸಿನಿಮಾ ಪ್ರಾಜೆಕ್ಟರ್*

*2. ಮೌಖಿಕ ಭಾಷಾ ಬೋಧನೆಯ ಸಾಮಗ್ರಿಯಾಗಿ ಯಾವುದನ್ನು ಬಳಸಲು ನೀವು ಇಚ್ಛಿಸುತ್ತೀರಿ ಮತ್ತು ಏಕೆ?*

..........................................................................................................

..........................................................................................................

..........................................................................................................

*3. ಗ್ರಂಥಾಲಯವನ್ನು ಭಾಷಾಬೋಧನೆಗಾಗಿ ಹೇಗೆ ಬಳಸಿಕೊಳ್ಳುವಿರಿ?*

..........................................................................................................

..........................................................................................................

..........................................................................................................

*4. ಭಾಷಾಬೋಧನೆಗಾಗಿ ಉತ್ತಮ ಸಾಮಗ್ರಿಯ ಕುರಿತು ಯೋಚಿಸುವಾಗ ಏನನ್ನೆಲ್ಲವನ್ನು ಗಮನದಲ್ಲಿರಿಸಿಕೊಳ್ಳಬೇಕು?*

..........................................................................................................

..........................................................................................................

..........................................................................................................

Notes

## 9.12 ಸಾಮಗ್ರಿಗಳ ಲಭ್ಯತೆ

ನಮ್ಮ ಸುತ್ತ ಮುತ್ತ ನೈಸರ್ಗಿಕವಾಗಿ ಸಿಗುವ ಸಾಕಷ್ಟು ಸಾಮಗ್ರಿಗಳಿವೆ. ಅಷ್ಟಾಗಿಯೂ ದೊರೆಯದ ಕೆಲವನ್ನು ನಾವು ಪಡೆದುಕೊಳ್ಳಬೇಕಾಗಬಹುದು, ಕೆಲವನ್ನು ಖರೀದಿಸಬೇಕಾಗಬಹುದು. ಹತ್ತಿರದ ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗಬಹುದಾದ ವಸ್ತುಗಳನ್ನು ಪ್ರಶಿಕ್ಷಣಕ್ಕಾಗಿ ಬಳಸಿಕೊಳ್ಳುವುದು ಮುಖ್ಯ. ಕೆಲವು ಸಲಕರಣೆಗಳನ್ನು ಹಲವಾರು ಶಾಲೆಗಳಿಗಾಗಿ ಒಟ್ಟಾಗಿ ಖರೀದಿಸಿ, ನಂತರ ವಿತರಿಸಬಹುದು. ಶಿಕ್ಷಕರು ಸಾಮಗ್ರಿಖರೀದಿಸಬೇಕಾಗಿದ್ದರೆ ಅವರಿಗೆ ಹಣಕಾಸನ್ನು ಒಳಗೊಂಡು ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನೂ ಒದಗಿಸಿ ಕೊಡಬೇಕು. ಇದಕ್ಕಾಗಿ ಅಚ್ಚುಕಟ್ಟಾದ ಒಂದು ವ್ಯವಸ್ಥೆಯು ರೂಪುಗೊಳ್ಳಬೇಕು.

ಕಳೆದೆರಡು ದಶಕಗಳಲ್ಲಿ ಸಾಮಗ್ರಿಗಳನ್ನು ಶಾಲೆಗಳಿಗೆ ಒದಗಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ. ಹಲವಾರು ಪ್ರಯತ್ನಗಳ ನಂತರ, ಶಾಲೆ ಮತ್ತು ಎಲಿಮೆಂಟರಿ ಶಿಕ್ಷಕರ ಬಳಿ ಸಲಕರಣೆಗಳಿಗಾಗಿ ಹಣವಿರುವಂತೆ ನೋಡಿಕೊಳ್ಳುವುದು ಸಾಧ್ಯವಾಗಿದೆ. ಇಲ್ಲಿನ ಮುಖ್ಯ ಧ್ಯೇಯವೆಂದರೆ ಶಿಕ್ಷಕರು ಅಗತ್ಯಕ್ಕೆ ತಕ್ಕಂತೆ ಸಾಮಗ್ರಿಗಳನ್ನು ಕೊಳ್ಳುವುದು ಮತ್ತು ಅವುಗಳನ್ನು ಉಪಯೋಗಿಸುವುದು. ಹೆಚ್ಚು ಹೆಚ್ಚು ಸಲಕರಣೆಗಳ ಉಪಯೋಗವನ್ನು ಪ್ರೋತ್ಸಾಹಿಸಲು ಲೆಖ್ಖ ಪತ್ರದ ವ್ಯವಸ್ಥೆಯನ್ನು ಸರಳೀಕರಿಸಲಾಗಿದೆ. ಎಷ್ಟೋಕಡೆ ಶಾಲೆ ಮತ್ತು ಶಿಕ್ಷಕರ ಮೇಲೆ ಈ ಹಣವನ್ನು ಸರಿಯಾಗಿ ಬಳಸಿಕೊಳ್ಳಬೇಕೆಂಬ ಒತ್ತಡವಿದೆ. ಅದಾಗ್ಯೂ, ಶಿಕ್ಷಕರಉ ಅಗತ್ಯವಾದ ಸಲಕರಣೆಗಳನ್ನು ಖರೀದಿಸಿದರೂ ಅವು ಪಾಠ ಮಾಡುವಾಗ ಸರಿಯಾಗಿ ಬಳಸಲ್ಪಡುತ್ತವೆಂಬ ಯಾವುದೇ ಖಾತ್ರಿ ಇಲ್ಲ . ಇದಕ್ಕಾಗಿ ಪರಿಣಾಮಕಾರಿಯಾದ ಪ್ರಯತ್ನದ ಅಗತ್ಯವಿದೆ. ಸಾಮಾನ್ಯವಾಗಿ ಶಾಲೆ ಮತ್ತು ಶಿಕ್ಷಕರು ಈ ಸೌಲಭ್ಯಗಳನ್ನು ಬಳಸಿಕೊಂಡು ಪ್ರದರ್ಶಿಸಬಹುದಾದ ವಸ್ತುಗಳನ್ನು ಕೊಳ್ಳಬಹುದು ಇಲ್ಲವೇ ಆ ವಸ್ತುಗಳಿಗೆ ಅಗತ್ಯವಾದ ಮೂಲ ಸಾಮಗ್ರಿಗಳನ್ನು ಖರೀದಿಸಬಹುದು. ಶಿಕ್ಷರು ಮತ್ತು ಮುಖ್ಯೋಪಾದ್ಯರು ಖರೀದಿಸಿದ ವಸ್ತುಗಳನ್ನು ಶಾಲೆಯಲ್ಲಿಡಲು ಹಿಂಜರಿಯುತ್ತಾರೆಂಬ ಭಾವನೆ ಇದೆ. ಅಗತ್ಯವಿರುವ ಸಲಕರಣೆಗಳನ್ನು ಕೊಳ್ಳಬೇಕೆಂದಿರುವ ಶಿಕ್ಷಕರಿಗೆ ಹಲವುಬಾರಿ ಸೌಲಭ್ಯಗಳು ಒದಗುವುದಿಲ್ಲ. ವೈವಿಧ್ಯಮಯವಾದ ವಸ್ತುಗಳು ಸಿಗುವ ಸ್ಥಳಗಳ ಕೊರತೆ ಇದೆ. ಮಕ್ಕಳಲ್ಲಿ ಆಸಕ್ತಿಯನ್ನು ಹುಟ್ಟುಹಾಕಲು ಬೇಕಾದ ಚಾರ್ಟು ಮತ್ತು ಧ್ವನಿಮುದ್ರಿಕೆಗಳು ಸಮೀಪದ ಮಾರುಕಟ್ಟಗಳಲ್ಲಿ ಎಷ್ಟೋ ಬಾರಿ ಲಭ್ಯವಿರುವುದಿಲ್ಲ.

ಎಲ್ಲ ಜಿಲ್ಲೆಗಳಲ್ಲೂ ಕೆಲ ಶಾಲೆಗಳನ್ನು ಆಯ್ಕೆ ಮಾಡಿ, ಅಲ್ಲಿ ಆಕರ್ಷಕವಾದ ಸಲಕರಣೆಗಳನ್ನು ಜೋಡಿಸಿ ಕೆಲವು ಕೊಠಡಿಗಳನ್ನು ಸಿದ್ಧಪಡಿಸಿ ಅವು ಮಕ್ಕಳಿಗೆ ಸದಾ ತೆರೆದಿರುವಂತೆ ಮಾಡಲು, ಸಧ್ಯ ಎಲ್ಲ ರಾಜ್ಯ ಶಿಕ್ಷಣ ಮಂಡಳಿಗಳು ಆಲೋಚಿಸುತ್ತಿವೆ. ಈ ಆಲೋಚನೆಯ ಹಿಂದಿನ ಸಾಧಕ ಬಾಧಕಗಳನ್ನು ಕುರಿತು ಇನ್ನಷ್ಟೇ ಆಲೋಚಿಸಬೇಕಿದೆ. ಇಂತಹ ಕೊಠಡಿಗಳ ಗುರಿ ಮತ್ತು ಉಪಯೋಗಗಳ ಬಗ್ಗೆ ಆಲೋಚಿಸಬೇಕಿದೆ. ಈಗಿನ ಪರಿಸ್ಥಿತಿಯಲ್ಲಿ ಶಾಲೆ ಮತ್ತು ಶಿಕ್ಷಣದ ಮೇಲೆ ಇಂತಹ ಕೊಠಡಿಗಳ ಉಂಟುಮಾಡಬಹುದಾದ ಪರಿಣಾಮಗಳ ಬಗ್ಗೆಯೂ ಮರೆಯುವ ಹಾಗಿಲ್ಲ.

ಅಂದಾಜು ತಗುಲಬಹುದಾದ ವೆಚ್ಚದೊಂದಿಗೆ ಇಂತಹ ಕೊಠಡಿಗಳನ್ನು ಅಧಿಕ ಸಂಖ್ಯೆಯ ಶಾಲೆಗಳಿಗೆ ಒದಗಿಸಿಕೊಡಬಹುದೇ ಎಂಬುದನ್ನು ಪರಿಗಣಿಸಬೇಕಿದೆ. ಕೊಠಡಿಯ ವೆಚ್ಚ ಮತ್ತು ಶಾಲೆಯ ಮಕ್ಕಳ ಅನುಪಾತವನ್ನು ತೂಗಿ ನೋಡಬೇಕು. ಇಲ್ಲಿ ಮಕ್ಕಳು ವಸ್ತುಗಳನ್ನು ಬಳಸಲು ಅವಕಾಶ ಕೊಡಬೇಕೇ ಅಥವಾ ಬರೀ ನೋಡುವ ಅವಕಾಶವಿದ್ದರೆ ಸಾಕೇ ಎಂಬ ಪ್ರಶ್ನೆಯೂ ಇದೆ. ಮಕ್ಕಳು ವಸ್ತುಗಳನ್ನು ಬಳಸಲಾಗದು ಎಂದಾದರೆ ಬಹಳ ಕೊಠಡಿಗಳನ್ನು ನಿರ್ಮಿಸಲು ಸಾಧ್ಯವಿಲ್ಲ, ಹಾಗೆಯೇ ಈ ಕೊಠಡಿಯಿಂದಾಗಿ ಪ್ರತೀ ಮಗುವಿಗೆ ತಗಲುವ ವೆಚ್ಚ ಹೆಚ್ಚಾದರೂ ಈ ಮಾರ್ಗವು ಅಷ್ಟೇನೂ ಉಪಯೋಗವಾಗಲಾರದು.

Notes

**ಪ್ರಗತಿಯ ಪರಿಶೀಲನೆ – 8**

1. *ಈ ಕೆಳಗಿನವುಗಳಲ್ಲಿ ಸಾಮಗ್ರಿಗಳ ಆಯ್ಕೆಗೆ ಯಾವುದು ಸರಿಯಾದ ಮಾರ್ಗವಲ್ಲ*
   *ಎ. ಸಾಮಗ್ರಿದುಬಾರಿಯದ್ದಾಗಿರಬೇಕು*

   *ಬಿ. ಹತ್ತಿರದ ಮಾರುಕಟ್ಟೆಯಲ್ಲಿ ಸಿಗುವಂಥದ್ದಾಗಿರಬೇಕು*

   *ಸಿ. ಸಾಮಗ್ರಿ ದುಬಾರಿಯದ್ದಾಗಿರಬಾರದು*

   *ಡಿ. ಸಾಮಗ್ರಿಯನ್ನು ಕೊಂಡು ಶಾಲೆಗಳಿಗೆ ವಿತರಿಸುವ ಹಾಗಿರಬೇಕು.*

2. *ಸಾಮಗ್ರಿಯ ಅಲಭ್ಯತೆಯ ಸಮಸ್ಯೆ ಎದುರಾದಾಗ ಹೇಗೆ ನಿಭಾಯಿಸುತ್ತಿರಿ?*

   ................................................................................................................................

   ................................................................................................................................

   ................................................................................................................................

3. *ಭಾಷೆಯನ್ನು ಕಲಿಸುವುದಕ್ಕಾಗಿ ಸಲಕರಣೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯಾವ ತಯಾರಿ ಮಾಡಿಕೊಳ್ಳುವಿರಿ?*

   ................................................................................................................................

   ................................................................................................................................

   ................................................................................................................................

4. *ನಿಮ್ಮ ತರಗತಿಗಾಗಿ ಸಲಕರಣೆಗಳನ್ನು ಆಯ್ಕೆ ಮಾಡುವಾಗ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವಿರಿ?*

   ................................................................................................................................

   ................................................................................................................................

   ................................................................................................................................

## 9.13 ಸಾಮಗ್ರಿಗಳನ್ನು ಉಪಯೋಗಿಸುವುದು ಹೇಗೆ?

ಸಾಮಗ್ರಿಗಳು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವ ಬಗ್ಗೆ ನಾವು ಈಗಾಗಲೇ ಓದಿದ ವಿಷಯಗಳನ್ನು ಮತ್ತೊಮ್ಮೆ ಮೆಲುಕು ಹಾಕುವುದು ಸೂಕ್ತ. ಈ ಮಾರ್ಗಗಳು ಸಾಮಗ್ರಿಗಳ ಸರಿಯಾದ ಉಪಯೋಗ ಮಾಡುವಲ್ಲಿ ಶಿಕ್ಷಕರಿಗೆ ಸಹಾಯ ಮಾಡಬಹುದು.

1. ಸಾಮಗ್ರಿಗಳ ಉಪಯೋಗ ಮಾಡುವಾಗಲೂ ಕಡ್ಡಾಯವಾಗಿ ಪೂರ್ವ ತಯಾರಿ ಮಾಡಿರಬೇಕು. ಶಿಕ್ಷಕರು ಸರಿಯಾದ ಸಾಮಗ್ರಿಯನ್ನು ಆರಿಸಿಕೊಂಡು ಪಾಠ ಆರಂಭ ಮಾಡುವವರೆಗೆ ಮಕ್ಕಳ ಏಕಾಗ್ರತೆಯನ್ನು ಹಿಡಿದಿಡುವುದು ಕಷ್ಟ, ಇದರಿಂದಾಗಿ ಕಲಿಕೆಯಲ್ಲಿನ ಆಸಕ್ತಿಯು ಕಡಿಮೆಯಾಗಬಹುದು.

Notes

2. ಸಾಮಗ್ರಿಗಳು ತಮ್ಮಷ್ಟಕ್ಕೆ ಏನನ್ನೂ ಕಲಿಸಲಾರವು. ಅಗತ್ಯವಿರುವ, ಮಕ್ಕಳಲ್ಲಿ ಆಸಕ್ತಿ ಹುಟ್ಟಿಸಬಹುದಾದ ಸಾಮಗ್ರಿಗಳ ಆಯ್ಕೆ ಮತ್ತು ಉಪಯೋಗವನ್ನು, ಮಕ್ಕಳ ಆಸಕ್ತಿ ಮತ್ತು ಶಿಕ್ಷಕರೇ ಪರಿಣಾಮಕಾರಿಯಾಗಿ ಮಾಡಬೇಕು. ಕಲಿಕಾ ಸಾಮಗ್ರಿಗಳು ಬೋಧನೆಯಲ್ಲಿ ಸಹಾಯ ಮಾಡಬಹುದೇ ಹೊರತು ಬೋಧಿಸಲಾರವು ಎಂಬುದನ್ನು ಸದಾ ನೆನಪಿಡಬೇಕು.

3. ಹೆಚ್ಚು ಸಾಮಗ್ರಿಗಳ ಉಪಯೋಗ ಮಾಡಬೇಕಾಗಿ ಬಂದಾಗ, ಒಂದಕ್ಕೊಂದು ಸಂಬಂಧವಿರುವ ಅಥವಾ ಒಂದರ ಮೇಲೆ ಮತ್ತೊಂದರ ಪರಿಣಾಮಗಳನ್ನು ತಿಳಿಸುವ ಸಾಮಗ್ರಿಗಳನ್ನು ಒಂದರ ನಂತರ ಮತ್ತೊಂದು ತೋರಿಸುವುದು ಒಳಿತು.

4. ಸಾಮಗ್ರಿಗಳನ್ನು ಅದ ಜೋಪಾನವಾಗಿಡುವಷ್ಟೇ ಮುಖ್ಯ ಅವುಗಳನ್ನು ಸರಿಯಾದ ಸಮಯಕ್ಕೆ ಮಕ್ಕಳಿಗೆ ಹಂಚಿ ಪಾಠದ ನಂತರ ಹಿಂತಿರುಗಿ ಪಡೆದುಕೊಳ್ಳುವುದು. ಮಕ್ಕಳು ಸಾಮಗ್ರಿಗಳನ್ನು ಪಡೆದು ಹಿಂತಿರುಗಿಸಬೇಕಿದ್ದರೆ ಪಡೆದುಕೊಂಡ ಸರದಿಯಲ್ಲೇ ಹಿಂತಿರುಗಿಸುವಂತೆ ಹೇಳಬೇಕು ಮತ್ತು ಅವರನ್ನೂ ಇದರಲ್ಲಿ ಪಾಲುದಾರರನ್ನಾಗಿಸಬೇಕು. ಹೀಗೆ ಮಾಡುವುದರಿಂದ ಸಮಯವೂ ಉಳಿಯುತ್ತದೆ.

5. ವಸ್ತುಗಳನ್ನು ಬಳಸುವಾಗ ಒಡೆಯುವಿಕೆಯ ಸಾಧ್ಯತೆಯಿರುತ್ತದೆ. ಈ ರೀತಿಯ ಹಾನಿಗಳನ್ನು ಸ್ವೀಕಾರ ಮಾಡುವುದು ತುಂಬಾ ಅವಶ್ಯಕ ಮತ್ತು ಅಂಥಹ ವಸ್ತುಗಳನ್ನು ಬದಲಿಸುವುದು ವ್ಯವಸ್ಥೆಯಲ್ಲಿ ಸರ್ವೆಸಾಮಾನ್ಯ ಸಂಗತಿ. ಮಕ್ಕಳು ಪುಸ್ತಕಗಳನ್ನು ಓದಿದಾಗ, ಚಾರ್ಟ್‌ಗಳನ್ನು ಬಳಸಿದಾಗ, ಸೀಮೆಸುಣ್ಣದಿಂದ ಬರೆದಾಗ ಈ ವಸ್ತುಗಳು ಹರಿಯುವುದು, ಒಡೆಯುವುದು, ಬಳಕೆಯಾಗುವುದನ್ನು ನಾವು ನೋಡುತ್ತೇವೆ. ವಸ್ತುಗಳ ಬಳಕೆಗೆ ಪ್ರೇರೇಪಣೆ ನೀಡಿದಂತಾಗುವುದಿಲ್ಲ.

ಪ್ರಗತಿಯ ಪರಿಶೀಲನೆ – 9

*1. ಮಕ್ಕಳು ಸಾಮಗ್ರಿಗಳನ್ನು ಬಳಸುವಾಗ ಕೆಳಗಿನವುಗಳಲ್ಲಿ ಯಾವುದೂ ಸಾಧ್ಯವಿಲ್ಲ.*

*ಎ. ಸಾಮಗ್ರಿಗಳು ಮುರಿಯಬಹುದು*

*ಬಿ. ಮಕ್ಕಳು ಸಾಮಗ್ರಿಯನ್ನು ತಿನ್ನಬಹುದು*

*ಸಿ. ಸಾಮಗ್ರಿಯ ಬೆಲೆ ಕಡಿಮೆಯಾಗಬಹುದು*

*ಡಿ. ಅದು ಇದ್ದಂತೆಯೇ ಇರುತ್ತದೆ*

*2. ಸಾಮಗ್ರಿಗಳನ್ನು ಉಪಯೋಗಿಸುವಾಗ ಯಾವ ವ್ಯವಸ್ಥೆಯನ್ನು ಅನುಸರಿಸಬೇಕು.*

..........................................................................................................

..........................................................................................................

..........................................................................................................

Notes

*3. ತರಗತಿಯಲ್ಲಿ ಸಾಮಗ್ರಿಗಳನ್ನು ಸರಿಯಾಗಿ ಜೋಡಿಸಿಡುವುದು ಏಕೆ ಮುಖ್ಯ?*

........................................................................................................

........................................................................................................

........................................................................................................

## 9.14 ಸಾಮಗ್ರಿಗಳನ್ನು ಆಯ್ಕೆ ಮಾಡುವುದು ಹೇಗೆ?

1. ಪ್ರತೀ ಶಿಕ್ಷಕನೂ ತಾನು ಯಾವ ಸಾಮಗ್ರಿ ಖರೀದಿಸಬೇಕು ಮತ್ತು ಯಾವುದಕ್ಕೆ ಒತ್ತು ನೀಡಬೇಕೆಂದು ವಿಚಾರ ಮಾಡಬೇಕು. ಸಾಮಗ್ರಿಗಳ ಆಯ್ಕೆಯಲ್ಲಿ ಕೆಲ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳುವುದು ಒಳಿತು.

2. ಸಾಮಗ್ರಿಯು ಶೈಕ್ಷಣಿಕ ಅಗತ್ಯವನ್ನು ಪೂರೈಸುವಂತಿರಬೇಕು. ಯಾವ ವಿಷಯವನ್ನು ಬೋಧಿಸಲು ಸಾಮಗ್ರಿಯನ್ನು ಆಯ್ದುಕೊಳ್ಳಲಾಗಿದೆಯೋ ಆ ವಿಷಯವನ್ನು ಸಶಕ್ತವಾಗಿ ಬೋಧಿಸುವಂತಿರಬೇಕು. ಉದಾಹರಣೆಗೆ ಮಕ್ಕಳಲ್ಲಿ ಕಲ್ಪನಾ ಸಾಮರ್ಥ್ಯವನ್ನು ಹೆಚ್ಚಿಸಿ ಅದನ್ನು ಅಚ್ಚುಕಟ್ಟಾಗಿ ವ್ಯಕ್ತಪಡಿಸುವಂತೆ ಮಾಡುವುದು ಗುರಿಯಾಗಿದ್ದರೆ ಶಿಕ್ಷಕರು ತಕ್ಕುದಾದ ಚಿತ್ರವೊಂದನ್ನು ಆಯ್ಕೆ ಮಾಡಿಕೊಳ್ಳಬೇಕು.

3. ಸಾಮಗ್ರಿಯನ್ನು ಬೇರೆ ಬೇರೆ ಅಗತ್ಯಗಳಿಗಾಗಿ ಬಳಸುವಂತಿರಬೇಕು. ಈ ನಿಟ್ಟಿನಲ್ಲಿ ಶಿಕ್ಷಕರನ್ನು ತರಬೇತುಗೊಳಿಸಬೇಕು.

4. ಸಾಮಗ್ರಿಯು ಅಗತ್ಯವಿರುವ ಸಂಖ್ಯೆಯಲ್ಲಿ ಸುಲಭವಾಗಿ ಲಭ್ಯವಿರಬೇಕು ಮತ್ತು ದುಬಾರಿ ಬೆಲೆಯದ್ದಾಗಿರಬಾರದು. ಸುಲಭವಾಗಿ ಮುರಿಯುವ ಥರ್ಮಾಕಾಲ್ ಸಾಮಗ್ರಿಗಳಂಥವು ಒಳ್ಳೆ ಆಯ್ಕೆಗಳಾಗಲಾರವು.

   ಬಳಸಿದಾಗ ಮಕ್ಕಳಿಗೆ ಯಾವುದೇ ಅಪಾಯವಾಗುವಂತಿರಬಾರದು.

5. ಸಾಮಗ್ರಿಗಳನ್ನು ಆಯ್ಕೆ ಮಾಡುವುದರಲ್ಲಿ ಮತ್ತು ಅದರಿಂದ ಸಲಕರಣೆಗಳನ್ನು ತಯಾರಿಸುವಲ್ಲಿ ಶಿಕ್ಷಕರು ಮತ್ತು ಮಕ್ಕಳು ಇಬ್ಬರೂ ಪಾಲ್ಗೊಳ್ಳಬೇಕು. ಸಾಮಗ್ರಿಗಳನ್ನು ಮೊದಲೇ ಆಯ್ಕೆ ಮಾಡಿ ಶಾಲೆಗೆ ಕಳುಹಿಸಬಾರದು.

6. ಸಾಮಗ್ರಿಗಳನ್ನು ತರಗತಿಯಲ್ಲಿ ಬಳಸಿಕೊಳ್ಳುವ ಬಗ್ಗೆ ಮಕ್ಕಳು ವಿಚಾರ ಮಾಡಲು ಅವಕಾಶವಿರಬೇಕು.

ನಮ್ಮ ಶೈಕ್ಷಣಿಕ ಪದ್ಧತಿಯಲ್ಲಿ ಸಾಮಗ್ರಿಗಳನ್ನು ಆಯ್ಕೆ ಮಾಡುವುದರಲ್ಲಿ, ಅವುಗಳಿಂದ ಸಲಕರಣೆಗಳ ತಯಾರಿಕೆಯ ವಿಧಾನದಲ್ಲಿ ಅಥವಾ ಸಂಬಧಿಸಿದ ಯಾವುದೇ ಕಾರ್ಯದಲ್ಲಿ ಶಿಕ್ಷಕರ ಮತ್ತು ಮಕ್ಕಳ ಪಾತ್ರವಿಲ್ಲ. ಬೋಧನೆಯಲ್ಲಿ ಸಾಮಗ್ರಿಗಳ ಬಳಕೆಯ ಅನುಭವ ಉಳ್ಳ ಶಿಕ್ಷಕರ ಸಲಹೆಯು ಈ ನಿಟ್ಟಿನಲ್ಲಿ ಉಪಯುಕ್ತ. ಆದರೆ ಶಿಕ್ಷಕರನ್ನು ಈ ವಿಷಯದಲ್ಲಿ ನಂಬುವ ಹಾಗಿಲ್ಲವೆಂಬ ಸಾರ್ವತ್ರಿಕ ಅಭಿಪ್ರಾಯವಿದೆ. ಹಾಗಾಗಿ ಕೇಂದ್ರದ ವ್ಯವಸ್ಥೆಯಡಿಯಲ್ಲಿಯೇ ಸಾಮಗ್ರಿಗಳು ವಿತರಿಸಲ್ಪಡುತ್ತಿವೆ. ಇದರಿಂದಾಗಿ ಕೆಲವು ಸಮಸ್ಯೆಗಳಾಗಿದ್ದರೂ ಯಾವುದೇ ಬದಲಾವಣೆಯಾಗಿಲ್ಲ.

Notes

**ಪ್ರಗತಿಯ ಪರಿಶೀಲನೆ – 10**

*1. ಸಾಮಗ್ರಿಗಳ ಆಯ್ಕೆಯಲ್ಲಿ ಎಷ್ಟು ಅಂಶಗಳನ್ನು ಗಮನಿಸಬೇಕು ?*
*ಎ. 2 ಬಿ. 4 ಸಿ. 5 ಡಿ. 8*
*ಇವುಗಳಲ್ಲಿ ಯಾವುದು ಮುಖ್ಯ ಮತ್ತು ಏಕೆ?*

*2. ಸಾಮಗ್ರಿಗಳ ಆಯ್ಕೆಯಲ್ಲಿ ಶಿಕ್ಷಕರ ಭಾಗವಹಿಸುವಿಕೆ ಏಕೆ ಮುಖ್ಯವಾಗುತ್ತದೆ?*

..........................................................................................................................

..........................................................................................................................

..........................................................................................................................

*3. ಸಾಮಗ್ರಿಗಳನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಎರಡು ಮುಖ್ಯ ಅಂಶಗಳು ಯಾವುವು?*

..........................................................................................................................

..........................................................................................................................

..........................................................................................................................

## 9.15 ಸಮಗ್ರವಾಗಿ ಹೇಳುವುದಾದರೆ

ಉತ್ತಮ ಕಲಿಕೆಗಾಗಿ ಶಾಲೆಯಲ್ಲಿ ಕೆಲವು ಸಾಮಗ್ರಿಗಳಿರುವುದು ಅಗತ್ಯ. ಅವು ಯಾವುವೆಂದರೆ ಚಾಪೆ, ಬೆಂಚು, ಕುರ್ಚಿ, ಶೌಚಾಲಯ, ಶುದ್ಧ ಕುಡಿಯುವ ನೀರು. ಇವುಗಳನ್ನು ಮೂಲಭೂತ ಅಗತ್ಯಗಳೆನ್ನಬಹುದು. ಇವುಗಳಲ್ಲದೆ ಬೋಧನೆಗೆ ಬೇಕಾದ ಇತರ ಸಾಮಗ್ರಿಗಳನ್ನು ಕಲಿಕಾ ಸಮಾಗ್ರಿಗಳೆನ್ನಬಹುದು. ಅವು ಯಾವುವೆಂದರೆ ಚಿತ್ರಗಳು, ಮಾದರಿಗಳು, ಭಾಷಾ ಕಾರ್ಡುಗಳು ಮುಂತಾದವು. ಇವು ಕಲಿಕೆಯಲ್ಲಿ ಸಹಾಯ ಮಾಡಬಹುದಾದ ವಸ್ತುಗಳು. ಆದ್ದರಿಂದಲೇ ಇವುಗಳನ್ನು ಬೋಧನೆ ಮತ್ತು ಕಲಿಕಾ ಸಾಮಗ್ರಿಗಳೆನ್ನಲಾಗುತ್ತದೆ. ಇವು ಮಕ್ಕಳನ್ನು ತಲುಪಬೇಕೆಂಬುದು ಧ್ಯೇಯ. ಮಕ್ಕಳು ಇವನ್ನು ಸ್ಪರ್ಶಿಸಿ ಹೆಚ್ಚು ತಿಳಿಯುವಂತಾಗಬೇಕು. ಒಳ್ಳೆಯ ಸಾಮಗ್ರಿಗಳಿಂದ ಮಕ್ಕಳು ಹೆಚ್ಚು ತಿಳಿಯುತ್ತಾರೆ. ಆದರೆ ಎಲ್ಲ ವಿಷಯಗಳಿಗೂ ಸಾಮಗ್ರಿಗಳಿರಲೇ ಬೇಕೆಂಬ ನಿಯಮವಿಲ್ಲ. ಒಂದೇ ಸಾಮಗ್ರಿಯನ್ನು ಬೇರೆ ಬೇರೆ ವಿಷಯಗಳಿಗೆ ಬಳಸುವಂತಿರಬೇಕು. ಭಾಷಾ ಕಲಿಕೆಯಲ್ಲಿ ಸಾಮಗ್ರಿಗಳ ಬಳಕೆಯಿಂದ ಮಕ್ಕಳು ಭಾಷೆಯ ಸರಿಯಾದ ಬಳಕೆಯನ್ನು ತಿಳಿಯುವಂತಿರಬೇಕು. ಇದಲ್ಲದೇ ಸಾಮಗ್ರಿಗಳ ಆಯ್ಕೆ ಮತ್ತು ಸಲಕರಣೆಗಳ ತಯಾರಿಯಲ್ಲಿ ಶಿಕ್ಷಕರು ಮತ್ತು ಮಕ್ಕಳು ಭಾಗವಹಿಸುವಂತಾಗಬೇಕು.

Notes

## 9.16 ಹೆಚ್ಚಿನ ಓದಿಗಾಗಿ ಮತ್ತು ಆಕರಗ್ರಂಥಗಳು

Dewan, H.K. 2008. TLM vs. Teaching Aids. Buniyadi Shiksha 18: 7-11. (Published by Vidya Bhawan Society and Azim Premji University)

http://jtmadhavan.wordpress.com/2010/07/08/teaching-learning-materialsenglish/

http://www.teachercreated.com/books/language-arts

## 9.17 ಘಟಕದ ಕೊನೆಯ ಚಟುವಟಿಕೆಗಳು

1. ಮೂಲಭೂತ ಸೌಕರ್ಯಗಳು ಮತ್ತು ಕಲಿಕಾ ಸಾಮಗ್ರಿಗಳ ವ್ಯತ್ಯಾಸವನ್ನು ಉದಾಹರಣೆಗಳೊಂದಿಗೆ ತಿಳಿಸಿ.
2. ಕಲಿಕಾ ಸಾಮಗ್ರಿಗಳ ಬಗೆಗಿನ ಹೊಸ ಆಲೋಚನೆ ಏನು?
3. ಕಲಿಕಾ ಸಾಮಾಗಿರಬೇಕಾದ ಮೂಲ ಗುಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
4. ಸಾಮಗ್ರಿಗಳ ಆಯ್ಕೆಯಲ್ಲಿ ಗಮನಿಸಬೇಕಾದ ಅಂಶಗಳು ಯಾವುವು?
5. ಸಾಮಗ್ರಿಗಳನ್ನು ಬಳಸುವಾಗ ಗಮನಿಸಬೇಕಾದ ಅಂಶಗಳು ಯಾವುವು?
6. ಸಾಮಗ್ರಿಗಳನ್ನು ಮುರಿಯಲೂ ಅವಕಾಶವಿರಬೇಕು ಎಂಬ ಮಾತಿನ ಅರ್ಥವೇನು?

# ಘಟಕ 10 ಮೌಲ್ಯಮಾಪನ

Notes

## ವಿನ್ಯಾಸ

*10.0 ಪ್ರಸ್ತಾವನೆ*

*10.1 ಕಲಿಯಬೇಕಾದ ವಿಷಯಗಳು*

*10.2 ಮೌಲ್ಯಮಾಪನದ ಈಗಿನ ವಿಧಾನಗಳು*

*10.3 ಮೌಲ್ಯಮಾಪನ ಏಕೆ ಬೇಕು*

*10.4 ಭಾಷೆಯಲ್ಲಿ ಮೌಲ್ಯಮಾಪನದ ಅಂಶಗಳು*

*10.4.1 ಆಲಿಸುವುದು ಮತ್ತು ಮಾತಾಡುವುದು*

*10.4.2 ಬರೆಯುವುದು*

*10.4.3 ವ್ಯಕ್ತಪಡಿಸುವುದು*

*10.5 ಭಾಷೆಯಲ್ಲಿ ಮೌಲ್ಯಮಾಪನದ ಅಂಶಗಳು*

*10.5.1 ಮೌಖಿಕ ಪರೀಕ್ಷೆ*

*10.5.2 ಅವಲೋಕನ*

*10.5.3 ಲಿಖಿತ ಪರೀಕ್ಷೆ*

*10.6 ಗದ್ಯ, ಪದ್ಯ ಮತ್ತು ನಾಟಕ – ಚಟುವಟಿಕೆಗಳ ಮೌಲ್ಯಮಾಪನ*

*10.6.1 ಕಾವ್ಯ*

*10.6.2 ಗದ್ಯ*

*10.6.3 ನಾಟಕ*

*10.7 ಸಾರಾಂಶ*

*10.8 ಪೂರಕ ಓದು ಹಾಗೂ ಆಕರ ಗ್ರಂಥಗಳು*

*10.9 ಘಟಕದ ಕೊನೆಯ ಹಂತದ ಚಟುವಟಿಕೆಗಳು*

# 10.0 ಪ್ರಸ್ತಾವನೆ

ಈ ಘಟಕದಲ್ಲಿ ನಾವು ಭಾಷಾ ತರಗತಿಯಲ್ಲಿ ಮೌಲ್ಯಮಾಪನವನ್ನು ಹೇಗೆ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ತಿಳಿದುಕೊಳ್ಳಲಿದ್ದೇವೆ. ಮೌಲ್ಯಮಾಪನವೆಂದರೆ ಏನು? ಅದರಲ್ಲಿ ಅಡಕವಾಗಿರುವ ಅಂಶಗಳೇನು? ತರಗತಿಯಲ್ಲಿ ಭಾಷಾ ಕಲಿಕೆಯ ವಿಷಯವಾಗಿ ಯಾವುದರ ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ? ಪ್ರಸ್ತುತ ಪದ್ಧತಿಯಲ್ಲಿರುವ ಮೌಲ್ಯಮಾಪನದ ವಿಧಾನಗಳನ್ನೂ ನಾವು ಗಮನಿಸಲಿದ್ದೇವೆ. ಅವು ಮೌಲ್ಯಮಾಪನದ ಗುರಿಗಳನ್ನು ಪೂರೈಸುವುದರಲ್ಲಿ ಯಶಸ್ಸು ಸಾಧಿಸಿವೆಯೇ ಎಂಬುದನ್ನು ತಿಳಿದುಕೊಳ್ಳುವುದು ಕೂಡಾ ಈ ಘಟಕದ ಉದ್ದೇಶಗಳಲ್ಲಿ ಒಂದು. ವಿದ್ಯಾರ್ಥಿಯು ಕಲಿಕೆಯೆಡೆಗೆ ವಿಮುಖನಾಗದಂತೆ ರೂಪಿತಗೊಂಡಿರುವ ಮೌಲ್ಯಮಾಪನದ ಕೆಲವು ಪರ್ಯಾಯ ವಿಧಾನಗಳನ್ನೂ

Notes

ನಾವು ಇಲ್ಲಿ ಕಲಿಯಲಿದ್ದೇವೆ. ಮೌಲ್ಯಮಾಪನ ಕ್ರಿಯೆಯು ವಿದ್ಯಾರ್ಥಿಯೊಳಗಿನ ಆತ್ಮವಿಶ್ವಾಸವನ್ನು, ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವಂತಿರಬೇಕು. ಈ ಕ್ರಿಯೆಯು ಶಿಕ್ಷಕ ಹಾಗೂ ವಿದ್ಯಾರ್ಥಿ ಇಬ್ಬರಿಗೂ ಉಪಯುಕ್ತವಾದುದಾಗಿದೆ. ಸಶಕ್ತ, ರಚನಾತ್ಮಕ ಮೌಲ್ಯಮಾಪನಕ್ಕೆ ಎಡೆಮಾಡಿಕೊಡುವ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ನಾವು ಗಮನಿಸಿಲಿದ್ದೇವೆ.

## 10.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಓದಿದ ನಂತರ ನೀವು:

- ಪ್ರಸ್ತುತ ಮೌಲ್ಯಮಾಪನ ಪ್ರಕ್ರಿಯೆಯ ಫಲವನ್ನು ಅರಿತುಕೊಳ್ಳಬಲ್ಲಿರಿ
- ಮೌಲ್ಯಮಾಪನದ ಅಗತ್ಯವೇನು ಎಂದು ತಿಳಿದುಕೊಳ್ಳಬಲ್ಲಿರಿ
- ಭಾಷಾಸಾಮರ್ಥ್ಯವನ್ನು ಅಳೆಯುವ ವಿವಿಧ ಮಾರ್ಗಗಳನ್ನು ವಿಶ್ಲೇಷಿಸಬಲ್ಲಿರಿ

## 10.2 ಪ್ರಸ್ತುತ ಮೌಲ್ಯಮಾಪನಾ ಪ್ರಕ್ರಿಯೆ

ಪ್ರಸ್ತುತ ಮೌಲ್ಯಮಾಪನ ಪ್ರಕ್ರಿಯೆಯು ಮೌಲ್ಯಮಾಪನದ ಉದ್ದೇಶದ ಪ್ರಕಾರ ಇದೆಯೇ ಎಂದು ನಾವು ಕೇಳಬೇಕಿದೆ. ಯಾವುದನ್ನು ಅಳೆಯಬೇಕೋ ಆ ಮಾಪನವನ್ನು ತರುತ್ತಿದೆಯೇ? ಪ್ರಸ್ತುತ ಪದ್ಧತಿಯನ್ನು ಅರಿತುಕೊಳ್ಳಲು ಒಂದು ಭಾಷಾತರಗತಿಯನ್ನು ವಿಶ್ಲೇಷಿಸೋಣ.

ಉದಾಹರಣೆ: 1

ಪ್ರಾಥಮಿಕ ಶಾಲೆಯ 3ನೇ ತರಗತಿಯಲ್ಲಿ ಭಾಷಾ ಶಿಕ್ಷಕರು ಒಂದು ಪರೀಕ್ಷೆಯನ್ನು ಮಾಡಿದರು. ಅದರಲ್ಲಿ ವಿದ್ಯಾರ್ಥಿಗಳು ಪುಸ್ತಕವೊಂದರಿಂದ ಕತೆಯನ್ನು ಹೇಳಬೇಕಿತ್ತು. ತರಗತಿಯಲ್ಲಿ 30 ವಿದ್ಯಾರ್ಥಿಗಳಿದ್ದರು. ಮಯಾಂಕನನ್ನು ಹೊರತುಪಡಿಸಿ ಎಲ್ಲರೂ ಕತೆಯನ್ನು ಪುನರಾವರ್ತಿಸಿದರು. ಬಹಳಷ್ಟು ಮಕ್ಕಳು 10ಕ್ಕೆ 6 ಅಂಕ ಗಳಿಸಿದರು.

ಪ್ರಕೃತಿಯು ಎಲ್ಲಕ್ಕೂ ಹೆಚ್ಚು, 8 ಅಂಕ ಗಳಿಸಿದರೆ, ಮಯಾಂಕನಿಗೆ ಕೇವಲ 2 ಬಂದಿತು. ಶಿಕ್ಷಕರು ಎಲ್ಲರಿಗೂ ಮಯಾಂಕನ ಅಂಕಗಳನ್ನು ಹೇಳಿದೊಡನೆಯೆ, ಮಕ್ಕಳೆಲ್ಲ ನಗುತ್ತ, ಅವನನ್ನು ಚುಡಾಯಿಸಿದರು. ಅಷ್ಟು ಕಡಮೆ ಅಂಕಗಳು ಹೇಗೆ ಬಂದುವೆಂದು ಮಯಾಂಕನಿಗೆ ತಿಳಿಯದಾಗಿತ್ತು. ಅವನೂ ಎಲ್ಲರಂತೆಯೆ ಕತೆ ಹೇಳಿದ್ದ. ಅವನು ದುಃಖದಿಂದ, ಸುಮ್ಮನೆ ಕುಳಿತಿದ್ದ. ಸ್ವಲ್ಪ ಹೊತ್ತಿನ ನಂತರ, ಅವನು ಶಿಕ್ಷಕರನ್ನು ತನಗೇಕೆ ಕಡಮೆ ಅಂಕಗಳು ಬಂದವೆಂದು ಕೇಳಿದಾಗ ಅವರು, "ನಾನು ನಿನಗೆ ಪುಸ್ತಕದ ಕ 'ತೆಯನ್ನು ಹೇಳುವಂತೆ ಹೇಳಿದ್ದೆ, ನಿನ್ನ ಮನಸ್ಸಿಗೆ ಬಂದಂತೆ ಅಲ್ಲ" ಎಂದರು.

ಅದಾದ ನಂತರ ಮಯಾಂಕನು ಯಾವುದೇ ಚಟುವಟಿಕೆಯಲ್ಲಿಯೂ ಭಾಗವಹಿಸಲಿಲ್ಲ, ಮರುದಿನ ಶಾಲೆಗೂ ಬರಲಿಲ್ಲ. ಅವನನ್ನು ಶಾಲೆಗೆ ಬರುವಂತೆ ಮಾಡಲು ಅವನ ತಂದೆತಾಯಿಯರು ಬಹಳ ಕಷ್ಟ ಪಡಬೇಕಾಯಿತು.

ಉದಾಹರಣೆ 2

ಇದೂ ಸಹ 3ನೇ ತರಗತಿಯ ಭಾಷಾ ಪೀರಿಯಡ್‌ನ ಉದಾಹರಣೆ. ಹಸುವಿನ ಬಗ್ಗೆ 5 ವಾಕ್ಯಗಳನ್ನು ತಮ್ಮ ನೋಟ್‌ಪುಸ್ತಕಗಳಲ್ಲಿ ಬರೆದುಕೊಳ್ಳುವಂತೆ ಶಿಕ್ಷಕರು ಮಕ್ಕಳಿಗೆ ಹೇಳಿದರು. ಆ ವಾಕ್ಯಗಳೆಂದರೆ:

## ಮೌಲ್ಯಮಾಪನ

Notes

1. ಆಕಳು ನಮ್ಮ ತಾಯಿ.

2. ಆಕಳಿಗೆ ನಾಲ್ಕು ಕಾಲುಗಳಿರುತ್ತವೆ.

3. ಆಕಳು ಹಸಿರುಹುಲ್ಲನ್ನು ತಿನ್ನುತ್ತದೆ.

4. ಆಕಳು ಹಾಲನ್ನು ಕೊಡುತ್ತದೆ.

5. ಆಕಳ ಸಗಣಿಯಿಂದ ಬೆರಣಿಯನ್ನು ಮಾಡುತ್ತಾರೆ.

ಶಿಕ್ಷಕರು ಮಕ್ಕಳಿಗೆ ಈ ಐದೂ ವಾಕ್ಯಗಳನ್ನು ನೆನಪಿಟ್ಟುಕೊಂಡು, ಪರೀಕ್ಷೆಯಲ್ಲಿ ಬರೆಯಲು ಹೇಳಿದರು. ಪ್ರತಿ ವಾಕ್ಯಕ್ಕೂ 1 ಅಂಕದಂತೆ, ಎಲ್ಲವನ್ನೂ ಸರಿಯಾಗಿ ಬರೆದವರಿಗೆ 5 ಅಂಕಗಳೆಂದು ಘೋಷಿಸಿದರು.ಶಿಕ್ಷಕಿಯು ಹೇಳಿದಂತೆ ಎಲ್ಲ ಮಕ್ಕಳೂ ವಾಕ್ಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸತೊಡಗಿದರು. ಪರೀಕ್ಷೆಯಲ್ಲಿ, ಬಹಳಷ್ಟು ಮಕ್ಕಳು ಶಿಕ್ಷಕಿಯು ಬರೆದಂತೆಯೇ ಬರೆದಿದ್ದರು. ನೀಲಂ ಸಹ 5 ವಾಕ್ಯಗಳನ್ನು ಬರೆದಿದ್ದರೂ, ಅವು ಶಿಕ್ಷಕಿಯು ನೀಡಿದ ವಾಕ್ಯಗಳಿಗಿಂತ ಭಿನ್ನವಾಗಿದ್ದವು. ಆ ವಾಕ್ಯಗಳೆಂದರೆ:

1. ಆಕಳು ನಮ್ಮ ತಾಯಿ.
2. ಆಕಳಿಗೆ ನಾಲ್ಕು ಕಾಲುಗಳಿರುತ್ತವೆ.
3. ನಮ್ಮ ಮನೆಯಲ್ಲಿ ಬಹಳ ಆಕಳುಗಳಿವೆ.
4. ಆಕಳಿನ ಹಾಲಿನಿಂದ ನಮಗೆ ಹಣ ದೊರಕುತ್ತದೆ.
5. ಜೀತುವಿನ ಆಕಳಿಗೆ ಕರುವಿದೆ.

ಬಹಳಷ್ಟು ಮಕ್ಕಳಿಗೆ 5ಕ್ಕೆ 5 ಅಂಕಗಳು ದೊರಕಿದುವು, ಆದರೆ ನೀಲಂ ಎಲ್ಲರಂತೆಯೇ 5 ವಾಕ್ಯಗಳನ್ನು ಬರೆದಿದ್ದರೂ ಸಹ ಆಕೆಗೆ ಕೇವಲ 2 ಅಂಕಗಳು ದೊರಕಿದವು. ಆಕೆಯು ಬರೆದ ವಾಕ್ಯಗಳಲ್ಲಿ ಯಾವುದೇ ತಪ್ಪಿಲ್ಲದಿದ್ದರೂ ಆಕೆಗೆ ಕಡಿಮೆ ಅಂಕ ಬಂದಿತು. ಇವು ಕೇವಲ ಉದಾಹರಣೆಗಳಾದರೂ, ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಬಳಸುವ ಮೌಲ್ಯಮಾಪನಾವಿಧಾನನ್ನು ತೋರಿಸುತ್ತವೆ. ಈ ರೀತಿಯ ಮೌಲ್ಯಮಾಪನಾವಿಧಾನವು ಒತ್ತಡ ಮತ್ತು ಅಭದ್ರತೆ, ಚಿಂತೆ ಮತ್ತು ಅವಮಾನಗಳಿಗೆ ಎಡೆಮಾಡಿಕೊಡುತ್ತದೆ. ಪಠ್ಯಸಾಮಗ್ರಿಯನ್ನು ನೆನಪಿಟ್ಟು, ಮೌಖಿಕವಾಗಿ ಹೇಳುವುದರಿಂದ ನಿಜವಾದ ಭಾಷಾಜ್ಞಾನವನ್ನು ಅಳೆಯಲಾಗುವುದಿಲ್ಲ.

ಮೌಲ್ಯಮಾಪನದಲ್ಲಿ ಮಗುವಿನ ಕಲ್ಪನಾಶಕ್ತಿ ಮತ್ತು ಕ್ರಿಯಾಶೀಲತೆಗೆ ಆಸ್ಪದ ನೀಡಬೇಕು. ಇಂದು, ಮೌಲ್ಯಮಾಪನದ ಹೆಸರಿನಲ್ಲಿ ನಡೆಯುತ್ತಿರುವುದೆಲ್ಲವನ್ನು ಔಪಚಾರಿಕ ಬಲೆಯಲ್ಲಿ ಹೆಣೆಯಲಾಗಿದೆ. ಇದನ್ನು ನಿರ್ದಿಷ್ಟ ಸಮಯದಲ್ಲಿ ನಿಗದಿತ ಕಾಲದವರೆಗೆ ನಡೆಸಲಾಗುತ್ತದೆ. ಮೌಖಿಕ ಪರೀಕ್ಷೆಯನ್ನು ಒಂದು ದಿನ ಮತ್ತು ಲಿಖಿತ ಪರೀಕ್ಷೆಯನ್ನು ಬೇರೊಂದು ದಿನ ಆಯೋಜಿಸಲಾಗುತ್ತದೆ. ಇದರಿಂದ ಮಕ್ಕಳು ಭಯದಿಂದ ಆತಂಕಗೊಳ್ಳುತ್ತಾರೆ. ಇಂತಹ ಮೌಲ್ಯಮಾಪನವು ಕಲಿಸುವಿಕೆ–ಕಲಿಕೆಗಿಂತ ಸಂಪೂರ್ಣ ಭಿನ್ನವಾದುದೆಂಬ ಭಾವನೆಯನ್ನು ತರುತ್ತದೆ. ಪ್ರಶ್ನೆಪತ್ರಿಕೆಯನ್ನು ಒಂದೆಡೆ ಸಿದ್ಧಪಡಿಸಲಾಗುತ್ತದೆ, ಆದರೆ ಕಲಿಸುವವರು ಮತ್ತೊಂದೆಡೆ ಇರುತ್ತಾರೆ. ಪ್ರಶ್ನೆಯನ್ನು ಸಿದ್ಧಪಡಿಸುವವರು, ಮಕ್ಕಳನ್ನು, ಅವರ ಹಿನ್ನೆಲೆಯನ್ನು ಮತ್ತು ಅವರೇನು ಮಾಡಿದರು, ಏನು ಕಲಿತರೆಂಬುದನ್ನು ಅರ್ಥ ಮಾಡಿಕೊಂಡಿರುವುದಿಲ್ಲ.

Notes

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 1**

*1. ಪ್ರಸ್ತುತ ಮೌಲ್ಯಮಾಪನಾ ಪದ್ಧತಿಯಲ್ಲಿ, ಈ ಕೆಳಗಿನ ಯಾವುದು ಮಕ್ಕಳಿಂದ ಸಾಧ್ಯವಾಗುವುದಿಲ್ಲ?*

*ಎ. ಒತ್ತಡ ಸ್ಥಿತಿ*

*ಬಿ. ಅಭದ್ರತಾಭಾವ*

*ಸಿ. ಚಿಂತೆ ಮತ್ತು ಅವಮಾನ*

*ಡಿ. ಆನಂದದ ಸ್ಥಿತಿ*

*2. ನೀವು ಶಿಕ್ಷಕಿಯಾಗಿದ್ದರೆ, ಮಯಾಂಕನ ಅಂಕಗಳನ್ನು ಹೇಗೆ ಅಳೆಯುತ್ತಿದ್ದಿರಿ?*

..........................................................................................................

..........................................................................................................

..........................................................................................................

*3. ನಿಮ್ಮ ಅನಿಸಿಕೆಯಲ್ಲಿ, ನೀಲಂ ಕಡಮೆ ಅಂಕಗಳನ್ನು ಪಡೆಯಲು ಕಾರಣವೇನು? ಅದು ಸರಿಯೆ? ಸವಿಸ್ತಾರವಾಗಿ ವಿವರಿಸಿರಿ.*

..........................................................................................................

..........................................................................................................

..........................................................................................................

## 10.3 ಮೌಲ್ಯಮಾಪನ ಏಕೆ ಬೇಕು?

ಮೌಲ್ಯಮಾಪನವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಪ್ರಯೋಜನಕಾರಿ. ಮೌಲ್ಯಮಾಪನದಿಂದ, ಒಂದೆಡೆ ಪ್ರತ್ಯೇಕವಾಗಿ (ಪ್ರತಿಯೊಂದು) ಮಗುವಿನ ಸಾಮರ್ಥ್ಯ, ವಯಸ್ಸು, ಕಲಿಕೆಯ ವೇಗ ಮತ್ತು ಅಗತ್ಯ, ಪ್ರಸ್ತುತ ಕಲಿಕಾಮಟ್ಟವನ್ನು ಗಮನದಲ್ಲಿಟ್ಟುಕೊಂಡು ಅವರೇನು ಮಾಡಬಲ್ಲರೆಂದು ನಮಗೆ ತಿಳಿಯಲು ನೆರವಾದರೆ, ಮತ್ತೊಂದೆಡೆ ಶಿಕ್ಷಕರಿಗೆ ಮಗುವನ್ನು ಹೇಗೆ ನಿರ್ವಹಿಸಬೇಕೆಂದು ತಿಳಿಯುತ್ತದೆ. ಕೇವಲ ಅಂಕಗಳನ್ನು ನೀಡಲು ಮೌಲ್ಯಮಾಪನವನ್ನುಮಾಡಕೂಡದು. ಯಾರಿಗೆ ಕಡಮೆ ಅಂಕಗಳು ದೊರಕಿದವೆಂಬುದು ಮುಖ್ಯವಲ್ಲ. ಅತ್ಯುತ್ತಮದಿಂದ ಅತಿ ಕಡಮೆ ಸಾಮರ್ಥ್ಯವಿರುವವರವರೆಗಿನ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸ್ಥಾನ ಮತ್ತು ಶ್ರೇಯಾಂಕಗಳು ಮೌಲ್ಯಮಾಪನದ ಗುರಿಯಾಗಬಾರದು (ದುರದೃಷ್ಟವಶಾತ್, ಈಗಾಗುತ್ತಿರುವುದು ಅದೇ). ಮೌಲ್ಯಮಾಪನವು ಶಿಕ್ಷಕರು ತಮ್ಮ ಶಿಕ್ಷಣರೀತಿಯನ್ನು ಸುಧಾರಣೆ ಮಾಡಿಕೊಂಡು ತರಗತಿಯಲ್ಲಿ ಮುಂದೇನು ಮಾಡುವುದೆಂದು ತಿಳಿದುಕೊಳ್ಳಲು ನೆರವಾಗಬೇಕು. ಮಗುವು ತಾನಿದ್ದ ಹಂತದಿಂದ ಈಗಿರುವ ಹಂತದವರೆಗಿನ ಬದಲಾವಣೆಯನ್ನು ತನ್ನಲ್ಲಿ ಗುರುತಿಸಿ, ಅದರ ಬಗ್ಗೆ ಮಾತನಾಡುವಂತೆ ಮೌಲ್ಯಮಾಪನವು ಪ್ರೇರೇಪಿಸಬೇಕು. ಅದು, ಶಿಕ್ಷಕರು ಮತ್ತು ಪಾಲಕರಿಗೆ ಮಕ್ಕಳ ಅಗತ್ಯಗಳ ಬಗ್ಗೆ ಮನವರಿಕೆ ಮಾಡಿ, ಮಕ್ಕಳಲ್ಲಿ ಕುಶಲತೆಯನ್ನು ಸುಧಾರಿಸಲು ಅವರು ಮಾಡಬೇಕಾದ ಉಪಾಯಗಳ ಬಗ್ಗೆ ತಿಳಿಸುವಂತಿರಬೇಕು.

ಪ್ರಸ್ತುತ ಮೌಲ್ಯಮಾಪನದ ಬಳಕೆಯು ಸಾಮಾನ್ಯವಾಗಿ ಮಕ್ಕಳನ್ನು ಉತ್ತೀರ್ಣ–ಅನುತ್ತೀರ್ಣಗೊಳಿಸಲು ಅಥವಾ ಪಡೆದ ಅಂಕಗಳನ್ನು ಪ್ರದರ್ಶಿಸಲು ಬಳಸಲಾಗುತ್ತಿದೆ. ಆದರೆ ಅದರ ಉಪಯೋಗ ಅಷ್ಟು ಕಡಮೆಯದಲ್ಲ. ಮೌಲ್ಯಮಾಪನದಲ್ಲಿ, ಮಗುವಿನ ಸಾಧನೆಗಳನ್ನು ಅಳೆಯುವುದಕ್ಕಿಂತ, ಕಲಿಸುವಿಕೆ–ಕಲಿಕೆಯ ಪ್ರಕ್ರಿಯೆಯನ್ನು ಹೇಗೆ ಪರಿಣಾಮಕಾರಿಯನ್ನಾಗಿ ಮಾಡುವ ಪ್ರಯತ್ನ ಇದಾಗಿದೆ. ಉದಾಹರಣೆಗೆ,

## ಮೌಲ್ಯಮಾಪನ

Notes

ಭಾಷೆಯ ಶಿಕ್ಷಕರು ಮೌಲ್ಯಮಾಪನ ಮಾಡಿದಾಗ ಆಕೆಯು, ಮಗುವು ಎಷ್ಟು ಓದಬಲ್ಲುದು? ಎಷ್ಟು ಚೆನ್ನಾಗಿ ಓದುತ್ತದೆ? ಅದು ಸರಾಗವಾಗಿ ಓದುತ್ತದೆಯೋ ಅಥವಾ ಹಿಂಜರಿಕೆಯಿಂದ ತಡೆತಡೆದು ಓದುತ್ತದೆಯೊ? ಅದು ತನ್ನ ವಿಚಾರವನ್ನು ಬರಹಕ್ಕೆ ಇಳಿಸಬಲ್ಲುದೊ? ಆಲಿಸಿದುದನ್ನು ಎಷ್ಟು ಅರ್ಥ ಮಾಡಿಕೊಳ್ಳುತ್ತದೆ? ತನ್ನನ್ನು ಎಷ್ಟು ಆತ್ಮವಿಶ್ವಾಸದಿಂದ ವ್ಯಕ್ತಪಡಿಸುತ್ತದೆ? ವಾಕ್ಯರಚನೆಯಲ್ಲಿ ಪದಭಾಂಡಾರ ಮತ್ತು ಹಿಡಿತವೆಷ್ಟಿದೆ ಎಂಬುದನ್ನು ಶಿಕ್ಷಕಿಯು ನೋಡುತ್ತಾಳೆ. ಮೌಲ್ಯಮಾಪನವು ಕಲಿಕೆಯ ವೇಗ ಮತ್ತು ದಿಕ್ಕನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಉದಾಹರಣೆಗೆ, ಮಗುವೊಂದು ಓದಲು ಅಸಮರ್ಥವಾಯಿತೆಂದರೆ, ಅದಕ್ಕೆ ಕಾರಣವೇನು? ಅವಳು ಅಕ್ಷರವನ್ನು ಗುರುತಿಸಲಾರಳೆ ಅಥವಾ ಪದಗಳು ಮತ್ತು ವಾಕ್ಯಗಳನ್ನು ಅರ್ಥಪೂರ್ಣವೆಂದು ಪರಿಗಣಿಸುವುದರಲ್ಲಿ ವಿಫಲಳಾಗುವಳೆ? ಅಥವಾ ಅಕ್ಷರಗಳನ್ನು ಒಂದೊಂದಾಗಿ ಓದುವ ಅಭ್ಯಾಸದಿಂದ ಓದುವುದನ್ನು ಅರ್ಥ ಮಾಡಿಕೊಳ್ಳದಂತೆ ಮಾಡಿದೆಯೆ? ಈ ಎಲ್ಲ ಪ್ರಮುಖ ಮಾಹಿತಿಗಳು ಮಕ್ಕಳನ್ನು ಅರ್ಥೈಸಿಕೊಳ್ಳಲು ನೆರವಾಗುತ್ತವೆ.

ಈಗಷ್ಟೇ ನಾವು ಮಗುವಿನ ಓದುವ ಸಾಮರ್ಥ್ಯ ಮತ್ತು ಆತನ/ಆಕೆಯ ಭಾಷಾಜ್ಞಾನದ ಮಾಪನದ ಕುರಿತು ಮಾತನಾಡಿದೆವು. ಈ ಮಾಹಿತಿಯನ್ನು ನಾವು ಜಾಗ್ರತೆಯಿಂದ ದಾಖಲಿಸಬೇಕು. ಮೌಲ್ಯಮಾಪನದ ಸಮಯದಲ್ಲಿ ಪ್ರತಿಯೊಂದು ಮಗುವಿನ ಬಗ್ಗೆಯೂ ವಿವರಣಾತ್ಮಕ ಟಿಪ್ಪಣಿಯನ್ನು ಬರೆಯಬೇಕು. ಈ ಟಿಪ್ಪಣಿಗಳು ವಿವರವಾಗಿರಬೇಕೆಂದಿಲ್ಲ, ಆದರೆ ಪ್ರತಿ ಟಿಪ್ಪಣಿಯ ಆಧಾರವೂ ಸ್ಪಷ್ಟವಾಗಿರಬೇಕು. ಪ್ರತಿಯೊಂದು ಟಿಪ್ಪಣಿಯೂ ಏನನ್ನು ಗಮನಿಸಲಾಗಿದೆಯೆಂಬುದರ ಸವಿಸ್ತಾರ ವಿವರಣೆಯನ್ನು ಹೊಂದಿರಬೇಕು.

ಉದಾಹರಣೆಗೆ, 1ನೇ ತರಗತಿಗೆ ಹೊಸದಾಗಿ ಸೇರಿದ ಮಗುವಿನ ಬಗೆಗಿನ ಈ ಕೆಳಗಿನ ವಿವರಣೆಯು ಅತ್ಯಂತ ಸೀಮಿತ ಹಾಗೂ ಅಪೂರ್ಣವಾಗಿದೆ: "ಜಯಾ ಪುಸ್ತಕಗಳಲ್ಲಿ ಆಸಕ್ತಳಾಗಿದ್ದಾಳೆ." ಈ ಟಿಪ್ಪಣಿಯ ಆಧಾರವನ್ನು ನೀಡಬೇಕು. ಇದನ್ನು ಈ ರೀತಿಯಾಗಿ ಬರೆಯಬಹುದು:
"ಜಯಾ ಪುಸ್ತಕಗಳಲ್ಲಿ ಆಸಕ್ತಿ ವಹಿಸುತ್ತಾಳೆ. ಅವಳು ಪುಸ್ತಕವಿಭಾಗದಲ್ಲಿ ಬಹಳಷ್ಟು ಸಮಯ ಕಳೆದಳು. ನಂತರ ಅವಳು ಒಂದು ಪುಸ್ತಕವನ್ನೆತ್ತಿಕೊಂಡು, ಅದರಲ್ಲಿನ ಚಿತ್ರಗಳನ್ನು ಬಹಳ ಸಮಯದವರೆಗೆ ಒಂದೊಂದಾಗಿ ನೋಡುತ್ತಿದ್ದಳು. ಅದು ಪ್ರಾಣಿಗಳ ಕುರಿತಾದ ಪುಸ್ತಕವಾಗಿತ್ತು."
ಈ ಮೌಲ್ಯಮಾಪನವು ಮಗುವಿನ ನಡವಳಿಕೆಯನ್ನು ತೋರಿಸುತ್ತದೆ ಮತ್ತು ನಿಜವಾಗಿ ನಡೆದಿರುವುದನ್ನು ತಿಳಿಸುತ್ತದೆ. ಇದು ಕೇವಲ ಅಭಿಪ್ರಾಯವಲ್ಲ. 2 ರಿಂದ 4 ತಿಂಗಳುಗಳಲ್ಲಿ ಒಂದು ಮಗುವಿನ ಬಗ್ಗೆ ಈ ರೀತಿ 7–8 ಟಿಪ್ಪಣಿಗಳಿದ್ದರೆ, ಕೊಂಚ ಮಟ್ಟಿಗೆ ಮಗುವೊಂದರ ಭಾಷಾಸಾಮರ್ಥ್ಯದ ಪ್ರಗತಿಯ ಬಗ್ಗೆ ತಿಳಿಯುತ್ತದೆ. ಟಿಪ್ಪಣಿಗಳು ಹೇಗಿರಬೇಕೆಂದರೆ, ಕಲಿಸುವಿಕೆ–ಕಲಿಕೆಯ ಪ್ರಕ್ರಿಯೆಯಲ್ಲಿ ಮಗುವು ಏನನ್ನು ಕಲಿಯಿತೆಂಬುದನ್ನು ಸ್ಪಷ್ಟೀಕರಿಸಬೇಕು.

ಪರಿಸ್ಥಿತಿಯ ನೈಜತೆಯನ್ನು ಮನದಲ್ಲಿಟ್ಟುಕೊಂಡು, ಮುಂದಿನ ಮಾರ್ಗವೇನೆಂಬುದನ್ನು ಇದು ತೋರಿಸುತ್ತದೆ. ಉದಾಹರಣೆಗೆ ಓದುವುದನ್ನು ಕಲಿಯುವುದರಲ್ಲಿ ತೊಂದರೆಯಿದೆಯೆಂದು ಅರಿವಾದಾಗ, ಅದಕ್ಕೆ ಪರಿಹಾರವನ್ನು ಹುಡುಕಬೇಕು. ಮಗುವೊಂದನ್ನು ಓದಿಸಲು ನಾವು ಚಟುವಟಿಕೆಗಳನ್ನು, ಅಭ್ಯಾಸಗಳನ್ನು ಸಿದ್ಧಪಡಿಸಬೇಕು. ಮೌಲ್ಯಮಾಪನದಲ್ಲಿ ಮಗುವೊಂದರ ಕಾರ್ಯಕ್ಷಮತೆಯನ್ನು ಅದರದೇ ಹಿಂದಿನ ದಾಖಲೆಯೊಂದಿಗೆ ಹೋಲಿಸಬೇಕು. ಬೇರೆ ಮಕ್ಕಳ ಫಲಿತಾಂಶದೊಂದಿಗೆ ಹೋಲಿಸಿ ಫಲವಿಲ್ಲ. ಪ್ರತಿಯೊಂದು ಮಗುವಿನ ಕಲಿಕೆಯ ವೇಗವು ಭಿನ್ನವಾಗಿರುತ್ತದೆ ಮತ್ತು ಕಲಿಯುವ ಸಮಯ ಬೇರೆಯವರಿಗಿಂತ ಭಿನ್ನವಾಗಿರುತ್ತದೆ. ಉದಾಹರಣೆಗೆ, ನಮಗೆ ತಿಳಿದಂತೆ ಕೆಲವು ಮಕ್ಕಳು ಸುಲಭವಾಗಿ ಓದುವುದು, ಅರ್ಥೈಸಿಕೊಳ್ಳುವುದು ಮತ್ತು ಮಾತನಾಡುವುದನ್ನು ಮಾಡುತ್ತಾರೆ ಆದರೆ ಕಠಿಣ ವಿಚಾರಗಳನ್ನು ಸಾಕಷ್ಟು ಸಮಯದ ನಂತರ ಕಲಿಯುತ್ತಾರೆ. ಬೇಗನೆ ಕಲಿಯುವವರಿಗಷ್ಟೇ ಕಲಿಸದೆ, ಎಲ್ಲ ಮಕ್ಕಳನ್ನೂ ಪ್ರೋತ್ಸಾಹಿಸುವುದರ ಅಗತ್ಯವು ನಮಗೆ ತಿಳಿದಿರುವುದು ಅತಿ ಮುಖ್ಯ. ಮೌಲ್ಯಮಾಪನವು ಒಮ್ಮೆಲೇ ಮುಗಿಸುವ ಅಥವಾ ಮೂರು ತಿಂಗಳಿಗೊಮ್ಮೆ ಮಾಡುವ ಕೆಲಸವಲ್ಲ; ಅದು ಆಜನ್ಮಪೂರ್ತಿ ಮಾಡುವ ಕೆಲಸ.

Notes

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 2

1. ಮೌಲ್ಯಮಾಪನದಲ್ಲಿ ನಾವು ಏನನ್ನು ನೆನಪಿನಲ್ಲಿಡಬೇಕು? ನಾವು (ಒಂದನ್ನು ಗುರುತಿಸಿ):

ಎ. ಮಗುವಿನ ಪ್ರಗತಿಯನ್ನು ಮುಂಚಿನ ಕಲಿಕಾ ಮಟ್ಟದೊಂದಿಗೆ ಹೋಲಿಸಬೇಕು.

ಬಿ. ಒಂದು ಮಗುವಿನ ಪ್ರಗತಿಯನ್ನು ಬೇರೆ ಮಕ್ಕಳೊಂದಿಗೆ ಹೋಲಿಸಬೇಕು.

ಸಿ. ಮಗುವಿನ ಪ್ರಗತಿಯನ್ನು ಬೇಗ ಮತ್ತು ಹೆಚ್ಚು ಕಲಿತವರೊಂದಿಗೆ ಹೋಲಿಸಬೇಕು.

ಡಿ. ಮಗುವಿನ ಪ್ರಗತಿಯನ್ನು ಬೇಗನೆ ಮಾತನಾಡುವವರೊಂದಿಗೆ ಹೋಲಿಸಬೇಕು.

2. ಮೌಲ್ಯಮಾಪನ ಪ್ರಕ್ರಿಯೆಯು ಏಕೆ ವಿದ್ಯಾರ್ಥಿಕೇಂದ್ರಿತವಾಗಿರಬೇಕು? ಅಂತಹ ಪ್ರಕ್ರಿಯೆಯ ಲಾಭಗಳೇನು?

.......................................................................................................................

.......................................................................................................................

.......................................................................................................................

3. ಮೌಲ್ಯಮಾಪನವು ಕಲಿಸುವಿಕೆ ಮತ್ತು ಕಲಿಕೆಗಳೊಂದಿಗೆ ಹೇಗೆ ಜೋಡಣೆಯಾಗಿದೆ? ಇದರ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

.......................................................................................................................

.......................................................................................................................

.......................................................................................................................

4. ಮಗುವಿನ ವಾಚನಾ ಸಾಮರ್ಥ್ಯದ ಬಗೆಗಿನ ಟಿಪ್ಪಣಿಯನ್ನು ನೀವು ಓದಿದಿರಿ. ಈಗ, ಅದೇ ರೀತಿಯಾಗಿ ಆ ಮಗುವಿನ ಮೊದಲಿನ ಲೇಖನಾ ಸಾಮರ್ಥ್ಯದ ಬಗ್ಗೆ ವಿವರವಾಗಿ ಟಿಪ್ಪಣಿ ಬರೆಯಿರಿ ಮತ್ತು ನಿಮ್ಮ ಟಿಪ್ಪಣಿಯ ಆಧಾರವನ್ನು ವಿವರಿಸಿರಿ.

.......................................................................................................................

.......................................................................................................................

.......................................................................................................................

Notes

## 10.4 ಭಾಷೆಯ ಮೌಲ್ಯಮಾಪನದ ಸಮಸ್ಯೆಗಳು

'ಸರಿಯಾದ' ವ್ಯಾಕರಣ ಮತ್ತು ಉಚ್ಚಾರಣೆ ಅಥವಾ 'ಸರಿಯಾದ' ಪದಗಳನ್ನು ಬಳಸುವುದು 'ಶುದ್ಧ ಮತ್ತು ನಿಖರವಾದ ಭಾಷೆ' ಎನಿಸಿಕೊಳ್ಳುತ್ತದೆ. ಮತ್ತೊಂದೆಡೆ, ಮಗುವು ನಿರರ್ಗಳವಾಗಿ ಮಾತನಾಡುವ, ಓದುವ ಮತ್ತು ಉತ್ಸಾಹದಿಂದ ಬರೆಯಲು ಶಕ್ತಿ ಮತ್ತು ಸಾಮರ್ಥ್ಯ ನೀಡುತ್ತದೆ ಈ ನಿಟ್ಟಿನಲ್ಲಿ ವ್ಯಾಕರಣ ದೋಷಕ್ಕಿಂತಲೂ ಅರ್ಥ ಮತ್ತು ಸನ್ನಿವೇಶಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ.

ಮೌಲ್ಯಮಾಪನದ ಪ್ರಾಥಮಿಕ ಹಂತದಲ್ಲಿ ಭಾಷೆಯ ನಿರರ್ಗಳತೆಯ ಕಡೆಗೆ ಹೆಚ್ಚಿನ ಗಮನಹರಿಸಬೇಕು. ನಂತರದಲ್ಲಿ ಸರಿಯಾದ ಹಾಗೂ ಹೆಚ್ಚಿನ ನಿಖರತೆ ಸಾಧ್ಯವಾಗುತ್ತದೆ. ಪ್ರಾಥಮಿಕ ಹಂತದ ನಂತರ ನಾವು ಸರಿಯಾದ ಮತ್ತು ಸಮಂಜಸತೆಯನ್ನು ಸಮತೋಲನಗೊಳಿಸಬಹುದು ಮತ್ತು ಎರಡೂ ಕಡೆ ಗಮನ ಕೊಡಬಹುದು. ಮಕ್ಕಳು ಅಳವಡಿಸಿಕೊಂಡ ಅಥವಾ ಸ್ವಾಧೀನಪಡಿಸಿಕೊಂಡ ಭಾಷಾ ಸಾಮರ್ಥ್ಯಗಳನ್ನು ಮೌಲ್ಯಮಾಪನದ ಮೂಲಕ ದೃಢಪಡಿಸಿಕೊಳ್ಳಬಹುದು. ಮೊದಲಿಗೆ ಕಲಿಯುವವರು ಈ ಸಾಮರ್ಥ್ಯಗಳನ್ನು ಪಡೆಯಲು ವಿವಿಧ ರೀತಿಯ ಪುನರಾವರ್ತಿತ ಅವಕಾಶಗಳನ್ನು ಒದಗಿಸಿದ್ದಾರಾ ಎಂಬುದನ್ನು ಮೌಲ್ಯಮಾಪನ ಮಾಡುವವರು ಪರಿಗಣಿಸಬೇಕು. ಅಂತಹ ಅವಕಾಶಗಳನ್ನು ಅವರು ಹೊಂದಿಲ್ಲದಿದ್ದರೆ, ಮೌಲ್ಯಮಾಪನವು ಅರ್ಥಹೀನವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಅವುಗಳನ್ನು ವಿವಿಧ ಅಂಕಗಳಾಗಿ ಅಥವಾ ವಿಭಾಗಗಳಾಗಿ ಮಾಡುವ ಮೂಲಕ ನಾವು ಸಾಮರ್ಥ್ಯಗಳನ್ನು ವಿವರಿಸಲು ಪ್ರಯತ್ನಿಸುತ್ತೇವೆ. ಈ ನಿಟ್ಟಿನಲ್ಲಿ ಮೌಲ್ಯಮಾಪನದ ನಿಖರತೆಯನ್ನು ಹೆಚ್ಚಿಸುವ ಸಲುವಾಗಿ ಕೆಲವೊಂದು ಚಟುವಟಿಕೆಗಳನ್ನು ಮಾದರಿಯನ್ನು ನೀಡಲಾಗಿದೆ. ಮೌಲ್ಯಮಾಪನವನ್ನು ಕೆಲವೊಂದು ಚಟುವಟಿಗಳನ್ನು ಬಳಸಿಕೊಳ್ಳುವುದರ ಮೂಲಕವೂ ಮಾಡಬಹುದು ಹಾಗೆಯೇ ಪ್ರತಿಯೊಂದು ಕೌಶಲ್ಯಕ್ಕೂ ಪ್ರತ್ಯೇಕ ಚಟುವಟಿಕೆಯ ಅವಶ್ಯಕತೆಯಿಲ್ಲ. ನಾವು ಮೂರು, ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡುವ ಚಟುವಟಿಕೆಯನ್ನು ತೆಗೆದುಕೊಳ್ಳಬಹುದು. ಕೆಲವೊಂದು ಪ್ರಮುಖ ಚಟುವಟಿಕೆಗಳು;

### 10.4.1 ಆಲಿಸುವುದು ಮತ್ತು ಮಾತನಾಡುವುದು

ಮೊದಲಿಗೆ ಮಕ್ಕಳು ತಾವು ನೋಡಿದ ಚಿತ್ರಗಳು ಹಾಗೂ ಕೇಳಿರುವ ವಿಷಯಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸರಿಯಾದ ಪದಗಳ ಬಳಕೆಯನ್ನು ಕಲಿತುಕೊಳ್ಳಬೇಕು. ಅದು ಸಂವಾದಗಳಾಗಿರಬಹುದು, ಉಪನ್ಯಾಸಗಳಾಗಿರಬಹುದು ಅಥವಾ ಚರ್ಚೆಗಳಾಗಿರಬಹುದು ಹಾಗೂ ವಿಷಯಗಳ ಸಂಪೂರ್ಣ ಮಾಹಿತಿಯನ್ನು, ಪ್ರಶ್ನೆಗಳನ್ನು ಹಾಗೂ ಅವರಿಗೆ ತಿಳಿದ ವಿಷಯಗಳು, ಜನರ ಬಗೆಗೆ ಹಾಗೂ ಘಟನೆಗಳ ಬಗೆಗೆ ಸಂಪೂರ್ಣ ವಾಕ್ಯಗಳಲ್ಲಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.

### 10.4.2 ಓದುವಿಕೆ ಹಾಗೂ ಗ್ರಹಿಸುವಿಕೆ

ಪ್ರಾರಂಭದಲ್ಲಿಯೇ ಸನ್ನಿವೇಶಗಳನ್ನು ಹಾಗೂ ವಾಕ್ಯಗಳನ್ನು ಅರ್ಥಮಾಡಿಕೊಂಡು ಓದಬೇಕು ಹಾಗೂ ಮಕ್ಕಳಿಗೆ ತಿಳಿದಿರುವ ಪದಗಳನ್ನು ಗುರುತಿಸುವ ಹಾಗೂ ಗ್ರಹಿಸುವ ಸಾಮರ್ಥ್ಯವನ್ನು ಅಂದಾಜು ಮಾಡಬೇಕು ನಂತರದಲ್ಲಿ ನೀಡಲಾದ ಚಿತ್ರಗಳನ್ನು ,ಕಥೆಗಳನ್ನು ಹಾಗೂ ವಾಕ್ಯಗಳನ್ನು ಓದುವ ಮತ್ತು ಮುಖ್ಯಾಂಶಗಳನ್ನು ಹೇಳಲು ಸಾಧ್ಯವಾಗುತ್ತದೆ

### 10.4.3 ಬರವಣಿಗೆ

ಮೌಲ್ಯಮಾಪನದ ಸಮಯದಲ್ಲಿ, ಕಲಿಯುವವರಿಗೆ ಸರಳವಾದ ಪದಗಳನ್ನು ಇಲ್ಲವೇ ಪತ್ರಗಳನ್ನು ನೀಡಿ ಬರೆಯಲು ಸಾಧ್ಯವೇ ಎಂಬುದನ್ನು ಪ್ರಯತ್ನಿಸಿ ಮತ್ತು ನೋಡಬೇಕು.

Notes

ನಂತರ ಅವರು ನೋಡದೆಯೇ ಪತ್ರಗಳನ್ನು ಅಥವಾ ಪದಗಳನ್ನು ಮೌಲ್ಯಮಾಪನ ಮಾಡಬಹುದು. ತರುವಾಯ, ಅವರಿಗೆ ಒಂದು ಮಾತು ಅಥವಾ ಒಂದು ವಾಕ್ಯದ ಉತ್ತರವನ್ನು ಬರೆಯಲು ಅಥವಾ ಅವುಗಳನ್ನು ಓದುವ ಪ್ರಶ್ನೆಗಳಿಗೆ ಅವರು ಮೌಲ್ಯಮಾಪನ ಮಾಡಬಹುದು. ಮುಂದಿನ ಹಂತದಲ್ಲಿ ಅವರು ಅವರು ಎರಡು-ಮೂರು ವಾಕ್ಯಗಳಲ್ಲಿ ವಿವರಣೆಗಳನ್ನು ಬರೆಯಲು ಮತ್ತು ಪರಿಚಯವಿಲ್ಲದ ಪದಗಳನ್ನು ಮಾತನಾಡುವ ಸಾಮರ್ಥ್ಯವನ್ನು ಹೊಂದುತ್ತಾರೆ.

### 10.4.4 ಅಭಿವ್ಯಕ್ತಿ (ವ್ಯಕ್ತಪಡಿಸುವಿಕೆ)

ಈ ಹಂತದ ಕಲಿಯುವಿಕೆಯಲ್ಲಿ ನೋಡಿದ ಘಟನೆಗಳನ್ನು ಅಥವಾ ಕೇಳಿದ ವಿಷಯಗಳನ್ನು ಚಿತ್ರದ ಮೂಲಕ ವಿವರಿಸಲು ಸಾಧ್ಯವಾಗುತ್ತದೆ. ನಂತರದಲ್ಲಿ ಅವರಿಂದ ಸ್ವತಂತ್ರವಾಗಿ ಕವಿತೆ ಅಥವಾ ಕತೆಗಳನ್ನು, ಅಥವಾ ಘಟನೆಯನ್ನು ಅವಳು/ನು ಚಿತ್ರದ ಮೂಲಕ ವಿವರಿಸುವ ಸಾಮರ್ಥ್ಯ ಹೊಂದುತ್ತಾರೆ. ಅವನು/ಳಿಗೆ ಜೇಡಿಮಣ್ಣಿನಿಂದ ಅಥವಾ ಇತರ ವಸ್ತುಗಳೊಂದಿಗೆ ಅದನ್ನು ಮಾಡಲು ನೀಡಹುದು ಅಲ್ಲದೇ ಕಥೆಗಳನ್ನು ರಚಿಸುವ ಅಥವಾ ವಿಸ್ತರಿಸುವ ಬಗ್ಗೆ ಅವರಿಗೆ ಬೇರೆ ರೀತಿಯಲ್ಲಿಯೂ ಹೇಳಬಹುದು.

ಪ್ರಗತಿಯ ಪರಿಶೀಲನೆ – 3

1. *ನಿರರ್ಗಳತೆ ಎಂದರೇನು?*
   *ಎ. ವಾಕ್ಯವನ್ನು ಸರಿಯಾಗಿ ಪ್ರತಿಪಾದಿಸುವುದು ಇಲ್ಲ ಉಚ್ಛರಿಸುವುದು.*
   *ಬಿ. ದೋಷವಿಲ್ಲದೆ ಬರೆಯುವುದು.*
   *ಸಿ. ಮಾತನಾಡಲು, ಓದಲು ಹಾಗೂ ಬರೆಯಲು ತನ್ನನ್ನು ತಾನು ಉತ್ಸಾಹದಿಂದ ತೊಡಗಿಸಿಕೊಳ್ಳುವುದು*
   *ಡಿ. ವ್ಯಾಕರಣ ನಿಯಮಗಳನ್ನು ಸ್ಪಷ್ಟಪಡಿಸುವುದು.*
2. *ಮಗುವಿಗೆ ಓದಲು ಸಾಧ್ಯವೇ ಎಂಬುದನ್ನು ನಿರ್ಣಯಿಸಲು ಯಾವ ಚಟುವಟಿಕೆಗಳನ್ನು ಬಳಸಬಹುದು ಎಂಬುದನ್ನು ತಿಳಿದುಕೊಳ್ಳುವುದು.*

   ..................................................................................................................................

   ..................................................................................................................................

   ..................................................................................................................................
3. *ಆಲಿಸುವುದು ಹಾಗೂ ಮಾತಾಡುವುದು ಈ ಚಟುವಟಿಕೆಗಳ ಮೌಲ್ಯಮಾಪನ ಮಾಡುವಾಗ ನೀವು ಯಾವ ಅಂಶವನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೀರಿ ?*

   ..................................................................................................................................

   ..................................................................................................................................

   ..................................................................................................................................

## 10.5 ಭಾಷಾ ಕಲಿಕೆಯಲ್ಲಿ ಮೌಲ್ಯಮಾಪನದ ವಿಧಾನಗಳು ಪ್ರಕ್ರಿಯೆಯ ವಿಧಾನ

ಭಾಷಾಜ್ಞಾನದ ಮೌಲ್ಯಮಾಪನ ಪ್ರಕ್ರಿಯೆಯು ಲಿಖಿತ ಮತ್ತು ಮೌಖಿಕ ಪರೀಕ್ಷೆಯನ್ನು ನಡೆಸುವ ಮೂಲಕ ಆಗುತ್ತದೆ. ಪ್ರಶ್ನೆ ಪತ್ರಿಕೆಯು ಪಠ್ಯಪುಸ್ತಕ ಮತ್ತು ನೆನಪಿನ ಶಕ್ತಿಯನ್ನು ಅವಲಂಬಿಸಿದೆಯೇ ಹೊರತು ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯವನ್ನಲ್ಲ.

ನೂತನ ಮೌಲ್ಯಮಾಪನ ವಿಧಾನಗಳಲ್ಲಿ ಮೌಖಿಕ ಅಭಿವ್ಯಕ್ತಿ, ಕಲ್ಪನಾಶಕ್ತಿ, ಮತ್ತು ಗಮನಿಸುವುದು ಮುಂತಾದ ಅಂಶಗಳನ್ನು ಸೇರಿಸಬೇಕಿದೆ. 2005ರ ರಾಷ್ಟ್ರೀಯ ಪಠ್ಯಕ್ರಮ ನೀತಿಯನ್ವಯ ಮೌಲ್ಯಮಾಪನ ಪ್ರಕ್ರಿಯೆಗಳ ಬದಲಾವಣೆಗೆ ಒತ್ತುನೀಡುವಂತೆ ಸೂಚಿಸಲಾಗಿದೆ. ಭಾಷೆಯ ಹಿನ್ನೆಲೆಯಲ್ಲಿ. ಮೌಲ್ಯಮಾಪನದ ಪದ್ಧತಿಗಳಲ್ಲಿ ಈ ಕೆಳಗಿನವುಗಳನ್ನು ಹೆಸರಿಸಬಹುದು.

### 10.5.1 ಮೌಖಿಕ ಪರೀಕ್ಷೆ

ಮೌಖಿಕ ಪರೀಕ್ಷೆಯು ಔಪಚಾರಿಕ ಅಥವಾ ಅನೌಪಚಾರಿಕವಾಗಿರಬಹುದು. ಮಕ್ಕಳೊಂದಿಗೆ ವಿವಿಧ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆ, ಚರ್ಚೆ, ಪ್ರಶ್ನಾವಳಿ, ಗುಂಪು ಚರ್ಚೆ ಮತ್ತು ಅಣಕು ಅಥವಾ ಹಾಸ್ಯ ನಾಟಕಗಳನ್ನು ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಬಹುದು. ಈ ಚಟುವಟಿಕೆಯ ಮೂಲಕ ವಿದ್ಯಾರ್ಥಿಯ ಭಾಷಾ ಸಾಮರ್ಥ್ಯವನ್ನು ತೀರ್ಮಾನಿಸಬಹುದು.

ಈ ಕೆಳಕಂಡ ಕೆಲವು ಚಟುವಟಿಕೆಗಳನ್ನು ಏರ್ಪಡಿಸಬಹುದು:

ಪ್ರಶ್ನೋತ್ತರ ಚಟುವಟಿಕೆ

ಈ ಚಟುವಟಿಕೆಯಲ್ಲಿ ಪ್ರಶ್ನೆಗಳು ತುಂಬ ಸರಳವಾಗಿದ್ದು, ಎಲ್ಲಾ ಮಕ್ಕಳೂ ಉತ್ತರಿಸುವಂತಿರಬೇಕು ಹಾಗೂ ಪ್ರಶ್ನೆಗಳು ಮಕ್ಕಳ ನಿತ್ಯ ಜೀವನಕ್ಕೆ ಸಂಬಂಧಿಸಿದ್ದಾಗಿ, ಅವರ ಅವಶ್ಯಕತೆ, ಅನುಭವ ಹಾಗೂ ಆಸಕ್ತಿಗೆ ಸಂಬಂಧಿಸಿರಬೇಕು. ಈ ಚಟುವಟಿಕೆಯಲ್ಲಿ ಶಿಕ್ಷಕ ಮೌಲ್ಯಮಾಪಕನಾಗಿ ಮಕ್ಕಳಿಗೆ ಅವರ ಕಲ್ಪನಾಶಕ್ತಿ ಹಾಗೂ ಬುದ್ಧಿಮತ್ತೆಗಳು ಹೊರಬರುವಂತೆ ವಿಫುಲವಾದ ಅವಕಾಶಗಳನ್ನು ನೀಡಬೇಕು. ಶಿಕ್ಷಕನಿಗೆ ಆಸಕ್ತಿಕರ ಪ್ರಶ್ನೆಗಳನ್ನು ಸೃಷ್ಟಿಸಿ ಕೇಳುವ ಸಹಜ ಸಾಮರ್ಥ್ಯವಿರಬೇಕು. ಪ್ರಶ್ನೋತ್ತರ ಚಟುವಟಿಕೆಯಿಂದ ಮಕ್ಕಳ ಶಬ್ದಸಂಪತ್ತು, ಉಚ್ಚಾರ, ವಾಕ್ಯರಚನಾ ಸಾಮರ್ಥ್ಯವನ್ನು ಅಳೆಯಬಹುದಾಗಿದೆ.

ಕತೆ ಹೇಳುವುದು

ಮಗು ತಾನು ಓದಿದ, ಕೇಳಿದ ಕಥೆಯನ್ನು ತನ್ನದೇ ಸ್ವಂತ ಮಾತುಗಳಲ್ಲಿ ಹೇಳುವ ಕಲೆಯೂ ಕೂಡಾ ಮೌಲ್ಯಮಾಪನಕ್ಕೆ ಸಹಕಾರಿಯಾಗಿದೆ. ಅದು ಅವರೇ ಸೃಷ್ಟಿಸಿಕೊಂಡು ಹೇಳುವ ಕತೆಯಾಗಿರಬಹುದು. ಇದನ್ನು ಗಮನಿಸುವುದು ಮುಖ್ಯವಾಗುತ್ತದೆ. ಕತೆ ಹೇಳುವಾಗಿನ ಹಾವಭಾವ, ಭಂಗಿ, ಅಭಿವ್ಯಕ್ತಿ, ಕತೆಯ ಘಟನೆಗಳನ್ನು ನೆನಪಿಟ್ಟುಕೊಳ್ಳುವುದು – ಇವನ್ನೆಲ್ಲ ಮೌಲ್ಯಮಾಪನಕ್ಕಾಗಿ ಗಮನಿಸಬೇಕಾಗುತ್ತದೆ.

ಗಟ್ಟಿಯಾಗಿ ಓದುವುದು

ಈ ಚಟುವಟಿಕೆಯಲ್ಲಿ ಮಗುವಿನ ಉಚ್ಚಾರಣೆ, ಧ್ವನಿಯ ಏರಿಳಿತ ಮತ್ತು ಶಬ್ದಗಳಿಗೆ ಒತ್ತುಕೊಡುವ ಬಗೆಯನ್ನು ಗಮನಿಸಬೇಕಾಗುತ್ತದೆ. ಚಿಕ್ಕ ಅಥವಾ ಸುದೀರ್ಘ ಸಂಭಾಷಣೆಗಳು, ನಾಟಕದ ತುಣುಕುಗಳು, ಅಥವಾ ಪಠ್ಯಪುಸ್ತಕದಿಂದ ಆಯ್ದ ಭಾಗಗಳು ಮುಂತಾದುವನ್ನು ಗಟ್ಟಿಯಾಗಿ ಓದಲು ಕೊಡಬೇಕು. ಮಗು ಪ್ರಶ್ನಾರ್ಥಕ ಭಾವ ಅಥವ ಆಶ್ಚರ್ಯದ ಭಾವ ಮೊದಲಾದುವನ್ನು ಸೂಕ್ತ ಮುಖಭಾವವನ್ನು ವ್ಯಕ್ತಪಡಿಸುತ್ತಿಲ್ಲವಾದರೂ, ಮಗುವನ್ನು ಅಡ್ಡಿಪಡಿಸದೇ ಹೇಳುವ ಪ್ರಕ್ರಿಯೆಗೆ ಮಹತ್ವ ಕೊಡಬೇಕು. ಅರ್ಧಕ್ಕೆ ನಿಲ್ಲಿಸಿ ಪ್ರಶ್ನೆ ಕೇಳುವುದರಿಂದ ಮಗುವಿನ ಧೈರ್ಯ ಕುಗ್ಗಬಹುದು. ಭಯ, ಅನಾಸಕ್ತಿಗಳನ್ನು ಮೂಡಿಸಬಹುದು. ನೋಡಿದ, ಕೇಳಿದ, ಓದಿದ ಸಂಗತಿಗಳನ್ನು ಹೇಳುವಾಗ ವರ್ಣಿಸುವ ಕಲೆ ತುಂಬ ಮುಖ್ಯವಾದದ್ದು. ಪ್ರಾಥಮಿಕ ಶಾಲೆಯ ಹಂತದಲ್ಲಿ ಒಂದು ಚಿತ್ರವನ್ನೋ, ಕೆಲಸವನ್ನೋ ವಿವರಿಸಿ ಹೇಳಲು ತಿಳಿಸಬಹುದು. ಮೊದಮೊದಲಿನ ಹಂತಗಳಲ್ಲಿ ಕೇವಲ ಒಂದು ವಾಕ್ಯದಲ್ಲಿ ವಿವರಿಸಿದರೂ ಸಾಕು.

Notes

ಪ್ರಗತಿಯ ಪರಿಶೀಲನೆ – 4

*1. ಮಗುವು ಸರಿಯಾಗಿ ಉಚ್ಚಾರ ಮಾಡದಿದ್ದಲ್ಲಿ, ಪ್ರಶ್ನಾರ್ಥಕ ಭಾವ ಅಥವ ಆಶ್ಚರ್ಯದ ಭಾವ ಮೊದಲಾದುವನ್ನು ಸರಿಯಾಗಿ ವ್ಯಕ್ತಪಡಿಸದೇ ಇದ್ದಲ್ಲಿ, ಶಿಕ್ಷಕನು ಏನು ಮಾಡಬೇಕು?*

*ಎ. ನಡುವೆಯೇ ತಡೆಯುವುದು*

*ಬಿ. ಉಚ್ಚಾರಣೆಯನ್ನು ತಿದ್ದುವುದು*

*ಸಿ. ಅದೇ ಶಬ್ದವನ್ನು ಅನೇಕ ಬಾರಿ ಉಚ್ಚರಿಸುವಂತೆ ಮಾಡುವುದು*

*ಡಿ. ತಕ್ಷಣವೇ ನಡುವೆ ಪ್ರವೇಶಿಸದಿರುವುದು*

*2. ಪ್ರಶ್ನೋತ್ತರ ಚಟುವಟಿಕೆಯಲ್ಲಿ ಕೇಳಬೇಕಾದ ಪ್ರಶ್ನೆಗಳು ಯಾವರೀತಿ ಇರಬೇಕು?*

..................................................................................................................................

..................................................................................................................................

..................................................................................................................................

*3. ಕೆಳಗೆ ಆಟದ ಮೈದಾನದ ಚಿತ್ರವನ್ನು ಕೊಟ್ಟಿದೆ. ಈ ಚಿತ್ರವನ್ನು ನೋಡಿದಾಗ 2 ಮತ್ತು 5ನೇ ತರಗತಿಯ ಮಕ್ಕಳು ಏನು ಹೇಳಬಹುದು?*

..................................................................................................................................

..................................................................................................................................

..................................................................................................................................

### 10.5.2 ಅವಲೋಕನ

ವಿದ್ಯಾರ್ಥಿಗಳಿಗೆ ಕಲಿಸುತ್ತಿರುವಾಗ ಅವರ ಪ್ರತಿಕ್ರಿಯೆಗಳನ್ನು ಗಮನಿಸುತ್ತಿರಬೇಕು ಹಾಗೂ ಅವನ್ನು ದಾಖಲಿಸಬೇಕು. ಮುಂದೆ ಅವರನ್ನು ಮೌಲ್ಯಮಾಪನ ಮಾಡುವ ಹಂತದಲ್ಲಿ ಇದು ಸಹಾಯಕವಾಗುತ್ತದೆ. ಅಂಕ ಅಥವಾ ಶ್ರೇಣಿ ನೀಡುವ ಬದಲು 3 ಅಥವಾ 5ರ ಎಂಬ ಮಾನದಂಡವನ್ನು ಬಳಸಿಕೊಳ್ಳಬಹುದು. ಈ ಕೆಳಕಾಣಿಸಿದ ಮಾದರಿಯಲ್ಲಿ ಕೋಷ್ಟಕವೊಂದನ್ನು ರಚಿಸಿಕೊಳ್ಳಬಹುದು.

| ವಿವರಣೆ ಅಥವಾ ಚಿತ್ರಣ | 1 | 2 | 3 | 4 | 5 |
|---|---|---|---|---|---|
| ಶಬ್ದಜ್ಞಾನ/ಪದಸಾಮರ್ಥ್ಯ | | ✓ | | | |
| ನಿರರ್ಗಳತೆ | | | | ✓ | |
| ವಾಕ್ಯರಚನೆ/ಪದಜೋಡಣೆ | | | ✓ | | |
| ಅಭಿವ್ಯಕ್ತಿ/ಭಾವ | | | | | ✓ |

Notes

ಇದರಲ್ಲಿ 3 – ಸಾಧಾರಣ, 5 – ಅತ್ಯುತ್ತಮ ಎಂದು ಪರಿಗಣಿಸಿಬೇಕು. 2ಕ್ಕಿಂತ ಕಡಿಮೆ ಗಳಿಸಿದರೆ, ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಲು ಹೆಚ್ಚಿನ ಅವಕಾಶಗಳನ್ನು ನೀಡುವ ಅಗತ್ಯವನ್ನು ಶಿಕ್ಷಕ ಮನಗಾಣಬೇಕು.

## 10.5.3 ಲಿಖಿತ ಪರೀಕ್ಷೆ

ಈ ಚಟುವಟಿಕೆಯಲ್ಲಿ ಪ್ರಶ್ನೆಪತ್ರಿಕೆಯನ್ನು ತಯಾರಿಸುವಾಗ ಹೆಚ್ಚಿನ ಗಮನ ಕೊಡುವುದು ಅತ್ಯಂತ ಪ್ರಮುಖವಾಗಿದೆ. ವಿದ್ಯಾರ್ಥಿಯ ಓದುವ ಸಾಮರ್ಥ್ಯ, ಕಲ್ಪನಾ ಶಕ್ತಿ, ಕ್ರಿಯಾಶೀಲತೆ, ನಿರರ್ಗಳವಾಗಿ ಬರೆಯಬಲ್ಲ ಸಾಮರ್ಥ್ಯ, ಮುಕ್ತಅಭಿವ್ಯಕ್ತಿ ಸಾಮರ್ಥ್ಯ, ವ್ಯತ್ಯಾಸಗಳನ್ನು ಅರಿಯುವ, ಹೋಲಿಕೆ ಮಾಡುವ ಸಾಮರ್ಥ್ಯ ಇವೆಲ್ಲ ಅಂಶಗಳನ್ನು ಅಳೆಯಲು ಅನುಕೂಲವಾಗುವ ರೀತಿಯಲ್ಲಿ ಪ್ರಶ್ನೆಪತ್ರಿಕೆಯನ್ನು ತಯಾರು ಮಾಡಬೇಕಾಗುತ್ತದೆ. ಅಂದರೆ ಅದು ಸಾಮರ್ಥ್ಯವನ್ನು ಅರಿಯುವ ಸಾಧನವೇ ಹೊರತು ನೆನಪಿನ ಶಕ್ತಿಯನ್ನು ಅಳೆಯುವ ಸಾಧನವಲ್ಲ. ಮಗುವಿನ ಕಲಿಕೆಗೆ ವಿಮರ್ಶಾತ್ಮಕ ಕನ್ನಡಿ ಹಿಡಿಯುವಂತಿರಬೇಕು. ಕೊಟ್ಟಿರುವ ಪ್ರಶ್ನೆಗಳು ವಿದ್ಯಾರ್ಥಿಯ ಕಲಿಕೆಗೆ ಪೂರಕವೂ, ತನ್ನ ಆಲೋಚನೆಗಳನ್ನು ಮುಕ್ತವಾಗಿ ಬರೆಯುವುದನ್ನು ಪ್ರೋತ್ಸಾಹಿಸುವಂತೆಯೂ ಇರಬೇಕು. ಪ್ರಶ್ನೆಗಳನ್ನು ತಾವೇ ವಿಶ್ಲೇಷಿಸಿಕೊಳ್ಳುವ ಸಾಮರ್ಥ್ಯವು ಇದರಿಂದ ಬೆಳವಣಿಗೆಯಾಗುತ್ತದೆ. ಒಟ್ಟಿನಲ್ಲಿ ಪಠ್ಯದಲ್ಲಿರುವುದನ್ನೇ ಉರುಹೊಡೆದು ಬರೆದ ಉತ್ತರಗಳಂತಿರದೇ, ಮಕ್ಕಳು ತಮ್ಮದೇ ಸ್ವಂತ ವಾಕ್ಯಗಳ ಮೂಲಕ ತಮ್ಮ ಉತ್ತರಗಳನ್ನು ಬರೆಯುವುದನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಪ್ರಶ್ನೆಗಳು ರಚಿತವಾಗಿರಬೇಕು.

## 10.5.4 ಉಕ್ತಲೇಖನ

ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಅಳೆಯುವಲ್ಲಿ ಉಕ್ತಲೇಖನವು ಉತ್ತಮ ಸಾಧನವಾಗಬಲ್ಲದು. ಜೊತೆಗೆ, ಗಮನವಿಟ್ಟು ಆಲಿಸುವ, ಭಾವನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವ ವಿಧಾನವೂ ಆಗಿದೆ. ಈಗಿನ ಕಲಿಕೆಯ ವಾತಾವರಣದಲ್ಲಿ ಮಕ್ಕಳ ಸಾಮರ್ಥ್ಯವನ್ನು ಅಳೆಯಲು ಉಕ್ತಲೇಖನ ಮಾನದಂಡವಲ್ಲವಾದರೂ, ಭಾಷಾ ಕಲಿಕೆಯ ಒಂದು ಪ್ರಮುಖ ಸಾಧನವಂತೂ ಹೌದು. ಗಮನವಿಟ್ಟು ಆಲಿಸುವ ಹಾಗೂ ಬರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಇದು ಸಹಾಯಕವಾಗಿದೆ. ಕಲಿಯುವವರ ಸಾಮರ್ಥ್ಯಕ್ಕೆ ಅನುಗುಣವಾಗಿ ಯೋಜನೆಯನ್ನು ರೂಪಿಸಲೂ ಇದು ಪೂರಕ ವಿಧಾನವಾಗಿದೆ. 3ನೆ ತರಗತಿಯ ಹಂತದಿಂದ ಅಭ್ಯಾಸ ಪದ್ಧತಿಯಾಗಿ ಇದನ್ನು ಅಳವಡಿಸಿಕೊಳ್ಳಬಹುದಾಗಿದೆ. ಮಕ್ಕಳ ಸಾಮರ್ಥ್ಯವನ್ನು ಒಂದು ಹಂತ ಮೀರಿದ ಪರಿಪೂರ್ಣ ಅರ್ಥವನ್ನು ನೀಡುವ ವಿಷಯವನ್ನು ಆರಿಸಿಕೊಳ್ಳಬೇಕು. ನಿರ್ದಿಷ್ಟ ಸಮಯದ ಪರಿಮಿತಿಯೊಳಗೆ ನಡೆಸಬಹುದಾದ ಚುವಟಿಕೆ ಉಕ್ತಲೇಖನ. ಈ ಕೆಳಗಿನ ಹಂತಗಳಲ್ಲಿ ಅದನ್ನು ವಿಂಗಡಿಸಬಹುದು:

ಹಂತ 1: ಆಯ್ಕೆ ಮಾಡಿಕೊಂಡಿರುವ ಪಠ್ಯವನ್ನು ಶಿಕ್ಷಕನು ಸ್ಪಷ್ಟವಾದ ಧ್ವನಿಯ ಏರಿಳಿತಗಳ ಸಹಾಯದಿಂದ ಹದವರಿತ ವೇಗದಲ್ಲಿ ಓದಬೇಕು. ಹಾಗೆ ಓದುವಾಗ, ಕಲಿಯುವವರು ಬರೆಯುವ ಬದಲಿಗೆ ಕೇವಲ ಸರಿಯಾಗಿ ಕೇಳಿಸಿಕೊಳ್ಳುವ ಕೆಲಸವನ್ನಷ್ಟೇ ಮಾಡಬೇಕು. ಇದರಿಂದ ಪಠ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ ಹಾಗೂ ಮಾನಸಿಕವಾಗಿ ಮುಂದಿನ ಚಟುವಟಿಕೆಗೆ ಸಿದ್ಧವಿರಲು ಅನುಕೂಲವಾಗುತ್ತದೆ.

ಹಂತ 2: ಈಗ ಮಕ್ಕಳಿಗೆ ಬರೆದುಕೊಳ್ಳು ಅನುಕೂಲವಾಗುವ ವೇಗದಲ್ಲಿ, ನಿಧಾನವಾಗಿ, ಸ್ಪಷ್ಟವಾಗಿ ಅದೇ ಪಠ್ಯವನ್ನು ಪುನಃ ಶಿಕ್ಷಕನು ಓದಬೇಕು.

Notes

ಹಂತ 3:

ಇಲ್ಲಿ ಕೂಡಾ ಶಿಕ್ಷಕನು ಮತ್ತೊಮ್ಮೆ ನಿಧಾನವಾಗಿ ಓದುವ ಕೆಲಸವನ್ನು ಪುನರಾವರ್ತಿಸಬೇಕು. ಇದರಿಂದ ತಪ್ಪಾಗಿ ಬರೆದುಕೊಂಡಿದ್ದರೆ, ಬಿಟ್ಟುಹೋಗಿದ್ದರೆ ಬರೆದುಕೊಳ್ಳಲು ಮಕ್ಕಳಿಗೆ ಸಹಾಯವಾಗುತ್ತದೆ. ಪ್ರತಿ ಓದುವಿಕೆಗೂ ನಡುವೆ 6–8 ನಿಮಿಷಗಳ ಅಂತರವಿರಬೇಕು. ಇದರಿಂದ ಆದ ತಪ್ಪುಗಳನ್ನು ತಿದ್ದಿಕೊಂಡು, ತಾವೇ ಸ್ವತಃ ನಿರ್ಣಯ ಕೈಗೊಳ್ಳುವ ಸಾಮರ್ಥ್ಯ ಉಂಟಾಗುತ್ತದೆ. ತಮ್ಮ ಪುಸ್ತಕದಲ್ಲಿ ತಮ್ಮ ತಪ್ಪುಗಳನ್ನು ಗುರುತಿಸಿಕೊಳ್ಳುವುದರಿಂದ ಶಿಕ್ಷಕನಿಗೂ ಮಕ್ಕಳ ಕಲಿಕೆಯ ಬಗ್ಗೆ ಒಂದು ಅಂದಾಜು ಚಿತ್ರಣ ಸಿಗುತ್ತದೆ. ಅವರು ಮಾಡಿದ ದೊಡ್ಡ ಪ್ರಮಾಣದ ತಪ್ಪುಗಳನ್ನು ಹುಡುಕಿ, ತಿದ್ದಿ, ಮುಂದಿನ ಪಠ್ಯದ ಯೋಜನೆಗಳಲ್ಲಿ ಅವುಗಳನ್ನು ನಮೂದಿಸಿಕೊಳ್ಳಬೇಕು. ಇದರಿಂದ ಮಕ್ಕಳಿಗೂ, ಶಿಕ್ಷಕರಿಗೂ ಇಬ್ಬರಿಗೂ ಅನುಕೂಲ. ಆದ ತಪ್ಪು ಮತ್ತು ಅದನ್ನು ತಿದ್ದಿಕೊಳ್ಳುವ ಬಗೆ ಎರಡೂ ಅರ್ಥವಾಗುತ್ತವೆ.

**ಪ್ರಗತಿಯ ಪರಿಶೀಲನೆ – 5**

1. *ಆಲಿಸುವ – ಮಾತಾಡುವ ಕೌಶಲವನ್ನು ಅಳೆಯಲು*

   *ಎ. ಮಾತಾಡಬೇಕು*

   *ಬಿ. ಆಲಿಸಬೇಕು*

   *ಸಿ. ಆಲಿಸುವುದು ಮಾತಾಡುವುದು ಎರಡನ್ನೂ ಮಾಡಬೇಕು*

   *ಡಿ. ಉಕ್ತಲೇಖನ ಅಥವಾ ಹೇಳಿ ಬರೆಯಿಸುವುದು*

2. *ಮೌಖಿಕ ಪರೀಕ್ಷೆಯಲ್ಲಿ ಪರೀಕ್ಷಿಸಲಾಗುವ ಅಂಶಗಳು ಯಾವುವು?*

   ..................................................................................................................

   ..................................................................................................................

   ..................................................................................................................

3. *ಶಿಕ್ಷಕನೊಬ್ಬ ತನ್ನ ಗೆಳೆಯನ ಜೊತೆಗೆ ಮಾತಾಡುತ್ತಾ, 'ಒಂದು ಮಗುವು ಬ ರೆದಿರುವ ಉತ್ತರ ಸರಿಯಾಗಿಯೇ ಇದೆ. ಆದರೆ ನಾನು ಹೇಳಿಕೊಟ್ಟಂತೆ ಇಲ್ಲ. ಈಗ ಅಂಕಗಳನ್ನು ಕಡಿಮೆ ಮಾಡುವುದೋ ಅಥವಾ ಕೊಡುವುದೋ?' ಎಂದು ಕೇಳಿದರೆ, ಇಂತಹ ಶಿಕ್ಷಕರಿಗೆ ನೀವು ಏನು ಹೇಳಲು ಬಯಸುತ್ತೀರಿ?*

   ..................................................................................................................

   ..................................................................................................................

   ..................................................................................................................

4. *ಉಕ್ತಲೇಖನದ ಬಳಕೆಯ ಕುರಿತಾಗಿ ಹೊಸದೇನಾದರೂ ನಿಮಗೆ ತಿಳಿದಿದೆಯೇ? ಚರ್ಚಿಸಿ.*

   ..................................................................................................................

   ..................................................................................................................

   ..................................................................................................................

Notes

## 10.6. ಗದ್ಯ, ಪದ್ಯ ಹಾಗೂ ನಾಟಕವನ್ನು ಪರಿಶೀಲಿಸಲು ಚಟುವಟಿಕೆಗಳು

ಈವರೆಗೆ ಸಾಮರ್ಥ್ಯಗಳನ್ನು ಪರೀಕ್ಷಿಸುವ ವಿಧಾನಗಳನ್ನು ಕಲಿತೆವು. ಈಗ, ಗದ್ಯ, ಪದ್ಯ ಹಾಗೂ ನಾಟಕದ ಉದಾಹರಣೆಗಳ ಮೂಲಕ ಯಾವ ಬಗೆಯ ಮೌಖಿಕ ಹಾಗೂ ಲಿಖಿತ ಪ್ರಶ್ನೆಗಳನ್ನು ಕೇಳಬಹುದು ಹಾಗೂ ಯಾವ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳಬಹುದು ಎಂಬುದನ್ನು ನೋಡೋಣ. ಕೆಲವು ವಿಧಾನಗಳು ಈ ಕೆಳಗಿನಂತಿವೆ:

### 10.6.1 ವಾಕ್ಯವೃಂದ ಅಥವಾ ಪ್ಯಾರಾಗ್ರಾಫ್

ಕ್ಲೋಜ್ ಟೆಸ್ಟ್ ಅಥವಾ ಸರಳ ಪರೀಕ್ಷೆ

ಕ್ಲೋಜ್ ಟೆಸ್ಟ್ ಭಾಷಾನೈಪುಣ್ಯವನ್ನು ಪರೀಕ್ಷಿಸಲು ಇರುವ ಒಂದು ಉತ್ತಮ ಸಾಧನ. ಭಾಷೆಯ ಮೇಲಿನ ಎಲ್ಲ ಬಗೆಯ ಹಿಡಿತ, ನೈಪುಣ್ಯವನ್ನು ಅಳೆಯಲು ಇದನ್ನು ಬಳಸುತ್ತಾರೆ. ಇಲ್ಲಿ, ಶಬ್ದಗಳು ಮರೆಯಾಗಿರುವ ವಾಕ್ಯಗಳನ್ನು ಕೊಟ್ಟು, ಹಾಗೆ ಬಿಟ್ಟುಹೋಗಿರುವ ಖಾಲಿ ಜಾಗದಲ್ಲಿ ಸೂಕ್ತ ಶಬ್ದಗಳನ್ನು ಭರ್ತಿಮಾಡಲು ತಿಳಿಸಲಾಗುತ್ತದೆ.

ಕ್ಲೋಜ್ ಟೆಸ್ಟ್ ಅಥವಾ ಸರಳ ಪರೀಕ್ಷೆಯನ್ನು ನಡೆಸುವ ವಿಧಾನ
ಆಯ್ಕೆಮಾಡಿಕೊಂಡ ಪ್ಯಾರಾವು ವಿಷಯವಸ್ತು ಹಾಗೂ ಪರಿಪೂರ್ಣವಾಗಿರಬೇಕು. ಅದರಲ್ಲಿರುವ ಪಠ್ಯವು ಆಸಕ್ತಿದಾಯಕವಾಗಿದ್ದು, ಸವಾಲುಗಳಿಂದ ಕೂಡಿರಬೇಕು. ಮೊದಲ ಸಾಲನ್ನು ಹಾಗೆಯೇ ಉಳಿಸಿಕೊಂಡು, ಎರಡನೆಯ ಸಾಲಿನಲ್ಲಿ ಯಾವುದಾದರೂ ಐದು ಶಬ್ದಗಳನ್ನು ತೆಗೆದುಹಾಕಬೇಕು. ಪ್ರತಿ ಪರೀಕ್ಷೆಯಲ್ಲಿಯೂ ಕನಿಷ್ಠ 20 ಸ್ಥಳಗಳನ್ನು ಖಾಲಿ ಬಿಟ್ಟಿರಬೇಕು. ಪದಗಳನ್ನು ತೆಗೆದು ಹಾಕಲು ಮಿರುವ ಮತ್ತೊಂದು ಮಾರ್ಗವೆಂದರೆ, ಯಾವುದೇ ಒಂದು ನಿರ್ದಿಷ್ಟ ವರ್ಗದಿಂದ ಪದಗಳನ್ನು ತೆಗೆದುಹಾಕುವುದು.

ಉದಾಹರಣೆಗೆ, ಕೆಲವೊಂದು ಕ್ರಿಯಾಪದಗಳು, ನಾಮಪದಗಳು, ಗುಣವಾಚಕಗಳು ಅಥವಾ ವಿಶೇಷಣಗಳು ಮುಂತಾದುವನ್ನು ತಿದ್ದುಪಡಿ ಮಾಡಲಾದ ಪರೀಕ್ಷೆಯಲ್ಲಿ ತೆಗೆದುಹಾಕಬಹುದು. ಮಕ್ಕಳ ಸಾಮರ್ಥ್ಯವನ್ನು ಅಳೆಯುವಾಗ ಇವು ನಮಗೆ ಸಹಾಯಕವಾಗುತ್ತವೆ ಹಾಗೂ ಪಠ್ಯವಿಧಾನವನ್ನು ರೂಪಿಸಿಕೊಳ್ಳಲು ನೆರವಾಗುತ್ತವೆ. ಕೊಟ್ಟಿರುವ ಬರವಣಿಗೆಯನ್ನು ಅಥವಾ ಪ್ಯಾರಾವನ್ನು 2–3 ಸಲ ಓದಿ, ಚೆನ್ನಾಗಿ ಅರ್ಥಮಾಡಿಕೊಂಡ ನಂತರವೇ ಖಾಲಿಸ್ಥಳಗಳನ್ನು ಭರ್ತಿಮಾಡುವುದಕ್ಕೆ ಪ್ರಾರಂಭಿಸಬೇಕು ಎನ್ನುವ ಸೂಚನೆಯನ್ನು ನೀಡಬೇಕು. ಪ್ರತಿ ಖಾಲಿ ಜಾಗದಲ್ಲಿ ಒಂದೇ ಪದವನ್ನು ಬರೆಯಲು ತಿಳಿಸಬೇಕು. ಮೂರನೆಯ ತರಗತಿಯಿಂದ ಈ ಪರೀಕ್ಷೆಯನ್ನು ನಡೆಸಬಹುದು. ಶಿಕ್ಷಕರು ಮೊದಮೊದಲು ಸರಳವಾಗಿಯೇ ನಡೆಸಿ, ಬಳಿಕ ಕಠಿಣ ಪರೀಕ್ಷೆಗಳನ್ನು ನಡೆಸಬಹುದಾಗಿದೆ. ಎರಡು ವಿಧಾನಗಳಲ್ಲಿ ಈ ಪರೀಕ್ಷೆಯನ್ನು ನಡೆಸಬಹುದು. ಮೊದಲ ಹಂತದಲ್ಲಿ ಕೊಟ್ಟಿರುವ ಪದಗಳಿಗೆ ಹೊಂದುವ ಪದಗಳನ್ನು ಮಾತ್ರ ಗುರುತಿಸಿ ಬರೆಯುವ ಮೂಲಕ ಹಾಗೂ ಮೂಲ ಪ್ಯಾರಾದಲ್ಲಿ ಇರುವ ಪದಗಳಿಗೆ ಹೊಂದಿಕೆಯಾಗುವ ಪದಗಳನ್ನು ಬರೆಯಬಲ್ಲರೆಂದು ನಿರೀಕ್ಷಿಸುವುದು.
ಇಂತಹ ಪರೀಕ್ಷೆಯ ಒಂದು ನಿದರ್ಶನವನ್ನು ಈ ಕೆಳಗೆ ನೀಡಲಾಗಿದೆ:

ಕೊಳದಲ್ಲಿನ ಆಮೆ ಮತ್ತು ಗುಹೆಯಲ್ಲಿನ ನರಿ ಇಬ್ಬರೂ ಗೆಳೆಯರಾಗಿದ್ದವು. ಒಮ್ಮೆ ಅವೆರಡೂ ಹರಟುತ್ತಿರುವಾಗ ಒಂದು ಚಿರತೆಯು ಅಲ್ಲಿಗೆ ಬಂದಿತು. ನರಿ ಭಯದಿಂದ ಕಾಲುಕಿತ್ತಿತು. ಪಾಪದ ಆಮೆಗೆ ವೇಗವಾಗಿ ಓಡಿ ತಪ್ಪಿಸಿಕೊಳ್ಳಲು ಆಗಲಿಲ್ಲ. ಅಷ್ಟರಲ್ಲಿ ಚಿರತೆ ಒಂದೇ ಏಟಿಗೆ ಅದನ್ನು ಕಚ್ಚಿಹಿಡಿದು,

Notes

ಮರದ ಕೆಳಗೆ ಕುಳಿತು ತಿನ್ನಲು ಅಣಿಯಾಯಿತು. ಆದರೆ ಕಾಲಿನ ಪಂಜುಗಳಾಗಲಿ, ಬಾಯಿಯ ಕೋರೆ ಹಲ್ಲುಗಳಿಂದಾಗಲಿ ಆಮೆಯನ್ನು ಕಚ್ಚುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನೆಲ್ಲವನ್ನೂ ತನ್ನ ಗುಹೆಯೊಳಗೇ ಅವಿತು ನೋಡುತ್ತಿದ್ದ ನರಿಗೆ ಆಮೆಯ ಸ್ಥಿತಿಯನ್ನು ಕಂಡು ಮರುಕವೆನಿಸಿ ಹೊರಕ್ಕೆ ಬಂದು ಚಿರತೆಗೆ ಹೇಳಿತು. ಆಮೆಯ ಚಿಪ್ಪನ್ನು ಒಡೆದು ತಿನ್ನಲು ನಿನಗೊಂದು ಉಪಾಯ ಹೇಳುತ್ತೇನೆ. ಸುಮ್ಮನೆ ಅದನ್ನು ನೀರಿನಲ್ಲಿ ಎಸೆದು ಬಿಡು. ಅದರಲ್ಲಿ ನೆನೆದರೆ ಕೆಲವೇ ನಿಮಿಷಗಳಲ್ಲಿ ಅದರ ಕವಚ ಮೆತ್ತಗಾದೀತು. ಆಗ ತಿನ್ನಬಹುದು' ಎಂದಿತು.

ಮೂರ್ಖ ಚಿರತೆ, ಅರೆ ನನಗೆ ಹೊಳೆಯಲೇ ಇಲ್ಲ. ಎಂಥಾ ಉಪಾಯ ಕೊಟ್ಟೆ ನೀನು! ಎಂದು ಹೇಳುತ್ತ ಆಮೆಯನ್ನು ಕೊಳಕ್ಕೆಸೆಯಿತು. ಇದಕ್ಕಿಂತ ಹೆಚ್ಚೇನು ಬೇಕಿದ್ದಿತು ಆಮೆಗೆ?!

## ಕ್ಲೋಜ್ ಪರೀಕ್ಷೆ

ಕೊಳದಲ್ಲಿನ ಆಮೆ ಮತ್ತು ಗುಹೆಯಲ್ಲಿನ ನರಿ ಇಬ್ಬರೂ ಗೆಳೆಯರಾಗಿದ್ದವು. ಒಮ್ಮೆ ಅವೆರಡೂ ಹರಟುತ್ತಿರುವಾಗ 1________ ಅಲ್ಲಿಗೆ ಬಂದಿತು. ನರಿ ಭಯದಿಂದ 2________ ಪಾಪದ ಆಮೆಗೆ ವೇಗವಾಗಿ 3________ ಆಗಲಿಲ್ಲ. ಅಷ್ಟರಲ್ಲಿ 4__________ ಅದನ್ನು ಕಚ್ಚಿಹಿಡಿದು, ಮರದ ಕೆಳಗೆ ಕುಳಿತು ತಿನ್ನಲು ಅಣಿಯಾಯಿತು. ಆದರೆ ಕಾಲಿನ5 _______, ಬಾಯಿಯ 6__________ ಆಮೆಯನ್ನು ಕಚ್ಚುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನೆಲ್ಲವನ್ನೂ 7__________ ಅವಿತು ನೋಡುತ್ತಿದ್ದ ನರಿಗೆ ಆಮೆಯ ಸ್ಥಿತಿಯನ್ನು ಕಂಡು 8________ ಹೊರಕ್ಕೆ ಬಂದು ಚಿರತೆಗೆ ಹೇಳಿತು.
9_________ ಒಡೆದು ತಿನ್ನಲು ನಿನಗೊಂದು ಉಪಾಯ ಹೇಳುತ್ತೇನೆ. ಸುಮ್ಮನೆ ಅದನ್ನು10 _______ ಎಸೆದು ಬಿಡು. ಅದರಲ್ಲಿ ನೆನೆದರೆ ಕೆಲವೇ ನಿಮಿಷಗಳಲ್ಲಿ ಅದರ 11__________ ಆಗ ತಿನ್ನಬಹುದು' ಎಂದಿತು.
ಮೂರ್ಖ ಚಿರತೆ, 'ಅರೆ 12 _________ ಇಲ್ಲ. ಎಂಥಾ 13_______ ಕೊಟ್ಟೆ ನೀನು!' ಎಂದು ಹೇಳುತ್ತ ಆಮೆಯನ್ನು 14________ಎಸೆಯಿತು. ಆಮೆಗೆ ಇದಕ್ಕಿಂತ ಹೆಚ್ಚೇನು ಬೇಕಿದ್ದಿತು?!

**ಕೊಟ್ಟಿರುವ ಪ್ಯಾರಾವನ್ನು ಅಳೆಯಲು ಚಟುವಟಿಕೆಗಳು**

- ಮೇಲಿನ ಕತೆಯನ್ನು ನಿಮ್ಮ ಆಡುಭಾಷೆ ಅಥವಾ ಮಾತೃಭಾಷೆಯಲ್ಲಿ ಬರೆಯಿರಿ.

- ಕತೆಗೆ ಒಂದು ಶೀರ್ಷಿಕೆಯನ್ನು ಸೂಚಿಸಿ. – ಈ ಚಟುವಟಿಕೆಯನ್ನು ಮಕ್ಕಳು ಮಾಡುತ್ತಿರುವಾಗ ಶಿಕ್ಷಕನು ಅದೇ ಶೀರ್ಷಿಕೆಯನ್ನು ಅವರು ಆರಿಸಲು ಕಾರಣವನ್ನು ಕೇಳಬೇಕು ಹಾಗೂ ಸೂಕ್ತ ಶೀರ್ಷಿಕೆ ಯಾವುದು ಎಂಬುದನ್ನು ಚರ್ಚಿಸಬೇಕು.

- ಪ್ರಶ್ನೆಗಳನ್ನು ತಯಾರಿಸಬೇಕು.

ಇದನ್ನು ಒಬ್ಬೊಬ್ಬರೇ ಮಾಡಬಹುದು ಅಥವಾ ಗುಂಪುಗಳಾಗಿ ವಿಂಗಡಿಸಿಕೊಂಡು ಮಾಡಬಹುದು. ಒಬ್ಬರು ಪ್ರಶ್ನೆಯನ್ನು ರಚಿಸಿದರೆ ಮತ್ತೊಬ್ಬರು ಅದಕ್ಕೆ ಉತ್ತರವನ್ನು ಕೊಡಬಹುದು. ಕೆಲವು ಪ್ರಶ್ನೆಗಳನ್ನು ಈ ರೀತಿ ತಯಾರಿಸಲಾಗಿದೆ.

## ಮೌಲ್ಯಮಾಪನ

1. ನರಿಯು ಭಯದಿಂದ ಓಡಿಹೋಗಿದ್ದೇಕೆ?
2. ಆಮೆಯನ್ನು ನೀರಿಗೆಸೆದುಬಿಡಬೇಕು ಎಂದು ನರಿಯು ಚಿರತೆಗೇಕೆ ಹೇಳಿತು?
3. ಚಿರತೆ ಆಮೆಯನ್ನು ಹಿಡಿದದ್ದೇಕೆ?
4. ಕತೆಯಲ್ಲಿ ಚಿರತೆಯನ್ನು ಮೂರ್ಖಚಿರತೆ ಎನ್ನಲಾಗಿದೆ. ಏಕೆ?
5. ನಿಮ್ಮದೇ ಮಾತುಗಳಲ್ಲಿ ಚಿರತೆ ಮತ್ತು ನರಿಗಳ ನಡುವಿನ ಸಂಭಾಷಣೆಯನ್ನು ಬರೆಯಿರಿ.
6. ಕತೆಯಲ್ಲಿ ಗಾದೆಗಳು ಅಥವಾ ನುಡಿಗಟ್ಟುಗಳನ್ನು ಬಳಸಿದ್ದರೆ ಅವನ್ನು ಪಟ್ಟಿ ಮಾಡಿ ಹಾಗೂ ನಿಮ್ಮದೆ ಸ್ವಂತ ವಾಕ್ಯದಲ್ಲಿ ಬರೆಯಲು ಪ್ರಯತ್ನಿಸಿ.
7. ಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

ಕತೆಯಲ್ಲಿ ಬರುವ ಇತರೆ ದೃಶ್ಯಗಳ ಬಗ್ಗೆಯೂ ಗುಂಪುಗಳನ್ನು ಮಾಡಿ, ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಬಹುದು.

### 10.6.2 ಪದ್ಯ

ಮೆಚ್ಚಿನಗೆಳೆಯ

ಮೇಲೆ ಕೆಳಗೆ ಸುತ್ತಲೂ ಮುತ್ತಲೂ
ನೆಲದ ಮೇಲೆಯೂ ನನ್ನದೇ ನೆರಳು
ನಾನು ಮಾಡುವುದನು ತಾನೂ ಮಾಡುತ
ಒಬ್ಬರು ಜಾಗದಿ ಇಬ್ಬರು ಮೂಡುತ
ಸಾಗರತೀರದಿ ಓಡಲು ನಾನು
ನೆರಳದು ತಾನೂ ಓಡುವುದು
ಕಟ್ಟಲು ನಾನು ಮರಳಿನ ಅರಮನೆ
ಪಕ್ಕದಲಿರುವುದು ನೆರಳಿನ ಅರಮನೆ
ಎತ್ತರ ಮರವನು ನಾನೇರಿದರೆ
ಹಿಂದೆಯೇ ಇರುವುದು ಈ ನೆರಳು
ಆದರೆ ಕತ್ತಲು ನುಂಗಿಯೇ ಬಿಟ್ಟಿತು
ಅಥವಾ ಹೆದರಿತೆ ನೆರಳದಕೆ?

– ಮೇ ಪಿಂಚಾನ್

1. ಮೇಲಿನ ಪದ್ಯದ ಮೌಲ್ಯಮಾಪನವನ್ನು ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ನಡೆಸಬಹುದು.
    1. ರಾಜೇಶನ ಮೆಚ್ಚಿನಗೆಳೆಯ ಯಾರು?
    2. ರಾಜೇಶನ ಮೆಚ್ಚಿನಗೆಳೆಯ ರಾತ್ರಿವೇಳೆ ಎಲ್ಲಿದ್ದನು?
    3. ನಿಮಗೂ ಅಂತಹ ಸ್ನೇಹಿತನಿದ್ದಾನೆಯೇ?

Notes

Notes

4. ನೀವು ಮಾಡುವುದನ್ನೇ ನಿಮ್ಮ ನೆರಳು ಮಾಡುವುದೇ?

ಸರಿಯಾದ ಉತ್ತರವನ್ನು ಗುರುತಿಸಿ.

1. ರಾಜೇಶನ ನೆರಳು ಮೂಡುವುದು
   ಎ. ಮಳೆ ಬಂದಾಗ
   ಬಿ. ಅವನ ಮೇಲೆ ಬೆಳಕು ಬಿದ್ದಾಗ
   ಸಿ. ಕತ್ತಲಾದಾಗ
   ಡಿ. ಮೇಲಿನ ಯಾವುದೂ ಅಲ್ಲ
2. ಅವನು ನೆರಳು ಕಳೆದುಹೋಗುವುದು
   ಎ. ಸಮುದ್ರದ ದಂಡೆಯ ಮೇಲೆ
   ಬಿ. ಮೈದಾನದಲ್ಲಿ
   ಸಿ. ಕೈತೋಟದಲ್ಲಿ
   ಡಿ. ಮರೆಯಲ್ಲಿ

3. ತರಗತಿಯಲ್ಲಿ ಅಭಿನಯಿಸಿ:
   ಎ. ಏರುವುದೆಂದರೆ ಮೇಲಕ್ಕೆ ಹೋಗುವುದು ಅಥವಾ ಹತ್ತುವುದು. ನೀವು ಮೇಲೆ ಏರುವುದನ್ನು ಹೇಗೆ ಅಭಿನಯಿಸುವಿರಿ?
   ಬಿ. ಬೆಳಕು ಚಲಿಸುತ್ತಿರುವಾಗ ನೆರಳು ಹೇಗೆ ಇರುವುದೆಂಬುದನ್ನು ಅಭಿನಯಿಸಿ ತೋರಿಸಿ.

4. ನೆರಳು ಏನು ಮಾಡುವುದೆಂಬುದನ್ನು ಸೂಚಿಸುವ ಶಬ್ದಗಳು ಕವನದಲ್ಲಿ ಎಲ್ಲಿ ವ್ಯಕ್ತವಾಗಿವೆ?
5. ನೆರಳಿನ ಚಟುವಟಿಕೆಗಳು

ಎ. ನೆರಳುಗಳು ಹೇಗೆ ಉಂಟಾಗುವವೆಂಬುದು ನಿಮಗೆ ಗೊತ್ತೇ?

ಬೆಳಕಿಗೆ ಅಡ್ಡವಾಗಿ ಯಾವುದಾದರೊಂದು ವಸ್ತು ಇರುವಾಗ ನೆರಳು ಉಂಟಾಗುತ್ತದೆ. ನೀವೂ ಅದನ್ನು ಮಾಡಿನೋಡಬಹುದು.

1. ಕತ್ತಲೆ ಕೋಣೆಯಲ್ಲಿ ಗೋಡೆಗೆದುರಾಗಿ ನಿಂತುನೋಡಿ.
2. ನಿಮ್ಮಮೇಲೆ ಟಾರ್ಚಿನ ಬೆಳಕನ್ನು ಬೀಳಿಸಲು ಬೇರೆಯವರಿಗೆ ತಿಳಿಸಿ.
3. ನಿಮ್ಮ ನೆರಳು ಗೋಡೆಯ ಮೇಲೆ ಮೂಡುವುದು
4. ನಿಮ್ಮ ಕೈಗಳನ್ನು ಬಳಸಿಕೊಂಡು ಗೋಡೆಯ ಮೇಲೆ ನೆರಳಿನ ಚಿತ್ರಗಳನ್ನು, ಗೊಂಬೆಗಳನ್ನು ಸೃಷ್ಟಿಸಿ ನೋಡಿ.



## ಮೌಲ್ಯಮಾಪನ

ಬಿ. ನಿಮ್ಮ ನೆರಳು ಹೇಗೆ ಕಾಣುವುದೆಂಬುದನ್ನು ನೀವು ನೋಡಬೇಕೇ? ಹಾಗಿದ್ದರೆ, ನಿಮ್ಮ ನೆರಳನ್ನು ನೀವೇ ರಚಿಸಬಹುದು.

1. ಒಂದು ಖಾಲಿ ಹಾಳೆಯನ್ನು ತೆಗೆದುಕೊಂಡು ಗೋಡೆಯ ಮೇಲೆ ಅಚಿಟಿಸಿ.
2. ಗೋಡೆಗೆದುರಾಗಿ ನಿಂತುಕೊಳ್ಳಿ
3. ನಿಮ್ಮಮೇಲೆ ಟಾರ್ಚಿನ ಬೆಳಕನ್ನು ಬೀಳಿಸಲು ಬೇರೆಯವರಿಗೆ ತಿಳಿಸಿ.
4. ಮತ್ತೊಬ್ಬರಿಗೆ ಗೋಡೆಯ ಮೇಲೆ ಮೂಡಿದ ನೆರಳನ್ನು ಗೆರೆಯೆಳೆದು ಗುರುತು ಮಾಡಲು ತಿಳಿಸಿ



### 10.6.3 ನಾಟಕ

ಯಾವುದೇ ನಾಟಕವನ್ನು ನಾವು ಅಭಿನಯಿಸಬಹುದು ಅಥವಾ ಬರೆಯಬಹುದು. ವಿದ್ಯಾರ್ಥಿಯು ತಾನು ಬರೆದಿರುವ ನಾಟಕದ ಮೂಲಕ ಹೇಳಬೇಕಾದ ಅಥವಾ ವ್ಯಕ್ತಪಡಿಸಬೇಕಾದ ಭಾವನೆಗಳನ್ನು, ವಿಷಯಗಳನ್ನು ಪರಿಣಾಮಕಾರಿ ಸಂಭಾಷಣೆಗಳ ಮೂಲಕ ಪ್ರಸ್ತುತಪಡಿಸಿದ್ದಾನೆ/ಳೆ ಎಂಬುದರ ಮೇಲೆ ಅವರಿಗೆ ನೀಡಬೇಕಾದ ಅಂಕಗಳನ್ನು ನಿರ್ಧರಿಸಲಾಗುತ್ತದೆ. ಸರಿಯಾದ ರೀತಿಯಲ್ಲಿ ಮಾತುಗಳು ಹೊರಹೊಮ್ಮಿವೆಯೇ? ಆಕೆ ಅಥವಾ ಆತ ನಾಟಕದಲ್ಲಿ ಬಳಸಿದ ಶಬ್ದಗಳ ಹೊರತಾಗಿ ಬೇರೆ ರೀತಿ ಶಬ್ದಬಳಕೆ ಮಾಡಿದ್ದಾರೆಯೇ ಅಥವಾ ಅದರಲ್ಲಿರುವ ಹಾಗೆಯೇ ಮಾತಾಡಿದ್ದಾರೆಯೇ ಎಂಬುದನ್ನು ಪರೀಕ್ಷಕರು ಗಮನಿಸಬೇಕಾಗುತ್ತದೆ. ಸಂಭಾಷಣೆಗಳು ಸರಳವಾಗಿವೂ, ಚುರುಕಾಗಿಯೂ, ಆಸಕ್ತಿದಾಯಕವೂ ಆಗಿವೆಯೇ? ಇವೆಲ್ಲವನ್ನೂ ನಾಟಕವನ್ನು ಪರೀಕ್ಷಿಸುವಾಗ ಮೂಡಬೇಕಾದ ಅಂಶಗಳು.

ಹಾಡುಗಾರ ರಾಮು

ಪಾತ್ರಗಳು

ರಾಮು – ಹಾಡುಗಾರ

ಮಧು – ರಾಮನ ಹೆಂಡತಿ

ನೆರೆಹೊರೆಯವರು

Notes

Notes

ರಾಮು: (ತನ್ನ ಹಾರ್ಮೋನಿಯಂ ಪೆಟ್ಟಿಗೆಯನ್ನಿಟ್ಟುಕೊಂಡು ಹಾಡುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಾನೆ)
ಸ ರಿ ಗ ಮ ಪ ದ ನಿ ಸ ಸಾ ನಿ ದ ಪ ಮ ಗ ರಿ ಸ

ಮೊದಲ ವ್ಯಕ್ತಿ: (ರಾಮನ ಹೆಂಡತಿಯ ಹತ್ತಿರ) ಮಧು, ನಿನ್ನ ಗಂಡನಿಗೆ ಹಾಡೋದನ್ನ ನಿಲ್ಲಿಸು ಅಂತ ಹೇಳು. ತಲೆ ಸಿಡಿದು ಹೋಗುತ್ತಾ ಇದೆ.

ಎರಡನೆಯ ವ್ಯಕ್ತಿ: ತನ್ನನ್ನು ತಾನು ಮಹಾನ್ ಗಾಯಕ ಅಂತ ಅನ್ಕೊಂಡಿದಾನೇನೋ? ನಿಜ ಏನೂಂದ್ರೆ ಅವನು ಹಾಡೋದು ಭಯಂಕರವಾಗಿದೆ!

ಮೂರನೆಯ ವ್ಯಕ್ತಿ: ಅವನಿಗೆಲ್ಲಿ ಬರುತ್ತೆ ಹಾಡೋಕೆ? ಕಪ್ಪೆ ಥರಾ ಅರಚಿಕೊಳ್ತಾ ಇದಾನೆ ಅಷ್ಟೇ!

ನಾಲ್ಕನೆಯ ವ್ಯಕ್ತಿ: ಅಬ್ಬಾ! ಎಷ್ಟು ಕೆಟ್ಟದಾಗಿ ಹಾಡ್ತಾ ಇದಾನೇಂದ್ರೆ!
(ಎಲ್ಲರೂ ಹೋಗುವರು)

ರಾಮು: (ಹಾಡುವುದನ್ನು ಮುಂದುವರಿಸುತ್ತ) ಸ ರಿ ಗ ಮ ಪ ದ ನಿ ಸ
ಸಾ ನಿ ದ ಪ ಮ ಗ ರಿ ಸ
ಸಾಆಆಆಆಆಆಆಆಆಆಆ ಹಾಡಿದೆನು
ಹಾಆಆಆಆಡಿದೆನು

ಮೊದಲ ವ್ಯಕ್ತಿ: ಥೋ! ಹಾಡು ನಿಲ್ಸು ಅಂತ ಕೇಳಿಕೊಂಡಿದ್ದೆಲ್ಲಾ ವ್ಯರ್ಥ ಆಯ್ತು.

ಎರಡನೆಯ ವ್ಯಕ್ತಿ: ಅವನಿಗೆ ಒಂದೊಳ್ಳೆ ಪಾಠ ಕಲಿಸ್ಬೇಬೇಕು.

ಮೂರನೆಯ ವ್ಯಕ್ತಿ: ಒಳ್ಳೇ ಹೇಸರಗತ್ತೆ ಸಹವಾಸ ಆಯ್ತಲ್ಲಪ್ಪಾ. ಎಂಥಾ ಜಿಗುಟು ಮನುಷ್ಯಾ ಈತ!

ನಾಲ್ಕನೆಯ ವ್ಯಕ್ತಿ: (ರಾಮುನೆಡೆಗೆ ಚಪ್ಪಲಿ ಎಸೆಯುವನು)

ರಾಮು: ನನ್ನ ಸಂಗೀತವನ್ನು ಮೆಚ್ಚುವವರು ಒಬ್ಬರೂ ಈ ಹಳ್ಳಿಯಲ್ಲಿ ಇಲ್ಲವೇ?

ಮಧು: (ಅಡುಗೆ ಮನೆಯಿಂದ ಹೊರಕ್ಕೆ ಬರುತ್ತಾ) ನೀವೇನೂ ಯೋಚ್ನೆ ಮಾಡಬೇಡಿ. ಹಾಡೋದನ್ನ ಮುಂದುವರೆಸಿ. ಅವರು ಇನ್ನೊಂದು ಚಪ್ಪಲಿ ಎಸೀತಾರೆ. ಹಾಕೋದಿಕ್ಕೆ ಚಪ್ಪಲಿ ಸಿಕ್ಕ ಹಾಗೆ ಆಗುತ್ತೆ.

1. ಈ ನಾಟಕಕ್ಕೆ ನೀವು ಕೊಡಲು ಬಯಸುವ ಇತರೆ ಶೀರ್ಷಿಕೆಯನ್ನು ಸೂಚಿಸಿ.
2. ನಿಮಗೆ ತುಂಬಾ ಇಷ್ಟವಾದ ಪಾತ್ರ ಯಾವುದು? ಏಕೆ?
3. ಎ. ರಾಮನ ಹೆಂಡತಿಯ ಹೆಸರೇನು?
   ಬಿ. ಮಧುಗೆ ರಾಮ ಹಾಡುವುದು ಹಿಡಿಸುತ್ತದೆಯೇ?
4. ನಾಲ್ಕನೆಯ ನೆರೆಹೊರೆ ವ್ಯಕ್ತಿ ರಾಮನೆಡೆಗೆ ಚಪ್ಪಲಿ ಎಸೆಯುತ್ತಾನೆ. ಅದು ಅವನ ಮುಖದ ಮೇಲೆ ಬಿದ್ದಿದ್ದರೆ ಏನಾಗಿರುತ್ತಿತ್ತು? ಇದನ್ನು ಊಹಿಸಿಕೊಂಡು (ಸಂಭಾಷಣೆಗಳನ್ನು ಬಳಸಿಕೊಂಡು) ನಾಟಕವನ್ನು ಮೇಲೆ ಇರುವಂತೆ ಬರೆಯಿರಿ.
5. ನಿಮ್ಮ ಮತ್ತು ನಿಮ್ಮ ಗೆಳೆಯ ಸೇರಿಕೊಂಡು ಜೊತೆಯಾಗಿ ಆಡಬಹುದಾದ ಆಟವೊಂದರ ಬಗ್ಗೆ ಏನು ಚರ್ಚಿಸಬಲ್ಲಿರೆಂಬುದನ್ನು ಬರೆಯಿರಿ.

## ಮೌಲ್ಯಮಾಪನ

6. ನಿಮ್ಮ ನಿತ್ಯದ ಬದುಕಿನಲ್ಲಿ ನಿಮಗೆ ಕಿರಿಕಿರಿ ಉಂಟುಮಾಡುವ ಸಂಗತಿ ಅಥವಾ ವ್ಯಕ್ತಿಯ ಬಗ್ಗೆ ಒಂದು ಪ್ಯಾರಾದಷ್ಟು ಬರೆಯಿರಿ. ನೀವು ಆ ಸನ್ನಿವೇಶವನ್ನು ಹೇಗೆ ಶಾಂತವಾಗಿ ಎದುರಿಸುವಿರಿ ಎಂಬುದನ್ನು ವಿವರಿಸಿ.
7. ಗುಂಪುಗಳನ್ನು ರಚಿಸಿಕೊಂಡು ಈ ನಾಟಕವನ್ನು ಅಭಿನಯಿಸಿ.

Notes

## ಬುದ್ಧಿವಂತ ಭೋಲಾ

ಪಾತ್ರಗಳು

ಭೋಲಾ – ಹಳ್ಳಿಯವನು

ದಿವ್ಯಾ – ಭೋಲಾನ ಹೆಂಡತಿ

ಭೋಲಾನ ಮಗು

ಡಬ್ಬು – ಕಳ್ಳ

ನಿರೂಪಕ : ಒಂದು ದಿವಸ ಭೋಲಾ ಹೆಂಡತಿಯೊಡನೆ ಪಕ್ಕದ ಹಳ್ಳಿಗೆ ಹೊರಟಿರುತ್ತಾನೆ. ದಟ್ಟವಾದ ಕಾಡೊಂದನ್ನು ಅವರು ದಾಟಿಕೊಂಡು ಹೋಗಬೇಕಾಗಿರುತ್ತದೆ. ಅಚಾನಕ ಒಂದು ಧ್ವನಿ ಅವನ್ನು ತಡೆದು ನಿಲ್ಲಿಸುತ್ತದೆ.

ಡಬ್ಬು : ನಿಲ್ಲು. ನಿಲ್ಲು ಎಂದು ಹೇಳಿದೆ! ಒಂದು ಹೆಜ್ಜೆ ಮುಂದಿಟ್ಟರೂ ಗುಂಡು ಹಾರಿಸಿ ಸುಟ್ಟುಬಿಡುತ್ತೇನೆ!

ದಿವ್ಯಾ : ಬೇಡ ಬೇಡ. ನಾವು ಬಡವರು. ನಮ್ಮ ಹತ್ತಿರ ಏನೂ ಇಲ್ಲ,

ಡಬ್ಬು : ಹ್ಹ! ಮೂರ್ಖಳಂತೆ ಮಾತಾಡಬೇಡ. ಎಲ್ಲಾರೂ ಹಾಗೇ ಹೇಳೋದು. ನಿಮ್ಮ ಹತ್ತಿರ ಏನಿದೆಯೋ ಅದನ್ನೇ ಕೊಡಿ, ಇಲ್ಲಾಂದರೆ, ನಿಮ್ಮೆಲ್ಲರನ್ನೂ ಸಾಯಿಸಿಬಿಡುತ್ತೇನೆ.

ಭೋಲಾ : ಬೇಡ ಬೇಡ! ನಮ್ಮನ್ನು ಬಿಟ್ಟುಬಿಡು. ನನ್ನ ಹಣದ ಚೀಲವನ್ನು ನಿನಗೇ ಕೊಡುತ್ತೇನೆ.

ಡಬ್ಬು : ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹಾ! ನೋಡಿದೆಯಾ ನಿಮ್ಮನ್ನ ಹೇಗೆ ಮೂರ್ಖರನ್ನಾಗಿ ಮಾಡಿದೆ ಅಂತ! ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹಾ! ಈ ಬಂದೂಕಿನಲ್ಲಿ ಗುಂಡುಗಳೇ ಇರಲಿಲ್ಲ. ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹಾ!

ಭೋಲಾ : ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹಾ! ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹಾ!

ಡಬ್ಬು : ಮೂರ್ಖ! ನೀನ್ಯಾಕೋ ನಗ್ತಾ ಇದ್ದಿಯಾ?

ಭೋಲಾ : ನಾನೂ ಸಹ ನಿನ್ನನ್ನು ಮೂರ್ಖನನ್ನಾಗಿ ಮಾಡಿದೆ ನೋಡಿದೆಯಾ? ನಾನು ಕೊಟ್ಟ ಚೀಲದಲ್ಲಿ ಹಣವೇ ಇರಲಿಲ್ಲ.

ಡಬ್ಬು : ಏನೂ, ಏನಂದೇ?!!

ಭೋಲಾ: ಏನು ಮತ್ತೆ ನಿನ್ನನ್ನು ನೀನು ಭಾರೀ ಜಾಣ ಎಂದು ತಿಳಿದಿದ್ದೆಯಲ್ಲವೇ? ಹ್ಹ ಹ್ಹ ಹ್ಹ!

1. ಈ ಕಿರುನಾಟಕಕ್ಕೆ ನೀವು ಕೊಡಲು ಬಯಸುವ ಇತರೆ ಶೀರ್ಷಿಕೆಗಳನ್ನು ಪಟ್ಟಿಮಾಡಿ.
2. ನೀವು ಭೋಲಾ ಆಗಿದ್ದರೆ ಇಂತಹ ಪರಿಸ್ಥಿತಿಯಲ್ಲಿ ಏನು ಮಾಡುತ್ತಿದ್ದಿರಿ?
3. ಎ. ಡಬ್ಬು ಏನನ್ನು ಹಿಡಿದುಕೊಂಡಿದ್ದ? ಏಕೆ?
   ಬಿ. ದಿವ್ಯಾ ತಾವು ಬಡವರು ಎಂದು ಏಕೆ ಹೇಳಿದಳು?
4. ಆಕಸ್ಮಾತ್ ಡಬ್ಬು ನಿಜವಾದ ಗುಂಡುಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದರೆ ಏನಾಗುತ್ತಿತ್ತು ಎಂಬುದನ್ನು ಊಹಿಸಿಕೊಂಡು, ಮೇಲೆ ಇರುವ ರೀತಿಯಲ್ಲಿ ಆ ಘಟನೆಯನ್ನು (ಸಂಭಾಷಣೆಗಳನ್ನು ಬಳಸಿಕೊಂಡು) ಬರೆದು ನಾಟಕವನ್ನು ಪೂರ್ಣಗೊಳಿಸಿ.
5. ಈ ಕಿರುನಾಟಕವನ್ನು ಒಂದು ಕತೆಯ ರೂಪದಲ್ಲಿ ಬರೆಯಿರಿ.
6. ಗುಂಪುಗಳನ್ನು ರಚಿಸಿಕೊಂಡು ಈ ನಾಟಕವನ್ನು ಅಭಿನಯಿಸಿ.

Notes

**ಪ್ರಗತಿಯ ಪರಿಶೀಲನೆ – 6**

1. ಎಲ್ಲಾ ಭಾಷೆಗಳನ್ನು ಕಲಿಯುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಸಾಮರ್ಥ್ಯ ಅಥವಾ ನಿಪುಣತೆಯನ್ನು ಅಳೆಯುವ ಮಾರ್ಗ ಯಾವುದು?

   ಎ. ಪ್ರಬಂಧ ರಚನೆ  ಬಿ. ಕಥಾ ರಚನೆ  ಸಿ. ಕ್ಲೋಜ್ ಟೆಸ್ಟ್  ಡಿ. ಉಕ್ತಲೇಖನ

2. ಕ್ಲೋಜ್ ಟೆಸ್ಟ್ (cloze test) ನ್ನು ನೀವು ಅರ್ಥೈಸಿಕೊಂಡಿರುವ ಹಾಗೆ ವಿವರಿಸಿ.

   ..............................................................................................................

   ..............................................................................................................

   ..............................................................................................................

3. ಕ್ಲೋಜ್ ಟೆಸ್ಟ್ (cloze test) ನಡೆಸುವಾಗ ಗಮನದಲ್ಲಿರಿಸಿಕೊಳ್ಳಬೇಕಾದ ಅಂಶಗಳು ಯಾವುವು?

   ..............................................................................................................

   ..............................................................................................................

   ..............................................................................................................

4. ತರಗತಿ 5ರ ಪಠ್ಯದ ಯಾವುದಾದರೊಂದು ಭಾಗವನ್ನು ಆಯ್ದುಕೊಂಡು ಕ್ಲೋಜ್‌ಟೆಸ್ಟ್ ಕೈಗೊಳ್ಳಿ. ನಿಮ್ಮ ತರಗತಿಯಲ್ಲಿ ಭಾಷಾಸಾಮರ್ಥ್ಯದ ವಿಷಯವಾಗಿ ಇರುವ ತೊಡಕುಗಳನ್ನು ನಿವಾರಿಸಿಕೊಳ್ಳಲು ಅದನ್ನು ಉಪಯೋಗಿಸಿ.

   ..............................................................................................................

   ..............................................................................................................

   ..............................................................................................................

5. ನಿಮ್ಮ ತರಗತಿಯ ಮಕ್ಕಳಿಗೆ ಯಾವುದಾದರೊಂದು ನಾಟಕದ ಸನ್ನಿವೇಶವನ್ನು ತೆಗೆದುಕೊಂಡು, ಗುಂಪುಗಳನ್ನು ರಚಿಸಿಕೊಂಡು ಅಭಿನಯಿಸಲು ತಿಳಿಸಿ. ಬಳಿಕ ಅವರ ಆತ್ಮವಿಶ್ವಾಸ, ಅಭಿನಯ, ಅಭಿವ್ಯಕ್ತಿ ಮುಂತಾದ ಅಂಶಗಳನ್ನು ಪರಿಶೀಲನೆ ಮಾಡಿಕೊಂಡು, ಅದರ ಮೌಲ್ಯಮಾಪನವನ್ನು ಮಾಡಿಕೊಳ್ಳಿ.

   ..............................................................................................................

   ..............................................................................................................

   ..............................................................................................................

## 10.7 ಸಮಗ್ರವಾಗಿ ಹೇಳುವುದಾದರೆ

ಈ ಘಟಕದಲ್ಲಿ ನಾವು ಪ್ರಸಕ್ತ ಮೌಲ್ಯಮಾಪನದ ಸ್ವರೂಪ ಹಾಗೂ ವಿಧಾನಗಳನ್ನು ಬದಲಾಯಿಸುವ ಅಗತ್ಯಗಳನ್ನು ಕಲಿತಿದ್ದೇವೆ. ಮೌಲ್ಯಮಾಪನವೆಂದರೆ ಕೇವಲ ಪಠ್ಯವನ್ನು ಪರೀಕ್ಷಿಸುವುದು ಮಾತ್ರವಲ್ಲ, ಇತರೆ ಕ್ಷೇತ್ರಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಸಾಮರ್ಥ್ಯಗಳ ಪ್ರಗತಿಯಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಪ್ರೋತ್ಸಾಹಿಸುವುದೂ ಕೂಡಾ ಆಗಿದೆ. ಅವಧಿಯು ಪೂರ್ಣವಾಗುವವರೆಗೂ ಮೌಲ್ಯಮಾಪನದ ಕೆಲಸವನ್ನು ಜಾರಿಯಲ್ಲಿಡುವುದು ಅತ್ಯವಶ್ಯವಾಗಿದೆ. ಅದಕ್ಕಾಗಿ ಬೇರೆ ಬೇರೆ ಹಂತಗಳನ್ನು ಗುರುತಿಸಿಕೊಳ್ಳಬೇಕು.

Notes

**ಮೌಲ್ಯಮಾಪನ**

ಹೀಗೆ ಕೈಗೊಂಡ ಮೌಲ್ಯಮಾಪನದ ಚಟುವಟಿಕೆಗಳನ್ನು ಒಂದುಕಡೆ ದಾಖಲಿಸುವುದು ಅವಶ್ಯವಾಗಿದ್ದು, ಭಿನ್ನ ಕಲಿಕೆಯ ವಾತಾವರಣಗಳಲ್ಲಿ ಶಿಕ್ಷಕರು ತಮ್ಮ ವಿಶೇಷ ಹಾಗೂ ಅವಶ್ಯಕತೆಗಳಿಗನುಸಾರವಾಗಿ ಹೆಚ್ಚಿನದನ್ನು ಕಲಿಯಲು ಇದು ಅನುಕೂಲಕರವಾಗಿದೆ. ಈ ಘಟಕದಲ್ಲಿ ಕೆಲವು ಸೂಚನೆಗಳಿದ್ದು, ಅವುಗಳೆಡೆಗೆ ಹೆಚ್ಚಿನ ಗಮನ ನೀಡುವುದು ಉತ್ತಮ. ನಿಮ್ಮ ಸಲಹೆ, ಸೂಚನೆಗಳಿದ್ದಲ್ಲಿ, ನಿಮ್ಮ ಅನುಭವಗಳನ್ನು ಆಧರಿಸಿ ಅವುಗಳನ್ನು ಕೂಡಾ ಇಲ್ಲಿ ನೀವು ಸೇರಿಸಬಹುದಾಗಿದೆ.

1. ಮೌಲ್ಯಮಾಪನ ಮಾಡುವಾಗ ವಿಷಯಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡದೇ ಸಾಮರ್ಥ್ಯಕ್ಕೆ ಹೆಚ್ಚಿನ ಒತ್ತು ನೀಡುವುದು.
2. ಪ್ರಾಥಮಿಕ ಕಲಿಕೆಯ ಹಂತದಲ್ಲಿ ನಿಖರತೆಗೆ ಹೆಚ್ಚು ಪ್ರಾಧಾನ್ಯತೆ ನೀಡದೇ ನಿರರ್ಗಳತೆಗೆ ಮಹತ್ವ ನೀಡುವುದು.
3. ಭಿನ್ನರೀತಿಯ ಸಾಮರ್ಥ್ಯಗಳ ಮೌಲ್ಯಮಾಪನ ಕ್ರಿಯೆಯಲ್ಲಿ ಚಟುವಟಿಕೆಗಳು ಕೂಡಾ ಭಿನ್ನವಾಗಿರಬೇಕೆಂದೇನೂ ಇಲ್ಲ.
4. ಮೌಲ್ಯಮಾಪನ ಕ್ರಿಯೆಯು ಆಯಾ ಮಗುವಿನ ಅಗತ್ಯಗಳಿಗೆ ಹಾಗೂ ಕಲಿಕೆಯಲ್ಲಿನ ವಿಭಿನ್ನತೆಗಳಿಗೆ ಪ್ರೋತ್ಸಾಹ ನೀಡುವಂತಿರಬೇಕು.
5. ಮೌಲ್ಯಮಾಪನ ಕ್ರಿಯೆಯು ಇಡೀ ಅವಧಿಯುದ್ದಕ್ಕೂ ಇದ್ದು, ವಿದ್ಯಾರ್ಥಿಯ ಸರ್ವತೋಮುಖ ಭಾಗವಹಿಸುವಿಕೆಗೆ ಪೂರಕವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುತ್ತದೆ. ನಿರಂತರ ಮತ್ತು ವಿಸ್ತೃತ ಮೌಲ್ಯಮಾಪನ ಕ್ರಿಯೆಯ ವ್ಯಾಖ್ಯೆ ಇದೇ ಆಗಿದೆ.

## 10.8 ಹೆಚ್ಚಿನ ಓದಿಗಾಗಿ ಹಾಗೂ ಪೂರಕ ಮಾಹಿತಿಗಾಗಿ

1. NCERT. 2009. *Manual for Assessment*. NCERT, New Delhi.
2. NCERT. 2008. *Understanding of Reading*. NCERT, New Delhi.
3. Vidya Bhawan Society. 2009. *Kites Series: Books for Classes 1 to 8*. New Delhi: Macmillan.

## 10.9 ಘಟಕದ ಮುಕ್ತಾಯ ಹಂತದ ಚಟುವಟಿಕೆಗಳು

1. ಪ್ರಸ್ತುತ ಮೌಲ್ಯಮಾಪನ ಪದ್ಧತಿಯಿಂದ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಎದುರಿಸುತ್ತಿರುವ ತೊಂದರೆಗಳನ್ನು ವಿವರಿಸಿ.
2. ತನ್ನ ಬೋಧನಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವಲ್ಲಿ ಮೌಲ್ಯಮಾಪನ ಕ್ರಿಯೆಯು ಯಾವುದೇ ಶಿಕ್ಷಕನಿಗೆ ಹೇಗೆ ಸಹಾಯಕವಾಗಬಲ್ಲದೆಂಬ ಬಗ್ಗೆ ಬರೆಯಿರಿ.
3. ಒಂದು ಮಗುವಿನ ಪ್ರಗತಿಯನ್ನು ಇತರೆ ಮಕ್ಕಳ ಪ್ರಗತಿಯ ಜೊತೆಗೆ ಹೋಲಿಸಬಾರದು. ಕಾರಣ ವಿವರಿಸಿ.
4. ಪ್ರಾಥಮಿಕ ಹಂತದ ಕಲಿಕೆಯಲ್ಲಿ ಹೆಚ್ಚು ಒತ್ತು ಕೊಡಬೇಕಾಗಿವುದು ನಿರರ್ಗಳತೆಗೆ ಅಥವಾ ಖಚಿತತೆಗೆ, ಯಾವುದಕ್ಕೆ? ಮತ್ತು ಏಕೆ?
5. ಭಾಷಾಕಲಿಕೆಯ ಮೌಲ್ಯಮಾಪನದಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಯಾವುವು? ಯಾವುದಾದರೂ ಒಂದು ಅಂಶವನ್ನು ವಿಸ್ತರಿಸಿ ಬರೆಯಿರಿ.

### ಚಟುವಟಿಕೆ

ಒಂದು ಲೇಖನ, ಒಂದು ಪದ್ಯ ಮತ್ತು ಒಂದು ನಾಟಕ – 3ನೇ ತರಗತಿಯ ಪುಸ್ತಕದಿದ ಈ ಮೂರನ್ನೂ ಆಧರಿಸಿ, ಮೌಲ್ಯಮಾಪನಕ್ಕೆ ಸೂಕ್ತವಾದ ಪ್ರಶ್ನೆಗಳನ್ನು ರಚಿಸಿ.